Registered No. M. 5016

NAVAYUGA
A Nationalist Kanarese Weekly

೨೦ ಪುಟಿಗಳು
ಒಂದಾಣೆ

'ನವಯುಗ'ದಲ್ಲಿ ಪ್ರಕಟಣೆಯ ದರಗಳು
ಒಂದು ಬಾರಿಗೆ
ಒಂದು ಚಚ್ಚೌಕ ಇಂಚಿಗೆ
0–4–0
ಒಂದು ಪ್ರಕಟಣೆಯ ಆತ್ಯಲ್ಪ ದರ ರೂ. 2–8–0

ನವಯುಗ

ವ್ಯಭಿಚಾರಿಣಿ ಯಾರು?
ಸಚಿತ್ರವಾಗಿ ಪ್ರಕಟವಾಗಿದೆ.
ಬೆಲೆ ೧–೪–೦.
ತೆರಿಯರ ಪ್ರಪಂಚ
ಉಡುಪಿ

ಮೂಡ ಬಾನಿನ ಕಣ್ಣು ಕೆಂಗಿಡಿಯು ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ,

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂದುವುದು ತಂಬೆಳಕ ತಿಂಗಳಿನ ನೊಗವಲ್ಲ
'ನವಯುಗ'ದ ರುದ್ರರವಿಯಾರ್ಭಟ ಬಿಂಬ

ಸಂಪುಟ ೧೬] ಉಡುಪಿ, ಗುರುವಾರ, ನವಂಬರ ೫, ೧೯೩೬ [ಸಂಚಿಕೆ ೧೦

ABSOLUTE SAFETY OF INVESTMENTS, COMPLETE SECURITY TO DEPOSITORS,
COMPREHENSIVE AND EFFICIENT SERVICE TO THE PUBLIC,
ARE THE OUTSTANDING FEATURES OF

The Canara Industrial and Banking Syndicate, Limited.
INCORPORATED IN BRITISH INDIA
THE PIONEER AND HIGHLY PROGRESSIVE COSMOPOLITAN BANK OF KARNATAKA

ESTD.] Head Office: "MUKUNDANIVAS", UDIPI. [1925

BRANCHES:

1	Mangalore	7	Bangalore City	13	Coondapoor	19	Ankola
2	Hubli	8	Gadag	14	Brahmavar	20	Sirsi
3	Belgaum	9	Cannanore	15	Hungarcutta	21	Bhatkal
4	Bellary	10	Udipi	16	Honavar	22	Karkala
5	Adoni	11	Kanhangad	17	Kumta	23	Uppinangadi
6	Hospet	12	Payyanur	18	Karwar	24	Kasargode

25 Sagar.

ANNOUNCEMENT

WE HAVE MUCH PLEASURE IN ANNOUNCING THAT TWO BRANCHES OF OUR BANK HAVE BEEN OPENED IN OCTOBER, 1936, ONE AT **KASARGODE** (S. Kanara Dt.) & THE OTHER AT **SAGAR** (Shimoga Dt.) ON THE 24th and the 29th RESPECTIVELY, WHERE ALL KINDS OF BANKING BUSINESS ARE TRANSACTED. IT GIVES US GREATER PLEASURE TO ANNOUNCE THAT **FOUR MORE BRANCHES** WILL BE OPENED IN 1936 at **PRODATTUR, TADPATRI, NANDYAL,** and **BYADGI** on the 29th November, 3rd December, 16th December, and 18th December RESPECTIVELY. THE LARGE NUMBER OF OUR CLIENTS AS WELL AS THE GENERAL PUBLIC ARE REQUESTED TO TAKE ADVANTAGE OF THE NUMEROUS FACILITIES OFFERED BY US AT LOW RATES.

"MUKUNDANIVAS," UDIPI
30–10–1936.

P. A. PAI Brothers,
Managing Agents

ಬರುವ ಮದ್ರಾಸ್ ಲೆಜಿಸ್ಲೇಟಿವ್ ಕೌನ್ಸಿಲಿಗೆ
ಸ್ವತಂತ್ರ ಉಮೇದ್ವಾರರಾದ
ಶ್ರೀ. ಬೈಲೂರು ವಾಸುದೇವ ರಾವ್
ಅಡ್ವೊಕೇಟ್, ಇವರು ನಿಮ್ಮ ಪ್ರೋತ್ಸಾಹವನ್ನು ಬಯಸುತ್ತಾರೆ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸುಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿ ಯೂ ನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿ

'ಸುಖನಿವಾಸ'ದ ಅಬಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನನಲಂಬಿಸಿದೆ. ವ್ಯವಸ್ಥಾಪಕರು:

ಎಚ್ ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಶ್ಕಿವಾಗಿ ಭಂಗಾರ ವ ಸರಕ್ ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ರೇವಣ್ ತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ರೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ

M. R. Punja, *President & Manager,*

ಯು. ಆರ್. ಪೂಂಜ, ಪ್ರಸಿಡೆಂಟು ಮತ್ತು ಮೆನೇಜರ್.

ಶ್ರೀಪತಿ ಪಂಚಾಂಗ

ತ್ವರೆಮಾಡಿರಿ! ಬೆಲೆ: 6ಹೈ ಮಾತ್ರ ತ್ವರೆಮಾಡಿರಿ!!

ಹಲವು ತರದ ವಿಶೇಷ ವಿಷಯಗಳಿಗೂ ಸಂದಿಗ್ಧ ವಿಷಯಗಳ ಶಾಸ್ತ್ರೀಯತ್ಯಾ ರ್ಣಯಗಳಿಗೂ ಜನಸಾಮಾನ್ಯಕ್ಕೆ ಆಗತ್ಯವಾಗುವ ಇತರ ಮುಹೂರ್ತಾದಿ ಸಣ್ಣ ಪುಟ್ಟ ವಿಷಯಗಳಿಗೂ ಪ್ರಾಮಾಣಿಕ ಗಣಿತಕ್ಕೂ ಅನೇಕ ವರ್ಷಗಳಿಂದ ಅನುಭವಸ್ಥರಾಗಿ, ಪಂಚಾಂಗ ಗಣಿತಜ್ಞರಲ್ಲಿ ಹೆಸರುಗೊಂಡ ಬೇಳೂರು ಗ್ರಾಮಸ್ಥ ಬ್ರಹ್ಮ ಶ್ರೀ ನರಸಿಂಹ ಅಡಿಗರಿಂದ ಸೂರ್ಯಸಿದ್ಧಾಂತ ರೀತ್ಯಾಗುಣಿಸಿ, ಪರಿಶೋಧಿಸಲ್ಪಟ್ಟ 'ಶ್ರೀಪತಿ ಪಂಚಾಂಗ'ದ ಪೊರತು ಸ್ವಾಮಾಣಿಕವಾಗದು ಇನ್ನೊಂದಿಲ್ಲ

ಈಶ್ವರ ಸಂವತ್ಸರದ ಈ ಪಂಚಾಂಗವು ಡೆಮ್ಮಿ ೪ನೇ (ಉದ್ದ) ಸೈಜಿನಲ್ಲಿ ಅತ್ಯುತ್ತಮ ಗ್ಲೇಜ್ಡ್ ಕಾಗದದ ಮೇಲೆ ಅಂದವಾಗಿ ಮುದ್ರಿಸಲ್ಪಡುತ್ತದೆ ಪಂಚಾಂಗವು ಒಟ್ಟಿಗೆ ೪೨ ಪೇಜುಗಳುಳ್ಳದ್ದಾಗಿರುತ್ತದೆ ಮುದ್ರಿಸಲ್ಪಡುವ ಪಂಚಾಂಗದ ಪ್ರತಿಗಳು ಬಲೇ ಜಲ್ದಿ ಮಾತ್ರ ಚಾಪಿರಾತು ಕೊಡುವವರಿಗೆ ಸುಸಂದರ್ಭ ಪಂಚಾಂಗ ಒಂದರ ಬೆಲೆ ೬ ಹೈ ಮಾತ್ರ ವ್ಯಾಪಾರಸ್ಥರಿಗೂ, ಹಳು ಯಾ ಹೆಚ್ಚು ಪಂಚಾಂಗಗಳನ್ನು ಒಟ್ಟಿಗೆ ತರಿಸುವವರಿಗೂ, ಪ್ರತಿ ೧೦೦ಕ್ಕೆ ೧೫ ಪಂಚಾಂಗ ಕಮಿಶನ್

ಪಂಚಾಂಗದ ಪ್ರತಿಗಳು ಇದೇ ನವೆಂಬರ ತಿಂಗಳ ೩೦ ತರ ನಂತರ ಮಾರಾಟಕ್ಕೆ ಸಿದ್ಧವಾಗುವುವು ಚಾಪಿರಾತಿನ ದರಗಳಿಗೂ, ಪಂಚಾಂಗದ ಪ್ರತಿಗಳಿಗೂ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಬಿ. ವಿ. ಕಾರಂತ, ಪಾತ್ರೆ ವ್ಯಾಪಾರಿ, ಕುಂದಾಪುರ, ದ. ಕ.

ಜಯಕರ್ನಾಟಕದಲ್ಲಿ ಅಭೂತಪೂರ್ವ ಬದಲಾವಣೆ

೧೯೩೭ರ ಜನವರಿ ಸಂಚಿಕೆಯನ್ನು ನಿರೀಕ್ಷಿಸಿರಿ.

ಆಕಾರ ದೊಡ್ಡದು! ಪುಟಗಳು ಈಗಿನಷ್ಟೆ!!

ಈಗಿನದಕ್ಕಿಂತ ಅಂದ ಮಾಟ.

ಇಷ್ಟಾದರೂ ಚಂದಾ ಹಣವನ್ನು ಇಳಿಸಿದೆ.

ಅಂಚೆವೆಚ್ಚ ಸಹಿತ ವರ್ಷಕ್ಕೆ ರೂ. ೪—೮—೦, ಬಿಡಿ ಸಂಚಿಕೆ ೬ ಆಣೆ

ಬರುವ ಜನವರಿ ಸಂಚಿಕೆಯು

ವಿಜಯನಗರ ಸ್ಮಾರಕೋತ್ಸವ

ಸಂಚಿಕೆಯಾಗಿ ಹೊರಬೀಳುವುದು

ಜಾಹೀರಾತುದಾರರಿಗೆ ಸುವರ್ಣ ಸಂಧಿ!

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ

೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ

೧೦೦ ಮಾತ್ರೆಗಳಿಗೆ ರೂ ೨—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ ಮೇಸ್ತ್ರಿ, ಗೋಲ್ಡ್‌ಮೆಡಲ್ಲಿಸ್ಟ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch MANGALORE.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of up-to-date Banking business is also undertaken.

ನಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ) ಹಣ ಪರತ

ಈ ಚೂರ್ಣವು ಕಂಪ್ಲು ಬಿಳಿ ಶರಗಿಗೆ ಶತ್ರುವಾಗಿರುವುದು ಅನಿಯಮಿತಕಸದಿಂದ ಮುಟ್ಟಾಗುವಿಕೆ, ಕ್ಷೀಣ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ದೌರ್ಬಲ್ಯ ಮುಂತಾದ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು ಮಕ್ಕಳಾಗುವದಿಲ್ಲೆಂದು ಎದೆಗೆ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು ಮು. ರಾ ಎ. ಎಮ್ ಇನ್ಸ್‌ಪೆಕ್ಟರ ಚೇ ಗಾರವ —ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ಎಗ ದವಸದ ಡಬ್ಬಿಯ ಕಿಮ್ಮತ್ತು ರೂ. ೩ ಟ.ಖ. ಆಣೆ, ೮ ಡಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [ವಿ. ಪಿ ಖರ್ಚು ಆಣೆ ೮.

ಬಹಳಸಾರಿ ಹಡೆಯುವುದರಿಂದ ಅತಿಶಯ ಅಶಕ್ತಿಯಾಗುತ್ತವೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡೆಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರವಾಗುವದು ತರ್ಕರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ನಿನು ಮಾಡಿದರೂ ಸರಿಯಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂಲ ಕೇಳವಾ ವಾಹಿಮೂ ಜಿ. ರಾಣೆ ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವವಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, S. M. C.

ಸಮಾಚಾರ ಸಂಗ್ರಹ

ಬೊಂಬಾಯಿಯಿಂದ ಫೈಜಪುರಕ್ಕೆ ದೀವುಟಿಗೆ, ಶ್ರೀ. ಶೈಲೇಂದ್ರನಾಥ ಭೋಸರು. ಡಿಟಿನ್ಯೂ ಕೈದಿಯ ಆತ್ಮಹತ್ಯೆ, ಭಾರತಮಾತಾ ಮಂದಿರ, ಹರಿಜನರಿಗೆ ಮೈಸೂರು ಮಹಾರಾಜರ ಸನ್ಮಾನ, ರೆಡ್‌ಶರ್ಟರ ವಿಜಯ, ಮಹಾತ್ಮಾ ಗಾಂಧಿಯವರು, ಬೊಂಬಾಯಿಯಲ್ಲಿ ಪುನಃ ಗಲಾಟೆ.

ಕಾಂಗ್ರೆಸಿನ ಜನ್ಮಸ್ಥಾನವಾದ ಬೊಂಬಾಯಿಯಿಂದ ಈ ಸಲದ ಕಾಂಗ್ರೆಸ್ ಅಧಿವೇಶನ ನಡೆಯುವ ಫೈಜಪುರಕ್ಕೆ ದೀವುಟಿಗೆಯನ್ನೊಯ್ಯುವ ನವೀನವಾದೊಂದು ಏರ್ಪಾಡನ್ನು ಈ ವರ್ಷ ಮಾಡಲಾಗಿರುವುದು ಬೊಂಬಾಯಿಯಿಂದ ಫೈಜಪುರಕ್ಕೆ 300 ಮೈಲುಗಳಿರುವವು. ದಶಂಬರ ತಾ. 20ಕ್ಕೆ 300ಮಂದಿ ಸ್ವಯಂಸೇವಕರು ಒಬ್ಬೊಬ್ಬರು ಒಂದೊಂದು ಮೈಲು ಪ್ರಕಾರ ಬೊಂಬಾಯಿಯಲ್ಲಿ ಹಚ್ಚಲ್ಪಟ್ಟ ದೀವಿಟಿಗೆಯನ್ನು ಕಾಂಗ್ರೆಸ್ ಅಧಿವೇಶನದ ಧ್ವಜಾರೋಹಣ ಸಮಾರಂಭ ದಿನಕ್ಕೆ ಸರಿಯಾಗಿ ಫೈಜಪುರ ಕ್ಕೊಯ್ಯುವರು.

ಕ್ರಾಂತಿಕಾರರ ಚಳವಳಿ ನಡಿಸಿದರೆಂಬ ಆರೋಪದಿಂದ ಬಂಗಾಳದ ಶ್ರೀ ಶೈಲೇಂದ್ರನಾಥ ಬೋಸರು ಗಡಿಪಾರು ಮಾಡಲ್ಪಟ್ಟ 20 ವರ್ಷಗಳ ಬರೆಗೆ ಅಮೇರಿಕವಲ್ಲದ್ದರು. ಅಮೇರಿಕಾನ ಮಹಿಳೆಯೊಬ್ಬಳನ್ನು ವಿವಾಹವಾಗಿ ಇಬ್ಬರು ಹೆಮ್ಮಕ್ಕಳನ್ನು ಪಡೆದಿರುವರು. ಇವರನ್ನೀಗ ಇಂಡಿಯಾ ಸರಕಾರವು ಹಿಂಮೊದೆಶಕ್ಕೆ ಬರಬಿಟ್ಟಿರುವುದು. ಶ್ರೀ ಬೋಸರನ್ನು ಅಕ್ಟೋಬರ 25ರಲ್ಲು ನ್ಯೂಯೋರ್ಕಿನಲ್ಲಿ ಅವರ 300ಮಂದಿ ಹಿಂದಿ ಮತ್ತು ಅಮೇರಿಕದ ಮಿತ್ರರು ಅತ್ಯಂತ ಸಂಭ್ರಮದಿಂದ ಸತ್ಕರಿಸಿ ವಿದಾಯವಿತ್ತರು ಅವರು ಇದೇ 2ರಲ್ಲು ಅಮೇರಿಕವನ್ನು ಬಿಟ್ಟು ಹೊರಟು ದಶಂಬರ ತಾ 3ಕ್ಕೆ ಕರಾಚಿಗೆ ಮುಟ್ಟಲಿರುವರು. ಕಾಂತಿಕಾರರ ಹಾಗೂ ಹಿಂಸಾತ್ಮಕ ಚಳವಳಿಯೇನೂ ನಡಿಸಲಾರೆನೆಂದು ಶ್ರೀ ಬೋಸರ ಪತ್ನಿಯವರು ಬ್ರಿಟಿಷ್ ರಾಯಭಾರಿಗೆ ಬರೆದು ಕೊಡ ಬೇಕಾಯಿತು.

ಮಕ್ಕಳ ಚಿಕಿತ್ಸಾಲಯಕ್ಕೆ ರೂ. 5 ಲಕ್ಷ

ಮಕ್ಕಳ ರೋಗಗಳ ಚಿಕಿತ್ಸೆಗಾಗಿ ಚಿಕಿತ್ಸಾಲಯವೊಂದನ್ನು ಸ್ಥಾಪಿಸಬೇಕೆಂದು ಹೈದರಾಬಾದಿನ ನೈಜಾಮರು ಆಜ್ಞೆಯಿತ್ತು ಅದಕ್ಕಾಗಿ ರೂ. 5 ಲಕ್ಷಗಳನ್ನು ಮಂಜೂರು ಮಾಡಿರುವರು.

ಬಂಗಾಳದಲ್ಲಿ ಕಾಂಗ್ರೆಸಿನ ವಿಜಯ ನಿಶ್ಚಯ

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಬಂಗಾಳದಲ್ಲಿ ಕಾಂಗ್ರೆಸು 50 ಜನರಲ್ ಸೀಟುಗಳಲ್ಲಿ 40ನ್ನೂ ಹರಿಜನಸೀಟುಗಳಲ್ಲಿ ಮೂರರಲ್ಲಿ ಎರಡಂಶವನ್ನೂ ಪಡೆಯುವು ದೆಂದು ಡಾಕ್ಟರ್ ಬಿ. ಸಿ. ರೋಯಿಗಳು ಹೇಳಿರುವರು. ಕಾಂಗ್ರೆಸ್ ಉಮೇದ್ವಾರಿಗಳ ವಿರೋಧವಾಗಿ ಹೋರಾಡುವ ಸುಸಂಘಟಿತ ಪಕ್ಷವು ಬಂಗಾಳದಲ್ಲಿ ಇನ್ನೊಂದಿಲ್ಲ. ಕಾಂಗ್ರೆಸ್ ಪಕ್ಷೇತರೆಲ್ಲರೂ ಒಕ್ಕಟ್ಟಿನಿಂದ ಕೆಲಸಮಾಡುವ ನಿರ್ಧಾರ ಮಾಡಿರುವರು. ಕಾಂಗ್ರೆಸು ನೆಕನಲಸ್ಟರು ಪ್ರತ್ಯೇಕವಾಗಿ ತಮ್ಮ ಉಮೇದ್ವಾರಿಗಳನ್ನು ನಿಲ್ಲಿಸುವುದಿಲ್ಲ. ಅವರು ಕಾಂಗ್ರೆಸಿನೊಂದಿಗೇನೇ ಸಹಕರಿಸಿರುವರು.

ಶ್ರೀ ಎಮ್ ಎನ್. ರೋಯಿಗಳು

ಇದೇ ತಾ. 20ರಲ್ಲು ಡೆಹರೂನ್ ಜೈಲಿನಿಂದ ಬಿಡುಗಡೆ ಹೊಂದಲಿರುವರೆಂದು ತಿಳಿದುಬರುತ್ತದೆ ಶ್ರೀ ರೋಯಿಗಳು, ಕೋನಪ್ಪರದ ಪಿತೂರಿ ಖಟ್ಲೆಯ ನಿಮಿತ್ತ 6 ವರ್ಷ ತಿಕ್ಷೆಗೊಳಗಾಗಿದ್ದರು.

ಬಂಗಾಳ ಡಿಟಿನ್ಯೂ ಕೈದಿಯಾಗಿದ್ದು ಡಾಕ್ಕಾ ಪಟ್ಟಣದ ದಿನೋಲ ಎಂಬ ಡಿಟೆನ್ಯೂ ತಿಂಗಳದಲ್ಲಿ ಕೈದಿಯಾಗಿದ್ದ ಶ್ರೀ ಸಂತೋಷಕುಮಾರ ಗಂಗುಲಿಯವರು ಕಾತ್ರಿಗೆಗೆ ಹಗ್ಗ ಹಾಕಿಕೊಂಡು ಆತ್ಮಹತ್ಯೆಮಾಡಿ ಕೊಂಡಿರುವರೆಂದು ತಿಳಿದುಬಂದಿದೆ. ಶ್ರೀ ಸಂತೋಷಕುಮಾರರು ಡಾಕ್ಕಾ ಯುನಿವರ್ಸಿಟಿಯಲ್ಲಿ ಎಮ್ ಎಸ್ ಸಿ ವರೆಗೆ ಕಲಿತವರು. 1930ನೇ ಮೇ ತಿಂಗಳಲ್ಲಿ ಕೈದು ಮಾಡಲ್ಪಟ್ಟು ಬೇರೆ ಬೇರೆ ಡಿಟಿನ್ಯೂ ವಿಭಾಗಗಳಲ್ಲಿ ತಿಕ್ಷೆ ಅನುಭವಿಸಿ ಕಟ್ಟಕಡೆಗೆ ದಿನೋಲಿಗೆ ವರ್ಗಾಯಿಸಲ್ಪಟ್ಟರು. ಇವರು ಆತ್ಮಹತ್ಯೆಮಾಡಿಕೊಳ್ಳುವ ಒಂದು ದಿನದ ಮೊದಲು ಕಾಯಿಲೆಯಲ್ಲಿರುವ ತನ್ನ ತಾಯಿಗೆ "ನನ್ನನ್ನು ನೋಡಲಾಗದುದಕ್ಕಾಗಿ ನೀವು ಚಿಂತೆಪಟ್ಟು ಫಲವಿಲ್ಲ ಒಂದು ದಿನ ಒಪ್ಪಿಸಿಗುವೆವು" ಎಂದು ಕಾಗದಬರೆದಿದ್ದರು.

ಅಕ್ಟೋಬರ ತಾ 25ರಲ್ಲು ಮಹಾತ್ಮ ಗಾಂಧಿಯವರು ಬಿನಾರೀಸ್‌ನಲ್ಲಿ ಭಾರತ ಮಾತಾ ಮಂದಿರವೆಂಬ ದೇವಸ್ಥಾನವನ್ನು ತೆರೆಯುವ ಸಮಾರಂಭವನ್ನು ನಡಿಸುವಾಗ "ಈ ಮಂದಿರದಲ್ಲಿ ಯಾವುದಾದರೊಂದು ದೇವರ ಆಥವಾ ದೇವಿಯ ವಿಗ್ರಹವಿರುವುದಿಲ್ಲ; ಶ್ವೇತಶಿಲೆಯಿಂದ ರಚಿಸಲ್ಪಟ್ಟಿರುವ ಹಿಂದೂದೇಶದ ನಕಾಶೆ ಮಾತ್ರ ಇವರಲ್ಲಿದೆ. ಹರಿಜನರ ಸಮೇತವಾಗಿ ಎಲ್ಲಾ ಧರ್ಮ, ಜಾತಿ ಮತಗಳವರಿಗೆ ಈ ಮಂದಿರವು ಸಾಮಾನ್ಯವಾದ ನಿಲ್ಲಾಣವಾಗಿ ಪೂರದಲ್ಲಿ ಧಾರ್ಮಿಕ ಐಕ್ಯ, ಶಾಂತಿ ಮತ್ತು ಪ್ರೇಮವನ್ನು ಬೆಳೆಸುವುದರಲ್ಲಿ ಬಹಳ ಸಹಾಯವಾಗುವುದೆಂದು ನನ್ನ ನಿರೀಕ್ಷೆಯಿದೆ" ಎಂದು ಹೇಳಿದರು. ಈ ಸಂದರ್ಭದಲ್ಲಿ ಸುಮಾರು 25,000 ಮಂದಿ ಹಿಂದು, ಮುಸಲ್ಮಾನ, ಸಿಖ್ಖ, ಪಾರ್ಸಿ, ಜೈನ, ಬೌದ್ಧ ಮತ್ತು ಹರಿಜನರು ನೆರೆದು ಬಂದಿದ್ದರು ಇದು ಹೊರತು ಪಂಡಿತ ಜವಾಹರಲಾಲ ನೆಹರು, ಖಾನ್ ಅಬ್ದುಲ್ ಗಾಫರ್ ಖಾನ್, ಸರ್ದಾರ್ ಪಟೇಲ್, ಭೂಲಭಾಯಿ ದೇಸಾಯಿ, ಶರತ್ಚಂದ್ರ ಬೋಸ್, ಬಾಮು ರಾಜೇಂದ್ರ ಪ್ರಸಾದ್, ಮಿಸಿಸ್ ಸರೋಜಿನಿದೇವಿ ನೊದಲಾದ ಪ್ರಮುಖರು ಹಾಜರಿದ್ದರು ಖಾನ್ ಅಬ್ದುಲ್ ಗಾಫರ್ ಭಾರತಮಾತಾ ಮಂದಿರ ಸ್ಥಾಪನೆಯ ಕುರಿತು ಆನಂದ ಸೂಚಿಸಿ, ಪುರಾತನ ಕಾಲದಲ್ಲಿ ಎಲ್ಲಾ ಜನರು ಹೋಗಿ ವ್ಯಾಧಿಸುಖಂತ ಮಸೀದಿಗಳು ಕಟ್ಟಲ್ಪಟ್ಟಿದ್ದವೆಂದರು ಈ ಪುಣ್ಯಾತ್ಮನನ್ನು ಕಟ್ಟಿಸಿದವರು ಶ್ರೀ ಶಿವಪ್ರಸಾದ ಗುಪ್ತರವರು ಅಕ್ಟೋಬರ ತಾ 26ರಲ್ಲು ಮೈಸೂರ ಮಹಾರಾಜರು ದರ್ಬಾರು ನಡಿಸಿದಾಗ ಇತರರಂತೆಯೇ ಹರಿಜನರನ್ನು ಆಮಂತ್ರಿಸಿ ಸಿದ್ದರು ಈ ಹರಿಜನರು ಇತರರೊಟ್ಟಿಗೇನೇ ಕುಳಿತು ಹೂಮಾಲೆ ಮತ್ತು ಪಾನ್‌ಸುಪಾರಿ ಪಡೆದರು ಇದೀಗ ಮಹಾರಾಜರ ದರ್ಬಾರಿಗೆ ಹರಿಜನರು ಆಮಂತ್ರಿಸಲ್ಪಟ್ಟದ್ದು ಪ್ರಥಮ ಸಲ ಈ ಕುರಿತು ಮೈಸೂರು ಪ್ರಜಾಪ್ರತಿನಿಧಿ ಸಭೆಯವರು ಮಹಾರಾಜರನ್ನು ಅಭಿನಂದಿಸಿ ಠರಾವು ಪೊಡಿರುವರು.

74ರಲ್ಲಿ ಹೆತ್ತುದು!

ಮಾರ್ಟಿನೆಟ್ ಎಂಬಲ್ಲಿ 71 ವರ್ಷದ ಮುದುಕಿಯೊಬ್ಬಳು ಆರೋಗ್ಯಕರವಾದ ಗಂಡುಕೂಸೊಂದನ್ನು ಹೆತ್ತಿರುವಳು. ಕೂಸಿನ ತಂದೆಯ ವಯಸ್ಸು 80. ಈ ದಂಪತಿಗಳ ಕೊನೆಯ ಮಗು ಹುಟ್ಟಿದ್ದು 18 ವರ್ಷಗಳ ಮೊದಲು ಅದರ ಮಕ್ಕಳಿಗೆ ಮಕ್ಕಳಾಗಿರುವವು. ಆದುದರಿಂದ ಈ ಗಂಡು ಮಗುವು ಹುಟ್ಟುವಾಗಲೇ ಅಜ್ಜನಾಗಿರುವುದು ತಾಯಿ ಯೂ ಮಗುವೂ ಬಹಳ ಆರೋಗ್ಯದಿಂದಿರುವರು. ಈ ವಿಷಯವನ್ನು ಕೆಲ ಮಂದಿ ಡಾಕ್ಟರರು ಸ್ವತಃ ಪರೀಕ್ಷಿಸಿ ಸತ್ಯವೆಂದು ಸಿದ್ಧಪಡಿಸಿರುವರು.

ವಾಯವ್ಯ ಗಡಿನಾಡಿನ ರೆಡ್‌ಶರ್ಟರ ನಾಯಕರಾದ ಖಾನ್ ಅಬ್ದುಲ್ ಗಾಫರ್ ಖಾನರು ತಮ್ಮ ಸಾಂತ್ಯಕ್ಕೆ ಮಾತ್ರವಲ್ಲ ಅವರ ನೆರೆಯ ಸಂಜಾಬು ಪ್ರಾಂತ್ಯಕ್ಕೆ ಕೂಡಾ ಪ್ರವೇಶಿಸಬಾರದೆಂದು ಸರಕಾರದ ನಿರ್ಬಂಧವಿರುವುದಾದರೂ ಗಡಿನಾಡಿನಲ್ಲಿ ರೆಡ್‌ಶರ್ಟರ ವರ್ಚಸ್ಸನ್ನೂ ಕಡಿಮೆಯಾಗಿರುವುದಿಲ್ಲ ಇತ್ತಲಾಗಿ ನಡೆದ ಸೆಂಟಾರಿ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯಲ್ಲಿ 18 ಸೀಟುಗಳಲ್ಲಿ 11 ಸೀಟುಗಳು ರೆಡ್‌ಶರ್ಟರಿಗೆ ದೊರೆತಿರುವವು. ಮೊದಲೆಂ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಲ್ಪಟ್ಟ ಮೆಂಬರರು ಸೇರಿ ರೆಡ್‌ಶರ್ಟರಿಗೆ 21 ಮತ್ತು ರೆಡ್‌ಶರ್ಟರಲ್ಲದವರಿಗೆ 5 ಸೀಟುಗಳು ದೊರೆತಿರುವವು.

ಪಂಡಿತ ಜವಾಹರಲಾಲ ನೆಹರುಗಳು.

ಇದೇ ತಾ. 6ರಲ್ಲು ಕಲ್ಕತ್ತವನ್ನು ಸಂದರ್ಶಿಸಿ ತಾ. 8ರ ವರೆಗೆ ಅಲ್ಲಿ ಭಾಷಣಗಳನ್ನು ನಡಿಸಲಿರುವರು ಜಾತೀಯ ವರ್ತಮಾನ ಕುರಿತು ಬಂಗಾಳ ಸ್ವಾಂತಿಕ ಕಾಂಗ್ರೆಸ್ ಕಮಿಟಿ ಸಭೆಯು ಜರ್ಜಾಯು ಇದೇ ತಾ. 6ರಲ್ಲು ನಡೆಯುವಾಗ ಪಂಡಿತರು ಹಾಜರಿರಲಿದ್ದಾರು. ಬಂಗಾಳ ಕಾಂಗ್ರೆಸ್ ಕಮಿಟಿಯವರೂ ನಿಷ್ಠಾಧಿ, ಸ್ತ್ರೀ ಮತ್ತು ಮಜೂರ ಸಂಘಗಳವರೂ ಒಟ್ಟು ಸೇರಿ ಪಂಡಿತರಿಗೆ ಸಂಭ್ರಮದ ಸ್ವಾಗತವೀಯಲಿರುವರು.

ಮಹಾತ್ಮಾ ಗಾಂಧೀಯವರು

ಅಕ್ಟೋಬರ ತಾ 31ರಲ್ಲು ಅಹಮ್ಮದಾಬಾದಿನಲ್ಲಿ ಗುಜರಾಥಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಯ ವಹಿಸಿದರು ಈ ಸಂದರ್ಭದಲ್ಲಿ ಗುಜರಾಥಿನ ಬೇರೆ ಬೇರೆ ಕಡೆಯ ಅನೇಕ ಮಂದಿ ಸಾಹಿತಿಗಳು ನೆರೆದಿದ್ದರು ಗುಜರಾಥಿನ ಸಾಹಿತಿಗಳು, ಒಕ್ಕಲಿಗರು, ಮಜೂರರು ಮೆತ್ತು ಸಾವಿರಾರು ಮಂದಿ ಹಳ್ಳಿಗರು ಅರ್ಥಮಾಡಿ ತಿಳಿಕೊಳ್ಳುವ ಒರೆಗೆ ಬೇಕಾದ ಪುಸ್ತಕಗಳನ್ನು ಬರೆಯಬೇಕು. ಹಳ್ಳಿಗಳಲ್ಲಿ ತಿಷ್ಠಿಪಂಜರಗಳಂತಿರುವ ಜನತೆಯು ಓದಿ ತಿಳಿಕೊಳ್ಳುವಂತೆ ಅವರ ಜೀವನಕ್ಕೆ ಸಂಬಂಧಿಸುವ ಹೊಸ ಸಾಹಿತ್ಯದ ಸೃಷ್ಟಿಯಾಗಬೇಕು ಎಂದು ಗಾಂಧಿಜಿಯವರು ತಿಗಾಂವಿನ ಹೃದಯ ದ್ರಾವಕ ವಿದ್ಯಮಾನಗಳನ್ನು ವಿವರಿಸುತ್ತಾ, ಕಣ್ಣೀರಿಳಿಸಿ, ಜನತೆಗೆ ರೊಟ್ಟಿದೊರೆಯದಿರುವ ತನಕ, ಅವರಿಗೆ ಒಂಸಕ್ಷರ ಓದಲಿಕ್ಕೂ ಬರೆಯಲಿಕ್ಕೂ ತಿಳಿಯದಿರುವನಕ ಸಾಹಿತ್ಯವು ಪ್ರಯೋಜನವಿಲ್ಲೆಂದು ಹೇಳಿ ಹಳ್ಳಿಯವರಿಗೆ ಪ್ರಯೋಜನಕರವಾದ ಸಾಹಿತ್ಯವೆಂಬುದನ್ನು ತಾನು ತೋರಿಸುವೆನೆಂದರು

ಬೊಂಬಾಯಿಯಲ್ಲಿ ಪುನಃ ಗಲಾಟೆ

3 ದಿವಸಗಳ ಸಂಪೂರ್ಣ ಶಾಂತಿಯ ನಂತರ ಇದೇ ತಾ. 26 ನಂತರ ಬೊಂಬಾಯಿಯಲ್ಲಿ ಅಲ್ಲಲ್ಲಿ ಸ್ವಲ್ಪ ಸ್ವಲ್ಪ ಗಲಾಟೆಯೆದ್ದು 3 ಮಂದಿ ಹಿಂದೂಗಳು ಮತ್ತು 3 ಮಂದಿ ಮುಸಲ್ಮಾನರು ತಿವಿಯಲ್ಪಟ್ಟರು. ಪಟ್ಟಣದಲ್ಲೆಲ್ಲಾ ಗಲಾಟೆಯ ಸುದ್ದಿಗಳು ತುಂಬಿ ಹೋಗಿ ಜನರು ದಿಗಿಲುಗೊಂಡಿದ್ದರು ಪೋಲೀಸರು ತಮ್ಮ ಒಮ್ಮಾಬಸ್ತನ್ನು ಪುತ್ತೂ ಪ್ರಬಲಪಡಿಸಿರುವರು ತಾ 27 ನೆಲ್ಲೂಜರಿನಲ್ಲಿ ಒಬ್ಬ ಹಿಂದುವು ತಿವಿದು ಕೊಲ್ಲಲ್ಪಟ್ಟಿರುವನು. ಹೀಗೆ ಗಲಾಟೆಯಿಂದ ಒಟ್ಟು 61 ಮಂದಿ ಕೊಲ್ಲಲ್ಪಟ್ಟಿರುವರು. ಪೋಲೀಸರು ಜನರನ್ನು ಗಲಾಟೆ ಮಾಡುವಂತೆ ಉತ್ತೇಜಿಸುವರು. ತಂತ್ರಿಗಳನ್ನೆಲ್ಲಾ ದಸ್ತಗಿರಿಮಾಡುತ್ತಿದ್ದಾರೆ. ಈಗ ಪರಿಸ್ಥಿತಿಯು ಪುನಃ ಶಾಂತವಾಗಿದೆ

ಸಾರ್ವಜನಿಕ ಸಭೆಗೆ ನಿಷೇಧ

ಮಧುರೆಯ ಮುದುಕುಲತ್ತೂರು ತಾಲೂಕಿನಲ್ಲಿ ಶ್ರೀ ಸೋಮಯಾಜುಲು, ಮುತ್ತು ರಾಮಲಿಂಗ ತೇವರ್ ಮೊದಲಾದ ಹಲವು ಮಂದಿ ಕಾಂಗ್ರೆಸ್ ಕೆಲಸಗಾರರು ಯಾವ ಭಾಷಣ ಕೊಡಬಾರದೆಂದೂ, ಚುನಾವಣೆಯ ಸಂಬಂಧವಾದ ಪ್ರಚಾರ ಕಾರ್ಯವನ್ನೂ ನಡಿಸಬಾರದೆಂದೂ, ರಾಜದ್ರೋಹದ ಅರೋಪವ ನೆವನಮಾಕಿ ಸ್ಥಳೀಯ ಮೆಜಿಸ್ಟ್ರೇಟರು 144 ಸಕ್ಷನ್ ಮೇರೆಗೆ ನಿಷೇಧಿಸಿರುವರು.

ಈ ವಾರದ ಕಥೆ

ಉಪಾಧ್ಯಾಯರಿಂದ

ಗೋಪಮ್ಮನ ಗೋಪೂಜೆ

ಗೋಪಮ್ಮನು ಗೋವಿನ ಕಾಲು ತೊಳೆಯುವಳು; ಹಣೆಗೆ ಕುಂಕುಮನಿಡುವಳು! ಆದರೆ ಆದರ ಜೀವ ವಿದ್ದು ದು ಹೊಟ್ಟೆಯಲ್ಲಿ—ಪೂಜೆಗೂ ಅದಕ್ಕೂ ಸಂಬಂಧವೇನೂ ಇರಲಿಲ್ಲ.

ಗೋಪಮ್ಮನೆಂದರೆ ಅವರು ಬಹಳ ಸನಾತನಿ ಹೆಂಗಸು. 'ಸಂವೇಶ'ದಲ್ಲಿ 'ನಾರೀ ದಿನಚರ್ಯೆ' ಎಂದು ಯಾವಾಗಲೂ ಬರುತ್ತಿವೆಯಲ್ಲ! ಹಾಗೆ ದಿನಚರ್ಯೆಯುಳ್ಳವರು. ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಉದಯರಾಗ ಪ್ರಾರಂಭಿಸಿದರೆಂದರೆ ಪತ್ತಿರವ ಮನೆಯವರಿಗೆ ಯಾರಿಗೂ ಬೆಳಿಗಿನ ಜಾವದ ನಿದ್ರೆಯಿರಲಿಲ್ಲ. ಗೋಪಮ್ಮನಿಗಿರುವಷ್ಟು ಮಡಿಹೆಂಗಸರಜಾತಿಗೆ ಇರಲಿಕ್ಕಿಲ್ಲ. ದಿನಕ್ಕೆ ನಾಲ್ಕು ಸಲ ಕೆರೆಯಲ್ಲಿ ಮುಳುಗದೆ ಊಟ ಮಾಡುವವರಲ್ಲ. ಜಪ, ಪೂಜೆಯ ಮಧ್ಯಕಾಲದಲ್ಲಿ ಮಕ್ಕಳು ಯಾರಾದರೂ ಹತ್ತಿರ ಬಂದರೆಂದರೆ ಅವರಿಗೆ ಪೆಟ್ಟಿನ ಹಬ್ಬ! ಎಷ್ಟು ಹೊತ್ತಿಗೆ ನೋಡಿದರೂ ಮಣ ಮಣ ಮಂತ್ರ ತಪ್ಪಲಿಕ್ಕಿಲ್ಲ. ಗೊತ್ತಿಲ್ಲದವನು ಗೋಪಮ್ಮನನ್ನು ನೋಡಿದರೆ ಅವರು ಯಾರನ್ನೋ ಸದಾ ಬಯ್ಯುತ್ತಿರುವರೆಂದು ಎಣಿಸಬೇಕು.

ಗೋಪಮ್ಮನಿಗೆ ವರುಷ ೬೦ ದಾಟಿದರೂ ನಿತ್ಯದ ಗೋಪೂಜೆಯನ್ನು ಬಿಡಲಿಲ್ಲ. ಹೇಗಾದರೂ ತಾನೇ ಗೋಶಾಲೆಗೆ ಹೋಗಿ ಗೋವಿನ ನಾಲ್ಕು ಪಾವಗಳಿಗೆ ನೀರೆರೆದು ಹಣೆಗೊಂದು ಕುಂಕುಮ ಹಚ್ಚಿ ನಮಸ್ಕಾರ ಮಾಡದೆ ಇವರು ನೀರು ಮುಟ್ಟುವವರಲ್ಲ. ಗೋವಿಗೆ ಆಹಾರಕ್ಕೆ ತತ್ವಾರವಾದರೂ ಪೂಜೆಗೆ ತತ್ವಾರವಿರಲಿಲ್ಲ. ವರ್ಷಕ್ಕೊಮ್ಮೆ ಮೈ ತೊಳೆಯಿಸದಿದ್ದರೂ ದಿನಕ್ಕೊಮ್ಮೆ ಕಾಲಿಗೆ ನೀರು ತಪ್ಪುತ್ತಿರಲಿಲ್ಲ. ಹೊಟ್ಟೆಗಿಲ್ಲದಿದ್ದರೂ ಹಣೆಗೊಂದು ಕುಂಕುಮದ ಬೊಟ್ಟಿಗೆ ತೊಂದರೆಯಿರಲಿಲ್ಲ. ಗುಡ್ಡೆಯಲ್ಲಿ ಮೇದು, ಹೊಳೆಯಲ್ಲಿ ನೀರು ಕುಡಿದು ರಾತ್ರಿ ಮಲಗಿಕೊಳ್ಳಲಿಕ್ಕೆ ಗೋವು ಗೋಪಮ್ಮನ ಹಟ್ಟಿಗೆ ಬರುತ್ತಿತ್ತು. ಬೆಳಿಗ್ಗೆ ಅದು ಎಷ್ಟು ಕೂಗಿದರೂ ಗೋಪಮ್ಮನ ಪೂಜೆಯಾಗದೆ ಅದನ್ನು ಹೊರಗೆ ಬಿಡುತ್ತಿರಲಿಲ್ಲ. ಇಷ್ಟರ ಮಟ್ಟಿನ ಭಕ್ತ ಗೋಪಮ್ಮ!

ನತೆಯಲು ಸಾಧ್ಯವಾದಷ್ಟು ಕಾಲ ಗೋಪಮ್ಮನು ತಾನೇ ಹಟ್ಟಿಗೆ ಹೋಗಿ ಗೋಪೂಜೆ ಮಾಡಿಕೊಂಡಿದ್ದರು. ಈಗ ಅವರಿಗೆ ನಡೆಯಲಸಾಧ್ಯವಾಯಿತು. ತನ್ನ ಮಗ ರಾಮಾಚಾರ್ಯರನ್ನು ಹತ್ತಿರ ಕರೆದರು. 'ಮಗೂ ನಾನು ಇನ್ನು ಹೆಚ್ಚು ದಿನ ಬದುಕುವವಳಲ್ಲ. ಬದುಕಿರುವ ವರೆಗೂ ಗೋಪೂಜೆಯನ್ನು ಬಿಡಬಾರದೆಂದು ನನಗೆ ಮನಸ್ಸಿದೆ. ನನಗೆ ಹಟ್ಟಿಯ ವರೆಗೆ ಹೋಗುವಷ್ಟು ತ್ರಾಣವಿಲ್ಲದೆ ಹೋಯಿತಲ್ಲ ಇನ್ನೇನು ಗತಿ!' ಎಂದು ಅತ್ತುಬಿಟ್ಟರು.

ರಾಮಾಚಾರ್ಯರಿಗೆ ತಾಯಿಯೆಂದರೆ ಪ್ರಾಣ. ತಾಯಿಗಿಂತ ದೊಡ್ಡ ದೇವರಿಲ್ಲವೆಂದು ಅವರು ಯಾವಾಗಲೂ ಅನ್ನುತ್ತಿದ್ದರು. ತಾಯಿಯ ಹತ್ತಿರ ಜಗಳಾದಿಮದ ಕ್ಕಾಗಿ ತನ್ನ ಹೆಂಡತಿಯನ್ನು ಅವರು ಬಹಳ ಕಾಲದ ಹಿಂದೆಯೇ ಬಿಟ್ಟು ಬಿಟ್ಟು ಅಡಿಗೆಗೆ ಬೇರೆ ಹೆಂಗಸನ್ನು ಮಾಡಿಕೊಂಡಿದ್ದರು. ತನ್ನ ಆಸ್ತಿಯನ್ನು ಅಡವು ಹಾಕಿ ತಾಯಿಯನ್ನು ಕಾಶಿ ರಾಮೇಶ್ವರ ಮೊದಲಾದ ಎಲ್ಲಾ ತೀರ್ಥಗಳಲ್ಲಿ ಮಿಂಯಿಸಿದ ಸುಪುತ್ರರೆಂದರೆ ನಮ್ಮ ರಾಮಾಚಾರ್ಯರೇ. ತಾಯಿಯು ಫಕ್ಕನೆ ಪ್ರಾಣ ಬಿಟ್ಟುಬಿಟ್ಟರೆ ಉತ್ತರ ಕ್ರಿಯೆಗೆ ಹಣ ಸಿದ್ಧವಿರಬೇಕೆಂದು ಮೊದಲೇ ಸಾಲಮಾಡಿ ಬೇಕಾದಾಗ ದೊರೆಯುವಂತೆ ರೂಪಾಯಿ ಮುನ್ನೂರನ್ನು ಅವರು ಟಪ್ಪಾಲು ಕಟ್ಟೆಯಲ್ಲಿಟ್ಟು ಕಾಯುತ್ತಿದ್ದರು. ಇಷ್ಟರವರೆಗಿನ ಮಾತೃ ಭಕ್ತಿ ನಮ್ಮ ರಾಮಾಚಾರ್ಯರಿಗೆ. ತಾಯಿಯ ಮಾತನ್ನು ಕೇಳಿಹೊಸನೆ ಅವರು ಬಹಳ ಪಶ್ಚಾತ್ತಾಪ ಪಟ್ಟು ಹಟ್ಟಿಗೆ ಓಡಿಹೋಗಿ ಗೋವನ್ನು ತಂದು ತಾಯಿಯು ಕುಳಿತಲ್ಲಿಗೆ ತುಲಸೀ ಕಟ್ಟೆಯ ಹತ್ತಿರ ನಿಲ್ಲಿಸಿಬಿಟ್ಟರು.

ಗೋವು ಹಟ್ಟಿಯಿಂದ ಬಿಟ್ಟೊಡನೆಯೇ ಹೊರಗೆ ಓಡಲಿಕ್ಕೆ ಪ್ರಯತ್ನಿಸಿತು. ಕುತ್ತಿಗೆಗೆ ಹಗ್ಗ ಹಾಕಿ ಹೇಗಾದರೂ ತುಲಸೀ ಕಟ್ಟೆಯ ಹತ್ತಿರ ದೀಪ ಇಡುವ ಕಂಬಕ್ಕೆ ಬಿಗಿದುಬಿಟ್ಟರು. ಗೋಪಮ್ಮನು ಮೆಲ್ಲನೆ ನೀರನ್ನೂ, ಕುಂಕುಮವನ್ನೂ ಹಿಡಿದು ಕೊಂಡು ಗೋವಿನ ಹತ್ತಿರ ಬಂದರು ತಪ್ಪಲ್ಲಲ್ಲಿ ಗೋವು ಹಗ್ಗವನ್ನು ಎಳೆದು ಎಳೆದು ದೀಪದ ಕಂಬವನ್ನು ಮುರಿದುಬಿಟ್ಟಿತು. 'ರಾಮಾ' ಎಂದು ಗೋಪಮ್ಮನು ಕೂಗಿದರು ರಾಮಾಚಾರ್ಯರು ಓಡಿಬಂದು ಗೋವಿನ ಹಗ್ಗವನ್ನು ಹಿಡಿದರು. ಅವರ ಎರಡೂ ಕೆವಿಗಳನ್ನು ಹಿಂಡಿ ಗಟ್ಟಿಯಾಗಿ ಹಿಡಿದು ಅವರ ತಲೆಯನ್ನು ನೆಲಕ್ಕೆ ಒತ್ತಿ ಹಿಡಿದು ಕೊಂಡು "ಅಮ್ಮಾ, ಆಗಲಿ ನಿನ್ನ ಪೂಜೆ. ಈ ಮಾರಿ ವನವು ಎಲ್ಲಿಗೆ ಸಾಯುತ್ತದೆಂದು ನಾನು ನೋಡುತ್ತೇನೆ" ಎಂದು ಭರವಸ ಹೇಳಿದರು. ಗೋಪಮ್ಮನು ಗೋವಿಗೆ ದೂರ ದಲ್ಲಿಯೇ ಎರಡು ಪ್ರದಕ್ಷಿಣೆ ಬಂದರು ಎದುರಿನ ಕಾಲಿಗೆ ನೀರೆರೆದರು ಹಿಂದಿನ ಕಾಲಿಗೆ ನೀರೆರೆಯುವುದಕ್ಕೆಂದು ಬಗ್ಗಿದಾಗ ಗೋವು ಫಕ್ಕನೆ ಮೇಲೆ ಹಾರಿತು ಹಿಂದಿನ ಕಾಲಿನಿಂದ ಗೋಪಮ್ಮನಿಗೆ ಗಟ್ಟಿಯಾಗಿ ಒಂದು ಪೆಟ್ಟು ತುಳಿದುಬಿಟ್ಟಿತು. ಗೋಪಮ್ಮನು 'ಅಯ್ಯೋ ನಸ್ಸ ಅವನ್ಹೆಯೇ ನಾರಾಯಣ!' ಎನ್ನುತ್ತಾ ನೆಲದ ಮೇಲೆ ಬಿದ್ದರು. ರಾಮಾಚಾರ್ಯರಿಗೆ ಏನು ಮಾಡುವದೆಂದು ತಿಳಿಯಲಿಲ್ಲ. ತಾಯಿಯನ್ನು ಹೇಗಾದರೂ ಜಗಲಿಯಲ್ಲಿ ಎತ್ತಿ ಕುಳ್ಳಿರಿಸಿದರು. ಅಲ್ಲೇ ಮುರಿದು ಬಿದ್ದಿದ್ದ ದೀಪದ ಕಂಭವನ್ನು ತೆಗೆದು ಗೋವಿಗೆ ಸೂಂಟ ಮುರಿಯುವ ವರೆಗೂ ಹೊಡೆದರು. ಪೆಟ್ಟನ್ನು ತಡೆಯಲಾರದೆ ಹೇಗೂ ಗೋವು ಆ ದಿನ ತಪ್ಪಿಸಿಕೊಂಡು ಹೊರಗೆ ಓಡಿಹೋಯಿತು ಸಂತರ ಯಾವಾಗಲೂ ರಾಮಾಚಾರ್ಯರು ಗೋವನ್ನು ತಂದು ತುಲಸೀಕಟ್ಟೆಯ ಹತ್ತಿರ ನಿಲ್ಲಿಸಿದರೆ ಅದು ಹಂಬಾಡುತ್ತಿರಲೇ ಇಲ್ಲ. ಗೋಪಮ್ಮನ ಪ್ರದಕ್ಷಿಣೆಯಾಗಿ ಕಾಲುಗಳಿಗೆ ನೀರೆರೆಸಿ ಕುಂಕುಮ ಹಚ್ಚಿ ನಮಸ್ಕಾರನಾಡಿ ಮುಗಿಯುವ ವರೆಗೂ ಗಡಗಡನೆ ನಡುಗುತ್ತಾ ಗೋಪಮ್ಮನನ್ನೇ ನೋಡುತ್ತಾ ಸುಮ್ಮನೆ ನಿಂತುಕೊಳ್ಳುತ್ತಿತ್ತು.

ಇಷ್ಟು ಕಷ್ಟವಾದರೂ ಗೋಪಮ್ಮನು ಗೋಪೂಜೆಯನ್ನು ಬಿಡಲಿಲ್ಲ. ಗೋವಿನ ಮೇಲೆ ಭಕ್ತಿಯೆಂದರೆ ಹೀಗಿರಬೇಕು. ತಾಯಿಯ ಗೋಪೂಜೆ ಮುಗಿಯುವ ವರೆಗೆ ಗೋವನ್ನು ದೇವರ ಹಾಗೆ ನಿಲ್ಲುವಂತೆ ಮಾಡಿಬಿಟ್ಟರು ನಮ್ಮ ರಾಮಾಚಾರ್ಯರು. ಮಾತೃ ಭಕ್ತಿಯೆಂದರೆ ಹೀಗಿರಬೇಕು. ಏನು ಪುಣ್ಯ-ಜೀವಿಗಳವ್ವಾ! ಏನು ಸನಾತನಿಗಳು!

ಬಿರುಗಾಳಿಯ ಅಪಾರಹಾವಳಿ

ಅನೇಕ ಮಂದಿಯ ಪ್ರಾಣಹಾನಿ, ನೂರಾರು ಜಾನುವಾರು ಮತ್ತು ಬೆಳೆ ನಾಶ, ಸಾವಿರಾರು ಜನರು .. .. ನಿರಾಶ್ರಿತರಾಗಿರುವರು .. ..

ಮದ್ರಾಸ್ ಕರಾವಳಿಯ ಈಶಾನ್ಯ ಭಾಗದಲ್ಲಿ ಅಕ್ಟೋಬರ ತಿಂಗಳ 20ನ್ನು ಬೀಸಿದ ಬಿರುಗಾಳಿಯಿಂದ ಸುಮಾರು 200 ಮೈಲುಗಳವರೆಗೆ ಒಹಳ ಹಾವಳಿಯಾಗಿದೆ. ಬಪಾಟ್ಲ ಎಂಬಲ್ಲಿ ಪ್ರಬಲ ಹಾವಳಿಯಾಗಿದೆ. ಅಲ್ಲಿಯ ಸಾಲ್ವೇಶನ್ ಆರ್ಮಿಯ ಕಟ್ಟಡಗಳಿಗೆಲ್ಲಾ ಜಖಮ್ ಆಗಿದೆ. ಕಸ್ಟರೋಗಿ ವಸತಿಯೊಳಗಿನ ರೋಗಿಯೊಬ್ಬನು ಕೊಲ್ಲಲ್ಪಟ್ಟಿರುವನು. ಬಿರುಗಾಳಿಯ ಜೊತೆಗೆ ಜಡಿ ಮಳೆಯೂ ಸುರಿದಿರುವುದು. ಹಲವು ಕಡೆ ರೈಲ್ವೇ ಲೈನುಗಳು ನೀರಿಯಲ್ಲಿರುವವು. ಹಲವು ಮಂದಿ ಕೊಲ್ಲಲ್ಪಟ್ಟಿರಬಹುದು. ಅನೇಕ ಜಾನುವಾರುಗಳು ನಾಶವೊಂದಿನವಲ್ಲದೆ ಬೆಳೆಗಳಿಗೆ ಹೆಚ್ಚಿನ ಹಾವಳಿಯಾಗಿರುವುದು ತಿನ್ನಸಮುದ್ರಮ್ ಎಂಬಲ್ಲಿ ಹೊಗೆಸೊಪ್ಪಿನ ಗೋದಾನೊಂದು ಬಿದ್ದು 100 ಮಂದಿ ಕೊಲ್ಲಲ್ಪಟ್ಟಿರುವರೆಂದು ತಿಳಿದುಬರುತ್ತದೆ. ಗುಂಟೂರಿನಲ್ಲಿ ಹಲವು ರೈಲ್ವೇ ಸ್ಟೇಶನ್‌ಗಳಿಗೆ ಜಖಮ್ ಆಗಿರುವುದು.

ನೈಜಾಮ್ ರೈಲ್ವೆ ಕಡಿದುಹೋಗಿ ಗ್ರಾಂಡ್ ಟ್ರಂಕ್ ಎಕ್ಸ್‌ಪ್ರೆಸ್ ರೈಲ್ವೆ 32 ಘಂಟೆ ವಿಳಂಬವಾಗಿ ಮದ್ರಾಸಿಗೆ ಮುಟ್ಟಿರುವುದು. ಮಛಲೀಪಟ್ಟಣದ ಬಳಿ 4 ಮೈಲು ರೈಲ್ವೇ ರಸ್ತೆಯು ನೀರಿಯಲ್ಲಿರುವುದು ಒಂಗೋಲಿನಲ್ಲಿ ನೂರಾರು ವಾರಗಳೂ, ಕೆಲವು ಮನೆಗಳೂ ಬಿದ್ದು ಹೋಗಿವೆ ಹಳ್ಳಿಗಳಲ್ಲಿ ಬಹಳ ಸೊತ್ತು ನಾಶವಾಗಿರುವುದು. ಹಲವರು ಕೊಲ್ಲಲ್ಪಟ್ಟಿರುವರು. ನೂರಾರು ಹಂಚಿನ ಮನೆಗಳಿಗೆ ಹಾವಳಿಯಾಗಿರುವದು. ತಂತಿಗಳೆಲ್ಲಾ ಕಡಿಯಲ್ಪಟ್ಟಿರುವವು ಹಲವು ರೈಲ್ವೆ ಸ್ಟೇಶನುಗಳಿಗೆ ಜಖಮ್ ಆಗಿರುವುದು. ನಿಸರಾವ್ ಪೇಟ್ ಎಂಬಲ್ಲಿ ನೂರಾರು ಮನೆಗಳು ಬಿದ್ದುಹೋಗಿವೆ. ಒಂದು ವ ನೆಯ ಗೋಡೆ ಬಿದ್ದು 10 ಚಾನಿವಾರು ಮತ್ತು ಇಬ್ಬರು ಸ್ತ್ರೀಯರು ಕೊಲ್ಲಲ್ಪಟ್ಟಿರುವರು ಜಸಂಪ್ಟಾ ಕಛೇರಿಗಳು ಹತವಾಗಿರುವವು. ಹಲವು ಕಟ್ಟಡಗಳ ಮಾಡಿಗಳು ಬಹಳ ದೂರ ಬಿರಿಸಿಟ್ಟಿರುವವು. ಚಿರಾಲ ಎಂಬಲ್ಲಿ 62 ವಂದಿ ಕೊಲ್ಲಲ್ಪಟ್ಟಿದ್ದಾರೆ. ಚಿರಾಲ ಮತ್ತು ಪೆರಾಲದಲ್ಲಿರುವ ಹುಲ್ಲು ಛಾವಣಿಯ ಗುಡಿಸಲುಗಳೆಲ್ಲಾ ಬಿದ್ದುಹೋಗಿವೆ.

ಬಪಾಟ್ಲ ಮತ್ತು ಅದರ ಆಸುಪಾಸಿನಲ್ಲಿ ಅತಿ ಹೆಚ್ಚಿನ ಹಾವಳಿಯಾಗಿರುವುದು. ಬಪಾಟ್ಲ ಪಟ್ಟಣವು ಯುದ್ಧ ವಿಮಾನಗಳ ಧಾಳಿಗೊಳಗಾದಂತೆ ತೋರುತ್ತಿರುವುದು. ನೂರಾರು ಕಟ್ಟಡಗಳು ಬಿದ್ದುಹೋಗಿರುವವು. ಹಂಚುಗಳು ಕಾಗದ ಹೂರುಗಳಂತೆ ಆಕಾಶದಲ್ಲಿ ಹಾರಾಡುತ್ತಿದ್ದುವು. ತಗಡುಗಳು ಹಲವು ಯಾರ್ಡು ದೂರ ಕೊಯ್ಯಲ್ಪಟ್ಟಿರುವವು. ವಂಗಮಟ್ಟುಗಳೆಲ್ಲಾ ಉರುಳಿ ಬಿದ್ದಿರುವವು. ರೈಲ್ವೇ ಸ್ಟೇಶನಿನ ಮಾಡು ಬಹಳ ದೂರ ಒಯ್ಯಲ್ಪಟ್ಟಿದ್ದಿತು. ಸುಮಾರು ರೂ. 10,000 ವೆಚ್ಚ ಮಾಡಿ ಇತ್ತಲಾಗಿ ಕಟ್ಟಲ್ಪಟ್ಟಿದ್ದ ಚಿತ್ರಕಲಾ ಮಂದಿರವೆಂಬ ನಾಟಕ ಮಂದಿರವು ಸಂಪೂರ್ಣವಾಗಿ ಬಿದ್ದುಹೋಗಿರುವುದು. ಸರಕಾರಿ ಕಟ್ಟಡಗಳಿಗೆಲ್ಲಾ ಹಾವಳಿಯಾಗಿರುವುದು. ಬಪಾಟ್ಲ ಪಟ್ಟಣದ ಸುತ್ತ ಮುತ್ತಲಿನ 30 ಹಳ್ಳಿಗಳಿಗೆ ಎಷ್ಟೊಂದು ಹಾವಳಿಯಾಗಿರುವುದೆಂದರೆ ಅವನ್ನೀಗ ಗುರುತು ಹಿಡಿಯುವುದೇ ಅಸಾಧ್ಯವಾಗಿದೆ. ಇಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದ ಬಡ ಕೂಲಿ ಜನರ ಅವಸ್ಥೆಯು ವಿವರಣಾತೀತವಾಗಿದ್ದಿತು. ಸಾವಿರಾರು ಮಂದಿ ತಮ್ಮ ಮಕ್ಕಳು ಮರಿಗಳನ್ನು ಹಿಡಿಕೊಂಡು ಆಶ್ರಯಪಡೆಯಲು ಬಪಾಟ್ಲಕ್ಕೆ ಬಂದಾಗ ಅದು ಪ್ರಚಂಡ ಹಾವಳಿಗೊಳಗಾಗಿದ್ದಿತು.

15,000ದ ವರೆಗೆ ಜನರು ನುನೆಮಾರು ಕಳಕೊಂಡು ನಿರಾಶ್ರಿತರಾಗಿರುವರು. ಬಾಳೆ ಭತ್ತ ಮೊದಲಾದ ಬೆಳೆಗಳಿಗೆ ಒಹಳ ಹಾವಳಿಯಾಗಿರುವುದು. ಹೊಗೆ ಸೊಪ್ಪಿನ ಸಸಿಗಳು ನಾಶವಾಗಿರುವವು. ನೂರಾರು ದನ ಸಾವಿರಾರು ಕುರಿ ಮತ್ತು ಆಡುಗಳು ಕೊಲ್ಲಲ್ಪಟ್ಟಿರುವವು. ಪೂನ ಎಂಬಲ್ಲಿ ಒಂದು ಕೊಟ್ಟಗೆ ಬಿದ್ದು ಅದರೊಳಗೆ ಆಶ್ರಯ ಪಡೆದಿದ್ದ 6 ಮಂದಿ ಕೊಲ್ಲಲ್ಪಟ್ಟಿದ್ದಾರೆ. ಮುದಿಕೊಂಡಪಡು ಎಂಬಲ್ಲಿ ಒಂದು ಜರ್ಜ್ ಬಿದ್ದು 6 ಮಂದಿ ಕ್ರೈಸ್ತರು ಮೃತರಾಗಿರುವರು. ಬಿರುಗಾಳಿಯೊಂದಿಗೆ ಜಡಿಮಳೆಯೂ ಬಂದುದರಿಂದ ನೆರೆಹಾವಳಿಯೂ ಉಂಟಾಗಹತ್ತಿದೆ.

ಸಕಲೇಶಪುರದ

ಟವನ್ ನುನಿಸಿಪಾಲಿಟಿ

ಈ ಟವನಿನಲ್ಲಿ ಹೇಮಾವತಿ ನದಿಯ ಪಕ್ಕದ ನೈದಾನದಲ್ಲಿತಾ 12-11-1936 ರಿಂದ 18-11-1936ರ ವರೆಗೆ ದನಗಳ ಜಾತ್ರೆಯು ನಡೆಯುತ್ತದೆ. ರಾಸುಗಳಿಗೆ ಸುಂಕವಿಲ್ಲಾ. ನೀರಿನ ಹುಲ್ಲಿನ ಮತ್ತು ಸ್ಥಳದ ವಸತಿ ಚೆನ್ನಾಗಿರುತ್ತೆ. ಉತ್ತಮ ರಾಸುಗಳಿಗೆ ಬಹುಮಾನವು ಕೊಡಲ್ಪಡುತ್ತೆ. ಈ ಪ್ರದರ್ಶನವು ಕುಲಗುಂದದ ಜಾತ್ರೆಗೆ ಮೊದಲೇ ಆಗುವುದರಿಂದ ಒಳ್ಳೆ ರಾಸುಗಳ ಮಾರಾಟವಾಗುವ ಸಂಭವವಿದೆ.

ಸಕಲೇಶಪುರ } ಅಬ್ದುಲ್ಲಾ ಸುಶೀನ್ ಷರೀಫ್,
ಪ್ರೆಸಿಡೆಂಟ್.

ಜಸ್ಟಿಸ್ ಪಕ್ಷ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ರಿಸೆಟ್ಲ್‌ಮೆಂಟು

ಇದೇ ತಾ. ೨ನೇ ಸೋಮವಾರ ಶ್ರೀ. ಎ. ಬಿ. ಶೆಟ್ಟಿ ಉಡುಪಿಗೆ ಬಂದಿದ್ದಾಗ ನವಯುಗದ ಪ್ರತಿನಿಧಿಯು ಅವರ ಭೇಟಿ ಮಾಡಿ ಕೆಲವು ಪ್ರಶ್ನೆಗಳನ್ನು ಕೇಳಿದಾಗ ಅವರು ಕೊಟ್ಟ ಉತ್ತರವನ್ನು ಈ ಕೆಳಗೆ ಕೊಡಲಾಗಿದೆ.

ಪ್ರಶ್ನೆ— ದಕ್ಷಿಣ ಕನ್ನಡ ಜಿಲ್ಲೆಯ ರಿಸೆಟ್ಲ್‌ಮೆಂಟಿನ ಕುರಿತು ಮದ್ರಾಸ್ ಕೌನ್ಸಿಲಿನಲ್ಲಿ ಎಜರ್ನ್‌ಮೆಂಟ್ ಸೂಚನೆ ತಂದಾಗ ಜಸ್ಟಿಸ್ ಪಕ್ಷದ 38 ಮಂದಿ ಅದಕ್ಕನುಕೂಲವಾಗಿ ಮತವಿತ್ತಿರುವರೆಂದು ಮಾನ್ಯ ಮಂತ್ರಿಗಳಾದ ಶ್ರೀ. ಪಿ. ಟಿ. ರಾಜನರು ಇತ್ತಲಾಗಿ ದಕ್ಷಿಣ ಕನ್ನಡವನ್ನು ಸಂದರ್ಶಿಸಿದಾಗ ಮಂಗಳೂರಿನ ಎಸ್. ಆರ್. ಎಸ್. ಹೋಮಿನಲ್ಲಿ ನಡೆದ ಸಭೆಯೊಂದಲ್ಲಿ ಹೇಳಿದರೆಂದು ಮದ್ರಾಸಿನ ಹಿಂದು ಪತ್ರಿಕೆಯಲ್ಲಿ ಪ್ರಕಟವಾದುದು ನಿಮ್ಮ ಲಕ್ಷ್ಯಕ್ಕೆ ಬಂದಿರುವುದೇ?

ಶ್ರೀ. ಶೆಟ್ಟಿ:—ಹೌದು.

ಪ್ರಶ್ನೆ:—ಆ ಕುರಿತು ನಿಮ್ಮ ಅಭಿಪ್ರಾಯವನ್ನು ವಿವರವಾಗಿ ತಿಳಿಸಿ ನಿಜಸಂಗತಿಯನ್ನು ಜನರು ತಿಳಿಯುವಂಥ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ. ಶೆಟ್ಟಿ:— ದಕ್ಷಿಣ ಕನ್ನಡದ ರಿಸೆಟ್ಲ್‌ಮೆಂಟಿನ ಕುರಿತು ನಾನು ತಂದ ಎಜರ್ನ್‌ಮೆಂಟ್ ಸೂಚನೆಗೆ 38 ಮಂದಿ ಜಸ್ಟಿಸ್ ಪಕ್ಷೀಯರು ಓಟುಕೊಟ್ಟಿರುವರಂದು ಶ್ರೀ. ಪಿ. ಟಿ. ರಾಜನರು ಹೇಳಿದರೆಂದು ಹಿಂದುಪತ್ರಿಕೆಯಲ್ಲಿ ಪ್ರಕಟವಾದ ರಿಪೋರ್ಟು ತಪ್ಪಾಗಿರಬೇಕು. 18 ಮಂದಿ ಜಸ್ಟಿಸ್ ಪಕ್ಷೀಯರು ಅನುಕೂಲ ಮತವಿತ್ತುದೆಂದು ಶ್ರೀ. ರಾಜನರು ಹೇಳಿದ್ದಂತು ನಾನು ಕೇಳುತ್ತೇನೆ ದಕ್ಷಿಣ ಕನ್ನಡದ ರಿಸೆಟ್ಲ್‌ಮೆಂಟಿನ ಪ್ರಕಾರ ಏರಿಸಲ್ಪಟ್ಟ ತೀರ್ವೆ ದರವನ್ನು ಸರಕಾರವು ಸಮರ್ಥಿಸಿ ಪ್ರಕಟನೆ ಹೊರಡಿಸಿದೆದು 1935ನೇ ಇಸ್ವಿ ಜನವರಿ ತಿಂಗಳ ಪ್ರಥಮ ವಾರದಲ್ಲಿ ಜನವರಿ ತಾ. 21ರಲ್ಲಿ ಕೌನ್ಸಿಲು ಸಭೆಸೇರಿದಾಗ ನಾನು ಎಜರ್ನ್‌ಮೆಂಟ್ ಸೂಚನೆ ತಂದುದು. ರಿಸೆಟ್ಲ್‌ಮೆಂಟಿನ ಪ್ರಕಾರ ಏರಿಸಲ್ಪಟ್ಟ ಕಂದಾಯ ದರವನ್ನು ಜ್ಯಾರಿಗೆ ತರಬಾರದೆಂದು, ಕೊನೆಯ ಪಕ್ಷ ಅದನ್ನು ಬರುವ ಸುಧಾರಣೆಯ ವರೆಗಾದರೂ ಬಾಕಿಯಿಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವರೆ ನಾನಾ ಸೂಚನೆ ತಂದುದು. ಅದು ಕೌನ್ಸಿಲಿನಲ್ಲಿ ಓಟಿಗೆ ಹಾಕಲ್ಪಟ್ಟಾಗ 38 ಅನುಕೂಲ ಮತ್ತು 31 ಪ್ರತಿಕೂಲ ಮತಗಳಿಂದ ಮಂಜೂರಾಯಿತು. ನನ್ನ ಸೂಚನೆಯ ಪರವಾಗಿ ಮತವಿತ್ತವರಲ್ಲಿ 8 ಮಂದಿ ಮಾತ್ರ ಜಸ್ಟೀಸ್ ಪಕ್ಷೀಯರು ಈ 8 ಮಂದಿ ಪೈಕಿ ಹೆಚ್ಚಿನವರು ಮಿ. ಚಮ್ನಾಡ್, ಪಾಲತ್ ಮೊದಲಾದವರು. ಆ ಗತಾನೆ ರಿಸೆಟ್ಲ್‌ಮೆಂಟ್ ನಡೆದ ಜಿಲ್ಲೆಗಳಿಗೆ ಸೇರಿದವರಾಗಿದ್ದರು. ಎಜರ್ನ್‌ಮೆಂಟ್ ಸೂಚನೆಗೆ ವಿರೋಧವಾಗಿ ಮತವಿತ್ತ 31 ಮಂದಿ ಪೈಕಿ 3 ಮಂದಿ ಜಸ್ಟಿಸ್ ಪಕ್ಷದ ಮುಖಂಡರುಗಳಾದ ಮಂತ್ರಿಗಳು, (ಇವರಲ್ಲಿ ಒಬ್ಬರು ಶ್ರೀ. ಪಿ. ಟಿ. ರಾಜನರು) ಮತ್ತು ಅವರ ಕಾರ್ಯದರ್ಶಿಗಳು, ಅವರ ಪಕ್ಷದ ಪ್ರಾಮುಖ್ಯ ಅಧಿಕಾರಿಯೊಬ್ಬರು. (The chief whip of the party) ಮತ್ತು ಇತರ 15 ಮಂದಿ ಜಸ್ಟೀಸ್ ಪಕ್ಷೀಯರು. ಸರಕಾರದ ಕಡೆಯಿಂದ ನನ್ನ ಸೂಚನೆಗೆ ವಿರೋಧವಾಗಿ ಓಟುಕೊಟ್ಟವರು 4 ಮಂದಿ ಎಗ್ಜಿಕ್ಯೂಟಿವ್ ಕೌನ್ಸಿಲರುಗಳು ಮತ್ತು 5 ಮಂದಿ ಅವರ ನೆಕ್ರೆಟರಿಗಳು. 18 ಮಂದಿ ಜಸ್ಟೀಸ್ ಪಕ್ಷೀಯರು ನನ್ನ ಸೂಚನೆಯ ಪರವಾಗಿ ಮತವಿತ್ತಿರುವರೆಂದು ಶ್ರೀ. ಪಿ. ಟಿ. ರಾಜನರು ಹೇಳಿರುವರೆಂದಿಯಷ್ಟೆ. ಇವರಲ್ಲಿ ಹೆಚ್ಚಿನವರು ಆಗ ಜಸ್ಟಿಸ್ ಪಕ್ಷಕ್ಕೆ ನೇರಿದವರಾಗಿರಲಿಲ್ಲ. ದಿವಾನ್ ಬಹದೂರು ಮುನಿಸ್ವಾಮಿ ನಾಯಕರುಗಳು, ಜಸ್ಟಿಸ್ ಪಕ್ಷದ ಕುತಂತ್ರಗಳಿಂದ ಜುಗುಪ್ಸೆಗೊಂಡು ಅದನ್ನು ಬಿಟ್ಟುಹೊರಗೆ ಒಂದು ತನ್ನದೊಂದು ಪಕ್ಷವನ್ನು ಸ್ಥಾಪಿಸಿದ್ದರು. ಆಪರೂ ಆಗತಾನೆ ಪ್ರತ್ಯೇಕಗೊಂಡಿದ್ದು, ನನ್ನ ಸೂಚನೆ ಬಂದಾಗ ನಮ್ಮ ಪಕ್ಷೀಯರು ಶ್ರೀ. ಕ. ಪಿ. ವಾಮಮುನಿಸಾಲನನರ ನಾಯಕತ್ವದಲ್ಲಿ ಜಸ್ಟಿಸ್ ಪಕ್ಷದ ವಿರೋಧ ದಲ್ಲಿಯೇ ಇದ್ದು ನನಗೆಅನುಕೂಲವಾಗಿ ಮತವಿತ್ತಿದ್ದರು. ಇನ್ನರು ಆನಂತರ ಜಸ್ಟಿಸ್ ಪಕ್ಷಕ್ಕೆ ನೇರಿದರೂ, ಆಗ ಜಸ್ಟಿಸ್ ಪಕ್ಷದವರೆನ್ನಿಸಲಾಗುವುದಿಲ್ಲ

ನನ್ನ ಸೂಚನೆಯ ಕುರಿತು ಓಟು ತೆಗೆಯಬೇಕೆಂದು ಹೇಳಿದವರು ಮಾನ್ಯ ರೆವಿನ್ಯೂ ಮೆಂಬರರೇ. ಅವರಿಗೆ ಜಯವು ನಿಶ್ಚಯವೆಂಬಂತಿತ್ತು. ಯಾಕಂದರೆ ಜಸ್ಟಿಸ್ ಪಕ್ಷೀಯರು ತಮ್ಮ ಓಟನ್ನು ಸರಕಾರದ ಕಡೆಗೆ ಕೊಡುವುದೆಂಬುದು ನಿಶ್ಚಯವಾಗಿತ್ತು. ಇಲ್ಲವಾದರೆ ಮಾನ್ಯ ರೆವಿನ್ಯೂ ಮೆಂಬರರು ತಾವಾಗಿ ಓಟುವಿಭಜನೆ ಬೇಕೆಂದು ಕೇಳಲು ಧೈರ್ಯವೆಲ್ಲಿಂದ? ಅವರ ಪಕ್ಷೀಯರಿದ್ದುದು ಕೇವಲ 9 ಮಂದಿ ಜಸ್ಟಿಸ್ ಪಕ್ಷದ ಬೆಂಬಲದ ಧೈರ್ಯದಿಂದಲೇ ಅವರು ಓಟು ಕೇಳಿದ್ದುದು. ನನ್ನ ಸೂಚನೆಯು ಮಂಜೂರಾಗದು ಅನೇನೋ ಚಾನ್ಸ್‌ನಿಂದ. ಸುವ್ವಲ್ಲದಿದ್ದ ಅಂದು ಯುರೋಪಿಯನ್ ಮೆಂಬರರು ಹಾಜರಿರಲಿಲ್ಲ. ಜಸ್ಟಿಸ್ ಪಕ್ಷೀಯರು ಕೆಲವರೂ ಇರಲಿಲ್ಲ. ಇಲ್ಲವಾದರೆ ನನ್ನ ಸೂಚನೆಯು ಎಂಥೂ ಮಂಜೂರಾಗುತ್ತಿರಲಿಲ್ಲ.

ಪ್ರಶ್ನೆ:—ಅಂದರೆ ಜಸ್ಟಿಸ ಪಕ್ಷೀಯರು ಪ್ರಜಾಪ್ರತಿನಿಧಿಗಳಾಗಿ ಆರಿಸಲ್ಪಟ್ಟರೂ, ಕೌನ್ಸಿಲಿನಲ್ಲಿ ಜನತೆಯ ವಿಶೇಷವಾಗಿ ರೈತಜನರ ಹಿತಸಾಧನೆಯ ಎದಲಿಗೆ ಸದಾ ಸರಕಾರದ ಪಕ್ಷ ಹಿಡಿದೇ ಹೋಗುವರೆಂಬು ತಮ್ಮ ಅಭಿಪ್ರಾಯವೇ?

ಶ್ರೀ. ಶೆಟ್ಟಿ:— ಹೌದು, ಕೌನ್ಸಿಲಿನ ಕಾರ್ಯ ಕಲಾಪಗಳನ್ನು ಸ್ವಲ್ಪಮಟ್ಟಿಗಾದರೂ ಬಲ್ಲವನಿಗೆ ಇದು ಖಚಿತವಾಗಿರದು. ರಿಸೆಟ್ಲ್‌ಮೆಂಟಿನ ಕುರಿತು ನನ್ನ ಎಜರ್ನ್‌ಮೆಂಟ್ ಸೂಚನೆಯ ಆನಂತರ, ಫಬ್ರವರಿ ಯಾ ಮಾರ್ಚ್ ತಿಂಗಳಲ್ಲಿ ಶ್ರೀ ನಾಜಪ್ಪ ಗೌಂಡರ್ ಎಂಬವರು, ತಿರುಚಿನಾಪಳ್ಳಿ ಮತ್ತು ನೆಲವೆಲ್ ಜಿಲ್ಲೆಗಳ ರಿಸೆಟ್ಲ್‌ಮೆಂಟಿನ ಕುರಿತು ತಂದ ಇನ್ನೊಂದು ಎಜರ್ನ್‌ಮೆಂಟ್ ಸೂಚನೆಯು ಬಿದ್ದು ಹೋಯಿತು. ಯಾಕೆಂದರೆ ಆಗ, ಸರಕಾರವೂ, ಜಸ್ಟೀಸ್ ಪಕ್ಷೀಯರೂ ಅದಕ್ಕೆ ಬೇಕಾದ ತಯಾರುನೂಡಿದ್ದರು. ಏನೋ ಅಸ್ಪಷ್ಟೆಯಿಂದ ನನ್ನ ಸೂಚನೆಗೊಂದು ಜಯ ದೊರೆದುದು. ಜುಕ್ಕರ್ ಸುಬ್ರಾಯನರು ಮುಖ್ಯಮಂತ್ರಿಗಳಾದ್ದಾಗ, ಭೂಕಂದಾಯ ವಸ್ತ್ವತಿಯ ಅನ್ಯಾಯ, ರವಿನ್ಯೂ ಅಧಿಕಾರಿಗಳ ಸ್ವೇಚ್ಛಾಚರ ಕಂದಾಯ, ಹೊರಿಸುವಿಕೆಯನ್ನೆಲ್ಲಾ ನಿವೇದಿಸಲು ತರಲ್ಪಡುತ್ತಿದ್ದ ಆಡಳಿತನೆಜ್ಜೆ ಕಡಿತದ ಸೂಚನೆಗಳು ಮಂಜೂರಾಗುತ್ತಿದ್ದವು ಯಾಕಂದರೆ ಅಂಥ ನಂಬರ್ಚಗಳಲ್ಲಿ ಮಂತ್ರಿಗಳು ಸ್ವತಂತ್ರವಿಷ್ಟ ಪಂಪುತ್ತಿದ್ದರು. ಮತ್ತು ಮಂತ್ರಿಗಳ ವಕ್ಷದ ನೆಂಬರರು ಸರಕಾರಕ್ಕೆ ವಿರೋಧ ಓಟುಕೊಡುತ್ತಿದ್ದರು. ಆದರ ಜಸ್ಟೀಸ್ ಪಕ್ಷೀಯರು ಅಧಿಕಾರದಲ್ಲಿರುವ ಸನುಮ ಅಂಥಹ ಕಡಿತದ ಸೂಚನೆಗಳೆಲ್ಲಾ ಬಿದ್ದು ಹೋಗಿರುವನ್ನ 1935 ಮತ್ತು 36ನೇ ವರ್ಷಗಳಲ್ಲಿ ಈ ನೆಜ್ಜೆ ಕಡಿತದ ಸೂಚನೆಗಳು ಕೌನ್ಸಿಲಿನ ಮುಂದೆ ಬಂದಾಗ ಜಸ್ಟಿಸ್ ಪಕ್ಷೀಯರು ಯಾವಾಗಲೂ ಸರಕಾರದ ಪಕ್ಷ ಹಿಡಿದಿದ್ದರು.

ಪ್ರಶ್ನೆ:—ಜಸ್ಟಿಸ್ ವಕ್ಷದಂಥಹ ರಾಜಕೀಯ ಪಕ್ಷವೊಂದು ಇನ್ನೂ ಅಸ್ತಿತ್ವದಲ್ಲಿರುವ ಕುರಿತು ತಮ್ಮ ಅಭಿಪ್ರಾಯವೇನು?

ಶ್ರೀ. ಶೆಟ್ಟಿ:—ಜಸ್ಟಿಸ್ ವಕ್ಷವು ವ್ಯಕ್ತಿ ಗೌರವ ಮತ್ತು ಸ್ವಾರ್ಥಪ್ರೇರಿತವಾದದು ಸದಾ ಸರಕಾರದ ಬಾಲ ಹಿಡಿದು ಹೋಗುವ ಪಕ್ಷವಿದು. ಯಾವ ತರವ ಉದಾರ ತತ್ವವಾಗಲಿ, ಧೋರಣೆಯಾಗಲಿ ಅವಕ್ಕಿರುವುದಿಲ್ಲ. ಮೊದಲು ಕೆಲಸಮಯದ ತನಕ ಅದೊಂದು ಸದುದ್ದೇಶಪ್ರೇರಿತ ಪಕ್ಷವಾಗಿರಬಹುದು ಅಂತಹ ಒಂದು ಪಕ್ಷದ ಆವಶ್ಯಕತೆಯೂ ಇದ್ದಿರಬಹುದು. ಆದರೆ ಈಗಣ ಪರಿಸ್ಥಿತಿಯಲ್ಲಿ ಅಂಥಹದೊಂದು ಪಕ್ಷದ ಆವಶ್ಯಕತೆಯಿರುವುದಿಲ್ಲ ಅದರ ದಿನವೂ ಎಣಿಸಲ್ಪಟ್ಟಿರುವುದೆಂದೇ ಹೇಳಬೇಕು. ಮೊತ್ತ ಮೊದಲ ಜಮಾನುದಾರರು ಮತ್ತು ಭೂಮಾಳಿಗಾರರ ಸ್ವಪ್ರತಿಷ್ಠೆಯ ಪಕ್ಷವಾಗಿ ಪರಿಣಮಿಸಿತೆ. ಇಂದಮ ಇಲ್ಲವಾದರೆ ದಿವಂಗತ ದಿವಾನ್ ಬಹದ್ದೂರ್ ಮುನಿಸ್ವಾಮಿ ನಾಯುಡುಗಳು ಅನುಭವಶಾಲಿ ಮತ್ತು ಜನ ಹಿತಸಾಧಕರು ಎಂದನ್ನು ಬಿಟ್ಟು ಹೊರ ಒರುತ್ತಿರಲಿಲ್ಲ. ಇತ್ತಲಾಗಿನ ಒಂದು ವಿದ್ಯಮಾನವೇ ಜಸ್ಟಿಸ್ ಪಕ್ಷವು ಕೇವಲ ವ್ಯಕ್ತಿ ಗೌರವ ಪ್ರೇರಿತ ಪಕ್ಷವೆಂಬುದನ್ನು ಸ್ಪಷ್ಟ ಪಡಿಸುತ್ತದೆ. ಜೆಟ್ಟಿನಾಡಿನ ಕುಮಾರರಾಜರಾದ ಶ್ರೀ. ಮುತ್ತಯ್ಯ ಜೆಟ್ಟಿಯಾರರು ಮದ್ರಾಸಿನ ದೊಡ್ಡ ದನಿಕರಲ್ಲೊಬ್ಬರಾಗಿದ್ದರು ಅವರಿಗೂ ಬೊಬ್ಬಿಲಿ ರಾಜರಿಗೂ ಒಮ್ಮೆ ಸರಿಹೋಗದೆ, ಶ್ರೀ ಮುತ್ತಯ್ಯ ಜಟ್ಟಿಯಾರರು ಜಸ್ಟಿಸ್ ಪಕ್ಷದಿಂದ ಒಡೆದು ಹೋಗಿ ತನ್ನದೊಂದು ಪಕ್ಷವನ್ನು ಪಿಸಿದ್ದರು. ಆನಂತರ ಪ್ರಸಹ ಒಟ್ಟು ಸೇರಿ, ಈಗ 6 ತಿಂಗಳ ಮಾತ್ರಕ್ಕೆ ಅವರಿಗೊಂದು ಮಂತ್ರಿ ಪದವಿಕೊಡಲಾಗಿದೆ. ಅನುಭವಶಾಲಿಗಳಾದ ದಿವಾನ್ ಬಹದ್ದೂರ್ ಕುಮಾರಸ್ವಾಮಿ ಚಟ್ಟಿಯಾರರನ್ನು ತಳ್ಳಿ ಹಾಕಲಾಗಿದೆ. ಇದು ಚುನಾವಣೆಯ ನಿಮಿತ್ತವೇ ನಡೆಸಲ್ಪಟ್ಟ ರುವ ಸೂತ್ರಜಾಲವೆ. ಇಂತಹ ಸೂತ್ರ ಜಾಲವನೆಗೊಳಗಾಗಿ, ಸರಕಾರವು ಎಂತಹ ಪ್ರಜಾಪಿತ ನಿರೋಧ ಕೆಲಸವನಾಡಿದರೂ ಅವರಿಗೆ ಬೆಂಬಲವಾಗಿ ನಿಲ್ಲುವ, ಎಂತಹ ಸುಧಾರಣೆಯನ್ನಿತ್ತರೂ ಅದು ಮಹಾ ಪ್ರಸಾದವೆಂದು ಸ್ವೀಕರಿಸಿ ಆ ಭರವಸೆಗೆ ತಾಳಕ್ಕೆ ತಕ್ಕ ಹೆಜ್ಜೆ ಹಾಕುವ, ರಾಷ್ಟ್ರೀಯ ಆಕಾಂಕ್ಷೆಗಳೆಲ್ಲಾ ವಿರೋಧವಾಗಿ ನಡೆಯುವ ವಕ್ಷವೊಂದು ಇನ್ನೂ ಅಸ್ತಿತ್ವದಲ್ಲಿರಬೇಕೆಂದೇ ಪ್ರಶ್ನೆ ವಿಶೇಷವಾಗಿ ರೈತರ ಹಿತ ಸಾಧನೆಯನ್ನೂ ಗಮನಿಸಲಿ. ರಿಸೆಟ್ಲ್‌ಮೆಂಟ್ ನಂತಹ ಖ್ಯಾಮುಖ್ಯ ವ್ಯಕ್ತಿಯ ಕುರಿತು ಸರಕಾರವ ನಕ್ಷತನ್ನೇ ಹಿಡಿಯುವ ವಕ್ಷಕ್ಕೆ ದಕ್ಷಿಣ ಕನ್ನಡಿಗರು ಆಶ್ರಯನೀಯಬೇಕೇ ಎಂದು ಜಿಲ್ಲೆಯ ಜನರೇ ಆಲೋಚಿಸಿ ಕೊಳ್ಳಲಿ.

ಪ್ರಶ್ನೆ:—ಜಸ್ಟಿಸ್ ಪಕ್ಷದ ಭವಿಷ್ಯದ ಕುರಿತು ನಿಮ್ಮ ಅಭಿಪ್ರಾಯವೇನು?

ಶ್ರೀ. ಪ್ರಶ್ನೆ:— ನಾನಾಕುರಿತೇ ನಿಜ ಭವಿಷ್ಯ ಹೇಳುವ ಅವಶ್ಯವಿಲ್ಲ. ಜಸ್ಟಿಸ್ ಪಕ್ಷದ ಕೋಟೆಯೆಂತಿರುವ, ಹಲವು ವರ್ಷಗಳಿಂದ ಜಸ್ಟಿಸ್ ಪಕ್ಷೀಯರು ಬಹು ವಕ್ಷದಿಂದಿದ್ದ ಮದ್ರಾಸ್ ಕೋರ್ಪರೇಶನಿನ ಚುನಾವಣೆಯ ಫಲಿತಾಂಶವೇ ಇದನ್ನು ಸ್ಪಷ್ಟಪಡಿಸುವುದು.. ಕೋರ್ಪರೇಶನಿನ 40 ವಾರ್ಡಗಳ ಸೀಟುಗಳಲ್ಲಿ 28ನ್ನು ಕಾಂಗ್ರೆಸು ಗೆದ್ದಿರುವುದು. ಜಸ್ಟೀಸ್ ಪಕ್ಷೀಯರು ಕೇವಲ 10 ಸೀಟುಗಳಿಗೆ ತಮ್ಮ ಅಸೋಸ್ಯೇಶನ್ನಿಗಳನ್ನು ನಿಲ್ಲಿಸಿದ್ದರು. 7 ಸೀಟುಗಳು ಮಾತ್ರ ಅವರಿಗೆ ದೊರೆತಿರುವುದು. ಅವರ ಪಕ್ಷದ 3 ಮಂದಿ ತಮ್ಮ ಜಾಮೀನಿನ ಹಣವನ್ನು ಕೂಡಾ ಕಳಕೊಂಡಿರುವರು. ಜಸ್ಟಿಸ್ ಪಕ್ಷದ ಆಧಾರ ಸ್ತಂಭದಂತಹ ನೆಂಬರರಾದ ಶ್ರೀ. ಸುಂದರರಾವ್ ನಾಯ್ಡು

ಉಳಿದ ಸುದ್ದಿ ೮ನೇ ಪುಟದಲ್ಲಿದೆ

ಕಸ್ತೂರಿ ನಿಪ್ಪಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. **ಶೋಧನ ಗುಣ:**—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ನರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿನಸಗಳೊಳಗೆ ಅಂಕುಚಿತವಾಗಿ ಮಾಡುವದು.

II. **ರಸಾಯನ ಗುಣ:**—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇನ್ಮುಡಿಯಾಗಿ ತಿರುಗಿ ಹೊಂದುವಳು.

III. **ಸುಖಸೇವನ:**—ಸುಖಸೇವನದಿಂದ ಸುಧಾರ ಮುಸೋಹರನಾದ ಈ ರಸಾಯನವು ಬಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೂಪ ಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾ ನಂತರದ ತೀಕ್ಷ್ಣವೇದನೆ ಯನ್ನು ಶೀಘ್ರುದಿಂದ ಶಿಥಿಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟಿ 1ಕ್ಕೆ ರೂ 2-0-0

ಎಮ್ಮೆ ವಿ ಶಾಸ್ತ್ರಿ,

ಅಯುರ್ವೇದ ಭೂಷಣ ಮಂಗಳೂರು ಡಿ. ಕ

ಏಜಂಟರು:—ಮಸರ್ಸ್ ಓರಿಯಂಟಲ್ ಡ್ರಗ್ಸ್ ಎಂಡ್ ಜನರಲ್ ಏಜನ್ಸಿ, ಸಂಪಿಗೆ ರಸ್ತೆ ಮಲೇಶ್ವರಮ್, (ಬೆಂಗಳೂರು ಸಿಟಿ)

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ. 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇಪೆರಿಗಳ ಬೇಜು, ಮೊನೋಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೂಡೋಣಾಗುವುದು.

ಪೆಟ್ಟಿಟ್ಟು ಒತ್ತುವ ಸೆಟ್ಟುಗಳು ಕೊಡಾ ಸಿಗುವವು.

ಮಿಕ್ಕಿ ವಿಚಾರಗಳನ್ನು ನನ್ನು ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಿಕೊಳ್ಳಬಹುದು

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸೆಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-30
ಮೈಲ್	ಬೆಳಿಗ್ಗೆ 9 50	ಸಂಜೆ 4-30
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಪಟೆಲ್	ಸಂಜೆ 5-25	ಬೆಳಿಗ್ಗೆ 9-30

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

ಸ್ಥಾಪಿತವಾದದು] [1907ರಲ್ಲಿ

ವೇಲ್ಯುವೇಶನ್ ವರ್ಷ **1936.**

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ನಿಲ್ಕಿವೆ

ನಿಮಾ ಹೊಸ ವಾವತಿ ರೂ. **37** ಲಕ್ಷ ನಿಲ್ಕಿಸಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯ ದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ವಿಜನ್ಸಿ ಕರ್ತವ್ಯಗಳು:—ಅತ್ಯಧಿಕ ನಷ್ಟೆಯ ತಮಿಕನಿನಿಂದ ಬಹಳ ಲಾಭ ದಾಯಕನಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕ್ಕೂರಿ

P. D. BHARGOVA,
General Manager, **AJMER,**

SUPERINTENDENT, 278, Linga Chetty Street, MADRAS

Or Chief Agent. —

BELLARY. MADURA TRICHINAPOLY VELLORE

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದ ತ್ಪರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 16ನೇ ತಾರೀಕಿಗೆ ತಪ್ಪದೆ ಹೊರಡುವದು

ಸದ್ಧರ್ಮ ಪ್ರಚಾರಕ್, ಕಾರ್ಯಾಲಯ, ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು-ವೈಜ್ಞಾನಿಕ ವಿಷಯಗಳು-ಪರರಾಷ್ಟ್ರಗಳ ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನ್ನೊಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕ್ಯೆಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೇ

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ

ಕಾಸರಗೋಡು, ದಕ್ಷಿಣಕನ್ನಡ

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮುಲ್ಕೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 12-30 ಮಂಗಳವಾರ ಮಧ್ಯಾಹ್ನ 1-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಆಭರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ಮೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P A. PAI BROS

ಪಿ. ಎ. ಪೈ ಬ್ರದರ್ಸ್,

ಆಸ್ಪತ್ರೆ ಎದುರು, ಉಡುಪಿ.

THE VIJAYA BANK Ltd.,

Head Office **MANGALORE** Branch Office Court Road, UDIPI

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ ಉಡುಪಿ.**

ಚಾಲ್ತಿ ರೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ರೇವಣಾತಿಗಳು ಸಾ. ಶೆ. 3½. ಕಾಯಂ ರೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4, 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1 ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟು ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತದೆ. ಭಂಗಾರದ ಈಡಿನ ಮೇಲೆ ರೂ 100 ಅಥವಾ ಅದರ ಮೇಲಿನ ಐವೇಜಿಗೆ ಸಾ. ಶೆ 8. ಮತ್ತು ಅದಕ್ಕಿಂತ ಕೆಳಗಣದು ಸಾ ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ಕೊಡಲಾಗುವದು ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹ ಸಾಲಕೊಡಲಾಗುತ್ತದೆ. ಹಾಲುಗಳು ಕೊರೆಯುತ್ತವೆ.

ಪೆಟ್ಟಿನ ಮಾಹಿತಿಗೆ ಕೆಳಗಿನ ನಿಣಾಕ್ಕೆ ಬರೆಕೊಳ್ಳಿರಿ

A. B Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೆಯರ್‌ಮೇನ್ ಕದ್ರಿರೋಡ್, ಮಂಗಳೂರು. ಸೆಕ್ರಿಟರಿ.

ಕೆಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗ ಸರ್ವಿಯೂ ಸರಿಯಾಗಿ ಬೆಳೆದು, 3ನೇ ವರ್ಷದ ಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರ ದಲ್ಲಿಸಾವಿರಗೆಟ್ಟಿ ಹಣ್ಣಾಗುವದು. ಒಂದು ಎಕ್ರೆ ಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ನಿಟಮಿನ್ ತುಂಬ ಇರುವದರಿಂದ ರಕ್ತವನ್ನು ವೃದ್ಧಿಸುವುದು. ಬರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲಾ ಕೋಟಿಪದ್ಧಿಯೂ ಇರತಕ್ಕದ್ದು. ಗಿಡ ಪೊಂದರ ಕ್ರಯ ರೂ 1-0-0 ಮಾತ್ರ ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯವಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾಮಿಪಾಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡಿನೋಸ್ಟ್ರೇಟರ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,

ಪೋಸ್ಟ್ ಕಾಪು, ದ. ಕನ್ನಡ.

I Write as I Please *by* B. N. RAO

THE names published by certain papers purporting to be the ones recommended by the Provincial Congress Parliamentary Committee for adoption as the Party candidates in the ensuing elections to the Legislative Assembly have caused grave discontent among the rank and file of the Party. It is stated that in their desire to do "justice" to all communities—a procedure, by the way, which is not altogether to be commended,—the Committee have pitched upon persons whose qualifications to be selected as candidates are not self-evident.

I grant that going to jail is not the sole criterion for judging a man's patriotism. But what meaning is there in choosing for the election persons who have never taken any active part in politics? It may be that the Committee took the view that for success in elections, mere patriotism is not enough and that such factors as the length of the purse strings of the candidates must be taken into consideration. But then we would do well to remember that a paper majority will lead us nowhere, nay, is positively misleading, a lesson which the election to the District Board Presidentship should have by this time made plain to all persons.

Intriguing

DR. P. G. ACHAR presiding over the election meeting of M. C. J. Varkey at Ajjarkad maidan the other day has greatly intrigued the public. The question has been asked by certain persons whether he is staging a come-back to the Congress fold, which he had to leave some time ago as a result of the controversy that arose following the failure of the Congress candidate in the election to the District Board Presidentship. On his part, Mr. Varkey has been criticised for not having requisitioned the services of the newly constituted Taluk Congress Committee for organising the meeting.

Students Union

A STUDENTS' UNION has been started in Mangalore recently. The Union has the support of the heads of many of the leading educational institutions in the town. Apart from acting as a social centre for students the Union is also interesting itself in welfare work like the conduct of village survey work, health and educational propaganda etc. It is unnecessary to emphasise that the Union is a non-political body.

The administration of the Union is vested in a "Cabinet" consisting of a "Prime Minister" and seven other "Ministers" holding the "portfolios" of Meetings and Debates, Propaganda, Rural Development work and so on. The Union will hold meetings and debates, conduct mock trials and similar other activities. I am authoritatively informed that the "Cabinet" will shortly visit Udipi to found a Union here.

It is really a matter for shame that the students of Udipi have not so far realised the value of social life. Surely education means much more than cramming text books for examinations! It is to be sincerely hoped that the students of Udipi will give a suitable response to the efforts of their public spirited fellow-students of Mangalore and that the school authorities will co-operate with the students in the task in all possible ways.

Literary Censorship

Our District Educational Officer has ruled that Pandit Jawaharlal Nehru's Autobiography is "objectionable literature" and as such should not be included in the Mangalore Municipal Library. It is now an open secret that Lord Linlithgow "passed" the book as not unfit for reading by the Indian people and that but for him it would have been proscribed. In view of this our District Educational Officer's zeal in the matter was wholly unnecessary.

The question has now been referred to the Director of Public Instruction for final decision. It now only remains to be seen what it is going to be.

A blow to Orthodoxy

THE Brahmins of Udipi who have for long been accustomed to look up to the Maharaja of Mysore as a pillar of orthodoxy will no doubt be shocked to learn of the invitation extended to Harijans for the Dasara celebrations in the Palace and of the equal treatment accorded to them on the occasion. The meaning of it all is that untouchability is now on its last legs and that those who still persist in caste arrogance do so at their own peril.

ಇನೇ ಪುಟದಿಂದ ಮುಂದರಿದುದು

ಡುರವರನ್ನು ಮಿಸೆಸ್ ಲಕ್ಷ್ಮಿ ಪ್ರತಿಯವರು ಗೆದ್ದಿರುವರು. ಕೋರ್ಪರೇಶನಿನ ಚುನಾವಣೆಯು ಗಾಂಧಿ ಎತ್ತ ಬೀಸುವುದೆಂಬುದನ್ನು ಸೂಚಿಸುವ ವಿಕ್ಷಕ್ರದಂತಿರುವುದು. ಮುಖ್ಯಾ ಪಟ್ಟಣದಲ್ಲೇ ಜಸ್ಟೀಸ್ ಪಕ್ಷದ ಯವರ ಅವಸ್ಥೆಯು ಹೀಗಾದ ಮೇಲೆ ಮುಂದಿನ ಎನೆಂಬಿ ಚುನಾವಣೆಯಲ್ಲಿ ಎಂತಹ ಗತಿಯಾಗಬೀತೆಂದು ಬೇರೆ ಹೇಳಬೇಕಾಗಿಲ್ಲ.

ಪ್ರಶ್ನೆ:—ದಕ್ಷಿಣ ಕನ್ನಡದ ಪರಿಸ್ಥಿತಿಯ ಕುರಿತು ತಮ್ಮ ಅಭಿಪ್ರಾಯವೇನು?

ಶ್ರೀಕೆಟ್ಟು:—ನಾನು ಈಗತಾನೆ ಕುಂದಾಪುರ ತಾಲೂಕಿನಲ್ಲಿ ತಿರುಗಿಬಂದಿರುವೆನು. ಕಾಂಗ್ರೆಸಿನ ಕುರಿತಾದ ಜಿಲ್ಲೆಯ ಜನರ ಉತ್ಸಾಹವೇನೂ ಕಡಿಮೆಯಿಲ್ಲ. ನಮ್ಮ ಜಿಲ್ಲೆಯಲ್ಲಿ ಜಸ್ಟಿಸ್ ಪಕ್ಷವು ಎಂದೂ ಸ್ಥಿರವಾಗಿ ಕಾಲೂರಿದ್ದಿಲ್ಲ. ಕಳೆದ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಚುನಾವಣೆಯಿಂದೇನೋ ಅವಕ್ಕೆ ಸ್ವಲ್ಪ ಆಶ್ರಯದೊರೆತಿದೆ. ಆದರೆ ಇದಕ್ಕೆ ನಮ್ಮ ಕೆಲವು ಮುಂದಾಳುಗಳೆನಿಸುವವರೆ ವಿದ್ರೋಹವೇ ಕಾರಣ. ಜನಸಾಮಾನ್ಯರು ಆಗಲೂ, ಈಗಲೂ ಕಾಂಗ್ರೆಸ್ ಮನೋವೃತ್ತಿಯನರೇ ಇದ್ದಾರೆ. ಕಾಂಗ್ರೆಸಿನ ಮೇಲಿನ ಅವರ ವಿಶ್ವಾಸವೂ, ಉತ್ಸಾಹವೂ ಅಚ್ಚಳಿಯದಿದೆ. ಆದುದರಿಂದ ದಕ್ಷಿಣಕನ್ನಡವು ಬರುವ ಎನೆಂಬಿ ಚುನಾವಣೆಯಲ್ಲಿ ಕಾಂಗ್ರೆಸಿನ ವ್ಯಜಯವನ್ನು ಎತ್ತಿ ಹಿಡಿದು ಕಾಂಗ್ರೆಸಿನ ವರ್ಚಸ್ಸನ್ನು ಜಿಲ್ಲೆಯಲೆಲ್ಲಾ ಬೆಳೆದು ನೆಲೆಗೊಳ್ಳುವಂತಾಗುವುದೆಂದು ಭಾವಿಸುತ್ತೇನೆ.

ESTD 1906.

CANARA BANK,

LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore-City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Buntwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

• ವಾರದ ವಿಚಾರ •

ಮೈಸೂರು ಮಹಾರಾಜರ ಸ್ತುತ್ಯ ಕಾರ್ಯ.

ಮೈಸೂರು ಮಹಾರಾಜರು ಈ ಸಲದ ಸರಾ ಸಮಯದ ದರ್ಬಾರಿಗೆ ಹರಿಜನರ ನ್ನು ಆಮಂತ್ರಿಸಿ, ಅವರನ್ನು ಇತರರಂತೆ ೂೀ ಸ್ಥಾನ-ಮಾನವಿತ್ತು ಸತ್ಕರಿಸಿರುವು ು ಅತ್ಯಂತ ಸ್ತುತ್ಯ ಕೆಲಸವಾಗಿದೆ. ಹರಿ ನರನ್ನು ಈ ರೀತಿ ಆಸ್ಥಾನಕ್ಕೆ ಆಮಂತ್ರಿ ವ ದೇೀಯ ಸಂಸ್ಥಾನಗಳಲ್ಲಿ ಮೈಸೂರು ೃಥಮವಾದುದು. ಮಹಾರಾಜರ ಉದಾರ ಾಗೂ ವಿವೇಕ ಬುದ್ಧಿಯ ಈ ಸುಧಾರ ಯ ಮಾದರಿಯನ್ನು ಇತರ ದೇೀಯ ಂಸ್ಥಾನಗಳು ಅನುಸರಿಸಿದರೆ, ಸಮಾಜ ಲ್ಲಿ ಹರಿಜನರಿಗೆ ಇತರರಂತಹ ಸ್ಥಾನ ೂಡತಕಿಸಿಕೊಡಲು ಬಹಳ ಸಹಾಯಮಾ ದಂತಾಗದಿರದು.

ಇರಕಿನ ಮಂತ್ರಿಮಂಡಲದ ಪದಚ್ಯುತಿ

ಅಕ್ಟೋಬರ ತಾ. 31ರಲ್ಲು ಬೆಕ್ರ್ಸನಿಟ್ಟ ುಂಬ ಸೇನಾನಾಯಕರು ಸೈನಿಕರನ್ನು ುಂತ್ರಿಮಂಡಲದ ವಿರೋಧವಾಗಿ ನಿಲ್ಲು ಸಂತೆಮಾಡಿ ಜನರಲ್ ಪಸೀಮಿಯವರ ುಂತ್ರಿಮಂಡಲವು ರಾಜಿನಾಮೆ ಕೊಡು ರಂತೆ ಮಾಡಿರುವರು. ಅರಸ ಘೂಜಯ ರರ ಅಪೇಕ್ಷೆಯವರ ಮೇರೆಗೆ ಹಿಕ್ಕೃತ್ತಾ ಘುಲೇಮಾನ್ ಎಂಬವರು ಹೊಸ ಮಂತ್ರಿ ುಂಡಲವನ್ನೇರ್ಪಡಿಸಿರುವರು. ಇರಕಿನ ಪ್ರಬಲ ಪುರುಷರೆನ್ನಿಸಿಕೊಂಡಿದ್ದ ಮತ್ತು ಮಂತ್ರಿಗಳಲ್ಲೊಬ್ಬರಾದ ಜನರಲ್ ಜಾಫ ್ ಪಾಶಾರವರು ಗುಂಡು ಹೊಡೆದು ಕೊ ಲ್ಲಲ್ಪಟ್ಟಿರುವರು. ಇತರ ಮಾಜಿಮಂತ್ರಿ ಗಳೆಲ್ಲಾ ಬಗ್ದಾದನ್ನು ಬಿಟ್ಟು ಹೋಗಿರು ವರು. ಅರಸ ಘಾಜಿಯನರು ಹಳೆಯ ಪಾರ್ಲಿಮೆಂಟನ್ನು ಮುಕ್ತಾಯಗೊಳಿಸಿ ಹೊಸ ಚುನಾವಣೆ ನಡಿಸುವ ಆಪ್ಪಣೆಯಿ ತ್ತಿರುವರು. ಹೀಗೆ ಸೇನಾಬಲದಿಂದ ಇರಾ ಕಿನಲ್ಲಿ ಕಣತ್ತಾತ್ತಾಗಿ ಹೊಸ ರೀತಿಯ ಆಡಳಿ ತವು ತೊಡರುವುದು.

ಅಮೆರಿಕದ ಪ್ರೆಸಿಡೆಂಟರ ಚುನಾವಣೆ

ಈಗ ಪ್ರೆಸಿಡೆಂಟರಾಗಿರುವ ಮಿ. ರುಸ ವೆಲ್ಟರು ಪುನಃ ಆರಿಸಲ್ಪಡುವದು ನಿಶ್ಚಿಯ ವೆಂಬಂತೆ ತೋರುವುದು ಅವರಿಗೆ ಅವರ ಪ್ರತಿಸ್ಪರ್ಧಿಗಿಂತ ಎರಡು ಪಾಲಷ್ಟು ಓಟು ಮೊರೆಯಬಹುದೆಂದು ನಿರೀಕ್ಷಿಸಲಾಗಿದೆ. ಶಾಂತ ಸಾಗರದ ಕರಾವಳಿಯಲ್ಲಿ ಹಡಗ ಕೈಗಾರಿಕೆಯ ಕೆಲಸಗಾರರ ಮುಷ್ಕರವು ಪ್ರಬಲವಾಗಿ ಹಬ್ಬಿ ಪರಿಸ್ಥಿತಿಯು ರುಸವೆ ಲ್ಟರ ವಿರೋಧಿ ಮಿ. ಲೇಂಡನರಿಗೆ ಅನು ಕೂಲವಾಗಬಹುದೆಂದು ರಿಪಬ್ಲಿಕನರ ಕೊ ನೆಯ ಆಸೆ. ಆದರೆ ಇದಕ್ಕೆ ಎಷ್ಟರ ಮ ಟ್ಟಿಗೆ ಆಧಾರವಿರುವುದೆಂದು ಹೇಳಬರುವು ದಿಲ್ಲ. ರಿಪಬ್ಲಿಕನರ ಪಕ್ಷವು ಶ್ರೀಮಂತರ ಕಡೆಯದು ಅಮೆರಿಕದ ಭಂಡವಾಳ ಶಾಹಿಗೆ ಅಂಕುಶ ಹಾಕಿದವರು ಡೆಮೊಕ್ರೆ ಟಿಕ್ ಪಕ್ಷವ ಪ್ರೆಸಿಡೆಂಟರಾದ ಮಿ. ರುಸ ವೆಲ್ಟರು. ಅವರೇ ಪುನಃ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟರೆ ಅಮೆರಿಕದಲ್ಲಿ ದೊಡ್ಡ ದೊಡ್ಡ ಭಂಡವಾಳಗಾರರ ವರ್ಚಸ್ಸು ಮತ್ತೂ ಕಡಿ ಮೆಯಾಗುವಂತಾಗದಿರದು.

ಸ್ಪೈನಿನ ಪರಿಸ್ಥಿತಿಯು ಅತ್ಯಂತ ಭೀಷಣ

ಸ್ಪರೂಪ ತಾಳಿರುವುದು. ತಾಟಕ್ಷ್ಯ ರಕ್ಷಣೆಯ ಅಂತರರಾಷ್ಟ್ರೀಯ ಕವಿ-ಟೆಯಲ್ಲಿ ರಷ್ಯ ಮತ್ತು ಜರ್ಮನಿ, ಇಟಲಿ, ಪೋರ್ಚು ಗೀಸ್ ರಾಷ್ಟ್ರಗಳೊಳಗೆ ತೀವ್ರ ವೈಷಮ್ಯ ಉಂಟಾಗಿದುವುದು. ಪೋರ್ಚುಗೀಸ್ ಸರ ಕಾರವು ಸ್ಪೈನ್ ಸರಕಾರದೊಡನೆ ಸಂಬಂಧ ವನ್ನು ಕಡಿದು ಹಾಕಿ ಬಂಡಾಯಗಾರರ ಸರಕಾರವನ್ನು ಸ್ಪೈನಿನ ನ್ಯಾಯ-ವಾದ ಸರಕಾರವಾಗಿ ಅಂಗೀಕರಿಸುವ ಸಂಭವ ತೋರುತ್ತದೆ. ಇಟಲಿ ಮತ್ತು ಜರ್ಮನಿ ಗಳ ಬೆಂಬಲವು ಇದಕ್ಕೆದೆ. ರಷ್ಯವು ಮಾತ್ರ ಸ್ಪೈನ್ ಸರಕಾರದ ಪಕ್ಷಪಿಡಿದು ಅದಕ್ಕೆ ತನ್ನಿಂದ ಕೂಡಿದ ಸಹಾಯಮಾಡುತ್ತಿದೆ. ಇಂಗ್ಲೆಂಡ್ ಮತ್ತು ಫ್ರಾನ್ಸ್‌ಗಳು ಕಠಿನ ತಾಟಸ್ಥ್ಯ ಧೋರಣೆ ವಹಿಸಿವೆ ಬಂಡಾ ಯಗಾರರು ಮೆಡ್ರಿದನ್ನು ಆವರಿಸಿರು ತ್ತಾರೆ. ಅವರು ಎಂದಿಗೂ ಮೆಡ್ರಿದಿಗೆ ಪ್ರ ವೇಶಿಸದಂತೆ ಮಾಡುವ ದೃಢ ನಿರ್ಧಾರ ದಿಂದ ಸರಕಾರವು ಆಪಕ್ಯಾಗಿ ಬೇಕಾದ ಸಿ ದ್ಧತೆಯನ್ನು ಭರದಿಂದ ನಡಿಸುತ್ತಿದೆ. ಬಂ ಡಾಯಗಾರರು ವೈಶಾಚಿಕವಾಗಿ ಮೆಡ್ರಿದಿನ ಮೇಲೆ ವಿಮಾನ ಧಾಟಿ ನಡಿಸಿ ಜನರನ್ನು ದಿಗಿಲುಗೊಳಿಸುತ್ತಿದ್ದಾರೆ. ಕಳದ ಶುಕ್ರ ವಾರ ನಡೆದ ವಿಮಾನ ಧಾಳಿಯಿಂದ 125 ಮಂದಿ ಕೊಲ್ಲಲ್ಪಟ್ಟಿರುವರು. ಇವರಲ್ಲಿ 70ಕ್ಕಿಂತಲೂ ಮಿಕ್ಕಿದವರು ಬಯಲಲ್ಲಿ ಆ ಟವಾಡುತ್ತಿದ್ದ ಅತಿ ಚಿಕ್ಕ ಮಕ್ಕಳು ಈ ಮಕ್ಕಳ ಮೇಲೆ ಬೋಂಬು ಬಿದ್ದು ಅಂ ಗಾಂಗಗಳೆಲ್ಲಾ ಸಿಡಿದುಹೋಗಿರುವವ. ಬಂಡಾಯಗಾರರು ಇಗರ್ಜಿಗಳ ಮೇಲೂ ಬೋಂಬೆಸೆದು ಹಾವಳಿಮಾಡಿರುವರು.

ಹಿಂದು ದೇಶದ ಜನಸಂಖ್ಯೆಯ ಸಮಸ್ಯೆ

ಕಳದ ಅಕ್ಟೋಬರ ತಾ. 31ರಲ್ಲು ಮಾನ್ಯ ವೈಸರಾಯರು ದಿಲ್ಲಿಯಲ್ಲಿ ನಿರಾ ವರಿ ಖಾತೆಯ ಸೆಂಟ್ರಲ್ ಬೋರ್ಡಿನಲ್ಲಿ ಭಾಷಣವಿಯುತ್ತಾ, ಹಿಂದುದೇಶದ ಜನ ಸಂಖ್ಯೆಯು ವಿಪರೀತವಾಗಿ ಬೆಳೆದು ಹೋ ಗಿರುವ ಆಕುರಿತು ಪ್ರಸ್ತಾಪಿಸಿದರು ಮತ್ತು ಈ ವಿಷಯಕರ ಬೆಳವಣಿಗೆಗನ್ನುಗುಣವಾ ಗಿ ಆಹಾರ ಸಾಮಗ್ರಿಗಳ ಸರಬರಾಯಿ ಯು ಹೆಚ್ಚದಿದ್ದರೆ ಮುಂದೆ ಜನತೆಯ ಪರಿ ಸ್ಥಿತಿಯು ಅತ್ಯಂತ ನಿಸಮವಾಗದಿರದೆಂದು ಎಚ್ಚರಿಸಿದರು. ಹಿಂದೀಯರ ಬಡತನವು ಪರನ್ಮಾವಧಿಗೆ ಮುಟ್ಟಿರುವದು ದಿನ ಕ್ಕೊಂದು ಊಟ ಕೂಡಾ ದೊರೆಯದ ಮಿಲ್ಯಾಂತರ ಜನರಿರುವರು ಇನ್ನೂ ಇನ್ನೂ ಈ ಜನಸಂಖ್ಯೆಯು ವಿಪರೀತವಾ ಗಿ ಹೆಚ್ಚಿದರೆ ಮುಂದಿನ ಪರಿಸ್ಥಿತಿಯು ಅ ನಿಷ್ಟ ಭೀಷಣವಾಗುವುದೆಂದು ಹೇಳಬರು ವುದಿಲ್ಲ. ಆದರೆ ಈ ಜನಸಂಖ್ಯೆಯನ್ನು ತಡೆಗಟ್ಟುವ ಬಗೆಯಾದರೂ ಹೇಗೆ? ಪ್ರ ಕೃತದ ಆಂತ್ಯಂತ ಕಷ್ಟಕಾಲದಲ್ಲಿ ಆಹಾರ ಸಾಮಗ್ರಿಗಳ ಉತ್ಪತ್ತಿಯನ್ನು ಬಹಳವಾ ಗಿ ಹೆಚ್ಚಿಸುವ ಉಪಾಯವಾದರೂ ಯಾ ವುದು? ಈ ಘೋರ ಸಮಸ್ಯೆಗಳನ್ನು ಬಿಡಿ ಸುವ ಕರ್ತವ್ಯವಾದರೂ ಸರಕಾರದ್ದು.

ಮಹಾತ್ಮಾ ಗಾಂಧಿಯವರು

ಅಕ್ಟೋಬರ ತಾ. 31ರಲ್ಲು ಆಹಮ್ಮ ದಾಬಾದಿನಲ್ಲಿ ಸುಮಾರು 10,000 ಮ ಜೂರರ ಪ್ರಚಂಡ ಸಭೆಯಲ್ಲಿ ಭಾಷಣವೀ ಯುವಾಗ, ಮಜೂರರು ಸಂಘಟನೆಯಿಂ ದ ನಡಿಯಕಲಿಯಬೇಕು. ತಮ್ಮ ಪ್ರತಿ ಜ್ಞೆ ಮತ್ತು ನಿರ್ಧಾರಗಳನ್ನು ಎಂದೂ ಬಿಟ್ಟುಬಿಡಬಾರದು. ಮರಣದ ವರೆಗೆ ಸ್ಮತಿಜ್ಞೆಯನ್ನು ಮೂಲೆಗೊತ್ತಬಾರದು. ಆಹಮ್ಮದಾಬಾದಿನ ಗಿರಣಿ ಮ್ಹಾಲಕರು ಮಜೂರರನ್ನು ಸದೆಬಡಿಯಬೇಕೆಂದಿರು ವರೆಂದು ತಾನೆಣಿಸುವದಿಲ್ಲ. ಮಜೂರರ ಸಹಕಾರವಿಲ್ಲದೆ ಆದರಿಂದ ಏನು ಮಾಡಲೂ ಸಾಧ್ಯವಿಲ್ಲ. ರಾಜಕೀಯ ಶರೀರಕ್ಕೆ ಶ ಮವೂ, ಬಂಡವಾಳವೂ ಎರಡೂ ಅತ್ಯಾವ ಶ್ಯಕ. ಗಿರಣಿ ಮಾಲಕರಿಗೆ ಎಷ್ಟು ಭಂ ಡವಾಳವಿದ್ದರೂ ತಾವಾಗಿ ಆದರಿಂದ ಏನು ಮಾಡುವುದಕ್ಕೂ ಅವರಿಗೆ ಸಾಧ್ಯವಿಲ್ಲ. ಮಜೂರರಲ್ಲಿ ತಕ್ಕ ಸಂಘಟನೆ ಮತ್ತು ಶಕ್ತಿಯುಂಟಾದರೆ ಮಜೂರರ ಮ್ಹಾಲಕ ರೂ ಪರಸ್ಪರ ಸಹಕಾರದಿಂದ ಒಂದಾಗಿ ಕೆ ಲಸಮಾಡಬಹುದು. ಅಂತಹ ಉದ್ದೇಶ ಸಾಧನೆಗಾಗಿಯೇ ತಾನು ಕೆಲಸವಾಡು ತ್ತಿರುವೆನೆಂದರು, ಮಜೂರರ ಸಂಘಟ ನೆ ಮತ್ತು ಶಕ್ತಿಯು ಎಷ್ಟು ಮಂದಿ ಒಂಡ ವಾಳಗಾರರಿಗೆ ಸಹನೀಯವಾಗುವುದೋ? ಗಾಂಧಿಜಿಯವರ ಈ ಸದುದ್ದೇಶವಾದರೂ ಇಂದಿನ ಪ್ರಕೃತದ ಪರಿಸ್ಥಿತಿಯಲ್ಲಿ ಅದೆಷ್ಟು ವ್ಯವಹಾರ್ಯವೋ?

ಅರ್ಥರಹಿತ ತಡೆ

ಕಾಂಗ್ರೆಸಿನ ನ್ಯಾಯವಾದ ಚುನಾವಣೆ ಯ ಸಂಬಂಧವಾದ ಕೆಲಸಕ್ಕೆ ಸರಕಾರಿ ಅ ಧಿಕಾರಿಗಳು ಅಲ್ಲಲ್ಲಿ ತಮ್ಮಿಂದ ಸಾಧ್ಯವಾದ ತಡೆಗಳನ್ನೆಲ್ಲಾ ಒಡ್ಡುತ್ತಾ ಬಂದಿರುವರು. ವಾಯವ್ಯ ಗಡಿನಾಡು ಸಂಯುಕ್ತ ಪ್ರಾಂತ್ಯ ಮತ್ತು ಬಂಗಾಳ ಪ್ರಾಂತಗಳಲ್ಲಿ ಅಧಿಕಾರಿ ಗಳ ಈ ದ್ವೇಷ ಸಾಧನೆಯು ಜೆನ್ನಾಗಿ ಬ ಯ ಲಿಗೆ ಬಂದಿರುವುದು. ಈ ಚಟುವೀಗ ದಕ್ಷಿಣ ಹಿಂದುಸ್ಥಾನಕ್ಕೂ ಹಬ್ಬಿರುವಂತಿ ದೆ. ರಾಮ್ನಾಡ್ ಜಿಲ್ಲೆಯಲ್ಲಿ ಜಿಲ್ಲಾಬೋ ರ್ಡು ಮತ್ತು ಎನಂಬ್ಲಿ ಚುನಾವಣೆಯ ಪ್ರ ಚಾರ ಕೆಲಸ ಕೂಡಾ ರಾಜದ್ರೋಹದ ಆರೋಪದಿಂದ ತಡೆಮಾಡಲ್ಪಟ್ಟದೆ.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Pathiyara, Calicut.
Car Street, Mangalore.	Udipi, S India	Charni Road, Bombay No. 4.

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs. 80,00,000
Life Funds Over	Rs. 68,00,000
Premium Income Over ...	Rs 22,54,000
Interest Income	Rs. 3,16,350
Claims Paid	Rs 5,75,000
Total Claims paid Over	Rs. 38,50,000
Total Business in Force Over	Rs. 4,42,51,200

TOTAL BUSINESS IN FORCE Rs. 4,42,51,200

ಮಂಗಳೂರು

(ನಮ್ಮ ಸ್ವಂತ ಬಾತ್ಮೀದಾರರಿಂದ)

ಕಾ. ೨ ೧೧-೧೯೩೬

ನಿವೃತ್ತಿಹೊಂದುವ ಅಧಿಕಾರಿಗಳಿಗೆ ಸತ್ಕಾರ

ದ. ಕನ್ನಡ ಜಿಲ್ಲಾ ಮತ್ತು ಸೆಶನ್ ಜಡ್ಜರಾಗಿ ಮಿಸ್ಟರ್ ಅಮೊರಸ್ಟಿನ್ ಸಾಹೇಬ್ ಬರಬ್ಬೂರವರು ಜಿಲ್ಲಾ ಕೋರ್ಟಿನ ಟ್ರಾನ್ಸ್‌ಲೇಟರರಾಗಿ ಬಹಳಕಾಲ ದಕ್ಷತೆಯಿಂದ ಕೆಲಸಮಾಡಿ ಕೆಲಸದಿಂದ ನಿವೃತ್ತಿ ಹೊಂದಲಿದ್ದ ಶ್ರೀ ಬಿ ಶಂಕರರ ಯೋಗಿ ಒಂದು ಟೀ ಪಾರ್ಟಿ ಸತ್ಕಾರವನ್ನಿತ್ತು (ತಾ ೧೫ರಲ್ಲಿ) ಸತ್ಕರಿಸಿದರು. ಮೂರು ಕೋರ್ಟುಗಳ ಆಫೀಸರರೂ, ಇತರ ನೌಕರರೂ, ಸರಕಾರಿ ವಕೀಲರೂ ಇತ್ಯಾದಿಯಾಗಿ ಸುಮಾರು ೪೦ ಜನ ಸೇರಿದ್ದರು ಮೊದಲು ಬ್ಯಾರಿಸ್ಟರ್ ಆಡಳಾಯಿತು ಅನಂತರ ವಿವಿಧ ವಿನೋದಾವಳಿಗಳು ನಡೆದುವು ಮಾಪಿಳ್ಳೆಯವರು ಹಾಡುವ ರೀತಿಯಲ್ಲಿ ಶ್ರೀ ಪಿ ಬಾಬು ರಾಯರು (ಮುನ್ಸಿಫ ಕೋರ್ಟಿನ ಟೈಪಿಸ್ಟ್) ಹಾಡಿದ್ದನ್ನು ಕೇಳಿ ಜಡ್ಡಿಗಳು ತುಂಬಾ ಸಂತೋಷಪಟ್ಟರು ಅನಂತರ ಕಾಫಿ ಫಲಾಹಾರಾದಿಗಳು ನಡೆದುವು ಫಲಹಾರಾನಂತರ ಜಡ್ಡಿಯವರು ಶ್ರೀ ಬಿ ಶಂಕರರಾಯರ ಕಾರ್ಯದಕ್ಷತೆ, ಅವರ ಉತ್ಸಾಹ, ಶ್ರದ್ಧೆ ಇವೇ ಮೊದಲಾದ ಗುಣಗಳನ್ನು ಪ್ರಶಂಸಿಸಿ ಯುವಕರು ಅವರ ಮೇಲ್ಪಂಕ್ತಿಯನ್ನು ಅನುಸರಿಸಬೇಕೆಂದು ಹೇಳಿದರು.

ಕಾಂಗ್ರೆಸ್ ಸದಸ್ಯರ ಉಮೇದ್ವಾರಿಕೆ

ದಕ್ಷಿಣಕನ್ನಡ, ಮಲಬಾರ್, ನೀಲಗಿರಿ ಜಿಲ್ಲೆಗಳ ಪರವಾಡ ಮದ್ರಾಸ್ ಎಸೆಂಬ್ಲಿಯ ಒಂದು ಸ್ಥಾನಕ್ಕೆ ಶ್ರೀ ಸಿ ಜೆ. ನಾರ್ಕಿಯವರು ಉಮೇದಾರರು. ಇವರ ಕಳೆದ ತಾ ೭೫ರಲ್ಲಿ ಹಿಂದೀ ಕ್ರೈಸ್ತರ ಒಂದು ಸಭೆ ಜರಗಿಸಿ ಅಲ್ಲಿ ತಮ್ಮ ಉದ್ದೇಶಗಳನ್ನು ವ್ಯಕ್ತಗೊಳಿಸಿದರು "ಇದು ನೆರೆಗೆ ಹಿಂದೀ ಕ್ರೈಸ್ತರು ತಾವೇ ಪ್ರತ್ಯೇಕವೆಂದು ಬಾವಿಸಿದ್ದರು ಇತರರೊಡನೆ ಕಲೆಯುತ್ತಿದ್ದಿಲ್ಲ ಇಂತಹ ವರ್ತನೆಯಿಂದ ಹಿಂದೀ ಕ್ರೈಸ್ತರಿಗೆ ಕಲ್ಯಾಣವಾಗಲಾರದು ಇತರ ಪಂಗಡದವರ ಸಹಾಯ, ಸಹಾನುಭೂತಿಯು ಹಿಂದೀ ಕ್ರೈಸ್ತರಿಗೆ ಅತ್ಯಗತ್ಯ ಆದುದರಿಂದ ಹಿಂದುಸ್ಥಾನದ ಅತ್ಯಂತ ಪ್ರಸಿದ್ಧ ರಾಜಕೀಯ ಪಕ್ಷವಾದ ಕಾಂಗ್ರೆಸ್‌ನವರೊಡನೆ ಹಿಂದೀ ಕ್ರೈಸ್ತರು ಸೇರಿ ದೇಶದ ಮತ್ತು ಸಮಾಜದ ಹಿತಸಾಧನೆಗೆ ಯತ್ನಿಸಬೇಕಾದುದು ಕರ್ತವ್ಯ ಆದ್ದರಿಂದಲೇ ನಾನು ನಿಮ್ಮ ಮತಯಾಚನೆಗೆ ಬಂದಿದ್ದೇನೆ" ಎಂದು ಹೇಳಿದರು ಆಧ್ಯಕ್ಷರಾದ ಶ್ರೀ ಜೆ ಎ ಸಾಲ್ದಾನರು ಕ್ರಿಸ್ತಲ್ಲರೂ ಪೂ ಪಾರ್ಕಿಯವರಿಗೆ ಸಂಪೂರ್ಣ ಬೆಂಬಲ ಕೊಡಬೇಕೆಂದು ಪ್ರಾರ್ಥಿಸಿದರು

ಆಪಾದಿತನಿಗೆ 10 ವರ್ಷ ಕಠಿಣ ಸಜೆ

ತನ್ನ ಹೆಂಡತಿಯ ಅಜ್ಜನನ್ನು ಕೆಡಿಸಿ ಕೊಂದ ನೆಂಬ ಆಪಾದನೆಯ ಮೇಲೆ ಬಂಧಿಸಲ್ಪಟ್ಟಿದ್ದ ಕುಂದಾಪುರ ತಾಲೂಕಿಗೆ ಸೇರಿದ ನಿಡ್ಡಾಪುರ ಗ್ರಾಮದ ಕುಳಿ ಮುಂಡಪ್ಪಂಬವನ ವಿಚಾರಣೆಯು ಸೆಶನ್ ಕೋರ್ಟಿನಲ್ಲಿ ನಡೆದು ಆವನು ಕಟ್ಟುತ್ಪಕ್ಕೆನೆಂದು ರುಜುವಾತಾದ್ದರಿಂದ ಆತನಿಗೆ ಸೆಶನ್ ಜಡ್ಜರು ಹತ್ತು ವರ್ಷಗಳ ಕಠಿಣ ಸಜೆ ವಿಧಿಸಿದರು.

ಮಂಗಳೂರು ಗರ್ಲ್ಸ್‌ಗೈಡ್ ಸಂಸ್ಥೆ

ಮಂಗಳೂರು ಗರ್ಲ್‌ಗೈಡ್ ಸಂಸ್ಥೆಯ ಅಧ್ಯಯದಲ್ಲಿ ಪಕ್ಕಿಣಕಸ್ತದ ಜಿಲ್ಲಾ ಗರ್ಲ್‌ಗೈಡ್ ರ್ಯಾಲಿಯು ಕಳೆದ ತಾ ೨೫ನೇ ಗುರುವಾರ ಬಿವಸ ಗವರ್ನರ್ ವೆಂಟಾ ಪುದುಗಿಯನ್ ಟೆಂಟ್ ಗಾರ್ಡನ್ ಪಾಲು ಸಾಯಂದಲ್ಲಿ ಜರಗಿತು ನಮ್ಮ ಜಿಲ್ಲಾ ಜಡ್ಜರ ಪತ್ನಿಯವರು ಆಂದಿನ ಸಮಾರಂಭದಲ್ಲಿ ಅನ್ಯಕ್ಷತೆ ವಹಿಸಿದ್ದರು ಸ್ಥಳೀಯ ಸ್ತ್ರೀಯರ ನಿಸ್ವಾರ್ಥ ಸೇವೆಗಳ ಗೈಡ್‌ಗಳ್ಳರೂ ಇದರಲ್ಲಿ ಭಾಗವಹಿಸಿದ್ದರು ಗೈಡುಗಳು ತೋರಿಸಿದ ಕೆಲಸಗಳು ನಿಜಕ್ಕೂ ಶ್ಲಾಘನೀಯವೆನ್ನಿಸಿದವು

ಈ ಸಮಾರಂಭದಲ್ಲಿ ಇರ್ವಿನ್ ಜೆನ್ನಾಗಿ ಸೆಯೆಯುವಂತೆ ಮಾಡಿದ ಮಿಸೆಸ್ ಬಿ ಬೆಲ್ ಅರಸ್ಕರ್ ಪಕ್ಷವು ಪ್ರಶಂಸನೀಯವು

ಲೆಪ್ರೊಸಿ ಕೌನ್ಸಿಲ್ ಮಿಸಾಲಿಂಗು

ಜಿಲ್ಲಾ ಕಲೆಕ್ಟರ್ ಡೊರೆಗಳವರ ಅಸಿಸ್ಟೆನ್ಸಿನಲ್ಲಿ ಕಳೆದ ತಾ ೧ ಸೋಮವಾರದಿಂದ ಸಂಜೆಯ ಸುಮಾರಿಗೆ ಹಲವು ಮುಖ್ಯವಾದ ವಿಷಯಗಳು ಚರ್ಚಿಸಲ್ಪಟ್ಟವು

"ಭಾರತೀಯ ಚಿತ್ರಕಲೆ"

ಸ್ಥಳೀಯ ಅಲ್ಯೂಮಿನಿಯಸ್ ಕಾಲೇಜಿನ ಸಿರಿಯ ಮತ್ತು ಕಿರಿಯ ಕನ್ನಡಿಗ ಸಂಘಗಳ ಆಶ್ರಯದಲ್ಲಿ ಕಳೆದ ತಾ ೭ರಲ್ಲಿ ಬೆಂಗಳೂರಿನ ಶ್ರೀ ಆ ನ ಕೃಷ್ಣರಾಯರು ಮೇಲಿನ ವಿಷಯದಲ್ಲಿ ಒಂದು ಉಪಯುಕ್ತ ಭಾಷಣವನ್ನಿತ್ತರು ಉಪನ್ಯಾಸಕರು ಹೇಳಿಯ ಪೂರ್ವೇತಿಹಾಸ ಅಜಂತ ಗುಹೆಗಳ ಚಿತ್ರಕೆಲೆ, ರಜಪೂತರ ನುತ್ತು ಮೊಗಲ ಸರಕಾರದ ಚಿತ್ರಕಲೆ- ಇವುಗಳನ್ನು ವಿವರವಾಗಿ ವಿವರಿಸಿ ಅವಸಿಕರಾದ ರಾಜಾ ರವಿವರ್ಮ, ಅವನೀಂದ್ರನಾಥ ಠಾಗೋರ ಇವರುಗಳ ಚಿತ್ರಕಲೆಗಳ ವಿಷಯ ಹೇಳಿ, ಪುನರ್ಜಾಗೃತಿಯನ್ನೂ, ಆಧುನಿಕ ಕಲೆಯನ್ನೂ ತುಲನೆಮಾಡಿದರು ಪೂರ್ವಿಕರ ಮತ್ತು ಆಧುನಿಕರ ಚಿತ್ರಗಳ ಸಂಕೇತಗಳನ್ನು ವಿವರಿಸಿ ಅನಂತರ ಚಿಲುವನ್ನು ವಾಚಾಮ ಮೆಂದರು

"ವಿಡಂಬನ ಸಾಹಿತ್ಯ"

ಸ್ಕೌ ವಿ ಜಿ ಕುಲಕರ್ಣಿಯವರು "ವಿಡಂಬನ ಸಾಹಿತ್ಯದ ಮೇಲೆ ಬಾಷಣವಿತ್ತರು ಅವರು ಸ್ಥಾಮ ಮೇರಗಳ ವಿಡಂಬನ ಸಾಹಿತ್ಯವನ್ನೆ ವಿವರಿಸಿ ಭಕ್ತ ಹರಿಯೆ ಮಾಸ್ತಾದವರು ಇಂದ್ರಗುಣಗಳನ್ನ ರಂಜಿಸುವರಂಬಿ ಹಿರಿಯ ಕನ್ನಡ ಸಾಹಿತ್ಯಗಳಲ್ಲಿ ಜಾಣಿಗೆ ಮಾರ್, ಕಾನೂತ, ಕೈಲಾಸಂ ಇವರುಗಳು (ಆದು ನಿಕರು) ವಿಡಂಬನ ಸಾಹಿತಿಗಳ ಸಾಲಿಗೆ ಸೇರಿದವರೆಂದರು

ಶ್ರೀ ವಿ. ಸೀತಾರಾಮಯ್ಯನವರು

ಬಂಗಳೂರಿನ ಪ್ರಸಿದ್ಧ ಸಾಹಿತಿಗಳಾದ ಶ್ರೀ ವಿ ಸೀತಾರಾಮಯ್ಯನವರು ಗವರ್ನ್‌ಮೆಂಟ್ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಬಾಷಣವಿತ್ತರು

ಕರ್ನಾಟಕ ಸಂಸ್ಥೆಯ ವಾರ್ಷಿಕೋತ್ಸವ

ಮಂಗಳೂರು ಗವರ್ನ್‌ಮೆಂಟ್ ಕಾಲೇಜಿನ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಶ್ರೀ ಆ ನ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಿನ್ನೆ ದಿನ ಸಾಯಂಕಾಲ ಸಭೆ ಸೇರಿತು ವಿದ್ವಾನ್ ಯು ಸೀತಾರಾಮಯ್ಯರು ಸ್ವಾಗತ ಭಾಷಣವನ್ನಿತ್ತರು ಆ ಕಾರಣ ತಮಗೆ ತೋರಿಬಂದ ಗೌರವಕ್ಕಾಗಿ ಕರ್ನಾಟಕ ಸಂಘದ ಆ ಕಾರಿಗಳನ್ನು ಮಂಡಿಸಿ, ಕನ್ನಡದ ಸೇವೆಗಳು ಕುರಿತು ಸೂಚನೆಗಳನ್ನಿತ್ತರು ಅನಂತರ ವಿದ್ವಾನ್ ಆನಂತಪದ್ಮನಾಭ ಶ್ರೀ ಕವಿ ಗುಂಡ್ಮಿ ರಂಕರ ಸ್ಮಶ್ಚರಿಂದ ಬರೆಯಲ್ಪಟ್ಟ ಭಾರತ "ಎಂಬ ಸ್ವಯಸ್ಕರಪಿಡಿದಾ ಗೆಳೆಂದಾ ರ್ಸವಾಗಿ ಅಭಿನಯಿಸಲ್ಪಟ್ಟಿತು ಶ್ರೀ ಕೊ ಚಿ ಕಾರಂತರ ಸರ್ಕಸ್ ಪ್ರವೇಶಿಸಿದ ಪ್ರಹಸನವು ಅಭಿನಯಿಸಲ್ಪಟ್ಟಿತು ಮಧ್ಯೆ ಮಧ್ಯೆ ಸಂಗೀತವೂ, ನರ್ತನಗಳೂ ಇದ್ದುವು

ಉಡುಪಿ

ಪ್ರಸಿದ್ಧ ಸಾಹಿತಿಗಳ ಭಾಷಣ

ಪುತ್ತೂರಿನ ದೇವರು ಮಹೋತ್ಸವಕ್ಕಾಗಿ ಬಂದಿದ್ದ ಶ್ರೀ ಆ ನ ಕೃಷ್ಣರಾಯ ಮತ್ತು ಶ್ರೀ ವಿ ಜಿ ಕುಲಕರ್ಣಿ, ಎಂ ಎ, ಎಲ್ ಎಲ್ ಬಿ ಯವರು ಇಲ್ಲಿನ ಕಿರಿಯ-ಹಿರಿಯ ವಿದ್ಯಾರ್ಥಿಗಳ ಕಿರಿಯರ ಪಂಥದ ಆಶ್ರಯದಲ್ಲಿ ಉತ್ತಮ ಭಾಷಣಗಳನ್ನಿತ್ತರು ಸಭೆಯು ಶ್ರೀ ರಾಘವೇಂದ್ರ ಭಿಯೇಟರಿನಲ್ಲಿ ಸಂಜೆ ೫ಂಗಿ ಮಾಪಿಳ್ಳೆಯವರ ಶ್ರೀ ಬಿ ಮಾಸುಪೇವ ರಾವ್, ಬಿ ಎ ಎಲ್ ಎಲ್ ಬಿ ಎಪ್ಪಿ ಕೇಟ್ ಇವರ ಆಕ್ಷತೆಯಲ್ಲಿ ಪ್ರಾರಂಭವಾಯಿತು ಶ್ರೀಮತಿ ಕೊರಡ್ಡಲ್ ಶ್ರೀಮತಿ ಸರಸಮ್ಮ ಪರಿಚಯ ವನ್ನಮ್ಮಾ ಕೆಂಪಮ್ಮ ಗ ಶ್ರೀ ಆ ನ ಕೃಷ್ಣರಾಯರು ಸಾಹಿತ್ಯ ಸಮಿತಿಯನ್ನೇಕೆ ಸ್ಥಾಪಿಸುವ ರೀತಿಯನ್ನು ನಿರೂಪಿಸಿ ಅವರು ಸಾಹಿತ್ಯದ ಒಳಗೆ ಟ್ಟಿನ್ನು ಬಿಲ್ಲು ವಮ್ಮ ಹೊಸ ವಿಚಾರವಿಂದ, ಸೊಗಸಾದ ವಿವರ್ಕೆಯಿಂದಿಸಿ, ಸಂಗತಿಯ ಸ್ಥಲ್ಲಗಳಾವನ್ನು ಹೊರಿಸಿ ಕೊಡುವವರು ಶ್ರೀ ಕುಲಕರ್ಣಿಯವರು ಕನ್ನಡ ಸಂಸ್ಕೃತ್ಯದ, ಹಗೂ ನುಡಿಸಿ ಬೆಳವಣಿಗೆಗಾಗಿ ಹೊರಗಿನ ಸೌಕರ್ಯಗಳನ್ನು ಜಾಗ್ಮೆಯಿಂದ ಒಂದಗಂಡಿಸಿ ತರುವವರು, ಕನ್ನಡವಾದು ಮತ್ತು ಭಾವೆಯು ಮೈ ಬೆಗ್ಗೂಡಿ ಬೆಳೆಯುವಂತಾಗಬೇಕು, ರುಪಸ್ಸನ್ನು ಸಂಪಾದಿಸಬೇಕು ಎಂಬುದೇ ಶ್ರೀ ಕುಲಕರ್ಣಿಯವರ ಕಾರ್ಯೋದ್ದೇಶ ಎಂಬುದನ್ನು ಸ್ಪಷ್ಟವಾಗಿ ವರ್ಣಿಸಿದರು

ಶ್ರೀ ಆ ನ ಕೃಷ್ಣರಾಯರು "ನನ್ನ ಕತೆಗಳು" ಎಂಬ ವಿಷಯವನ್ನು ತಗೆದುಕೊಂಡರು ಮಾತಿಗೆ ಸಿಕ್ಕದೆ ದೃದಯಕ್ಕೆ ಮಾತ್ರ ಪರಿಚಯವಿರುವಲ್ಲಿ ಗಹನ ವಿಷಯಗಳನ್ನು ಕೊಡಾ, ಸರಳ ಶೈಲಿಯಿಂದ ನಾಗಾಲಾಗಿ ನನೆ ಎವರು "ಕಾದಂಬರಿಯು ವಿಮಾನವನ್ನು ನಿವರಿಸುತ್ತದೆ, ಕತೆಯು ಅದರ ಒಳಹೊಕ್ಕು ಅರಳಿನ ಸಾಬಣನ್ನು ಹೊರಾಕುತ್ತದೆ ಸಾಹಿತ್ಯದಲ್ಲಿ ನಿಂತ್ಯತೀತ್ಯಗಳಿಗೆ ಅವಕಾಶವಿಲ್ಲ ಜೀವಂತದಲ್ಲಿ ಅವಸರದಿಂದ ತೀರ್ಮಾನವನ್ನು ಆಪೇಕ್ಷಿಸುವ ಆಫೀಸಿಯಲ್ ಬೆಳೆಯುತ್ತಾ, ಒತ್ತಿತ ಇವನ್ನು ನನ್ನ ಕತೆಯು ಪೂರೈಸಿ ಕೊಡಬಲ್ಲುದು ಸುಖ, ದುಃಖಗಳು ಬಾಗ್ಯಗಳೆಲ್ಲಿ ಯಾರುವ ಸಂಗತಿಗಳು ಅಲ್ಲಲ್ಲಿದೇ ಆವುಗಳ ನಿಜ ಕೆಂಪುಮನ್ನು ಸಮಯಸುವುದರಲ್ಲಿ ನನ್ನ ಕತೆಗಳು ಕೆಲಸಕ್ಕೆ ಬೀಳುತ್ತವೆ.

ಸಂಗತಿಗಳು ನಿಜವಾದಿಂದ ಇರವಾಗಿ ಒಂದಕ್ಕೊ ಒಂದಕ್ಕೂ ಅಂಟಿಕೊಂಡಿರುತ್ತವೆ ಆದ್ದರಿಂದ ಅವುಗಳನ್ನು ಇದಕ್ಕಿದ್ದಂತೆ ತಿಳಿಯುವವೆಂದರೆ ಅದ್ದಿ ಆತುರನೇನೂ ಹುಟ್ಟುವುದಿಲ್ಲ, ಅದನ್ನು ಸಹೋಪರವಾಗಿ, ನಿಜ ಕತೆಯಾಗಿಪಗೊಟ್ಟು ಹೃದಯದ ತಿನಸಾಗಿಮಾಡಿದರೆ ಆಸಕ್ತಿ ಹುಟ್ಟುವೇ ರುಚಿ ರುಚಿಯಾಗಿ ಸವಿಯಲು ಬರುತ್ತವೆ ನನ್ನ ಕತೆಗಳು ಹುಟ್ಟಿದವೇ ಇದ್ದಾಗಿ ಎಂದು ಹೃದಯಂಗವಾಗಿ ವಿವರಿಸಿದರು. ಸ್ವತಃ ಕತೆಗಾರರು ತಾವೇ ಕತೆಯನ್ನು ಓದಿ ಹೇಳಿ ಇಂತ್ತಿನ ಆಪತ್ತನಾದರೂ, ಕತೆಯಾಗಿ ಹೇಳಿದರೆ ಆಲ್ಕೆಸುವ ಹೃದಯದ ಸಂಪರ್ಕಕ್ಕಾಗಿ ಹೋಗುವದರಿಂದ ಸಂಗತಿಯು ಮಂದಬ್ಯಗಳು ಅನುಕೂಲವೆಂದು ತೋರಿಸಿಕೊಟ್ಟರು. ಶ್ರೀ ಆ ನ ರ ಭಾಷಣವು ಚಲೋಯಿತ್ತು.

ಶ್ರೀ ವಿ ಜಿ ಕುಲಕರ್ಣಿಯವರು "ಸಾಹಿತ್ಯವು ಸಮಾಜ" ಈ ವಿಷಯವನ್ನೆತ್ತಿಕೊಂಡು ಬೋಧ ಪ್ರದವಾಗಿ ಮಾತನಾಡಿದರು "ಸಾಹಿತ್ಯಕ್ಕೆ ಸಮಾಜದ ಚಿತ್ರಗಳನ್ನು ಬಿಡಿಸಿ ತೋರಿಸುವದೇ ಕೆಲಸ ಆ ದೆಸೆಯಿಂದ ಸಮಾಜವು ಸಾಹಿತ್ಯವನ್ನು ಬಿಟ್ಟರೆ ಒಂದು ಪ್ರಾಮುಖ್ಯ ಬಾಗವನ್ನು ಕಳಕೊಂಡಂತಾಗುವದು, ಸಾಹಿತ್ಯವು ಸಮಾಜವನ್ನು ಬಿಟ್ಟರೆ ತನ್ನ ಕಾರ್ಯಕ್ಷೇತ್ರದಿಂದ ಹೊರಕಾಲಿಟ್ಟಂತಾಗುವದು ಅವುಗಳೊಳಗಿನ ಸಂಬಂಧವು ಆವ್ಯಾ ನಕಟವಾದುದು ಪ್ರಪಂಚದ ಬೇರೆ ಬೇರೆ ಬಾಗಗಳಲ್ಲಿ ಹಲವು ತರದ ಅಚ್ಚಾನಗಳು ಹರಡಿದ್ದವು, ಮಾನವನ ಮಾನಸಿಕ ಸಾಸಕೆ ಅನ್ನವೆದೊರೆಯಲಿಲ್ಲ ಈ ದೆಸೆಯಿಂದಾಗಿ ಬಲಿಷ್ಠರಿಂದ ದುರ್ಬಲರಿಗೆ ಆನ್ಯಾಯಗಳಾಗಿ ಹಕ್ಕಿವಳ ಬಾಧ್ಯ ಬಲವೇ ಪಿಂಯವೆನ್ನುವ ಸಂಪಾದಿಸಿಪ್ಪುತು ಆ ಸಂದರ್ಭಗಳಲ್ಲಿಲ್ಲ ಸಾಹಿತ್ಯವೇ ಪಟುರ ತ್ಕಾರಿತಿಯನ್ನೆಚ್ಚಿತ್ತು ಅದು ಸಾಹಿತ್ಯದ ಕೆಲಸ" ಎಂಬುದನ್ನು ಸಾರವತ್ತಾಗಿ ಉಪನ್ಯಾಸಿಸಿದರು ಆಧುನಿಕ ಕನ್ನಡ ಕವಿಗಳುದ ಶ್ರೀ ಬೀಡ್ತಿ, ಶ್ರೀ ಪುಟ್ಟಪ್ಪನವರ ಒಂದೆರಡು ಕವಿತೆಗಳನ್ನೊಂದಿ ಹೇಳಿ, ಈ ಕಾಲದಲ್ಲಿ ವಿಚಾರಯುಕ್ತ ಸಾಹಿತ್ಯ, ಜಾಗೃತಿ ಸವದ ಎಬಿ ಸತಕ್ಕೆ ಜಾಗೃತಿ ಎಲ್ಲಾಮುಖ್ಯವಿಸುವ ದೆಂದು ವಿವರಿಸಿದರು. ವಿಜಯನಗರ ಸಾಮ್ರಾಜ್ಯಕೋತ್ಸವದ ಆಚರಣೆಯ ಕುರಿತು ಪ್ರಸ್ತಾಪಿಸಿ, ಕನ್ನಡಿಗರ ಆದ್ಯ ಕರ್ತವ್ಯವಾದ ಈ ಉತ್ಸವವನ್ನ ಜಯಶೀಲ ಗೊಳಿಸಲು ಎಲ್ಲರೂ ಸಿದ್ಧರಾಗಬೇಕೆಂದು ವಿನಂತಿ ಮಾಡಿಕೊಂಡರು ಶ್ರೀ ಕುಲಕರ್ಣಿಯವರ ಮಾತುಗಳು ಪ್ರಭಾವಪೂರ್ಣವಾಗಿದ್ದವು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾಷಣಕರ್ತರಿಬ್ಬರನ್ನೂ ಅಂಸಂದಿಸಿ ಸಾಹಿತ್ಯ ವಿಚಾರ ದಲ್ಲಾದ ಸ್ವಲ್ಪ ಸ್ವಲ್ಪ ಅಸಮಾನತೆಗಳನ್ನು ಸಮಾಧಾನ ಪಡಿಸಿ ಸಾಹಿತ್ಯ ಸಂಸ್ಥೆಯ ಸ್ಥಾಪನೆಯ ಕುರಿತು ಸೂಚನೆಗಳನ್ನಿತ್ತರು ಶ್ರೀ ಕೆ ಸೂರ್ಯನಾರಯಣ ಭಟ್ಟರು ಧನ್ಯವಾದ ಸಮರ್ಪಣೆಗೈದರು ಆಕರ್ಷಕವಾದ ಆನಂತರದಲ್ಲಿ ಶ್ರೀ ಕವಿ ಗುಂಡ್ಮಿ ರಂಕರ ಸ್ಮಶ್ಚರಿಂದ ಬರೆಯಲ್ಪಟ್ಟ "ಭಾರತ" ಎಂಬ ಸ್ವಯಸ್ಕರಪಿಡಿದಾ ಗೆಳೆಂದಾ ರ್ಸವಾಗಿ ಅಭಿನಯಿಸಲ್ಪಟ್ಟಿತು ಶ್ರೀ ಕೊ ಚಿ ಕಾರಂತರ ಸರ್ಕಸ್ ಪ್ರವೇಶಿಸಿದ ಪ್ರಹಸನವು ಅಭಿನಯಿಸಲ್ಪಟ್ಟಿತು ಮಧ್ಯೆ ಮಧ್ಯೆ ಸಂಗೀತವೂ, ನರ್ತನಗಳೂ ಇದ್ದುವು

THE COONDAPOOR BANK LIMITED, Coondapoor, S. K.

Branch:—BRAHMAVAR.

ದಿ ಕುಂದಾಪುರ ಬೇಂಕ್ ಲಿಮಿಟೆಡ್, ಕುಂದಾಪುರ.

ಬ್ರಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯ ಲ್ಲಿಯೂ ಖಾಯಂ ಠೇವಣಾತಿಗಳು : ೩ ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ ೫%, ೬ ತಿಂಗಳಿಗೆ ಸಾಲಿಯಾನ್ ತೇಕಡಾ ರೂಪ್ಯಾ ೫%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6 ,, 21 ತಿಂಗಳಿಗೆ ಸಾಲಿಯಾನ್ ತೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಲ್ಪಡುವುವು.

ಒಂದು ವರುಷದ ಯಾ ಹಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಒಜ್ಜಿ ಕೊಡಲಾಗುವುದು ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವವು.

ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುವಲೇಟಿವ್ ರೂಪಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ಪೊರೆಯುತ್ತವೆ.

ಹೆಚ್ಚಿನ ಮಾಹಿತಿ ಬಗ್ಗೆ ಬರಕೊಳ್ಳಿರಿ.

ನನ್ನ ಚಂದಾದಾರರಲ್ಲಿ
ಚಂದಾ ಹಣ ಬಾಕಿ ಇರುವ ನನ್ನ ಚಂದಾದಾರರು ತನ್ನ ಚಂದಾ ಹಣವನ್ನು ದಯವಿಟ್ಟು ಅದಷ್ಟು ಬೇಗನೆ ಸಾನತಿ ಮಾಡಬೇಕಾಗಿ ವಿನಂತಿ.
ಮೇನೇಜರ್,

ನವಯುಗ
ಉಡುಪಿ, ತಾ ೫-೧೧-೩೬ ಗುರುವಾರ

ಭೂಕಂದಾಯ ರಿಯಾಯಿತಿ

ಪಂಡಿತ ಮಾಲವೀಯರು ಲಾಹೋರಿಗೆ ಹೋಗಿದ್ದಾಗ ಅಲ್ಲಿಯ ಹಿಂದು ಮುಖಂಡರೊಬ್ಬರು ಅವರನ್ನು ಕಂಡು, ಕಾಂಗ್ರೆಸಿನವರ ತಮ್ಮ ಹಿತವು ಸುರಕ್ಷಿತವಿರುವುದಿಲ್ಲ, ಅದರಿಂದ ಅದಕ್ಕೆ ತಾವು ಸಹಾಯ ಮಾಡಬಾರದು, ಹಿಂದುಗಳ ಹಿತ ಸಾಧನೆಗಾಗಿ ಸ್ಥಾಪಿಸಲ್ಪಟ್ಟಿರುವ ತನ್ನ ಸಭೆಯನ್ನು ಆಶೀರ್ವದಿಸಬೇಕೆಂದು ಕೇಳಿಕೊಂಡಾಗ ಪಂಡಿತರು ಅವರಿಗೆತ್ತ ಉತ್ತರವು ಪ್ರತಿಯೊಬ್ಬ ಭಾರತೀಯನು ಪ್ರಕ್ಕತ ಮನಸ್ಸಾಪತಕ್ಕದ್ದು. "ನಾನು ಕಾಂಗ್ರೆಸನ್ನು ವಿರೋಧಿಸಬೇಕೆಂದು ನೀವು ನಿರೀಕ್ಷಿಸುವುದಾದರೂ ಹೇಗೆ? ನನಗೆ ಕಾಂಗ್ರೆಸ್ಸೆಂದರೆ ತಾಯಿಯಂತೆ. ಒಂದು ಮಗುವು ತಾಯಿಯ ಹಿಂಜೋಡುವಂತೆ ನಾನದರ ಹಿಂದೋಡುವೆನು. ಕಾಂಗ್ರೆಸಿನ ಕುರಿತು ಸರಕಾರವು ಇಂದಿನವರೆಗೆ ಹೃದಯರಹಿತವಾಗಿದ್ದುದನ್ನು ನಾನು ನನ್ನ ಜೀವನದಲ್ಲಿ ಹಿಂದೆಂದೂ ನೋಡಿಲ್ಲಿ. ಕಾಂಗ್ರೆಸೆಂದರೆ ನಮ್ಮ ಸ್ವಾತಂತ್ರ್ಯದ ಆಕಾಂಕ್ಷೆಯನ್ನೆತ್ತಿ ಹಿಡಿಯುವ ಸಂಸ್ಥೆ. ನಾವು ಕಾಂಗ್ರೆಸನ್ನು ವಿರೋಧಿಸುವುದೆಂದರೆ ನಮ್ಮ ಸ್ವಾತಂತ್ರ್ಯಾಕಾಂಕ್ಷೆಯನ್ನೇ ವಿರೋಧಿಸಿದಂತೆ; ಅದನ್ನು ತಡೆಯಲೆತ್ನಿಸಿದಂತೆ. ಆದುದರಿಂದ ಕಾಂಗ್ರೆಸಿನ ಸಹಾಯಕ್ಕೆ ನಿಂತು, ಅದರ ಪ್ರತಿಜ್ಞೆಯನ್ನೆತ್ತಿ ಹಿಡಿಯುವುದು ನನ್ನ ಮತ್ತು ಪ್ರತಿಯೊಬ್ಬ ಹಿಂದೀಯನ ಕರ್ತವ್ಯವಿರುವುದು." ಈ ಮಾತುಗಳಿಗೆ ಮತ್ತೆ ನಮ್ಮ ಟಿಪ್ಪಣಿಯು ಅವಶ್ಯವಿಲ್ಲ.

• ವಾರದ ವಿಚಾರ •

ವೈಗೆ ನದಿಯಲ್ಲಿ ನೆರೆ,

ಮಧುರೆಯ ವೈಗೈನದಿಯು ಇದೇ ತಾ. 3ರಲ್ಲು ಹಠಾತ್ತಾಗಿ ನೆರೆಯೇರಿ ಬಂದು ನದಿಯ ದಡದಲ್ಲಿದ್ದ ತಾತ್ಕಾಲಿಕವಾಗಿ ಕಟ್ಟಲ್ಪಟ್ಟ ಗುಡಿಸಲೊಂದರಲ್ಲಿದ್ದ 6 ಮಂದಿಯನ್ನೂ ಮಾಡನ್ನೂ ಸೆಳೆದೊಯ್ದಿತು. 3 ಮಂದಿ ಬಹು ಪ್ರಯಾಸದಿಂದ ದಡ ಸೇರಿದರು. ಉಳಿದ 3 ಮಂದಿ ಮಾಡಿನೊಂದಿಗೆ ಬಹುದೂರ ಒಯ್ಯಲ್ಪಟ್ಟರು. ಇವರು ಮನೆಯ ಮಾಡನ್ನು ಹಿಡಿದುಕೊಳ್ಳುತ್ತು ರಕ್ಷಣೆಗಾಗಿ ಬೊಬ್ಬೆಹಾಕುತ್ತಿದ್ದರು. ನೀರಿನ ಪ್ರವಾಹವು ಬಹಳ ಜೋರಾಗಿದ್ದುದರಿಂದ ಯಾವ ರೀತಿಯಿಂದಾದರೂ ಅವರನ್ನು ರಕ್ಷಿಸಲಾಗಲಿಲ್ಲ. ಆ ಮೇಲೆ 7 ಮಂದಿ ಧ್ವಾಂಡಿಗರು ಮೇಲಿನಿಂದ ನೀರಿಗೆ ಹಾರಿ ಹೆಚ್ಚಿನ ಗಾಳಿತುಂಬಿರುವ ಮೋಟಾರು ಟ್ಯಾರುಗಳನ್ನೊಯ್ದು ಮನೆಮಾಡಿನಿಂದ 3 ಮಂದಿಯನ್ನೂ ಇಳಿಸಿ, ಮೋಟಾರ್ ಟ್ಯಾರುಗಳನ್ನು ಬಲವಾಗಿ ಹಿಡಿಯಹೇಳಿ ದಡಕ್ಕೆ ದೂಡಿಕೊಂಡು ಬಂದರು.

ಮದ್ರಾಸಿನ ಕಾಂಗ್ರೆಸ್ ಪಕ್ಷೀಯ ಮೇಯರರು.

ಮದ್ರಾಸ್ ಕೋರ್ಪರೇಶನಿಗೆ ಶ್ರೀ ಕೆ. ಶ್ರೀ ರಾಮುಲು ನಾಯಿಡುಗಳು ಪ್ರತಿಸ್ಪರ್ಧಿಯಿಲ್ಲದೆ ಮೇಯರಾಗಿ ಆರಿಸಲ್ಪಟ್ಟಿರುವರು. ಕಾಂಗ್ರೆಸ್ ಪಕ್ಷೀಯ ಉಮೇದ್ವಾರಿಯಾದ ಇವರ ಎದುರಾಗಿ ಇತರರಾರೂ ನಿಲ್ಲಲಿಲ್ಲ. ಕಾಂಗ್ರೆಸ್ ಪಕ್ಷೀಯರಾದ ಶ್ರೀ ಭಕ್ತವತ್ಸಲಮರು ಡಿಪ್ಯೂಟಿ ಮೇಯರರಾಗಿ ಆರಿಸಲ್ಪಟ್ಟಿರುವರು. ಕೋರ್ಪರೇಶನಿನ ಬೇರೆ ಬೇರೆ ಕಮಿಟಿಗಳಿಗೂ ಕಾಂಗ್ರೆಸ್ ಪಕ್ಷೀಯರೇ ಹೆಚ್ಚಾಗಿ ಆರಿಸಲ್ಪಟ್ಟಿದ್ದಾರೆ.

ಅಹಮ್ಮದಾಬಾದಿನ ಗಿರಣಿ

ಕೆಲಸಗಾರರು ಗಿರಣಿ ಮ್ಯಾಲಕರು ಸಂಬಳ ಕಡಿತಮಾಡಲು ನಿಶ್ಚಯಿಸಿದುದನ್ನು ನಿಷೇಧಿಸಿ ಮುಷ್ಕರ ಹಿಡಿಯುವ ನಿರ್ಧಾರ ಮಾಡಿರುವರು. ರಾಜಿಮಾಡಲು ಮಹಾತ್ಮಾ ಗಾಂಧಿಯವರು ನಡೆಸಿದ ಪ್ರಯತ್ನವೂ ನಿಷ್ಫಲವಾಗಿರುವುದು. ಮಜೂರರು ಸುಮಾರು 42,000 ಕೆಲಸಗಾರರ ಓಟು ತೆಗೆದು ಸುಸಂಘಟಿತವಾಗಿ ಮುಷ್ಕರನಡೆಸುವ ಏರ್ಪಾಡು ಮಾಡುತ್ತಿರುವರು. ಇವಕ್ಕೆ ಬೇಕಾದ ಫಂಡನ್ನೂ ಸಂಗ್ರಹಿಸಿರುವರು. ಇದರ ಪರಿಣಾಮವಾಗಿ ಗಿರಣಿ ಮ್ಯಾಲಿಕರೀಗೆ ಕಲಹವನ್ನು ಮಧ್ಯಸ್ಥಿಕೆಯಿಂದ ಇತ್ಯರ್ಥಪಡಿಸಲೊಪ್ಪಿರುವರು.

ಬಿರುಗಾಳಿ ಹಾವಳಿ

ಇತ್ತಲಾಗಿ ಗುಂಟೂರು ಜಿಲ್ಲೆಯಲ್ಲಿ ಬೀಸಿದ ಬಿರುಗಾಳಿಯಿಂದ ಬಹಳ ಹಾವಳಿಯಾಗಿದೆ. ಅನೇಕ ಸಹಸ್ರ ಜನರು ತಮ್ಮ ಮನೆಮಾರು ಸೊತ್ತುಗಳನ್ನು ಕಳಕೊಂಡಿರುವರು. ಬೆಳೆಗಳೆಲ್ಲಾ ನಾಶವಾಗಿರುವವು. ನೂರಾರು ಜಾನುವಾರುಗಳು ಕೊಲ್ಲಲ್ಪಟ್ಟಿರುವವು. ಬಿರುಗಾಳಿಯ ಹಿಂದಿನಿಂದ ಬಂದ ನೆರೆಯಿಂದ ಹಾವಳಿಯು ಸುತ್ತಸ್ಪು ಹೆಚ್ಚಿರುವುದು, ಸಾಂಕ್ರಾಮಿಕ ರೋಗವುಂಟಾಗುವ ಆಪಾಯವುಂಟಾಗಿದೆ. ಹಾವಳಿಗೊಳಗಾದ ಜನರಿಗೆ ಸಹಾಯಮಾಡಲು ಹಣವು ಶೀಘ್ರಿಸಲ್ಪಡುತ್ತಿದೆ. ಸರಕಾರವು ಪ್ರಕೃತ ರೂ. 10,000 ಸಹಾಯಮಾಡಿದೆ.

ಹಿಂದುದೇಶಕ್ಕೆ ಎಡ್ವರ್ಡ್ ಚಕ್ರವರ್ತಿಗಳವರ ಸಂದರ್ಶನ

ಇದೇ ತಾ 3ರಲ್ಲು ಲಂಡನಿನಲ್ಲಿ ಪಾರ್ಲಿಮೆಂಟಿನ ಸಭೆ ಜರಗಿದಾಗ ಎಂಟನೇ ಎಡ್ವರ್ಡರು ಮಾಡಿದ ಭಾಷಣದಲ್ಲಿ ತನ್ನ ಪಟ್ಟಾಭಿಷೇಕ ಮಹೋತ್ಸವವು ಜರಗಿದ ಮೇಲೆ ತಾನು ಭರತ ಖಂಡವನ್ನು ಸಂದರ್ಶಿಸುವ ಆಲೋಚನೆಯಿದೆ, ತನ್ನ ತಂದೆಯವರು ಯಾವ ರೀತಿ ಹಿಂದೂದೇಶಕ್ಕೆ ಹೋಗಿ ಸಂಸ್ಥಾನಾಧಿಪತಿಗಳಿಗೂ ಭಾರತೀಯ ಪ್ರಜೆಗಳಿಗೂ ತಮ್ಮ ಸಾಮ್ರಾಜ್ಯ ಸಿಂಹಾಸನಾರೋಹಣದ ವಿಷಯವನ್ನು ತಿಳಿಸಿದರೋ ತಾನೂ ಅದೇ ರೀತಿ ತಿಳಿಸಬೇಕೆಂದಿದ್ದೇನೆಂದರು. ಜಕ್ರವರ್ತಿಗಳು 1937ನೇ ದಶಂಬರ ಅಂತ್ಯಕ್ಕೆ ಅಥವಾ 1938ನೇ ಜನವರಿ ಆರಂಭಕ್ಕೆ ಹಿಂದುದೇಶವನ್ನು ಸಂದರ್ಶಿಸಬಹುದೆಂದು ನಂಬಲಾಗಿದೆ. ಈ ಮೊದಲು ಅವರು ವಿವಾಹಪ್ರಾಗಬಹುದೆಂದೂ ಸುದ್ದಿಯುಂಟಾಗಿದೆ.

ಪ್ರೆಸಿಡೆಂಟ್ ರುಸವೆಲ್ಟರ ಪ್ರಚಂಡ ವಿಜಯ

ಇದೇ ತಾ. 3ರಲ್ಲು ನಡೆದ ಅಮೆರಿಕದ ಪ್ರೆಸಿಡೆಂಟರ ಚುನಾವಣೆಯಲ್ಲಿ, ಕಳೆದ ಸಲ ಪ್ರೆಸಿಡೆಂಟರಾಗಿದ್ದ ಮಿ. ರುಸವೆಲ್ಟರೇ ಪ್ರಚಂಡ ವಿಜಯ ಪಡೆದಿರುವರು. ಅವರಿಗೆ ಒಟ್ಟು 25,936,977, ಅವರ ಪ್ರತಿಸ್ಪರ್ಧಿ ಮಿ. ಲೇಂಡನರಿಗೆ 15,834,609 ಮತಗಳು ದೊರೆತಿರುವವು. ಇನ್ನು ನೂರಮಂದಿ ಪ್ರತಿಸ್ಪರ್ಧಿಗಳಿಗೆ ಬಹಳ ಕಡಿಮೆ ಓಟು ದೊರೆತಿದೆ. ಚುನಾವಣೆಯು ಸಂಪೂರ್ಣವಾಗುವ ಮೊದಲೇ ಮಿ. ಲೇಂಡನರು ತನ್ನ ಪರಾಜಯವನ್ನೊಪ್ಪಿ, ಮಿ. ರುಸವೆಲ್ಟರನ್ನು ಅಭಿನಂದಿಸಿದರು. ಅವರು ತನ್ನ ಪ್ರಾಂತ್ಯದ ಗವರ್ನರ್ ಪದವಿಯನ್ನೂ ಕಳಕೊಂಡಿರುವರು. ಬೇರೆ ಬೇರೆ ಪ್ರಾಂತಗಳಿಂದ ಮಿ. ರುಸವೆಲ್ಟರ ಪಕ್ಷಕ್ಕೆ 523, ಮತ್ತು ಲ್ಯಾಂಡರನ ಪಕ್ಷಕ್ಕೆ ಕೇವಲ ಎಂಟು ಸೀಟುಗಳು ದೊರೆತಿರುವವು. ಮಿ. ರುಸವೆಲ್ಟರ ಇಷ್ಟೊಂದು ಮಹತ್ತಾದ ವಿಜಯವು ಸರ್ವರನ್ನೂ ವಿಸ್ಮಯಗೊಳಿಸಿರುವುದು.

ಹೊಸ ಸುಧಾರಣೆಯ ನಿಷೇಧ.

ಹೊಸ ರಾಜ್ಯಾಂಗ ರಚನೆಯು ಬರುವ ವರ್ಷ ಎಪ್ರಿಲ್ ತಾ. ಒಂದಕ್ಕೆ ಜ್ಯಾರಿಗೆ ಬರುವಾಗ ದೇಶವೆಲ್ಲಾ ಹರತಾಳ ಆಚರಿಸಬೇಕೆಂದೂ, ಅದಕ್ಕೆ ಬೇಕಾದ ಕಾರ್ಯವನ್ನು ಕಾಂಗ್ರೆಸಿನವರು ಕೈಗೊಳ್ಳಬೇಕೆಂದೂ ಅಲಹಾಬಾದಿನಲ್ಲಿ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸೋಸಿಯಲಿಸ್ಟ್ ಪಕ್ಷದ ಕಾರ್ಯ ನಿರ್ವಾಹಕ ಸಮಿತಿಯವರು ನಿರ್ಧರಿಸುವರು.

ಫೆಡರಲ್ ಕೋರ್ಟು

ಸಂಯುಕ್ತ ರಾಜ್ಯಾಂಗ ರಚನೆಯ ಪೂರ್ವಭಾವಿಯಾಗಿ ಫೆಡರಲ್ ಕೋರ್ಟು ಬರುವ ವರ್ಷ ಅಕ್ಟೋಬರ ತಿಂಗಳಲ್ಲಿ ಸ್ಥಾಪಿಸಲ್ಪಡುವುದು ಇದರ ಮುಖ್ಯ ನ್ಯಾಯಾಧಿಕಾರಿಗಳಿಗೆ ತಿಂಗಳೊಂದರ ರೂ. 7000 ಮತ್ತು ಇತರರಿಗೆ ರೂ. 6000 ಕೊಡಲಾಗುವುದು ಇವರು ನಿವೃತ್ತರಾಗುವ ಮೊದಲು ಮೃತರಾದರೆ ಅವರ ಕುಟುಂಬಕ್ಕೆ ಸ್ವಲ್ಪ ಧನ ಸಹಾಯವೀಯುವ ಏರ್ಪಾಡು ಇರುವುದು.

2000 ಜನರ ಅಂತರ್ಜಾತಿ ಭೋಜನ

ಕಳದವಾರ ಲಾಹೋರಿನಲ್ಲಿ ಹರಿಜನ ಮುಖಂಡರಾದ ಶ್ರೀ ರಾಜಭೋಜರ ಸನ್ಮಾನಾರ್ಥವಾಗಿ ಅಂತರ್ಜಾತೀಯ ಭೋಜನವೊಂದು ನಡೆಯಿತು. ಇದರಲ್ಲಿ 2,000 ಮಂದಿ ಭಾಗಿಯಾಗಿದ್ದರು. ಈ ಸಂದರ್ಭದಲ್ಲಿ ಅಧ್ಯಕ್ಷರಾಗಿದ್ದ ಸರ್ ಗೋಕುಲಚಂದರು, ಇಂತಹ ಭೋಜನಗಳಿಂದ ಪ್ರಯೋಜನವಿದೆಯೆಂದೂ, ಇನ್ನು ಮುಂದೆ ಅಂತರ್ಜಾತೀಯ ವಿವಾಹಗಳಾಗಬೇಕೆಂದೂ ಹೇಳಿದರು.

ವಿಜಯನಗರ ಸ್ಮಾರಕೋತ್ಸವ

ಈ ಸ್ಮಾರಕೋತ್ಸವ ಸ್ತಂಭವೊಂದು ರಚಿಸಲ್ಪಡುವುದು ಇದರ ವೆಚ್ಚ ರೂ. 1800 ಆಗಿರುವುದು. ಸ್ಮಾರಕ ಮಂಡಲದ ಕಾರ್ಯಾಲಯಕ್ಕೆ ಯಾರಿಂದ ಎನ್ನು ಹಣ ತಲಪುವುದೋ ಅವರ ಹೆಸರನ್ನು ಸ್ತಂಭದಲ್ಲಿ ಕೆತ್ತಲಾಗುವುದು. ಆದುದರಿಂದ ಉದಾರಿಗಳಾದ ಕನ್ನಡಿಗರು ಇದಕ್ಕೆ ಸಹಾಯ ಮಾಡಬೇಕೆಂದು ವಿಜಯನಗರ ಸ್ಮಾರಕೋತ್ಸವದ ಜನರಲ್ ಸೆಕ್ರೆಟರಿಯವರು ವಿನಂಬಿಮಾಡಿಕೊಂಡಿರುತ್ತಾರೆ.

ಇಪ್ಪತ್ತೊಂದರಲ್ಲಿ 10 ಮಕ್ಕಳು

ಸರ್ವಿಯಾ ದೇಶದಲ್ಲಿ 21 ವರ್ಷದ ಒಬ್ಬ ತರುಣಿಯು 10 ಮಕ್ಕಳ ತಾಯಿಯಾಗಿದ್ದಾಳೆ. ಈ ಮಕ್ಕಳೆಲ್ಲಾ ಬದುಕಿರುತ್ತವೆ, ಎರಡು ಬಾರಿ ಅವಳಿಜವಳಿ ಮಕ್ಕಳನ್ನು ಹೆತ್ತಿದ್ದಳು. ಇನ್ನೆರಡು ಬಾರಿ ಮೂರುಮೂರು ಮಕ್ಕಳನ್ನು ಹೆಡೆದಿದ್ದಳು.

ಸಾಧುವಿನ ವಂಚನೆ

ಮುಕ್ತೇಸರವೆಂಬ ಊರಿನ ರೈಲ್ವೇ ಸ್ಟೇಶನಿನ ಬಳಿಯಿರುವ ಮನೆಯ ಸ್ತ್ರೀಯೊಬ್ಬಳು ತನಗೆ ಮಕ್ಕಳಿಲ್ಲೆಂಬ ವ್ಯಥೆಯಿಂದಿರಲು ಕಡೆಗೊಬ್ಬ ಸಾಧುವು ಬಂದು ಖಂಡಿತವಾಗಿಯೂ ಮಕ್ಕಳಾಗುವಂತೆ ಮಾಡುವೆನೆಂದು ಭರವಸೆಯಿತ್ತನು. ಮತ್ತು ಹೊಸ ಮಣ್ಣಿನ ಪಾತ್ರಗಳನ್ನು ತರಿಸಿ ಅವುಗಳಲ್ಲಿ ಏಳುಕೆರೆಗಳ ನೀರು ತರಿಸಿ ಹಾಕಿ, ಏಳು ಗಿಡಗಳ ಎಲೆಹಾಕಿ ಒಂದು ಮಂಟಪಕಟ್ಟಿ ಅವರಲ್ಲಿ ಸದ್ರಿ ಸ್ತ್ರೀಯನ್ನು ನಿಲ್ಲಿಸಿ ಸ್ನಾನ ಮಾಡಿಸಿದನು. ಇನ್ನೊಂದು ಮಂಟಪದಲ್ಲಿ ತಾನು ಕುಳಿತು, ಅವಳ ಆಭರಣಗಳನ್ನೆಲ್ಲಾ ತರಿಸಿ ಗಂಟುಕಟ್ಟಿ ಒಳಗೆ ಒಂದು ಟ್ರಂಕಿನಲ್ಲಡಲುಕೊಟ್ಟನು. ಪೂಜೆಯೆಲ್ಲಾ ಆದಮೇಲೆ ಸಾಧುವು ಹೊರಟುಹೋದನು. ಆಮೇಲೆ ಒಡವೆಗಳ ಗಂಟು ಬಿಚ್ಚಿನೋಡುವಾಗ ಅದರೊಳಗೆ ಕೆಲವು ಕಬ್ಬಿಣದ ತುಂಡುಗಳು ಮಾತ್ರವಿದ್ದುವು.

ಬೊಂಬಾಯಿಯಲ್ಲಿ ದೇಖಾವೆ

ಸುಪ್ರಸಿದ್ಧ ಸ್ಟೈಫೆಸರ್ ಶಿವಪ್ಪನವರ ವಿಶ್ವವರ್ಗದವರು ತಮ್ಮ 'ದಿ ಸೌತ್ ಕೆನರಾ ಫಿಸಿಕಲ್ ಕಲ್ಚರ್ ಇನ್‌ಸ್ಟಿಟ್ಯೂಟಿನ ಪರವಾಗಿ ಇದೇ ಬರುವ ದಶಂಬರ ತಿಂಗಳ ತಾರೀಕು 1ನೇ ರವಿವಾರ ಅವರಾಹ್ನ ಘಂಟೆ 4ಕ್ಕೆ (3 P) ಸರ್ ಕಾವ್ಸ್ಜಿ ಜಹಂಗೀರ್ ಸಾರ್ವಜನಿಕ ಸದನದಲ್ಲಿ ಆತ್ಯಾಶ್ಚರ್ಯಕಂಬಾಮೊದಲಾದವುಗಳನ್ನು ಆಡಿ ತೋರಿಸಲಿರುವರು. ನಮ್ಮ ಇಡಿ ಹಿಂದುಸ್ಥಾನದಲ್ಲಿ ಹಿಂದೆಲ್ಲಿಯೂ ಕಾಣದ ಅನೇಕ ನೂತನ ಆಟಗಳನ್ನು ಅಂದು ತೋರಿಸಲಿರುವರು.

ಕನ್ನಡ ಮಾತನಾಡುವ ಸಿನೆಮಾ ಚಿತ್ರ

ಸಂಸಾರ ನೌಕ

ಮನಸೆಳವ ಹಾಡು, ಹೃದಯ ಸೂರೆಗೊಳ್ಳುವ ಅಭಿನಯ, ನಗೆಗಡಲಲ್ಲಿ ದೂಡಬಲ್ಲ ನಗೆ—
ನಿಮ್ಮ ಹೆಮ್ಮೆಯ ಕನ್ನಡ ಮಾತು; ಒಟ್ಟಿನಲ್ಲಿ ಈ ಚಿತ್ರವು
ನಿಮ್ಮನ್ನು ಸಪ್ತ ಸ್ವರ್ಗಗಳಲ್ಲಿ ನಲಿಸಿ ನಿಲಿಸಬಲ್ಲುದು!

ತಾರೀಕು 14-11-'36ನೇ ಶನಿವಾರದಿಂದ

ಶ್ರೀ ಚಿತ್ರಾ ಟಾಕೀಸ್, ಮಂಗಳೂರು

ಇಲ್ಲಿ ಕೆಲವೇ ದಿನಗಳ ಪರಿಯಂತ ಪ್ರದರ್ಶಿಸಲ್ಪಡುವುದು!
ನೆನಪಿರಲಿ!

ಈ ಕನ್ನಡ ಮಾತನಾಡುವ ಹಾಡುವ ಚಿತ್ರವನ್ನು ನೋಡಿದವರಿಗೆಲ್ಲಾ 1000 ರೂ. ಬಹುಮಾನ ಹಂಚಲಾಗುವುದು.

ಮಂಗಳೂರು ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ಕಾ. 9-11-1936

ಮತದಾರರ ಪಟ್ಟಿ

ಮದ್ರಾಸ್ ನ್ಯಾಯವಿಧಾಯಕ ಸಭೆಗೆ ಮತ ಕೊಡಲು ಹಕ್ಕಿರುವವರ ಹೆಸರುಗಳನ್ನೊಳಗೊಂಡ ಕೊನೆಯ ಪಟ್ಟಿಯು ಪ್ರಚಾರವಾಗಿದೆ ಪ್ರಾಥಮಿಕ ಪಟ್ಟಿಯಲ್ಲಿದ್ದ ಕೆಲವು ನ್ಯೂನಾತಿರಿಕ್ತಗಳು ಇದರಲ್ಲಿ ತಿದ್ದುಪಡಿಮಾಡಲ್ಪಟ್ಟಿವೆ ತಾ. 7ರಲ್ಲಿ ಇದು ಹೊರಬಿದ್ದಿದೆ

ಪೈಜಪುರ ಕಾಂಗ್ರೆಸಿಗೆ ಪ್ರತಿನಿಧಿಗಳ ಚುನಾವಣೆ

ಬರುವ ಕಾಂಗ್ರೆಸ್ ಪ್ರತಿನಿಧಿಗಳನ್ನು ಆರಿಸುವ ಕಾರ್ಯವು ಕಳೆದ ತಾ 7ರಲ್ಲಿ ಜರಗಿತು ದಕ್ಷಿಣ ಕನ್ನಡ ಜಿಲ್ಲೆಗೆ ಇದ್ದ ೫೫ ಸ್ಥಾನಗಳಿಗೂ ಸ್ಪರ್ಧೆಯಿದ್ದಂತೆ ವಾರ್ತೆ

ಪ್ರಸಿದ್ಧ ನಟರ ಆಗಮನ

ಕಳೆದ ಗುರುವಾರ ದಿವಸ ಬಳ್ಳಾರಿಯ ಪ್ರಸಿದ್ಧ ವಕೀಲರೂ, ನಟ ಪಿರೋಮಣಿಗಳೂ ಆದ ಶ್ರೀಮಾನ್ ಟಿ. ರಾಘವಾಚಾರ್ಯ ಬಿ ಎ, ಬಿ ಎಲ್ ರವರು ಮಂಗಳೂರಿಗೆ ಚಿತ್ತೈಸಿ ಸ್ಥಳೀಯ ಗವರ್ನಮೆಂಟ್ ಕಾಲೇಜಿನ ಸಭಾ ಮಂದಿರದಲ್ಲಿ ಒಂದು ಉಪಯುಕ್ತವಾದ ಭಾಷಣವಿತ್ತರು 'ವಿದ್ಯಾರ್ಥಿ ಸಪಲ್ಲಿ ನಾಟಕ ಕಲೆಯು ಸ್ವಾನ'ವೆಂಬುದು ಅಂದಿನ ಭಾಷಣದವಿಷಯ) ಉಪನ್ಯಾಸಕರು ನಾಟಕ ಕಲೆಯ ವಿಚಿತ್ರತೆಯನ್ನು ತೋರಿಸಿಕೊಟ್ಟದ್ದಲ್ಲದೆ ಅದು ನಮ್ಮ ನಿತ್ಯ ಜೀವನದಲ್ಲಿ ನಮ್ಮ ಮೇಲೆ ಯಾವ ಪರಿಣಾಮವನ್ನುಂಟು ಮಾಡುವುದೆಂಬುದನ್ನು ತಿಳಿಸಿದರು. ಅಲೇ ದಿನ ಸ್ಥಳೀಯ ಥಿಯಸಾಫಿಕಲ್ ಸಭಾಮಂದಿರದಲ್ಲಿ 'ರಂಗ ಭೂಮಿ' ಎಂಬ ವಿಷಯದಲ್ಲಿ ಭಾಷಣವಿತ್ತರು

ಮಂಗಳೂರು ಮಹಿಳಾ ಸಭೆ

ಮಂಗಳೂರು ಮಹಿಳಾ ಸಭೆಯು ಸ್ಥಾಪಿಸಲ್ಪಟ್ಟು ಇಪ್ಪತ್ತೈದು ವರ್ಷಗಳಾದುವು ಈ ಸಭೆಯ ರೌಪ್ಯೋತ್ಸವವನ್ನು ಅತಿ ಯಶಸ್ವಿಯಾಗಿ ಜರಗಿಸಬೇಕೆಂದು ಸಭೆಯ ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ ಈ ಸಂದರ್ಭದಲ್ಲಿ ನಡೆಯತಕ್ಕ ಉತ್ಸವದಿಗಳು ಇದೇ ತಿಂಗಳು ತಾ 15ಕ್ಕೆ ಆರಂಭವಾಗಿ ಇದೇ ತಿಂಗಳ ತಾ 22ರ ವರೆಗೆ ನಡೆಯುವುವು

ಎಜುಕೇಶನ್ ಕೌನ್ಸಿಲಿಗೆ ಹೊಸ ಉಪಾಧ್ಯಕ್ಷರು

ಕಳೆದ ಜಿಲ್ಲಾ ಎಜುಕೇಶನ್ ಕೌನ್ಸಿಲ್ ಸಭೆಯಲ್ಲಿ ಶ್ರೀ ಎನ್ ರಾಮರಾವ್ ಬಿ. ಎ ಬಿ, ಎಲ್ ವಕೀಲ್ ಮಂಗಳೂರು ಇವರು ಎಜುಕೇಷನಲ್ ಕೌನ್ಸಿಲ್ ಸಭೆಯ ಉಪಾಧ್ಯಕ್ಷರಾಗಿ ಸರ್ವಾನುಮತಿಯಿಂದ ಚುನಾಯಿಸಲ್ಪಟ್ಟಿರುವರು

ಬೆಂಕಿಯ ಅನಾಹುತ

ಮಂಗಳೂರು ಕದ್ರಿ ಸಮೀಪ ಮಲ್ಲಿಕಟ್ಟೆ ಎಂಬಲ್ಲಿ ಕಳೆದ ಬುಧವಾರ ರಾತ್ರಿ ಒಂದು ಮನೆಗೆ ಆಕಸ್ಮಾತ್ ಬೆಂಕಿ ತಗಲಿ ಮನೆಯೆಲ್ಲಾ ಸುಟ್ಟು ಭಸ್ಮವಾಯಿತು. ಜನರಿಗೇನೂ ಅಪಾಯವಾಗಿಲ್ಲ

ತಪ್ಪಿತಸ್ಥನಿಗೆ ಕಠಿಣ ದಂಡನೆ

ಕಳೆದ ಜೂನ್ ತಿಂಗಳಲ್ಲಿ ತನ್ನ ಅಂಗಡಿಯಲ್ಲಿ ಮಲಗಿಕೊಂಡಿದ್ದ ಪಾತೂರು ಗ್ರಾಮದ ಮೋನಪ್ಪ ಸೆಟ್ಟಿ ಎಂಬವರ ತೊಡೆಗೆ ಕತ್ತಿಯಿಂದ ಕಡಿದು ಗಾಯ ಪಡಿಸಿ ಕೊಂಡ ಆಪಾದನೆಯ ಮೇಲೆ ಸುಬ್ರಾಯ ಗ್ರಾಮದ ತಿಮ್ಮಪ್ಪಶೆಟ್ಟಿಯು ಸೆಶನ್ಸ್ ಕೋರ್ಟಿನ ಮುಂದೆ ಕಮಿಟ್‌ಮಾಡಲ್ಪಟ್ಟಿದ್ದನು ಆ ವಿಚಾರಣೆಯು ನಡೆದು ಸೆಶನ್ಸ್ ಜಡ್ಜರು ನೂರು ಮಂದಿ ಎಸೆಸರವರ ಅಭಿಪ್ರಾಯವನ್ನು ಸ್ವೀಕರಿಸಿ ಆಪಾದಿತನಿಗೆ ಹತ್ತು ವರ್ಷಗಳ ಕಠಿಣ ಶಿಕ್ಷೆ ವಿಧಿಸಿದರು

ಅಂತರ ರಾಷ್ಟ್ರೀಯ ಸಹಕಾರಿಗಳ ದಿನಾಚರಣೆ

ಕಳೆದ ತಾ 7ನೇ ರವಿವಾರವು ಅಂತರ ರಾಷ್ಟ್ರೀಯ ಸಹಕಾರಿಗಳ ದಿನವಾಗಿ ಮಂಗಳೂರಿನಲ್ಲಿ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಗವರ್ನಮೆಂಟ್ ಕಾಲೇಜಿನ ಭವ್ಯವಾದ ಸಭಾ ಮಂದಿರವು ಪ್ರಪಂಚದ ಜನಾಂಗಗಳ ಪ್ರತಿನಿಧಿಯಿಂದಲೂ ಕಿರಿಸಲ್ಪಟ್ಟಿದ್ದಿತು. ಮಂಗಳೂರಿನ ಪ್ರಸಿದ್ಧ ವಕೀಲ ಶ್ರೀ ಜಿ ನಾರಾಯಣಬಿರರಾಯರು ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ್ದರು ಮಂಗಳೂರಿನ ನಿಯುಕ್ತ ಸಂಪಾಯಲ್ಲಿ ಸೇರಿದ್ದರು ಅಧ್ಯಕ್ಷರು ಆಗ್ಮಾಸನವನ್ನಲಂಕರಿಸಿ ತಮ್ಮ ಭಾಷಣದಲ್ಲಿ ಸಹಕಾರದ ಪ್ರಭುವಿಂದ ಅಸಿಕ ಪಾಶ್ಚಾತ್ಯ ದೇಶಗಳು ತಮ್ಮ ಸಂಕಷ್ಟಗಳನ್ನು ನಿವಾರಿಸಿ ಕೊಂಡಿವೆ ಹಿಂದುಸ್ಥಾನದಂತೆಯೂ, ದಕ್ಷಿಣಕನ್ನಡ ದಂತಹ ಬಡಜಿಲ್ಲೆಗಳಲ್ಲಿ ಸಹಕಾರ ಸಂಸ್ಥೆಗಳಿಂದ ಬಹಳ ಪ್ರಯೋಜನವಿದೆ ಸಹಕಾರ ಸಂಘಗಳ ದೆಸೆಯಿಂದ ನಮ್ಮ ದೇಶದಲ್ಲಿ ಆದ, ಆಗುತ್ತಿರುವ ಅನೇಕಾನೇಕ ವ್ಯವಹಾರಗಳೇ ಜನರಿಗೆ ಅಪಾರಂಬಿಕೆಯನ್ನುಂಟು ಮಾಡಿರಬೇಕು ನಿಜವಾಗಿ ನೋಡಿದರೆ ಜನರ ಆತ್ಮೈಪ್ಯಗ ಸಂಸ್ಥೆಗಳಲ್ಲ ಆ ಸಂಸ್ಥಗಳ್ಳಿರತಕ್ಕ ಜನರ ವರ್ತನೆಯೇ ಕಾರಣ ಸಹಕಾರದ ವಿಸ್ತಮಿತ ಜ್ಞಾನವು ಜನರಲ್ಲಿ ಹುಡುಬೇಕು ಇದಕ್ಕೆ ಸಹಕಾರ ತತ್ವವನ್ನು ಜನರಲ್ಲಿ ಚೆನ್ನಾಗಿ ತಿಳಿದವರು ಪ್ರಚಾರಕಾರ್ಯವನ್ನು ಕೈಗೊಳ್ಳಬೇಕು ಎಂದರು

ಮಿ ಜೋನ್‌ರವರು, ಶ್ರೀ ನೈಕುಂದ ಪಾಧಗರು, ಪ್ರೊ ಕೆ ವಿ ಐಬ್ರಹ್ಯಾಮರು, ಶ್ರೀ ಕೃಷ್ಣನ್ ನಾಯರವರು ಸಹಕಾರಿ ತತ್ವಗಳನ್ನು ವಿವರಿಸಿ ಉಪನ್ಯಾಸಿಸಬೇಕೆ ಶ್ರೀ ಭಂಡಾರ್‌ಕಾರ ದನ್ಯವಾದಗಳಿಗಿ ಸಭಾಂತ್ಯವಾಯಿತು

ಸಿದ್ಧ ವಿದ್ಯಾ ಅಭ್ಯಾಸಾಲಯ ಮಂಗಳೂರು

ನಿನ್ನ ಸಮಾಜ ಸ್ವಾಸ್ಥಕರವಾದ ಸ್ವಾಮಿ ಶಿವಾನಂದ ಪರಮಹಂಸರ ಜನ್ಮ ದಿನೋತ್ಸವವು ಇದೇ ಬರುವ ತಾ 27ನೇ ಶುಕ್ರವಾರದಿನ ಸನ್ಯಾಸಿಗುಡ್ಡೆ ರಾಮ್ಯ ಒಂದು ಕಾರ್ಯಾಲಯದ ಸಮಾವ ನಾ ರಾ ಅಂತೋಷ ಪರಾಯಸರ ಬಂಗ್ಲೆಯಲ್ಲಿ ಜರಗಿಸಲ್ಪಡು

— ಮತದಾರರಲ್ಲಿ —

ಕೊಂಗ್ರೆಸಿನ ವಿರುದ್ಧ ಉಮೇದ್ವಾರಿಗಳ ಪರವಾಗಿ ಕೆಲಸಮಾಡುವ ಕೆಲವರು ಮತದಾರರನ್ನು ತಮ್ಮ ಹಂಗು, ದಾಕ್ಷಿಣ್ಯಗಳಿಗೆ ಸಿಕ್ಕಿಸಿಕೊಂಡು, ಉದ್ದೇಶ ಸಾಧಿಸಲು ಸಂಚರಿಸುತ್ತಿರುವರೆಂದು ತಿಳಿದು ಬರುತ್ತದೆ. 'ಓಟು' ಎಂಬುದು ದೇಶದ ಮತ್ತು ಜನತೆಯ ಸೊತ್ತಾಗಿ ನಮ್ಮಲ್ಲಿದೆ. ಅದನ್ನು ವ್ಯಕ್ತಿಸ್ನೇಹ, ಸಂಬಂಧ, ದಾಕ್ಷಿಣ್ಯಗಳಂತಹ ಅಲ್ಪ ಬೆಲೆಗೆ ಮಾರಿಬಿಡಬಾರದು ಇಡೀ ದೇಶದಹಿತದ ಕಡೆಗೆ ಲಕ್ಷ್ಯವಿಟ್ಟ ಕೊಂಗ್ರೆಸು ನಮ್ಮ ಕಣ್ಣನುಮುಂದಿದೆ. ಮತದಾರರು ಅದಕ್ಕೆ ಬೆಂಬಲ ವೀಯುವ ಭರದಲ್ಲಿ ಇತರ ಸಣ್ಣ ಪುಟ್ಟ ಸಂಗತಿಗಳನ್ನು ಮರೆತೇ ಬಿಡಬೇಕೆಂದು ವಿನಂತಿಸುತ್ತೇವೆ.

ಅಧ್ಯಕ್ಷ, ತಾಲೂಕು ಕೊಂಗ್ರೆಸ್ ಕಮಿಟಿ, ಉಡುಪಿ.

ಉಡುಪಿ

ವಿಜಯನಗರ ಸ್ಮಾರಕೋತ್ಸವ

ವಿಜಯನಗರ ಸ್ಮಾರಕೋತ್ಸವದ ಪರವಾಗಿ ಕೆಲಸ ನಾಮಪತ್ರವೆ ಶ್ರೀ ಪಿ ಜಿ ಕುಲಕರ್ಣಿ ಎಂ ಎ ಎಲ್ ಎಲ್ ಬಿಯವರ ಅಪೇಕ್ಷೆಯಂತೆ ನವಯುಗ ಆಫೀಸಿನಲ್ಲಿ ಶ್ರೀ ಡೆ ಕೆ ಫೆರ್ನಾಂಡಿಸ್ ಪೆಷ್ಮಾಸ್ಟರ್, ಬೋರ್ಡು ಹೈಸ್ಕೂಲಾ, ಉಡುಪಿ ಯವರ ಅಧ್ಯಕ್ಷತೆಯಲ್ಲಿ ತಾ 7 11 36ರಲ್ಲೊಂದು ಸಭೆಯು ಜರಗಿತು ಉಡುಪಿಯ ಪ್ರಮುಖ ನಾಗರೀಕರು ಹಾಜರಿದ್ದರು ಶ್ರೀ ವಿ ಜಿ ಕುಲಕರ್ಣಿಯವರು ವಿಜಯನಗರದ ಗತ ವೈಭವವನ್ನು ವಿವರಿಸಿ, ಕನ್ನಡಿಗನ ಆದ್ಯ ಕರ್ತವ್ಯವಾದ ಅವರ ಸ್ಮಾರಕೋತ್ಸವವನ್ನು ವಿಜೃಂಭಣೆಯಿಂದ ಜರಗಿಸುವಪಕ್ಷಾಗಿ ಉಡುಪಿಯವರೂ ಸಹಕರಿಸಬೇಕು, ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಬೇಕೆಂದು ಎಂದು ವಿನಂತಿಸಿಕೊಂಡರು ಆದ ಹಿರಿಯರು ಅವರ ಭಾಷಣವನ್ನು ಸಮರ್ಥಿಸಿದರು ಶ್ರೀಗಳಾದ ಫೆರ್ನಾಂಡಿಸ್ (ಅಧ್ಯಕ್ಷ ಬಿ ಮಾಸುವೇರ ರಾವ್ (ಉಪಾಧ್ಯಕ್ಷ), ಎಮ್ ವಿ ಟಿ ಲ ಕಾಮತ್, ಪಿ ಎ ಸ್ವೈ, ಕಾರ್ಯದರ್ಶಿ ಉಸ್ಮಾನ್ ಸಾಹೆಬ್, ಕೆ ವ್ರೇಮಾನಂದ ರಾವ್, ಸೂಯಳ ನರಸಿಂಹಾಚಾರ್, ಕೆ ಕೆ ಪೈ, ಕಾರ್ಯದರ್ಶಿ, ಪಿ ಮಂಜುನಾಥ ನಾಯಕ್, ಎಸ್ ಮಾಸೋಪಾಯ, ಎಸ್ ರಾಜಗೋಪಾಲಕೃಷ್ಣರವ, ಎಮ್ ಸಂಜೀವ ರಾವ್ ಈ ನಾಮಕರಣದ ಒಂದು ಕಮಿಟಿಯನ್ನು ಸ್ಥಾಪಿಸಲಾಯಿತು ಶ್ರೀ ಕೆ ಕೆ ಪೈರವರು ಧನ್ಯವಾದಗಳನ್ನರ್ಪಿಸಿದರು ಈ ಕಮಿಟಿಯ ಸಭೆಯು ಇದೇ ತಾ 12-11 36ಕ್ಕೆ ಪುನಃ ಸೇರಲಿರುವರು

ಕಮಿಶನರ್

ಇಲ್ಲಿಗೆ ಮುನಿಸಿಪಲ್ ಕಮಿಶನರಂಗಿ ನರ್ಯಾಯ ಸಲ್ಲಿಸಿದ್ದ ಶ್ರೀ ನಾರಾಯಣ ಶೆಣ್ಯೈ ಬಿ ಎ, ಬಿ ಎಲ್ ರವರು ಇದೇ ತಾ 9 11 36ರಲ್ಲಿ ಚಾರ್ಜು ವಹಿಸಿಕೊಂಡಿರುವರು

ಶುಭವಾರ್ತೆ

ರಾಷ್ಟ್ರಪತಿ ಜವಾಹರಲಾಲ್, ನಪಿಜಾತ ವಲ್ಲಭಾಯಿ ಪಟೇಲ್ ಇವರುಗಳಲ್ಲಾ ಸಿದ್ಧ ವಿದ್ಯಾ ಸಂಸ್ಥೆಯ ಸಹೋದ್ಯೋಗಿ ಸಹೋದರಿಗಳು ಒಂದು ಈ ಶುಭಕಾರ್ಯವನ್ನು ನೆರವೇರಿಸುವಂತೆ ಪ್ರೋತ್ಸಾಹಿಸಬೆ ಕಾಗಿ ವಿನಂತಿ

ಯೂ, ಭೂಲುಬಾಯ್ ದೇಸಾಯಿಯವರು ಸದ್ಯದಲ್ಲೇ ದಕ್ಷಿಣ ಕನ್ನಡವನ್ನು ಸಂದರ್ಶಿಸಲಿರುವರೆಂದು ತಿಳಿದು ಬರುತ್ತದೆ

ಸಂಚಾರ

ಶ್ರೀ ಎ ಬಿ ಶೆಟ್ಟಿ, ಎಮ್ ಎಲ್ ಸಿ.ರವರು ಇತರ ಕೊಂಗ್ರೆಸ್ ಕೆಲಸಗಾರರೊಡನೆ, ಕಟಪಾಡಿ, ಪಾಂಗಾಳ್, ಮಟ್ಟು, ಕಾತ್ಯ, ಎರ್ಮಾಳು, ಪಡುಬಿದ್ರೆ, ಏರ್ವ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿ ಮತದಾರರ ಜಾಗ್ರತೆ ಮಾಡಿದರು ಆರ್ ಸನೆ ಪಡೆದು ಹಿಂತಿರುಗಿದರು ಹಳ್ಳಿಯ ತರುಣರೆಲ್ಲಾ ಸಂಪೂರ್ಣವಾಗಿ ಕೊಂಗ್ರೆಸಿಗೆ ಒಲವಿದಿಯವರು

ಉಡುಪಿ ತಾಲೂಕು ಕಾಂಗ್ರೆಸ್ ಕಮಿಟಿಯ ಕಾರ್ಯನಿರ್ವಾಹಕ ಸಮಿತಿಯ ಸೇಮಕೆಯೇ ಮೊದಲಾದ ಇತ್ಯರ್ಥಗಳ ಬಗ್ಗೆ ವಿಶೇಷ ಸಭೆಯೊಂದು ಇದೇ ತಾ ೭ 11 36ಕ್ಕೆ ಜರಗುವದೆಂದು ತಿಳಿದು ಬರುತ್ತದೆ

ಕ್ರಿಕೆಟ್ ಸ್ಪರ್ಧೆ

ಕಳೆದ ತಾ ೩೦-೧೦ ಇಲ್ಕೆ ಗಾಂದಿ ಮೈದಾನ ಸ್ಪರ್ಧೆ ಇದ್ದಿಯ ನೈ. ಎಮ್ ಎಸ್ ಕ್ರಬ್ಬಿನವರಿಗೂ ಮಂಗಳೂರ ಕ್ರಿಕೆಟು ಟೀಮಿನವರಿಗೂ ನಡೆದ ಕ್ರಿಕೆಟ್ ಸ್ಪರ್ಧೆಯಲ್ಲಿ, ಅನುಕ್ರಮವಾಗಿ ೨೦ ಮತ್ತು ೬೭ ರನ್ನು ದೊರೆತು ಎರಡನೆಯವರು ಜಯಶೀಲರೆಂಬಿಗಿರುವರು.

ದಿವಾನ ಬಹದೂರು ಬಿ ಮಹಾಬಲ ಹೆಗ್ಡೆಯರು ಈ ವಾರವನ್ನಲ್ಲಿ ಇಲ್ಲಿಯೂ ಅಸುಪಾಸಿನ ಗ್ರಾಮಗಳಲ್ಲೂ ಸಂಚರಿಸಿ, ಚುನಾವಣೆಯ ನಿಮಿತ್ತ ಹುರಿದುಂಬಿಸಿ, ಮಾತಾಡಿ ಹೋಗಿರುವರು

ಹೊಡೆತ:— ಕಳೆದ ಬುಧವಾರ ಸಾಯಂಕಾಲ ಇಲ್ಲಿಂದ ಒಂದಾನವರೆಮೈಲು ದೂರನಿರುವ ಅಂಬ್ಲಾಡಿ ಎಂಬಲ್ಲಿ ಮೋಗವೀರ ಯುವಕಸೊಬ್ಬನು ಅಕಾರಣವಾಗಿ ಸಿಟ್ಟಿಗೆದ್ದು, ಆಸ್ಪೃಶ್ಯಜಾತಿಯ ಸ್ವಾಯ ಳೂಬ್ಬನನ್ನು ವಿಪರೀತವಾಗಿ ಹೊಡೆದು ಮೂರ್ಛೆಗೊಳಿಸಿರುವನೆಂದೂ, ಮೂರ್ಛೆತಿಳಿದಾಗಲೇಕಾಲಿಗೆ ಗಂಡೆಕಾಲು ಸಿಡಿಯುವೆಂದೂ, ಗಂದನು ಮನೆಯಲ್ಲಿ ಲ್ಲದಿರುವಾಗ ಮಾಡಿದ ಈ ಅನ್ಯಾಯದ ಕುರಿತು ಫೋಲೀಸರು ತನಿಖೆ ನಡೆಸುತ್ತಿರುವರೆಂದೂ ತಿಳಿದು ಬರುತ್ತದೆ

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT:

P. B 337 Mount Road, Madras	Visveswarapuram Circle, Bangalore City	Soumyalayam Puthiyara, Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

SUMMARY OF 1935 ACCOUNTS

Total Assets Over	Rs 80,00,000
Life Funds Over	Rs. 68,00,000
Premium Income Over	Rs 22,54,000
Interest Income	Rs 3,16,000
Claims Paid	Rs 5,75,000

Total Claims paid Over Rs. 38,50,000

Total Business in Force Over Rs 1,42,51,200

TOTAL BUSINESS IN FORCE Rs. 4,42,51,200

ನವಯುಗ

ಉಡುಪಿ, ತಾ ೧೨-೧೧-'೩೯ ಗುರುವಾರ

ಆ ತಾ. 11ನೇ ನವಂಬರ!

ಯಾವ 11ನೇ ನವಂಬರನನ್ನು ಪ್ರತಿ ವರ್ಷವೂ ಶಾಂತಿ ಪ್ರಚಾರಕ ಮತ್ತು ಯುದ್ಧದ ಭೀಕರ ಸ್ಮರಣಾರ್ಥ ದಿನವಾಗಿ ಆಚರಿಸಲ್ಪಡುತ್ತಿರುವುದೋ ಆದು 1918 ನೇ ಇಸ್ವಿಯ ತಾ. 11ನೇ ನವಂಬರ ವು. 4 ವರ್ಷಗಳ ಭೀಕರ ಹೋರಾಟ ದಿಂದ, ಬರ್ಬರ ಕೃತ್ಯಗಳಿಂದ, ಪೈಶಾಚಿಕ ಮಾನವ ಕೊಲೆಯಿಂದ, ಪ್ರಳಯ ವಿನಾಶ ದಿಂದ ಜನತೆಯೆಲ್ಲಾ ಜಗುಪ್ಸೆಗೊಂಡು ಬೆವರಿ ಕಂಗೆಟ್ಟಿರುವಾಗ ಲೋಕದಲ್ಲೆಲ್ಲಾ ಹಾಹಾಕಾರವೆದ್ದಿರುವಾಗ, ಶಾಂತಿಯ ಸುವಾರ್ತೆಯನ್ನುಂಟುಮಾಡಿದ ಸುದಿನವದು ನವಂಬರ ತಾ. 11. ಲೋಕವು ವಿಶೇಷವಾಗಿ ಯುರೋಪ್ ಖಂಡವು ಯುದ್ಧದ ಘೋರ ಹಾವಳಿಯಿಂದ ಜರ್ಜರಿತವಾಗಿ "ಬದ್ಧ ವೈರಿಗಳಾದರೂ ಇನ್ನು ಮುಂದೆ ಬೇಡಪ್ಪಾ ಈ ಯುದ್ಧ! ಮಾನವನನ್ನು ಒಂದಿಷ್ಟು ಅಂತಃಕರುಣವಿಲ್ಲದ ನರಪಿಶಾಚಿಯನ್ನಾಗಿ ಮಾಡುವ ಈ ಹೋರಾಟವೇ ಮುಂದ ಉಂಟಾಗದಂತಾಗಬೇಕು. ಸರಂತರವಾದ ಲೋಕಶಾಂತಿ ಮತ್ತು ಮಾನವ ಭಾಂದವ್ಯಕ್ಕಾಗಿ ಇಂದಿನಿಂದ ಪ್ರತಿಯೊಬ್ಬರೂ ಕೆಲಸಮಾಡಬೇಕೆಂಬ ಪವಿತ್ರ ಸಿದ್ಧಾರದ ವಾನನದಿನವದು ನವಂಬರ ತಾ. 11. ಆ ವರೆಗೆ ತಮ್ಮ ಮಾನವ್ಯವನ್ನೇ ಮರೆತು ಮಾನವ ಹತ್ಯೆಯ ಅತ್ಯಂತ ಫಲಕಾರಿ ಹಂಚಿಕೆಗಳನ್ನು ಕಂಡುಹಿಡಿಯ ಒಬ್ಬರೊಬ್ಬರ ಮೇಲೆ ಅವನ್ನು ಉಪಯೋಗಿಸಿ ರಕ್ತದ ಕಾಲುವೆಯನ್ನು ಹರಿಸುವುದರಲ್ಲೇ ವಿಕಟ ಸಂತೋಷ ಪಡೆಯುತ್ತಿದ್ದ, ಪರಸ್ಪರದ್ವೇಷದ ದಾವಾಗ್ನಿಯನ್ನೇ ಹೊತ್ತಿಸಿ ಇಡೀ ಯುರೋಪನ್ನೇ ಏಕೆ, ಲೋಕದ ಹೆಚ್ಚಿನ ಭಾಗವನ್ನೇ ನಾಶಮಾಡಿಯಾದರೂ ತಮ್ಮ ಹರನಾಧಿಸಬೇಕೆಂಬ ಉನ್ಮತ್ತತೆಯಿಂದ ಒಂದಿಷ್ಟು ವಿಚಾರ ವಿವೇಕವಿಲ್ಲದೆ ನಡೆದ ಮಿತ್ರ ರಾಷ್ಟ್ರಗಳು ವಿವೇಕ ತಳೆದು, ತಮ್ಮ ಬರ್ಬರತನವನ್ನು ಮನಗಂಡು ಸಂಧಾನ ಕ್ಕೊಪ್ಪಿ, ಮುಗ್ಗುರಿಸಲಾರಂಭಿಸಿದ ಪಾರ್ಶ್ವತ್ಯ ನಾಗರಿಕತ ಮತ್ತು ಸಂಸ್ಕೃತಿಯನ್ನುಳಿಸಿದ ಶುಭ ದಿವಸವದು ನವಂಬರ ತಾ. 11. ಒಂದಿನ ತಾ. 11ನೇ ನವಂಬರದ ಅನಂತರ ಪ್ರತಿವರ್ಷ ನವಂಬರ ತಾ. 11 ಯುದ್ಧ ನಿಷೇಧಕ ಶಾಂತಿ ಪ್ರಸಾರಕ ದಿನವಾಗಿ ಆಚರಿಸಲ್ಪಡುತ್ತಾ ಬಂದಿರುವುದು.

ಆನರೆ ಮಾನವನು ಎಷ್ಟೊಂದು ನಾಗರಿಕ ಸುಸಂಸ್ಕೃತನೆನಿಸಿಕೊಂಡರೂ ಅದು ಕೇವಲ ಸೊರಗಣ ಥಳಕು, ಒಳಗಣ ಆತನ ಬರ್ಬರ ಹೃದಯವು ಕುದಾಗಿಯೇ ಇರುವುದು. ವಿಚಾರ ಹೀನನೆನಿಸುವ ಪ್ರಾಣಿಯಾದರೂ ಒಮ್ಮೆ ಕಲಿತ ಪಾಠವನ್ನು ಆಜೀವ ಮರೆಯದು. ಆದರೆ ಪ್ರಾಣಿಗಳಿಲ್ಲವುಗಳಿಗಿಂತಲೂ ಶ್ರೇಷ್ಠ ವಿಚಾರಶಾಲಿಯೆನಿಸುವ ಮಾನವನು ಇರುಳು ಕಂಡ ಬಾವಿಗೆ ಹಗಲು ಬೀಳುವಂತಹ ಕುರುಡು ಬುದ್ಧಿಯವನೂ, ಸ್ಮರಣಾ ಶಕ್ತಿಹೀನನೂ, ಅವಿವೇಕಿಯೂ ಇರುವನೆಂದು ಈಗಣ ಲೋಕದ ಪರಿಸ್ಥಿತಿಯನ್ನು ಕಂಡರೆ ಸುವೇದ್ಯವಾಗದಿರದು. ಲೋಕವೀಗ 1918ನೇ ನವಂಬರ ತಾ. 11ರ ಘೋರಪಾರವನ್ನು ಮರೆತು, ಹೃದಯದಲ್ಲಿ ಕೊರೆಯಲ್ಪಟ್ಟ ಆ ಭೀಕರ ಸ್ಮರಣೆಯನ್ನೊರಸಿಬಿಟ್ಟು, ಅಂದಿಗಿಂತಲೂ ಎಷ್ಟೋಪಾಲು ಭೀಕರವಾದ ಯುದ್ಧದ ತಾಂಡವನೃತ್ಯಕ್ಕೆಯನು ಆರಂಭಿಸುವಂತಿದೆ ನವಂಬರ ತಾ 11ರ ದಿನಾಚರಣೆಯು ಆಂಪೊಂದು ಅಂಧರೂಢಿಯಂತೆ ಅರ್ಥರಹಿತವಾಗಿದೆ. ಬಾಯಿಯಲ್ಲಿ ಶಾಂತಿಸಾರು, ಕಂಕುಳು ದೊಣ್ಣೆಯೆಂಬ ವಿಪರ್ಯಾಸವುಂಟಾಗಿದೆ. ಇಡೀ ಯುರೋಪ್ ಖಂಡವು ತಪೋಮಯ ಸಶಸ್ತ್ರ ಶಿಬಿರವೇ ಆಗಿ ಲೋಕವನ್ನೇ ದಿಗಿಲುಗೊಳಿಸುತ್ತಿದೆ. ಲೋಕವು ಆಪೊಂಪು ಉಗ್ರಜ್ವಾಲಾಮುಖಿಯಮೇಲೆ ಇರುವಂತಿದೆ. ಅದು ಎಂದು ಸ್ಫೋಟವಾಗಿ ವಿನಾಶವನ್ನುಂಟುಮಾಡುವುದೆನ್ನಲಾಗುವುದಿಲ್ಲ.

ಡಿಕ್ಟೇಟರರುಗಳ ಪ್ರಾಬಲ್ಯವು ಬೆಳೆಯುತ್ತಿದೆ. ಅವರು ತಮ್ಮಿಚ್ಛಾನುಸಾರ ನಡೆಯಲು ಯಾವ ಆತಂಕವೂ ಇಲ್ಲವೆಂತಾಗಿದೆ. ಲೀಗ್ ಸಭೆಯು ಅಪೊಂಪು 'ನಕಲಿ'ಯಂತಾಗಿದೆ. ಜಪಾನು ತಪ್ಪಿಚ್ಛಾನುಸಾರ ನಡೆದು ಕೇವಲ ಸಣಾಬಲದಿಂದ ಚೀನದ ಭಾಗವಾದ ಮಂಚೂರಿಯವನ್ನು ನೆಳಕೊಂಡಾಗಲೇ ಲೀಗಿನ ಸತ್ವ ಕುಂದಿದೆ. ಆ ಮೇಲೆ ಮುಸಲೋನಿಯವರು ಲೀಗನ್ನು ಧಿಕ್ಕರಿಸಿ ಅಬಿಸೀನಿಯದ ಮೇಲೆ ದಂಡೆತ್ತಿ ಹೋಗಿ, ಕೇವಲ ವಿಷವಾಯು ಪ್ರಯೋಗದಿಂದ, ವಿಮಾನ ಧಾಳಿಯಿಂದ ಆದನ್ನು ಗೆದ್ದು ವಶಮಾಡಿಕೊಂಡು ಸ್ವೇಚ್ಛೆಯಂತೆ ನಡವ ಮೇಲಂತೂ ಲೀಗು ನಾಮಾವಶೇಷವಾಗಿದೆ. ಹೀಗೆ ಕಳವಳ ಯುದ್ಧದ ಆಸುಭವದಿಂದ ಲೋಕದಲ್ಲಿ ಶಾಂತಿ ಸಂಧಾನದ ವ್ಯವಸ್ಥೆಗಾಗಿ ಸ್ಥಾಪಿಸಲ್ಪಟ್ಟಿದ್ದ ಉದಾತ್ತ ಸಂಸ್ಥೆಯಾದ ಲೀಗು ಇಂದೀಗ ಹೂಲೆಗೊತ್ತಲ್ಪಟ್ಟಿದೆ. ಪ್ರಬಲ ರಾಷ್ಟ್ರಗಳೆಲ್ಲಾ ಸಾಮ್ರಾಜ್ಯ ತೃಷೆಯಿಂದ ಚಿಕ್ಕ ಪುಟ್ಟ ರಾಜ್ಯಗಳನ್ನು ನುಂಗುವ ಸಂಚು ಹಂಚಿಕೆಗಳಲ್ಲಿ ನಿರತವಾಗಿವೆ ಪರಸ್ಪರ ಅವನಂಬಿಕೆಯಿಂದ ಒಂದನ್ನೊಂದು ಜಂದೆ ಹಾಕುವ ಯುದ್ಧಸಿದ್ಧತೆಯಲ್ಲಿ ತೊಡಗಿವೆ. ಒಂದನ್ನೊಂದು ವಂಚಿಸಿ, ಗುಪ್ತ ಕವಲುಗಳನ್ನು ಮಾಡಿಕೊಳ್ಳುವ ಕುಟಿಲನೀತಿಯು ಪ್ರಬಲವಾಗಿದೆ. ಎಲ್ಲೆಲ್ಲಿಯೂ ಗುಪ್ತಚರರು ಸುಳಿದಾಡಿ ರಾಜ್ಯ ರಹಸ್ಯಗಳನ್ನು ಪಡೆಯುವ ಸಾಹಸ ನಡಿಸುತ್ತಿದ್ದಾರೆ. ಒಂದೇ ಮಾತಿನಲ್ಲಿ ಹೇಳುವುದಾದರೆ 1914ನೇ ಆ ತಿನಲ್ಲಿ ಹೇಳುವುದಾದರೆ 1914ನೇ ಆ ಘೋರ ಸಮರದ ಮುಂಚಿನ ಪರಿಸ್ಥಿತಿಗಿಂತಲೂ ವಿಷಮವಾಗಿದೆ ಇಂದಿನ ಸ್ಥಿತಿಗತಿ. ಇಂತಹ ಸಂದರ್ಭದಲ್ಲಿ ಆ ಶಾಂತಿದಾಯಕ ಯುದ್ಧ ವಿರೋಧಕ ನವಂಬ್ರ ತಾ. 11ನ್ನು ಇಡೀ ಲೋಕದಲ್ಲಿ ಸಂಭ್ರಮದಿಂದ ಆಚರಿಸುವುದೆಂದರೆ ಕೇವಲ ವಿಪರ್ಯಾಸವಲ್ಲದೆ ಮತ್ತೇನು?

ಈ ಆಚರಣೆಗೆ ಏನಾದರೂ ಅರ್ಥ ಬರಬೇಕಾದರೆ ಪ್ರಜಾಸತ್ತಾತ್ಮಕ, ಲೋಕ ಶಾಂತಿ, ಪ್ರತಿಪಾದಕ, ಲೀಗ್ ಆಫ್ ನೇಶನ್ಸ್‌ನ ಸಮರ್ಥಕ ಲೋಕದ ರಾಷ್ಟ್ರಗಳೆಲ್ಲಾ ಒಂದುಗೂಡಿ, ಸ್ವೇಚ್ಛಾಪರ ಡಿಕ್ಟೇಟರುಗಳನ್ನೆಲ್ಲಾ ಧೈರ್ಯದಿಂದ ವಿರೋಧಿಸಬೇಕು. ಆವರ ಉದ್ಧಟ ಸ್ವರಂಕುಶ ವರ್ತನೆಗೆ ಅಂಕುಶ ಹಾಕಬೇಕು. ಲೀಗ್ ಆಫ್‌ನೇಶನ್ಸ್‌ನ್ನು ಯಾರೂ ಧಿಕ್ಕರಿಸಿ ನಡೆಯದಂತೆ ಬೇಕಾವ ವ್ಯವಸ್ಥೆ ಮಾಡಿಕೊಳ್ಳಬೇಕು. ಯುದ್ಧೋಪಕರಣವನ್ನು ಭರದಿಂದ ಹೆಚ್ಚಿಸುವ ಅವಿವೇಕತನವು ಆಳಿದು, ಅನನ್ನು ಅಮೊಂದು ವಿಧದ ಬಲವದ್ಯಂಧದಿಂದಾದರೂ ತೀರಾ ಕಡಿಮೆ ಮಾಡುವ ವ್ಯವಸ್ಥೆಯಾಗಬೇಕು; ಸಂಕುಚಿತ ರಾಷ್ಟ್ರಾಭಿಮಾನ ಮತ್ತು ಸ್ವಾರ್ಥಸಾಧನೆಯ ಮನೋವೃತ್ತಿಯು ತೊಲಗಿ, ಲೋಕ ಸುಖಸುಭಿಕ್ಷೆಯ ವ್ಯಾಪಕ ಬುದ್ಧಿಯುಂಟಾಬೇಕು. ಅವಿಶ್ವಾಸ, ವೈಷಮ್ಯದ ಬದಲಿಗೆ ವಿಶ್ವಾಸ ಮತ್ತು ಬಾಂಧವ್ಯವು ನೆಲೆಗೊಳ್ಳುವಂತಾಗಬೇಕು. ಯುದ್ಧದ ಭಾವನೆಯನ್ನುಂಟುಮಾಡುವುದೇ ಘೋರತಕ್ಷೇರೆಂಬಂತಾಗಿ ಲೋಕದಲ್ಲೆಲ್ಲಾ ಶಾಂತಿ, ಮಾನವ ಸಹೋದರತೆ ಮತ್ತು ಸುಭಿಕ್ಷೆಯ ಮನೋವೃತ್ತಿಯೇ ಪ್ರಬಲವಾಗಬೇಕು. ಆಗ ಮಾತ್ರ ನವಂಬರ ತಾ 11ನೇ ದಿನಾಚರಣೆಯು ಸಾರ್ಥಕವಾಗುವದು. ಇಂತಹ ಆಶೋದಯವನ್ನುಂಟುಮಾಡುವ ಶುಭಚಿಹ್ನೆಗಳಾದರೂ ಎಲ್ಲಿ?

ಹಿಂದೂದೇಶ

(ಶೇಷ ಪುಟದಿಂದ ಮುಂದುವರಿಸಿದುದು)

ಹಗ್ಗ ಮೇಲಕ್ಕೇರಿ ನಿಲ್ಲುವ ಯಕ್ಷಿಣಿ

ಸುರುಳಿಯಾಗಿ ನೆಲವ ಮೇಲೆ ಬಿದ್ದಿರುವ ಹಗ್ಗವನ್ನು ಯಾರೋ ತುದಿ ಹಿಡಿದು ಮೇಲಕ್ಕೆತ್ತಿದಂತೆ ಸರ್ರನೆ ಆಕಾಶಕ್ಕೇರಿ ನಿಲ್ಲುವ ಮತ್ತು ತದರ ಮೇಲೆ ಬಾಲಕ ನೊಬ್ಬನು ಸರ ಸರನೆ ಹತ್ತಿ ತುದಿಗೆ ಸೇರಿದ ಕೂಡಲೆ ಹಗ್ಗವು ಅದೃಶ್ಯನಾಗುವ ಯಕ್ಷಿಣಿಯು ಹಿಂದುದೇಶದಲ್ಲಿ ಬಹುಕಾಲದಿಂದ ನಡೆಸಲ್ಪಟ್ಟಿತ್ತು. ಮಿ. ಗೋಲ್ವಲ್ಕರ್ ಸಂಬವರು ಈ ಕುರಿತು ಕಳದ 18 ವರ್ಷಗಳಿಂದ ಅನೇಕ ವಿಧದ ಶೋಧನೆ ನಡಿಸಿ ಆದರ ರಹಸ್ಯವನ್ನು ಕಂಡುಹಿಡಿದು ಪೆಂಟ್ ಎಂಬಲ್ಲಿ ಅನೇಕ ಸಹಸ್ರ ಪ್ರೇಕ್ಷಕರ ಮತ್ತು ಹಲವು ಮಂದಿ ವಿಜ್ಞಾನಿಗಳ ಸಮಕ್ಷಮದಲ್ಲಿ ಪ್ರದರ್ಶಿಸಿರುವರು, ಮಿ. ಗೋಲ್ವಲ್ಕರ್ರು ಇದು ಹೊರತು ಇನ್ನೂ ಅನೇಕ ಜಾದು ವಿದ್ಯೆಗಳ ರಹಸ್ಯವನ್ನು ಕಂಡುಕೊಂಡಿರುವರು. ಆ ಕುರಿತು ಶೋಧನೆ ನಡಿಸಲು ಅಮೊಂದು ಪ್ರಯೋಗಾಲಯವನ್ನೇ ಸ್ಥಾಪಿಸಿರುವರು.

ಸರ್ ತೇಜಬಹದೂರು ಸಪ್ರುಗಳು

ಇದೇ ತಿಂಗಳ ಅಂತ್ಯಕ್ಕೆ ಇಂಗ್ಲೆಂಡಿಗೆ ಹೋಗಿ, ಮುಂದಿನ ಸಂಯುಕ್ತ ರಾಜ್ಯಾಂಗ ರಚನೆಯಲ್ಲಿ ಮೈಸೂರು, ಜಯಪುರ, ಜೋಧಪುರ ಮತ್ತು ಉದಯಪುರ ಸಂಸ್ಥಾನಗಳು ಪಡೆಯಬೇಕಾದ ಹಕ್ಕು ಬಾಧ್ಯತೆಗಳ ಕುರಿತು ಪ್ರತಿವಾದಿಸಲಿರುವರೆಂದೂ, ಇವರಿಗೆ ಈ ನಾಲ್ಕು ಸಂಸ್ಥಾನಗಳವರು ರೂ. 10 ಲಕ್ಷ ರುಸುಂ ಕೊಡಲಿರುವರೆಂದೂ, ಪ್ರಕಟವಾಗಿದೆ

ಹಿಂದೀ ಜ್ಯೋತಿಷಿಯೊಬ್ಬರ ಭವಿಷ್ಯ

ಕರಾಚಿಯ ಸ್ವಾಮಿಜ್ಯೋತಿಷಿಯೆಂಬವರು ಕೆಲ್ಟಟ್ಟದ ಭೂಕಂಪದ ಭವಿಷ್ಯ ಹೇಳಿದ್ದರಂತೆ. ಈಗ 1937ನೇ ಇಸ್ವಿಯ ಭವಿಷ್ಯ ಹೇಳುತ್ತಾ, ಎಂಟನೇ ಎಡ್ವರ್ಡರು ಪಟ್ಟಾಭಿಷೇಕವಾದ ಕೂಡಲೆ ಮದುವೆಯಾಗುವರು ಅಯರ್ಲೆಂಡು ಸ್ವತಂತ್ರ ರಾಜ್ಯವಾಗುವದು. ಹಿಂದು ದೇಶಕ್ಕೆ ಹೊಸ ರಾಜ್ಯಾಂಗರಚನೆ ಬಂದ ಮೇಲೆ ಗಲಾಟೆ ಅಶಾಂತಿಯುಂಟಾಗುವುದು. ಬ್ರಿಟಿಷ್ ರಾಜಮನೆತನದಲ್ಲಿ ಎರಡು ಸಂತೋಷ ಸಂಗತಿಗಳು ನಡೆಯುವವು. ಇಗುಸ್ತ ದ ವಕ್ಕಲಿಗ ಸ್ತ್ರೀಯೊಬ್ಬಳು 6 ಮಕ್ಕಳನ್ನು ಹೆರುವಳು. ಯುರೋಪಿನ ಡಿಕ್ಟೇಟರೊಬ್ಬರು ಸಾಯುವರು. ಅಮೆರಿಕದ ವಿಜ್ಞಾನಿಯೊಬ್ಬರು ವಿಸ್ಮಯಕರ ಶೋಧನೆಯೊಂದನ್ನು ಮಾಡುವರು. ರಸ್ಯದಲ್ಲಿ ಅಂತಃಕಲಹವುಂಟಾಗುವುದು. ಜಾಪಾನಿನಲ್ಲಿ ಅತಿ ದೊಡ್ಡ ಭೂಕಂಪವೊಂದುಂಟಾಗುವುದೆಂದು ಹೇಳಿರುವರು.

ನೆನಪಿರಲಿ!

ಬರುವ ಸಂಚಿಕೆಯಲ್ಲಿ

"ಗೋ ಗ್ರಾಸ"

(ಚಿಕ್ಕ ಕತೆ)

ಜಾತೀಯ ಎಮರ್ಜಿನ್ಸಿ ಕುರಿತು ರಾಜಿ.

ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಜಾತೀಯ ಎಮರ್ಜಿನ್ಸಿ ಕುರಿತಾದ ಕಾಂಗ್ರೆಸಿನ ಧೋರಣೆಗೆ ವಿರೋಧವಾಗಿದ್ದ ರಶ್ಟೆ. ಈಗ ಪಂಡಿತ ಜವ್ಹಾರಲಾಲರು ಸ್ವತಹ ಕಲ್ಕತ್ತಕ್ಕೆ ಹೋಗಿ ಪ್ರಯತ್ನ ಮಾಡಿ ಅವರಿಗೆಲ್ಲಾ ಒಪ್ಪಿಗೆಯಾಗುವ ನಿರ್ಣಯಮಾಡಿ, ಕಾಂಗ್ರೆಸ್ ಜಾತೀಯ ಎಮರ್ಜಿಗೆ ಬವ್ಹ ವಿರೋಧಿಯಿರುವುದೆಬುದನ್ನು ಸ್ಪಷ್ಟಪಡಿಸಿರುವರು. ಪಂಡಿತ ಜವ್ಹಾರಲಾಲರು ಈ ವಿಷಯದಲ್ಲಿಮಾಡಿದ ಪ್ರಯತ್ನಕ್ಕಾಗಿ ಬಂಗಾಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟರಾದ ಶ್ರೀಶರತ್ಚಂದ್ರಬೋಸರು ಪಂಡಿತರಿಗೆ ಧನ್ಯವಾದವನ್ನೊಪ್ಪಿಸಿದರು.

ದೇಶಭಕ್ತ ವಾಮನ ನಾಯ್ಕರ ನಿಧ

ಹೈದರಾಬಾದಿನ ಪ್ರಮುಖ ಹಿಂದು ಮುಖಂಡರೂ, ಜನೋಪಕಾರಿಯೂ, ಹೈದರಾಬಾದ್ ಕೋರ್ಪರೇಶನಿನ ವ್ಯಾಪ್ರೆಸಿಡೆಂಟರೂ ಆದ ದೇಶಭಕ್ತ ಧವವೀರ ವಾಮನ ನಾಯ್ಕರು ಇದೇ ತಾ. ರಲ್ಲು ಹೃದಯ ಸ್ತಂಭನದಿಂದ ಅಕಾತ್ಮಾಗಿ ಮರಣಹೊಂದಿರುವರೆಂಬುದು ಷಾದಕರವಿದೆ. ಹೈದರಾಬಾದಿನಲ್ಲಿ ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸಿದವರಿವರು. ಸಮಾಜ ಸುಧಾರಕರು ವಿವೇಕವರ್ಧಿನಿ ವಿದ್ಯಾಸಂಸ್ಥೆಗಳಿಗೆ ರೂ. ಒಂದು ಲಕ್ಷದತ್ತಿವನ್ನಿತ್ತವರು. ಹೈದರಾಬಾದಿನಲ್ಲಿ ಕರ್ನಾಟಕ ಕುಲವನ್ನು ಸ್ಥಾಪಿಸಿದವರು.

ಕುಂದಾಪುರ

ಡಿಸ್ಟ್ರಿಕ್ಟ್ ಬೋರ್ಡು ಸರ್ಕಲ್‌ನಲ್ಲಿ ಖಾಲಿಬಿದ್ದಿರುವ ಒಂದು ಸ್ಥಾನದ ಚುನಾವಣೆಯ ಸಂಬಂಧದ ನಾಮಿನೇಷನ್ ಅರ್ಜಿಗಳು ಇಪೇ ಡಿಸೆಂಬರ ತಾ. ೧೬ರಲ್ಲಿ ಸ್ವೀಕಾರವಾಗುವುದೆಂದೂ ಅದೇ ತಾ. ೨೦ರಲ್ಲಿ ಅಪೀಲು ತನಿಖೆಯೂ, ತಾ. ೩೦ರಲ್ಲಿ ಅರ್ಹರಾದ ಉಮೇದುವಾರರ ಪಟ್ಟಿಯ ಪ್ರಕಟಣೆಯೂ ಆದೇ ತಾ. ೩೧ರಲ್ಲಿ ಚುನಾವಣೆಯೂ ತಾ. ೩೦ರಲ್ಲಿ ಫಲಿತಾಂಶ ಪ್ರಕಟಣೆಯೂ ನಡೆಯುವುದೆಂದೂ ನಮ್ಮ ಜಿಲ್ಲಾ ಜಾಯಿತ ಆಫೀಸರರು ತಿಳಿಸುತ್ತಾರೆ.

ಸ್ವದೇಶ ವಿದೇಶ

ಎಡ್ವರ್ಡ್ ಚಕ್ರವರ್ತಿಗಳು

ಪಿಂಡುಮಂಪವನ್ನು ಸಂದರ್ಶಿಸುವ ಆಲೋಚನೆ ಮಾಡಿರುವುದಕ್ಕಾಗಿ ಮೈಸರಾಯರು ಆಭಾರ ಸೂಚಿಸಿ, ಆ ಸಂದರ್ಶನವನ್ನು ತಾನು ಆತಾ ತುರಂದಿಂದ ನಿರಾಕರಿಸುತ್ತಿರುವೆನೆಂದು ಚರ್ಚಿಲ್ ಗಳಿಗೆ ತಿಳಿಬಿಟ್ಟರು ವರು ಚಕ್ರವರ್ತಿಗಳು ಆದಕ್ಕೆ ತನ್ನ ಕೃತಜ್ಞತೆ ಸೂಚಿಸಿರುವರು,

ಸೆರ್ದಾರ್ ವಲ್ಲಭಾಯಿ ಪಟೇಲರು

ಈಗ ಬೊಂಬಾಯಿಗೆ ಬಂದಿದ್ದ ಅಲ್ಲಿ ಒಂದು ಮಾರು ಇರುವರು, ಆನಂದ ಬಜಾರ ಪತ್ರಿಕೆಯವರಿಗೆ ಕೊಟ್ಟಿರುವ ಸಂದರ್ಶನದಲ್ಲಿ ಸಂಬಂಧಪಟ್ಟಿರುವರು,

ಕಾಂಗ್ರೆಸು ಮತ್ತು ನೆಹರುಲಿಸ್ಟರು

ಪಂಜಾಬು, ಸಂಯುಕ್ತ ಪ್ರಾಂತ ಮತ್ತು ಬಂಗಾಳದಲ್ಲಿ ಮುಂದಿನ ಚುನಾವಣೆಗಳನ್ನು ಕಾಂಗ್ರೆಸಿನವರು ಮತ್ತು ಕಾಂಗ್ರೆಸ್ ಸೇವಕಸಿಸ್ಟರು ಒಬ್ಬರಿಗೆ ಭಾಗವಹಿಸುವಂತೆ ಒಪ್ಪಂದವಾಗಿರುವುದು ಮಧ್ಯ ಪ್ರಾಂತ ದಲ್ಲಿಯೂ ಇಂತಹ ಒಡಂಬಡಿಕೆ ಆಗಿದ್ದರೂ, ಈಗ ಹಿಂದು ಮಹಾಸಭೆಯು ಅದೂಂದು ತಂಡದವರು ಆದಕ್ಕೆ ವಿರೋಧವಿರುವರು

ಕಾಂಗ್ರೆಸ್ ಚುನಾವಣೆಯ ಚಳವಳಿ

ಇನೇ ತಾ. ೧೯ರಲ್ಲು ಸರ್ದಾರ್ ವಲ್ಲಭಾಯಿ ಪಟೇಲರು ಬೊಂಬಾಯಿಯಲ್ಲಿ ಕಾಂಗ್ರೆಸಿನ ಪರವಾದ ಚುನಾವಣೆಯ ಚಳವಳವನ್ನಾರಂಭಿಸಿ, ಕಾಂಗ್ರೆಸಿಗಿತ್ತ ಪ್ರತಿಯೊಂದು ಓಟೂ ಸ್ವಾತಂತ್ರ್ಯಕ್ಕಾಗಿತ್ತ ಓಟು, ಕಾಂಗ್ರೆಸಿಗೆ ಪ್ರತಿಯಾಗಿ ಕೊಟ್ಟ ಪ್ರತಿಯೊಂದು ಓಟು ಈಗಣ ಬೇಜವಾಬ್ದಾರಿ ಸರಕಾರವು ಇನ್ನೂ ಇರಬೇಕೆಂದು ಕೊಡುವ ಓಟುಗಳಾವುದೆಂದು ಹೇಳಿದರು ಈ ಸಂದರ್ಭದಲ್ಲಿ ಶ್ರೀಗೆಳವಾಣ ಭೂಲಭಾಯಿ ದೇಸಾಯಿಯವರೂ ಗಂಗಾಧರ ರಾವ್ ದೇಪಾಂಡೆಯವರೂ ಎಲ್ಲರೂ ಕಾಂಗ್ರೆಸಿಗೆ ಮತಪೀಯಬೇಕೆಂದು ಕೇಳಿಕೊಂಡು ಭಾಷಣವಿತ್ತರು

ಮೇದ್ರಿದ್ ಪಟ್ಟಣಕ್ಕೆ ಬಂಡಾಯಗಾರರ ಪ್ರವೇಶ. ರಸ್ತೆಗಳಲ್ಲಿ ತೀವ್ರ ಹೋರಾಟ

ಇದೇ ತಾ ೧೮ರಲ್ಲು ಬಂಡಾಯಗಾರರ ಒಂದು ಸೈನಿಕದಳವು ಸ್ಪೈನಿನ ಮುಖ್ಯ ಪಟ್ಟಣವಾದ ಮೇದ್ರಿದಿಗೆ ಪ್ರವೇಶಿಸುವುದೆಂದು ತಿಳಿದು ಬರುತ್ತದೆ ಸ್ಪೈನಿನ ಸರಕಾರವು ಮೇದ್ರಿದಿನಲ್ಲಿ ಸೇನಾ ಗವರ್ನರರೊಬ್ಬನನ್ನು ನೇಮಿಸಿ ವೆಲೇನಿಸಿಯಕ್ಕೆ ಹೋಗಿರುವುದು ಮೇದ್ರಿದಿನ ಸುತ್ತು ವಳಯದಲ್ಲೆಲ್ಲಾ ತೀವ್ರ ಹೋರಾಟ ನಡೆದಿರುವುದು ಬ್ರಿಟಿಷ್ ರಾಯಭಾರಿ ಸಿಬಾಸಕ್ಕೆ ಸ್ತ್ರೀಯರು ಮತ್ತು ಮಕ್ಕಳು ಹಿಂಡುಗಟ್ಟಿ ಬಂಎ ಆಶ್ರಯ ಕೇಳುವ ವೃತ್ತಿಯ ಪ್ರಧಾನವಕವಿದ್ದರು ಮೇದ್ರಿದಿನಿಂದ ತಪ್ಪಿಸಿಕೊಳ್ಳಲಿಕ್ಕಿಸಿದ ಆನೇಕ ಮಂದಿ ಸರಕಾರಿ ಕಡೆಯ ಸೈನಿಕರು ತಡೆಗಟ್ಟಿಲ್ಪಟ್ಟಿರುವ ರೆಂದು ಬಂಡಾಯಗಾರರ ಕಡೆಯಿಸಿ. ಮೇದ್ರಿದಿನ ಸಿವಿಲ್ ಗಾರ್ಡರು ಸರಕಾರದ ವಿರೋಧವಾಗಿ ಪಿಂಡಾಯಬಟ್ಟಿಸಿರುವರೆಂದು ತಿಳಿದುಬರುತ್ತದೆ ಆದರೆ, ಸ್ಪೈನಿನ ಸರಕಾರದ ಕಡೆಯಿಂದ ಬಂದ ಖಾತೆರಿ ಮೇರೆಗೆ ಪೆಲ್ಲಾಲ್ಲಾ ಸಲ್ಲಾಪಾತಕಾರಿಗಳಿವೆಂದೂ, ಸರಕಾರವು ಕೆಡೆಯ ಸೈನಿಕರು ಒಂದಾಯಗಾರನ್ನು ತಡೆಗಟ್ಟುವುದೆಂದೂ ತಿಳಿಬರುತ್ತದೆ ಸರಕ್ಕಾರವಲ್ಲಿರುವ ರಾಜಧಾನಿಗೆ ತೆರಳುವಮು ಸರಕಾರ ಕೆಡೆಯ 10 ವಿಮಾನಗಳು ಪಟ್ಟಾದಲ್ಲೆಲ್ಲಾ ಸುತ್ತಾಡಿ ಬಂಡಾಯಗಾರ ವಿಮಾನಗಳನ್ನು ಎದುರಿಸುತ್ತಿರುವವು ಕೆಲವೆಡೆ ಸರಕಾರಿ ಕಡೆಯ ಸೈನಿಕರು ಬಂಡಾಯಗಾರರ ಸೇನೆಯನ್ನು ಪಿಂಬಕ್ಕೆ ಟ್ಟಿ 140 ಮಂದಿ ಮೊರಿದ್ ನಾಗರಿಕರನ್ನು ಸರೆ ಪಿಡಿದಿರುವರು. ಜನರು ಸರಕಾರಕ್ಕೆ ಬೇಕಾದ ಸಹಾಯವನ್ನೆಲ್ಲಾ ಉತ್ಸಾಹ ಪೂರ್ವಕವಾಗಿ ಕೊಡುತ್ತಿರುವರು ಸಾಂಕತ್ತಿಕ ಮತ್ತು ರಾಜಕೀಯ ವೈಷ್ಯಿಯಿಂದ ಬಾಸ್ಕೋ-ನಕ್ಕಿಂತ ವೆಲೇನಿಯವು ಒಳ್ಳೆ ಕೆಂಪ್ರವಾಗಿರುವುದರಿಂದ ಸ್ಪೇನ್ ಸರಕಾರವನ್ನು ಆಳ್ವಿಗೊಯ್ಯಲಾಗಿದೆ, ಜೀಕ ಆಪಾ ನ್ಯನನ್ನು ಕಾರ್ಯದರ್ಶಿಯೊಬ್ಬನಿಲಾಗಿನಿ, ಆದರೆ ಸಲ್ಲ ಚೆನ್ನ ಮಂದಿಯೂ ಬಂಧಾಯಗಾರರಿಗೆ ಸಿಗಬಹುತೆ ವರ್ತಿಸಿರುವುದು ಮೂಡಲಾಗಿದೆ,

ಫಾಳಿಯಲ್ಲಿ 100 ಟ್ಯಾಂಕಿಗಳೂ, ಆನೇಕ ವಿಮಾನ ತೋಪುಗಳೂ, ಸೂಪರ್ ಮಂಬಿ ದೊಂಬಿ ಸಾಮಾನುಗಳನ್ನೂ ಮಾಗಿಯಾಗಿದ್ದರು ಪವರ್ಗಿಯವು ಪ್ರತಿ ಕೊಲಾಬಿದ್ದರೂ ಸರಕಾರಿ ಕಡೆಯು ವಿಮಾನಗಳು ತೈರಿಗಳ ಮೇಲೆ ಬೋಂಬೆಸೆಯಲು ಬಹಳ ಬಾಸಿಕಾಡಿದ ಪು

ನೆಪ್ಪಿನಿಂದ ಸಶಸ್ತ್ರಮಾದಿಗೆ ಸ್ಪೈನ ಆಂತರಿಕಪಕ್ಷ ವಿ ಕೊಸೆಗೊಂಡಿತೆಂದು ತಿಳಿಬಂದಿಲ್ಲವಲ್ಲ ಕ್ಷಿಟ ನೋಯ, ಮಲಾಗ, ವೆಲ್ಸಿಮಿ ಮತ್ತು ಬಾಳಿ ಮೇನ ಮೊದಲಾದ ಸ್ಥಳಗಳು ಸರಕಾರದ ಪ್ರಬಲ ಆಶ್ರಯಗಳಾಗಿವವು ಜನರಲ್ಲಿಸ್ಸಿಮೊ ರವರು, ಸ್ಪೈನಿನ ಕೆಲವು ಭಾಗವಲ್ಲಿ ಸ್ವತಂತ್ರ ಪರ ರನ್ನೆಂದು ಸ್ಥಾಪಿಸಲ್ಪಟ್ಟಿರುವುದನ್ನು ಸಮರಾಸನೆಯೆಂಬುದನ್ನು ವಕ್ತ ಪಡಿಸಿರುವರು ಆದರಿಂದ ಅವರಿಗೆ ಇನ್ನು ಮುಂದೆ ಸರಕಾರವು ಪರವಾದ ಮುಖ ಸ್ಥಳಗಳನ್ನೆಲ್ಲಾ ಕೆಲ್ಲಿಸಲಾಗುವುದು ಜನರಲ್ ಫ್ರಾಂಕೋರವರು ಪೋರ್ಚುಗಲ್ ನೆಲ್ಲೊಡನೆಯೇ ಜರ್ಮನ್, ಇಟೆಲಿ ಮತ್ತೆ ಪೋರ್ಚುಗಲ್ ಸರಕಾರಗಳು ಅವರ ಸರಕಾರವನ್ನು ಅಂಗೀಕಾರವಾಗಿರುವುದೆಂದು ನಂಬಲಾಗಿದೆ

ದೀಪಾವಳಿ ಬಂತು ದೀಪಾವಳಿ!

ವ್ಯಾಪಾರಸ್ಥರ -----

ಹೊಸ ಲೆಕ್ಕ --- ಹೊಸ ಪ್ಯವಸ್ಥೆ --- ಹೊಸ ನಿರ್ಧಾರವ

ದೀಪಾವಳಿ

ಯಾವ ವ್ಯಾಪಾರ ವಹಿವಾಟಿಗೂ

ಜಾಹೀರಾತೇ ವಿಜಯಸಿರಿ!

ಜಾಹೀರಾತಿಗಾಗಿ ವ್ಯಯಿಸುವ ಪ್ರತಿ ಪೈಯೂ ಸಂಚಯ! ಆಮದರಿಂದ

ದಕ್ಷಿಣ ಕನ್ನಡದ ರಾಷ್ಟ್ರೀಯ, ಸರ್ವತೋಮುಖ ಪ್ರಗತಿಪರ ಪಾಗೂ

ನಿಮ್ಮೆಲ್ಲರ ಮನಮೆಚ್ಚಿನ

ನವಯುಗದಲ್ಲಿ

ಜಾಹೀರಾತನ್ನೀಯುವದು ದೀಪಾವಳಿಯ ನಿಮ್ಮ

ಹೊಸ ನಿರ್ಧಾರವಾಗಲಿ!

ಮೇದ್ರಿದ ಪಟ್ಟಣದ ರಸ್ತೆಗಳೆಲ್ಲೆಲ್ಲಾ ತೀವ್ರ ಹೋರಾಟ ನಡೆಯುತ್ತಿದೆ ಸರಕಾರಿ ಕಡೆಯ ಸೈನಿಕರು, ಫಿಯೇಟರು, ೨ರಮನೆ, ಮೂಲಾಯುವು ಗಳಿಗೆ ಸಿಡಿಮದ್ದು ಹಾಕಿ ಸ್ಫೋಟಗೊಳಿಸಿ ಪಾರಮಾಡಿರುವರೆಂದು ವರ್ತಿಬಂದಿವೆ ಸರಕಾರವು ವೆಲಸಿಂಯಕ್ಕೆ ಒಂದೊಡಸೆಯೇ ಮಂತ್ರಿ ಮಂಡಲದ ಸಭೆಯೊಂದು ನಡೆಯು ಮುಂದಿನ ಹೋರಾಟದ ಕುರಿತು ವಿಚಾರಿಸಲಾಯಿತು ಜನರಲ್ ಫೋಜಾನ್ ಎಂಬ ಸೇನಾಧಿಕಾರಿಯು ಸರಕಾರದ ಪರವಾಗಿ ಮದ್ರಿದಿನಲ್ಲಿರುವರು

ಬಂಡಾಯಗಾರರು ೨ ಘಂಟೆಗಳವರೆಗೆ ಮೇದ್ರಿದಿನ ಮೇಲೆ ಗುಂಡುಹಾರಿಸಿ ಕಾದಾಡಿದರು ಈ

ಬೊಂಬಾಯಿಯಲ್ಲಿ ಪುನ ಗಲಾಟೆ

ಇದೇ ತಾ ೧೮ಲ್ಲು ಬೊಂಬಾಯಿಯಲ್ಲಿ ಅಲ್ಲಲ್ಲಿ ಚಿಕ್ಕ ಪ್ರಮಾಣದ ಹೊಡೆದಾಟ ನಡೆಯುತ್ತಿರುವುದು ತಾ 8ನೇ ರಾತ್ರಿ ೨೭ ಮಂದಿ ದಸ್ತಗಿರಿಮಾಡಲ್ಪಟ್ಟಿರುವರು ಇಬ್ಬರು ಮುಸಲ್ಮಾನರು ಕ್ಯಾಂಥಾಕಿಯವಸ್ಥೆಯಲ್ಲಿರುವರು ರಾತ್ರಿ 10ಘಂಟೆಯನೇಲ ಚಿಮಿಗೈ ಘಂಟೆಯೊಳಗೆ ಯಾರೂ ಹೊರಗೆ ತಮಾಷೆಯಂಬ ನಿರ್ಬಂಧವು ಮುಕುಮನ್ನು ಸರಕಾರವರು ಪ್ರಕಟ ಜಾರಿಗೆ ತಂದಿರುವರು ಗಲಾಟೆಯ ಭಾಗವ ಸಂದು ಗೊಂದುಗಳಲ್ಲೆಲ್ಲಾ ಪೋಲೀಸಿಗ ಪಹರೆಯನ್ನಿರಿಸಲಾಗಿದೆ ೨ ಮಂದಿಗಿಂತ ಹೆಚ್ಚು ಮಂದಿ ರಸ್ತೆಗಳ್ಳಿ ಸೇರಲು ಪಂತೆ ೧೪ಳಿಗೆ ಸಿಕ್ಸ್ ಜಾರಿ ಮಾಡಲಾಗಿದೆ.

ತಾ ೧೮ಲ್ಲು ಮೂರಾ ಭಾಗದಷ್ಟು ೩ ಮಂದಿಗಳನ್ನೆ ಮುಸಲ್ಮಾನರು ಹೊಡೆದಿರುವರು ಅನೇಕ ಅಂಗಡಿಗಳು ಮುಚ್ಚಲ್ಪಟ್ಟಿರುವವು ಈ ಸಮಯದಲ್ಲಾ ಗುವ ಹೆಚ್ಚಿನ ನಷ್ಟ ಮಾಮಾವು ಸಿಂತುಳೋಣಿಯಿಲ್ಲ ವೆಂಬ. ಅಧಿಕಾರಿಗಳು ಗಲಾಟೆ ಸ್ಥಿತಿಯಲು ಕೂಡಾ ಕಾರಣಗಳನ್ನು ಜ್ಞಾಪಿಗೆ ತರುವ ಆಲೋಚನೆ ಮಾಡಿರುವರು

ಅಖಿಲ ಭಾರತ ಕಮಿಟಿಯವರು ಪಲ್ಲಿನ ಗಾ ವರ ದಕ್ಕೆ ಭಿನ್ನತೆಗಳ ಕುರಿತು ವಿಚಾರಿಸಲು ಬರುವ ವರೊಮ್ಮಲೆ ಕಮಿಟಿಯನ್ನು ಒಮ್ಮತಗೊಳಿಸುವ ನಿರ್ಧಾರ ನಾಡಿರುವರು ಕೆಲಸ ನಿಮಿತ್ತ ಯಿರೂಪಿಗೆ ಪ್ರಯೋಪಯಿಸುವ ಕುರಿತು ಬ್ರಿಟಿಷ್ ಸರಕಾರವ ಧೋರಣೆಯನ್ನು ಮಾರ್ಪಡಿಸಲು ಸ್ವಾ ವಿಶ್ವೆಂಯಿಂದ ಈ ಬೆಳಾ ಬಕ್ಕೆ ಕಾರಣ.

ಮೋದ್ರಿದು ಬಂಡಾಯಗಾರರ ವಶವಾಗಿಲಿಲ್ಲ

ಇನೇ ತಾ. ೪ರ ಮಾರ್ತಂಡ ತಾ ಮೋದ್ರಿದ ಪಟ್ಟಣಕ್ಕೆ ಇನ್ನೂ ಎಂದಾಯಗಾರರು ಪ್ರವೇಶಿಸಿಯಿಲ್ಲ, ಆದರ ಸುತ್ತುವರ್ತಿಲು ಘೋಷಣ ಸಮರ ನಡೆದಿರುವುದು, ಸರಕಾರಿ ಸೈನಿಕರು ಒಂಡಾಯಗಾರರ ಸೇನೆಯ ಒಂದು ಮೈಲು ಪಿಂಬಕ್ಕೆ ಟ್ಟಿ ವ್ಯಾರೆಂದು ತಿಳಿದು ಬರುತ್ತದೆ, ಈ ಹೋರಾಟದಲ್ಲಿ ೨೮ರಿಂದ 200 ಮಂದಿಯು ವರೆಗೆ ಕೊಲ್ಲಲ್ಪಟ್ಟಿದ್ದಾರೆ ಸರಕಾರದ ಕಡೆಯ ಸೈನಿಕರ ಧೈರ್ಯ ಸಾಹಸದ ಕುರಿತು ರೂಡರ್ ಪ್ರತಿನಿಧಿಯು ಮೆಚ್ಚಿಗೆ ಸೂಚಿಸಿರುವರೆ, ನಾವು ಇನ್ನೂ ಮೋದ್ರಿದಿಗೆ ಪ್ರವೇಶಿಸಿಲ್ಲವು ಮ ಬಂಡಾಯಗಾರರೇ ಒಪ್ಪುತ್ತಾರೆ, 20 ೩೦ ವಿಲಿಯ ಸೈನಿಕರು ಬಂಡಾಯಗಾರನ್ನು ಪೀರಾವಳಿಯಿಂದ ಕಾದಾಡಿ ತಡೆಗಟ್ಟಿರುವರು ಸರಕಾರದ ಕಡೆಯಿಂದ ಕಮ್ಯೂನಿಸ್ಟ್ ಸ್ತ್ರೀಯರ ಸ್ಥಾಪಿಸಲು ಪ್ರಾಣ ಸಂಗುತೊಡೆಮ ಕಾದಾಡಿ ಬಹಳ ಹಾನಿಯೊಂದಿಯಾಯಿತು,

ಮೋಟಾರುಕಾರುಗಳಿಗೆ ಬೆಂಕಿ.

ಕೊಮುವ ಕ್ರಾಂತಿಕಾರಕ ಪಂಗಡವೊಂದು ಲುಸೋರಿನಲ್ಲಿರುವುದೆಂದೂ, ಇತ್ತೀಚಿಗೆ ಕೆಲವು ದಿನಗಳಲ್ಲಿ ಈ ತಂಡದವರು 3 ಮೋಟರುಕಾರುಗಳಿಗೆ ಬೆಂಕಿ ಕೊಟ್ಟಿರುವರೆಂದೂ ತಿಳಿದು ಬರುತ್ತದೆ ಗುಪ್ತ ಪೊಲೀಸರು ಈ ಕುರಿತು ಪತ್ತೆ ನಡಿಸುತ್ತಿರುವರು,

ಮದ್ರಾಸ್ ಗವರ್ನರರು.

ಇದೇ ತಾ ೧೮ಲ್ಲು ಕಪ್ಪಲಕೋಟೆಗೆ ಹೋಗಿದ್ದಾಗ ಆಲ್ಲಿಯ ಜನ ಸ್ವೀಕರಿಗಳು ಸೇರಿ, ಕೇರಳಕ್ಕೊಂದು ಯೂನಿವರ್ಸಿಟಿ ಸ್ಥಾಪಿಸಬೇಕೆಂದು ಅವರಿಗೊಂದು ಮನವಿಯನ್ನೊಪ್ಪಿಸಿದರು

ನಮ್ಮ ಚಂದಾದಾರರಲ್ಲ

ಚಂದಾ ಹಣ ಬಾಕಿ ಇರುವ ನಮ್ಮ

ಚಂದಾದಾರರು ತಮ್ಮ

ಚಂದಾ ಹಣವನ್ನು ದಯವಿಟ್ಟು ಆದಷ್ಟು

ಬೇಗನೆ

ಪಾವತಿ ಮಾಡಬೇಕಾಗಿ ವಿನಂತಿ.

ಮೆನೇಜರ

THE UDIPI BANK, LTD.

ಚಿನ್ನ, ಆಭರಣ, ಸರಕು

ಇತ್ಯಾದಿಗಳ ಅಡವಿನ ಮೇಲೆ

ಸುಲಭ ಸಾಲಗಳು

ಯಾವಾಗಲೂ ಸಿಗುವವು.

ಎಲ್ಲಾ ತರದ ಬೇಂಕ್ ವಹಿ ವಾಟುಗಳು ನಡೆಸಲ್ಪಡುವವು

ಹೆಚ್ಚಿನ ಮಾಹಿತಿಗೆ ವಿಚಾರಿಸಿರಿ.

ದಿ ಉಡಿಪಿ ಬೇಂಕ್ ಲಿಮಿಟೆಡ್

ಉಡುಪಿ

ದಕ್ಷಿಣಕನ್ನಡ

ಕುಂದಾಪುರ

ಸಾಹಿತ್ಯೋತ್ಸವ

ನಮ್ಮ ಜಿಲ್ಲೆಯ ಮಂಗಳೂರು, ಉಡುಪಿ, ತ್ತೂರು, ಕಾಸರಗೋಡು, ಮಲ್ಲಿ ಮೊದಲಾದ ನೇಕ ಕಡೆಗಳಲ್ಲಿ ಕನ್ನಡ ಭಾಷಾಭಿಮಾನಿಗಳು ತ್ರಿಕೆ, ಸಂಘ, ಉತ್ಸವ, ಗ್ರಂಥ ಪ್ರಕಟಣೆ ಮೊದ ಾದ ರೀತಿಗಳಿಂದ ಭಾಷಾ ಸೇವೆಯನ್ನು ಮಾಡುತ್ತಿ ವರು. ನಮ್ಮ ಕುಂದಾಪುರವು ದಕ್ಷಿಣಕನ್ನಡ ಜಿಲ್ಲೆ ು ಅಚ್ಚಗನ್ನಡ ತಾಲೂಕಾಗಿರುತ್ತದೆ. ಇಲ್ಲಿಯೂ ನ್ನಡ ಭಾಷಾ ಸೇವಕರು ಬಲವರು ಇರುತ್ತಾರೆ ಲವು ಕನ್ನಡ ವಿದ್ಯಾಸಂಸ್ಥೆಗಳೂ ಇದ್ದಾವು. ಆದರೂ ಈ ುಂದಾಪುರದಲ್ಲಿ ಕರ್ನಾಟಕ ಭಾಷಾ ಸೇವೆಯನ್ನು ಾಡುವ ಒಂದು ಸಂಘವು ಈ ವರೆಗೆ ಇಲ್ಲದಿದ್ದುದು ೋಚನೀಯವಾಗಿತ್ತು. ಈ ನ್ಯೂನತೆಯನ್ನು ನಿವೃತ್ತಿ ಡಿಸಲು ಪರಿಹರಿಸಬೇಕೆಂಬ ಸದುದ್ದೇಶದಿಂದ ಇಲ್ಲಿ ಯ ಬಲವು ಭಾಷಾಭಿಮಾನಿಗಳಿಗೆ ಪ್ರೋತ್ಸಾಹ ಪ್ರಯು ಗಳಿಂದ ಕರ್ನಾಟಕ ಸಾಹಿತ್ಯ ಸಂಘವು ಕಳೆದ ರ್ಷದಲ್ಲಿ ಸ್ಥಾಪಿಸಲ್ಪಟ್ಟಿತು. ಈ ಸಂಘದ ಆಶ್ರಯ ಲ್ಲಿ ಈ ವರೆಗೆ ಹಲವು ಸಭೆಗಳು ಜರಗಿದುವು. ಈಗ ಈ ಸಂಘದ ವಾರ್ಷಿಕವರ್ಧಂತಿ ಸಮಯವಾದ ಇದೇ ನವಂಬರ ೭,೮ರಲ್ಲಿ ಒಂದು ಸಾಹಿತ್ಯೋತ್ಸವವನ್ನು ುಂಗಳೂರು ಸೆಂಟ್ ಎಲೋಸಿಯಸ್ ಕೋತೇಜನ ನಿನ್ನ ಪಂಡಿತರೂ, ಕನ್ನಡ ಸಾಹಿತ್ಯಾಭಿಮಾನ ಳೂ ಆದ ಮೆ ರಾ ನಿಜ್ಜಿನ್ ಪುಳಿಯ ತಿಮ್ಮಪ್ಪ ವರು ಅಧ್ಯಕ್ಷತೆಯಲ್ಲಿ ಜರಗಿಸಬಹುದೆಂದು ನಿಶ್ಚಯಿ ುತ್ತೇವೆ. ಕನ್ನಡ ಸಾಹಿತ್ಯಾಭಿಮಾನಿಗಳೆಲ್ಲರೂ ಈ ಮಾಂಶಭದಲ್ಲಿ ತಮ್ಮ ಆಮೂಲ್ಯ ಸೂಚನೆಗಳನ್ನು ಕೊಡುವುದಲ್ಲದೆ, ಸಭೆಗೆ ಚಿತ್ತೈಸಿ ಈ ಸಮಾರಂಭ ನ್ನು ಸಫಲಗಿಗೆಯಾಗಬೇಕಾಗಿ ಸ್ವಾರ್ಥಿಸುತ್ತೇವೆ. ಕನ್ನಡ ಕವಿಗಳೂ, ವಿಮರ್ಶಕರೂ, ಗ್ರಂಥಕರ್ತರೂ ಾಷಣಕಾರರೂ ಉತ್ಸವಕಾಲದಲ್ಲಿ ಸಹಕರಿಸಬೇಕಾಗಿ ವಿನಯ ವಿನಂತಿ.

ವಿ. ಸೂ.—ಸಭೆಯನ್ನು ಹಿಬಲಿಗುವ ಪ್ರಬಂಧ, ಕವಿತೆ ಮೊದಲಾದುವುಗಳನ್ನು ತಮಗೆ ಬೇಕಾದ ಸಮಯವನ್ನೂ ಮುಂದಾಗಿ ತಿಳಿಸಿದಲ್ಲಿ ಸಭಾಕಾರ್ಯ ವನ್ನು ವ್ಯವಸ್ಥೆಗೊಳಿಸಲಿಕ್ಕೆ ಅನುಕೂಲವಾಗುತ್ತದೆ

ಹಲ್ಸನಾಡು ರಾಮಪ್ಪಯ್ಯ, MA, BL
ಎಡ್ವೊಕೇಟ್

ಯಕ್ಷಗಾನ ಸಭೆ

ಯಕ್ಷಗಾನವು ನಮ್ಮ ಜಿಲ್ಲೆಯ ಸ್ವತಂತ್ರಪದ ಕಲೆಯು ಧಾರ್ಮಿಕ, ನೈತಿಕ, ಸಾಮಾಜಿಕ, ಪೌರಾಣಿಕ, ವಿಷಯಗಳನ್ನು ಜನರಿಗೆ ಸುಲಭ ರೀತಿಯಿಂದ ಪ್ರಚಾರಮಾಡಿ ಜನಮನೋರಂಜನೆಯನ್ನುಂಟುಮಾಡುವುದರಲ್ಲಿ ಅತ್ಯಂತ ಸಮರ್ಥವಾಗಿದೆ. ಈ ಯಕ್ಷಗಾನ ಸೊಗಡು ಕನ್ನಡ ಭಾಷಾಸ್ವಭಾವದ ಒಂದು ಉತ್ತಮ ಸಂಪತ್ತೆಯೇ ಆದರೂ ಆತಿರಯೋಕ್ತಿಯಾಗಲಾರದು. ಆದರೆ ಈ ಕಲೆಯು ಈಗ ನವನಾಗರಿಕತೆಯಿಂದುಂಟಾದ ಈ ನಾಟಕ ಸಿನೇಮಾಗಳ ಪ್ರಾಬಲ್ಯದಿಂದಲೂ ಮತ್ತು ಯಕ್ಷಗಾನದ ಒಯ್ಯಾಟಗಳಲ್ಲಿರುವ ತೆಂಕುಬಡ್ಡಿ (ದಕ್ಷಿಣಾದಿ) ಬಡಗಬಿಟ್ಟಿ (ಉತ್ತರಾದಿ) ಗಳೆಂಬ ಒಳ ಜೇದದಿಂದಲೂ, ವಿದ್ಯಾವಂತರ ಸರುತ್ಸಾಹದಿಂಪಲೂ ಪ್ರಕೃತ ಬಹಳ ಹೀನಾವಸ್ಥೆಯಲ್ಲಿರುವುದೆಂಬ ಸಂಗತಿ ತಮ್ಮೆಲ್ಲರಿಗೂ ತಿಳಿದ ವಿಷಯವಾಗಿರುತ್ತದೆಯೇ

ನಮ್ಮ ಜಿಲ್ಲೆಯ ವಿದ್ಯಾವಂತರಾದ ಯುವಕರು ಈಗಿನ ನವಯಾಗರಿಕತೆಯ ಕಾಲಕ್ಕೆ ತಕ್ಕಂತೆ ಯಕ್ಷಗಾನ ಕಲೆಯಲ್ಲಿ ಸುಧಾರಣೆಯನ್ನು ಮಾಡಿದರೆ, ಈ ಕಲೆಗೆ ಆಮೆರಿ ಕರ್ನಾಟಕದಲ್ಲಂಟೂ ಒಂದು ಯೋಗ್ಯವಾದ ಸ್ಥಾನಮಾನವು ದೊರಲೆ ತಮ್ಮೂಲಕ ಕನ್ನಡ ಭಾಷಾ ಪ್ರಚಾರದ ಸುಯೋಗ ಉಂಟಾಗುವುದಲ್ಲದೆ ಈ ಸುಧಾರಿತ ಯಕ್ಷಗಾನ ಕಲೆಯು ವಿದ್ಯಾವಂತರಿಗಾಗಿ ಉದ್ಯೋಗವಿಲ್ಲದಿರುವ ಕೆಲವರಿಗಾದರೂ ಒಂದು ಉದ್ಯೋಗವನ್ನು ದೊರಕಿಸಿ ಕೊಡುವುದರಲ್ಲಿಯೂ ಸಂದೇಹವಿಲ್ಲವು

ಅಂತಹ ಸದುದ್ದೇಶದ ಭಾವವು ಪಕ್ಕಕ್ಕೋತ್ತರ ತಾಲ್ಲೂಕುಗಳಲ್ಲಿ ಪ್ರಸಿದ್ಧ ಯಕ್ಷಗಾನಕಲಾಭಿಮಾನಿಗಳು ಒಕತ್ರ ಸೇರಿದಾಗ ಒಂದುರೀತಿಯಿಂದ ಉಂಟಾಗಿ ಯಕ್ಷಗಾನ ಕೆಯಲ್ಲಿ ಸುಧಾರಣೆಮಾಡಬೇಕೆಂಬ ವಿಷಯವು ಸರ್ವರ ಮನಸ್ಸಿನಲ್ಲಿಯೂ ಬಹಿರಂಗವಾಗಿತ್ತು. ಈ ವಿಷಯವನ್ನು ಕುರಿತು ಕುಂದಾಪುರದ ಕರ್ನಾಟಕ ಸಾಹಿತ್ಯ ಸಂಘದ ವರ್ಧಂತಿಕಾಲವಾದ ನವಂಬರ್ ತಾ. ೧೩ರಲ್ಲಿ ದಕ್ಷಿಣೋತ್ತರ ತಾಲೂಕುಗಳ ಸುಸ್ಪಸಿದ್ಧ ಅರ್ಥಗಾರರ ಕೂಡುವಿಕೆಯಿಂದ ಒಂದು ಯಕ್ಷಗಾನ ಸಭೆಯನ್ನು ಮೈಸೂರಿನ ಮಾಜಿ ಎಮ್ ಎಲ್ ಸಿ ಗಳೂ ಯಕ್ಷಮಾನ ಕಲಾಭಿಮಾನಿಗಳೂ ಆಗಿರುವ ಮ ರಾ ಹೊಸಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದು ನಿಶ್ಚಯಿಸುತ್ತೇವೆ ಈ ಸಮಾರಂಭಕ್ಕೆ ನಮ್ಮ ಜಿಲ್ಲೆಯ ಯಕ್ಷಗಾನ ಕಲಾಭಿಮಾನಿಗಳಾದ ಮಹಾನುಭಾವರೆಲ್ಲರೂ ಅವಶ್ಯವಳ್ಳೆ ಹಿತ ಸೂಚನೆಗಳನ್ನು ಕೆಲುಹಿಸುವು ದಲ್ಲದೆ ಸಭೆಗೆ ಚಿತ್ತೈಸಿ ನಮ್ಮ ಸದುದ್ದೇಶ ಸಿದ್ಧಿಯಾಗುವಂತೆ ಮಾಡುವುದರಲ್ಲಿ ಸಹಭಾಗಿಗಳಾಗಬೇಕೆಂದು ಸ್ವಾರ್ಥಿಸುತ್ತೇನೆ ಸಭೆಗೆ ದಯಮಾಡುವ ಮಹನೀಯರು ನಮಗೆ ಮುಂದಾಗಿ ತಿಳಿಸಿದ್ದಲ್ಲಿ ಆವಶ್ಯವುಳ್ಳ ಏರ್ಪಾಡುಗಳನ್ನು ಮಾಡಲುಗುವುದು. ಈ ಸಭೆಗೆ ಸ್ವೇಚ್ಛೆ ಕರಿಗೆ ಟಕೇಟಿನಿಂದ ಪ್ರವೇಶವೆಂದು ನಿಶ್ಚಯಿಸಲಾಗಿದೆ

ವರೋಡಿ ವೆಂಕಟರಮಣಯ್ಯ ಹೆಬ್ಬಾರ್, ವಕೀಲ್,
BA, BL

ವಿವಾಹ

ಕಳೆದ ತಾ 5 11-36ರಲ್ಲಿ ಇಲ್ಲಿ ಚುನಾವಣೆಯ ಸಭೆಯೊಂದು ನಡೆಯಿತು ಉಡುಪಿ ತಾಲೂಕು ಕೊಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಮಂಜುನಾಥ ಸಾಯ್ಕರ ಅಧ್ಯಕ್ಷತೆಯಲ್ಲೂಂದು ಸಾರ್ವಜನಿಕ ಸಭೆಯು ಸೇರಿತು ಮುಂದುಗಳನ್ನು ಬೇಂಡು ಮಾಡಗೊದಸೆ ಮೆವಣಿಗೆಯಿಂದ ಸ್ವಾಗತೀಕರಿಸಿದ ನಂತರ ಶ್ರೀಗಳಾದ ಜೆರೋಮ್ ಸಾಲ್ಡಾನ್ಹ, ಸಿ ಜ, ಮಾರ್ಕ್, ಕಾರ್ನಾಡು ಸದಾಶಿವರಾವ್, ಎನ್. ಎಸ್ ಕಿಲ್ಲೆ, ಯವರು ಕೊಂಗ್ರೆಸಿನ ಧ್ಯೇಯ, ಸಾಧನ, ಅದು ಪೇಶಕ್ಕೆ ಮಾಡಿರುವ ಪ್ರಯೋಜನಗಳ ಹುರಿತು ವಿವರಿಸಿ, ಎಲ್ಲರೂ ಕೊಂಗ್ರೆಸ್ ಕೆಯೆ ಕ್ಟಿಟಿಯನ್ ಉಮೇಬ್ವಾರರಾದ ಮಿ. ಪಾರ್ಕಿಯವರಿಗೇನೆ ಮತ ನೀಯಬೇಕೆಂದು ಕೇಳಿಕೊಂಡರು ಅಧ್ಯಕ್ಷರು ಆದನ್ನ ಸಮರ್ಥಿಸಿ ಭಾಷಣವಿತ್ತರು ಶ್ರೀ ಲಂಜಾರು ಮೆಹಾಬಲ ಸೆಟ್ಟಿ ಧನ್ಯವಾದಗಳಾಗಿ ಸಭಾಂತ್ಯ ವಾಯಿತು.

ಅಶ್ವತ್ಥಪುರ.

ಇದೇ ಕಳೆದ ವಿಜಯ ದಶಮಿ ತಾ 25- 0-36 ರಲ್ಲು ನಮ್ಮ ಪಾಣಿಲಾಸ ಎಲಿಮೆಂಟರಿ ಶಾಲೆಯಲ್ಲಿ ಉತ್ಸವವು ಉತ್ಸಾಹದಿಂದ ಜರಗಿತು

ಬೆಳಿಗ್ಗೆ ಗಂಟೆ ೬ಕ್ಕೆ ಸದ್ರಿ ಶಾಲೆಯಿಂದ ಪೂಸರೆ ಭಜನೆ ಮೆರವಣಿಗೆಯು ಪತ್ತಿರದಲ್ಲಿರುವ ಶ್ರೀರಾಮ ಚಂದ್ರ ದೇವಾಸ್ಥಾನವನ್ನು ಸಂದರ್ಸಿ ಅಲ್ಲಿಂದ ಸುಮಾರು ಒಂದು ಮೈಲು ದೂರವಿರುವ ಮಗಿರಾರಾ ಮನಕಡಗುತ್ತು ಸುಬ್ಬಯ್ಯ ಶೆಟ್ರ ಮನೆಗೆ ಹೋಗಿ ಅವರ ಆತಿಥ್ಯವನ್ನು ಸ್ವೀಕರಿಸಲುಯಿತ್ತು ಅಲ್ಲಿಂದ ಭಜನ ಮೆರವಣಿಗೆಯು ಪೂಸರು ಶಾಲೆಯನ್ನು ಪ್ರವೇಶಿಸಿ ಒಂದು ಚಿಕ್ಕದಾದ ಸಭೆಯು ಜರಗಿತು ಸಭೆಯ ಕನೆಯಿಂದ ಹಿರಿಯಕ್ಕ ಶಾಲ ಅಧ್ಯಾಪಕರಾದ ಶ್ರೀ. ಕೆ ನರಸಿಂಪ ಮಾಸ್ಟರರು ಮುಂದಿನ ಕಾರ್ಯಕ್ರಮವನ್ನು ಓದಿಹೇಳಿದರು. ಶಾಲೆಯ ಅಧ್ಯಾಪಕರಾದ ರಾ ಎನ್ ಕೃಷ್ಣ ಸೆಟ್ಟಿ ವಂದಿಯ ಸ್ತೋದಿಸೇಳಿದರು. ಅಧ್ಯಕ್ಷರು ಊರವರು ಶಾಲೆಯ ಮೇಲೆ ತೋರಿಸಿದ ಅಭಿಮಾನವನ್ನು ಅಲ್ಲದೆ ಮಠಕಡ ಗುತ್ತು ಸುಬ್ಬಯ್ಯ ಸೆಟ್ಟು ಕೊಟ್ಟ ಪ್ರೋತ್ಸಾಪವ ಬಗ್ಗೆ ಸಭೆಕರನ್ನು ಆಕರ್ಷಿಸುವ ತೆನ್ನ ಭಾಷಣದಲ್ಲಿ ಪ್ರಕಂಸಿಸಿದರು. ತದನಂತರ ಬಿಸದಾ ಪೂಚಿಯು ಸರುಗವಾಗಿ ನೆರವೇರಿತು. ಸದ್ರಿ ದಿನ ರಾತ್ರಿ ರಾಜಸೂಯ ಯಾಗವೆಂಬ ಪ್ರಸಂಗದ ಯಕ್ಷಗಾನ ನಾಟಕವು ಶ್ರೀ ಮಮಂಜೂರು ವಾಸು ಸೆಟ್ರ ಭಾಗವತಿಕೆಯಲ್ಲಿ ಜರಗಿತು.

ವಾಣೀ ವಿಲಾಸ ಶಾಲೆಯ ಅಧಿಕಾರಿಸ್ಥರ ಅನಗಾಹನೆ ಬಗ್ಗೆ.

ಶಾಲೆಯಲ್ಲಿ ಈಗ 110 ಮಕ್ಕಳು ಇರುವರು. ಆದರೆ ಇನ್ನು ಹಾಯರ್ ಎಲಿಮೆಂಟರಿ ಮಾಡುವ ಪ್ರಯತ್ನವು ಆರು ಮೈಲು ಸುತ್ತಲೂ ಇರುವ ಮಕ್ಕಳ ಏಳಿಗೆಗೆ ತುಂಬಾ ಅನುಕೂಲಸೆ ಸರಿ. ಆದರೆ ಈ ಬಗ್ಗೆ ಕಟ್ಟೋಣವು ವಿಸ್ತರಿಸುವ ಆಲೋಚನೆಯನ್ನು ಸಲವುಗಳು ಕೈಕೊಳ್ಳುದೇ ಇರಲು ಕಾರಣವೇನು? ಸ್ಥಳದ ಅಭಾವವೋ ಯಾ ಧನದ ಅಭಾವವೋ ತಿಳಿಯದು. ಸ್ಥಳದ ಅಭಾವವಾದ್ದೆ ಶಾಲೆಯ ಸುತ್ತುಮುತ್ತಲೂ ಸುಮಾರು 100 ಎಕ್ರೆಗಳ ಮೇಲೆ ಖುಲಗುಡ್ಡೆಯು ಮಠಕಡ ಗುತ್ತಿಗೆ ಇರುತ್ತಾ ಅವರಿಂದ ಶಾಲೆಗೆ ಬೇಕಾಗುವಷ್ಟು ೭ ಯಾ ೮ ಎಕ್ರೆ ಸ್ಥಳವನ್ನು ಶಾಲೆಯ ಬಗ್ಗೆ ಕೇಳಿ ಕಟ್ಟೋಣವನ್ನು ಮುಂದರಿಸಬಾರದೇಕೆ? ಹಣದ ಕೊರತೆ ಏನೂ ಸಂಸ್ಥೆಗೆ ಇರಲಾರದು ಇನ್ನೂರೂ ಕೊಡ ಆಸೇಕ ಮಹನೀಯರಂದ್ರೂ ಸಹಾಯ ಮಾಡುವರೆಂತ ನಂಬತಕ್ಕ ವಿಷಯ. ಇರಲಿ ಇನ್ನಾದ್ರೂ ತಕ್ಕ ರೀತಿಯಲ್ಲಿ ಕಟ್ಟೋಣವನ್ನು ವಿಸ್ತರಿಸಿದರೆ ಸುಮಾರು 150ರಿಂದ 200 ಮಕ್ಕಳ ತನಕ ಶಾಲೆಯಲ್ಲಿ ಸೇರಬಹುದೆಂತ ಈ ಗ್ರಾಮದ ಮಕ್ಕಳ ಖಾಸೇಷಮಾರಿಯಿಂದ ತಿಳಿಯಬಹುದು

ಗ್ರಾಮದ ಬಂಧು

ಉಳಿಯೂರಗೋಳಿ

ಕಾಪು ಸಂತೆಯು ಉಳಿಯೂರಗೋಳಿಗೆ ಕೇವಲ ಒಂದು ಮೈಲು ದೂರದಲ್ಲಿದೆ; ಆದ್ದೆಷ್ಟಗ ಪಂಚಾಯತ್ ಬೋರ್ಡಿನವರು ಅಭಿವೃದ್ಧಿ ಪಡಿಸಿರುವರು ಉಳಿಯೂರಗೋಳಿಗೆ ಪ್ರತ್ಯೇಕ ಪಂಚಾಯತ್ ಬೋರ್ಡು ಆದ ಮೇಲೆ, ಬೋರ್ಡಿಗೆ ಧನಸಹಾಯ ಪಡೆಯುವ ಇಗಾಧೆಯಿಂದ ಈಗ ಪಾತ್ರ ಉಂಟಾದ ಅಭಿವೃದ್ಧಿಯನ್ನು ಹೇಳಿ ಮಾಡಿದರೆ ಪಂಚಾಯತ್ ಬೋರ್ಡುಗೆ ಳಿರುವ ಪ್ರತಿಯೊಂದು ಗ್ರಾಮಕ್ಕೊಂದು ಸಂತೆ ಮಾಡಬೇಕಾಗುವದು. ಇದರಿಂದ ಕೇವಲ ಜೀವಹಾರನೆಯಲ್ಲಿರುವ ವ್ಯಾಪಾರವನ್ನು ಮಣ್ಣಾಗೂಡಿಸಿದಂತಾಗುವದು. ಎಂಬರ್ಥವುಳ್ಳ ಬಾತ್ಮಿಯೊಂದು ನಮ್ಮ ಬಳಿಗೆ ಬಂದಿರುವದು

'ಪ್ರಜಾಸೇವಾ ಸಂಘ' ಹಿಲಿಯಾಣ, ಉಡ್ಡಿ ತಾಲೂಕು.

ಮೇಲಿನ ಸಂಘದ ಕಾರ್ಯಕ್ರಮದ ಸಭೆಯು ತಾ 16-10-36ಕ್ಕೆ ಮ ರಾ. ರಾ. ಉ ಜ್ಜಿಷಿ ಹೆರಿಯಂಣ ಶೆಟ್ರ ಅಧ್ಯಕ್ಷತೆಯಲ್ಲಿ ನಡೆಯಿತು

ಉಡ್ಡಿತಾಲೂಕು ವಂದಾರು ಅವರ್ಸೆ ಹಿರಿಯಂಣ ಮತ್ತು ಕುಂದಾಪುರ ತಾಲೂಳು ಹೆಂಗ್ಳೆಳಿ ಬೆಳ್ತೆ, ಹೀಗೆ 5 ಗ್ರಾಮಗಳ ಕೂಡುವಿಕೆಯಿಂದ ಪ್ರಜಾಸೇವಾ ಸಂಘವೆಂಬ ಸಂಸ್ಥೆಯು 22 ಮಂದಿ ಯೋಗ್ಯ ಮೆಂಬರುಗಳ ಸೇರುವಿಕೆಯಿಂದ ತೆರೆಯಲ್ಪಟ್ಟಿತು.

ಸದ್ರಿ ಸಂಘಕ್ಕೆ ಮ. ರಾ. ರಾ. ವಂದಾರು ಪರೀಲರು ಮುತ್ತಯ್ಯ ಹೆಗ್ಡೆರವರನ್ನು ಅಧ್ಯಕ್ಷೆ ರಾಗಿಯೂ, ಮ. ರಾ ರಾ. ಶ್ರೀ ಶಂಕರನಾರಾಯಣದೇವಸ್ಥಾನದ ಮುಕ್ತೇಶ್ವರ ಹಿರಿಯಂಣ ಮಹಾದೇವ ಹೊಳ್ಳರನ್ನು ಕಾರ್ಯದರ್ಶಿಗಳ ನ್ನಾಗಿಯು ಮ. ರಾ. ರಾ. ಹಿಲಿಯಾಣ ವರೀಲ ಎಚ್ ಕೃಷ್ಣಯ್ಯ ಸೆಟ್ಟಿರವರನ್ನು ಉಪಾಧ್ಯಕ್ಷ ಮತ್ತು ಕೋಶಾಧ್ಯಕ್ಷರನ್ನಾಗಿಯೂ ಆರಿಸಲಾಯಿತು,

ಬಡಗುಡ್ಡೆ

ಇದೇ ತಾ. 1-11-1936ರಲ್ಲಿ ವಾಣಿವಾಚನ ಮಂದಿರದ ವರ್ಧಂತ್ಯುತ್ಸವವು ಕಟಪಾಡಿ ಬೀಡಿನ ದೊರೆ-ಬಲ್ಯಳಾದ ಶ್ರೀ ಶೀತಾರಾಮ ಬಲ್ಯಾಳರ ಅಧ್ಯಕ್ಷತೆಯಲ್ಲಿ ಜರಗಿತು. ವಕೀಲ್ ಶ್ರೀಯುತ ಕೆ ನಾರಾಯಣ ರಾಯರೇ ಇತ್ಯಾದಿ ಊರ ಪ್ರಮುಖ ಮಹನೀಯರಲ್ಲದೆ ಪರಊರ ಮಹನೀಯರೂ ನೆರೆದಿದ್ದರು. ಮಹಿಳೆಯರೂ ಅಧಿಕ ಸಂಖ್ಯೆಯಿಂದ ನೆರೆದಿದ್ದರು ಶ್ರೀ ಸುರತ್ಕಲ್ ಭೋಜರಾಯರ ಹರಿಕಥಾ ಭಾಷಣವು ಪ್ರಥಮತಃ ನಡೆಯಿತು ಶ್ರೀ ಮಂಜುನಾಥ ರಾಯರಿಂದ ವರದಿ ವಾಚನವಾಯಿತು. ಕಾಪು ಬೋರ್ಡುಶಾಲಾ ಅಧ್ಯಾಪಕರಾದ ಶ್ರೀ ಎಂ ಗೋವಿಂದ ರಾಯರು ಸಾಚನ ಮಂದಿರದ ಏಳಿಗೆಗಾಗಿ ಅರ್ಥಗರ್ಭಿತ ಭಾಷಣ ಕೊಟ್ಟರು. ಸಭಾಧ್ಯಕ್ಷರು ತನ್ನ ಆಮೋಘ ಭಾಷಣದಲ್ಲಿ ಅಧಿಕ ಸಂಖ್ಯೆಯ ವಿದ್ಯಾವಂತರಿರುವ ಈ ಊರಲ್ಲಿ ಜನಸಿ, ಮೆರೆದಾಡಲುರಂಭಿಸಿದ ಈ ಮಂದಿರದ ಏಳಿಗೆಗಾಗಿ ಈ ಊರವರಲ್ಲದೆ ನೆರೆಊರವರೂ ಸಹಕರಿಸುವುದು ಆತ್ಮರಕ್ಷಣೆಯೆಂದೂ ಗ್ರಾಪೋದ್ಧಾರಕ್ಕೆ ಇಂಥಾ ಸಂಸ್ಥೆಯು ಮೂಲಕವಾಗುವುದಾದುದರಿಂದ ಪ್ರತಿ ಊರಲ್ಲಿ ಇಂಥಾದ್ದೊಂದು ಸಂಘ ರಚನಾ ಕಾರ್ಯವು ಆಗುವುದು ಶ್ರೇಯಸ್ಕರವೆಂದೂ, ಈ ನುಂದಿರದ ಏಳಿಗೆಯ ಹಿಕ್ಕೆ ನಿಯೋಗಿ ತಾನು ಇರುತ್ತೇನೆಂದೂ ಅಭಯವಚನವನ್ನು ಇತ್ತು ತನ್ನ ಭಾಷಣವನ್ನು ಮುಗಿಸಿದರು. ತರುವಾಯ ಕಾರ್ಯದರ್ಶಿಗಳಾದ ಶ್ರೀ ವೆಂಕಟ್ರಾಮಣ ಚಾರ್ಯರು ಧನ್ಯವಾದವನ್ನರ್ಪಿಸಿದ ಮೇಲೆ ಭಜನೆಮಂಡಳಿಯವರ ಭಜನೆ ಮಂಗಲೋತ್ಸವದ ಸಮಾಪ್ತಿಯಾಗಿ ಸಭಾಕಾರ್ಯಮುಕ್ತಾಯವಾಯಿತು.

ಕಾಸೆರಗೋಡು ಬಾತ್ಮಿದಾರರೂ, ಕೈಬ್ ಅಬ್ದುಲ್ಲಾ ಗಾಂಧಿಯವರೂ

ಮೇಲಿನ ಶೀರ್ಷಿಕೆಯಿಂದ ನಡೆಯಿಗದ ತಾ. 22—10—36ನೇ ಸಂಚಿಕೆಯಲ್ಲಿ "ತಳಿ ಕೊಳ್ಳಲು ಅತಿಸುವನ" ರು ಪ್ರಕಟಿಸಿದ್ದ ಬಾತ್ಮಿಗೆ ಉತ್ತರವಾಗಿ ಶ್ರೀಯುತ ಕೆ. ಜಿ ಭಟ್ರವರು ಬಾತ್ಮಿಯೊಂದನ್ನು ಕೆಳುಹಿಸಿರುವರು. ಶ್ರೀ. ಕೇರೊಲ್ ಸಾಹೇಬರು ಹಿಂದೂ ಧರ್ಮವನ್ನು ದೂಷಿಸಿಲ್ಲ. ಕಾಂಗ್ರೆಸ್ ಪಾರ್ಟಿಯಿಂದ ಮೆಂಬರರಾಗಿ ಆರಿಸಲ್ಪಟ್ಟರೂ, ಆ ಮೇಲೆ ಸ್ವತಂತ್ರರಾಗುವದು ಕವಲ್ಲ. ಈ ರೀತಿ ಅನೇಕ ಮಂದಿ ವರ್ತಿಸಿರುವರು ಈಗಲೂ ಕಾಂಗ್ರೆಸಿನೊಳಗೆ ಅಂತಹ ಭಿನ್ನಾಭಿಪ್ರಾಯಗಳಿವೆ. ಕೇರೊಲರು 10—12 ವರ್ಷಗಳಿಂದ ನ್ಯಾಯ ನಿಷ್ಠುರಾಗಿ ಸಾರ್ವಜನಿಕ ಕೆಲಸಮಾಡುತ್ತಾ ಬಂದಿರುವರು ಎಂಬುದೇ ಶ್ರೀ ಭಟ್ಟರ ಬಾತ್ಮಿಯ ಸಾರಾಂಶ.

ಕೊಕ್ಕರ್ಣೆ

ಕೊಕ್ಕರ್ಣೆಯು ಪುರಾತನದಿಂದಲೂ ಉಡುಪಿ ತಾಲೂಕಿನಲ್ಲಿರುವ ಬಂದರುಗಳಲ್ಲೊಂದಾಗಿದೆ. ಇದು ಸೀತಾನದಿಯ ದಡವಲ್ಲಿರುತ್ತದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬಂದರುಗಳಲ್ಲಿ ಮೈಸೂರಿನ ಮಲೆನಾಡಿಗೆ ಸಂಬಂಧಪಟ್ಟಿರುವ ಬಂದರುಗಳಲ್ಲಿ ಇದು ಪ್ರಮುಖ್ಯವಾದ ಬಂದರಾಗಿರುತ್ತದೆ

ಈ ಬಂದರದ ಸಂಪೂರ್ಣ ಭೂಮ್ಯಾಲಿಕರು ಸೂರಾಲು ಆರಮನೆಯವರಾಗಿರುತ್ತಾರೆ ಆದುವರಿದ ಪುರಾತನೆದಿಂದಲೂ ಚಾರಿತ್ರಿಕ ಪ್ರಾಸ್ಯವನ್ನು ಯೊಂದಿರತಕ್ಕ ಸೂರಾಲು ಆರಮನೆಯವರು ಉದಾರತ್ವದಿಂದ ಇಲ್ಲಿಯ ವ್ಯಾಪಾರಸ್ಥರಿಗೆ ತಮ್ಮ ವ್ಯಾಪಾರಕ್ಕೆ ಬೇಕಾದ ಕಟ್ಟೋಣ ವೈಗೈರೆಗಳನ್ನು ನಿರ್ಗತಿಯಿಂದ ಕಟ್ಟಿಕೊಂಡು ನೆಲೆಯಾಗಲು ಸಾಕಷ್ಟು ಸ್ವಾತಂತ್ರ್ಯವನ್ನು ಕೊಟ್ಟು ವ್ಯಾಪಾರಸರಿಗೆ ಪ್ರೋತ್ಸಾಪಕೊಟ್ಟಲ್ಲಿ ಬಂದರವೂ ವೃದ್ಧಿಯಾಗುವುದಲ್ಲದೆ ಅವರಿಗೂ ಕೂಡಾ ಶ್ರೇಯಸ್ಸಾಗಬಹುದು

ಇತ್ತೀಚೆಗೆ ಮೋಟರು ಲೋರಿಗಳು ಓಡಿಯಾಡಲು ಹತ್ತಿದ ನಂತರ ಈ ಬಂದರದ ವ್ಯಾಪಾರಕ್ಕೆ ತೊಡಕಾಗಿರುತ್ತದೆ. ಏತಕ್ಕೆಂದರೆ ಈ ಬಂದರಕ್ಕೆ ಹತ್ತಿರವಾದ ಆಗುಂಬೆ ಗಾಟಿಯಲ್ಲಿ ಲೋರಿಗಳು ಓಡ್ಯಾಡಲು ಅನುಕೂಲತೆ ಇರುವುದಿಲ್ಲ. ಆದುದರಿಂದ ಆ ಗುಂಬೆ ಗಾಟಿಯಲ್ಲಿ ಮೋಟಾರು ಲೋರಿಗಳು ಹೋಗುವ ಏರ್ಪಾಡುಮಾಡಿದ್ದಲ್ಲಿ ಕೊಕ್ಕರ್ಣೆ ಬಂದರಕ್ಕೆ ಸಹಾಯವಾಗುವುದಲ್ಲದೆ ಆಗುಂಬೆಗಾಟಿಗೆ ಹತ್ತಿರಯಿರುವ ಮಲೆನಾಡಿನ ಪ್ರಾಂತ್ಯದಲ್ಲೆಲ್ಲಾ ವ್ಯಾಪಾರವು ವೃದ್ಧಿಯಾಗುವುದೆಂಬುದು ನಿಸ್ಸಂದೇಹ ಆದುದರಿಂದ ಮಲೆನಾಡಿನ ನನ್ನು ಬಂದುಗಳು ಈ ವಿಚಾರದಲ್ಲಿ ಮೈಸೂರು ಸರಕಾರಕ್ಕೆ ಮನವಿಮಾಡಿಕೊಂಡು ತಕ್ಕ ಏರ್ಪಾಡು ಮಾಡಿಕೊಳ್ಳಬೇಕಾಗಿ ಈ ಮೂಲಕ ವಿನಂತಿ ಮಾಡಿಕೊಳ್ಳಲಾಗಿದೆ

ಕೊಕ್ಕರ್ಣೆಯಿಂದ ಬೇಕಾದಷ್ಟು ಮಾರ್ಗವಾಗಿ ಕುಂಜಾಲಿಗೆ ರಸ್ತೆ ಮಾಡಬೇಕೆಂಬ ಯೋಚನೆಯನ್ನು ಇನ್ನಿಯ ಹೋರು ಮಾಡಿ ಅಲ್ಲಲ್ಲಿ ಅಲ್ಪ ಸ್ವಲ್ಪ ರಸ್ತೆಯನ್ನು ಕೆತ್ತಿ ನಿರುವಾಗ ದಯೂಳುಗಳಾದ ಸರಕಾರದವರು ಸದ್ರಿ ರಸ್ತೆಯನ್ನು ವೃದ್ಧಿಪಡಿಸಲು ನಿಶ್ಚೈಸಿದ್ದು ಶ್ಲಾಘನೀಯವೇ ಸರಿ ಸದ್ರಿ ರಸ್ತೆಯು ಕೊಕ್ಕರ್ಣೆ ಪೇಟೆಯ ಮಧ್ಯದಿಂದಲೇ ಹಾದು ಹೋಗುವುದು ಉತ್ತ

ನಾರದನ ತಂಬೂರಿ

ಮುಳುಗದೆ ಮಾಣದು ಜಾತಿಯ ಸ್ವಾರ್ಥವು। ಜನ ಜಾಗ್ರತಿ ನೆರೆಗೆ ॥ ಧುಂಯಿ, ಧುಂಯಿ, ನರನಾರಾಯಣ! ನರನಾರಾಯಣ! ಶುಭವಾಗಲಿ ಮಾನವರೆ! ಹಿಂದಿನ ಕಾಲದಲ್ಲಿ ಜಗಳಾಡುವದನ್ನು ಕಂಡರೆ ಪಾಯಸವುಂಡಷ್ಟು ತಂಪು ನನಗೆ! ಆದರೆ ಈ ಯುಗದಲ್ಲಿ ಅದನ್ನು ಕಂಡು ಸಾಕಾಗಿ ಒಕರಿಕೆಗೆ ಪ್ರಾರಂಭವಾಗಿದೆ ನೋಡಿ ನಾರದ ನಲ್ಲ.ಜಗಳಪ್ರಿಯ ಬ್ರಹ್ಮರಾಕ್ಷಸನಿಗಾದರೂ ಸಾಕು ಸಾಕಾಗಬೇಕು—ನಿಮ್ಮುಲ್ಲಿ ಕೆಲವರ ಯುದ್ಧ ಮಾಡುವ ರೀತಿಯನ್ನು ಕಂಡು! ಸಾಕಪ್ಪಾ ಸಾಕು! ನರನಾರಾಯಣ! ಧುಂಯಿಾ। ಹೊಟ್ಟೆಯು ಡಬಡಬನುಬ್ಬರಿಸುತಲಿದೆ। ಜಗಳದುಸಿರ ಸೇದಿ ॥ ಧುಂಯಿಾ, ನರನಾರಾಯಣ! ನರನಾರಾಯಣ!!

●

ಕೊಂಗ್ರೆಸ್ ಉಮೇದ್ವಾರಿಗಳು ಇಂಥ ವರೇ ಎಂದು ಈ ವರೆಗೂ ನಿಶ್ಚಯವಾಗಿಲಿಲ್ಲ ಕೊಂಗ್ರೆಸಿನವರು ಇಷ್ಟು ತಡಮಾಡಿದರೂ ಗುಣುಗುಟ್ಟುವವರು ಇಷ್ಟು ತಡ ಮಾಡುತ್ತಾರೆಂದು ನೆನಸಬೇಡಿ. "ನಮ್ಮ ಜಾತಿಯವರು ಕೊಂಗ್ರೆಸಿನವರಾಗಿ ನಿಂತರೆ ಕೊಂಗ್ರೆಸ್ ಆದೀತು. ಇಲ್ಲವಾದರೆ . . ." ನರನಾರಾಯಣ! ಎಂತಹ ಉದಾರ ಶರ್ತ ನೋಡಿ—"ಕೊಂಗ್ರೆಸು ನಮ್ಮ ಜಾತಿಗೆ ಮತಾಂತರ ಹೊಂದಬೇಕು; ಆದರೆ ಹೆಸರು ಬದಲಾಯಿಸಬೇಕೆಂಬ ಅಗತ್ಯವಿಲ್ಲ" ಸಿರಿಯಾಯತಿಯನ್ನು ಬೇರೆ ಯಾರಿಗೂ ನೂವ ಮತವೂ ಕೊಟ್ಟಿಲ್ಲ. ಧುಂಯಿ, ಧುಂಯಿ, ಆಲಯವು ಬಯಲೊಳಗೊ। ಬಯಲು ಆಲಯದೊಳಗೊ? । ನಾವು ಕೊಂಗ್ರೆಸಿನೊಳಗೊ । ಕಾಂಗ್ರೇಸು ನಮ್ಮೊಳಗೊ? ॥ ಧುಂಯಿಾ, ನರನಾರಾಯಣ! ನರನಾರಾಯಣ!!

●

'ಕೊಂಗ್ರೆಸೆಂದರೆ ನಮ್ಮ ಸಂಸ್ಥೆಯೆಂದು ನಾರುತ್ತೀರಲ್ಲಾ—ನಮ್ಮವರನ್ನೇ ಉಮೇದ್ವಾರಿಗಳಾಗಿ ಮಾಡಿಬಿಟ್ಟರೆ ಆ ಮಾತು ನಿತ್ಯವಾದಂತಾಯಿತು'—ಎಂದು ಕೆಲವರ ನಾವನೆಯ ಅರ್ಥ. ನರನಾರಾಯಣ! ಂದಿನ ದ್ವಾಪರ ಯುಗದಲ್ಲಿ ಕೃಷ್ಣನು ಅರ್ಜುನನಿಗೆ ಗೀತೋಪದೇಶನನ್ನು ಮಾಡುವಾಗ ನಾನೂ ಮರೆಯಲ್ಲಿ ನಿಂತು ಕೇಳಿದ್ದೀನಯ್ಯ! "ಓ, ಅರ್ಜುನಾ! ಎಲ್ಲವನ್ನೂ ನನೆಂದೇ ತಿಳಿ; ಎಲ್ಲವನ್ನೂ ನನಗೇನೇ ಸಮರ್ಪಿಸು" ಎಂದಿದ್ದ. ಆಗ ನಾನು ಯೋಚಿಸಿದ್ದೆ, ಎಲ್ಲವನ್ನೂ ಆ ಒಬ್ಬ ಕೃಷ್ಣನಿಗೆ ಸಮರ್ಪಿಸಿದರೆ ಅವನಿಟ್ಟುಕೊಳ್ಳುವನೆಲ್ಲಿ? ಎಂದು. ಈ ಯುಗವಲ್ಲಿ ಆ ಆಡಚಣೆಯೂ ದೂರವಾಗಿದಪ್ಪಾ! ಆ ಕೃಷ್ಣರ ಜಾಜಾತಿಗಳೇ ಉಂಟಾಗಿ—"ಎಲ್ಲವನ್ನೂ ನಮಗೆ ಸಮರ್ಪಿಸಿ" ಎಂದು ಹೇಳತೊಡಗಿವೆ. ಎಂತಹ ಪ್ರಗತಿ! ಧುಂಯಿಾ, ಜಾತಿಯ ಮೊಗದಲಿ ಕಣ್ಣುಗಳಿಲ್ಲವು। ಕಂಡರೆ ನಮ್ಮನು ಕಾಣವವು ॥ ಧುಂಯಿಾ, ನರನಾರಾಯಣ!

●

ಕೊಂಗ್ರೆಸಿನ ತತ್ವವುಂಟಲ್ಲಾ—ಅದನ್ನು ತಿಳಿಯದವರು ಯೋಕರಲ್ಲ ಯಾರೂ ಇಲ್ಲ ನೋಡಿ ಈ ಸಂಗತಿ ಈಗ ತಾನೇ ತಿಳಿದುಬಂತು ಕೊಂಗ್ರೆಸಿನವರು ರಾಮಣ್ಣನನ್ನು ನೇಮಿಸಿ ದೊಮಣ್ಣನನ್ನು ಹಿಂದೆ ಹಾಕಿದರು—ಎಂಬುದೊಂದು ನ್ಯೂಸ್ ಪೇಪ್ರನ್ನೆ ಹುಟ್ಟಿದ್ದೇ ತಡ—ದೊಮಣ್ಣನ ಕಡೆಯವರು ಕೊಂಗ್ರೆಸಿನ ತತ್ವಗಳನ್ನು ಎರಡೂ ಕೈಗಳಿಂದ ಎತ್ತಿ ತೋರಿಸಿ "ಇದು ಕೊಂಗ್ರೆಸ್ ತತ್ವಕ್ಕೆ ವಿರುದ್ಧ ಎನ್ನಹತ್ತಿದ್ದಾರೆ ನಾಳೆ ರಾಮಣ್ಣನನ್ನು ಹಿಂದೆ ಹಾಕಿ ದೊಮಣ್ಣನನ್ನು ಮುಂಪೆ ಹಾಕಿತೆನ್ನಿ—ಆಗ ರಾಮಣ್ಣನ ಕಡೆಯವರೆ ಕೊಂಗ್ರೆಸ್ ಪಾಂಡಿತ್ಯವನ್ನು ಕೇಳಿ ಕೇಳಿ ಕೆವಿಮುಚ್ಚಿಕೊಳ್ಳುವ ಭಾಗ್ಯ ಬರಬಹುದೋ ಏನೋ! ಅಂತೂ ಹಿಂದೆ ಬಿದ್ದವರಿಗೆಲ್ಲಾ ಕೊಂಗ್ರೆಸ್ ತತ್ವವು ಬಾಯಿಪಠಾರಿಬರುತ್ತದೆ ನೋಡಿ. ಪಂಡಿತ ಜವಾಹರಲಾಲರು "ರಾಷ್ಟ್ರಸಭೆಯು ಹಿಂಪುಳಿದವರಿಗಾಗಿ ಇದೆ" ಎನ್ನುವದು ಇದಕ್ಕೆಂತಾಗಿಯೆ! ನರನಾರಾಯಣ! ನಿನೆಮದ ತೆರದಲಿ ರಾಷ್ಟ್ರದ ತತ್ವವು! । ಹಿಂದಿದ್ದವರಿಗೆ ಚಂದವದು ॥ ಧುಂಯಿಾ ನರನಾರಾಯಣ! ನರನಾರಾಯಣ!!

●

"ನಮ್ಮ ಜಿಲ್ಲೆಯಲ್ಲಿ ಕಾಂಗ್ರೆಸು ಸಂಸ್ಥೆಯಿದೆ. ಕೊಂಗ್ರೆಸ್ ತತ್ವಗಳ ಉತ್ತರಕ್ರಿಯೆಯಾಗಿದೆ' ಎಂದು ನನ್ನ ಜಾತಿಯವರೊಬ್ಬರು ಬರೆಯುತ್ತಾರೆ ಮಾನವರೆ! ಇದನ್ನು ಕಂಡು ಗಾಬರಿಯಾಗಿ ನಾನು ದೇವಲೋಕಕ್ಕೆ ಹೋಗಿ ಉತ್ತರಕ್ರಿಯೆ ಮಾಡಿಸಿಕೊಂಡ ತತ್ವಗಳು ಅಲ್ಲಿರುವಪ್ಪೋ ಎಂಬು ಹುಡುಕಿದೆ ನೋಡಿ. ಅಲ್ಲಿ ಎಷ್ಟು ಹುಡುಕಿದರೂ ಸಿಕ್ಕದೆ ಆ ತತ್ವಗಳು ಇಲ್ಲಿಯೇ ನೆಲೆನಿಂತದ್ದು ಕಂಡುಬಂತಯ್ಯ. ಈಗ ಮೇಲಿನ ಮಾತುಗಳನ್ನು ಹೀಗೆ ತಿದ್ದಿ ಓದಿ "ಇಲ್ಲಿ ಕೊಂಗ್ರೆಸ್ ತತ್ವಗಳು ಬದುಕಿ ಇವೆ. ಜತೆಯಲ್ಲೇ ಆ ತತ್ವಗಳ ಉತ್ತರಕ್ರಿಯೆಯಾಗಿದೆ ಎಂದು ಹೇಳುವವರೂ ಬದುಕಿಕೊಂಡೇ ಇದ್ದಾರೆ" ನರನಾರಾಯಣ! ಧುಂಯಿಾ, ಅಳಿಯವ ತತ್ವಗಳುಳಿದೇ ಇರುವವು । ಜಾತಿಯ ಭೂತವು ಗುಡುಗುತಿದೆ ॥ ಧುಂಯಿಾ, ನರನಾರಾಯಣ!

●

"ಕಾಂಗ್ರೆಸು ದೊಡ್ಡದಯ್ಯಾ; ಆದರೆ ಈ ಕಾಂಗ್ರೆಸಿನವರಿದ್ದಾರಲ್ಲ— ಅವರೆಲ್ಲಾ ಕೆಟ್ಟವರು" ಎಂಬ ಇನ್ನೊಂದು ಜಾತಿಯೂ ನಮ್ಮಲ್ಲಿದೆ ನರನಾರಾಯಣ! ಕಾಂಗ್ರೆಸೆಂದರೆ ಗಾಳಿ, ನೀರು, ಬೆಂಕಿಯಂಗೆತೆ ನಿಮ್ಮನ್ನು ಕೇಳಬೇನೆ ಹುಟ್ಟಿಬಂದುದೇನೂ ಅಲ್ಲವಯ್ಯ! ಅದು ಕೆಲಸಗಾರರಿಂದಲೇ ಹುಟ್ಟಿ ಬಳೆದ ಸಂಸ್ಥೆ. "ಕೊಂಗ್ರೆಸು ಸನ್ಯಾಣಿ, ಕೆಲಸಗಾರರು ದುರ್ಗುಣಿಗಳೆ"ಂದರೆ ಹೇಗಾಗುತ್ತದೆ ಮಾನವರೆ! ನಮ್ಮ ಬ್ರಹ್ಮ ವಿಷ್ಣು, ಮಹೇಶ್ವರರಂತೆ ಕೊಂಗ್ರೆಸಿಗೂ ಮಾಯಾರೂಪದಿಂದ ಇರಲಿಶಕ್ತಿಗುತ್ತದೆಯೆ? ನರನಾರಾಯಣ! ಧುಂಯಿಾ, ಹ್ಯೇಯವೆದೆ ನೆಟ್ಟರುವ ದೃಷ್ಟಿಯನು ಬದಿಗೆಳೆಮ। ಸಿಕ್ಕಲ್ಲಿ ಕೆಡವಿದರೆ ಕೊಳೆ ತುಂಬದೆ? ॥ ನರನಾರಾಯಣ! ನರನಾರಾಯಣ!!

●

ಉಡುಪಿಯವರೆ!
ನೀವು ಕೆಡಬಾರದೆಂದಿದ್ದರೆ, ಇದನ್ನೋದಿ ವಿಚಾರಿಸಿರಿ!

ಉಡುಪಿಯ ಪಟ್ಟಣಿಗರಲ್ಲಿ ಕೆಲವರು ಉಡುಪಿಯಲ್ಲೊಂದು ಕೊಲೇಜು ತೆರೆಯಬೇಕೆಂದು ಮಂಗಳೂರಿನ ಬೆರೋಪರಿಗೆ ಬಿನ್ನಪ ಪತ್ರವನ್ನು ಬರೆದರಂತೆ ಉಡುಪಿಯು ಬೋರ್ಡ್ ಹೈಸ್ಕೂಲನ್ನು ತನಗೆ ಬಿಟ್ಟು ಕೊಟ್ಟರೆ ಕೊಲೇಜು ತೆರೆಯಲಾಗುವುದೆಂದು ಬಿರೋಪರವರು ಪ್ರತ್ಯುತ್ತರವಿತ್ತರಂತೆ. ಈಗ ಆ ಹೈಸ್ಕೂಲನ್ನು ಬೆರೋಪರಿಗೆ ಬಿಟ್ಟುಕೊಡಿರೆಂದು ಡಿ ಬೋರ್ಡಿಗೆ ಉಡುಪಿಯ ಕೆಲವರು ಮನವಿನೂಡಿಕೊಳ್ಳಿಪಡರಲ್ಲಿದ್ದಾರಂತೆ ಇಂತಹ ಬಿನ್ನಪ ಪತ್ರ ಮನವಿ ಮುಂತಾದುವುಗಳಿಗೆ ನಹಿ ಹಾಕಿವರು ಯಾ ಇನ್ನು ಸಹಿ ಹಾಕುವವರು ದಯವಿಟ್ಟು ಈ ಕೆಳಗಿನ ವಿಷಯಗಳನ್ನು ಚೆನ್ನಾಗಿ ವಿಚಾರಮಾಡಬೇಕಾಗಿಯೂ, ಯಬೇಕೆ ಒಂದು ಮನವಿಯನ್ನು ಬರೆಯಿಸಿ ತಂದುಪಕ್ಕೆ ಕೆಲಸದ ಅವಸರದಿಂದ ಏನೋ ಸಹಿ ಹಾಕಿದೆನೆಂದು ಹೇಳುತ್ತ ಅವಸರದಲ್ಲಿ ವಿಚಾರಗೆಟ್ಟು ಮಾಡಿಸುದಕ್ಕೆ ವಿರಾಮದಲ್ಲಿ ಪಶ್ಚಾತ್ತಾಪ ಪಡುವಂತೆ ಮಾಡಿಕೊಳ್ಳಬಾರದಾಗಿ ಊರವರ್ತ ನನ್ನ ವಿನಂತಿ

ಮೊದಲಾಗಿ ಕೋಲೇಜನ್ನು ತೆರೆಯಬೇಕಾದರೆ ಬೋರ್ಡ್ ಹೈಸ್ಕೂಲನ್ನು ಕೊಡಿರೆಂದು ಬೆರೋಪರು ಕೇಳುವುದರ ಉದ್ದೇಶವೇನು? ಅದು ಅವರಿಗೆ ಏಕೆ ಬೇಕು? ಆದರಿಂದ ಕೊಲೇಜು ತೆರೆಯಲಿಕ್ಕೆ ಯಾವ ಪ್ರಯೋಜನ ನಿಕ್ಕುತ್ತವೆ ಇದನ್ನು ವಿಚಾರಿಸೋಣ, ಬೋರ್ಡ್ ಹೈಸ್ಕೂಲನ್ನು ಬೆರೋಪರಿಗೆ ಒಪ್ಪಿಸಿದ್ದರೂ ಆದರಿಂದ S S L C. ಪಾಸಾದವರಲ್ಲಿ ಕೋಲೇಜು ವಿದ್ಯಾಭ್ಯಾಸ ಮಾಡಬಹುದೆಂದಿದ್ದವರು ಸಹಜವಾಗಿ ಆಪರಿಯವ ಕೊಲೇಜಿಗೆ ಹೋಗುತ್ತಾರಲ್ಲದೆ ಊರಲ್ಲಿರುವ ಕೊಲೇಜು ಬಿಟ್ಟು ಪರಪುರಿಗೆ ಯೋಗಲಾರಪ್ಪೆ? ಎಂದ ಮೇಲೆ ಬೋರ್ಡ್ ಹೈಸ್ಕೂಲು ತನ್ನ ವರ ಬಾರನಿದ್ದರೆ ತಾನು ತೆರೆಯುವ ಕೋಲಜಿನ ವಿದ್ಯಾರ್ಥಿಗಳ ಸಂಖ್ಯೆಗೆ ಬಾಧೆ ತಟ್ಟುತ್ತದೆಂದೂ ಬೆರೋಪರು ಯೋಚಿಸಲು ಕಾರಣವಿಲ್ಲ. ಕೊಲೇಜಿಗೊಂದು ಹೈಸ್ಕೂಲು ಕೂಡಿ ಕೊಂಡಿರಬೇಕೆಂಬ ನಿಯಮವೇನೂ ಇಲ್ಲ ಕೊಲೇಜು ಕ್ಲಾಸುಗಳನ್ನೇ ತೆರೆದರಾಯಿತು ಇನ್ನು ಕೋಲೇಜು ತೆರೆಯಲಿಕ್ಕೆ ಬೇಕಾಗುವ ಕಟ್ಟೋಣಗಳು ಲೆಕ್ಚೋರರುಗಿ ಲ್ಯಾಬ್ರೆಿ ಫ್ರೀ ಗ್ರೌಂಡ್ ಮುಂತಾದ ಅತ್ಯಾವಶ್ಯಕ ಸಾಧನೋಪಕರಣಗಳೆಲ್ಲ ಬೋರ್ಡ್ ಹೈಸ್ಕೂಲಿನಲ್ಲಿದೆಯೆಂದೂ ಅಮ ಬೊರೆರೆ ತನ್ನ ಕಾರ್ಯವು ಸಲಭವೂ ಸುಗಮವು ಆಗುವುದೆಂದೂ ಹೇಳಲಿಕ್ಕೂ ಕಾರಣವಿಲ್ಲ. ಏಕಂದರೆ ಅಂತಹದೇನೂ ಬೋರ್ಡ್ ಹೈಸ್ಕೂಲಿನಲ್ಲಿ ಇಲ್ಲ ಇದ್ದೂ ಆಲ್ಪ ಸ್ವಲ್ಪ. ದಿನೇ ದಿನೇ ವೃದ್ಧಿಯಾಗುತ್ತಲಿರುವ ಆದಕ್ಕೇ ಸಾಲದೆ ಸೋಮುತ್ತದೆ. ಅದು ಹೀಗಿರುತ್ತ ಬೋರ್ಡ್ ಹೈಸ್ಕೂಲು ಕೊಂಚವಿತ ಪೂರ್ತಿಕೆಗೆ ಯಾವ ರೀತಿಯಲ್ಲಿಯೂ ಸಹಾಯವಾಗಲಾರದು ಬದಲಾಗಿ ಆಸ್ತಿಯ ಬೆರೋಪರು ಸಹಿಸಿಕೊಂಡರೆ ಅವರಿಗೆ ಕಷ್ಟನಷ್ಟಗಳು ಹೆಚ್ಚು ಈಗಾಗಲೆ ಅದಕ್ಕೆ ನಾಲ್ಕತ್ತು ಸಾವಿರ ವೆಚ್ಚದ ಕಟ್ಟಡದ ಯೋಜನೆಯಲ್ಲಿ ಬರೆ ಎಂದು ಸಾವಿರ ವೆಚ್ಚದ ಭಾಗಮಾತ್ರ ಮುಗಿದಿದೆಯಷ್ಟೆ.' ಉಳಿದಿರುವ ಭಾಗವನ್ನು ವಿಶೇಷ ಕಟ್ಟಿಸಿ ಆವಶ್ಯಕತೆನು ಜರ್ಜರ ಹೈಸ್ಕೂಲನ್ನಾಗಿ ಮಾಡಲಿಕ್ಕಿರುವರೆ? ಹಾಗಿದ್ದರೆ ಆದದ್ದೆಲ್ಲಾ ಉಪಯೋಗಿಸಿ ಆದರ್ಶ ಕೋಲೇಜನ್ನು ತೆರೆಯಲಿಕ್ಕೆ ಮೊದಲೇ ಕೆರೆಯಬಾರದೇಕೆ? ಅಥವಾ ಕೋಲೇಜನ್ನಲ್ಲದೆ ಹೈಸ್ಕೂಲನ್ನೂ ಹೀಗಿಲ್ಲವೆಂಬಂತೆ ಮಾಡುವಷ್ಟು ಧನ ಸಂಪತ್ತು ಬಿರೋಪರಲ್ಲಿದ್ದರೆ ತಮ್ಮವರನ್ನೆ ಆಗಿರುವ ಕಲ್ಯಾಣಪುರ ಹೈಸ್ಕೂಲಿಗೆ ಅದನ್ನು ವಿಂಡೋಗಿಸಿ ಆದನ್ನೆ ಕೊಲೇಜಾಗಿ ಏಕೆ ಮಾರ್ಪಡಿಸಬಾರದು? ಅಲ್ಲಿ ಕೋಲೇಜುಮಾಡಿದರೆ ಉಡುಪಿಯವರಿಗೇನೂ ದೂರ ವಾಗದು ಕುಂದಾಪುರದವರಿಗೂ ಮಂಗಳೂರಿಗಿಂತ ಪತ್ತಿರವೆ ಮೇಲಾಗಿ ವಿದ್ಯಾಭ್ಯಾಸಕ್ಕೆ ಹೇಳಿದ ರಾಂತ ವಾತಾವರಣವಿದೆ ಅಲ್ಲಿ' ಹಿಂದುಸ್ಥಾನದಲ್ಲಿ ಕೆಥೊಲಿಕ್ ಜನ ಸಂಖ್ಯೆಗೆ ದ್ವಿತೀಯಸ್ಥಾನವನ್ನೆ ಪಡೆದ ಪ್ರಾಂತ್ಯವದು ಕೆಥೋಲಿಕ್ ನೆಲರುಗಳಲ್ಲಿ ಮಂಗಳೂರು ಬಿಟ್ಟರೆ ಕಲ್ಯಾಣಪುರ ಎಂದಿರುವಾಗ ಅಲ್ಲೊಂದು ಕೋಲೇಜನ್ನು ಸ್ಥಾಪಿಸಿ ಎಲೆಪತ ತನ್ನ ಸಮಾಜಕ್ಕೂ ಉಡುಪಿ, ಕಾರ್ಕಳ, ಕುಂದಾಪುರ, ಇತರ ಸರ್ವರಿಗೂ ಉಪಕಾರವಾಗುವ ಯೋಚನೆಯನ್ನು ಬಿರೋಪರು ಬಿಟ್ಟು ಉಡುಪಿ ಬೋರ್ಡು ಹೈಸ್ಕೂಲಿಗೆ ಕಣ್ಣಿಟ್ಟಿರುವುದರ ಮರ್ಮವಾದರೂ ಏನು? ಉಡುಪಿ ಬೋರ್ಡ ಹೈಸ್ಕೂಲಿಗೂ ತಾನು ತೆರೆಬಲಿರುವ ಕೋಲೇಜಿಗೂ ಏನು ಸಕಟ ಸಂಬಂಧವಿದೆಯೆಂದೂ ಅವಕೆ ತನಗೆ ಬೇಕೆಂದೂ, ಬಿರೋಪರಾದರೂ ಯಾವುದಿದೂ ಕಷ್ಟದ ಸ್ಥಳೀಯ ಪತ್ರಿಕೆಗಳ ಮೂಲಕ ಸ್ಪಷ್ಟವಾಗಿ ತಿಳಿಸಲು ಸಮರ್ಥರಿದ್ದಾರೆಯೆ? ಇಲ್ಲಾ ಪಟ್ಟಣಿಗರಾದ ನಾವು ಹೀಗೆ ತಿಳಿದರೆ ತಪ್ಪಾದಿತೆ? ಮಿಕ್ಕೆನೆರೆ ಸಂಸ್ಥೆಗಳ ಅರ್ಧಿಕ ಸ್ಥಿತಿಯು ಕೆದುತ್ತ ಬರುತ್ತಿರುವ ಈ ಕಾಲದಲ್ಲಿ, ಉಡುಪಿಯ ಮಿಡಲ್ ಹೈಸ್ಕೂಲು ಎಸ್ಟಬ್ಲಿಷ್ಡ ಸೀರಿನಲ್ಲಿದೆಯೊ! ಇಂತಹ ಸಂದರ್ಭದಲ್ಲಿ ದಿನ, ದಿನ ಅಭಿವೃದ್ಧಿಹೊಂದುವ ಬೋರ್ಡ್ ಹೈಸ್ಕೂಲನ್ನು ತಾನು ಹಿಡಿಯ ಬಿಟ್ಟರೆ ಆಲಾನುಭಾಗದಲ್ಲಿ ತನ್ನ ವಿದ್ಯಾಭ್ಯಾಸದ ಹಾಗು ವಿದ್ಯ ಸಂಸ್ಥೆಗಳ ಪಾಲ್ಯಬಲ್ಯದಿಂದ ಉಡುಪಿಯೆಂಬರೆ ಬಿರೋಪರು, ಬಿರೋಪರೆಂದರೆ ಉಡುಪಿ ಎಂದು ವಿದ್ಯೆಯ ಹಂಗಿಗಾಗಿ ದಾಕ್ಷಿಣ್ಯದ ಕಟ್ಟಗೆ ಸಿಕ್ಕಿದ ಉಡುಪಿಯವರನ್ನು ಕುಣಿಸಬೇಕೆಂದೋ ಉಡುಪಿಯವರೆ, ನೀವೇನು ಮಾಗುತ್ತಿರುವಿರೆಂದು ಯೋಚಿಸಿರಿ' ಯಾವುದಾದರೊಂದು ಜಾತಿ, ಸಂಸ್ಥೆಗಳ ಪ್ರತಿಷ್ಠೆಗೂ, ಕಟ್ಟು ಕಟ್ಟಳೆಗಳಿಗೂ, ವರ್ಚಸ್ಸಿಗೂ ಹಂಗಿಗೂ ಒಳಗಾಗಿರದ (Public School) ಸರ್ವಜನಿಕ ಶಾಲೆಯಾಗಿರುವ ನಮ್ಮ ಶಾಲೆಯಂದು ಹೆಮ್ಮೆಯಿಂದ ತಲೆಯೆತ್ತಿ ಹೇಳಬಯಸುವ, ಉಡುಪಿ ಬೋರ್ಡ್ ಹೈಸ್ಕೂಲನ್ನು ಅಳಿಸುವ ಮೊದಲು ಒಂದಲ್ಲ, ನೂರುಸಲ ಯೋಚಿಸಿರಿ' ಇನ್ನೊಂದು ಶಾಲೆಯು ಬೇಕೆಂದು ನಮ್ಮ ಹಿರಿಯರು ಎಪ್ಪೊತ್ತೆ ವರ್ಷಗಳಿಂದ ಪ್ರಯತ್ನಪಟ್ಟ ಸಕಾರರಕ್ಕೆ ಮೊರೆಯಿಟ್ಟು, ಕಾಡಿ ಬೇಡಿ, ಮನ್ನು ಕೊಡಿಸಿ ಪಾಕಿ ಆವಿಶ್ರಾಂತವಾಗಿ ದುಡಿದುದರ ಫಲವಾಗಿ ಇದು ನಮಗೆ ದೊರೆತು ನಮ್ಮದಾಗಿ ಮೆರೆಯುತ್ತಿರುವುದನ್ನು ಅಳಸುವಿರಾ? ಅಳಿ ಮುಂದೆ ಕೆಥೋಲಿಕ್ ಗುರುಗಳಾದುವ ಶಿಕ್ಷೆಯ ಬಾಗಿಲಲ್ಲಿ ನಿಂತು ವಿದ್ಯೆಗಾಗಿ ದೇಹೀ ಎನ್ನುವಿರಾ? ಮಂಗಳೂರಿಲ್ಲುದರೆ ಬೇರೆ ಹೈಸ್ಕೂಲುಗಳಿವೆ, ಕೋಲೇಜು ಇದೆ' ಎಮಿನೆಂಗದಿಗಳಿಗೆ ಮನವಿ ಯಾರ ಬೇಳೆಯೂ ಬೇಯುವುದಿಲ್ಲ

ಆದರೆ ಉಡುಪಿಯ ಪರಿಸ್ಥಿತಿಯು ಹಾಗೆ ಬರಲಾದು ಮುಂದೆ ಒಬ್ಬರದೇ ಹೈಸ್ಕೂಲು ಆವರದೇ ಕೋಲೇಜು ಅವರು ಹೇಳಿದ ಫೀಸು, ಅವರು ಮಾಡಿವ ಕಾನೂನು, ಅವರು ಇಟ್ಟದ್ದು ಕಟ್ಟಳೆಟ್ಟು' ಇಷ್ಟವಿದ್ದರೆ ಒಪ್ಪಿ ಕಲಿಯಬೇಕು, ಇಲ್ಲವಾದರೆ ಎಲೆಯ ಮಕ್ಕಳೂ ಸೆಕೆಂದರೀ ವಿದ್ಯಾಭ್ಯಾಸಕ್ಕಾಗಿ ಮನೆಬಿಟ್ಟು ಯೋಗಬೇಕಾಗಿ ಬಂದೀತು' ಇಂದು ಕೋಲಾಗು ವಿದ್ಯಾಭ್ಯಾಸವು ಮನೆಬಾಗಿಲಿಗೆ ಬರಲೆಂದು ಅವಿಸರ ಪಡುವ ಉಡುಪಿಯ ಬಂಧುಗಳಿರಾ' ನಾಳೆ ನಮ್ಮ ಮಕ್ಕಳು ಸ್ವಮತಾಭಿಮಾನವಿದ್ದರೆ ಸಕೆಂದರೀ ವಿದ್ಯಾಭ್ಯಾಸಕ್ಕಾಗಿ ಊರು ಬಿಡಬೇಕಾಗಿ ಬಂದೀತು' ಯೋಚಿಸುವಿರಾ? 'ಹಾಗೇನು ಇಲ್ಲ, ಹೈಸ್ಕೂಲಿನ ಮತ್ತು ಕೋಲೇಜಿನ ಅಧಿಕತೆಯೆನ್ನಲ್ಲ ನಮಗೆ (೧೦೮)

—ನಾರದ-

ನಮ್ಮ ಸಿನೆಮಾ ಪುಟ

ಸಂಪಾದಕ: ಮಾಸ್ಟರ್ ವೆಂಕಣ್ಣ, "ಕಲಾವಂತರ ಕಲಾಸಂಘ", ಮಂಗಳೂರು.

ಚಲನ ಚಿತ್ರದ ಕುರಿತು ಜನರಿಗೆ ತಿಳಿಯಹಡಿಸುವ ಉದ್ದೇಶದಿಂದ ಈಗ ಈ ಕಾರ್ಯವನ್ನು ಕೈಕೊಂಡಿರುವೆವು. ಜನರು ಜಗತ್ತಿನ ೬ನೇ ಮಹಾ ಕೈಗಾರಿಕೆಯಾದ ಚಲನ ಚಿತ್ರದ ಕುರಿತು ತಿಳಿದುಕೊಳ್ಳುವುದಕ್ಕಾಗಿ ಈ ಉದ್ಯಮವನಾಗಿದೆ. ಜಗತ್ತಿನ ಹಲವು ಭಾಷೆ--ಜನಾಂಗ -ಸುದ್ದಿ--ಸಂಪ್ರಾದಾಯಗಳನ್ನು ದೂರದ ಲೆಖ್ಖವಿಲ್ಲದೆ ನಮ್ಮ ಊರಿನ ಮಂದಿರಗಳಲ್ಲಿ ನಾವು ನೋಡುತ್ತಿರುವೆವಲ್ಲಾ ಆ ಕುರಿತು ನೀವು ಹೊಂದಿರುವ ಅಚ್ಚರಿಯನ್ನು ಹೊಡೆದೋಡಿಸಲೆಂದು ನಾವೀಗ ತೊಡಗಿದ ಕಾರ್ಯವು ಯಶಸ್ವಿಯಾಗಿ ನಿಮ್ಮ ಮನಸ್ಸಿಗೆ ಹಿತವನ್ನುಂಟುಮಾಡಿ ಆನಂದವನ್ನು ತಂದೀತೆಂಬ ಭರವಸೆ ಇದೆ.

ಸಂಸಾರ ನೌಕ

ಹಲವು ಭಾಷೆಗಳಲ್ಲಿ ಮಾತನಾಡುವ ಚಿತ್ರಗಳು ಬಹಳವಾಗಿ ಬೆಳೆದಿದ್ದುವಾದರೂ ನಮ್ಮ ಕನ್ನಡ ಭಾಷೆಯಲ್ಲಾದ ಚಿತ್ರಗಳು ಬಹಳ ಕಡಿಮೆ ಚಲನ ಚಿತ್ರತಯಾರಿಕೆಯು ಕರ್ನಾಟಕದಲ್ಲಿ ಹಲವು ವರ್ಷಗಳಿಂದ ನಡಗಿತ್ತಾದರೂ ಮಾತನಾಡುವ ಚಿತ್ರಗಳು ಬಂದುದು ಮೊನ್ನೆ ಮೊನ್ನೆ. ಕನ್ನಡ ಚಿತ್ರಗಳು ಇದುವರೆಗೆ ತಯಾರಾದವುಗಳು ಬೆರಳಿನಲ್ಲಿ ಎಣಿಸಬಹುದಾದಷ್ಟು ಮಾತ್ರ. ಮೊದಲನೆಯದು ಧ್ರುವಕುಮಾರ, ನಂತರ ಸತೀಸುಲೋಚನ, ಬಳಿಕ ಸಾವಾರಿಮೆ ಮತ್ತು ಈಗ ಕೊನೆಯದಾಗಿ ಸಂಸಾರ ನೌಕೆಯೆಂಬ ಚಿತ್ರವು ಕನ್ನಡ ಭಾಷೆಯಲ್ಲಿ ತಯಾರಿಸಲ್ಪಟ್ಟಿದೆ. ಇದು ಕನ್ನಡಿಗರಿಗೆ ಹೆಮ್ಮೆಯ ವಿಷಯ. ಅದರಿಂದ ಈ ಕನ್ನಡದ ಚಿತ್ರದ ಕಥೆಯನ್ನು ಈ ಬಾರಿ ಕೊಟ್ಟಿದ್ದೇನೆ.

ಜಮಿನ್‌ದಾರ್ ರಾಘವೇಂದ್ರರಾಯನೊಬ್ಬ ದೊಡ್ಡ ಶ್ರೀಮಂತ ಇವನಿಗೆ ಈರ್ವರು ಮೊಮ್ಮಕ್ಕಳು—ಸುಂದರ ಮತ್ತು ಮಾಧ. ಮನೆಯಲ್ಲಿ ದೇವರಪೂಜೆ ಮಾಡಿಕೊಂಡಿದ್ದ ಅಚಾರ್ಯ ಶುಕದೇವನ ತಲ್ಲಣಿ ಮಗಳು ಸುಶೀಲೆಯು ಜಮಿನ್‌ದಾರನ ಆಟ್ಟುಮೆಚ್ಚಿನ ಸಾಕುಮಗಳು ಸುಂದರನಿಗೆ ಇವಳನ್ನು ಕೊಟ್ಟು ಸುದುವೆ ಮಾಡಬೇಕೆಂಬುದು ಅವನ ಬಹುದಿವಸದ ಬಯಕೆ. ಆದರೆ ಸುಂದರನು ಇವನ ಇಷ್ಟಕ್ಕೆ ವ್ಯತಿರಿಕ್ತನಿ ತಾನೊಲಿದ ನಲ್ಲೆಯನ್ನು ಮದುವೆಮಾಡಿಕೊಂಡು, ತಾತನ ಕೋಪಕ್ಕೆ ಈಡಾದ ಅಪ್ಪ ಪಾಸ್ತಿಗಳ ಹಕ್ಕನ್ನು ಕಳೆದುಕೊಂಡ. ನಿರುದ್ಯೋಗದ ಬಿಂಕಿಯಲ್ಲಿ ಬಿದ್ದು, ಒಡವೆಗಳನ್ನು ಮಾರಿಕೊಂಡ. ಹರಕು ಬಟ್ಟೆ, ಬಾಡಿಗೆಯ ಒಂದು ಮುರುಕಲು ಮನೆ ಇವನ ಪಾಲು. ದೊಡ್ಡವ್ಯಕ್ತಿ ಕ್ಷಣಾಗಂದರ ಬೇಗೆಯೊಂದು ಕಡೆ ಇವನ ಪಾಲಿಗೆ ಬಂದಿತು.

ಸ್ನೇಹಿತರು ಗುರ್ತಿಸದೇ ದೂರವಾದರು ನೆಂಟರು ಹೊಸ್ತಿಲನ್ನೇ ಹತ್ತಗೊಡಲಿಲ್ಲ. ವಿಧಿ ವಿಲಾಸ! ೨೯ವಂತೆ ಸರಳೆ ಸಹಾ ಇಕ್ಕಟ್ಟಿನ ಸ್ಥಿತಿಗಂದರೆ ಇದೇ. ಎಲ್ಲೆಲ್ಲೂ ಇವನ ಭಾಗಕ್ಕೆ ಅಂಧಕಾರ ಪ್ರಪಂಚವೇ. ಪರಿಯಾದರೋ ಪತಿಯಿಂದ ಪ್ರತ್ಯೇಕಿಸಲ್ಪಟ್ಟ ಸಮಯದಲ್ಲೂ, ಅವನ ಸುಖವೇ ತನ್ನದು; ಅವನ ದುಃಖವೇ ತನ್ನ ದುಃಖವೆಂದು ಭಾವಿಸಿ, ಹಂಬಲಿಸುತ್ತಾ, ಕಣ್ಣೀರು ಕರೆಯುತ್ತಾ ಹಗೂ ನಿರಾಶಳಾಗದೆ, ಪತಿಧ್ಯಾನದಲ್ಲಿಯೇ ಮಗ್ನಳಾಗಿರುವಳು. ಅಂತ ಸುಂದರನೇ ತನ್ನ ಸ್ವಾಮಿಯೆಂದು ಚಿಕ್ಕಂದಿನಿಂದಲೂ ನಿಶ್ಚಯಿಸಿಕೊಂಡಿದ್ದ ಸುಶೀಲೆಯು, ಜಮಿನ್‌ದಾರನ ಆಕ್ರೋಶಕ್ಕೆ ಬಲಿಬಿದ್ದಳು. ತನ್ನ ಪ್ರೇಮದೇವನು ಬೇರೆ ಮದುವೆ ಮಾಡಿಕೊಂಡನೆಂಬ ಸುದ್ದಿಯೇ ಅವಳ ಜೀವಿತವನ್ನು ಬಡಿದು ಜಾಕಿದ ಬಿಸಿಡಿಲು. ಸಮಾಜದ ತಿಸ್ಕಾರವು ಧಿಕ್ಕರಿಸಲಾರದೆ, ತಿರಿಯರ ಹಠಮಾರಿತನದ ಅಮಲಿನ ದುಷ್ಪರಿಣಾಮಕ್ಕೆ ಬಲಿಯಾಗಿ, ಆ ಹುಟ್ಟ ಮಾಧವನನ್ನೇ ತಾತನಿಷ್ಪದಂತೆ ಮಾಡಿ ವಿಯಾಟಳು. "ಇದು ರೂಢಿಯ ಬಲಿ. ಜನ್ಮ ಜನ್ಮಾಂತರದಲ್ಲೂ, ಸುಂದರನೇ ನನ್ನ ಸ್ವಾಮಿ" ಎಂದಳು. ಹಾಗೆ ನಡಕೊಂಡಳು.

ದಿನದಿನಕ್ಕೂ ಅಜಾರಿಯ ರಕ್ಕಮ್ಮಾರಿ ವರ್ಷಗಳು ಮೇರೆಮೀರಿದವು.

'ಸೀತಾರಾಂ' ಮತ್ತು ಪುರಂದರದಾಸರ ಆ ಮೋಘವಾದ ಕೃತಿಗಳು ಇವನಿಂದ ಪಾವನವಾದುವು. ಮಗಳನ್ನು ಮಾರಿಕೊಂಡ. ಏನೂ ತಿಳಿಯದ ಬಾಲವಿಧವೆ ಗಿರಿಜೆಗೆ 'ಆಲಿಂಗನೋ ಪಯ್ಯಾನ'ದ ತಿರುಳೆನ್ನು ಬೋಧಿಸಲಪಕ್ರಮಿಸಿದ. ಮಾಧವು ಸ್ವತಂತ್ರ ವ್ಯಕ್ತಿತ್ವವಿಲ್ಲದವ. ಇದ್ದ ಸ್ವಲ್ಪ ವ್ಯಕ್ತಿತ್ವವೂ ಸಹ ಆ ಡಿಕ್ಕಿಯ ಸಹ ಸಾವಸದಿಂದ ನಾಶವಾಯಿತು ಹಸುಗೂಸಿನ ಮನಸು ಅವನದು. ಆಡಸ್ಸು ಕೊಂಡು ಇವನನ್ನು ಚಿತ್ರವಿಚಿತ್ರ ಸ್ವಭಾವದವನನ್ನಾಗಿಯೂ ಕೆಡೆಗೆ ಹಂಗಿಕನನ್ನಾಗಿಯೂ, ಮಾಡಿದವನು ಡಿಕ್ಕಿ. ಈಗ ಮಾಧುವು ಡಿಕ್ಕಿಯ ಕೈಬೊಂಬೆ. ಡಿಕ್ಕಿಯೇ ಸರ್ವನಾಶದಮೂಲ. ಇವನಲ್ಲಿನ ವ್ಯಕ್ತಿತ್ವವು ಅದ್ಭುತವಾದುದು. ಬೇರಾದವರ ಮನಸನ್ನು ಹಿಡಿದೆಳೆಯಬಲ್ಲ ಚೈತನ್ಯ ವಿದೆ ಇವನಲ್ಲಿ. ಮೆದಗ ಮಾಧು ಸಿಕ್ಕಿದುದು, ಇವನ ಶಕ್ತಿಯ ನುತ್ತ ವಿಧವಿಧ ಸಾಮರ್ಥ್ಯಗಳ ಸರಿಕ್ಲೆಷಮಾಡಿಕೊಳ್ಳಲು ಸರಿಯಾದ ಅವಕಾಶ ಸಿಕ್ಕಿದಂತೆ ಇವನಿಗೆ. ಏನೇ ಏನೇ ಮಾಧವನಿಸ ವರ್ತನೆಗಳು ಚಿತ್ರವಿಚಿತ್ರವಾಗತೊಡಗಿದವು.

ಜಮಿನ್‌ದಾರನಿಗಂತೂ ಕೈಬೆಚ್ಚಾರಿಯಲ್ಲಿ ಆಪೂರ್ವನಂಬಿಕೆ, ಸಂಪ್ರದಾಯ ಪ್ರಿಯತೆ ಯಿಂದಂಂಟಾದ ಹಠಮಾರಿತನವೇ ಇವನನ್ನು ದಿನ ದಿನಕ್ಕೆ ನಾಶಗೈಯುತ್ತಿದ್ದ ಪಾಶ.

ಸಿದ್ಧನ ಆಕುಟಿಲ ಸ್ವಾಮಿಭಕ್ತಿಯನ್ನು ವರ್ಣಿಸಲು ಶಕ್ಯವಿಲ್ಲ. ಅದರೂ ತಂದಾಲರ ತಂದದಲ್ಲಿ ಅವರ ವಿವಿಧ ಗೊಂದಲಗಳ ಸಂವಿನಲ್ಲಿ ಸಿಕ್ಕಿಬಿದ್ದ ಇವ ಏನು ತಾನೇ ಮಾಡಬಲ್ಲ? ಸುಂದರನಿಗೆ ತನ್ನ ಸರ್ವಸ್ವವನ್ನೂ ಅರ್ಪಿಸಿ ನೋಡಿದ. ಸುಂದರನೊಪ್ಪಲಿಲ್ಲ. ಕುಟಿಲ ಗತಿಯ ಕಾಲವನ್ನು ತಾಗೆಯೇ ತಳ್ಳುತ್ತಿದ್ದ.

ವರ್ಷಗಳು ಕಳೆಯುತ್ತಾ ಬಂದವು. ಜಮಿನ್‌ದಾರನ ಮನೆಯಲ್ಲಿ ಈ ರೀತಿಯ ವಿಪ್ಲವ. ಆತ್ತ ಸುಂದರನು ಪಡುತ್ತಿದ್ದ ಸಂಕಟಗಳು ಜಮಿನ್‌ದಾರನು ಮೃತ್ಯುಶಯ್ಯೆಯಲ್ಲಿರ್ದಾಗ ಆವನ ಗೋಚರಿಕ್ಕೆಯಂದವೆ. Will ಉಯಿಲು ಬದಲು ಯಿಸಿದೆ. ಎಲ್ಲವೂ ಸುಶೀಲಾ ಸುಂದರರಿಗೆ. ಆತನೊಡನೆ ಜೊಜ್ಜನ್ನು ಸಹ ಸತ್ತಳು.

ಇನ್ನು ಕೇಳಬೇಕೆ! ಗಿರಿಜೆ—ಮಾಧವರ ಪ್ರಣಯತಾಂಡವಗಳು ದಿನದಿನಕ್ಕೆ ಬೆಳೆದವ್ವೆ. ಸಂಧಿಗೊಂದಿಯ ಕಳ್ಳಪೂಜಾರಿಯು ಇಂದು 'ಇರಲಾರಿಗೆ ಉಳಿದವನೇ ಗೌಡ' ಎಂಬಂತೆ ತಾನೇ ಜಮಿನ್‌ದಾರನೆಂದುಕೊಂಡ. ಡಿಕ್ಕಿಗೂ ಮುಂಚುಗೂ ಪೈರಲಿನಿಂದ "ಒಬ್ಬರಿಂದೊಬ್ಬರು ಉಳಸಕೊಂಡದು' ಎಂಬಂಗಾ ವಿಪರೀತ ಸ್ನೇಹ. ಮಾಧವ-ಡಿಕ್ಕಿ ಇತರರು ತಮ್ಮ ಧಲವನ್ನು ಸಾಧಿಸಿಕೊಳ್ಳುವರು. ಆಡಂರಿಯು ಬೂದಿಯಾಗುವನು. ಸುಶೀಲೆಯ ಶಕ್ತಿಯನ್ನು ಕೆಣಕಲೋಗಿ ರಿಕ್ಕಿಯು ಹಲ್ಲುಕಿರಿದ ಡಿಕ್ಕಿಯು ಆವಳ ಹತ್ತಿರ ವಾಧವನ್ನು ಪ್ರೇರೇಪಿಸಿಳು ಏನುವನು. ಈ ಸಮಯದಲ್ಲೇ, ಸಮಾಜದ ಹುಂಜ ಬ್ಯಾರಿಸ್ಟರ್ ಪುರುಷೋತ್ತಮನಿಂದ ಅವಮಾನಗಂಡು, ಹೊರಹಾಕಲ್ಪಟ್ಟು, ರಕ್ಷಿಂದ ನೆನೆಯುತ್ತಿದ್ದ ಸುಂದರನನ್ನು ಬ್ಯಾರಿಸ್ಟರ್ ತಮ್ಮನೂ, ಹಳ್ಳಿಗಳ ಬೆಳವಣಿಗೆ ಉದ್ಯೋಗವನ್ನು ಹಿಡಿದಿದ್ದ ವನೂ, ಸರಳ ಹೃದಯನೂ ಆದ ಸರ್ವೆವು ಕಂದು ತನ್ನ ಹಳ್ಳಿಗೆ ಕರೆದೊಯ್ಯುವನು; ಮತ್ತು ಜೀವನದಲ್ಲಿನ ಉದ್ದೇಶಗಳ ಸಫಲತೆಗಾಗಿ ಪ್ರತಿಯೊಬ್ಬನೂ ಕೈಕೊಳ್ಳಬೇಕಾದ ಕರ್ತವ್ಯವನ್ನು ಸುಂದರನಿಗರುಹುವನು. ಅಲ್ಲೀ ಇವರಿಗೆ ಜಮಿನ್‌ದಾರನ ಮರಣವಾರ್ತೆ ವರ್ತಮಾನ ಪತ್ರಿಕೆಯಿಂದ ತಿಳಿದಿದ್ದು ನೃತರಾದ ಹಿರಿಯರ ಆತ್ಮಕ್ಕೆ ಶಾಂತಿ ಕೋರ ಊಸುಗುವೆಂದು ಸುಂದರನು ಸರ್ವನೊದನೆ ಹೊರಡುವನು.

ಸುಶೀಲೆಯ ಹೃದಯದಲ್ಲಿನ ಶಕ್ತಿಯು ಮಿಂಚಿತು. ಭವ್ಯವಾಗಿ ಹಿಡಿದಿಟ್ಟಿದ್ದ ಆ ಕೆಡಿಯು ಒಂದು ದೊಡ್ಡ ಉರಿಯೊಯಿತು. ಕ್ಷಣಕ್ಷಣದಲ್ಲೂ ಹಂಬಲಗಳು ಬೆಳೆಯತೊಡಗಿನವು ಆಗಲೇ ಸುಂದರನಲ್ಲಿಗೆ ಬಂದದ್ದು, ಆಗಲೇ ಸತೀಲೆಯ ಹೃದಯದಲ್ಲಿನ ಸತ್ಪ್ರಕಾರಪೆ ಸುಂದರನಿಗೆ ಗೋಚರಿಸಿದ್ದು, ಆವನು ದಿಗ್ಭ್ರಮೆಯಿಂದ ತಲೆಬಾಗಿದ್ದು, ಸುಶೀಲೆಯು ತನ್ನ ಆಂತ್ಯವನ್ನು ಕಂಡುಕೊಂಡಳು. ಸುಂದರನನ್ನು ಕಳುಹಿಸಿದಳು.

ಮಾಧವ ಬಂದ "ಢುಂ-ಢುಂ!" ಗುಂಡು ಹಾರಿ ಹಾರಿಸಿದ. ಮಾನವನ ಪಾಪಪಸ್ತಿಗಳ ಸ್ಪರ್ಶವನ್ನೇ ಕಂದರಿಯದ ಆ ಸ್ವಚ್ಛ ಕುಸುಮವು, ಆ ಪರಿಶುದ್ಧ ಆತ್ಮವು, ಈ ಪ್ರಪಂಚಕ್ಕೆ ಬಂದಾಗಿನಿಂದಲೂ ಹೆಚ್ಚಿನ ಪ್ರಕಾಶದಿಂದ ಹಾರಿಹೋಯಿತು. ಸುಂದರ ಓಡ್ಡಿ ಬಂದು ಮಾಧವನಿಂದ ರಿವಾಲ್ವರ್ ಕಿತ್ತು ಕೊಂಡ, ಗೆಲುಭಿ. ಪೋಲಿಸರು ಬಂದು ಸುಂದರನನ್ನೆಳೆದೊಯ್ದರು ಆದರೂ ವಿಪರೀತ ಹೋರಾಟಗಳಮೇಲೆ 'ಸತ್ಯಕ್ಕೆ ಜಯವು ನಿಸ್ಸಂ' ಎಂಬಂತೆ ಸತ್ಯವು ಹೊರಬಿತ್ತು. ಸುಂದರನ ಬಿಡುಗಡೆ. ಪವಿತ್ರ ಪ್ರೇಮನ ಪಕ್ಷೆಗಳು ಮತ್ತೆ ಒಂದುಗೂಡಿದವು, ಆದರೆ ಅವರ ಈಗಿನ ಪ್ರೇಮದ ರೀತಿಯೇ ಬೇರೆ, ಆ ಪ್ರೇಮದಿಂದ ಈ ವಿಶ್ವಪ್ರೇಮವನ್ನು ಕಂದರು ಅವರು.

ಇನ್ನು ಡಿಕ್ಕಿ ಮಾಡು ಪಾಪ! ಅವರು ತುರಂಗದಲ್ಲಿ ಹಲ್ಲುಕಿರಿಯುತ್ತಿರುವರು, ಅಂತೂ ನೌಕೆವು ಸಮುದ್ರಪಮೇಲೇ.

ಕಾರ್ಕಳ

ಈ ಕೇಂದ್ರದ ಪ್ರಾಥಮಿಕ ಶಾಲಾ ಉಪಾಧ್ಯಾಯರ ನವೆಂಬರ ತಿಂಗಳ ಮಾಸಿಕ ಸಭೆಯು ನಕ್ಕೆ ಯೈಟ್ ಶಾಲೆಯಲ್ಲಿ ತಾ. 7-11-1936ರ ದಿನ ಶ್ರೀ. ಯಂ ಸಪ್ಪೋತ್ತಮ ಕಾಮತರ ಬಿ. ಎ. ಬಿಎಲ್. ಟಿ ಯವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಭೆಯಲ್ಲಿ ಮಾಮೂಲಿನ ಮಾದರಿ ಪಾಠಕ್ಕೆ ತಿಲಾಂಜಲಿಯನ್ನು ಕೊಟ್ಟು ಉಪಾಧ್ಯಾಯರಿಗೆ ಉಸಯುಕ್ತವಾದ ವಿಷಯಗಳ ಕುರಿತು ಭಾಷಣ ಉಪನ್ಯಾಸಗಳನ್ನು ಕೊಡುವ ಹೊಸ ಏರ್ಪಾಡನ್ನು ಮಾಡಿಕೊಂಡುದು ಸ್ತುತ್ಯವಾಗಿದೆ ಇಂದಿನ ಸಭೆಯಲ್ಲಿ ಶ್ರೀರಾಮ ಕೈಪ್ಪ ನಾಯಕರು 'ಗಣಿತಪಾಠದ ಕುರಿತು ಆಧುನಿಕ ವಿಚಾರಗಳು' ಎಂಬ ಕುರಿತು ಸ್ವಾರಸ್ಯವಾದ ಭಾಷಣವನ್ನು ಕೊಟ್ಟರುವರು.

ಇಲ್ಲಿ ಕಾಂಗ್ರೆಸ್ ಪರವಾದ ಚುನಾವಣೆ ಕಾರ್ಯವು ಭರದಿಂದ ನಡೆದಿರುವುದು. ಇಲ್ಲಿಬು ವಕೀಲ ಬಂಧುಗಳೂ ಇತರರೂ ಕಾಂಗ್ರೆಸಿನ ಮೇಲಿನ ಅಭಿಮಾನದಿಂದ ಪ್ರಚಾರ ಕಾರ್ಯವನ್ನು ನಡಿಸುತ್ತಿರುವುದು ಅತ್ಯಭಿನಂದನೀಯವಿದೆ. ಇನ್ನಿಯ ವಕೀಲ ಬಂಧುಗಳ ಮಾದರಿಯು ಇತರ ಕಡೆಯ ವಕೀಲರುಗಳಿಗೆಂದ ಅನುಸರಣೀಯವಾಗಿದೆ. ಇವರು ತಮಗೆ ಬಿಡು ದೊರೆತಾಗಲೆಲ್ಲಾ ಹಳ್ಳಿಗಳಿಗೆ ಹೋಗಿ ಕೆಲಸ ಮಾಡುತ್ತಿರುವರು. ಇದೇ ರೀತಿ ಇತರ ಕಡೆಗಳಲ್ಲಿಯೂ ಕೆಲಸ ನಡೆದರೆ ಕಾಂಗ್ರೆಸ್ ಉಮೇದ್ವಾರಿಗಳಿಗೆ ಜಯವು ನಿಶ್ಚಯವೇ ಸರಿ.

ಅಧಿಕಾರ್ಕಾಣಿ ಇದ್ದರೆ ಮಾತ್ರ ಉಡುಪಿ ಬೋರ್ಡು ಹೈಸ್ಕೂಲನ್ನು ಬಿಟ್ಟೋಪರಿಗೆ ಬಿಟ್ಟು ಕೊಡುವುದಕ್ಕೆ ಸಮ್ಮತಿ. ಅವರೂ ಅದಕ್ಕೆ ಒಪ್ಪಿದ್ದಾರೆ' ಎನ್ನುವಿರಾ? ನಿಮ್ಮ ಅಸ್ಪೆಲ್ಲಾ ಕಟ್ಟುನಿಟ್ಟುಗಳನ್ನು ಒಪ್ಪಿಕೊಂಡು ಬಿಟೋಪರು ಉಡುಪಿ ಬೋರ್ಡು ಹೈಸ್ಕೂಲನ್ನು ಏಕೆ ತಕ್ಕೊಳ್ಳುತ್ತಾರೆ? ಆದರಿಂದ ಅವರಿಗಾಗುವಪ್ರಯೋಜನವೇನು? ನೀವಾಗಲಿ, ಅವರಾಗಲೀ ಸ್ಪಷ್ಟೀಕರಿಸಿಗಳಿಂದ ಹೇಳಲುಪಿರಾ? ಹೇಳಲಾರಿರುವರೆ, ಊರ ಶಾಲೆಯನ್ನು ಬಿಟ್ಟುಕೊಟ್ಟ ಮೇಲೆ ನಿಮಗೆ ಬಿಟೋಪರ ಹೈಸ್ಕೂಲು ಕೋಲೇಜುಗಳಲ್ಲಿ ದೊರಕುವದೆಂಬ ಆ ದಳಿತೆಯ ಆ ಅಧಿಕಾರ ವಾಣಿ (voice) ಎಂಬುದು ಬರೇ (voice in the wilderness!) ಅರಣ್ಯ ರೋದನ ಎಂಬುದಾದರೂ ವ್ಯಕ್ತವಾಗುವುದಿಲ್ಲವೆ? ಅದು ಕಾರಣ ಉಡುಪಿಯ ಬಂಧುಗಳೆ, ದುಮುಕಬೇಡಿರಿ! ವಿಚಾರಿಸಿರಿ; ಚೆನ್ನಾಗಿ ವಿಚಾರಿಸಿರಿ! ನೂರಾರು ಸಲ ಸಾವಧಾನವಾಗಿ ಶಾಂತಚಿತ್ತರಾಗಿ ವಿಚಾರಿಸಿ' ಬೋರ್ಡು ಹೈಸ್ಕೂಲನ್ನು ಬಿಟೋಪರಿಗೆ ಕೊಟ್ಟರೆ ನೀವು ಕೆಟ್ಟಿರಿ!

ಉಡುಪಿ ಉಪಾಧ್ಯಾಯರ ಸಭೆ

ಕಾಂಗ್ರೆಸು ಕಮಿಟಿಗಳಿಗೆ ಚುನಾವಣೆಯು ಗುತ್ತಿದಿಂದ ಯೋಗ್ಯ ಆಗುವುದಿಲ್ಲ ಚುನಾವಣೆಯ ದಿನ ಪು ಪತ್ರಿಕೆಗಳ ಮೂಲಕವೂ ಇತರ ರೀತಿಯಿಂದಲೂ ಮುಂದಾಗಿ ಸರಿಯಾಗಿ ಪ್ರಕಟಿಸಲ್ಪಡುವದು ಮತ್ತು ಚುನಾವಣೆಯು ಬಹಿರಂಗವಾಗಿ ಇರುವ ಪದ್ಧತಿಯಲ್ಲಿ ನಡೆಯುವದು ಕಾಂಗ್ರೆಸ್ ಕಮಿಟಿಗಳಿಗೆ ಮೆಂಬರರನ್ನು ಆರಿಸುವುದರ ವಿಷಯದಲ್ಲಿ ತಾ ೩೦ 9 1936 ರ ಒಳಗೆ 4 ಆಣೆಕೊಟ್ಟು ಕಾಂಗ್ರೆಸ್ ಸದಸ್ಯರಾಗಿರುವ ಪ್ರತಿಯೊಬ್ಬನಿಗೂ ಓಟುಕೊಡುವ ಅಧಿಕಾರವಿದೆ ಮತ್ತು ಸತತ ಪಾದಿವರಿಸುತ್ತಿರುವ ಅಂಥಾ ಮೆಂಬರರಿಗೆ ಕಾಂಗ್ರೆಸ್ ಕಮಿಟಿಗಳಿಗೆ ಉಮೇದಾರರಾಗಿ ನಿಲ್ಲುವ ಹಕ್ಕು ಇದೆ ಆದುದರಿಂದ ಸದ್ಯದಲ್ಲಿ ನಡೆಯಲಿರುವ ಕಾಂಗ್ರೆಸ್ ಕಮಿಟಿಗಳ ಹೊಸ ಚುನಾವಣೆಯಲ್ಲಿ ಯೋಗ್ಯರು ಉತ್ಸಾಹರಾಗಿ ಮುಂದೆ ಬರುವಂತೆಯೂ ಕಾಂಗ್ರೆಸ್ ಸದಸ್ಯರೆಲ್ಲರೂ ಆಯಾಯ ಕಮಿಟಿಗಳ ಚುನಾವಣೆಯ ದಿನ ಆ ಬಗೆ ಕರೆಮಲ್ಲವುವ ರೆಯಲ್ಲಿ ಹಾಜರಾಗಿ ಯೋಗ್ಯ ಮತ್ತು ಸಮರ್ಥರಾದ ಜನರನ್ನೇ ಕಾಂಗ್ರೆಸ್ ಕಮಿಟಿಗಳಿಗೆ ಆರಿಸಬೇಕಾಗಿಯೂ ಮುಖಿಂದರು ಮತ್ತು ಜೋಗ್ಯರು ಮೆಂದೆನ್ನಿಸಿಕೊಳ್ಳುವವರೂ ಕ್ಲೌನ್ಸಿಲು, ಎಸೆಂಬ್ಲಿ, ಬೋರ್ಡು, ಪಂಚಾಯತೋರ್ದು ಸ್ಥಾನಗಳಿಗೆ ತೋರಿಸುವ ಉಮೇದನು ಕಾಂಗ್ರೆಸ್ ಚುನಾವಣೆಯಲ್ಲಿ ತೋರಿಸಬೇಕಾಗಿಯೂ ಈ ಮೂಲಕ ವಿನಂತಿಮಾಡಿಕೊಳ್ಳುತ್ತೇನೆ

ಎಂ. ಎಸ್. ಅಧಿಕಾರಿ
ಅಧ್ಯಕ್ಷ,
ದ ಕ ಜಿಲ್ಲಾ ಕಾಂಗ್ರೆಸ್ ಕಮಿಟಿ, ಕಾರ್ಕಳ
೪ ೭ '೩೬—1936

ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಕಮಿಟಿ, ಮಂಗಳೂರು

೧೯ನೆಯ ಕರ್ನಾಟಕ ಪ್ರಾಂತೀಯ ರಾಜಕೀಯ ಪರಿಷತ್ತು.

ಕರ್ನಾಟಕ ಪ್ರಾಂತೀಯ ರಾಜಕೀಯ ಪರಿಷತ್ತಿನ ೧೯ನೆಯ ಅಧಿವೇಶನವು ಇದೇ ಬರುವ ದುಂಬರ ತಿಂಗಳ ತಾರೀಕು ೬೦ರಿಂದ ೧೨ ತನಕ ಧಾರವಾಡ ಜಿಲ್ಲೆಯ ರಾಣೇ ಬೆನ್ನೂರ ಪಟ್ಟಣದಲ್ಲಿ ಜರಿಗಲಿರುವುದು ಆ ಪ್ರಯುಕ್ತ ನಮ್ಮ ಜಿಲ್ಲೆಯಿಂದ ಪ್ರತಿನಿಧಿಗಳಾಗಿ ಯೋಗಿಲಿಚ್ಚಿಸುವ ಮಹನೀಯರು ಇದೇ ತಿಂಗಳ ತಾರೀಕು ೨೦ರೊಳಗೆ ತಮ್ಮ ಅರ್ಜಿಯನ್ನು ಜಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯರಿಗೆ ಕಳುಹಿಸತಕ್ಕದ್ದು.

ಭೋಜ ರಾವ್ ಜೋಳಾರ
ಕಾರ್ಯದರ್ಶಿ
ಜಲ್ಲಾ ಕಾ ಕಮಿಟಿ 14 11 1936

ನೋಟೀಸು

ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ-

O S. 599/34 R. E. P. 73/36
R. E. A. 728/36

ವಾದಿ—The Canara Banking Corporation Udipi, Ltd.

ಪ್ರತಿವಾದಿರು—ಮಹಮ್ಮದ ಸುಫ್ರಿ ಸಾಹೇಬ ಕೂಡಾ.

೧ನೇ ಪ್ರತಿವಾದಿ—ಮಹಮ್ಮದ ಸುಫ್ರಿ ಸಾಹೇಬ
೭ನೇ ಪ್ರತಿವಾದಿ—ಮಹಮ್ಮದ ಜುಫ್ರಿ ಸಾಹೆಬ ಇವರೊಳಗೆ

ನಮ್ಮ ಆಮರ್ಜ್ಞಾರಿಯಲ್ಲಿ ಅನ್ವ ಖಲಂ ಕಾಲದಲ್ಲಿ ಖಲಿನಿಗೆ ನಿಲ್ಲುವರೆ ಪಾದಿ ಕೆಡೆಯನಿರಿಗೆ ಪರ್ಮಿರನ್ ಕೊಡಿಸೇಕಾಗಿ ವಾದಿಯು ಅರ್ಜಿ ಕೊಟ್ಟಿರುವುದರಿಂದ ಈ ಕುರಿತು ನಿಮ್ಮಿದೇವಾದೂ ಆಕ್ಷೇಪ ಪಿಲ್ಲದಲ್ಲಿ ತಾ ೨೦ 12—1936ನೆ ದಿವಸ ಹಗಲು 11 ಗಂಟೆಗೆ ಸದರಿ ಕೋರ್ಟು ಮುಂದೆ ಹಾಜರಾಗಿ ಚ್ಚಾಹಿರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ತಿಳಿಸೋಣಾಗುತ್ತದೆ

COONDAPOOR } K Narasimha Kamat ,
12—11—1936 } Leter for D H

೨ನೇ ಪುಟದಿಂದ ಮುಂದರಿಸಿದ)

ತ್ತೆನ್ನಿಂದೆಲೂ ಗುಣ ಹೊಂದೆ ನವರನ್ನು ಡಾ। ಡಿರಾದ್ವನೆರು ತನ್ನ ಸೂಚಕ ಶಕ್ತಿಯ ಸ್ವಭಾವದಿಂದ ಸುಲಭವಾಗಿ ವಶಮಾಡಿಕೊಂಡು ಗುಣಸಡಿಸಿರುವರು ಈ ವಿಧಾನವು ರೋಗಿಗಳ ಚಿಕಿತ್ಸೆಯಲ್ಲಿ ಇನ್ನೊಂದು ಅಮೂಲ್ಯವಾದುದಾದರೆ, ಅದನ್ನು ಇತರರೀತಿಯಲ್ಲಿ ಉಪಯೋಗಿಸಿದರೂ ಅದು ಅಷ್ಟೇ ಸ್ಪಭಾವವುಳ್ಳದಾಗಬೇಕು. ಹಿಂದುದೇಶದ ಸೋತೇರ ಮೆತ್ತು ಸಾಧುಗಳಲ್ಲಿ ಕೇಲವರು ಈ ರೀತಿಯ ಅಸಾಧಾರಣ ಮನೋಬಲವುಳ್ಳವರಿರುತ್ತಾರೆ. ಇಂತಹ ಮನಃಶಕ್ತಿಯನ್ನು ಪಯೋಗಿಸಿ ಇತರರ ಮೇಲೆ ಪರಿಣಾಮವನ್ನುಂಟುಮಾಡಿಬಹುದೆಂಬ ಎದರ ತಿಳುವಳಿಕೆಯೂ ಅವರಿಗಿರುವುದೆಂದು ನಂಬಲು ಕಾರಣಗಳಿವೆ. ಇಂತಹ ಶಕ್ತಿಯನ್ನುಪಯೋಗಿಸಿಯೇ ಅವರು ಕೆಲವು ವಿಚಿತ್ರ ಪ್ರದರ್ಶನ

ಕರ್ನಾಟಕ ಪ್ರಾಂತ್ಯ

ತೊರ್ಕೆ:—ಉತ್ತರ ಕನ್ನಡ ನಾಡವರ ಸಂಘದ ಕಾರ್ಯಕಾರಿ ಸಮಿತಿಯು ತಾರೀಕು ೧೮-೧೧-೧೯೩೬ ರಂದು ತೊರ್ಕೆಯಲ್ಲಿ ರಾಮಕೃಷ್ಣ ಮಂದಿರದಲ್ಲಿ ಸೇರಿತ್ತು. ಇದೇ ಬರುವ ಡಿಸೆಂಬರ ತಿಂಗಳ ತಾ ೬ ಮತ್ತು ೭ರಿಸೇಗೆ ಸೇವೆಯತಕ್ಕ ನಾಡವರ ಸಂಘದ ಮಹಾಸಭೆಯ ಕಾರ್ಯಕಲಾಪಗಳಲ್ಲಿ ಗೊತ್ತುಮಾಡಲ್ಪಟ್ಟವು. ಶ್ರೀಯುತ **ಬೋಳೆಗಾಂವಕರ ಕೃಷ್ಣರಾಮನಾಯ್ಕ** ಇವರು ಮಹಾಸಭೆಗೆ ಅಧ್ಯಕ್ಷರಾಗಬೇಕೆಂತಲೂ **ಶ್ರೀ ಕೃಷ್ಣಾಪರ ಮೇಶ್ವರ ಗಾಂವಕರ** ತೊರ್ಕೆ ಇವರು ಸಾಗತ ಸಮಿತಿಗೆ ಅಧ್ಯಕ್ಷರಾಗಬೇಕೆಂತಲೂ ಸರ್ವಾನುಮತದಿಂದ ಗೊತ್ತು ಮಾಡಲ್ಪಟ್ಟಿದೆ. ನಾಡವರ ಸಂಘದವರು ಅಂಕೋಲಾ ತಾಲೂಕಿನ ಬಾಂಧವರಿಗೆ ಆಭ್ಯರ್ಥಿ ಸ್ಥಾನಕ್ಕೆ ಆರಿಸಿದ್ದು ಇದೇ ಮೊದಲನೇಯ ಕಾರ್ಯ ಕಾರಿ ಸಭೆಯವರು ಎಲ್ಲ ತರದಿಂದ ಯೋಗ್ಯರೂ ಆದ ಮಹನೀಯರನ್ನೇ ಆಭ್ಯರ್ಥಿ ಸ್ಥಾನಕ್ಕೆ ನಿಯೋಜಿಸಿದ್ದಕ್ಕಾಗಿ ನಾಡವ ಸಮಾಜದಲ್ಲಿ ತುಂಬಾ ಆನಂದವಾಗಿದೆ

ತಗಡೂರು ಖಾದಿಕೇಂದ್ರ:—ತಗಡೂರು ಖಾದಿ ಕೇಂದ್ರದ ಒನ್ನ ದರ್ಜಾಕ್ಕೆ ಏರಿಸಿ ಸಂಜೆನಗೊಡಿಸಿ ವಕೀಲ ಶ್ರೀ ಸಂಘಿಗೆ ನಾರಾಯಣರಾಯರ ಅಧ್ಯಕ್ಷತೆಯಲ್ಲಿ ತಾ ೧೧-೧೦-೩೬ರಲ್ಲಿ ಪರಗಿತು. ಸಂಸ್ಥೆಯ ಚಾಲಕರಾದ ಶ್ರೀ ತಗಡೂರು ರಾಮಚಂದ್ರರಾಯರು ವಾರ್ಷಿಕ ವರದಿಯನ್ನು ಓದಿ ಹೇಳಿದರು. ಖಾದಿಪರೀಕ್ಷಕರು ತನ್ನ ಅಮೂಲ್ಯ ಸಲಹೆಗಳನ್ನು ಕೊಟ್ಟರು. ಶ್ರೀ ತಗಡೂರರ ಕಾರ್ಯಗಳನ್ನು ಕೊಂಡಾಡಿ ಬಡವರೂ ಪಸಿಕರೂ ಈ ಸಂಸ್ಥೆಗೆ ಸಹಾಯಮಾಡಬೇಕೆಂದು ಕೇಳಿಕೊಂಡರು. ಅಧ್ಯಕ್ಷರ ಜಾರವಾಡ ಮೇಲೆ ಸಭಾಕೃತಜ್ಞತೆಯಾಯಿತು. ವರದಿಯ ವರ್ಷದಲ್ಲಿ ೩೬೧೬-೩೭ ನೇ ಸಾಲಿನಲ್ಲಿ ೩೬೧೬-೩೭ ನೇ ಸಾಲಿನಲ್ಲಿ ಮಾರಾಟವಾದ ಖಾದಿ ೭೧೪೨ ೮೬ ಗಜಗಳ ಬಟ್ಟೆಯು ತಯಾರಾಗಿದೆ. ನೂಲುವವರಿಗೆ ೨೫೮ ೧೦ ೨ ಸೈಗಳೂ ಪಾಗ್ಗದವರಿಗೆ ೨೨೪೭ ೭ ೨೯ ಸೈಗಳೂ ಆಗಸರಿಗೆ ೩೦ ೭ ೨ ಸೈಗಳೂ ಸಂಪಾದನೆಯಾಗಿವೆ. "ಶ್ರೀ ಚಿನ್ನಮ್ಮಾಲ್ ಸಂಜಪ್ಪನವರ ಧರ್ಮನಿಧಿಯಲ್ಲಿ" ಯಲ್ಲಿ ೪೭೬೯ ಜನರಿಗೂ ೭೩ ಜಾನುವಾರುಗಳಿಗೂ ಔಷಧಿ ವಾಸಿಯಾಗಿದೆ. ಹರಿಜನ ಹೊಸ್ಟಲಿನಲ್ಲಿ ೧೬ ಮಂದಿ ವಿದ್ಯಾರ್ಥಿಗಳಿದ್ದಾರೆ. ಸ್ವತಂತ್ರ ಕಛೇರಿಯನ್ನು ಕಟ್ಟಿಸಲಾಗಿದೆ. ಆದರೆ ತಗಡೂರು ಖಾದಿ ಕೇಂದ್ರವು ಕರ್ನಾಟಕಕ್ಕೊಂದು ಭೂಷಣವೇ ಆಗಿದೆ

ಧಾರವಾಡ:—ಇದೇ ತಾ ೧೭ರಲ್ಲಿ ಲಾಲಾ ಲಜಪತರಾಯರ ಪುಣ್ಯದಿನಾಚರಣೆಯು, ಕಳ್ಳಾ ಕೆಳ್ಳಿ ಕಮಿಟಿಯವರ ವಿನಂತಿಯಂತೆ ಆಚರಿಸಲ್ಪಟ್ಟಿತು

ಮೈಸೂರು — ಕಳೆದ ೨೫ನೇ ತಾರೀಕಿನ ದಿನ ಆಖಿಲ ರಾಷ್ಟ್ರೀಯ ಸಹಕಾರ ದಿನಾಚರಣೆಯನ್ನು ಶ್ರೀ ಎಂ ಎ ಶ್ರೀನಿವಾಸನರವರ ಆಧ್ಯಕ್ಷತೆಯಲ್ಲಿ ಪ್ರಾಂತೀಯ ಸಹಕಾರ ಮಂಡಲದ ಕಛೇರಿಯಲ್ಲಿ ಆಚರಿಸಲಾಯಿತು. ಬರುವ ಡಿಸೆಂಬರ್ ೭ನೇ, ೮ನೇ, ೯ನೇ ತಾರೀಖುಗಳಲ್ಲಿ ಸಿ ಈ ಜಿ ಮಕಲ್ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಪಿದ್ದು ಬ್ಯಾಸವರ್ಷಿಕ ಸಮ್ಮೇಳನವು ಚಿಕ್ಕ ಮಂಗಳೂರಿನಲ್ಲಿ ಜರಗಲಿರುವುದು

ಕರ್ನಾಟಕ ವಿಕೇಂದ್ರೀಕರಣ ಪರಿಷತ್ತು

ನಿರೀಕ್ಷಾಧಿವೇಶನ ಬೆಳಗಾವಿ ೧೯೩೭

ಮೊದಲೇ ಪ್ರಕಟಿಸಿದ ಪ್ರಕಾರ ಕರ್ನಾಟಕ ವಿಕೇಂದ್ರೀಕರಣ ಪರಿಷತ್ತಿನ ನಿರೀಕ್ಷಾಧಿವೇಶನವನ್ನು ಇದೇ ಸಂವತ್ಸರ ಜನವರಿ ೨೨ನೇ ಶನಿವಾರ ೨೩ನೇ ಭಾನುವಾರ ೨೪ನೇ ಸೋಮವಾರ ಈ ಮೂರು ದಿನಗಳಲ್ಲಿ ಮುಂಬಯಿ ಸಂಸ್ಥಾನದ ಡಾಕ್ಟರರೂ, ಕಲವು ಕಾಲೇಜಿನ ಪ್ರಿಂಸಿಪಾಲ್ ಆಫ್ ಸ್ಟೇಟ್ ಸಬಜೆಕ್ಟ್ ರೂ ಕರ್ನಾಟಕ ವಿಕೇಂದ್ರೀಕರಣದ ಬಗ್ಗೆ ಆಳವಾದ ಅನುಭವಗಳುಳ್ಳವರೂ ಆದ ಡಾ. ಯು. ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಪರಿಷತ್ತಿನ ಕಾರ್ಯಕಲಾಪಗಳು ಶ್ರೀ ರಂಗೋಪಾಯ ಹಾಲ್ ಎಂಬಲ್ಲಿ ನಡೆಯುವುದು. ಕನಾ ಟಕದ ಎಂಟೂ ಜಿಲ್ಲೆಗಳಿಂದ ಬೇರೆ ಬೇರೆ ಸಂಘ ಸಂಸ್ಥೆಗಳಿಂದ ಸ್ವೀಕೃತವಾದ ಪತ್ರಗಳು ಪರವಾಗಿ ಮತ್ತು ಊರಿನವರ ಪರವಾಗಿ ಪ್ರತಿನಿಧಿಗಳು ಬಂದು ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಸ್ವೀಕೃತವಾಗಿ ಭಾಗವಹಿಸಿ ವಿಚಾರಕರಣ ಚರ್ಚೆಯಲ್ಲಿ ಭಾಗವಹಿಸಿ ಪರಿಷತ್ತಿನ ಕೀರ್ತಿಯನ್ನು ಹೆಚ್ಚಿಸಬೇಕೆಂದು ಕೋರಲಾಗಿದೆ. ಪರಿಷತ್ತಿನ ಸಭೆಯು ಆಮಂತ್ರಿತರಿಗಾಗಿ ಸಾಯಂಕಾಲ ೭ ಗಂಟೆಯಿಂದ ಪ್ರಾರಂಭವಾಗಿ ಸುಮಾರು ೧೦ ಗಂಟೆಯವರೆಗೆ ನಡೆಯುವುದು. ಪರಿಷತ್ತಿನ ಕಾರ್ಯಕಲಾಪಗಳು ಬೆಳಿಗ್ಗೆ ೯ ಗಂಟೆಯಿಂದ ಪ್ರಾರಂಭವಾಗಿ ಸಾಯಂಕಾಲ ೫ ಗಂಟೆಯವರೆಗೆ ನಡೆಯುವುದು. ಪರಿಷತ್ತಿನ ಕಾರ್ಯಕಲಾಪಗಳಲ್ಲಿ ಭಾಗವಹಿಸಲು ಇಚ್ಛಿಸುವವರು ತಮ್ಮ ಹೆಸರುಗಳನ್ನು ಮಂಡಿಸಿ ಎಲ್ಲಿಸುವವರು. ತಮ್ಮ ಗೊತ್ತುವಳಿಗಳನ್ನು ಯೋಗ್ಯ ಅನುಮೋದನ ಗೊಡಿಸಿ ನಮ್ಮ ಕಛೇರಿಗೆ ೨೫ನೇ ತಾರೀಖಿನೊಳಗಾಗಿ ತಿಳಿಸಬೇಕಾಗಿ ವಿನ್ಯಾಸ

ತ್ರ. ಗೆ. ಜೋಶಿ, ಬಿ ಜಿ. ಕುಲಕರ್ಣಿ
ಕಾರ್ಯದರ್ಶಿಗಳು
ವಿಕೇಂದ್ರೀಕರಣ ಪರಿಷತ್ತಿನ ಕಛೇರಿ ಹನುಮನ ಬೀದಿ ಬೆಳಗಾವಿ

Dr P G. Achar & the Congress

In the Navayuga of 12 11 36 though I was unable to find my answer to my queries in my letter published in the same issue I read some lines written about people of my type by Mr. B N Rao Certainly either myself or people of my type would not like to be in any fold whether it is styled as Congress or not, with persons of Mr B N Rao's type who express views in haste as they please in spite of them being incapable of any action I never thought or mentioned that I ever conferred a great honour or ble sing on the Congress by joining it as he says Mr B N Rao and people of *his* type might do so

He seems to opine that his criticism is in the interest of the Congress itself Will he kindly make it clear to me whether if I render my humble help to or co-operate with Mr C J Varkey or any other Congress Candidate in their election, it will in any way go against the interest of his Congress fold? Is it laid down that only people of his type, who imagine that they only know how to behave, shall support the Congress? Will Mr B N Rao reply as he pleases all the queries in my previous letter as well as in this?

P Gurumajaya

1937

ನೇ

ಇಸವಿಯ

ಡೈರಿಗಳು

ಮಾರಾಟಕ್ಕೆವೆ.

ಬೇಕಾದ ನಮೂನೆಯವು

ಬೇಕಾದ ಬೆಲೆಯವು

ಬಂದು ವಿಚಾರಿಸಿರಿ!

ನವಯುಗ ಆಫೀಸು,

ಉಡುಪಿ.

ದ್ವಿತೀಯ ಸಂಸ್ಕರಣ

ಕಾವ್ಯಸಮ್ರಾಜ್ಯ

ವಿಶ್ವಕರ್ನಾಟಕದೊಳಗಿನ
ಆಧುನಿಕ ಕವಿ ಪ್ರಮುಖರ
೪೮ ನವಿಗವನಗಳ ಸಂಗ್ರಹ

ಕೆರಿಯರ ಪಬ್ಲಿಷಿಂಗ್ ಹೌಸ್
ಬೆಲೆ ಹನ್ನೆರಡಾಣೆ
ಉಡುಪಿ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ'. ಎಂಬ ಮನ್ನಣೆಗೆ ಪಾತ್ರವಾಗಿ ತಿಲ್ವಪಕಾರದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದೆ. ಅಂತರಂಗವು ಚೇತೋಪಹಾರಿಯಾಗಿದೆ.

ನವಯುಗ ಚಕ್ರಬಂಧ ಸ್ಪರ್ಧೆ (ಸಂಖ್ಯೆ ೨ರ ಉತ್ತರ)



ಬಿಚ್ಚುಗರು

೧ ಶ್ರೀ ತಿಮ್ಮಪ್ಪಯ್ಯ, ಉಪಾಧ್ಯಾಯ, ಉಡುಪಿ.
೨ ,, ಎಚ್ ರಾಮಾಯಿ, ಉಡುಪಿ
೩ ,, ಎ ಆರ್ ಉಡ್ಯಾವರ್, ಉಡ್ಯಾವರ
೪ ,, ಪಿ ನಾರಾಯಣ ಶೆಟ್ಟಿ, ಉಪಾಧ್ಯಾಯ, ಕೇಳಂಜೆ
೫ ,, ಎಮ್ ಜೋಜ ಶೆಟ್ಟಿ, ಉಪಾಧ್ಯಾಯ, ಕೇಳಂಜೆ
೬ ,, ಯು ವೇದವಾಸ ಪೈ, ಉಪ್ಪಿನಂಗಡಿ
೭ ,, ಯ ಎನ್ ಶ್ರೀಧರ ನಾಯಕ್, ಮರ್ಚೆಂಟ್, ಉಪ್ಪಿನಂಗಡಿ
೮ ,, ಪಿ ನಂದ್ಯಪ್ಪ ಹೆಗ್ಡೆ, ಅಧ್ಯಾಪಕ, ಕೆಂಜೂರು
೯ ,, ಪಿ ಆರ್ ಚೆಂಬ್ರು, ಪುತ್ತೂರು
೧೦ ,, ಬಿ ಗೋಪಾಲ ಕೃಷ್ಣಯ್ಯ, ಪಂಬೆತ್ತಾಡಿ, ಬಳ್ಳಾರಿ
೧೧ ,, ಎಮ್ ಎಸ್ ಚೆನ್ನಪ್ಪ ಗೌಡ, ಅಧ್ಯಾಪಕ, ಕೊಲ್ಲಮೊಗ್ರು
೧೨ ,, ಕ ರಾಮ ಶಾಲ್ಯಾಯ, ಮಂಗಳಪೇಟೆ, ಸುರತ್ಕಲ್
೧೩ ,, ಸಿ ಮಾಬು, ಅಧ್ಯಾಪಕ, ಸುರತ್ಕಲ್
೧೪ ,, ಕೆ ಬಿ ಕರ್ಕರ, ಸುರತ್ಕಲ್
೧೫ ,, ಯು ಸಂತಾರಾಮಾಚಾರ್ಯ, ಸವಣೂರು
೧೬ ,, ಎಮ್ ಕೆ ಬಾವ್ಯ, ಟೀಚರ್, ಇನ್ನಂಜೆ
೧೭ ,, ಯ ಕೆ ಮರಾಳ ನಾಯಕ್, ಉಪ್ಪು, ಭಟ್ಕಳ
೧೮ ,, ಪಿ ವೇಜಪ್ಪ ಶೆಟ್ಟಿ, ಗರಡಿ, ಪಾಂಗಾಳ
೧೯ ,, ಪಿ ಯಜ್ಞ, ಅಧ್ಯಾಪಕ, ಪೆರ್ಡೂರು
೨೦ ,, ಟಿ ಸಂಜೀವ ಪೈ, ಉಡುಪಿ
೨೧ ,, ಬಿ ಎಮ್ ನಾಯಕ್, ಪೆಡ್‌ಮಾಸ್ಟರ್, ಹಾಲುಡಿ
೨೨ ,, ಕೆ ಆನಂತ ಕೃಷ್ಣರಾಜ್, ಉಡುಪಿ

ಇವರೊಳಗೆ ಸೋಡ್ತಿ ಹಾಕಿರುವ ಮೂರಜನೆ ಬಹುಮಾನವು ನಂಬ್ರ ೧ನೇ ಶ್ರೀ ತಿಮ್ಮಪ್ಪಯ್ಯ ಉಪಾಧ್ಯಾಯ, ಉಡುಪಿ, ಇವರಿಗೂ ಎರಡನೇ ಬಹುಮಾನವು ನಂಬ್ರ ೫ನೇ ಶ್ರೀ ಎಮ್ ಜೋಜ ಶೆಟ್ಟಿ, ಉಪಾಧ್ಯಾಯ, ಕೇಳಂಜೆಯವರಿಗೂ ದೊರಕಿರುತ್ತದೆ

ಬರುವ ವಾರ ವಿಶೇಷ ಬಹುಮಾನವುಳ್ಳ ನೂತನ ಒಗಟು ಪ್ರಕಟವಾಗುವುದು. ನಿರೀಕ್ಷಿಸಿರಿ!

ಸ್ವಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರಿಗಡ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಗಳ ರಿಂಗ್‌ವರ್ಮ್
ಮುಲಾಮು ಈ ಕೆಳಗಡಂತೆ ಪ್ಯಾಕ್ಕಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವೃತ್ತಾಂತದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, — ಬೊಂಬಾಯಿ, ಮದ್ರಾಸು, ಕಲ್ಕತ್ತ.

ಶ್ರೀ ರಾಮಾರೆಸ್ಟೋರೆಂಟ್

ಉಡುಪಿ

ಊಟ ಉಪಹಾರಗಳ ರುಚಿ! ಸ್ಥಳ ಅಸನಗಳ ಶುಚಿ!!

ಶಾಲಾ ವಿದ್ಯಾರ್ಥಿಗಳ ಅನುಕೂಲತೆ, ಪ್ರವಾಸಿಕರಿಗೆ ಅತ್ಯುತ್ತಮ ಸೌಕರ್ಯ ಇವೆಲ್ಲಾ
ಇರುವ ಒಂದೇ ಒಂದು ವಿಶ್ರಾಂತಿಗೃಹವೆಂದರೆ ಶ್ರೀ ರಾಮಾರೆಸ್ಟೋರೆಂಟ್!
ಸುಲಭ ದರದಲ್ಲಿ ಅತ್ಯುತ್ತಮ ತಿಂಡಿ ಪಾನೀಯಗಳು; ಅತ್ಯಾಧುನಿಕ ರೀತಿಯ ಊಟ
ಇವುಗಳಿಗೆ ನಮ್ಮ ಅನುಭವಪೂರ್ಣ ಮೇಲ್ವಿಚಾರಣೆ. ಹೀಗಾಗಿ ನಿಮಗೆಲ್ಲಾ
ಸುಖವೇ ಸುಖ! ಸಂತೆಕಟ್ಟೆಯಿಂದ ತೆಂಕು ಕೋರ್ಟುರೋಡ್ ಮತ್ತು ಕೋಳದಪೇಟೆ
ರೋಡ್ ಮಿಲನವಾದಲ್ಲಿ ಶ್ರೀ ಕಾಶೀ ಮಠದವರಿಂದ ಹೊಸದಾಗಿ ಕಟ್ಟಿಸಿರುವ
ದಿವ್ಯವಾದ ಮಂದಿರದಲ್ಲಿರುವ ಶ್ರೀರಾಮಾ ರೆಸ್ಟೋರೆಂಟನ್ನೊಮ್ಮೆ ಸಂದರ್ಶಿಸಿ ನೋಡಿರಿ

ಎಚ್. ಗೋಪಾಲ ನಾಯಕ್,
ಪ್ರೊಪ್ರೈಟರ್.

DIAMONDS! DIAMONDS!!

K. Ramachandra Krishna Shet

Near Mission High School. *Mangalore*

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟ್ರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ನಿರ್ಣಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಖೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದಿಗೆ
ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು
ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು
ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ
ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ ಶ್ರೇಷ್ಠವಾದ

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ

ಇಡೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹಡಿಸ್ಥಿದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ವಾಕರಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬಯಿ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ ಪ್ರಕಟನೆಗೆ ಅತ್ಯುತ್ಕೃಷ್ಟವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD 1919)

Chairman, Mr. N C Kelkar, Ex- M. L A.

HEAD OFFICE
POONA CITY.

CHIEF AGENCY OFFICE
HAMPANKATTA, MANGALORE.

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1933ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮೆತ್ತು 12ರಷ್ಟರ
ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಡ ವಿಳಾಸಕ್ಕಾಗಲಿ ಬರಕೊಳ್ಳಿರಿ:—

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕೆಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೌಂಡ್ ರೇಫ್ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಎ. ಬಿ. ಶೆಟ್ಟಿ, ಎಸ್ಕ್ವಾಯರ್, M.L.C., ಪ್ರೆಸಿಡೆಂಟ್.

ಡಾ| ಎಂ. ಆರ್. ಕಾಮತ್, L.M.P, ವೈಸ್ ಪ್ರೆಸಿಡೆಂಟ್.

ಬಿ. ಭೋಜರಾವ್, ಎಸ್ಕ್ವಾಯರ್, ಕಾರ್ಯದರ್ಶಿ

ಲಿನ್ಸ್ ಆಫ್ಟರ್ ಕಾರ್ತೀಕ 25—1—'37]

[ಸೋಡ್ತಿ ತೆಗೆಯುವ ತಾರೀಕು 31—1—'37

ಟಿಕೇಟು ೧ರೆ ಖರೀದಿ ಆಣೆ ನಾಲ್ಕು ಮಾತ್ರ. **೨೦ ಟಿಕೇಟುಗಳಿರುವ ಪುಸ್ತಕಕ್ಕೆ ರೂ. ಐದು ಮಾತ್ರ.**

ಜನರಲ್ ಸಮಿತಿಯ ಇತರ ಸದಸ್ಯರು:

ಮ| ರಾ| ಎಮ್. ಆರ್ ಪೂಂಜ, ಆನರರಿ ಮ್ಯಾಜಿಸ್ಟ್ರೇಟರ್
ಎಮ್ ಬಿ ಇಡ್ಡಿನಬ್ಬ, ಎಸ್ಕ್ವಾಯರ್
ಆರ್ ಅಣ್ಣಾಜಿ, ಎಸ್ಕ್ವಾಯರ್
ಚಾರ್ಲ್ಸ್ ಪಿ ಆಣ್ಣಾಜಿ, ಎಸ್ಕ್ವಾಯರ್,
ಮ| ರಾ| ಎಚ್ ತ್ರಿನಿವಾಸ ಎ ಶೆಣೈ, ಆನರರಿ ಮ್ಯಾಜಿಸ್ಟ್ರೇಟರ್
ಮ| ರಾ| ಕೆ ಕೃಷ್ಣರಾವ್, ಆನರರಿ ಮ್ಯಾಜಿಸ್ಟ್ರೇಟರ್, ಬಿ ಎ, ಎಲ್ ಬಿ
ಮ| ರಾ| ಜೋಳ ನಾಸುದೇವ ರಾವ್, ಆನರರಿ ಮ್ಯಾಜಿಸ್ಟ್ರೇಟರ್
,, ಎಚ್ ಸುಬ್ಬ ಚೆಂಪಿ, ಆನರರಿ ಮ್ಯಾಜಿಸ್ಟ್ರೇಟರ್
,, ಕೆ ಅಣ್ಣಪ್ಪ ಭಟ್‌ಜಿ, ಆನರರಿ ಮ್ಯಾಜಿಸ್ಟ್ರೇಟರ್
ಟಿಕೇಟು, ಪುಸ್ತಕ ಇತ್ಯಾದಿಗಳಿಗೆ ಕಾರ್ಯದರ್ಶಿಯವರಿಗೆ ಬರಕೊಳ್ಳಿರಿ.
,, ವಿ ನರಸಿಂಹ ಕಾಮತ್, ಆನರರಿ ಮ್ಯಾಜಿಸ್ಟ್ರೇಟರ್
,, ಎಮ್. ಕೆ ಪೂವಪ್ಪ, ಆನರರಿ ಮ್ಯಾಜಿಸ್ಟ್ರೇಟರ್
,, (ಡಾಕ್ಟರ್) ಎಮ್ ಉಮೇಶ ರಾವ್, ಆನರರಿ ಮ್ಯಾಜಿಸ್ಟ್ರೇಟರ್, ಎಲ್. ಎಮ್. ಎಂಡ್ ಎಸ್
,, ಎಸ್ ಸುಬ್ಬ ಚೆಂಪಿ, ಆನರರಿ ಮ್ಯಾಜಿಸ್ಟ್ರೇಟರ್
,, ಎಮ್. ಆರ್ ಸುವರ್ಣ, ಆನರರಿ ಮ್ಯಾಜಿಸ್ಟ್ರೇಟರ್
,, ಕೆ. ಯು ಪೈ, ಆನರರಿ ಮ್ಯಾಜಿಸ್ಟ್ರೇಟರ್, ಬಿ ಎ
,, ಯು ದೇವರಾಯ ಶೆಣೈ, ಆನರರಿ ಮ್ಯಾಜಿಸ್ಟ್ರೇಟರ್
,, ಯು ಕೃಷ್ಣರಾಯ, ಆನರರಿ ಮ್ಯಾಜಿಸ್ಟ್ರೇಟರ್
,, ಎಮ್. ಕೆ. ಬಸಪ್ಪ, ಆನರರಿ ಮ್ಯಾಜಿಸ್ಟ್ರೇಟರ್
,, ಪಂ ಎಚ್ ವಾಸುದೇವಯ್ಯ, ಆನರರಿ ಮ್ಯಾಜಿಸ್ಟ್ರೇಟರ್
,, ಪಿ ಜೋಗಪ್ಪ ಕಾಮತ್, ಆನರರಿ ಮ್ಯಾಜಿಸ್ಟ್ರೇಟರ್
,, ಎ ಪದ್ಮನಾಭ ಭಟ್, ಆನರರಿ ಮ್ಯಾಜಿಸ್ಟ್ರೇಟರ್
,, ಕೆ ಅಣ್ಣಪ್ಪ ಭಟ್‌ಜಿ, ಆನರರಿ ಮ್ಯಾಜಿಸ್ಟ್ರೇಟರ್
,, (ಡಾಕ್ಟರ್) ಎಮ್ ಉಮೇಶ ರಾವ್, ಆನರರಿ ಮ್ಯಾಜಿಸ್ಟ್ರೇಟರ್, ಎಲ್. ಎಮ್. ಎಂಡ್ ಎಸ್
,, (ಡಾಕ್ಟರ್) ಕೆ. ಶ್ಯಾಮ ಶೆಟ್ಟಿ, ಆನರರಿ ಮ್ಯಾಜಿಸ್ಟ್ರೇಟರ್ ಎಲ್ ಎಮ್ ಪಿ
,, ಯು ವಿ ಶೆಣೈ, ಆನರರಿ ಮ್ಯಾಜಿಸ್ಟ್ರೇಟರ್
ವೆರಿ ರೆವೆರೆಂಡ್ ಜೋರ್ಜ್ ಮೆನೆಜಸ್, (ಪಿ. ಡಿ, ವಿಕಾರ್

ತರುಣ ತರುಣಿಯರಿಗೆ
ಅತ್ಯಂತ ಜೋಧಪ್ರದವಾದ
ಅತ್ಯಾಧುನಿಕ ನಾಟಕ

ಪ್ರಭಾವಿನಿ ಯಾರು ?

LAXMI BRAND COFFEE POWDER.

Pure & Superior quality, will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ ಸದಾ ಉಪಯೋಗಿಸಿರಿ ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಒಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern

ನಮ್ಮಲ್ಲಿ ಕಬ್ಬಿಣದ ಟ್ರೆಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಲೆ ಕಂಪನಿಗಳಿಂದಲೂ ಮಾರುವ ಖರ್ಚಾದಿದೆ.

For Prices & Particulars Apply to-

K. K. Shanbhag & Sons

Court Road, UDIPI, S K

Sold also by Instalments

ನನ್ನ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. *Choukhamba, Benares City.*

ಮೂರು ಇನಾಮುಗಳು.

THIS MAN WISHES HE HAD

ಶ್ರೀ ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮೂಲುಗಳ ಕೆಟಲಗಳು, ಕಾಶೀಸಕ್ಕೆ, ವಿಶ್ವೇಶ್ವರ ಪಟ್ಟೆ, ಈ 3 ಸಾಮಾನುಗಳು 1 ಆಣೆ ಸ್ವೀದಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುದು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಡಿ ಕದಪಾಮ್ಲಿ, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಚಾಕ, ಧಾವಳಿ, ನಾಮಂಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸಸನುಮೂನೆಯ ವಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20 ರಿಂದ 55. ವಡಲು ಸಾದಾ 16 ಮೊಳದ ಸೀರೆ 1 ಕ್ಕೆ ರೂ. 16 ರಿಂದ ರೂ. 35 ರ ವರೆಗೆ. ಅರೆ ಕಡಮೆ 15 ಮೊಳ ಕ್ವಾರ್ ಆಂಚು ರೂ. 10½ ರಿಂದ ರೂ. 16 ಖಣ 1 ಕ್ಕೆ ರೂ 1½ ರಿಂದ ರೂ 10 ರ ವರೆಗೆ ಪೋಸ್ಟು ಬಚ್ರ್ ಪ್ರತ್ಯೇಕ ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು

ವಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜುಲ್ಯಾಯಲ್ಲಿ ಮೊದಲಾಗುತ್ತದೆ ಮುಯಾದೆಯ ಉದ್ಯೋಗಕ್ಕೆ ಬೇಕಾಗಿದ್ದರೆ ಇಲ್ಲಿ ವಿಕ್ಷಣವನ್ನು ಪಡೆಯಿರಿ ಮಿಲ್ಲಿ, ಆಪ್ಸರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರಿಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳಿವೆ ಪ್ರಸ್‌ಪೆಕ್ಟಸ್ ಮೊಹರಿಗಾಗಿ ಕೂಡಲೆ 3 ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,
ಬಿ ಎ ಎಲ್ ಟಿ, ಎಫ್. ಪಿ ಎಸ್. ಎಸ್, ಭಪಗ್ರಹ್ಮ, ರಿಜಿಸ್ಟ್ರಾರ್-

For Superior Khadder, mill-cloth, perfumery, toilet &c. - - - - - - - approach

SRI BHARATHA VASTU MANDIRA UDIPI

THULUNAD PRESS UDIPI

[Estd. 1931]

for the execution of

ARTISTIC PRINTING

OUR MOTTO

IS

Neatness and timely delivery That is how we have risen to the position of one of the foremost printers of the district Within a short period A trial order will convince you.

Props:

SUPPLY AGENCY LIMITED

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY

It will pay you to advertise in 'NAVAYUGA' The Leading Nationalist Kanarese Weekly of Karnatak FOR RATES OF ADVT Etc APPLY TO THE MANAGER

ನವಯುಗ

ವಾರಪತ್ರಿಕೆ

ಸಂಪಾದಕಃ ಕೆ. ಕೆ. ಶೆಟ್ಟಿ.

VOL XVI-NO 13

26 - 11 - 1936

ವಾಚಕರನ್ನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟು
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟು
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೯ ೦
ಕಿರಿಯರ ಪ್ರಪಂಚ, ಉಡುಪಿ

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದ ತುಮುಲನಾದ:

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯಾರಕ್ತ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ನವಂಬರ ೨೬, ೧೯೩೬ [ಸಂಚಿಕೆ ೧೩

ABSOLUTE SAFETY OF INVESTMENTS **COMPLETE SECURITY TO DEPOSITORS**

COMPREHENSIVE AND EFFICIENT SERVICE TO THE PUBLIC,
ARE THE OUTSTANDING FEATURES OF

The Canara Industrial and Banking Syndicate, Limited.

(INCORPORATED IN BRITISH INDIA)

THE PIONEER AND HIGHLY PROGRESSIVE COSMOPOLITAN BANK OF KARNATAKA

ESTD.] Head Office: "MUKUNDA NIVAS," UDIPI. [1925

BRANCHES:

1	Mangalore	7	Bangalore City	13	Coondapoor	19	Ankola
2	Hubli	8	Gadag	14	Brahmavar	20	Sirsi
3	Belgaum	9	Cannanore	15	Hungarcutta	21	Bhatkal
4	Bellary	10	Udipi	16	Honavar	22	Karkala
5	Adoni	11	Kanhangad	17	Kumta	23	Uppinangadi
6	Hospet	12	Payyanur	18	Karwar	24	Kasargode

25 Sagar.

ANNOUNCEMENT

WE HAVE MUCH PLEASURE IN ANNOUNCING THAT TWO BRANCHES OF OUR BANK HAVE BEEN OPENED IN OCTOBER, 1936, ONE AT **KASARGODE** (S. Kanara Dt.) & THE OTHER AT **SAGAR** (Shimoga Dt.) ON THE 24th and the 29th RESPECTIVELY, WHERE ALL KINDS OF BANKING BUSINESS ARE TRANSACTED. IT GIVES US GREATER PLEASURE TO ANNOUNCE THAT **FOUR MORE BRANCHES** WILL BE OPENED IN 1936 at **BYADGI, PRODATTUR, TADPATRI,** and **NANDYAL** on the 29th November. 3rd December 16th December, and 18th December RESPECTIVELY. THE LARGE NUMBER OF OUR CLIENTS AS WELL AS THE GENERAL PUBLIC ARE REQUESTED TO TAKE ADVANTAGE OF THE NUMEROUS FACILITIES OFFERED BY US AT LOW RATES

"MUKUNDA NIVAS," **UDIPI**
30—10—1936.

P. A PAI Brothers
Managing Agents

ಕುಂದಾಪುರ ಬೇಂಕ್ ಲಿಮಿಟೆಡ್, ಕುಂದಾಪುರ.

ಬ್ಯಾಂಚ್—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ರೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ **ಖಾಯಂ** ರೇವಣಾತಿಗಳು **3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ 4½%, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½%** ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ರೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯುಮುಲೇಟಿವ್ ರೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ.—ಬಡವರಿಗೆ ಸಹಾಯವಾಗುವಂತ ಕಡಿಮೆ ಎಂದರೆ ರೂಪ್ಯಾ 10 ಸಹ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಗೆ ಬರಕೊಳ್ಳಿರಿ.

ಈ ಕುರಿತು ಅಪೀಲು ನಡವು ಅಲಪಾ ಗಳಿಗೂ ತನ್ನ ಸ್ವೀತಿಸ್ವೋರ್ಜಕವಾದ ವಂದೆ ಬಾದ್ ಹ್ಯಾಕೋರ್ಟನವರು ವಿಕ್ಷಯಸ್ಸು ನೆಯನ್ನಹಿಸಿದರು

ಲಾಗಿವೆ ಪ್ರೀ ಫೂಜಾಸ್ಥೆ ಬಂಗಾಳದ ಯಿವರನ್ನು, ಒಂಗಳವಾರ ಪ್ರಿ ಸುಭಾಷ್ ಚಂದ್ರಿಸಿಲ್ ಬೋ ಎಸೋಷಿಯೇಷಿಂ ಅಧ್ಯಕ್ಷನ ಪಾತಂತ್ರ್ಯವನ್ನೂ ಸೂಚಿಸುವರು.

(ತಾಲೂಕು

ಉಡುಪಿ, ದ. ಕ.

ಸ್ವಯಾಜಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸಾಮಾನ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖರೇಖೆಯಿಂದ ತಯಾರಿಸಿ ಸದಾ ಕಾಲದ ಲ್ಲಿಯೂ ಆನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವ ಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲ ತರಹ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ದೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ದೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R Punja,
President & Manager,

ಯಂ. ಆರ್. ಪೂಂಜ,
ಪ್ರೆಸಿಡೆಂಟು ಮತ್ತು ಮೆನೇಜರ್.

ಶತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾಪ ಧಾತುನಸ್ಯ, ನರಗಳ ಸಿಪ್ಪಕ್ಕೆ ಇನ್ನಾಗಿಲನ್ನು ಹೋಗಲಾಡಿಸಿ ನಿಶ್ಚಿತ ಗುಣ ಉಂಟಾಗುವಂತೆ ಮಾಡುತ್ತದೆ ಈ ಗುಳಿಗೆಗಳು ಆರೋಗ್ಯವಾದ ಜೀವನವನ್ನು ಉಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲೂನಿತ್ವವನ್ನು ಹೋಗಲಾಡಿಸಿ ಮಸ್ತರಕ್ತವನ್ನು ಶುದ್ಧವಾದ ಚ್ಚುಪಕ ರಕ್ತವನ್ನು ವೃದ್ಧಿಪಡಿಸುವುದು ಕ್ರಯ: ಡಬ್ಬಿಗಕ್ಕೆ ೧–೦–೦

ವಾಜೀಕರಣ ತೈಲ:—ಹೊರಗೆ ಪಚ್ಚಲು ಮಾತ್ರವಲ್ಲದೆ ಬಾಲ್ಯದಲ್ಲಿ ಸ್ವಲ್ಪ ಅನಾಚಾರದಿಂದ ಅಥವಾ ಇನ್ನಾವ ಕಾರಣಗಳಿಂದ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿರುವುದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸುಹವನ್ನು ಕೊಡುವುದು ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವು ಗೊತ್ತಾಗುತ್ತದೆ ಕ್ರಯ: ಸೀಸೆ ಒಂದಕ್ಕೆ ೫–೦–೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಶುದ್ಧಮಾಡಿ, ನರಗಳನ್ನು ಒಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನಿ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ವೀರ್ಯಕ್ಕೆಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು ಕ್ರಯ: ಡಬ್ಬಿಗಕ್ಕೆ ೩–೦–೦.

'ಕಾಮಶಾಸ್ತ್ರ' ದರ್ಪಣ ಪೋಸ್ಟಾಜು ವಗೈರೆಯಾಗಿ ಕಳುಹಿಸುವವು ಒಂದು ಕಾರ್ಡ್ ಹಾಕಿರಿ

ಶತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾಕ, ಬೆಂಗಳೂರು ಸಿಟಿ

ನಿಮ್ಮ ವಿಳಾಸವನ್ನು ಕಳುಹಿಸಿರಿ.

ಆಕಾರ ದೊಡ್ಡದು! ಪುಟಗಳು ಈಗಿನಷ್ಟೆ!!

ಈಗಿನದಕ್ಕಿಂತ ಅಂದ ಮಾಟ.

ಇಷ್ಟಾದರೂ ಚಂದಾ ಹಣವನ್ನು ಇಳಿಸಿದೆ.

ಅಂಚೆವೆಚ್ಚ ಸಹಿತ ವರ್ಷಕ್ಕೆ ರೂ. ೪—೮—೦, ಬಿಡಿ ಸಂಚಿಕೆ ೬ ಆಣೆ

ಬರುವ ಜನವರಿ ಸಂಚಿಕೆಯು

ವಿಜಯನಗರ ಸ್ಮಾರಕೋತ್ಸವ

ಸಂಚಿಕೆಯಾಗಿ ಹೊರಬೀಳುವುದು.

ಜಾಹೀರಾತುದಾರರಿಗೆ ಸುವರ್ಣ ಸಂಧಿ!

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೬೦ ಮಾತ್ರೆಗಳಿಗೆ ರೂ ೩–೮ ೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸ ಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವವಿದ್ದ ಪಾದ ದಿವ್ಯೌಷಧಗಳು ದೊರೆಯುತ್ತವೆ

ಯು ಪಿ. ಮೇಸ್ತ್ರಿ, ಗೋಲ್ಡ್‌ಮೆಡಲ್ಲಿಸ್ಟ್ ಸಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

Head Office: UDIPI] [Branch: MANGALORE.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4½% on 1 or 2 years and at 5% on 3 or 4 years deposits.

Every other description of up-to-date Banking business is also undertaken.

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ **ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)** ಹಣ ಪರತ

ಈ ಚೂರ್ಣವು ಕೆಂಪು ಬಿಳಿ ಶರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೀಣ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಸ್ರವನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಐಕ್ಯಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹಣೆಯತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಸ್. ಇನ್ಸ್‌ಪೆಕ್ಟರ ಬೆಳಗಾಂವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು. ಮತ್ತು ಎಲ್ಲ ರೋಗಗಳು ನಿಶ್ಯೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಲ್ಲದಂತಾದವು. ತಗ ವಿವಸದ ಡಬ್ಬಿಯ ಕಿಮ್ಮತ್ತು ರೂ. ೩ ಟಪಾ. ಆಣೆ, ೮. ಡಬ್ಬಿಗೆ ಆರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) [೩ ಪಾ ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಆರಕ್ತವಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಔಧವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಎಸು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂಲ ಕೇಳವಾ ಮಾಹಿಮಾ ಜಿ. ರಾಹೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ನಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜಿ, S. M. C.

ಸಮಾಚಾರ ಸಂಗ್ರಹ

ಅಮರನಾಥರ ವಿದ್ಯಮಾನದ ವಿಚಾರಣೆ, ಶಿಕ್ಷೆ ಕಠಿಣವಾದುದೆಂದು– ತೀರ್ಮಾನ- ಎಮ್. ಎನ್.

ರೈಗಳ ಬಿಡುಗಡೆ — ೧೨೦೦ ಮಂದಿಯ ಮರಣ — ಜರ್ಮನಿ ಜಪಾನುಗಳೊಳಗೆ ಒಪ್ಪಂದ—

ಶಿಕ್ಷೆಯು ಅತಿ ಕಠಿಣವಾದುದು.

ಇಂಗ್ಲೆಂಡು ಮತ್ತು ಹಿಂದುದೇಶಗಳೊಳಗೆ ನಡೆದ ಈ ಸಲದ ಕ್ರಿಕೆಟ್ ಟೆಸ್ಟ್ ಮೇಚಿನಲ್ಲಿ, ಹಿಂದೀ ಕ್ರಿಕೆಟ್ ಟೀಮಿನ ಕೆಪ್ಟನರಾದ ವಿಜಯನಗರದ ಯುವರಾಜರಿಗೂ, ಸುಪ್ರಸಿದ್ಧ ಆಟಗಾರರಲ್ಲೊಬ್ಬರಾದ ಶ್ರೀ ಅಮರನಾಥರಿಗೂ ಕಲಹ ಪೆದ್ದು ಆಮರನಾಥರು ಹಿಂದೆ ಕಳುಹಿಸಲ್ಪಟ್ಟಿದ್ದರಷ್ಟೆ. ಈ ಕುರಿತು ವಿಚಾರಣೆ ನಡಿಸಲು ಹಿಂದೀ ಕ್ರಿಕೆಟ್ ಬೋರ್ಡಿನವರು ಚೀಫ್ ಜಸ್ಟಿಸ್ ಸರ್ ಜೋನ್ ಬೊಮೌಂಟ್ ಮತ್ತು ಡಾಕ್ಟರ್ ಸುಬ್ಬರಾಯನವರನ್ನು ನೇಮಿಸಿದ್ದರು ಇವರಿಬ್ಬರ ವಿಚಾರಣೆಯ ಫಲಿತಾಂಶವು ಈ ಕಳಗಿನಂತಿದೆ.— ಶ್ರೀ. ಅಮರನಾಥರು ಸಂಪೂರ್ಣ ನಿರಪರಾಧಿಯೇನೂ ಅಲ್ಲ. ಆದರೆ ಅವರ ಅಪರಾಧಕ್ಕೆ ಟೀಮಿನ ಕಪ್ತನರೂ ಮೆನೆಜರರೂ ಕೂಟ್ಟ ಶಿಕ್ಷೆಅತಿ ಕಠಿಣವಾಮುದು. ಇದರಿಂದ ಹಿಂದಿ ಕ್ರಿಕೆಟ್ ಟೀಮಿನ ಮೇಲೆ ದುಷ್ಪರಿಣಾಮವಾಗಿ ಕೆಲ ಮುಟ್ಟಿಗ ಅದರ ಅವಜಯಕ್ಕ ಕಾರಣವಾಯಿತು. ವಿಜಯನಗರದ ಮಹಾರಾಜ ಕುಮಾರರು, ಕಪ್ತನ್ ಮತ್ತು ಕ್ರಿಕಟ್ ಆಟಗಾರರಾಗಿ ಅಸ್ಟೊಂದು ಜಯಶಾಲಿಯಲ್ಲ ಟೀಮಿನ ಮೆನೆಜರರು ನಾಕಷ್ಟು ಚತುರತೆಯಿಂದ ತನ್ನ ಕೆಲಸ ನಿರ್ವಹಿಸಿಲಿಲ್ಲ ನೇಜರ್ ಸಿ ಕೆ ನಾಯಡುಗಳ ವರ್ತನೆಯೂ ಖಂಡನಾರ್ಹವಿದೆ. ಶ್ರೀಗಳಾಡ ಎ. ಎಮ್. ಮುರ್ಚಂಟ್ ಮತ್ತು ಸಿ. ರಾಮಸ್ವಾಮಿಯವರು ಪ್ರಶಂಸನೀಯರಿದ್ದಾರೆ. ಕ್ರಿಕಟ್ ಬೋರ್ಡಿನವರು ಇನ್ನು ಮುಂದೆ ಕೇವಲ ಆಟದ ಯೋಗ್ಯತೆಯಿಂದ ಲ್ಲದೆ ಸಾಮಾಜಿಕ ಸ್ಥಾನ ಮಾನದ ದೃಷ್ಟಿಯಿಂದ ಕೆಪ್ತನನ್ನು ಆರಿಸಬಾರದು ಈ ಸಲದ ಟೆಸ್ಟ್‌ಮ್ಯಾಚಿನಿಂದ ಖರ್ಚು ಕಳೆದು 100 ಪವನು ಉಳಿದಿರುವುದು ಶ್ರೀ ಅಮರನಾಥರು ಹಿಂದೀ ಕ್ರಿಕೆಟ್ ಬೋರ್ಡಿನವರಿಗೆ ಕ್ಷಮಾಪಣೆಯನ್ನಿತ್ತರೆ ಅವರನ್ನು ಅಂತರರಾಷ್ಟ್ರೀಯ ಕ್ರಿಕಟ್ ಮ್ಯಾಚುಗಳಿಲ್ಲ ಆಡಬಿಡಬಹುದು

ಎಮ್. ಎನ್. ರೈಗಳವರ ಬಿಡುಗಡೆ

ಕಾಂಗ್ರೆಸಿನ ಧ್ವಜದಡಿಯಲ್ಲಿ ಹಿಂದೀಯರೆಲ್ಲಾ ಒಂದಾಗಬೇಕು.

ಇದೇ ತಾ. 20ರಲ್ಲು ಶ್ರೀ ಎಮ್. ಎನ್. ರೈಗಳು, 6 ವರ್ಷಗಳ ಕಠಿಣ ಶಿಕ್ಷೆಯನ್ನನುಭವಿಸಿದ ನಂತರ ದೇರಡೂನ್ ಜೈಲಿನಿಂದ ಬಿಡುಗಡೆ ಹೊಂದಿರುವರು. ಶ್ರೀ ರೈಗಳು ಜರ್ಮನಿಯಿಂದ ಬಂದೂಡನೆಯೇ ಬೊಂಬಾಯಿಯಲ್ಲಿ 21-7-'31 ರಲ್ಲು ಬೈಕುಲ್ಲದ ಮನೆಯೊಂದರಲ್ಲಿ ಕೈದು ಮಾಡಲ್ಪಟ್ಟು ರಾಜರ ವಿರೋಧವಾಗಿ ಯುದ್ಧ ನಡಿಸುವ ಪಿತೂರಿ ನಡಿಸಿದರಂಬ ಆರೋಪದಿಂದ ಕೋನಪುರದಲ್ಲಿ 12 ವರ್ಷಗಳ ಕಠಿಣ ಶಿಕ್ಷೆಗೆ ಗುರಿಯಾಗಿದ್ದರು ಈ ಕುರಿತು ಅಪೀಲು ನಡೆದು ಅಲಹಾಬಾದ್ ಹೈಕೋರ್ಟಿನವರು ಶಿಕ್ಷೆಯನ್ನು 6 ವರ್ಷಕ್ಕೆಳಿಸಿದ್ದರು ಶ್ರೀ ರೈಗಳಿಗೆ ಆಶ್ರಯನಿತ್ತರೆಂದು ಮಿ ವಿ. ವಿ. ಶೈಕ್ ಮತ್ತು ಶ್ರೀ ಎಮ್. ಆರ್. ಪಟ್ಟು ಕೂಡಾ 2 ವರ್ಷಗಳ ಕಠಿಣ ಶಿಕ್ಷೆಗೊಳಗಾಗಿದ್ದರು ಶ್ರೀ ರೈಗಳನ್ನು ಜೈಲುದ್ವಾರದಲ್ಲಿ, ಡೀರ ಡೂನ್ ಮುನಿಸಿಪಾಲಿಟಿಯ ಚೇರ್‌ಮೇನರಾದ ಶ್ರೀ ಬಿಹಾರ್‌ಲಾಲ್, ಡಾಕ್ಟರ್ ಎಮ್. ಆರ್. ಪಟ್ಟ್ರಿ, ಮಿಸಸ್ ಮಣಿಬೆನ್ ಮೊಲ್ಲಿ, ಶ್ರೀ ವಿ. ಬಿ ಕರ್ಣಿಕರ ಮೊದಲಾದವರು ಎದುರ್ಗೊಂಡು ಹೂಮಾಲೆ ಹಾಕಿ ಸನ್ಮಾನಿಸಿದರು. ಪಂಡಿತ ಮದನ ಮೋಹನ ಮಾಲವೀಯರಿಗೆ ಅಸ್ವಸ್ಥವಿರುವುದರಿಂದ ಶ್ರೀ ರೈಗಳನ್ನು ಎದುರ್ಗೊಳ್ಳಲು ಹೋಗಲುಗಲಿಲ್ಲ. ಆದರ ಅನಂತರ ಅವರೊಡನೆ ಮಾತಾಡಿದರು 6 ವರ್ಷಗಳ ಕಠಿಣ ಶಿಕ್ಷೆಯು ಶ್ರೀ ರೈಗಳ ಆರೋಗ್ಯದ ಮೇಲೆ ಪರಿಣಾಮವನ್ನುಂಟು ಮಾಡಿತ್ತು. ಇವರ ತೂಕವು 45 ರತ್ತು ಕಡಿಮೆಯಾಗಿರುವುದು ಸಂಜೆ ಸ್ವಲ್ಪ ಜ್ವರ ಬರುತ್ತಿರುವುದು ಅನ್ನಕೋಶ ನುತ್ತು ಯಕೃತ್ತುಗಳೊಂಗ ನಿರಂತರವಾದ ವೇದನೆಯಿರುವುದು. ಸವರ್ಧ ಡಾಕ್ಟರರು ಶ್ರೀ ರೈಗಳನ್ನು ಪರೀಕ್ಷಿಸಿ ಇವರು 6 ತಿಂಗಳು ಸಂಪೂರ್ಣ ವಿಶ್ರಾಂತಿ ತೆಗೆದು ಕೊಳ್ಳಬೇಕೆಂದು ಹೇಳಿರುವರು. ರೈಗಳು ಅಲಹಾಬಾದಿಗೆ ಹೋಗಿ ಪಂಡಿತ ಜವಾಹರಲಾಲರೊಡನೆ ಮಾತ ಡಲಿರುವರು ಇವ್ಯಲಿಂದ ಬಿಡುಗಡೆ ಹೊಂದಿದೂಡನೆಯೇ ಶ್ರೀ ರೈಗಳು ಪತ್ರಿಕಾಪ್ರತಿನಿಧಿಗಳ ಒತ್ತಾಯದಿಂದ ಈ ಕೆಳಗಣ ಹೇಳಿಕೆಯನ್ನು ತ್ತಿರುವರು "20 ವರ್ಷಗಳ ನಂತರ ಇಷ್ಟೊಂದು ಮಂದಿ ಹಿಂದೀ ಪ್ರಮುಖರನ್ನು ನನಗೆ ಸಂದಿಸಲು ಸಾಧ್ಯವಾಗುವುದು ಇಂದಿಗಾ ವ್ಯದರುನಲ್ಲ. ಹಿಂದೀ ರಾಷ್ಟ್ರೀಯ ಸಭೆಯ ಧ್ವಜದ ಕೆಳಗೆ ಎಂದೀಯರೆಲ್ಲಾ ಸಿಲ್ಲಗಟ್ಟಲ್ಲುಲ್ಲ ನೀರಿ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕೆಂಬೀ ನಾನು ನನ್ನ ಸೇರಬಂಧುಗಳಿಗೆ ಈ ಸಂದರ್ಭದಲ್ಲಿ ಕೂಡುವ ಸಂತೋಷ. ಸ್ವಾತಂತ್ರ್ಯದ ಗುರಿಯನ್ನು ಸಾಧಿಸಲು ಸಶಸ್ತ್ರವಾದ ಕ್ರಾಂತಿಯ ಕಲ್ಪನಾ ಮಾತ್ರವಲ್ಲ. ನಿಶ್ಚಿತ ಕಾರ್ಯಕ್ರಮವೂ ಬೇಕು. ಸಮತೋಪಾದ ಅಧಿಕಾರ ಕ್ರಾಂತಿಯಾದರೂ ಇಂದಿನ ಪ್ರಸ್ತುತ ಪೂರ್ಣ ಸ್ವರಾಜ್ಯವನ್ನೇ ಪ್ರಕೃತ ನವ್ಯ ಮುಂದಿರುವ ಉದ್ದೇಶ. ಸಾಮ್ರಾಜ್ಯ ಸತ್ಪಯನ್ನು ವಿರೋಧಿಸುವ ಎಲ್ಲಾ ಶಕ್ತಿಗಳೂ, ಜನತಗಾಗಿ ಜನತಯ ರಾಜ್ಯವೆಂಬ ಪ್ರಜಾಸತ್ಯೆಯನ್ನು ಸಾಧಿಸಲು ಒಂದುಗೂಡಿ ಕಲಸ ಮಾಡಬೇಕು ರಾಷ್ಟ್ರೀಯ ಸಭೆಯೇ ನಮ್ಮೆಲ್ಲರ ಸರ್ವಸಾಮಾನ್ಯವಾದ ನಿಲ್ದಾಣವಂಬುದನ್ನು ಮನಗಂಡು ಅದನ್ನು ಹೆಚ್ಚು ಪ್ರಜಾಸತ್ತಾತ್ಮಕವಾಗಿಯೂ ತೀವ್ರಗಾಮಿಯಾಗಿಯೂ ಮಾಡಲೆತ್ನಿಸಬೇಕು" ಎಂದು ಕಾಂಗ್ರೆಸಿಗೂ, ದೇಶದ ಪಕ್ಕಲ್ಲಿಗರ ಮತ್ತು ಮಜೂರ ಸಂಘಗಳಿಗೂ ತನ್ನ ಪ್ರೀತಿಪೂರ್ವಕವಾದ ವಂದನೆಯನ್ನು ಪಿಸಿದರು.

1200 ಮಂದಿಯ ಮರಣ

ಇದೇ ತಾ. 18ರಲ್ಲು ಜಪಾನಿನಲ್ಲ ವಿಶೇಷ ನೂಲೆ ಒಂದೆ ನಿಮಿತ ಕ್ಯಾನ್ ಎಂಬಲ್ಲಯ 7811 ಅಡಿ ಎತ್ತರ ಪರ್ವತ ಉದ್ದದ ಕಜ್ಜಾಂಗು ಒಡೆದು ಜಲಪ್ರವಾಹವು 6 ಮೈಲ್ ಗಾತ್ರನ್ನು ಸಂಪೂರ್ಣ ನಾಶಮಾಡಿರುವುದು 1200 ನುಂದಿ ಕೊಲ್ಲಲ್ಪಟ್ಟಿರುವರು ಮನೆಗಳಲ್ಲಾ ಸ್ವಾಹದಲ್ಲಿ ನೆಳದೂಯ್ಯಲ್ಪಟ್ಟಿರುವವು ಒಟ್ಟು 620 ಮನೆಗಳು ಒಟ್ಟು ಹೋಗಿವೆ 300 ಪವಗಳು ಸಿಕ್ಕಿರುವವ

ಸರ್ದಾರ್ ವಲ್ಲಭಭಾಯಿ ಪರೀಲರು.

ಮತ್ತು ಶ್ರೀ ಭುಲಬಾಯಿ ದೇಸಾಯಿಯವರು ಇದೇ ತಾ. 19ರಲ್ಲು ಬಾಯುವೈ ಗಡಿನಾಡಿಗೆ ಹೋಗಿ ಅಲ್ಲಿ 15 ದಿವಸಗಳವರೆಗೆ ತಿರುಗಾಡಿ, ಜನಾವಣ ಕಾರ್ಯವನ್ನು ನಡಿಸಲಿರುವರು ಆ ನೆಲೆ ಸರ್ದಾರರು ದಶಂಬರ ತಾ 11ಕ್ಕೆ ಮುಂಬಾಸಿಗೆ ಬಂದು, ತಾ 12ರಲ್ಲು ಅಲಿಬಾಗಕ್ಕೆ ಹೋದಿ ಮತ್ತು ಸ್ವದೇಶಿ ಪ್ರದರ್ಶನವನ್ನು ತರಯಲಿರುವರು ಅನಂತರ ತಾ 14ರ ವರೆಗೆ ತಮಿಳುನಾಡಿನಲ್ಲಿ ಸಂಚರಿಸಿ ಅಲ್ಲಂದ ನೆಟ್ಟಿಗೆ ಜೈಪುರ ಕಾಂಗ್ರೆಸಿಗೆ ತೆರಳಿರುವರು.

ಬೆಂಕಿಯ ಜ್ವಾಲೆ

ಸೌತಾರದ ಬನ್ನು ಎಂಬಲ್ಲಿ ಇದೇ ತಾ. 18ರಲ್ಲು ಭಯಂಕರ ಬೆಂಕಿಯುದ್ದ 14 ಗಡಿಗಳೂ 11 ಸೆಟ್ಟಿಂಗಲೂ ಸುಟ್ಟು ಬಸ್ಮವಾಗಿರುವವ ನುಮಾರು ರೂ. 30,000 ನಷ್ಟವಾಗಿಹುದು ರಕ್ಷಣಾ ಕೆಲಸ ನಡೆಸುತ್ತಿದ್ದಾಗ ಗೋಡೆ ಬಿದ್ದು ಒಬ್ಬ ಫೈರಿಂಗ್ ಜಾನಾನು ಕೊಂಚಸ್ಟಿರುವನು 14 ಎಂದಿಗೆ ಸೆಟ್ಟಾಗಿರುವುದು ಒಬ್ಬ ಹಿಂದುವು ಕೊಲ್ಲಲ್ಪಟ್ಟು ಇಬ್ಬರಿಗೆ ಸಟ್ಟಾಗಿದೆ

ಜರ್ಮನಿ ಜಪಾನುಗಳೊಳಗೆ ಒಪ್ಪಂದ.

ರಷ್ಯದ ಸಮತಾನಾದನೆನ್ನು ಸಿರೋಧಿಸಲು ಜರ್ಮನಿ ಮತ್ತು ಜಪಾನು ಗುಪ್ತ ಮಾದೊಂದು ಒಪ್ಪಂದ ಮಾಡಿಕೊಂಡಿರುವೆಂದು ತಿಳಿದು ಬಂದಿದ ಇವರಿಂದ ರಸ್ಯವ ಸಿಟ್ಟುಗೊಂದು. ಆ ಕುರಿತು ತನ್ನ ಸಿಸೀದನನ್ನು ಜಪಾನಿಗೆ ಸೂಚಿಸಿದ ಮತ್ತು ಆದರಿಂದ ರಸ್ಯ ಮತ್ತು ಜಪಾನುಗಳೂಗೂ ಸಂಬಂದಕ್ಕೆ ಹಾನಿಯುಂಟಾಗಿದೆಂದೂ ಎಚ್ಚರಿಸಿರುವುದು ಜಪಾನಿನ ವಿದೇಶ ಮಂತ್ರಿಯು ಇದಕ್ಕೆಲ್ಲಾ ಉತ್ತರ ಕೊಟ್ಟಿರುವುದಿಲ್ಲೆಂದು ತಿಳಿದು ಬರುತ್ತಿದೆ

ಪ್ರೊಫೆಸರರನ್ನು ತೆಗೆದು ಹಾಕಲು ಸರಕಾರದ ಹುಕುಂ.

ಬಂಗಾಳದ ಹಜಾರಿಬಾಗ್ ಕೊಲೆಜಿನಲ್ಲ 13 ವರ್ಷಗಳ ವರೆಗೆ ಪದಾರ್ಥ ವಿಜ್ಞಾನದ ಪ್ರೊಫೆಸರಾಗಿದ್ದು, ಯಾವ ತರದ ತಪ್ಪಿಗೂ ಒಳಗಾಗದ್ದಿ ಶ್ರೀ ಸರೋತ್ತಮ ಘೋಷರನ್ನು ಈಗ ಸರಕಾರದ ಹುಕುಮಿನ ಮೇರೆಗೆ ಕೆಲಸದಿಂದ ತೆಗೆದು ಹಾಕಲಾಗಿದ. ಶ್ರೀ ಘೋಷರು ಬಂಗಾಳದ ಕ್ರಿಮಿನಲ್ ಲೋ ಎಮೆಂಡ್‌ಮೆಂಟ್ ಏಕ್ಟಿನ ಮೇರೆಗೆ ನಿರ್ಬಂದದಲ್ಲರಿಸಲ್ಪಟ್ಟು ಒಂದು ತಿಂಗಳ ನಂತರ ನಿಶ್ಚರ್ತವಾಗಿ ಬಿಡಲ್ಪಟ್ಟಿದ್ದರು ಕೊಲೆಜ್ ಆಡಳಿತಾಧಿಕಾರಿಗಳು ಅವರನ್ನು ಪುನಃ ಕೆಲಸಕ್ಕೆ ತೆಗೆದುಕೊಂಡರು ಇದಾದ ಕೆಲವೇ ದಿನಗಳಲ್ಲಿ ಸರಕಾರವು ಅವರಿಗೆ ಕೆಲಸಕೊಡಕೂಡದೆಂದು ಹುಕುಮು ಕೊಟ್ಟಿರುವುದು

ಎಡ್ವರ್ಡ್ ಚಕ್ರವರ್ತಿಗಳ ಪ್ರಜಾನುರಾಗ.

ವೇಲ್ಸ್ ದೇಶವನ್ನಣಿಗಳ ಪ್ರದೇಶದಲ್ಲಿ ಸಾಂಪತ್ತಿಕ ಮುಗ್ಗಟ್ಟಿನ ನಿಮಿತ್ತ ಕೈಗಾರಿಕೆಗಳೆಲ್ಲಾ ನಿಂತು ಹೋಗಿ ಜನರು ತೀವ್ರ ಸಂಕಷ್ಟಕ್ಕೆಳಗಾಗಿದ್ದರು. ಎಲ್ಲರೂ ಸರಕಾರದಿಂದ ಅಲ್ಪ ಸ್ವಲ್ಪ ಸಹಾಯ ಪಡೆದು ಜೀವನ ನಿರ್ವಾಹಮಾಡುತ್ತಿದ್ದರು ಉದ್ಯೋಗವಿಲ್ಲದೆ ನರಳುತ್ತಿದ್ದರು. ಈ ಪ್ರದೇಶಕ್ಕೆ ಎಡ್ವರ್ಡ್ ಚಕ್ರವರ್ತಿಗಳು ಸ್ವತಃ ಕಂಡಂಸಿ ನಿರುದ್ಯೋಗಿ ಜನರೊಡನೆ ಮಾತಾಡಿ ಅವರ ಸಂಕಷ್ಟಗಳನ್ನರಿತು ಕೂಂಡು ಬಹಳ ಕಂತಾಪಗೊಂಡರು. ಮುತ್ತು ಅವರ ಪೀಡಯನ್ನು ಪರಿಹರಿಸಲು ಏನಾದರೂ ಕಾರ್ಯ ಕೈಕೊಳ್ಳಲಾಗುವುದೆಂದು ಆಶ್ವಾಸನೆಯಿತ್ತರು ಕೆಲಸಕಿಂತು ಹೋಗಿದ್ದ ಗಸಿಕಾರ್ಮಿಂಗೆಗಳನ್ನು ಕಂಡು ಚಿಂತಪಟ್ಟರು

ಕಾಂಗ್ರೆಸ್ ಅಧ್ಯಕ್ಷ ಪದವಿ

ತಾನೆ ಪುನಃ ಪುನಃ ಕಾಂಗ್ರೆಸ್ ಅಧ್ಯಕ್ಷನಾಗಿ ಆರಿಸಲ್ಪಡುವುದು ತನಗೆ ಹಿತವಲ್ಲ, ಆ ಸ್ಥಾನಕ್ಕೆ ಹೊಂದುವವರು ಬೇರಲ್ಲಿ ಹೆಲವರಿರುವಾಗ ತನಗೆ ಅದು ಮಾಮೂಲಾಗಿ ಕೊಡಲ್ಪಡುವಂತಿದೆ. ತಾನು ಬೇರೆ ಜವಾಬ್ದಾರಿ ವಹಿಸಿ ಧ್ಯೇಯಕಾರ್ಯ ಕೆಲಸಮಾಡುವೆನು. ಕಾಂಗ್ರೆಸಿನ ಅಧ್ಯಕ್ಷತನವು ಮಹತ್ವದ ಜವಾಬ್ದಾರಿಯ ಮತ್ತು ಅತ್ಯಂತ ಶ್ರಮದ ಕೆಲಸ ಅದರಿಂದಾಗಿ ತನಗೆ ವಿಧಾಯಕ ಕಾರ್ಯಕ್ರಮಗಳನ್ನು ಮಾಡಲಾಗಿರುವುದಿಲ್ಲ. ಆದುದರಿಂದ ತನ್ನನ್ನು ಬಿಟ್ಟು ಬೇರೆ ಯಾರನ್ನಾದರೂ ಈ ಸಲ ಕಾಂಗ್ರೆಸಾಧ್ಯಕ್ಷರಾಗಿ ಆರಿಸುವುದೂಳಿತು. ಆದರೆ ಜನತೆಯು ತಮ್ಮ ಕೂಡದು ನಾನೆ ಪುನಃ ಕಾಂಗ್ರೆಸ್ ಪ್ರಸಿಡೆಂಟನ ಗಬೇಕೆಂದು ಅಭಿಪ್ರಾಯದಾಳ್ಳಿಕೆ ತಾನದಕ್ಕೆ ಒಪ್ಪದಿರಲಾಗಿನು ಪಂಡಿತ ಜವಾಹರಲಾಲರು ತನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರು ಇತ್ತಲಾಗಿ ವಾರ್ಧದಲ್ಲಿ ನಡೆದ ಸಭೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಪದವಿಯ ಕುರಿತು ಆಲೋಚಿಸಲಾಯಿತು. ಖಾನ್ ಅಬ್ದುಲ್ ಗಫರ್ ಖಾನ್ ಶ್ರೀ ರಾಜಗೋಪಾಲಾಚಾರ್ಯರೇ ಮೊದಲಾದವರು ಅಧ್ಯಕ್ಷತನ ನಪಿಸಲೊಪ್ಪಲಿಲ್ಲ. ಕೆಲವು ಪ್ರಾಂತಗಳು ಇಷ್ಟರಲ್ಲೇ ಹೆರರ ಗಳನ್ನು ಸೂಚಿಸಿದ್ದಾರೆ ಆದೆರೆ ಪಂಡಿತ ಜವಾಹರಲಾಲರೆ ಪುನಃ ಅಧ್ಯಕ್ಷರಾಗಿ ಆರಿಸಲ್ಪಡುವ ಸಂಭವವಿದೆ. ಇನ್ನು ನಾಡಿನ ಕೆಲವರು ಶ್ರೀ ರಾಜಗೋಪಾಲಾಚಾರ್ಯರನ್ನೂ ಆಂಧ್ರೋದ್ಧಾರಕ ಶ್ರೀ ಪಟ್ಟಾಭಿಯವರನ್ನೂ, ಬಂಗಾಳದವರು ಶ್ರೀ ಸುಭಾಷ ಚಂದ್ರರನ್ನೂ ಸೂಚಿಸಿರುವರು.

ಈ ವಾರದ ಕಥೆ

ಜೋಯಿಸರ ಜ್ಯೋತಿಷ್ಯ

ಹುಡುಗ ಪ್ರಭಾಕರನಿಗೆ ಭಾರೀ ಹೊಟ್ಟೆ ನೋವು. ಜೋಯಿಸರು ಹೊಟ್ಟಿಯೊಳಗೆ ಪ್ರೇತ ಹೊಕ್ಕಿದೆ ಅಂದರು; ಡಾಕ್ಟರರು ಹುಳ ಹೆಚ್ಚಿದೆ ಎಂದರು. ಹರಳೆಣ್ಣೆ ಮತ್ತು ಸೆಂಟೊನ್ಯಾನ್ ಕೊಟ್ಟಾಗ ಪ್ರೇತವಲ್ಲ; ರಾಶಿ ರಾಶಿ ಹುಳಗಳೇ ಹೊರ ಬಂದವು. ಆದರೆ ಸುಬ್ರಾಯ ಜೋಯಿಸರಿಗೆ ಸೋಲಿಲ್ಲ; ಅವರು ಪ್ರಭಾಕರನ ಹೊಟ್ಟಿಯೊಳಗೆ ಹೊಗಿಸಿದ್ದ ಪ್ರೇತವನ್ನು ಹೊಟ್ಟಿಯೊಳಗಿನ ಹುಳಿದ ಹೊಟ್ಟಿಯೊಳಗೆ ಹೊಗಿಸಿದರು.

ಸುಬ್ರಾಯ ಜೋಯಿಸರು ಅಮ್ಮತರ್ನಾಯರ ಮನೆಗೆ ಹೊರಟಿದ್ದರು. ಕಳೆದ ನಾಲ್ಕಾರು ದಿನಗಳಿಂದ ಪ್ರಭಾಕರನಿಗೆ ಪ್ರಾಣಾಂತಿಕ ಕಾಯಿಲೆ. ಅವನು ಅಮ್ಮತರಾಯರ ಒಬ್ಬನೇ ಮಗ. ಸುಮಾರು 10ವರ್ಷ ಪ್ರಾಯ ಆಗಿರಬಹುದು. ನಾಗನ ಹಳ್ಳಿಯ ನಾಗಪ್ಪಯ್ಯನ ಪೈಕುಂಠ ಸಮಾರಾಧನೆಗೆ ದೇವಸ್ಥಾನಕ್ಕೆ ಹೋದ ಆ ರಾತ್ರಿಯೇ ಕಠಿಣವಾದ ಹೊಟ್ಟನೋವಿನಿಂದ ಹಾಸಿಗೆ ಪಿಡಿದ. ಮೊದಲೇ ಅವನದು ಕ್ಷೀಣ ಪ್ರಕೃತಿ. ಸಮಾರಾಧನೆಯ ಪಾಯಸ ಪರಮಾನ್ನಗಳನ್ನು ತಿಂದು ಬಂದಿದ್ದೇ ಒಂದು ನೆವನ ವಾಯಿತು. ಏನೇನು ಮಾಡಿದರೂ ಪ್ರಭಾಕರನು ಗುಣಮುಖನಾಗಲಿಲ್ಲ. ಕೃಷ್ಣ ಪಂಡಿತರು ಬಂದು ಅರಿಷ್ಟ, ಆಸವ, ಘೃತ, ಲೇಹ, ಪೂತ್ರ, ಲೇಸ, ಯಾವುದು ಕೊಟ್ಟರೂ ನೋವು ಹೆಚ್ಚುತ್ತ ಬಂದೀತೇ ಹೊರತು ಎಳ್ಳಷ್ಟಾದರೂ ಕಡಿಮೆಯಾಗಲಿಲ್ಲ. ಏಸರೀತ ವಾಂತಿ ವಾಕರಿಕೆ ನುತ್ತು ಉಸಿರು ಕಟ್ಟುವಿಕೆಯಿಂದ ಒಮ್ಮೆ ಪ್ರಭಾಕರನು ಮೂರ್ಛೆಬಿದ್ದು ಮತ್ತೆ ಬೋಧಕ್ಕೆ ಬರಬೇಕಾದರೆ ಎಷ್ಟೋ ಸಮಯ ಕಳೆಯಿತು. ಕೂಸಮ್ಮ ಬಂದು ಬೇವಿನ ಸೊಪ್ಪಿನಿಂದ ಝಾಡಿಸಿ ದೃಷ್ಟಿ ತೆಗೆದಳು. ಗಂಗಕ್ಕನ ಹೊಗೆಪಾಕೆ ಭೂತಕ್ಕೆ ಕಾಣಿಕೆ ತೆಗೆದಿಟ್ಟಳು. ಆದರೆ ಅವರ ಆಟವೂ ನಡೆಯಲಿಲ್ಲ. ನಾಲ್ಕು ದಿನಗಳ ಅಸ್ವಸ್ಥದಿಂದ ಪ್ರಭಾಕರನು ಜೀಣಗಿದ ಹುಲ್ಲು ಕಡ್ಡಿಯಂತಾದನು. ಎಳೆ ವರ್ಷ ಪ್ರಾಯ!

ಸರಿಗ್ಗೆ ಪಾರ್ವತಮ್ಮ ಗಂಗಕ್ಕನ ಮನೆಯಿಂದ ಹಾಲು ತೆಗೆದುಕೊಂಡು ಬರುತ್ತಾ –'ಪೌದು, ಕಾಡ್ರೆ, ಜೋಯಿಸರು ಬಂದಿದ್ದಾರಂತೆ. ಕರೆಸಿ ನಮ್ಮ ಪ್ರಭಾಕರನ ಜಾತಕವನ್ನಾದರೂ ತೋರಿಸಬಹುದಿತ್ತು. ಪಂಡಿತರು ಎಷ್ಟೋಮಂದಿಗೆ ಗುಣಮಾಡಿದರು. ಪ್ರಭಾಕರನಿಗೆ ಗುಣವಾಗಲಿಲ್ಲ. ಗ್ರಹಚಾರ ದೋಷ ಇದ್ದರೂ ಇರಬಹುದು' ಎಂದು ಅಮ್ಮತರಾಯರೊಡನೆ ಹೇಳಿದಳು.

ಅಮ್ಮತರಾಯರಿಗೆ ಜ್ಯೋತಿಷ್ಯದ ಸೋಲೆ ತುಂಬಾ ಬಿಸ್ವಾಸ. ನಾಗನ ಹಳ್ಳಿಗೆ ಜೋಯಿಸರು ಬಂದ ವರ್ತಮಾನ ಕೇಳಿ ಅವರ ಆಪೇಕ್ಷೆಯೂ ಆಯಿತು. ಸುಬ್ರಾಯ ಜೋಯಿಸರ ಕೀರ್ತಿ ಹಳ್ಳಿ ಹಳ್ಳಿಗೂ ಪಸರಿತ್ತು. ಅವರ ತಂದೆಯೊಬ್ಬರು ಪ್ರಸಿದ್ಧ ಜೋಯಿಸರು; ಸೂತ್ರ ಸಂಹಿರು, ಕೊಪ್ಪರಿಗೆ, ಸ್ವಾಸ್ಥ ಸಕ್ಷೇವ ಗ್ರಹಗಳನ್ನು ಕೂಡ ಕೇಳಿದವರಿಗೆ ಮುಚ್ಚುಮರೆಯಲ್ಲದೆ ಹೇಳುವ ಲೋಕೋಪಕಾರಿಗಳಾಗಿದ್ದರು. ಜ್ಯೋತಿಷ್ಯ ಎಂಬುದು ಸುಬ್ರಾಯ ಜೋಯಿಸರಿಗೆ ತಂದೆಯಿಂದ ಸುಗಸಿಗೆ ಬಂದ ವಿದ್ಯೆ. ಅವರೂ ಆ ಕಲೆಯಲ್ಲಿ ಒಳ್ಳೇ ಹೆಸರು ಸಂಪಾದಿಸಿದ್ದರು. ಅವರನ್ನು ಕರೆತರಲಿಕ್ಕೆ ಅಮ್ಮತರಾಯರು ಒಬ್ಬ ಆಳನ್ನು ಕಳುಹಿಸಿದರು.

ಸಾಯಂಕಾಲ ಆರು ಘಂಟೆಯ ಸಮಯ ಜೋಯಿಸರು ಒಂದುದನ್ನು ಕೇಳಿ ಪಾರ್ವತಮ್ಮ ಜಾಗಡಿಯ ನೀಲ ಪಾಸಿಗೆ ಹಾಸಿ ಮನೆ ಇಟ್ಟಳು. ಜೋಯಿಸರು ಕಾಲುತೊಳೆದು ಮುಣಿಯ ಮೇಲೆ ಕೂತುಕೊಳ್ಳುತ್ತ ಗೋವಿಂದ ನಾರಾಯಣ ಎಂದು ನಡೆದು ಬಂದ ಆಯಾಸವನ್ನು ವರಿಹರಿಸಿಕೊಂಡರು. ಅಮ್ಮತರಾಯರ ಕೈಯಿಂದ ಜಾತಕ ವನ್ನು ತೆಗೆದುಕೊಂಡು–'ರಾಯರೇ, ಮಗನಿಗೆ ಹೇಗಿದೆ?' ಎಂದು ಕೇಳಿದರು. ಎಡ ಕೈಯಲ್ಲಿ ಜಾತಕವನ್ನು ಹಿಡಿದು ಬಲಗೈಯಿಂದ ಗ್ರಹಕುಂಡಲಿಯನ್ನು ಬರೆಯುತ್ತ ಪುನ ಪ್ರಭಾಕರನಿಗೆ ಹೇಗಿದೆ ಎಂದು ಪ್ರಶ್ನಿಸಿದರು. ಆಗ ಪಾರ್ವತಮ್ಮ ನಡುವೆ ಬಾಯಿ ಹಾಕಿ–'ಸ್ವಾಮಿ, ಏನೂ ಗುಣ ಇಲ್ಲ ಇದ್ದ ಹಾಗೇ ಇದೆ. ಎಲ್ಲಾ ನಮ್ಮ ಗ್ರಹಚಾರ, ಎಂದು ಕಳುಸೂರೆಯಿಂದ ಹೇಳುತ್ತ ಸೂಗಿಗೆ ಬಂದ ಸಿಂಬಳವನ್ನು ಸರಗಿನಿಂದ ಉಜ್ಜಿಕೊಂಡಳು.

'ರಾಯರೇ ಇದು ಪುರುಷ ಜಾತಕ, 10 ವರ್ಷ ಪ್ರಾಯ!'

'ಹೌದು ಜೋಯಿಸರೇ, ನನ್ನ ಒಬ್ಬನೇ ಮಗ ಪ್ರಭಾಕರನದ್ದು!'

'ಸರಿ, ಸರಿ, ಜಾತಕ ಬಹಳ ಜೆನ್ನಾಗಿದೆ. ಏಕಪುತ್ರ ಜಗಂಜ್ಯೋತಿ. ಜಾತಕದಲ್ಲಿ ಏನೂ ದೋಷ ಕಾಣುವದಿಲ್ಲ, ಸ್ವಾಮಿ,ಜಂಪನಾಗಿ ಬರೆಯಲ್ಪಟ್ಟಿದೆ ಆದರೆ ಈ ಪುರುಷನಿಗೆ ಒಂದು ಮುಂದು ಇಲ್ಲ'

'ಅಂದರೆ?'

'ಅಂದರೇ ನಿಮ್ಮ ಮಗನಿಗೆ ಅಣ್ಣಾಪ ಪ್ಪುಂದಿರಿಲ್ಲ, ಎಂದು!'

'ಹೌದು, ನಾನಾಗಲೇ ಹೇಳಿದೆನಲ್ಲ, ಮುಂದೇನು?'

'ಸ್ವಾಮಿ, ಈ ಜಾತಕದಷ್ಟು ಉತ್ತಮ ಜಾತಕ ಬೇರೊಂದು ಇಲ್ಲ. ಬಹಳ ಸುಲಕ್ಷಣವಾಗಿದೆ. ಮೇಲಾಮೇಲೆ ಬಹಳ ಚೆನ್ನಾಗಿ ಕೂಡಿಬರುತ್ತದೆ ನೋಡಿ!'

ಜೋಯಿಸರ ಪಾಂಡಿತ್ಯ ನೋಡಿ ಪಾರ್ವತಮ್ಮ, ಅಮ್ಮತರಾಯರನ್ನು ನೋಡಿದಳು. ಇಬ್ಬರು–'ಜೋಯಿಸರೇ, ಈಗ ಸುಮಮೆ ಪಿಚಾರವಲ್ಲ! ಪ್ರಭಾಕರನಿಗೆ ಏನಾದರೂ ಗ್ರಹಚಾರದಿಂದೆಯೋ ನೋಡಿ!' ಎಂದು ಹೇಳಿದರು.

'ಹಾಗೋ ಇದನ್ನು ಹೇಳುತ್ತೀನೆ' ಎಂದು ಸ್ವಲ್ಪ ಹೊತ್ತು ಕಣ್ಣು ಮುಚ್ಚಿ ತರೆದು– 'ಸ್ವಾಮಿ, ಗ್ರಹಚಾರ ದೋಷ ಏನೂ ಇರುವದಿಲ್ಲ ಎಲ್ಲಾ ಗ್ರಹರು ಶುಭ ಸ್ಥಾನದಲ್ಲಿದ್ದಾರೆ. ಆದರೆ ...ಹೌದು, ಏನಾದರೂ ಭೂತದ ಉಪದ್ರವ ಇರಬಹುದು! ನಿಮ್ಮ ಕುಟುಂಬದ ಭೂತ ಇದೆಯೇ?'

'ಆದರೆ ಸ್ವಾಮಿ, ನನ್ನ ಕಲ್ಯಾಡನಿಗೆ ನಾಲ್ಕು ತಿಂಗಳ ಹಿಂದೆಯೇ ಕೋಲಕೊಟ್ಟಿದ್ದೇವೆ. ಆದ್ದರಿಂದ ಯಾವ ಉಪದ್ರವೂ ಬರುವ ಹಾಗಿಲ್ಲ. ಅದು ನಾವು ಹೇಳಿದ ಹಾಗೆ ಕೇಳುವ ಸಾಧು ಭೂತ!'

'ನಿಮ್ಮ ಕುಟುಂಬದಲ್ಲಿ ಯಾರಾದರೂ ಬ್ರಹ್ಮಚಾರಿಗಳು ಸತ್ತಿರಬಹುದು. ಏನು ಪಾರ್ವತಮ್ಮನವರೆ?' ಪಾರ್ವತಮ್ಮ ಆ ಲೋಚನೆಯಲ್ಲಿ ಬಿದ್ದಳು. ಅವಳು ಸ್ವಲ್ಪ ತಡೆದು 'ಹೌದು, ನಮ್ಮ ಕೇಶವರಾಯರಿದ್ದಲ್ಲಿ, ಒಹೋ, ನಿಮಗೆ ಅವರ ಪರಿಚಯವಿಲ್ಲ. ಆಗ ನೀವು ಬಹಳ ಚಿಕ್ಕವರು. ನೀವು ಚಿಕ್ಕವರಾಗಿದ್ದಾಗ ನಾನೇ ನಿಮ್ಮನ್ನು ಕೊಟ್ಟಿಲಲ್ಲಿ ಹಾಕಿ ತೂಗಿಸಿದ್ದೆ. ಆವಲಕ್ಕಿ ಬೆಲ್ಲತಿನ್ನಲಿಕ್ಕೆ ಕೇಶವರಾಯನೂ ಒಂದಿದ್ದ. ಅವನು ಈಗ್ಗೆ ಸುಮಾರು ಎಂಟುವರ್ಷಗಳ ಹಿಂದೆ ವಿಷಮ ಜ್ವರದಿಂದ ಸತ್ತುಹೋದ. ಅವನ ಮಗ ಪಾಪ, ಮೊನ್ನೆ ಒಂದು ವರ್ಷದ ಹಿಂದೆ ಸಿಡುಬು ಆಗಿ ಸತ್ತ. ಪಾಪ, ಹತ್ತೆರಡೇ ವರ್ಷ ಪ್ರಾಯ, ಮದುವೆ ಸಹ ಆಗಿರಲಿಲ್ಲ,' ಎಂದಳು.

'ಹಾಂ!! ಅದೇ ಸರಿ; ಅದೇ ಸರಿ; ನೋಡಿ ಅಮ್ಮತರಾಯರೇ ನಿಮ್ಮ ಮಗನಿಗೆ ಸ್ವಲ್ಪ ಯವಾಗಿಯೂ ಬ್ರಹ್ಮಚಾರಿಯ ಉಪದ್ರವ!'

ಅಮ್ಮತರಾಯರು ಮಾತನಾಡಲಿಲ್ಲ. ಅವರು ಏನೋ ಬೇರೆ ಆಲೋಚನೆಯಲ್ಲಿದ್ದರು.

'ಜೋಯಿಸರೇ, ಈಗ ಉಪದ್ರವ ನಿಲ್ಲಿಸಲಕ್ಕೆ ಏನಾಗಬೇಕು?' ಎಂದು ಪಾರ್ವತಮ್ಮ ಸಚೇತನಾರ್ಹ್ಯರಾಗಿ ಕುಂಬಕೇಳಿದಳು

'ರಾಯರೇ, ಇದಕ್ಕೆ ಯತ್ನಿಂಚಿತ್ತು ಏನಾದರೂ ಮಾಡಬೇಕು. ನಪ್ಪ ಒಂದು ಶಾಂತಿ ಮತ್ತು ಮೃತನ ಅತ್ಮಕ್ಕೆ ಸದ್ಗತಿದೊರೆಯುವಂತೆ ಒಂದು ತೀರ್ಥಕ್ಷೇತ್ರ ಸ್ನಾನಮಾಡಿ ಎಳ್ಳಕ್ಕೆ ಯಥಾಕಾಲವಲ್ಲಿ ಮುಂಜಮದುವೆ ಮಾಡುತ್ತೀನೆಂದು ಹರಿಕ, ಇನ್ನು ತತ್ಕಾಲ ಆಗಬೇಕು.'

'ಜೋಯಿಸರೇ, ಈಗ ಕಾಲಬಹಳ ಕೆಟ್ಟಿಹೋಗಿದೆ. ಮೊದಲಿನಂತೆ ನಮ್ಮಸ್ಥಿತಿ ಇಲ್ಲ ಎಲ್ಲಾ ನಿಮಗೆ ಗೊತ್ತಿದೆ. ಮಾಡದೆ ನಿರ್ಮಾಣ ಇಲ್ಲವೆಂದಾದರೆ, ಸ್ವಲ್ಪದರಲ್ಲಿ ಶಾಂತಿಗೆ ಏನಾಗಬೇಕೋ ಅದನ್ನು ಹೇಳಿ,'

'ಪಾರ್ವತಮ್ಮ! ನಿಮಗೆ ತಿಳಿಯದ್ದು ಯಾವುದೂ ಇಲ್ಲ. ಕುಟುಂಬದ ಮನೆಯಲ್ಲಿ ಬಹಳ ಕಾರ್ಯಕಾರಣಕೆಗಳನ್ನು ನಡೆಸಿದವರು ನೀವು! ರಾಯರೇ ನಿಮ್ಮನ್ನು ಬಿಟ್ಟು ನಾವು ಬೇರೆಯಲ್ಲ. ನೋಡಿ ಶಾಸ್ತ್ರ ವಿಧಿಪ್ರಕಾರ ಆಗುವಹಾದರೆ ಏನಾಯಕ ಶಾಂತಿ, ಗ್ರಹಶಾಂತಿ ಮತ್ತು ಪ್ರೇತಶಾಂತಿ ಇಷ್ಟು ಆಗಬೇಕು. ಒಂದೊಂದು ಶಾಂತಿಗೂ ಎರಡು ಸುವರ್ಣಕುಂಭಗಳು, ಎರಡು ರೌಪ್ಯಕಲಶಗಳು, ಐದು ತಾಮ್ರದ ಬಿಂದಿಗೆಗಳು, ಒಂದು ಸುವರ್ಣ ಪ್ರತಿಮೆ ಮತ್ತೆ ರಿವಾಜು ಪ್ರಕಾರ ಎಕ್ಕೆ, ತೆಂಗಿನಕಾಯಿ, ವಸ್ತ್ರಭೂಷಣ, ನವಧಾನ್ಯ, ದಾನದಕ್ಷಿಣೆ ಆಗಬೇಕು. ಆದರೆ ನೀವು ನಮ್ಮವರು. ಒಂದು ಶಾಂತಿಯ ನಸ್ತು ಸಾಮಾಗ್ರಿಗಳನ್ನೇ ಇನ್ನೊಂದಕ್ಕೆ ಉಪಯೋಗಿಸುವೆವು. ಈಗ ಭೂರಿಭೋಜನ ಸಾಧ್ಯವಿಲ್ಲವಾದರೆ, ಬಾಹ್ಮಣ ಸಂತರ್ಪಣೆಮಾಡಿದರೂ ಸಾಕು. ಮುಂದೆ ಅಶ್ವಶ್ಥನಿಗೆ ಮುಂಜಿಮದುವೆ ಆಗುವಾಗ ನೋಡಿಕೊಳ್ಳೋಣ, ಆದರೆ ಸ್ವಾಮಿ, ಈಗ ವೈದಿಕ ವೃತ್ತಿಯಲ್ಲಿಯೂ ಕಾಂಪಿಟೀರನು ಬಂದು ಬಿಟ್ಟಿದೆ. ಬೇರೆಯವರು ಕಡಿಮೆಗೆ ಪಟ್ಟಕೊಟ್ಟರೂ ಕೊಡಬಹುದು. ಆದರೆ ಸ್ವಾಮಿ, ನಾವು ಶಾಸ್ತ್ರೋಕ್ತ ಶಾಂತಿ ಮಾಡುವಹಾದರೆ ಇಷ್ಟು ಸಾಮಾಗ್ರಿ ಬೇಕೇ ಬೇಕು. ಮುತ್ತೆ ನಿಮ್ಮ ಇಚ್ಛೆ!' ಎಂದು ಹೇಳಿ ಒಮ್ಮೆಗೆ ಕೈಕಾಲು ಸಡಲಿಸಿಕೊಂಡು ಆಕಳಿಸುತ್ತ ಸುಮ್ಮಗಾದರು.

ಅಮ್ಮತರಾಯರು ಪಾರ್ವತಮ್ಮನ ಮುಖವನ್ನೋಡಿದರು ಪಾರ್ವತಮ್ಮ ಅಮ್ಮತರಾಯರ ಮುಖನೋಡಿದಳು. ಪಾರ್ವತಮ್ಮ ಸ್ವಲ್ಪ ಮುಂದೆ ಬಂದು 'ಜೋಯಿಸರೇ, ಆಗುವದು ಹೇಗೂ ಆಗಬೇಕಷ್ಟೆ? ಅದೆಲ್ಲ ನಿಮ್ಮ ಕೈಯಿಂದಲೇ ಆಗಲಿ, ಮೂಹೂರ್ತ ನೋಡಿ ಹೇಳಿ' ಎಂದಳು.

'ಅಮ್ಮ! ನಾಳೆ ನನಗೆ ವಿಲಾಸಪುರಕ್ಕೆ ಹೋಗಬೇಕು, ಮುರು ನಾಲ್ಕು ದಿನ ಬರುವದಿಲ್ಲ ಆ ಮೇಲೆ ಅಂದರೆ, ಬರುವ ಶನಿವಾರ ಒಳ್ಳೇ ಮೂಹೂರ್ತ ಉಂಟು. ಶುಭಸ್ಯ ಶೀಘ್ರಂ ಎಂದು ಶಾಸ್ತ್ರವಚನವುಂಟು.'

'ಆಗಬಹುದು, ಜೋಯಿಸರೇ, ಬರುವ ಶನಿವಾರ ದಿವಸ ಎಲ್ಲವನ್ನೂ ತಯಾರಿಸಿಡುತ್ತೇನೆ.' ಎಂದು ಪಾರ್ವತಮ್ಮ ಹೇಳಿದಳು.

'ಸ್ವಾಮೀ, ಅಮ್ಮತರಾಯರೇ, ದಕ್ಷಿಣೆಯ ಬ್ರಾಹ್ಮಣರಿಗೆ ನಾನು ಆಮಂತ್ರಣ ಕೊಡಬೇಕೆ? ನೀವು ಕೊಡುತ್ತೀರಿ?' 'ಆ ಒಂದು ಕೆಲಸ ನೀವೇ ಮಾಡಿಬಿಡಿ.' ಎಂದು ಅಮ್ಮತರಾಯರು ಬೇಸರದಿಂದ ಹೇಳಿದರು. ವೀಳೆಯದೊಂದಿಗೆ ಕೊಟ್ಟ ಒಂದು ರೂಪಾಯಿಯನ್ನು ತೆಗೆದುಕೊಂಡು ಜೋಯಿಸರು ಮನೆಗೆ ಹೊರಟರು.

* * * *

ಅದೇ ದಿನ ರಾತ್ರಿ ಒಂಭತ್ತು ಘಂಟೆಗೆ ಡಾಕ್ಟರ ಪ್ರೇವತಿರಾಯರು ಬಂದರು. ಇವರು ಅಮ್ಮತರಾಯರ ಸಮಿಾಪ ಸಂಬಂಧಿಯೂಗಿದ್ದರು. ವಿಲಾಸಪುರದ ಸರಕಾರಿ ಆಸ್ಪತ್ರೆಯ ಚಿಕಿತ್ಸಕರಾಗಿದ್ದರು. ಪ್ರಭಾಕರನ ಕಾಯಿಲೆ ವಿಚಾರವನ್ನು ಅಮ್ಮತರಾಯರ ಪತ್ರದಿಂದ ಓದಿ ಬಹಳ ವೇದನಪಟ್ಟರು. ಆದರೆ ವಿಲಾಸಪುರದಿಂದ ನಾಗನಹಳ್ಳಿಗೆ 28 ಮೈಲು ದೂರ. 17 ಮೈಲು ದೂರವನ್ನು ಕಾಲುನಡೆಯಿಂದ ತೀರಿಸಬೇಕಾಗಿತ್ತು. ಬಂಡಿ ಹೋಗುವದು ಅಷ್ಟು ಸುಲಭವಾಗಿರಲಿಲ್ಲ. ಸೇಲಧಿಕಾರಿಗಳಿಂದ ಒಂದು ವಾರದ ರಜೆಯ ಮಂಜೂರಾತಿ ಪಡೆದು ನಾಗನ ಹಳ್ಳಿಗೆ ಬರುವಾಗ ಇಷ್ಟು ದಿನಗಳು ಕಳೆದು ಹೋದುವು. ಅವರು ಬಂದವರೇ ಪ್ರಭಾಕರನ ಶರೀರ ಪರೀಕ್ಷೆ ಮಾಡಿದರು. ಏನು ಕಾರಣದಿಂದಲೋ ಒಂದು ಸಣ್ಣ ನಗುನಕ್ಕು—'ಇಷ್ಟರವರೆಗೆ ಏನನ್ನೆಲ್ಲಾ ಮಾಡಿದಿರಿ?' ಎಂದು ಅಮ್ಮತರಾಯರನ್ನು ಕೇಳಿದರು. ಅವರು ಬಾಡಿದ ಮೋರೆಯಿಂದ—'ಕೃಷ್ಣ ಪಂಡಿತರು ಎಲ್ಲಾ ಔಷಧಿಮಾಡಿದರು. ಪ್ರಯೋಜನವಾಗಲಿಲ್ಲ ಬ್ರಹ್ಮಚಾರಿಯ ಉಪದ್ರವ ಎಂದು

ಸುಬ್ರಾಯ ಜೋಯಿಸರು ಹೇಳಿದ್ದಾರೆ, ನಾಡದು ಶನಿವಾರ ಶಾಂತಿಮಾಡುವದೆಂದು ನಿಶ್ಚಯಿಸಿದ್ದೇವೆ.' ಎಂದರು ಇದನ್ನು ಕೇಳಿ ಪ್ರೇಸತಿರಾಯರಿಗೆ ಮತ್ತೊಂದು ನಗು ಬಂದಿತು

ಪ್ರೇಸತಿರಾಯರು ಅದೇ ದಿನ ರಾತ್ರಿ ಮತ್ತು ಮರುದಿನ ಬೆಳಿಗ್ಗೆ ಸ್ವಲ್ಪ ಎಣ್ಣ ಮತ್ತು ಹುಡಿಯನ್ನು ಪ್ರಭಾಕರನಿಗೆ ಕೂಟ್ಟರು ಮಧ್ಯಾಹ್ನ 12 ಘಂಟೆ ಆಗುವದರೊಳಗಾಗಿ ಪ್ರಬಾಕರನಿಗೆ ಚನ್ನಾಗಿ ಜುಲಾಬು ಆಗಿ ರಾಶಿ ರಾಶಿ ಹುಳುಗಳು ಬಿದ್ದು ಹೋಗಿ ಹೊಟ್ಟೆ ಗಾಳಿಯಿಲ್ಲದ ರಬ್ಬರಚೀಲದಂತೆ ಸಣ್ಣದಾಯಿತು ಸ್ವಲ್ಪ ಅಶಕ್ತಿ ಇದ್ದುದು, ಯಾ, ಒಕರಿಕೆ ಹೊಟ್ಟ ನೋವುಗಳು ಸಾಯಂಕಾಲದೊಳಗಾಗಿ ಸಂಪೂರ್ಣ ನಿಂತು ಹೋದುವು ಶುಕ್ರವಾರ ರಾತ್ರಿ ಆಗಬೇಕಾದರೆ, ಪ್ರಬಾಕರ ನೆರೆಕೆರೆಯ ಸಂಗಾತಿಗಳೊಂದಿಗೆ ಜಂಡಾಟ ಆಡಿ ಬಂದಿದ್ದನು.

ಮರುದಿನ ಶನಿವಾರ ಜೋಯಿಸರು ಅಂಗಳದಲ್ಲಿ ಕಾಲಿಡಬೇಕಾದರೆ, ಚಿಲ್ಲ ಪ್ರಭಾಕರ ಇನ್ನೊಬ್ಬ ಹುಡುಗನೊಂದಿಗೆ ಗೋಲಿ ಆಡುವದನ್ನು ಕಂಡು ಬಹಳ ಸಂತೋಷ ಪಟ್ಟರು ಅವರು ಪಾರ್ವತಮ್ಮನನ್ನು ಕರೆದು—ಅಮ್ಮಾ, ಜ್ಯೋತಿಷ್ಯದ ಮಹಾತ್ಮೆ ನೋಡಿದಿರಾ' ನೀವು ಶಾಂತಿಮಾಡುತ್ತಿರುವದರೊಳಗಾಗಿ ಪ್ರಬಾಕರನಿಗೆ ಗುಣ ಆಗಿ ಬಿಟ್ಟಿತು ಆವರೆ ಕಲವರು ವಿಚಾರಿಗಳಂತೆ – ಶುದ್ಧ ಅವಿಚಾರಿಗಳು ಇವರು–ಜ್ಯೋತಿಷ್ಯವನ್ನು ಸುಳ್ಳಿನ್ನುತ್ತಾರೆ ಲೋಕದಲ್ಲಿ ಎಲ್ಲಿಯಾದರೂ ಇಂಥಾ ದೊಡ್ಡ ಮೂರ್ಖತನ ಉಂಟೆ? ಇರಲಿ, ಆಡಿಗೆ ಏಲ್ಲಿ ಮುಗಿಯಿತೆ?"

ಜೋಯಿಸರ ಮಾತು ಕೇಳುತ್ತ ಕೇಳುತ್ತ ಅಮ್ಮತರಾಯರೂ ಒಳಗಿನಿಂದ ಹೊರಗೆ ಚಾವಡಿಯ ಮೇಲೆ ಬಂದರು. ಪ್ರೇಸತಿರಾಯರನ್ನು ನೋಡಿ ಜೋಯಿಸರು–'ಅಮ್ಮತರಾಯರೇ ಈ ರುಚಕಾರ್ಯಕ್ಕೆ ನೈವಬಲ ಚೆನ್ನಾಗಿ ಉಂಟು ನೋಡಿ ಇವರು ಶಾಂತಿ ಆಗುವಾಗ ಒಳ್ಳೇ ಸಮಯಕ್ಕೆ ಬಂದರು ' ಎಂದು ನಗುತ್ತ ತಮ್ಮ ಸಂತೋಷವನ್ನು ಸೂಚಿಸಿದರು

'ಸ್ವಾಮಿ' ಇವರು ನನ್ನ ಬಾಗ್ಯದೇವತೆಗಳು ಮೊನ್ನೆ ನೀವು ಹೋದ ರಾತ್ರಿಯೆ ಬಂದಿದ್ದರು ಬಂದವರೇ ಪ್ರಭಾಕರನ ಶರೀರ ಪರೀಕ್ಷೆಮಾಡಿ ಮದ್ದು ಕೊಟ್ಟರು ನಮ್ಮ ಪ್ರಭಾಕರನಿಗೆ ಮೊದಲಿನಿಂದಲೂ ಬೆಲ್ಲದ ಮೇಲೆ ಆಶೆ ಬಹಳ. ಕೊಟ್ಟಷ್ಟು ತಿನ್ನುವನು. ನಾಗಪ್ಪಯ್ಯನ ವೈಕುಂಠ ಸಮಾರಾಧನೆಗೆ ಹೋಗಿ ಹೊಟ್ಟೆಯಲ್ಲಿ ಹಿಡಿಯುವ ದಕ್ಕಿಂತ ಹೆಚ್ಚು ಪಾಯಸ ಪರಮಾನ್ನ ತಿಂದುದರಿಂದ ಹುಳಗಳು ಉದ್ರೇಕವಾಗಿ ಹಾಸಿಗೆ ಹಿಡಿವ. ಇವರು ಬಂದು ಹರಳೆಣ್ಣೆ ಮತ್ತು ಸಂಟೋನ್ಯಾನ ಅಂತಿ ಅದನ್ನು ಕೊಟ್ಟ ಕೂಡಲೇ ಹೊಟ್ಟೆಯನ್ನು ಝಾಡಿಸಿದಂತಾಗಿ ಹುಳಗಳೆಲ್ಲ ಬದ್ದು ಹೋದವು ಈಗ ಆರೋಗ್ಯವಾಗಿದ್ದಾನೆ ಸ್ವಾಮಿ' ಪ್ರೇಸತಿರಾಯರು ಜೋಯಿಸರನ್ನು ನಂಬುವದಿಲ್ಲ ಜೂತಪಿಶಾಚಿಗಳನ್ನೂ ನಂಬುವದಿಲ್ಲ ನಿಮ್ಮ ಬ್ರಹ್ಮಚಾರಿಯ ಉಪದ್ರವ ಪೂರಾ ಪೂರಾ ಸುಳ್ಳಿನ್ನುತ್ತಾರೆ' ಎಂದು ಅಮ್ಮತರಾಯರು ಹೇಳಿದರು ಪ್ರೇಸತಿರಾಯರು ನಕ್ಕರು ಪಾರ್ವತಮ್ಮ ಮೊದಲ ನಂತ ಮಾತಿನ ನಡುವೆ ಬಾಯಿಹಾಕಲಿಲ್ಲ ಸುಬ್ರಾಯ ಜೋಯಿಸರು—'ಜೋಯಿಸರಿಗೆ ಬಾಯೇ ಬಲ ಎಂದು ಆಗಾಗ ಹೇಳುತ್ತಿದ್ದರು ಅಮ್ಮತರಾಯನಂತ ಅವರೂ ತಮ್ಮ ಮಾತಿನ ಗತಿಯನ್ನು ಬದಲಾಯಿಸಿ, ಕಸಿವಿಸಿಗೊಳ್ಳದೆ ಪಾರ್ವತಮ್ಮನ ವಿಶ್ವಾಸವನ್ನು ಗಟ್ಟಿ ಕಾಪಾಡಿಕೊಂಡರು ಅವರು ಹೇಳಿದರು– 'ಸ್ವಾಮಿ, ಜೋಯಿಸರು ಹೇಳಿದುದು ಒಂದೂ ಸುಳ್ಳಾಗುವದಿಲ್ಲ. ನಿಮ್ಮ ಕೇಶವರಾಯರ ಮಗ ಬ್ರಹ್ಮಚಾರಿ ಆಗಿ ಸತ್ತಿದ್ದಷ್ಟಲ್ಲ, ಅವನು ಪೂರ್ವ ಜನ್ಮದಲ್ಲಿ ಮಹಾಪಾತಕಗಳನ್ನು ಮಾಡಿದವ ಆದ್ದರಿಂದ ದೇವಿಪ್ರಕೋಪಕ್ಕೆ ಪಾತ್ರನಾಗಿ ನಿಡುಬಿನಿಂದ ಸತ್ತ ಆ ಮೇಲೆ ಕೂಡ, ಮುಂದಿನ ಜನ್ಮದಲ್ಲಿ ಪ್ರಬಾಕರನ ಹೊಟ್ಟೆಯಲ್ಲಿ ಹುಳು ಆಗಿ ನಿಮಗೆಲ್ಲ ಉಪದ್ರವ ಕೊಟ್ಟ. ಹುಳುಗಳಿಗೆ ಮದುವೆಯಿಲ್ಲದಿರುವದೂ ಆವನು ಮದುವೆಯಾಗದ ಸತ್ತುದೂ ಒಂದಕ್ಕೊಂದು ಸಂಬಂಧವಿರುವ ಘಟನೆಗಳು ನೋಡಿ' ಮತ್ತೆ ಅವಿಚಾರಿಗಳಾದ ಆವಿಚಾರಿಗಳೆಂಬವರು ಏನೂ ಹೇಳಲಿ ಒಳರ ಮಾತಿನಿಂದ ಸ್ವರ್ಗಲೋಕ ಒಂದು ಹಾಳಾಗುವದೆಂದುಂಟೆ ಅಮ್ಮಾ! ಒಂದು ತಟ್ಟೆ ನೀರು ಮತ್ತು ಒಂದು ಚೀಡಿ ತುಂಡು ತಿನ್ನಿ ನವಗ್ರಹಕುಂಡಲಿ ಒರಯುತ್ತನೆ' ಎಂದು ಹೇಳುತ್ತ ಜನಿವಾರವನ್ನು ಬಿಡಿಸಿ ಆವಕ್ಕ ಗಂಟುಕಾಳಾಲಂಬಿಸಿದರು.

ಪ್ರಭಾಕರನಿಗಾದ ಬ್ರಹ್ಮಚಾರಿಯ ಉಪದ್ರವಕ್ಕೆ ಪ್ರೇಸತಿರಾಯರ ವೌರೋಹಿತ್ಯದಲ್ಲಿ ಮೊದಲೇ ಶಾಂತಿ ಆಗಿದೆ ಎಂದು ಅಮ್ಮತರಾಯರನ್ನುತ್ತಿದ್ದರು. ಆದರೆ ಪಾರ್ವತಮ್ಮ ತವರ ಬಾಯಿ ಕಟ್ಟಿದರು. ಮೊಡ್ಡ ಆಸೆಬಟ್ಟು ಪುನಗೆ ಬಂಪವರೆನ್ನು ನಿರಾಶೆಗೊಳಿಸಿ ಹಿಂತಿರುಗಿಸುವದು ಶಿಷ್ಟಾಚಾರ ಅಲ್ಲ ಎಂದೂ ಅವರು ಸುಮ್ಮಗಾದರು ಪಾರ್ವತಮ್ಮನ ಅನುರೋಧದ ಮೇರಗ ನಾಲ್ಕಾಣೆ ಪಾವಲಿ ಖರ್ಚುಮಾಡಿ ಸುಬ್ರಾಯಜೋಯಿಸರಿಂದ ಅವರ ಪ್ರಾಣ ಶಾಂತಿಮಾಡಿ ಕಳುಹಿಸಿಕೊಟ್ಟರು

ಆ ಮೇಲೆ ನಾಗನ ಹಳ್ಳಿಯಲ್ಲಿ ಸುಬ್ರಾಯ ಜೋಯಿಸರನ್ನು ಯಾರೂ ಕಂಡು ಕೇಳಲಿಲ್ಲ.

ಕಟಪಾಡಿ ಶ್ರೀನಿವಾಸ ಶೆಣೈ,
ಅಧ್ಯಾಪಕ, ಕಾರ್ಕಳ

ಭಾಷಾಂತರಕಾರರು

ಜೋರೆಯದೆ ಹೇಚಾಡುವಿರೇಕೆ?

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರ ವ್ಯವಹಾರ ಮಾಡಬೇಕು

'ಟ್ರಾನ್ಸ್‌ಲೇಟರ್,'
C/o 'ಕರಿಯರ ಪ್ರಪಂಚ,' ಉಡುಪಿ.

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ

O. S 16/35 ಕ್ರಮ
ಅಮಲಜಾರಿ ನಂಬ್ರ 791/1936

ಬಾಡಿರು ವಿಶೇಷರ ಬಟ್ಟೆ ಕೂಡಾ ಅರ್ಜದಾರರು
ಪ್ರತಿವಾದಿರು. ಪೀಕ ಹೆಬ್ಬಾರ ಕಾಡಾ ಎರ್ರಿರು
6ನೇ ಎದ್ರಿ ಕಾಪ್ಪಯ್ಯ ಯಾನೆ ಸುಬ್ರಾಯ ಹೆಬ್ಬಾರ
7ನೇ ಎದ್ರಿ ಗಣಪಯ್ಯ ಹೆಬ್ಬಾರ
1ನೇ ಪ್ರತಿವಾದಿ ಪೀಕ ಹೆಬ್ಬಾರನ ಮಕ್ಕಳು

ಉಡುಪಿ ತಾಲೂಕು ಗಿಳಿಯಾರು ಗ್ರಾಮ ವಲ್ಲಿರುವವರು ಸದ್ರಿ 6-7ನೇ ಎದ್ರಿರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಡಿಕ್ರಿ ಸಮಾಧಾನದ ಬಗ್ಗೆ ವಾದಿರು ನಡ್ಸಿದ ಸದ್ರಿ ಅಮಲಜಾರಿ ವ್ಯವಹರಣೆಯಲ್ಲಿ ನಿಮ್ಮನ್ನು 1ನೇ ಪ್ರತಿವಾದಿ ವಾರಿ ಸ್ವಾರರನ್ನಾಗಿ ಸೇರಿಸಿ ಅಮಲಜಾರಿ ಅರ್ಜವ ಯಿನ್ಸ್ಯಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ಕೂಡಾ ತಾ 30-11-'36ಕ್ಕೆ ತನ್ಸ್ಕಿಗೆ ಇಡೋಣಾಗಿರುತ್ತದೆ ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹ ಯಾ ವಕೀಲರ ಮುಕಾಂತರ ಹಾಜ್ರಾಗಿ ಜಾಹೀರು ಮಾಡತಕ್ಕದ್ದು ತಪ್ಪಿದ್ದೆ ನಿಮ್ಮನ್ನು ಎಕ್ಸಪಾರ್ಟೆ ಮಾಡಿ ಗೈರಹಾಜ್ರಿಯಲ್ಲಿ ಸದ್ರಿ ಅಮಲಜಾರಿಯನ್ನು ತೀರ್ಮಾನಿಸೋ ಜಾರೀಕೆತೆಂತ ಈ ಮೂಲಕ ತಿಳುಹಿಸಿರುತ್ತದ

ಕುಂದಾಪುರ 20-11-'36 } K Venkappa Shetty
Pleader for Petitioner

ಭದ್ರತೆಯ ತವರುಮನೆ

ನಮ್ಮ ಚಾಲ್ತಿ ವರ್ಷದ ಅತ್ಯಧಿಕ ಬೋನಸನ್ನು
ಪರಿಶೀಲಿಸಿದರೆ ಜೀವನವಿಮೆಗಾಗಿ ವ್ಯಯಿಸುವ ಹಣವು
ಅತ್ಯಾಕರ್ಷಕವಾದ ತೇವಣಾತಿ

ಎಂಡೋಮೆಂಟ್ ವಿಮೆಯ ಮೇಲೆ ರೂ. 23
ಇಡೀ ಜೀವನಾವಧಿ ವಿಮೆಯ ಮೇಲೆ ರೂ. 20

ಬೋನಸು ವರ್ಷ 1936-'37

ಈಗಲೇ ಸೇರಿರಿ—
ದಿ ಹಿಂದುಸ್ಥಾನ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡಿಗೆ.

ಬೋನಸು ವರ್ಷ 1936-'37

ದಯಮಾಡಿ ಈ ವಿಳಾಸಕ್ಕೆ ಬರೆಯಿರಿ.—
ಶಾಖಾ ಆಫೀಸು:
"ಹಿಂದುಸ್ಥಾನ್ ಬಿಲ್ಡಿಂಗ್ಸ್"
ಆರ್ಮೀನಿಯನ್ ಸ್ಟ್ರೀಟ್
ಮದ್ರಾಸು.

ಉಪ ಆಫೀಸುಗಳು— ಬಳ್ಳಾರಿ ಬೆಂಗಳೂರು ಬೆಜವಾಡ
ಕೊಯಮ್ಮುತ್ತೂರು ಕೆಲ್ಲಿಕೋಟೆ ಕಡಲೂರು
ಮಧುರ ವಿಶಾಖಪಟ್ಟಿ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನೆ, ರಸಾಯನ, ಸುಖಸೇವನೆ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇನ್ನುಮಿಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ: – ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಜಾಣಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಲೇಪ್ಯದಿಂದ ನಿಲ್ಲಿಸುವದು

ಒಬ್ಬಳು ಜಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಪೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಚ್ಚೆಟ್ಟು ಒತ್ತುವ ಸೆಟ್ಟುಗಳು ಕೊಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನನ್ನು ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಿಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.		ತಲಪುವ ಘಂಟೆ.	
ಮಿಕ್ಸೆಡ್	ಬೆಳಿಗ್ಗೆ	5-55	ರಾತ್ರಿ	8-55
ಕಾಂಜಂಗಾಂಡ್ ಪ್ಯಾಸೆಂಜರ್	ಬೆಳಿಗ್ಗೆ	8-25	ಮಧ್ಯಾಹ್ನ	1-20
ಮೈಲ್	ಬೆಳಿಗ್ಗೆ	9 50	ಸಂಜೆ	4-20
ಫಾಸ್ಟ್ ಪಸೆಂಜರ್	ಮಧ್ಯಾಹ್ನ	12-15	ಮಧ್ಯಾಹ್ನ	2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ	3-20	ಸಂಜೆ	6-15
ಶಟಲ್	ಸಂಜೆ	5-25	ಬೆಳಿಗ್ಗೆ	9-20

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

ಸ್ಥಾಪಿತವಾದದ್ದು] [1907ರಲ್ಲಿ

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ನಿಶ್ಕಿನೆ.
ವಿಮಾ ಹೊಣ ಜವತಿ ರೂ. **37** ಲಕ್ಷ ನಿಶ್ಕಿನೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳವೆ.

ವಿಜಸ್ಸಿ ಶರ್ತಗಳು:—ಅತ್ಯಧಿಕ ನಫೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ

P. D. BHARGOVA,
General Manager, **AJMER**,
SUPERINTENDENT, 278, Linga Chetty Street, MADRAS
Or Chief Agent:—
BELLARY. MADURA. TRICHINAPOLY. VELLORE.

ಸ್ಟೀಮರು ಸಮಯ

	ತಲಪ್ಪುವದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 8 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 12 30 ಮಂಗಳವಾರ ಮಧ್ಯಾಹ್ನ 12-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟವಾದ ಕಥೆ, ಕವನಗಳಿಂದೊಡಗೂಡಿ, ಪ್ರತಿವರುಷದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು.

. ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳು-ಹರಟೆಹ್ಯಾಗಳು. ಸಮಸ್ಯೆಗಳು-ಗ್ರಂಥ ವಿಮರ್ಶೆ ಇವುಗಳ ನೆಪ್ಪಿಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ಸೂತನ ವಿಭಾಗವಿರುವ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office MANGALORE. Branch Office Court Road, UDIPI.

ದಿ ವಿಜಯ ಬ್ಯಾಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ ಉಡುಪಿ.

ಚಾಲ್ತಿ ತೇವಣಾತಿಗಳು ಸಾ. ಶೆ. 2. ಸೇವಿಂಗ್ಸ ಬ್ಯಾಂಕ್ ತೇವಣಾತಿಗಳು ಸಾ. ಶೆ. 3½. ಕಾಯಂ ತೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 4. 6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4½. 1ವರ್ಷದ ಬಾಬ್ತು ಸಾ. ಶೆ. 5½ 2 ವರ್ಷ ವ ಮೇಲಿನವುಗಳ ಬಾಬ್ತು ಸಾ. ಶೆ. 6ರ ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ— ಅಂದರೆ—ಪ್ರೈ ನೋಟು, ಹುಂಡಿ, ಸರಕು, ಪಗ್ಗೆಗೆ ಮೇಲೆ ಸಾಲಕೊಡಲಾಗುತ್ತವೆ. ಭಂಗಾರದ ಈಡಿನ ಮೇಲೆ ರೂ. 100 ಅಥವಾ ಅದರ ಮೇಲಿನ ಜವೇಜಿಗೆ ಸಾ. ಶೆ. 8 ಪುತ್ತು ಅದಕ್ಕಿಂತ ಕೆಳಗಡೆಯು ಸಾ ಶೆ. 9ರ ದರದ ಬಡ್ಡಿಯಲ್ಲಿಯೂ ಸಾಲ ಕೊಡಲ್ಪಡುವುದು

ವಿಶೇಷ ಸೂಚನೆ:—ಒತ್ತವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಖಾಲಸೊದಲಾಗುತ್ತದೆ. ಶಾಖೆಗಳು ತೆರೆಯಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B. Shetty, ವಿಜಯ ಬ್ಯಾಂಕ್, ಲಿಮಿಟೆಡ್ K. Gopalkrishna Shetty.
ಚೆಯರ್‌ಮೇನ್ ಕದ್ರಿರೋಡ್, ಮಂಗಳೂರು. ಸೆಕ್ರೆಟರಿ.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗ ಗಳಲ್ಲಿಯೂ ಸರಿಯಾಗಿ ಬೆಳೆವು, ಚನೇ ವಪರ್ಷದ ಬಳಿಕ ಹಣ್ಣು ಕೊಡಲಿಡುತ್ತವೆ ಒಂದು ಮರ ದಲ್ಲಿ ಸಾವಿರಗಟ್ಟಿ ಹಣ್ಣಾಗುವುದು. ಒಂದು ಎಕ್ರೆ ಯಲ್ಲಿ ಪರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೇ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವವಿರುವ ಏಕೈಕ ಹಣ್ಣು ಇದಾಗಿದೆ. ಇದರಿಂದ ರಕ್ತವನ್ನು ಸೃಷ್ಟಿಸಾಧ್ಯವು. ಮರದಲ್ಲಿ ಯಾವಾಗಲೂ ಹಣ್ಣು ಇರುವದು. ಎಲ್ಲ ತೋಟದಲ್ಲಿಯೂ ಇರಲೇಕ್ಕಾದ್ದು. ಗಿಡ ವೊಂದರ ಕ್ರಯ ರೂ. 1-0-0 ಮಾತ್ರ. ಸಕ್ಕರೆಲ್ಲಿ ಉತ್ಪನ್ನವು ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಬಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಸೋಪ್ಸ್ ಕಾಪು, ದ. ಕನ್ನಡ.

ವಾರದ ವಿಚಾರ

ಬಲಾತ್ಕಾರದಿಂದ ಆಳಲು ಸಾಧ್ಯವಿಲ್ಲ.

ಹಿಂದುದೇಶದಲ್ಲಿ ಬ್ರಿಟಿಷ್ ಚಕ್ರವರ್ತಿಗಳ ಆಳ್ವಿಕೆಯನ್ನಿನ್ನು ಬಲಾತ್ಕಾರದಿಂದ ನಡಿಸಲು ಸಾಧ್ಯವಿಲ್ಲ. ಹಾಗೆ ಮಾಡಿದರೆ ಶೀಘ್ರವಾಗಿ ಅದು ಕೊನೆಗೊಳ್ಳುವ ಆಪತ್ತುಂಟಾಗುವುದು. 1921ರ ಪ್ರಚಂಡ ಅಸಹಕಾರ ಚಳವಳಿಯಿಂದ ಸರಕಾರವು ಪಾಠ ಕಲಿತುಕೊಳ್ಳಬೇಕು. ಆಲಿಸ ಹೋರರು ಗಾಂಧಿಯವರಿಗೆ ಅಂತಃಕರಣ ಪೂರ್ವಕವಾದ ಸಹಾಯವೀಯುಸಪ್ಪು ವಿನೇಕಿಗಳಾಗಿದ್ದರೆ, ಗಾಂಧಿಯವರು ತನ್ನ ಆದರ್ಶಪರತೆಯನ್ನು ಬಿಟ್ಟು ಬೇಸ್ಸ ಪ್ರತಿಫಲದ ದೃಷ್ಟಿಯುಳ್ಳವರಿದ್ದಿದ್ದರೆ, ಇಡೀ ದೇಶದಲ್ಲೆಲ್ಲಾ ಕೆಂಪಾಯ ನಿರಾಕರಣಾ ಚಳವಳಿಯು ಪ್ರಚಂಡವಾಗಿ ನಡೆದು ಪೋಲೀಸರಿಗೂ ಸೈನಿಕರಿಗೂ ಅಪನ್ನಣಗಿಸಲು ಸಾಧ್ಯವಾಗುತ್ತಿದ್ದಿಲ್ಲ ಆದುದರಿಂದ ಬಲಾತ್ಕಾರದಿಂದ ಹಿಂದುದೇಶವನ್ನಾಳುವ ಯೋಚನೆ ಬಿಡಬೇಕು. ಇತರ ಯಾವುದಾದರೊಂದು ವಿವೇಕಪರ ಘೋರಣೆ ವಹಿಸಬೇಕೆಂದು, 6 ವರ್ಷಗಳ ನರೆಗೆ ಸರಕಾರಿ ಅಧಿಕಾರಿಗಳಾಗಿದ್ದು, 1921ರಲ್ಲಿ ನಿವೃತ್ತರಾದ ಮೇಲೂ ಹಿಂದೀಯರ ಸಂಪರ್ಕದಿಂದಿರುವ ಡಾಕ್ಟರ್ ಗಿಲ್ಬರ್ಟ್ ಸ್ಲೇಟರೇ ಅಭಿಪ್ರಾಯವಿತ್ತಿರುವರು. ಇನ್ನು ಮುಂದೆ ವೈಸರಾಯರು ಪಾರ್ಲಿಮೆಂಟಿನಲ್ಲಿ, ನೆಟ್ಟಗೆ ಚಕ್ರವರ್ತಿಗಳಿಗೆ ಜವಾಬ್ದಾರರಾಗಬೇಕು ಇಂಡಿಯದ ಸೆಕ್ರೆಟರಿತನವನ್ನು ತೆಗೆದು ಹಾಕಬೇಕು. ಬ್ರಿಟಿಷ್, ವ್ಯಾಪಾರ, ಕೈಗಾರಿಕೆ, ಬಂಡವಾಳಗಳಿಗಾಗಿ ಹಿಂದೀಯರ ಹಿತವು ಎಂದೂ ತ್ಯಜಿಸಲ್ಪಡಬಾರದು. ಹಿಂದೀಯರ ನ್ಯಾಯವಾದ ಅಭಿಪ್ರಾಯವನ್ನು ಎಂದೂ ಮೂಲೆಗೊತ್ತಬಾರದು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಅಧೀನವಾಗಿರುವ ಅಥವಾ ಆದನ್ನು ಬಿಟ್ಟು ಹೋಗುವ ಸ್ವಾತಂತ್ರ್ಯವು ಹಿಂದೀಯರಿಗಿರಬೇಕು. ಹೀಗಾದರೆ ಹಿಂದುದೇಶವು ಸ್ವ ಸಂತೋಷದಿಂದಲೇ ಬ್ರಿಟಿಷ್ ಸಾಮ್ರಾಜ್ಯದ ಪ್ರಾಮುಖ್ಯ ಅಂಗವಾಗಿರಲೊಪ್ಪಬಹುದು. ಅದರೆ ಡಾಕ್ಟರ್ ಸ್ಲೇಟರರ ಸಲಹೆಗೆ ಗಮನಕೊಡುವಷ್ಟರ ಮಟ್ಟಿಗಾದರೂ ಪ್ರಸ್ತುತ ನವು ಬ್ರಿಟಿಷ್ ಸರಕಾರಿಕ್ಕಿರುವುವೇ?

ಕಾಂಗ್ರೆಸಿಗೆ ಜಯನಿಶ್ಚಯ

ಮುಂದಿನ ಚುನಾವಣೆಗಳಲ್ಲಿ ಕಾಂಗ್ರೆಸಿಗೆ ಜಯನಿಶ್ಚಯವೆಂದು ಹೇಳುವಷ್ಟರ ರಾಭ ಚಿನ್ಹೆಗಳೀಗ ತೋರಿಬರುತ್ತವೆ. ಜಾತೀಯ ಎವಾರ್ಡಿನ ಅತ್ಯಂತ ತಿಕ್ತನ ಪ್ರಶ್ನೆಯೊಂದೀಗ ಸರ್ವ ಸಾಧಾರಣವಾಗಿ ತೃಪ್ತಿಕರವಾಗಿ ಇತ್ಯರ್ಥ ಹೊಂದಿರುವುದರಿಂದ ಪಂಜಾಬು, ಸಂಯುಕ್ತ ಪ್ರಾಂತ, ಮಧ್ಯ ಪ್ರಾಂತ, ಬಿಹಾರ್ ಪ್ರಾಂತಗಳಲ್ಲಿ ಕಾಂಗ್ರೆಸ್ ಉಮೇದ್ವಾರಿಗಳನ್ನು ವಿರೋಧಿಸುವ ಅಂತಹ ಪ್ರಬಲ ಉಮೇದ್ವಾರಿಗಳೂ ಇರಲಾರರು. ಬಂಗಾಳದಲ್ಲಿ ಜಾತೀಯ ಎವಾರ್ಡಿನ ಪ್ರಶ್ನೆಯಿಂದುಂಟಾಗಿರುವ ವೈಷಮ್ಯವು ನಿವಾರಿತವಾಗಿರುವುದು ಮಾತ್ರ ಸಲ್ಲದೆ, ದೀರ್ಘಕಾಲದಿಂದ ಬಂಗಾಳಕ್ಕೆ ಕಳಂಕಪ್ರಾಯವಾಗಿದ್ದ ಕಾಂಗ್ರೆಸಿನೊಳಗಿನ ಒಡಕು ದೂರವಾಗಿ ಸೌಹಾರ್ದವುಂಟಾಗಿರುವುದು ಇತ್ತಂಡದವರೂ ಒಕ್ಕಟ್ಟಿನಿಂದ ಕೆಲಸ ಮಾಡುತ್ತಿರುವುದರಿಂದ ಬಂಗಾಳದಲ್ಲಿಯೂ ಕಾಂಗ್ರೆಸ್ಸಿಗೆ ಜಯದೊರೆಯದಿರಲಾರದು. ಮುಸ್ಲಿಮ್ ಸಮಾಜದ ಮಾತ್ರ ಸುಸಂಘಟಿತ ಜಸ್ಟಿಸ್ ಪಕ್ಷವೊಂದು ಕಾಂಗ್ರೆಸನ್ನು ವಿರೋಧಿಸಲು ನೊಂಟ ಕಟ್ಟಿರುವುದು. ಆದರೆ ಅಪಕ್ಕೂ ಜನ ಬೆಂಬಲವಿಲ್ಲೆಂಬುದು ಇತ್ತಲಾಗಿ ನಡೆದ ಮದ್ರಾಸ್ ಕೋರ್ಪರೇಶನಿನ ಚುನಾವಣೆಯೂ, ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಗಳೂ ಸಿದ್ಧಗೊಳಿಸಿರುವವು. ಕಾಂಗ್ರೆಸಿಗೆ ವಿಜಯ ನಿಶ್ಚಯವಾದರೂ, ಅದು ವೈರಿಗಳನ್ನು ಚಕಿತಗೊಳಿಸಿ ಕಾಂಗ್ರೆಸೊಂದೇ ಜನತೆಯ ವಿಶ್ವಾಸಕ್ಕೆ ಪಾತ್ರವಾಗಿರುವ ಸಂಸ್ಥೆಯೆಂದು ನಿಸ್ಸಂದೇಹವಾಗಿ ಒಕ್ಕಿತ ಗೊಳಿಸುವಷ್ಟು ಪ್ರಚಂಡ ವಿಜಯವಾಗುವಂತೆ ಹಿಂದೀಯರೆಲ್ಲರೂ ಪ್ರಯತ್ನಿಸ ತಕ್ಕದ್ದು.

ಪಂಡಿತ ಜವಾಹರಲಾಲರೇ ಕಾಂಗ್ರೆಸ್ ಪ್ರೆಸಿಡೆಂಟರಾಗಬೇಕು

ಯಾವ ಕಾರಣಗಳಿಂದ ಕಳೆದ ವರ್ಷ ಪಂಡಿತ ಜವಾಹರಲಾಲರು ಕಾಂಗ್ರೆಸ್ ಪ್ರೆಸಿಡೆಂಟರಾಗಿ ಆರಿಸಲ್ಪಟ್ಟಿದ್ದರೋ ಆವೇ ಕಾರಣಗಳು ಈಗಲೂ ಮೆತ್ತಷ್ಟು ಹೆಚ್ಚಾಗಿ ಅವರಿಗೆ ಆ ಸ್ಥಾನಕ್ಕೆ ಅರ್ಹತೆಯನ್ನೀಯುತ್ತವೆ. ಶ್ರೀ ಸುಭಾಷಚಂದ್ರ ಭೋಸರು ಸ್ವತಂತ್ರರಾಗಿದ್ದರೆ ತವರನ್ನು ಈ ಸಲ ಕಾಂಗ್ರೆಸಿಗೆ ಅಧ್ಯಕ್ಷರಾಗಿ ಚುನಾಯಿಸುವುದು ಉಚಿತವಿತ್ತು. ಆದರೆ ಅವರು ಇನ್ನೂ ಸಿರ್ಬಂಧವಶ್ಲೇ ಇರುವುದರಿಂದ, ಕಾಂಗ್ರೆಸಿನೊಳಗಣ ತೀವ್ರಗಾಮಿಗಳನ್ನೂ, ಮಂಪ ಗಾಮಿಗಳನ್ನೂ ಒಂದುಗೂಡಿಸಿ, ತರುಣ ಭಾರತದ ಹೃದಯದಲ್ಲಿ ಉತ್ಸಾಹವನ್ನುಂಟುಮಾಡಿ, ಸ್ವಾತಂತ್ರ್ಯ ಸಂಗ್ರಾಮವನ್ನು ಒಂದು ಹೆಜ್ಜೆ ಮುಂದಕ್ಕೊತ್ತುವ ಸಮರ್ಥರೆಂದರೆ ಪಂಡಿತ ಜವಾಹರಲಾಲರು. ಇಂದಿನ ಕಾಲಸ್ಥಿತಿಗೆ ತಕ್ಕ ಮುಂದಾಳವರು. ಪಂಡಿತರ ಕಳೆದ ಎಂಟೇ ತಿಂಗಳ ಅಧ್ಯಕ್ಷತನವು ಸಿರುತ್ಸಾಹಭರಿತ ದೇಶದಲ್ಲಿ ಉತ್ಸಾಹವನ್ನುಂಟುಮಾಡಿದೆ ಹಳೆಯದನ್ನು ಬಿಟ್ಟಲ್ಲಿ ಮತ್ತ ಗತಿಯಿಲ್ಲೆಂಬ ಮನೋವೃತ್ತಿಯನ್ನು ಹಿಂದೊತ್ತಿ ನವ ವಿಚಾರ, ನವಕಾರ್ಯಕ್ರಮವ ನವೀನ ಮನೋವೃತ್ತಿಯನ್ನುಂಟುಮಾಡಿರುವವು. ಇವರ ಈ ಕೆಲಸವು ಇಂದೀಗ ಆರಂಭವಾಗಿರುವುದಷ್ಟೆ ಆವನ್ನು ಸಾಕಷ್ಟು ಮುಂದೊತ್ತಿ ಬಲಪಡಿಸುವುದಕ್ಕಾಗಿ ಸಂಡಿತರೇ ಇನ್ನೊಂದು ವರ್ಷ ಕಾಂಗ್ರೆಸಿನ ಅಧ್ಯಕ್ಷರಾಗಿ ಆರಿಸಲ್ಪಡುವುದು ಅತ್ಯಾವಶ್ಯಕವೂ ಸಂದರ್ಭೋಚಿತವೂ ಆಗಿದೆ.

ಸಂಪತ್ಸಮೃದ್ಧಿಯ ಮಧ್ಯದಲ್ಲಿ ತೀವ್ರ ದಾರಿದ್ರ್ಯ

ಹಿಂದು ದೇಶದಲ್ಲಿಯೇ ಕಷ್ಟ ಸಂಪತ್ತಿದೆ. ಆದರೆ ಅದನ್ನು ಆಧುನಿಕ ರೀತಿಯಲ್ಲಿ ವೃದ್ಧಿಪಡಿಸಲು ಯಾವ ಕೆಲಸವೂ ನಡದಿಲ್ಲ. ಹಿಂದೀಯರಿಗೆ ಆ ತರಬೇತಿಯೇ ಸೂ. ಕೊಡಲ್ಪಟ್ಟಿರುವುದಿಲ್ಲ. ಸರಕಾರದ ಅನೇಕ ವಿಸಾಹಾರಗಳು ವಿಶೇಷವಾಗಿ ಇವರ ಇತ್ತಲಾಗಿನ ನಾಣ್ಯ ವಿನಿಮಯ ಘೋರಣೆಯು ಹಿಂದೂದೇಶದ ಹಿತಕ್ಕೆಂಸೇ ಘಾತುಕವಿದೆ. ಹಿಂದೂದೇಶದ ಸಾಂಪತ್ತಿಕ ಮತ್ತು ಕೈಗಾರಿಕಾಭಿವೃದ್ಧಿಯ ಕುರಿತು ಸಗಕಾರವು ಅನಾಸಕ್ತಿಯಿಂದಿದೆ. ಬೇರೆ ಬೇರೆ ತರದ ಉದ್ಯೋಗಗಳ ನಿರ್ಮಾಣ, ತಕ್ಕ ತರಬೇತಿ. ಮತ್ತು ತಜ್ಞತೆ, ಉದ್ಯಮ ಸಾಹಸ ಮೊದಲಾದವನ್ನೆಲ್ಲಾ ಜನ ಹಿತ ಸಾಧಕ ಅನುಸರಣದ ಸಹಾಯದಿಂದ ಮಾತ್ರ ಉಂಟುಮಾಡಲು ಸಾಧ್ಯವಿದೆ.

ESTD. 1906

CANARA BANK,

LIMITED.

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyanur
Buntwal	Ganguli	Pattan
Calicut	Hubli	Udipi
Cannanore	Katkala	

Total Working Funds Rs. 75,00,000

ಆದರೆ ಇಂದು ಮಕ್ಕಳೆಲ್ಲ ಸಾಲಿಗೆ ಹೋಗಿ ಧೀರ ಶೂರ ವೀರ ದೇಶೋದ್ಧಾರ ಕರ ಕತೆಗಳನ್ನು ಕೇಳತೊಡಗಿದುದರಿಂದ ಹಿಂದಿನಂತೆ ಆಜ್ಞಂದಿರ ಬಳಯಲ್ಲಿ ಕೂತು ಪಂಜುರ್ಲಿಯ ಬೀರತನ ಕೇಳಿ ಭೀರುಗಳಾ ಗುವುದು ಕಡಿಮೆಯಾಗಹತ್ತಿದೆ. ಮಾತ್ರ ವಲ್ಲ, ಪಂಜುರ್ಲಿಯೂ ಈಗಿನ ಊರಧೋ ರಣೆಯನ್ನ ನುಪರಿಸಿಯೇ ಏನೋ ತನ್ನ ಕೆಲ ಕೆಲವು ಅಧಿಕಾರಗಳನ್ನು ಜೀರೆಯವರಿಗೆ ಬಿಟ್ಟುಕೊಟ್ಟಂತೆ ತೋರುತ್ತದೆ–ಕಳ್ಳತನ, ದರೋಡೆ, ಕೊಲೆ ಮುಂತಾದುವುಗಳನ್ನು 'ತುಬ್ಬು' ಮಾಡುವ ಕೆಲಸವನ್ನು ಪೋಲೀ ಸರಿಗೆ ಬಿಟ್ಟಿದ್ದಾನೆ! ಸುಳ್ಳುಸತ್ಯ, ನ್ಯಾಯಾ ನ್ಯಾಯ, ಪರಸ್ವಾಪಹರಣ ಇತ್ಯಾದಿಗಳ ಇತ್ಯರ್ಥಗಳನ್ನು ಕೋರ್ಟು ಕಚೇರಿಗಳಿಗೆ! ಸಿಡುಬು, ಕೊಲೆರಾ ಮುಂತಾದ ಮಾರಿ ರೋಗಗಳನ್ನು ತಡೆಗಟ್ಟುವುದು ಹೆಲ್ತ್ ಡಿಪಾರ್ಟ್‌ಮೆಂಟಿನವರಿಗೆ! ಪಾಳು ಗುಡ್ಡೆ ಹಾದಿ ವಕ್ಕಲುಗಳಲ್ಲಿ ಸಂಚಾರಮಾಡು ವುದು ಶ್ಯಾನುಭಾಗ ಮಣಿಗಾರಿಗೆ! ಹೀಗೆ ಲ್ಲಾ 'ಪ್ರೋರ್ಟ್‌ಫೊಲ್ಯೋ' (ಅಧಿಕಾರ) ಕೊಟ್ಟು ಬಿಟ್ಟು ತನ್ನ ಹಿಂದಿನ ಕೀರ್ತಿಯ ನ್ನೇ ಆಧರಿಸಿ ಆರಾಮವಾಗಿ ಕೂತು ಬಿಟ್ಟಿ ದ್ದಾನೆ ಈಗ ಪಂಜುರ್ಲಿ! ಆದುದರಿಂದ ಇಂದು ಆತನಿಗೆ ಆ ಜವಾಬ್ದಾರೀ ಕೆಲಸ ಗಳ ಗೊಡವೆಯಿಲ್ಲ. ಜವಸಿಟ್ಟು ಕೊಂಡಿರು ವುದೆಲ್ಲ ಬೇಜವಾಬ್ದಾರೀ ಕಾಮಗಾರಿಕೆ ಗಳೇ. ಆಗದಿದ್ದರೆ ಹೊಣೆಗಾರಿಕೆಯಿಲ್ಲ, ಮೂರೂ ಇಲ್ಲ, ಕೀರ್ತಿಗೆ ಕಳಂಕವಿಲ್ಲ, ನಷ್ಟವೆಂತೂ ಇಲ್ಲವೆನ್ನಿ! ಆಗಿ ಬಿಟ್ಟರಂತೂ ತನ್ನ ಹಿಂದಿನ ಕೀರ್ತಿಗೊಂದು ಶಿಖರ ಹೆಚ್ಚಿದ ಹಾಗೆ! ತನ್ನ ಸೀಗೆಯ ಬಲ್ಲೆಯೊ ಳಗೆ ಮತ್ತೊಂದು ಪ್ರಾಣಿ ಸಿಕ್ಕಿಬಿದ್ದ ಹಾಗೆ! ಇಂತಹ ಬೇಜವಾಬ್ದಾರೀ ಕೆಲಸವೇನೆಂಬಿ ರಾ? ಘಟ್ಟಕ್ಕೆ ಹೋಗಿದ್ದು ಬಂದವನ ಹೊಟ್ಟೆ ದೊಡ್ಡದಾಗಿದ್ದರೆ ಸಣ್ಣ ಮಮಾಡು ವುದು, ಜವುಗು ಜಾಗದ ಹಸಿಹುಲ್ಲುಮೇದು ಜಾನುವಾರುಗಳ ಹೊಟ್ಟೆಯುಬ್ಬರಿಸಿದರೆ ತಗ್ಗಿಸುವುದು; ಜಾಡಿಸಿದರೆ ನಿಲ್ಲಿಸುವುದು; ಪ್ರಾಯಕ್ಕೆ ಬಂದ ಹೆಮ್ಮಕ್ಕಳಿಗೆ ಕುಲೆ (ಹಿಸ್ಟೀರಿಯಾ ರೋಗ) ಮಕ್ಕಳು ಮರಿಗಳಿ ಗೆ ಭೂತ (ಅಪಸ್ಮಾರ ರೋಗ) ಒಡಿದಿದ್ದರೆ ಬಿಡಿಸುವುದು; ಜ್ವರ ತಲೆಗೇರಿದ ಮಂದಿ ಯಲ್ಲಿ ತಾನು ಕಾಣಿಸಿಕೊಂಡು ಕೋಲ ಬಲಿಗಳನ್ನು ಬೇಡಿ ಕಾಡಿಕೊಳ್ಳುವುದು; ಒಟ್ಟಾರೆ, ಮಂದಿಯ ಮನೆಗಳಲ್ಲಿ ಜನಜಾ ನುವಾರು ನಾಯಿ ಬೆಕ್ಕು ಕೋಳಿಗಳಿಗೇನಾ ದರೂ ಬೇನೆ ಬಂದರೆ ಪರಿಕೆಯ ಕಮಿಶನ್ ಶರ್ತದ ಮೇಲೆ ವಾಸಿಮಾಡಲು ಪಾತ್ರಿಯು ವಹಿಸಿಕೊಳ್ಳುವ ಕಾಮಗಾರಿಕೆಯನ್ನು ನಿ ರ್ವಹಿಸುವುದು. ಇದರಲ್ಲಿ ಜವಾಬ್ದಾರಿಯೇ ನೂ ಇಲ್ಲ. ಏಕೆಂದರೆ ಬ್ರಹ್ಮ ಬರೆದ ಆಯು ಷ್ಯನ್ನು ಯಾರಿಂದುವರಿಸಲು ಯಾರಿಗೂ ಈ ಪಂಜುರ್ಲಿಯ ಸಹ ಅಧಿಕಾರವಿಲ್ಲಪ್ಪೆ! ಆದುದರಿಂದ ಬೇನೆ ಬಿದ್ದ ಜೀವ ಹೋದರೆ ಆಯುಷ್ಯ ತೀರಿದುದರಿಂದ! ಅದಕ್ಕೆ ಪಂಜು ರ್ಲಿ ಹೊಣೆಯೆ? ಅದೂ ಅನ್ನ ಹೋಗಿ ಗಂಜಿಯಾದ ಬಳಿಕ (ನುಶ್ಶು ಪೋದು ಗಂಜಿಆಯಿ ಬೊಕ್ಕ) ಸಂಬಂಧಪಟ್ಟವರು ಬಂದು ಕೇಳಿ ಕೆಟ್ಟರೆಂದು ಪಾತ್ರಿಯು ಮೊದಲಾಗಿಯೇ ಎಚ್ಚರಿಸಿಪ್ಪಾನೆ! ಆದುದ ರಿಂದ ಸತ್ತರೆ ಯಾ ಗುಣವಾಗದಿದ್ದರೆ ಪಂಜುರ್ಲಿಯ ಜವಾಬ್ದಾರಿಯೇನೂ ಇಲ್ಲ. ಬದುಕಿದರೆ ಯಾ ಗುಣವಾದರೆ ಕೋಲದ ಕಮಿಶನ್ ಇದ್ದೇ ಇದೆ! ಹಾಗೆ ಕೋಲ ಕೊಟ್ಟರೂ, ಕೊಟ್ಟವನ ಮನೆಯಲ್ಲಿ ವಂಚ ನೆಯಾಗಿದೆಯೆಂದಾಗಲೀ ಕುಟುಂಬ ಪೂರಾ ಕೂಡಿ ಒಮ್ಮನಸ್ಸಿನಿಂದ ಕೊಡಲಿಲ್ಲ ವೆಂದಾಗಲೀ ಕೊಟ್ಟ ಕೋಲಕ್ಕೇನಾದ ರೊಂದು ಊನಹೇಳಿ ಮತ್ತೊಂದು ಕೋಲ ಕ್ಕೆ ಅಂದೇ ಬುನಾದಿ ಹಾಕಿ ಹಿರಿಯುತ್ತಾನೆ ಆ ಪಾತ್ರಿ! ನೆಗ್ಗಿ ಮುಳ್ಳು ಹೇಗೆ ಬಿದ್ದರೂ ಮೂಗುಮೇಲೆ; ಪಾತ್ರಿಯ ನುಡಿಗಟ್ಟು ಹಾ ಗೆಯೇ. ಇವನ ಸೋದರ ವರ್ಗಕ್ಕೆ ಸೇರಿದ ಜೋಯಿಸರು, ಪ್ರಶ್ನೆಕಾರರು, ಮಂತ್ರವಾ ದಿಗಳು ಇವರೆಲ್ಲರ ನುಡಿಗಟ್ಟಿನಲ್ಲಿಯೂ ಆ ಭ್ರಾತೃತ್ವದ ಲಕ್ಷಣವಿದ್ದೇ ಇದೆ. ಮತ್ತು ಫಲಿತಾಂಶಕ್ಕೆ ಸರಿಯಾಗಿ ಎಳೆದ ಹಾಗೆ ಅರ್ಥಕೊಡುವ ಮಾತುಗಳ ಭಂಡಾರವೇ ಅವರೆಲ್ಲ! ಆದುದರಿಂದ ಪಂಜುರ್ಲಿಯ ಸೀಗೆಬಲ್ಲೆಗೆ ಕೈಹಾಕುವದೇ ತಡ, ಅವನೂ ಆಸನ ಮನೆ ಮಂದಿಯೂ, ಕೂಡುಕುಟುಂ ಬವೂ, ಸಂತಾನ ಪಾರಂಪರ್ಯವೆಲ್ಲವೂ ಸಿಕ್ಕಿ ಬಿದ್ದ ಹಾಗೆಯೇ. ಸತ್ತರೂ ಮುಕ್ತಿ ಯಿಲ್ಲ! ಜಕಣೆಗಳಾಗಿ ಪಂಜುರ್ಲಿಯಲ್ಲಿ ಸಿಕ್ಕಿ ಕೊಂಡು ತಮ್ಮ ಮನೆಯವರನ್ನೇ ಪೀಡಿಸಿ, ಹರಿಕೆ ಕಾಣಿಕೆಗಳನ್ನು ತರಿಸಿಕೊಡಿಸುತ್ತಿರ ಬೇಕು! ಇವೆಲ್ಲ ಎಷ್ಟೊಂದು ಬೇಜವಾಬ್ದಾ ರಿಯ ಕೆಲಸ!

ಆದರೆ ಇಂತಹ ಬೇಜವಾಬ್ದಾರಿಯ ಕೆಲ ಸವನ್ನು ಮಾತ್ರ ಈಗ ಪಂಜುರ್ಲಿಯು ಇ ಟ್ಟುಕೊಂಡಿದ್ದಾನೆಂದು ಆತನ ಪಾತ್ರಿಯು ಹೇಳುವುದು ಪ್ರತಿಜ್ಞೆಗೆ ಕುಂದಲ್ಲವೆ? ಹೇಳ ದಿದ್ದರೂ ಹಾಗಾಗಿರುವುದರ ಪ್ರತ್ಯಕ್ಷ ನಿದ ರ್ಶನವನ್ನು ಮಂದಿಯು ಕಣ್ಣಾರೆ ಕಂಡೂ ತಿಳಿದುಕೊಳ್ಳದೆ ಪಂಜುರ್ಲಿಯನ್ನುಂಟು ಮಾಡಿ ಆ 'ಟ್ರಾನ್ಸ್‌ಫರ್ಡ್ ಸಬ್ಜಕ್ಟ್‌ಗಳ' (ಹಸ್ತಾಂತರಮಾಡಿದ ವಿಷಯಗಳ) ಅಧಿ ಕಾರ ಚಲಾಯಿಸೆಂದು ಕೇಳುತ್ತಾರೆ! ಪಾತ್ರಿ ಯು ನಿರುಪಾಯನಾಗಿ 'ಡಿಸ್ಲೊಮೆಸಿ'(ಹಿಕ್ಮ ತ್) ಮಾಡಿ ಮಾತಾಡುತ್ತಾನೆ. ಕೇಳಿ, ಮೊನ್ನೆ ಹಾಗಾಯಿತು—ಇತ್ತೀಚೆಗೆ ಪಂಜು ರ್ಲಿಯ ಕಾಣಿಕೆ ಡಬ್ಬಿಯೇ ಕಾಣೆಯಾಗಿ ಕೋಳಿಪಡೆಯ ಜುಗಾರಾಟದ ಕಳದಲ್ಲಿ ನೀ ರಾಗಿ ಹೋದುದು ಊರೂರಿಗೇ ಗೊತ್ತಿದ್ದ ರೂ ಪಂಜುರ್ಲಿಗದನ್ನು ತುಬ್ಬುಮಾಡಲಿ ಕ್ಕಾಗಲಿಲ್ಲ! ಆದರೂ ಆತನ ಗೌರವಕೀರ್ತಿ ಪ್ರತಿಷ್ಠಾಪನಾಚಾರ್ಯರುಗಳಾದ ಪೂರ್ವೋ ಕ್ತ ಶೆಟ್ರು ಭಟ್ರು ಸೇರಿ ಪಾತ್ರಿಗೆ ಹೂನೀರು ಕೊಟ್ಟು ಪಂಜುರ್ಲಿಯನ್ನು ಉಂಟುಮಾಡಿ ಕೇಳಿದಾಗ, 'ಏನು ಮಾಡಲಿ ನಾನು! ಬಂದ ವರು ಮೊದಲಾಗಿ ನನ್ನ ಕಣ್ಣು ಕಟ್ಟಿ ಕಾಣಿ ಕೆ ಡಬ್ಬಿ ಕಿತ್ತರು! ಮಾಟ ಕೃತ್ರಿಮ ಮಂತ್ರ ವಾದಗಳ ಪ್ರಭಾವ! ಇಲ್ಲವಾಗಿದ್ದರೆ ಅವ ರನ್ನ ಬಿಡುತ್ತಿದ್ದೆನೆ? ಅಲ್ಲೇ ರಕ್ತ ಕಾರಿಸಿ ಬಿಡುತ್ತಿದ್ದೆ! ನೂಲುಹಾಕಿದ ಕರ್ತುಳೆ, ನನ್ನ ಕಣ್ಣು ಬಿಡಿಸಿಕೊಡಿ, ಬಿತ್ತುವ ಬೆಳೆ ಜಾಯಿಗೆ ಬೀಳದ ಮೊದಲು ಕದ್ದವರನ್ನು ಬೀಳಿಸಿಕೊಡುತ್ತೇನೆ! ಹ್ಞೂಂ!' ಎಂದು ಕ ಟ್ಟುವಾದ್ಯಕ್ಕೆ ನನ್ನೆಕೊಟ್ಟು ಕಣ್ಣು ತೆರೆದು ಕೊಂಡೇ ನೆಲ ಅಗುರುವಂತೆ ಗಡಗಡನೆ ನಡುಗಿ ಆರ್ಭಟಿಸಿ ಹಾರಿನಿಂತು ಸಿಂಗಾರದ ಮುಡಿಪನ್ನು ಸೆಟ್ಟರ ಮುಂದಿಟ್ಟ ಪಾತ್ರಿ! 'ಭಟ್ರೇ, ಪರ್ಸಾದ ಹೇಗೆ ಬಂದದೆ ನೋಡಿ, ಎಂದರು ಶೆಟ್ರು. 'ಸರಿಯಾಗಿಯೇ ಕೂಡಿ ಬಂದದೆ, ಮಂತ್ರವಾದಿಯೊಬ್ಬರನ್ನು ಕರೆಸಿ ಪಂಜುರ್ಲಿಯ ಕಣ್ಣನ್ನು ಬಿಡಿಸಿಕೊಟ್ಟರೆ ಹಿಂದಿನಂತೆ ಮುಂದೆಯೂ ಹದಿನಾಲ್ಕು

ಮಾಗಣೆ ಕಾದು ಕೊಡುತ್ತೇನೆ!' ಎಂದರು ಭಟ್ಟರು. ಆಗ ಕೋಚಣ್ಣ ಶೆಟ್ರು ನೆರೆದು ಬಂದವರನ್ನು ನೋಡಿ ಹೀಗೆಂದರು–'ಪಂಜುರ್ಲಿಯ ಮಾತು ಸತ್ಯ! ಹಿಂದೊಮ್ಮೆ ನಮ್ಮ ಅಜ್ಜನ ಕಾಲದಲ್ಲಿಯೂ ಹೀಗೇ ಆಗಿತ್ತು; ಏಕೆ? ಹೆಚ್ಚೇ ಆಗಿತ್ತೆನ್ನಿ! ಈ ಪಂಜುರ್ಲಿಯು ರಾತ್ರೆ ಸವಾರಿಹೋಗುತ್ತ ವಿಶ್ರಾಂತಿಗೆ ಕೂತುಕೊಳ್ಳುವ ಜೋಗಿಕೆರೆಯ ಅತ್ತಾಸು ಕಟ್ಟೆಯ ಮೇಲೆ ಯಾರೋ ಒಬ್ಬ ಬೈರಾಗಿಯು ಮಲಗಿದ್ದ. ಈ ನಮ್ಮ ಪಂಜುರ್ಲಿಯ ಪೋಕಾಟಕೆಯೇನು ಕಡಿಮೆಯೆ ಒಂದು ಕುಶಾಲು ತೋರಿತು! ಆ ಬೈರಾಗಿಯನ್ನೆತ್ತಿ ಕೆಳಗಿಟ್ಟುಬಿಟ್ಟ! ಅವನು ಭಂಗಿಯ ಅಮಲಿಳಿದು ಮರುದಿನ ಎಚ್ಚತ್ತು ತಾನು ಮೇಲೆ ಮಲಗಿದವನು ಕೆಳಗಿದ್ದುದನ್ನು ತಿಳಿದು ಸಿಟ್ಟಾಗಿ ಮಾಟಮಾಡಿ ಈ ಪಂಜುರ್ಲಿಯನ್ನು ಒಂದು ತೆಂಗಿನ ಬುರುಡೆಯೊಳಗೆ ತುಂಬಿಸಿ ಗಟ್ಟಿಯಾಗಿ ಬಿರಿಡೆಹಾಕಿ ಆ ಕೆರೆಯಲ್ಲಿ ಹಾಕಿಬಿಟ್ಟ! ನಾಲ್ಕಾರು ವರುಷ ಎಲ್ಲೆಲ್ಲಿಯ ಪಾತ್ರಿಗಳನ್ನು ತಂದು ಪಂಜುರ್ಲಿಗೆ ಸೇನೆನಡೆಸಿದರೂ ಪಂಜುರ್ಲಿಜಪ್ಪೆ! ಕಡೆಗೊಬ್ಬ ಭಾರೀ ಹೆಸರುಹೋದ ಪಾತ್ರಿಯನ್ನು ತಂದು ನಿಲ್ಲಿಸಿ 'ಹೀಗೆ ಕಲೆ ಇಳಿಯಲಿಕ್ಕೇನು ಕಾರಣ? ಈ ಜಾಗದಲ್ಲಿ ಪಂಜುರ್ಲಿ ಇದ್ದಾನೋ ಇಲ್ಲವೋ?' ಎಂದು ಊರೊಟ್ಟುಕೂಡಿ ಕೇಳಿದಾಗ 'ನಾನು ತೆಂಗಿನ ಬುರುಡೆಯೊಳಗೆ ಸಿಕ್ಕಿಬಿದ್ದು ಕೆಸರಲ್ಲಿ ಹೂತು ಕೆರೆಯಲ್ಲಿ ಉಸುರುಕಟ್ಟಿ ಸಾಯುತ್ತಿದ್ದೇನೆ! ಒಬ್ಬ ಮಂತ್ರವಾದಿಯನ್ನು ಕರೆಸಿ ನನ್ನ ಬಂಧನ ವಿಮೋಚನೆಮಾಡಿ ನನ್ನ ಕಂಬದಲ್ಲಿ ನನ್ನನ್ನು ತಂದಿಟ್ಟು ಪ್ರತಿಷ್ಠೆ ಮಾಡಿ! ಆ ನೋಲೆ ನೋಡಿ ನೆನ್ನ ಪ್ರತಾಪ!' ಎಂದು ನುಡಿಗಟ್ಟಾಯಿತು. ಆಗ ಇದೇ ಪೆದ್ದಣ್ಣ ಭಟ್ಟರ ತಂದೆಯೋ ಅಜ್ಜನೋ ಯಾರೋ ಇದ್ದರು; ಅವರ ಮಾವ ಮಹಾ ಮಂತ್ರವಾದಿ. ಅವರನ್ನು ಕರೆಸಿ ಇವನನ್ನು ಕೆರೆಯಿಂದೇಳಿಸಿ ಯಥಾಸ್ಥಾನಕ್ಕೆ ತಂದಿಡಿಸಿದರು ಗುತ್ತು ಊರುಕೂಡಿ! ಕೆರೆಯನ್ನು ಆಗ ಬಚ್ಚಿಸಲಿಕ್ಕೆ ಕೂಡಿದ್ದ ಊರುಊರೇ ಕೆರೆಯಿಡಿ ಕೆಸರಲ್ಲಿ ಹೂತುಹೋಗಿದ್ದ ತೆಂಗಿನ ಬುರುಡೆಯನ್ನು ನೋಡಿತ್ತು! ಈಗ ನನ್ನ ಕಾಲದಲ್ಲಿ ಪಂಜುರ್ಲಿಯ ಈ ಕಣ್ಣು ಕಟ್ಟಾಯಿತು! ಚಿಂತೆಯಿಲ್ಲ, ಪಂಜುರ್ಲಿಯೇ, ನಿನಗೆ ಕಣ್ಣು ಕೊಡಿಸುವಾ, ಗುತ್ತಿನ ಬಂಟ ನೀನು ಕುರುಡಾಗಿ ಕೂತುಕೊಳ್ಳಲಿಕ್ಕೆ ಗುತ್ತೂ ಬಿಡದು; ಹಡಿನಾಲ್ಕು ಮಾಗಣಿಯೂ ಬಿಡದು; ಹಾಗಲ್ಲವೇ ಕೂಡಿನವರ—ಉಂಟುನೋಡಿದವರೆಲ್ಲರ—ಅಭಿಪ್ರಾಯ?' ಎಂದು ಗುತ್ತಿನ ಕೋಚಣ್ಣ ಶೆಟ್ಟರು ಎಲವಪ್ರ ಸುತ್ತಿದ ತಲೆಯೆತ್ತಿ ಸುತ್ತಮುತ್ತ ನೋಡಿದರು. ಮಂದಿಯೆಲ್ಲ ತಲೆ ಬಗ್ಗಿಸಿ ಕೈಮುಗಿದು ನಿಂತಿತು! ಆದರೆ ಹಿಂದಿನಲ್ಲಿ ತಮಾಷೆ ನೋಡುತ್ತಲಿದ್ದ ವಿಚಾರಿಗಳೊಬ್ಬಬ್ಬರು 'ಈ ಪಂಜುರ್ಲಿಯ ಮಾಯಕ್ಕೆ ಗೊತ್ತಾಗದುದು ಯಾವುದೂ ಇಲ್ಲವಂತೆ! ಹಾಗಾದರೆ ಆ ಬೈರಾಗಿಯು ಇವನನ್ನು ಬುರುಡೆಯಲ್ಲಿ ಹಾಕಲಿಕ್ಕೆ ನಿಶ್ಚೈಸಿದ ಕೂಡಲೇ ಮಂತ್ರವಾದ ತೊಡಗುವ ಮುಂಚೆಯೆ ಅವನನ್ನೇ ಆ ಕೆರೆಯಲ್ಲಿ ಮುಳುಗಿಸಿಬಿಡಬಾರದಿತ್ತೆ? ಆಗ ಇವನಿಗೇನು ಸಿದ್ದೆ ಬಿದ್ದಿತ್ತೆ? ಕಾಣಿಕೆಯ ದಬ್ಬಯನ್ನು ಕೀಳಲಿಕ್ಕೆ ಬಂದವರು ಮಾಯಕಾರನ ಕಣ್ಣು ಕಟ್ಟಲಿಕ್ಕೆ ಮಂತ್ರವಾದ ಮಾಡುವ ಮೊದಲೇ ಅವರಿಗೆ ಪೆಟ್ಟುಬಲಿಕ್ಕೆ ಇವನಿಗೇನು ಹೊಟ್ಟೆನೋವು ಹಿಡಿದಿತ್ತೆ ಆಗ? ಒಟ್ಟಾರೆ ಮೇಲೆ, ಇದೆಲ್ಲಾ ಸೂಫ ಜನರಿಗೆ ಮಂಕು ಜೆಲ್ಲುವ ಕಣ್ಣಾಕಟ್ಟು!'ಮಂದಿಯೋ ಕುರಿಕುಂದೆಯೋ!' ಎಂದವನು ಇಂಥವನನ್ನು ನೋಡಿಯೇ ಉಚ್ಚಾರವೆತ್ತಿರಬೇಕು ಎಂದು ಕನಿಕರವ ನಗು ಬೀರುತ್ತ ಸಾಗಿದರು. ಮಂದಿಯಾದರೋ ಪಂಜುರ್ಲಿಯ ಮಾಜೀದರ್ಬಾರದ ದಂತ ಕತೆಗಳನ್ನು ಎಳೆಯಪರ ಬಗೆ ಮುಟ್ಟುವಂತೆ ಬಣ್ಣಿಸುತ್ತ ಕೃತಕೃತ್ಯರಾದೆವೆಂದು ಹಿಗ್ಗುತ್ತ ಮನೆ ಸೇರಿದರು.

'ವಿಚಾರಪ್ರಿಯ'.

ವಿಜಯ ನಗರ ಸ್ಮಾರಕೋತ್ಸವದ ಪೂರ್ವ ಸಿದ್ಧತೆ.

ಡೈರೆಕ್ಟರ ಜನರಲ್ಲ್ ಆಫ್ ಆರ್ಕಿಯಾಲಜಿಯವರ ಉತ್ಸಾಹ ಪೂರ್ಣ ಸಹಕಾರ.

ಹಂಪೆಯಲ್ಲಿ ಬೀಡು ಬಿಟ್ಟ ಪ್ರಾಚ್ಯ ಸಂಶೋಧನ ಖಾತೆಯ ಮುಖ್ಯಾಧಿಕಾರಿಗಳವರಿಂದ ಕರೆ ಬಂದುದರಿಂದಲೂ, ಹೊಸ ಪೇಟೆಯ ಸ್ಥಳೀಯ ಕಮಿಟಿಯವರೊಡನೆ ವಿಚಾರ ವಿನಿಮಯ ಮಾಡುವುದ ಕ್ಕಾಗಿಯೂ, ಶ್ರೀಯುತರಾದ ಜಿ. ಎಸ್. ಕುಲಕರ್ಣಿ, ಬೆಳಗಾಂವಕರ ರಾಮಚಂದ್ರ ರಾಯರೂ, ಬುರ್ಲಿ ಬಿಂದಾಚಾರ್ಯರೂ, ತಾ ೨೦-೧೧-೩೬ನೇ ದಿನ ಸಾಯಂಕಾಲ ೪ ಘಂಟೆಯ ರೈಲು ಬಂಡಿಯಿಂದ ಹೊಸಪೇಟೆಗೆ ಹೋದರು. ಅಲ್ಲಿಯ ಉತ್ಸವದ ಕಾರ್ಯಕರ್ತರೊಡನೆ ಉತ್ಸವದ ಸಿದ್ಧತೆಯನ್ನು ಕುರಿತು ಆಲೋಚನೆಮಾಡಿ, ಈ ಮೂವರು ಶ್ರೀಯುತರಾದ ವಿ. ಕಿರ.ಮಲಾಚಾರ್ಯ, ಬಿ. ಎ., ಬಿ. ಎಲ್., ಎಂ. ಎಚ್. ನಂಜುಂಡಯ್ಯ, ಬಿ.ಎ., ಬಿ.ಎಲ್., ತಟ್ಟಿ ಕೃಷ್ಣರಾಯರು, ಬಿ. ಎ., ಬಿ.ಎಲ್., ಇವರೊಡನೆ ಹಂಪೆಗೆ ತಾ. ೨೧-೧೧-೩೬ ರ ಮಧ್ಯಾಹ್ನಕ್ಕೆ ಹೋಗಿ ಡೈರೆಕ್ಟರು ಜನರಲ್‌ರವರನ್ನು ಕಂಡರು. ಈ ಮಹಾನೀಯರು ತುಂಬಾ ಸಾರಸ್ಯ ಸಹಾನುಭೂತಿಗಳಿಂದ ಸದಸ್ಯರನ್ನು ಬರಮಾಡಿಕೊಂಡು ಅವರ ಅಪೇಕ್ಷೆ, ಮೇರೆಗೆ ಉತ್ಸಾಹ ಪರಿಪೂರಿತವಾದ ಸಂದೇಶವನ್ನು ಕೊಟ್ಟದ್ದಲ್ಲದೆ ಉತ್ಸವದ ಕಾರ್ಯ ವಿವರಗಳನ್ನು ಅತ್ಯಂತ ಆಸ್ಥೆಯಿಂದ ಕೇಳಿಕೊಂಡರು.

ಪ್ರಾಚ್ಯಸಂಶೋಧನ ನಿಭಾಗದ ಇಬ್ಬರು ಕನ್ನಡ ಅಧಿಕಾರಿಗಳಾದ ಎನ್. ಲಕ್ಷ್ಮೀನಾರಾಯಣ ಮತ್ತು ಆರ್. ಎಸ್. ಪಂಚಮುಖಿ ಇವರ ಇಂಗ್ಲೀಷ್ ಪ್ರಬಂಧಗಳನ್ನು (ಅನುಕ್ರಮವಾಗಿ ಕಳದಿಯ ನಾಯಕರು ಮತ್ತು ವಿಜಯ ನಗರ ನಾಣ್ಯಗಳು) ಇಂಗ್ಲೀಷ ಸ್ಮಾರಕ ಗ್ರಂಥದಲ್ಲಿ ಸೇರಿಸಲು ಉದಾರವಾಗಿ ಅನುಮತಿಯಿತ್ತರು. ಸ್ಮಾರಕ ಸ್ತಂಭನನ್ನು ಅವರ ಖಾತೆಯ ಕ್ಷೇತ್ರಕ್ಕೆ ಒಳಪಟ್ಟ ವಿಜಯ ನಗರದ ಅವಶೇಷಗಳುಳ್ಳ ಯಾವ ಭಾಗದಲ್ಲಿಯೂ ಕಟ್ಟಬಹುದೆಂದು ಆಶ್ವಾಸನವಿತ್ತರಲ್ಲದೆ, ಹಾಗೆ ಮಾಡುವುದು ಒಳಿತೆಂದು ಅಭಿಪ್ರಾಯಪಟ್ಟರು. ಮಂಗಳದವರು ಕೈಕೊಂಡ್ಡ ಸ್ಮಾರಕ ನ್ರಕಟನೆಗಳ ವಿಚಾರವನ್ನು ಅವರಿಗೆ ವಿದಿತಪಡಿಸಲಾಯಿತು. ಮತ್ತು ಪಿ. ಬಿ. ದೇಸಾಯಿಯವರ "ವಿಜಯನಗರ ಸಾಮ್ರಾಜ್ಯ" ಎಂಬ ಕನ್ನಡ ಗ್ರಂಥದ ಪ್ರೆಸ್ ಪ್ರತಿಯನ್ನು ತೋರಿಸಲಾಯಿತು. ಆ ತರುವಾಯ ಡೈರೆಕ್ಟರ ಜನರಲ್‌ರವರು ಉತ್ಸವಕ್ಕೆ ಯಶಸ್ಸನ್ನೂ ಕೋರಿ ನಗೆಮೊಗದಿಂದ ಎಲ್ಲರನ್ನೂ ಬೀಳ್ಕೊಟ್ಟರು. ಸದಸ್ಯರೆಲ್ಲರೂ ಆ ಮೇಲೆ ಶ್ರೀ ವಿರುಪಾಕ್ಷ ದೇವಾಲಯದ ಮುಂದುಗಡೆ ಎದುರಿನ ಬಸವಣ್ಣನ ಹತ್ತಿರದ ಉತ್ಸವದ ಸ್ಥಳವನ್ನು ನೋಡಿಕೊಂಡು ಮಂಟಪದ ಸ್ಥಳ, ಮುಖ್ಯ ಮುಖ್ಯ ಅತಿಥಿ ಸ್ಥಳ ಸ್ವಯಂಸೇವಕರ ಶಿಬಿರ, ಊಗ್ರಾಣದ ಮನೆ ಇವೆಲ್ಲವುಗಳನ್ನು ಗೊತ್ತುಪಡಿಸಿ ಆಗಬೇಕಾದ ಏರ್ಪಾಡುಗಳ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಂಡು ಹೊಸಪೇಟೆಗೆ ಬಂದರು. ಮತ್ತು ಧಾರವಾಡದ ಸದಸ್ಯರು ಅದೇ ದಿನರಾತ್ರಿ ಹೊಸಪೇಟೆಯಿಂದ ನುರಳಿದರು. ಒಟ್ಟಾರೆ ಹೊಸಪೇಟೆಯ ಪರಿಸ್ಥಿತಿಯು ತುಂಬ ಆಶಾದಾಯಕವೂ ಉತ್ಸಾಹ ಪರಿಪೂರಿತವೂ ಆಗಿದ್ದು ಅಲ್ಲಿಯ ಕಾರ್ಯಕರ್ತರು ಉತ್ಸವದ ಪೂರ್ವಸಿದ್ಧತೆಯ ಕಾರ್ಯವನ್ನು ಕೂಡಲೇ ತಳಕೊಳ್ಳಲಿದ್ದಾರೆ.

ಗೋವರ್ಧನರಾಯರು,
ಆಫೀಸ್ ಸೆಕ್ರೆಟರಿ, ವಿ. ಸ್ಮಾರಕ ಮಂಡಲ್ಕಾರವಾಡ

ಭದ್ರತೆಯ ತವರುಮನೆ

ನಮ್ಮ ಚಾಲ್ತಿ ವರ್ಷದ ಅತ್ಯಧಿಕ ಬೋನಸನ್ನು
ಪರಿಶೀಲಿಸಿದರೆ ಜೀವನವಿಮೆಗಾಗಿ ವ್ಯಯಿಸುವ ಹಣವು
ಅತ್ಯಾಕರ್ಷಕವಾದ ರೇವಣ್ಣಾತಿ

ಎಂಡೋಮೆಂಟ್ ವಿಮೆಯ ಮೇಲೆ ರೂ. 23
ಇಡೀ ಜೀವನಾವಧಿ ವಿಮೆಯ ಮೇಲೆ ರೂ. 20

ಬೋನಸು ವರ್ಷ 1936-'37

ಈಗಲೇ ಸೇರಿರಿ—
ದಿ ಹಿಂದುಸ್ಥಾನ ಕೋಪರೇಟಿವ್ ಇನ್ಶೂರೆನ್ಸ್ ಸೊಸೈಟಿ ಲಿಮಿಟೆಡಿಗೆ.

ಬೋನಸು ವರ್ಷ 1936-'37

ದಯಮಾಡಿ ಈ ವಿಳಾಸಕ್ಕೆ ಬರೆಯಿರಿ:—
ಶಾಖಾ ಆಫೀಸು:
"ಹಿಂದುಸ್ಥಾನ್ ಬಿಲ್ಡಿಂಗ್ಸ್"
ಆರ್ಮೀನಿಯನ್ ಸ್ಟ್ರೀಟ್
ಮದ್ರಾಸು.

ಉಪ ಆಫೀಸುಗಳು— ಬಳ್ಳಾರಿ ಬೆಂಗಳೂರು ಬೆಜವಾಡ
ಕೊಯಮುತ್ತೂರು ಕಲ್ಲಿಕೋಟೆ ಕಡಲೂರು
ಮಧುರೆ ವಿಶಾಖಪಟ್ಟಿ

ಮಾಗಣೆ ಕಾದು ಕೊಡುತ್ತೇನೆ!' ಎಂದರು ಭಟ್ಟರು. ಆಗ ಕೋಚಣ್ಣ ಕೆಟ್ಟು ನೆರೆದು ಬಂದವರನ್ನು ನೋಡಿ ಹೀಗೆಂದರು–'ಪಂಜುರ್ಲಿಯ ಮಾತು ಸತ್ಯ! ಹಿಂದೊಮ್ಮೆ ನಮ್ಮ ಅಜ್ಜನ ಕಾಲದಲ್ಲಿಯೂ ಹೀಗೇ ಆಗಿತ್ತು; ಏಕೆ? ಹೆಚ್ಚೇ ಆಗಿತ್ತೆನ್ನಿ! ಈ ಪಂಜುರ್ಲಿಯು ರಾತ್ರೆ ಸವಾರಿಹೋಗುತ್ತ ವಿಶ್ರಾಂತಿಗೆ ಕೂತುಕೊಳ್ಳುವ ಜೋಗಿಕೆರೆಯ ಅತ್ತಾಸು ಕಟ್ಟೆಯ ಮೇಲೆ ಯಾರೋ ಒಬ್ಬ ಬೈರಾಗಿಯು ಮಲಗಿದ್ದ. ಈ ನಮ್ಮ ಪಂಜುರ್ಲಿಯ ಪೋಕಾಟಕೆಯೇನು ಕಡಿಮೆಯೆ ಒಂದು ಕುತಾಲು ತೋರಿತು! ಆ ಬೈರಾಗಿಯನ್ನೆತ್ತಿ ಕೆಳಗಿಟ್ಟುಬಿಟ್ಟ! ಅವನು ಭಂಗಿಯ ಅಮಲಿಳಿದು ಮರುದಿನ ಎಚ್ಚತ್ತು ತಾನು ಮೇಲೆ ಮಲಗಿದವನು ಕೆಳಗಿದ್ದುದನ್ನು ತಿಳಿದು ಸಿಟ್ಟಾಗಿ ಮಾಟಮಾಡಿ ಈ ಪಂಜುರ್ಲಿಯನ್ನು ಒಂದು ತೆಂಗಿನ ಬುರುಡೆಯೊಳಗೆ ತುಂಬಿಸಿ ಗಟ್ಟಿಯಾಗಿ ಬಿರಿಡೆಹಾಕಿ ಆ ಕೆರೆಯಲ್ಲಿ ಹಾಕಿಬಿಟ್ಟ! ನಾಲ್ಕಾರು ವರುಷ ಎಲ್ಲೆಲ್ಲಿಯ ಪಾತ್ರಿಗಳನ್ನು ತಂದು ಪಂಜುರ್ಲಿಗೆ ಸೇನೆನಡೆಸಿದರೂ ಪಂಜುರ್ಲಿಚಪ್ಪೆ! ಕಡೆಗೊಬ್ಬ ಭಾರೀ ಹೆಸರುಹೋದ ಪಾತ್ರಿಯನ್ನು ತಂದು ನಿಲ್ಲಿಸಿ 'ಹೀಗೆ ಕಲೆ ಇಳಿಯಲಿಕ್ಕೇನು ಕಾರಣ? ಈ ಜಾಗದಲ್ಲಿ ಪಂಜುರ್ಲಿ ಇದ್ದಾನೋ ಇಲ್ಲವೊ?' ಎಂದು ಊರೊಟ್ಟು ಕೂಡಿ ಕೇಳಿದಾಗ 'ನಾನು ತೆಂಗಿನ ಬುರುಡೆಯೊಳಗೆ ಸಿಕ್ಕಿಬಿದ್ದು ಕೆಸರಲ್ಲಿ ಹೂತು ಕೆರೆಯಲ್ಲಿ ಉಸುರುಕಟ್ಟಿ ಸಾಯುತ್ತಿದ್ದೇನೆ! ಒಬ್ಬ ಮಂತ್ರವಾದಿಯನ್ನು ಕರೆಸಿ ನನ್ನ ಬಂಧನ ವಿಮೋಚನೆಮಾಡಿ ನನ್ನ ಕಂಬದಲ್ಲಿ ನನ್ನನ್ನು ತಂದಿಟ್ಟು ಪ್ರತಿಷ್ಠೆ ಮಾಡಿರಿ! ಆ ಮೇಲೆ ನೋಡಿ ನಿನ್ನ ಪ್ರತಾಪ!' ಎಂದು ನುಡಿಗಟ್ಟಾಯಿತು. ಆಗ ಇದೇ ಪಟ್ಟಣ್ಣ ಭಟ್ಟರ ತಂದೆಯೋ ಅಜ್ಜನೋ ಯಾರೋ ಇದ್ದರು; ಅವರ ಮಾವ ಮಹಾಮಂತ್ರವಾದಿ. ಅವರನ್ನು ಕರೆಸಿ ಇವನನ್ನು ಕೆರೆಯಿಂದೇಳಿಸಿ ಯಥಾಸ್ಥಾನಕ್ಕೆ ತಂದಿಡಿಸಿದರು ಗುತ್ತು ಊರುಕೂಡಿ! ಕೆರೆಯನ್ನು ಆಗ ಬಚ್ಚಿಸಲಿಕ್ಕೆ ಕೂಡಿದ್ದ ಊರುಊರೇ ಕೆರೆಯಡಿ ಕೆಸರಲ್ಲಿ ಹೂತುಹೋಗಿದ್ದ ತೆಂಗಿನ ಬುರುಡೆಯನ್ನು ನೋಡಿತ್ತು! ಈಗ ನಮ್ಮ ಕಾಲದಲ್ಲಿ ಪಂಜುರ್ಲಿಯ ಈ ಕಣ್ಣು ಕಟ್ಟಾಯಿತು! ಚಿಂತೆಯಿಲ್ಲ, ಪಂಜುರ್ಲಿಯೇ, ನಿನಗೆ ಕಣ್ಣುಕೊಡಿಸುವಾ, ಗುತ್ತಿನ ಬಂಟ ನೀನು ಕುರುಡಾಗಿ ಕೂತುಕೊಳ್ಳಲಿಕ್ಕೆ ಗುತ್ತೂ ಬಿಡದು; ಹೆದಿನಾಲ್ಕು ಮಾಗಣೆಯೂ ಬಿಡದು; ಹಾಗಲ್ಲವೇ ಕೂಡಿದವರ—ಉಂಟುಮೂಡಿದವರೆಲ್ಲರ—ಅಭಿಪ್ರಾಯ?' ಎಂದು ಗುತ್ತಿನ ಕೋಚಣ್ಣ ಕೆಟ್ಟರು ಎಲವಸ್ತ್ರ ಸುತ್ತಿದ ತಲೆಯೆತ್ತಿ ಸುತ್ತಮುತ್ತ ನೋಡಿದರು. ಮಂದಿಯೆಲ್ಲ ತಲೆ ಬಗ್ಗಿಸಿ ಕೈಮುಗಿದು ನಿಂತಿತು! ಆದರೆ ಹಿಂದಿನಲ್ಲಿ ತಮಾಷೆ ನೋಡುತ್ತಲಿದ್ದ ವಿಚಾರಿಗಳೊಬ್ಬಿಬ್ಬರು 'ಈ ಪಂಜುರ್ಲಿಯ ಮಾಯಕ್ಕೆ ಗೊತ್ತಾಗದುದು ಯಾವುದೂ ಇಲ್ಲವಂತೆ! ಹಾಗಾದರೆ ಆ ಬೈರಾಗಿಯು ಇವನನ್ನು ಬುರುಡೆಯಲ್ಲಿ ಹಾಕಲಿಕ್ಕೆ ಸಿದ್ಧಿಸಿದ ಕೂಡಲೇ ಮಂತ್ರವಾದ ತೊಡಗುವ ಮುಂಚೆಯೆ ಅವನನ್ನೇ ಆ ಕೆರೆಯಲ್ಲಿ ಮುಳುಗಿಸಿಬಿಡಬಾರದಿತ್ತೆ? ಆಗ ಇವನಿಗೇನು ಸಿದ್ಧಿ ಬಿದ್ದಿತ್ತೆ? ಕಾಣಿಕೆಯ ಹಬ್ಬಿಯನ್ನು ಕೇಳಲಿಕ್ಕೆ ಬಂದವರು ಮಾಯಕಾರನ ಕಣ್ಣು ಕಟ್ಟಬಲಿಕ್ಕೆ ಮಂತ್ರವಾದ ಮಾಡುವ ನೊಡೆಲೇ ಅವರಿಗೆ ಪೆಟ್ಟುಬಲಿಕ್ಕೆ ಇವನಿಗೇನು ಹೊಟ್ಟೆನೋವು ಹಿಡಿದಿತ್ತೆ ಆಗ? ಒಟ್ಟಾರೆ ಮೇಲೆ, ಇದೆಲ್ಲಾ ಮೂಢ ಜನರಿಗೆ ಮೆಂಕುಜೆಲ್ಲುವ ಕಣ್ಣು ಕಟ್ಟು!'ಮಂದಿಯೋ ಕುರಿ ಮಂದೆಯೋ!' ಎಂದವನು ಇಂಥವನನ್ನು ನೋಡಿಯೇ ಉದ್ಗಾರವೆತ್ತಿರಬೇಕು ಎಂದ್ಯ ಕನಿಕರವು ನಗು ಬೀರುತ್ತ ಸಾಗಿದರು. ಮುಂದಿಯಾವರೋ ಪಂಜುರ್ಲಿಯ ಮಾಜೀ ದರ್ಬಾರದ ದಂತ ಕತೆಗಳನ್ನು ಎಳೆಯವರ ಬಗೆ ಮುಟ್ಟುವಂತೆ ಬಣ್ಣಿಸುತ್ತ ಕೃತಕೃತ್ಯರಾದೆವೆಂದು ಹಿಗ್ಗುತ್ತ ಮನೆ ಸೇರಿದರು.

'ವಿಚಾರಪ್ರಿಯ'.

ಭದ್ರತೆಯ ತವರುಮನೆ

ನಮ್ಮ ಚಾಲ್ತಿ ವರ್ಷದ ಅತ್ಯಧಿಕ ಬೋನಸನ್ನು
ಪರಿಶೀಲಿಸಿದರೆ ಜೀವವಿಮೆಗಾಗಿ ವ್ಯಯಿಸುವ ಹಣವು
ಅತ್ಯಾಕರ್ಷಕವಾದ ರೇವಣ್ಣಾತಿ

ಎಂಡೋಮೆಂಟ್ ವಿಮೆಯ ಮೇಲೆ ರೂ. 23
ಇಡೀ ಜೀವನಾವಧಿ ವಿಮೆಯ ಮೇಲೆ ರೂ. 20

ಬೋನಸು ವರ್ಷ 1936-'37

ಈಗಲೇ ಸೇರಿರಿ—
ದಿ ಹಿಂದುಸ್ಥಾನ
ಕೋಪರೇಟಿವ್
ಇನ್ಶೂರೆನ್ಸ್
ಸೊಸೈಟಿ
ಲಿಮಿಟೆಡಿಗೆ.

ಬೋನಸು ವರ್ಷ 1936-'37

ದಯಮಾಡಿ ಈ ವಿಳಾಸಕ್ಕೆ ಬರೆಯಿರಿ:—
ಶಾಖಾ ಆಫೀಸು:
"ಹಿಂದುಸ್ಥಾನ್ ಬಿಲ್ಡಿಂಗ್ಸ್"
ಆರ್ಮೀನಿಯನ್ ಸ್ಟ್ರೀಟ್
ಮದ್ರಾಸು.

ಉಪ ಆಫೀಸುಗಳು— ಬಳ್ಳಾರಿ ಬೆಂಗಳೂರು ಬೆಜವಾಡ
ಕೊಯಮುತ್ತೂರು ಕಲ್ಲಿಕೋಟೆ ಕಡಲೂರು
ಮಧುರೆ ನಿಕಾಪಟ್ಟಿ

ವಿಜಯ ನಗರ ಸ್ಮಾರಕೋತ್ಸವದ ಪೂರ್ವ ಸಿದ್ಧತೆ.

ಡೈರೆಕ್ಟರ ಜನರಲ್ಲ್ ಆಫ್ ಆರ್ಕಿಯಾಲಜಿಯವರ ಉತ್ಸಾಹ ಪೂರ್ಣ ಸಹಕಾರ.

ಪಂಪೆಯಲ್ಲಿ ಬೀಡು ಬಿಟ್ಟ ಪ್ರಾಚ್ಯ ಸಂಶೋಧನ ಖಾತೆಯ ಮುಖ್ಯಾಧಿಕಾರಿಗಳವರಿಂದ ಕರೆ ಬಂದುದರಿಂದಲೂ, ಹೊಸ ಪೇಟೆಯ ಸ್ಥಳೀಯ ಕಮಿಟಿಯವರೊಡನೆ ವಿಚಾರ ವಿನಿಮಯ ಮಾಡುವುದ ಕ್ಕಾಗಿಯೂ, ಶ್ರೀಯುತರಾದ ಜಿ. ಎಸ್. ಕುಲಕರ್ಣಿ, ಬೆಳಗಾಂವಕರ ರಾಮಚಂದ್ರ ರಾಯರೂ, ಬುರ್ಲಿ ಬಿಂದಾಚಾರ್ಯರೂ, ತಾ. ೨೦-೧೧-೩೬ನೇ ದಿನ ಸಾಯಂಕಾಲ ೪ ಘಂಟೆಯ ರೈಲು ಬಂಡಿಯಿಂದ ಹೊಸಪೇಟೆಗೆ ಹೋದರು. ಅಲ್ಲಿಯ ಉತ್ಸವದ ಕಾರ್ಯಕರ್ತರೊಡನೆ ಉತ್ಸವದ ಸಿದ್ಧತೆಯನ್ನು ಕುರಿತು ಆಲೋಚನೆಮಾಡಿ, ಈ ಮೂವರು ಶ್ರೀಯುತರಾದ ಮಿ. ತಿರ.ಮಲಚಾರ್ಯ, ಬಿ. ಎ., ಬಿ. ಎಲ್., ಎಂ. ಎಚ್. ನಂಜುಂಡಯ್ಯ, ಬಿ.ಎ., ಬಿ.ಎಲ್., ತಟ್ಟಿ ಕೃಷ್ಣರಾಯರು, ಬಿ. ಎ., ಬಿ.ಎಲ್., ಇವರೊಡನೆ ಹಂಪೆಗೆ ತಾ. ೨೧-೧೧-೩೬ ರ ಮಧ್ಯಾಹ್ನಕ್ಕೆ ಹೋಗಿ ಡೈರಕ್ಟರು ಜನರಲ್‌ರವರನ್ನು ಕಂಡರು. ಈ ಮಹನೀಯರು ತುಂಬಾ ಸಾರಲ್ಯ ಸಹಾನುಭೂತಿಗಳಿಂದ ಸದಸ್ಯರನ್ನು ಬರಮಾಡಿಕೊಂಡು ಅವರ ಅಪೇಕ್ಷೆ ಮೇರೆಗೆ ಉತ್ಸಾಹ ಪರಿಪೂರಿತವಾದ ಸಂದೇಶವನ್ನು ಕೊಟ್ಟದ್ದಲ್ಲದೆ ಉತ್ಸವದ ಕಾರ್ಯ ವಿವರಗಳನ್ನು ಅತ್ಯಂತ ಆಸ್ಥೆಯಿಂದ ಕೇಳಿಕೊಂಡರು.

ಪ್ರಾಚ್ಯಸಂಶೋಧನ ನಿಭಾಗದ ಇಬ್ಬರು ಕನ್ನಡ ಅಧಿಕಾರಿಗಳಾದ ಎನ್. ಲಕ್ಷ್ಮೀನಾರಾಯಣ ಮತ್ತು ಆರ್. ಎಸ್. ಪಂಚಮುಖಿ ಇವರ ಇಂಗ್ಲೀಷ್ ಪ್ರಬಂಧಗಳನ್ನು (ಅನುಕ್ರಮವಾಗಿ ಕಳದಿಯ ನಾಯಕರು ಮತ್ತು ವಿಜಯ ನಗರ ನಾಣ್ಯಗಳು) ಇಂಗ್ಲೀಷ ಸ್ಮಾರಕ ಗ್ರಂಥದಲ್ಲಿ ಸೇರಿಸಲು ಉದಾರವಾಗಿ ಅನುಮತಿಯಿತ್ತರು. ಸ್ಮಾರಕ ಸ್ತಂಭನವನ್ನು ಅವರ ಖಾತೆಯ ಕ್ಷೇತ್ರಕ್ಕೆ ಒಳಪಟ್ಟ ವಿಜಯ ನಗರದ ಅವಶೇಷಗಳುಳ್ಳ ಯಾವ ಭಾಗದಲ್ಲಿಯೂ ಕಟ್ಟಬಹುದೆಂದು ಆಶ್ವಾಸನವಿತ್ತರಲ್ಲದೆ, ಹಾಗೆಮಾಡುವುದು ಒಳಿತೆಂದು ಅಭಿಪ್ರಾಯಪಟ್ಟರು. ಮಂಗಲದವರು ಕೈಕೊಂಡ ಸ್ಮಾರಕ ಪ್ರಕಟನೆಗಳ ವಿಚಾರನನ್ನು ಅವರಿಗೆ ವಿದಿತವಪಡಿಸಲಾಯಿತು. ಮತ್ತು ಪಿ. ಬಿ. ಜೋಷಿಯವರ "ವಿಜಯನಗರ ಸಾಮ್ರಾಜ್ಯ" ಎಂಬ ಕನ್ನಡ ಗ್ರಂಥದ ಪ್ರೆಸ್ ಪ್ರತಿಯನ್ನು ತೋರಿಸಲಾಯಿತು. ಆ ತರುವಾಯ ಡೈರೆಕ್ಟರ ಜನರಲ್‌ರವರು ಉತ್ಸವಕ್ಕೆ ಯಶಸ್ಸನ್ನೂ ಕೋರಿ ನಗೆಮೊಗದಿಂದ ಎಲ್ಲರನ್ನೂ ಬೀಳ್ಕೊಟ್ಟರು. ಸದಸ್ಯರೆಲ್ಲರೂ ಆ ಮೇಲೆ ಶ್ರೀ ವಿರೂಪಾಕ್ಷ ದೇವಾಲಯದ ಮುಂದುಗಡೆ ಎದುರಿನ ಬಸವಣ್ಣನ ಹತ್ತಿರದ ಉತ್ಸವದ ಸ್ಥಳವನ್ನು ನೋಡಿಕೊಂಡು ಮಂಟಪದ ಸ್ಥಳ, ಮುಖ್ಯ ಮುಖ್ಯ ಅತಿಥಿ ಸ್ಥಳ ಸ್ವಯಂಸೇವಕರ ಶಿಬಿರ, ಉಗ್ರಾಣದ ಮನೆ ಇವೆಲ್ಲವುಗಳನ್ನು ಗೊತ್ತುಪಡಿಸಿ ಆಗಬೇಕಾದ ಏರ್ಪಾಡುಗಳ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಂಡು ಹೊಸಪೇಟೆಗೆ ಬಂದರು. ಮತ್ತು ಧಾರವಾಡದ ಸದಸ್ಯರು ಅದೇ ದಿನರಾತ್ರಿ ಹೊಸಪೇಟೆಯಿಂದ ಮರಳಿದರು. ಒಟ್ಟಾರೆ ಹೊಸಪೇಟೆಯ ಪರಿಸ್ಥಿತಿಯು ತುಂಬ ಆಶಾದಾಯಕವೂ ಉತ್ಸಾಹ ಪರಿಪೂರಿತವೂ ಆಗಿದ್ದು ಅಲ್ಲಿಯ ಕಾರ್ಯಕರ್ತರು ಉತ್ಸವದ ಪೂರ್ವಸಿದ್ಧತೆಯ ಕಾರ್ಯವನ್ನು ಕೂಡಲೇ ತಿಳಿಕೊಳ್ಳಲಿದ್ದಾರೆ.

ಗೋವರ್ಧನರಾಯರು,
ಆಫೀಸ್ ಸೆಕ್ರೆಟರಿ, ವಿ. ಸ್ಮಾರಕ ಮಂಡಲ, ಧಾರವಾಡ

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ಸಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇನ್ಮುಡಿಯಾಗಿ ತಿರುಗಿ ಜೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಬಾಣಂತಿಯರ ಆರೋಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ತೀಕ್ಷ್ಣದಿಂದ ಸ್ಥಿಲ್ಲಿಸುವದು.

ಒಬ್ಬಳು ಬಾಣಂತಿಗೆ ಎರಡು ಬಾಟ್ಲಿ ವೇಕಾಗುವುದು ಕ್ರಯ ಬಾಟ್ಲಿ ೧ಕ್ಕೆ ರೂ. 2-0-0

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

ಸ್ಥಾಪನೆ: 1926



18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ಮೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೂಡೋಣಾಗುವುದು.

ಪೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ನಿಮ್ಮ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಿಸಿಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ
ಮಿಕ್ಸೆಡ್	ಬೆಳಿಗ್ಗೆ 6-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸೆಂಜರ್	ಬೆಳಿಗ್ಗೆ 8-25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9 50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12 45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ . 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

ಸ್ಥಾಪಿತವಾದದ್ದು] [1907ರಲ್ಲಿ

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ನಿಕ್ಕಿವೆ
ವಿಮಾ ಹಣ ಪಾವತಿ ರೂ. **37** ಲಕ್ಷ ನಿಕ್ಕಿವೆ.

ಹೊಸತಾಗಿ ವಿಮ್ಮೆಗೆ ಸೇರುವವರು ಹೊಸ ನೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ವಿಜಸ್ಸಿ ಶರ್ತಗಳು:—ಅತ್ಯಧಿಕ ನಷ್ಟೆಯ ಕಮಿಶನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರೆಕೊಳ್ಳಿರಿ

P. D. BHARGOVA,
General Manager, ***AJMER,***
SUPERINTENDENT, 278, Linga Chetty Street, MADRAS
Or Chief Agent —
BELLARY. MADURA. TRICHINAPOLY. VELLORE.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 12-30 ಮಂಗಳವಾರ ಮಧ್ಯಾಹ್ನ 12-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸಮರ್ಪಕ ಪರಿಹಾರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-

ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 1ನೇ ತಾರೀಕಿಗೆ ತಪ್ಪದೆ ಹೊರಡುವದು

ಸದ್ಧರ್ಮ ಪ್ರಚಾರಕ್ಕೆ, ಕಾರ್ಯಾಲಯ,
ಆಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಕ್ರದವಾದ ಲೇಖನಗಳು-ಸುಂದಾಪುರ ಪರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು ವೈಜ್ಞಾನಿಕ ವಿಷಯಗಳು-ಪರಿಹಾಸ್ಯಗಳು, ಸಮಸ್ಯೆಗಳು-ಸ್ವಂದ ವಿಮರ್ಶೆ ಇವುಗಳ ನೆನ್ನೆಳಗೊಂದ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವರಂತ ಪತ್ರಿಕೆಯು ಇದೊಂದೇ.

ವಾರ್ಷಿಕ ಚಂದಾ ರೂ ೩—೮—೦.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office MANGALORE **Branch Office Court Road, UDIPI.**

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: **ಮಂಗಳೂರು.** ಶಾಖೆ: **ಕೋರ್ಟು ರಸ್ತೆ, ಉಡ್ಪಿ.**

ಚಾಲ್ತಿ ರೇವಣಾತಿಗಳು ಸಾ. ಶೆ. 2 ಸೇವಿಂಗ್ಸು ಬ್ಯಾಂಕ್ ರೇವಣಾತಿಗಳುಸಾ. ಶೆ. 3½
ಕಾಯಂ ರೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ಮತ್ತು 9 ತಿಂಗಳ ಬಾಬ್ತು ಸಾ ಶೆ. 4. 1ವರ್ಷದ ಬಾಬ್ತು ಸಾ. ಶೆ. 5.
3 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲ
ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ಬಗ್ಗೆರೆ ಮೇಲೆ ಸಾಲಕೊಡಲಾಗುತ್ತದೆ.
ಫಂಗಾದದ ಈಡಿನ ನೋಟೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು
ರೂ ೨೦೦ರಿಂದ ೯೯೯ ವರೆಗೆ ಸಾ ಶೆ 9. 1000ರಿಂದ 2500 ವರೆಗೆ ಸಾ. ಶೆ. 8. ಮತ್ತು
2500ರಿಂದ ಮೇಲ್ಪಟ್ಟು ಸಾಲಗಳಿಗೆ ಸಾ ಶೆ 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ ಸಾಲುಗಳು ದೊರೆಯುತ್ತವೆ
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ

A. B. Shetty, ಚೆಯರ್‌ಮೇನ್. **K Gopalakrishna Shetty** ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ಜೊರೆಯುತ್ತವೆ.

ಶುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೫ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತದೆ ಒಂದು ಮರದಲ್ಲಿಸಾವಿರಗಟ್ಟಿ ಹಣ್ಣಾಗುವುದು ಒಂದು ಎಳೆ ಬಿಟ್ಟಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು ಹಣ್ಣು ಅತಿ ಮಧುರ, ಒಳ್ಳೆ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಶಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ಸೃಷ್ಟಿಸುವುದು, ಮರದಲ್ಲಿ ಯಾವಾಗಲೂ ಪಣ್ಣು ಇದ್ದೇ ಇರುವದು ಎಲ್ಲ ಕೊಟಿದಲ್ಲಿಯೂ ಇರತಕ್ಕದ್ದು. ಗಿಡ ಪೊಂದರ ಕ್ರಯ ರೂ ೧-೦-೦ ಸಾಗ್ರಿ ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ವಾದ ಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಬಲ್ಲಿಯ ಎಲ್ಲಾ ಎಗಿ ಕಳ್ಳರಲ್ ಡೆನೋಸ್ ಸ್ಟೋರ್‌ಟರಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಫೋಸ್ಟ್ ಕಾಪು, ದ ಕನ್ನಡ

ರಾಷ್ಟ್ರದ ಘೋಷಣೆ

ಕಾಂಗ್ರೆಸ್ ಚುನಾವಣೆಯ ಜ್ಯಾಹೀರು ಪತ್ರಿಕೆ.

ಸ್ವಾತಂತ್ರ್ಯದ ಹೋರಾಟ.

ಹಿಂದೀ ರಾಷ್ಟ್ರೀಯ ಸಭೆಯು ಕಳೆದ ೫೦ ವರುಷಗಳಿಂದ ಭಾರತದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ ಬಂದಿದೆ. ಕಾಂಗ್ರೆಸಿನ ಶಕ್ತಿಯು ವರ್ಧಿಸುತ್ತಾ ಬಂದಂತೆ, ಅದು ಭಾರತೀಯರ ರಾಷ್ಟ್ರೀಯ ಸ್ವಾತಂತ್ರ್ಯದ ಅವಶ್ಯಕತೆಯ ಮತ್ತು ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಾನಿಯನ್ನು ಕೊನೆಗೊಳಿಸಬೇಕೆಂಬ ಜನರ ಇಚ್ಛೆ,-ಇವೆರಡರ ಪ್ರಾತಿನಿಧ್ಯವನ್ನು ವಹಿಸಲು, ಅದಕ್ಕೆ ಸರಕಾರದೊಡನೆ ಹೋರಾಡುವ ಪ್ರಸಂಗವು ಬಂದಿತು. ಇತ್ತಲಾಗಿ, ಕೆಲವು ವರುಷಗಳಿಂದ ರಾಷ್ಟ್ರೀಯ ಸ್ವಾತಂತ್ರ್ಯಕೋಸ್ಕರ ಕಾಂಗ್ರೆಸು ಪೂರ್ಣ ಜಳಪಳಗಳನ್ನು ಹೂಡಿದೆ; ಮತ್ತು ಭಾರತೀಯರ ರಾಂತಿಮಯವಾದ ಸಾಮೂಹಿಕ ಕಾರ್ಯಗಳಿಂದಲೂ, ಶಿಸ್ತಿಗೊಳಪಟ್ಟ ಸ್ವಾರ್ಥತ್ಯಾಗ, ಕಷ್ಟಸಹಿಷ್ಣುತೆಗಳಿಂದಲೂ, ಅಂತಹ ಸ್ವಾತಂತ್ರ್ಯಕ್ಕೆ ಬೇಕಾದ ಶಕ್ತಿಯನ್ನು ಉಂಟುಮಾಡಲು ಪ್ರಯತ್ನಿಸಿದೆ. ಕಾಂಗ್ರೆಸಿನ ಧುರೀಣತ್ವದಲ್ಲಿ ಹಿಂದೀ ಜನರು ಸಾಕಷ್ಟು ವಿಶ್ವಾಸವಿಟ್ಟು, ಸ್ವಾತಂತ್ರ್ಯ ವಿಷಯದಲ್ಲಿ ತಮ್ಮ ಪೂರ್ಣ ಬೆಂಬಲವಿತ್ತು, ಸ್ವಾತಂತ್ರ್ಯವು ತಮ್ಮ ಜನ್ಮಸಿದ್ಧ ಹಕ್ಕೆಂದು ರುಜುಪಡಿಸಿದ್ದಾರೆ. ಈ ಸ್ವಾತಂತ್ರ್ಯದ ಹೋರಾಟವು ಈಗಲೂ ನಡೆಯುತ್ತಲೇ ಇದೆ; ಮತ್ತು ಹಿಂದ-ಸ್ಥಾನವು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುವ ತನಕ ನಡೆಯಲೇ ಬೇಕಾಗಿದೆ.

ಸುಲಿಗೆ ನಿಲ್ಲಬೇಕಾದರೆ ಸ್ವಾತಂತ್ರ್ಯ ಬೇಕು.

ಆರ್ಥಿಕ ಗಂಡಾಂತರದ ಕಾಲವು ಈಗ ಪ್ರಾಪ್ತವಾಗಿದೆ. ವರುಷ ವರುಷಕ್ಕೂ ಹಿಂದೂಸ್ಥಾನದ ಹಾಗೂ ಜಗತ್ತಿನ ಆರ್ಥಿಕ ಸ್ಥಿತಿಯು ಕೆಡುತ್ತಾ ಬರುತ್ತಿದೆ. ಇದರಿಂದ ನಮ್ಮ ಎಲ್ಲಾ ವರ್ಗಗಳ ಪರಿಸ್ಥಿತಿಯು ದಿನದಿನಕ್ಕೆ ಹೀನವಾಗುತ್ತಾ ಬಂದಿದೆ. ಈಗಂತೂ ಜಡತನದಿಂದ ಬಳಲಿ ಜೊತ್ತಾದ ಜನರು ಹೆಚ್ಚು ದಾರುಣವಾದ ದಾರಿದ್ರ್ಯ ದಲ್ಲಿ ಸಿಲುಕಿ, ಗತಿಗಾಣದವರಾಗಿ ಒದ್ದಾಡುತ್ತಲಿದ್ದಾರೆ. ಈ ದಾರಿದ್ರ್ಯ ರೋಗವು ಬೆಳೆಯುತ್ತಲೇ ಇರುವುದರಿಂದ, ಇದಕ್ಕೆ ಕೂಡಲೇ ತಕ್ಕ ನಿವಾರಣೋಪಾಯವನ್ನು ಕೈಕೊಳ್ಳಬೇಕಾಗಿದೆ ದಾರಿದ್ರ್ಯವೂ, ನಿರುದ್ಯೋಗವೂ ಬಹಳ ಕಾಲದಿಂದ ನಮ್ಮ ಕೃಷಿಕರ ಮತ್ತು ಮಜೂರರ ಪೌರ್ಭಾಗ್ಯವಾಗಿರುವುದು. ಇಂದು ಅವು ಇತರ ವರ್ಗದವರಾದ ಕಸಬುಗಾರರು, ಅಂಗಡಿಗಾರರು ಮತ್ತು ಮಧ್ಯಮ ವರ್ಗದ ವಿದ್ಯಾವಂತರು ಮೊದಲಾದವರನ್ನೆಲ್ಲಾ ಆಕ್ರಮಿಸತೊಡಗಿವೆ. ನಮ್ಮ ದೇಶದ ಕೋಟಿಗಟ್ಟಲೆ ಜನರಿಗೆ ಸ್ವಾತಂತ್ರ್ಯ ಸಂಪಾದನೆಯು ಅತ್ಯವಶ್ಯವಾದ ಸಮಸ್ಯೆಯಾಗಿದೆ; ಏಕೆಂದರೆ ನಮ್ಮ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಿಡಿಸುವ ಮತ್ತು ನಮ್ಮ ಜನತೆಯ ಮೇಲೆ ನಡೆಯುತ್ತಿರುವ ಸುಲಿಗೆಯನ್ನು ಕೊನೆಗೊಳಿಸುವ ಶಕ್ತಿಯನ್ನು ಸ್ವಾತಂತ್ರ್ಯವೊಂದೇ ನಮಗೆ ಕೊಡಬಲ್ಲದು.

ನಾಗರಿಕ ಹಕ್ಕುಗಳ ಅಪಹರಣ.

ರಾಷ್ಟ್ರೀಯ ಚಳವಳಿಯ ಪ್ರಗತಿಯೂ ಆರ್ಥಿಕ ಗಂಡಾಂತರವೂ ಬೆಳೆಯುತ್ತಾ ಬರಲು ಭಾರತೀಯರ ವಿರುದ್ಧವಾಗಿ ಅತ್ಯುಗ್ರವಾಗಿ ದಬ್ಬಾಳಿಕೆಯೆದ್ದು, ಸಾಮಾನ್ಯವಾದ ನಾಗರಿಕ ಹಕ್ಕುಗಳು ಕೂಡಾ ಸೆಳೆಯಲ್ಪಟ್ಟವು. ಇಷ್ಟರಲ್ಲೇ ತೃಪ್ತವಾಗದೆ, ಬ್ರಿಟಿಷ್ ಸರಕಾರವು ಹಿಂದುಸ್ಥಾನವನ್ನು ಬಿಗಿದಿರುವ ತಮ್ಮ ಪ್ರಭುತ್ವದ ಕಟ್ಟುಗಳನ್ನು ಬಲಪಡಿಸಿ ತಮ್ಮ ಆಧಿಪತ್ಯವನ್ನೂ ಜನತೆಯ ಸುಲಿಗೆಯನ್ನೂ ಶಾಶ್ವತವಾಗಿ ನಡೆಸುವುದಕ್ಕೆ '೧೯೩೫ನೆಯ ಇಸವಿಯ ಇಂಡಿಯಾ ಆಕ್ಟ್'ನ್ನು ಜ್ಯಾರಿಗೆ ತರಲಿದೆ.

ಲಖನೌ ಕಾಂಗ್ರೆಸಿನ ನಿರ್ಧಾರ.

ಜಗತ್ತಿನ ಪರಿಸ್ಥಿತಿಯನ್ನು ಅವಲೋಕಿಸಿದರೆ ಎಲ್ಲಿ ನೋಡಿದರೂ ಪ್ರಬಲವಾದ ಸಂಕಟ ವರಂಪರೆಗಳೇ ಒಂದರ ಮೇಲೊಂದು ಧಾಳಿಯಿಡುತ್ತಿರುವುದು ಕಂಡುಬರುತ್ತದೆ ಪ್ರಪಂಚವೆಲ್ಲೇ ವ್ಯಾಪಿಸಲಿರುವ ಮಹಾಯುದ್ಧದ ಕಾರ್ಮೋಡಗಳು ಮುಸುಕಿನೆ. ಇವೆಲ್ಲವನ್ನೂ ಲಕ್ಷಿಸಿಯೇ, ಲಖನೌ ಕಾಂಗ್ರೆಸ್ಸು ಹಿಂದುಸ್ಥಾನದ ಮತ್ತು ಇಡೀ ಜಗತ್ತಿನ ಈ ಭಯಂಕರ ಸ್ಥಿತಿಯನ್ನು ಹಿಂದೀ ರಾಷ್ಟ್ರದ ಲಕ್ಷ್ಯಕ್ಕೆ ತಂದುಕೊಟ್ಟು, ಸಾಮ್ರಾಜ್ಯನನ್ನು ವಿಸ್ತರಿಸುವ ಉದ್ದೇಶವುಳ್ಳ ಯಾವ ಯೆದ್ದಲ್ಲಿಯೂ ಹಿಂದುಸ್ಥಾನವು ಭಾಗವಹಿಸಲಾರದೆಂದು ಸ್ಪಷ್ಟಗೊಳಿಸಿತಲ್ಲದೆ, ಹಿಂದುಸ್ಥಾನದ ಸ್ವಾತಂತ್ರ್ಯಯುದ್ಧವು ಕೊನೆಯ ತನಕ ಸಾಗಿಸಲ್ಪಡುವುದೆಂಬ ನಿರ್ಧಾರವನ್ನು ಜಗತ್ತಿಗೆ ಸಾರಿತು

ಹೊಸ ರಾಜ್ಯಘಟನೆಯ ತಿರಸ್ಕಾರ.

ಬ್ರಿಟಿಷ್ ಸರಕಾರದವರು '೧೯೩೫ರ ಇಂಡಿಯಾ ಆಕ್ಟ್'ನ ಮೂಲಕ ಒತ್ತಾಯದಿಂದ ಹೊರಿಸಿರುವ ರಾಜ್ಯಘಟನೆಯನ್ನು ಲಖನೌ ಕಾಂಗ್ರೆಸ್ ಸಂಪೂರ್ಣವಾಗಿ ತಿರಸ್ಕರಿಸಿದೆ. ಇಷ್ಟು ಮಾತ್ರವಲ್ಲದೆ, ಪರಕೀಯ ಅಧಿಕಾರಿಗಳಿಂದ ಹೊರಿಸಲಾಗುವ ಹಿಂದೀಯರ ಸ್ವತಂತ್ರಾಧಿಕಾರಿಗಳನ್ನು ಕಡಿಮೆಮಾಡಲೆಳಸುವ, ಹಾಗೂ ತಮ್ಮ ರಾಜಕೀಯ, ಆರ್ಥಿಕ ಭವಿತವ್ಯತೆಯನ್ನು ನಿರ್ಧರಿಸಿಕೊಳ್ಳುವುದಕ್ಕೂ, ಅದಕ್ಕನುಸಾರವಾಗಿ ತಮ್ಮ ಆಕಾಂಕ್ಷೆಯನ್ನು ನೆಡೆಯಿಸುವುದಕ್ಕೂ, ಭಾರತೀಯರಿಗೆ ಅಧಿಕಾರವಿರುವುದೆಂಬುದನ್ನೇ ಅಲ್ಲಗಳೆಯುವ, ಯಾವ ರಾಜ್ಯಘಟನೆಯನ್ನೂ ಹಿಂದುಸ್ಥಾನವು ಸ್ವೀಕರಿಸಲಾರದೆಂದು ಸಾರಿದ. ಹಿಂದುಸ್ಥಾನವು ಒಂದು ಸ್ವತಂತ್ರ ರಾಷ್ಟ್ರವೆಂಬ ತಳಹದಿಯನ್ನನುಸರಿಸಿಯೇ, ಹಿಂದೀ ರಾಜ್ಯಘಟನೆಯ ನಿರ್ಮಾಣವಾಗಬೇಕು; ಮತ್ತು ಹಿಂದೀ ಜನತೆಯ ಸ್ವೇಚ್ಛೆಯಿಂದ ಆರಿಸಲ್ಪಟ್ಟ ಮಂಡಳಿಯಿಂದಲೇ (Constituent Assembly) ಈ ಘಟನೆಯು ನಿರ್ಮಿಸಲ್ಪಡಬೇಕೆಂದು ತನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದೆ. ಜನತೆಯ ಸಾಮರ್ಥ್ಯ ಮತ್ತು ಅದರ ನಿಶ್ಚಯವನ್ನು ಕಾರ್ಯರೂಪಕ್ಕೆ ತರುವ ಶಕ್ತಿಯ ಬೆಳವಣಿಗೆಯ ವಿಷಯಕ್ಕೆ ಕಾಂಗ್ರೆಸ್ ವಿಶೇಷವಾದ ಪ್ರಾಮುಖ್ಯವನ್ನು ಕೊಟ್ಟಿದೆ. ಕಾಂಗ್ರೆಸ್ ಈ ಉದ್ದೇಶಗಳ ಸರಿಪೂರ್ತಿಗಾಗಿ ಶಾಸನ ಮಂಡಲಗಳ ಹೊರಗೆ ತನ್ನ ಚಟುವಟಿಕೆಗಳನ್ನು ನಡಿಸಿರುತ್ತದೆ. ಹೀಗೆ ಜನಸಂಘಟನೆಯನ್ನೂ, ಜನಸೇವೆಯನ್ನೂ ಮಾಡುವುದರಿಂದಲೇ ನಿಜವಾದ ಶಕ್ತಿಯು ಉಂಟಾಗುತ್ತದೆ.

ಚುನಾವಣೆಯ ಹೋರಾಟದ ಉದ್ದೇಶ

ಈ ಧೋರಣ ಮತ್ತು ಉದ್ದೇಶಗಳನ್ನೇ ಮೂಲವಾಗಿಟ್ಟುಕೊಂಡು, ಸದ್ಯದ ಪರಿಸ್ಥಿತಿಯನ್ನು ಲಕ್ಷ್ಯಕ್ಕೆ ತಂದು, ಪರಕೀಯರ ಪ್ರಭುತ್ವವನ್ನೂ, ಸುಲಿಗೆಯನ್ನೂ ಬಲಪಡಿಸುತ್ತಿರುವ ಶಕ್ತಿಯನ್ನು ತಡೆಯುವ ಉದ್ದೇಶದಿಂದ ಕಾಂಗ್ರೆಸು ಪ್ರಾಂತಿಕ ಶಾಸನ ಮಂಡಲಗಳ ಹೋರಾಟಕ್ಕೆ ಇಳಿಯಲು ನಿಶ್ಚೈಸಿಯಿದೆ. ಹೊಸ ಕಾಯಿದೆ ಗನುಸಾರವಾಗಿ ಸ್ಥಾಪಿತವಾಗಲಿರುವ ಶಾಸನ ಸಭೆಗಳಿಗೆ ಕಾಂಗ್ರೆಸ್ ಸದಸ್ಯರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸುವುದು ಈ ಕಾಯಿದೆಯೊಂದಿಗೆ ಯಾವ ರೀತಿಯಲ್ಲಿಯೂ ಸಹಕರಿಸುವ ಉದ್ದೇಶದಿಂದಾಗಿರದೆ ಅದನ್ನು ನಿರೋಧಿಸಿ, ಮಣ್ಣುಗೂಡಿಸುವ ಶಕ್ತಿಗಾಗಿಯೇ ಇದೆ. ಹೊಸ ಕಾಯಿದೆಯನ್ನು ತಿರಸ್ಕರಿಸಬೇಕೆಂದು ನಿಶ್ಚೈಸಿದ ಕಾಂಗ್ರೆಸಿನ ಧೋರಣೆಯನ್ನು ಶಾಶ್ವತವಾದಷ್ಟು ಮಟ್ಟಿಗೆ ನಾಥಿಸುವುದೂ, ಹಾಗೂ ಸ್ವಾರ್ಥಬಲಿದಾನೆಯಿಂದ ಹಿಂದೀ ಜನರ ಸುಲಿಗೆಯನ್ನು ಬಲವಡಿಸುವುದಕ್ಕಾಗಿ ಹೆಣಗಾಡುತ್ತಿರುವ ಬ್ರಿಟಿಷ್ ಸಾಮ್ರಾಜ್ಯತ್ವವನ್ನು ಪ್ರತಿಭಟಿಸುವುದೂ, ಅದರ ಸುಲಿಗೆಯಿಂದ ಭಾರತೀಯರನ್ನು ವಾರುಮಾಡುವುದೂ, ಈ ಉಪಕ್ರಮದ ಉದ್ದೇಶಗಳಾಗಿವೆ. ಕಾಂಗ್ರೆಸಿನ ಉದ್ದೇಶಗಳಿಗನುಸಾರವಾಗಿ ನೋಡುವುದಾದರೆ, ಕಾನೂನು ಮಂಡಲಗಳ ಚಟುವಟಿಕೆಗಳು ಸ್ವಾತಂತ್ರ್ಯಕ್ಕೆ ಅವಶ್ಯವಾಗಿರುವ ಜನರ ಇಚ್ಛಾಶಕ್ತಿಯನ್ನು ಬೆಳೆಸಲು ಮತ್ತು ಕ್ರಿಯಾಶಕ್ತಿಯನ್ನು ಬಲಪಡಿಸಲು-ಜೀವಪಣ್ಣಿಲ್ಲಿ ಸೆಣೆಯುವ ಎಲ್ಲಾ ಕಾರ್ಯಗಳಿಗೆ ಪೂರ್ಣ ಸಹಕಾರಿಯಾಗಿರಬೇಕು.

ಹೊಸ ಶಾಸನ ಮಂಡಲಗಳ ಅಸಮರ್ಥತೆ

ಹೊಸ ಶಾಸನಮಂಡಲಗಳು ಬ್ರಿಟಿಷ್ ಮತ್ತು ಇತರ ಸ್ವಾರ್ಥಸಾಧಕರ ಸಂಘಟನೆಯ ಸಲುವಾಗಿ ಏರ್ಪಡಿಸಿವ ಭದ್ರತೆ, ಮತ್ತು ವಿಶೇಷಾಧಿಕಾರಗಳಿಂದ ಸುತ್ತುಗಟ್ಟಲ್ಪಟ್ಟವುಗಳಾಗಿರುವ ಕಾರಣ, ಆವುಗಳಿಂದ ನಮ್ಮ ದೇಶಕ್ಕೆ ನಿಜವಾದ ಹಿತವಾಗಲಾರದು. ಮತ್ತು ನಮ್ಮ ಪ್ರಾಮುಖ್ಯ ಪ್ರಶ್ನೆಗಳಾದ ದಾರಿದ್ರ್ಯ ಮತ್ತು ನಿರುದ್ಯೋಗವನ್ನು ನಿವಾರಿಸಲು ಅವು ಪೂರಾ ಅಸಮರ್ಥವಾಗಿರುವವು. ಅದರೆ ಬ್ರಿಟಿಷ್ ಸರಕಾರದವರು ತಮ್ಮ ಸ್ವಂತ ಲಾಭಕ್ಕೆ ಉಪಯೋಗವಾಗುವಂತೆಯೂ, ಆ ಮೂಲಕ ಹಿಂದುಸ್ಥಾನದ ಜನರಿಗೆ ಹಾನಿಯಾಗುವಂತೆಯೂ, ಇವುಗಳನ್ನು ಉಪಯೋಗಿಸಬಹುದು. ಕಾಂಗ್ರೆಸ್ ಪ್ರತಿನಿಧಿಗಳು ಇದನ್ನು ವಿರೋಧಿಸಿ, ಭಾರತೀಯರಿಗೆ ಹಾನಿಕರವಾಗಿರುವ ಹಾಗೂ ಅವರ ಸ್ವಾತಂತ್ರ್ಯದ ಇಚ್ಛೆಯನ್ನು ಸದೆಬಡಿಯಲೆಳಸುವ ವಿವಿಧ ಕಾಯಿದೆ, ಆರ್ಡಿನನ್ಸು ಮತ್ತು ರೆಗ್ಯುಲೇಶನುಗಳನ್ನು ನಿರ್ನಾಮಗೊಳಿಸಲು ಸಾಧ್ಯವಿರುವ ಸರ್ವ ಉಪಾಯಗಳನ್ನು ಕೈಕೊಳ್ಳುವರು. ಅದಲ್ಲದೆ ಅವರು ನಾಗರಿಕ ಸ್ವಾತಂತ್ರ್ಯದ ಪ್ರತಿಷ್ಠಾವನೆ, ರಾಜಕೀಯ ಕೈದಿಗಳ ಹಾಗೂ ಬಂದಿಗಳ ಬಿಡುಗಡೆ, ರಾಷ್ಟ್ರೀಯ ಹೋರಾಟದಲ್ಲಿ ರೈತರಿಗೂ, ಸಾರ್ವಜನಿಕ ಸಂಸ್ಥೆಗಳಿಗೂ

ESTD 1906

CANARA BANK,

LIMITED

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Buntwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 75,00,000

ಆಗಿರುವ ಅನ್ಯಾಯಗಳ ಪರಿಮಾರ್ಜನೆ,—ಇವುಗಳಿಗಾಗಿ ಹೋರಾಡುವರು.

ಶಾಸನ ಮಂಡಲದಿಂದ ಸ್ವಾತಂತ್ರ್ಯ ಸಿಗುವುದಿಲ್ಲ.

ಈ ಕಾಯಿದೆ ಮಂಡಲಗಳಿಂದ ಸ್ವಾತಂತ್ರ್ಯ ಸಿಗುವುದಿಲ್ಲವೆಂದು ಕಾಂಗ್ರೆಸ್ ಮನಗಂಡಿದೆ; ಹಾಗೆಯೇ ದೇಶದ ಬಡತನ ಹಾಗೂ, ನಿರುದ್ಯೋಗದ ಸಮಸ್ಯೆಗಳನ್ನು ಇವುಗಳಿಂದ ಪರಿಣಾಮಕಾರಿಯಾಗಿ ಬಿಡಿಸಲಾಗುವುದಿಲ್ಲವೆಂದೂ ಕಾಂಗ್ರೆಸಿಗೆ ಗೊತ್ತಿದೆ. ಕಾಂಗ್ರೆಸಿನ ಗುರಿಯು ಏನಿರುವುದೆಂಬುದು ಜನರಿಗೆ ಗೊತ್ತಾಗಿ, ತನ್ನ ಕೈಗೆ ಅಧಿಕಾರವು ಬಂದಾಗ ಆದು ಏನು ಮಾಡಲು ಪ್ರಯತ್ನಿಸುವುದು ಎಂಬುದನ್ನು ಜನರಿಗೆ ತಿಳಿಸುವುದನ್ನೇ ಮುಖ್ಯ ಉದ್ದೇಶವಾಗಿಟ್ಟುಕೊಂಡು ಕಾಂಗ್ರೆಸ್ ತನ್ನ ಸರ್ವಸಾಧಾರಣ ಕಾರ್ಯಕ್ರಮವನ್ನು ಹಿಂದುಸ್ತಾನದ ಜನರ ಮುಂದಿರಿಸುತ್ತದೆ.

ಕರಾಚಿ ಮೂಲಭೂತ ಹಕ್ಕಿನ ಉದ್ದೇಶ

1931ರಲ್ಲಿ ಕರಾಚಿಯಲ್ಲಿ ಕೂಡಿದ ಕಾಂಗ್ರೆಸ್ ಅಧಿವೇಶನದಲ್ಲಿ ಕಾಂಗ್ರೆಸಿನ ಸರ್ವಸಾಧಾರಣ ಉದ್ದೇಶವು ಮೂಲಭೂತ ಹಕ್ಕುಗಳ ನಿರ್ಣಯದಲ್ಲಿ ಸ್ಪಷ್ಟಮಾಡಲಾಗಿದೆ. ಕಾಂಗ್ರೆಸ್ ಈಗಲಾದರೂ ಆ ನಿರ್ಣಯವನ್ನು ಆಗಿನಂತೆಯೇ ಸ್ಥಿರವಾಗಿಟ್ಟುಕೊಂಡಿದೆ. ಆದರೆ ಕಳೆದ ೬ ವರ್ಷಗಳಲ್ಲಿ ಬೆಳೆಯುತ್ತಾ ಬಂದಿರುವ ಕಠಿಣ ಪರಿಸ್ಥಿತಿಯ ಮೂಲಕ ಬಡತನ, ನಿರುದ್ಯೋಗ ಮತ್ತು ಇತರ ಆರ್ಥಿಕ ಸಮಸ್ಯೆಗಳ ವಿಷಯವಾಗಿ ಹೆಚ್ಚಿಗೆ ವಿಚಾರಮಾಡುವ ಪ್ರಸಂಗವೊದಗಿರುವ ಸಂಗತಿಯನ್ನು ಲಕ್ಷ್ಯಕ್ಕೆ ತಂದು ಈ ಮುಂದಿನ ಮಾತನ್ನು ಒತ್ತಿ ಸಾರಿದೆ; "ದೇಶದ ಮುಂದಿರುವ ಅತ್ಯಂತ ಮಹತ್ವದ ಪ್ರಶ್ನೆಯೆಂದರೆ ಭಯಂಕರ ಬಡತನ, ನಿರುದ್ಯೋಗ ಮತ್ತು ರೈತರ ಸಾಲ ಇವುಗಳಿಗೆ ಸಂಬಂಧಿಸಿದ್ದಾಗಿದೆ. ರೈತರ ಈ ಕಠಿಣ ಪರಿಸ್ಥಿತಿಯು, ಮುಖ್ಯತಃ ಹೊರಲಸದಳವಾದ ಕಠೋರ ಗೇಣಿ ಮತ್ತು ಭೂಕಂದಾಯ ಪದ್ಧತಿಯಿಂದಲೂ ಆಗಿರುತ್ತದೆ, ಇದು ಇತ್ತೀಚೆಗೆ ಭೂಮಿಯ ಹುಟ್ಟುವಳಿಯ ಧಾರಣೆಯು ಇಳಿದು ಹೋದುದರಿಂದ ಮತ್ತಷ್ಟು ತೀಚಣೀಯ ಪರಿಸ್ಥಿತಿಗೆ ಬಂದಿದೆ" ಆದುದರಿಂದ ಈ ಕಾಂಗ್ರೆಸು ಎಲ್ಲಾ ಪ್ರಾಂತಿಕ ಕಾಂಗ್ರೆಸು ಕಮಿಟಿಗಳಿಗೆ ರೈತರ ಪರಿಸ್ಥಿತಿಯ ಪೂರ್ಣ ಕಾರ್ಯಕ್ರಮವನ್ನು ಸಂಗ್ರಹಿಸಲು ಕೇಳಿರುತ್ತದೆ. ಈ ಪ್ರಾಂತಿಕ ಕಾರ್ಯಕ್ರಮಗಳ ಆಧಾರದ ಮೇಲೆ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯವರು ಸಿದ್ಧಪಡಿಸಲಿರುವ ರೈತರ ಸಂಬಂಧದ ಕಾರ್ಯಕ್ರಮವು ಮುಂದೆ ಪ್ರಕಟಿಸಲ್ಪಡುವದು.

ರೈತರ ಸಾಲ

ರೈತರ ಸಂಬಂಧದ ಸಂಪೂರ್ಣ ಕಾರ್ಯಕ್ರಮವು ನಿಶ್ಚಿತವಾಗುವ ವರೆಗೆ ಕಾಂಗ್ರೆಸ್ಸು ಕರಾಚಿಯಲ್ಲಿ ನಿರ್ಣಯಿಸಿರುವುದನ್ನೇ ಪುನಃ ವ್ಯಥಪಡಿಸುತ್ತದೆ. ಅವುಗ ಳಾವುವೆಂದರೆ— ಭೂಕಂದಾಯ ಪದ್ಧತಿಯನ್ನು ಸುಧಾರಣೆಮಾಡುವುದು, ಒಕ್ಕಲಿಗರ ಮೇಲೆ ಹೇರಿರುವ ಹೊರೆಯನ್ನು ಸರಿಸಮಾನಗೊಳಿಸುವುದು, ಸಣ್ಣ ಸುಟ್ಟ ರೈತರಿಗೆ ಅವರು ಈಗ ಕೊಡುತ್ತಿರುವ ತೀರ್ವೆಯಲ್ಲಿ ಹೆಚ್ಚಿನಂಶವನ್ನು ಕಡಿಮೆಮಾಡುವುದರ ಮೂಲಕ ತೀಕ್ಷ್ಣ ಸಹಾಯವನ್ನೀಯುವುದು ಮತ್ತು ಅಲ್ಪ ಸ್ವಲ್ಪ ಫಲವನ್ನೀಯುವ ಭೂಮಿಗಳ ಮೇಲೆ ಗೇಣಿ ಮತ್ತು ಕಂದಾಯವನ್ನು ವಸೂಲುಮಾಡಬಾರದೆಂದು ವಿಧಿಸುವುದು, ತೀಕ್ಷ್ಣಯೋಜನಾರ್ಹವಾದ ಇನ್ನೊಂದು ಮಹತ್ವದ ಪ್ರಶ್ನೆಯೆಂದರೆ— ರೈತರ ಸಾಲ ಮತ್ತು ಇದರ ನಿವಾರಣೆಗಾಗಿ ಸಾಲವನ್ನು ಶಾಪತಿ ಮಾಡಲು ಸುಲಭಸಾಧ್ಯವಾದ ಒಂದು ವಿಧಿಯನ್ನು ನಿರ್ಣಯಿಸುವುದು, ಸಾಲವನ್ನು ಕಡಿಮೆಮಾಡಲು ವಿಚಾರ ನಡೆಸುವುದು, ಸರಕಾರವು ಸುಲಭ ಬಡ್ಡಿಯಲ್ಲಿ ಇವರಿಗೆ ಹಣವನ್ನು ಒದಗಿಸಿಕೊಡುವದು— ಇವೇ ಮೊದಲಾದುವುಗಳನ್ನೊಳಗೊಂಡ ಒಂದು ಯೋಜನೆಯನ್ನು ಕೂಡಲೆ ತಯಾರಿಸುವುದು. ಈ ಸಹಾಯವು ಗೇಣಿ ವಕ್ಕಲುಗಳಿಗೂ, ವರ್ಗದಾರರಿಗೂ ಸಣ್ಣ ಪುಟ್ಟ ಭೂಮ್ಯಾಧಿಕರಿಗೂ ಮತ್ತು ಚಿಕ್ಕ ವ್ಯಾಪಾರಸ್ಥರಿಗೂ ಅನ್ವಯಿಸಬೇಕು.

ಕೂಲಿಕಾರರ ಪ್ರಶ್ನೆ

ಔದ್ಯೋಗಿಕ ಕೆಲಸಗಾರರ ಸಂಬಂಧದಲ್ಲಿ ಕಾಂಗ್ರೆಸ್ಸಿನ ಧೋರಣವು ಅವರಿಗೆ ಕಾಲಕ್ಕೆ ತಕ್ಕ, ಯೋಗ್ಯ ಜೀವನದ ಸ್ಥಿತಿಯನ್ನೊದಗಿಸಿ ಕೊಡುವುದು, ಕೆಲಸದ ಅವಧಿಯನ್ನು ಗೊತ್ತುಪಡಿಸುವುದು, ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಅಂತಾರಾಷ್ಟ್ರೀಯ ಸ್ಥಿತಿಗನುಸಾರವಾಗಿ ಕರಾರುಗಳಲ್ಲಿ ಯೋಗ್ಯ ಬದಲಾವಣೆ ಮಾಡುವುದು, ಧನಿ—ಕೂಲಿಗಾರರೊಳಗಿನ ಕಲಹಗಳನ್ನು ನಿವಾರಿಸಲು ಯೋಗ್ಯವಾದ ಸಾಧನಗಳನ್ನು ಕಲ್ಪಿಸುವುದು, ಬೇನೆ, ವೃದ್ಧಾಪ್ಯ ಮತ್ತು ನಿರುದ್ಯೋಗದ ಕಾಲಕ್ಕೆ ಆರ್ಥಿಕ ಸಂರಕ್ಷಣೆಯನ್ನು ಕೊಡುವುದು ಮತ್ತು ತಮ್ಮ ಹಿತರಕ್ಷಣೆಗಾಗಿ ಮುಷ್ಕರವನ್ನು ಹೂಡುವುದು ಅವರ ಅಧಿಕಾರವೆಂದು ಗೊತ್ತುಮಾಡುವುದು, ಇವೇ ಮೊದಲುದುವುಗಳಾಗಿವೆ.

ಸ್ತ್ರೀಯರಿಗೆ ಸಮಾನ ಹಕ್ಕು

ಸ್ತ್ರೀಯರ ವಿಷಯದಲ್ಲಿರುವ ವೈಷಮ್ಯಗಳನ್ನು, ಅವು ಕಾಯಿದೆ ಬದ್ಧವಿರಲಿ, ಇಲ್ಲವೆ ಸಾಮಾಜಿಕವಾಗಿರಲಿ, ಅಥವಾ ಸಾರ್ವಜನಿಕ ಚಳುವಟಿಕೆಗಳಲ್ಲಿ ಎಲ್ಲಿಯೇ ಕಂಡುಬರುತ್ತಿರಲಿ ಅವುಗಳನ್ನು ದೂರಮಾಡುವುದೇ ಕಾಂಗ್ರೆಸಿನ ಧೋರಣವಿದೆಯೆಂದು ಈ ಮೊದಲೇ ಸ್ಪಷ್ಟವಾಗಿ ಸಾರಲ್ಪಟ್ಟಿದೆ. ಸ್ತ್ರೀಕೆಲಸಗಾರರಿಗೆ ಹೆರಿಗೆ ಸೌಕರ್ಯ ಮತ್ತು ಸಂರಕ್ಷಣೆಯನ್ನು ಒದಗಿಸಿಕೊಡಲು ಕಾಂಗ್ರೆಸ್ ಅನುಕೂಲಾಭಿಪ್ರಾಯವನ್ನು ವ್ಯಕ್ತಗೊಳಿಸಿದೆ. ಹಿಂದುಸ್ಥಾನದ ಸ್ತ್ರೀಯರು ಸ್ವಾತಂತ್ರ್ಯದ ಹೋರಾಟದಲ್ಲಿ ಈಗಾಗಲೇ ಪ್ರಮುಖಭಾಗವನ್ನು ವಹಿಸಿರುವರು ಮತ್ತು ಇನ್ನು ಮುಂದೆ ಸ್ವತಂತ್ರ ಹಿಂದುಸ್ಥಾನದಲ್ಲಿ ಅವರು ಪುರುಷರೊಂದಿಗೆ ಸರಿಸಮಾನವಾದ ಹಕ್ಕು ಬಾಧ್ಯತೆಗಳನ್ನು ಉಪಯೋಗಿಸುವರೆಂದು ಕಾಂಗ್ರೆಸ್ ಉಪೇಕ್ಷಿಸುತ್ತದೆ.

ಅಸ್ಪೃಶ್ಯತಾ ನಿವಾರಣೆ.

ಅಸ್ಪೃಶ್ಯತಾ ನಿವಾರಣೆ ಮತ್ತು ಹರಿಜನ ಹಾಗೂ ಹಿಂದುಳಿದ ವರ್ಗದವರ ಸಾಮಾಜಿಕ, ಆರ್ಥಿಕ ಉದ್ಧಾರದ ಬಗ್ಗೆ ಕಾಂಗ್ರೆಸು ಪದೇ ಪದೇ ಒತ್ತಿ ಹೇಳುತ್ತಾ ಬಂದಿರುವ ಮಾತು ಸರ್ವರಿಗೂ ತಿಳಿದಿರುವ ವಿಚಾರವಾಗಿದೆ. ಅವರು ಕೂಡಾ ಇನ್ನಿತರ ನಾಗರಿಕರಂತೆ ಸಮಾಜದ ಸಾರ್ವಜನಿಕ ವಿಚಾರಗಳಲ್ಲಿ ಸಮಾನ ಹಕ್ಕುಳ್ಳವರಾಗಿರಬೇಕೆಂದು ಅಭಿಪ್ರಾಯಪಡುತ್ತದೆ.

ಖಾದಿ ಮತ್ತು ಇತರ ಉದ್ಯೋಗಗಳು.

ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಉತ್ತೇಜನ ಕೊಡುವುದು ಬಹುಕಾಲದಿಂದ ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿಯ ಪ್ರಾಮುಖ್ಯವಾದೊಂದು ಭಾಗವಾಗಿದೆ. ದೊಡ್ಡ ಉದ್ಯೋಗಗಳಿಗೆ ಸಂರಕ್ಷಣೆಯನ್ನು ಕೊಡಬೇಕಾಗಿದ್ದರೂ, ಕೆಲಸಗಾರರ ಮತ್ತು ಕಚ್ಚಾ ಪದಾರ್ಥಗಳ ನಿರ್ಮಾಣಕರ ಹಕ್ಕುಗಳು ಸಂರಕ್ಷಿಸಲ್ಪಡತಕ್ಕದ್ದು ಅಲ್ಲದೆ ಗ್ರಾಮೋದ್ಯೋಗಗಳ ಕಡೆಗೆ ಹೆಚ್ಚಿನ ದೃಷ್ಟಿಯನ್ನಿಡತಕ್ಕದ್ದು.

ರಾಜಕೀಯ ಕೈದಿಗಳ ಪ್ರಶ್ನೆ.

ಹಿಂದುಸ್ಥಾನದ ಜೈಲುಗಳಲ್ಲಿ ರಾಜಕೀಯ ಕೈದಿಗಳನ್ನು ಯಾವ ರೀತಿಯಲ್ಲಿ ನಡೆಸುತ್ತಿರುವರೆಂಬ ಅಪವಾದವು ಎಂದಿನಿಂದಲೂ ಇದ್ದೇ ಇದೆ. ಈ ತರದ ಅಮಾನುಷೀ ಕ್ರಮವನ್ನು ಸುಧಾರಿಸುವುದಕ್ಕೆ ಸರ್ವ ಪ್ರಯತ್ನಗಳನ್ನೂ ಮಾಡಲಾಗುವುದು. ಹಾಗೆಯೇ ಪ್ರತಿಯೊಬ್ಬ ಕೈದಿಯೂ ದಯಾವೃಷ್ಟಿಯಿಂದಲೂ ವಿವೇಕದಿಂದಲೂ ನಡೆಸಿಕೊಳ್ಳಲ್ಪಡುವಂತೆ ಜೈಲ್ ಇಲಾಖೆಯ ಕಾರಭಾರವನ್ನು ಸಂಪೂರ್ಣ ಬದಲು ಮಾಡುವುದು ಅವಶ್ಯವಿದೆ.

× × × × × ×

ಮಂತ್ರಿಪದ ಸ್ವೀಕಾರದ ಪ್ರಶ್ನೆ.

ಹೊಸ ಕಾಯಿದೆ ಮಂಡಲಗಳಲ್ಲಿ ಮಂತ್ರಿ ಪದವಿಯನ್ನು ಸ್ವೀಕರಿಸಬೇಕೋ ಬೇಡವೋ, ಎಂಬ ಪ್ರಶ್ನೆಯ ನಿರ್ಣಯವು ಲಖನೌ ಕಾಂಗ್ರೆಸಿನಿಂದ ಮುಂದುವರಿಸಲ್ಪಟ್ಟಿತು. ಈ ಪ್ರಶ್ನೆಯ ನಿರ್ಣಯವು ಚುನಾವಣೆಯ ನಂತರವೇ ಆಗುವುದು ಉತ್ತಮವೆಂಬ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಭಿಪ್ರಾಯವಾಗಿದೆ. ಈ ಪ್ರಶ್ನೆಯ ಬಗ್ಗೆ ಯಾವುದೇ ನಿರ್ಣಯವು ಮಾಡಲ್ಪಟ್ಟರೂ, ಹೊಸ ಕಾಯಿದೆಯನ್ನು ತಿರಸ್ಕರಿಸುವುದು, ಮತ್ತು ಅದರೊಡನೆ ಸಹಕರಿಸದಿರುವುದೇ ಕಾಂಗ್ರೆಸಿನ ನಿಶ್ಚಿತ ಅಭಿಪ್ರಾಯವಾಗಿದೆ. ಈ ಉದ್ದೇಶವನ್ನು ಲಕ್ಷ್ಯದಲ್ಲಿಟ್ಟುಕೊಂಡು, ಯೋಜನೆಯ ಸಂಯುಕ್ತ ಭಾಗವು ಅಮಲಿನಲ್ಲಿ ಬಾರದಂತೆ ಪ್ರತಿಯೊಂದು ವಿಧದ ಪ್ರಯತ್ನಗಳು ಮಾಡಲ್ಪಡುವುವು. ಏಕೆಂದರೆ, ಅದು ಇಡೀ ದೇಶದ ಮೇಲೆ ಸಾಮ್ರಾಜ್ಯ ಪ್ರಭುತ್ವ ಮತ್ತು ಸಂಸ್ಥಾನಗಳ ದ್ವಿವಿಧ ಹಿತಸಂಬಂಧಗಳ ಆಳ್ವಿಕೆಯನ್ನು ಸ್ಥಾಪಿಸಿ, ದೇಶದ ಸ್ವಾತಂತ್ರ್ಯದ ಪ್ರಗತಿಯನ್ನು ಹಿಮ್ಮೆಟ್ಟಿಸಲು ಮಾಡಲ್ಪಟ್ಟಿರುವುದು. ಈ ಭಾವೀ ಸಂಯುಕ್ತ ಮಧ್ಯಸರ್ತಿ ಕಾಯಿದೆ ಮಂಡಲಗಳ ಮತದಾರರೆಂದರೆ ಈ ಹೊಸ ಪ್ರಾಂತಿಕ ಎಸೆಂಬ್ಲಿಗಳೇ ಇರುವುವು; ಮತ್ತು ಈ ಪ್ರಾಂತಿಕ ಕಾಯಿದೆ ಮಂಡಲಗಳ ರಚನೆಯ ಮೇಲೆಯೇ ಸಂಯುಕ್ತ ಘಟನೆಯ ಭವಿತವ್ಯವು ಅವಲಂಬಿಸಿರುತ್ತದೆ.

ಜನತೆಯಲ್ಲಿ ಜಿನ್ನೆಹ.

ಭಾವೀ ಚುನಾವಣೆಗಳಲ್ಲಿ ಕಾಂಗ್ರೆಸಿಗೆ ಪ್ರತಿಯೊಂದು ಬಗೆಯಿಂದಲೂ ಬೆಂಬಲವನ್ನೀಯಬೇಕೆಂದು ನಾವು ಈ ಮೂಲಕ ರಾಷ್ಟ್ರಕ್ಕೆ ವಿನಂತಿ ಮಾಡಿಕೊಳ್ಳುತ್ತೇವೆ. ರಾಷ್ಟ್ರದ ಕಲ್ಯಾಣವಾಗಬೇಕಾದರೆ ಕಾಂಗ್ರೆಸಿಗೆ ಬೆಂಬಲವನ್ನು ಕೊಡಬೇಕಾಗಿದೆ. ಕಾಂಗ್ರೆಸಿನ ಹೋರಾಟವು ಮುಂದೆ ಸಾಗಬೇಕಾದರೆ ಕಾಂಗ್ರೆಸಿಗೆ ಮತವನ್ನು ಕೊಡಬೇಕು. ಕಾಯಿದೆ ಮಂಡಲಗಳಲ್ಲಿ ಕಾಂಗ್ರೆಸಿನವರು ಮಾಡುವ ಕಾರ್ಯಗಳು ಪರಿಣಾಮಕಾರಿಯಾಗಬೇಕಾದರೆ ಅದು ಅವರ ಸಂಖ್ಯೆ, ಶಿಸ್ತು, ಹಾಗೂ ರಾಷ್ಟ್ರವು ಅವರಿಗೆ ಕೊಡುವ ಬೆಂಬಲ ಮತ್ತು ಸಹಾಯ ಇವೆಲ್ಲವುಗಳ ಮೇಲೆ ಹೊಂದಿಕೊಂಡಿದೆ ಅವರು ಬಹು ಸಂಖ್ಯಾಕರಾಗಿ ಆರಿಸಲ್ಪಟ್ಟರೆ, ಹೊಸ ಕಾಯಿದೆಯನ್ನು ಎದುರಿಸಿ, ಸ್ವಾತಂತ್ರ್ಯದ ಹೋರಾಟಕ್ಕೆ ಪರಿಣಾಮಕರ ರೀತಿಯಲ್ಲಿ ಸಹಾಯ ಮಾಡಲು ಅವರಿಗೆ ಶಕ್ಯವಾಗುವುದು. ಕಾಂಗ್ರೆಸ್ ಸಂಸ್ಥೆಯಿಂದ ದೂರ ನಿಂತಿರುವ ಪ್ರತಿಯೊಂದು ಪಕ್ಷವೆ, ತಿಳಿದಾಗಲೀ, ತಿಳಿಯದಾಗಲೀ ರಾಷ್ಟ್ರದ ಶಕ್ತಿಯನ್ನು ಕುಗ್ಗಿಸುವ ಮತ್ತು ವೈರಿಗಳ ಶಕ್ತಿಯನ್ನು ಹೆಚ್ಚಿಸುವ ಸಾಧನವಾಗಿ ಪರಿಣಮಿಸುತ್ತದೆ.

ಸ್ವಾತಂತ್ರ್ಯದ ಹೋರಾಟಕ್ಕೆ ಸಂಘಟಿತ ಪ್ರಯತ್ನವು ಅವಶ್ಯವಿದೆ. ಹಿಂದೀ ರಾಷ್ಟ್ರದ ಬಂಧನವನ್ನು ಮುರಿದು, ತನ್ಮೂಲಕ ಜನತೆಯ ಸುಲಿಗೆಯನ್ನು ತಡೆದು, ಜನ ಸಮೂಹದ ಅಭ್ಯುದಯದ ಮೇಲೆ ನೆಲೆ ನಿಂತಿರುವ, ಸಮೃದ್ಧವಾದ ರಾಷ್ಟ್ರವನ್ನು ಸ್ಥಾಪಿಸುವ ಪ್ರಬಲೇಚ್ಛೆಯಿಂದ ಒಟ್ಟುಗೂಡಿರುವ, ಎಲ್ಲಾ ಜಾತಿಮತಗಳಿಂದೊಡಗೂಡಿರುವ ಸಂಯುಕ್ತ ರಾಷ್ಟ್ರೀಯ ಶಕ್ತಿಯನ್ನು ಕಾಂಗ್ರೆಸು ಒಮ್ಮೊಗವಾಗಿ ಒಪ್ಪಿಸುತ್ತದೆ.

ನಮ್ಮ ಮುಂದಿರುವ ಧ್ಯೇಯವು ಮಹತ್ವವಾದುದೂ, ಉತ್ಸಾಹಭರಿತವಾದುದೂ ಆಗಿರುತ್ತದೆ. ಯಾವ ಮಹತ್ವವೂ, ಸ್ಫೂರ್ತಿದಾಯಕವೂ ಆದ ಧ್ಯೇಯಕ್ಕಾಗಿ ಹಿಂದೀ ರಾಷ್ಟ್ರದ ಎಷ್ಟೋ ಸ್ತ್ರೀಪುರುಷರು ಕಾಂಗ್ರೆಸಿನ ಧ್ವಜದಡಿಯಲ್ಲಿ ಕಷ್ಟನಷ್ಟಗಳನ್ನನುಭವಿಸಿ, ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿರುವರೋ, ಯಾವ ಧ್ಯೇಯಕ್ಕಾಗಿ ಇಂದು ನಮ್ಮ ನಾಡಿನ ಸಾವಿರಾರು ಬಾಂಧವರು ನಿಶ್ಶಬ್ದವಾಗಿ, ಧೀರ ಸಹಿಷ್ಣುತೆಯಿಂದ ಸಂಕಟ ಪಡುತ್ತಿರುವರೋ, ಅಂತಹ ಧ್ಯೇಯವನ್ನು ನಮ್ಮ ಮುಂದಿಟ್ಟುಕೊಂಡು, ಪರಿಪೂರ್ಣ ಆಶೆ ಮತ್ತು ಭರವಸೆಗಳಿಂದ ನಮ್ಮ ಬಾಂಧವರನ್ನು ಕಾಂಗ್ರೆಸು, ರಾಷ್ಟ್ರದ, ಮತ್ತು ಸ್ವಾತಂತ್ರ್ಯದ ಸಲುವಾಗಿ, ಮುಂದೊತ್ತಿ ಬರಬೇಕಾಗಿ ಕರೆಯುತ್ತದೆ.

ಕರ್ನಾಟಕ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡು, ಧಾರವಾಡ.

ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭಾ.

ಇದೇ ತಿಂಗಳ ತಾ. 15ಕ್ಕೆ ಬೆಂಗಳೂರು ನ್ಯಾಷನಲ್ ಹೈಸ್ಕೂಲಿನಲ್ಲಿ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಮಹಾ ಅಧಿವೇಶನವು ಜರಗಿತು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಸುಮಾರು 60 ಮಂದಿ ಸದಸ್ಯರು ಬಂದಿದ್ದರು. ಸಭೆಗೆ ಇಪ್ಪತ್ತರವರೆಗೆ ನಡೆದು ಬಂದ ಹೆಸರನ್ನು ಬದಲಾಯಿಸಿ ಮೇಲ್ಕಂಡ ಹೆಸರನ್ನು ಇದಲಾಯಿತು ಸಭೆಯ ಕಾರ್ಯಕಲಾಪಗಳನ್ನು ಇನ್ನೂ ವಿಶೇಷತೀಯಿಂದ ಮುಂದುವರಿಸಬೇಕು. ಮತ್ತು ಭವಿಷ್ಯದಿಂದ ಮೈಸೂರು ಸರಕಾರದಿಂದ ಆರ್ಥಿಕ ಸಹಾಯವನ್ನು ಪಡೆಯುವುದಕ್ಕಾಗಿ ಸದ್ಯದಲ್ಲೇ ಒಂದು ಶಿಷ್ಟ ಮಂಡಲವನ್ನು ಸಂಘಟಿಸಬೇಕು ಎಂದು ಮೊದಲಾದ ಅನೇಕ ಠರಾವುಗಳು ಅಂಗೀಕರಿಸಲ್ಪಟ್ಟವು. ನೂತನ ಕಾರ್ಯಕಾರಿಣೀ ಸಮಿತಿಯ ಪ್ರಥಮ ಅಧಿವೇಶನವು ತಾ. 21ಕ್ಕೆ ಜರಗಿ ಕೆಳಗೆ ಕಂಡವರು ಮುಂದಿನ ವರ್ಷದ ಕಾರ್ಯಾಧಿಕಾರಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ:-

ರಾಗೆ ಸರ್. ಕೆ ಪಿ. ಪುಟ್ಟಣ್ಣ ಚೆಟ್ಟಿ, ಕೆ ಸಿ. ಐ. ಇ. ಗೌರವ ಅಧ್ಯಕ್ಷರು. (೭) ರಾವ್ ಬಹ

(ಪುಟ ೧೨ಕ್ಕೆ ಹೋಗಿದೆ.)

ಮಂಗಳೂರು.

(ನಮ್ಮ ಸ್ವಂತ ಖಾತ್ರಿದಾರರಿಂದ)

ತಾ ೨೦-೧೧-೩೬.

ಫೈಜಪುರ ಕಾಂಗ್ರೆಸಿಗೆ ಪ್ರತಿನಿಧಿಗಳು

ಹಿಂದೆ ತಿಳಿಸಿದಂತೆ ಕಾಂಗ್ರೆಸಿಗೆ ಪ್ರತಿನಿಧಿಗಳಾಗಿ ಹೋಗಲು ತುಂಬಾ ಮಂದಿ ಉಮೇದ್ವಾರರಿದ್ದು ಬಹಳ ಸ್ಪರ್ಧೆಯಿದ್ದು ಚುನಾವಣೆಯಾಗುವ ಸಂಭವ ವಿದೆಯೆಂದ ಹಿಂದೆಯೇ ತಿಳಿಸಿದ್ದೇನಷ್ಟೆ ಮಂಗಳೂರಿನ ಪ್ರಸಿದ್ಧ ಕಾಂಗ್ರೆಸ್ ದುರೀಣರಾದ ಬಾಳ್ಕರ್ ವಿಟ್ಠಲ ಶೆಟ್ಟಿಯವರ ಮಧ್ಯಸ್ಥಿಕೆಯಿಂದಾಗಿ ರಾಜಿಯಿಂದ ಎಂದರೆ ಸ್ಪರ್ಧೆಯಿಲ್ಲದೆ ಪ್ರತಿನಿಧಿಗಳು ಆರಿಸಲ್ಪಟ್ಟರೆಂದು ತಿಳಿಯುತ್ತೇನೆ

ನಮ್ಮ ಜಿಲ್ಲಾ ಸರ್ಜನರು.

ಮಂಗಳೂರಿನ ಆಸ್ಪತ್ರೆಯ ಜಿಲ್ಲಾ ಮೆಡಿಕಲ್ ಆಫೀಸರರಾಗಿರುವ ದಾ॥ ಎಚ್ ಆರ್ ಸದಾನಿವರಾಯರವರು ಇದೇ ದಶಂಬರ ತಾ ೧೫ರಲ್ಲಿ ರಿಟಾಯರ್ ಆಗುವರೆಂದು ತಿಳಿದು ಬರುತ್ತದೆ ಅವರ ಸ್ಥಾನದಲ್ಲಿ ಡಾ॥ ಕೆ. ಕೃಷ್ಣನ್ ನಂಬಿಯಾರರು ದಕ್ಷಿಣ ಕನ್ನಡ ಜಿಲ್ಲಾ ಮೆಡಿಕಲ್ ಆಫೀಸರರಾಗಿ ಸೇವಕಕ್ಕೆ ಹೊಂದಿರುವರೆಂದು ಗೊತ್ತಾಗಿದೆ

ಮದ್ರಾಸ್ ಎಸೆಂಬ್ಲಿಗೆ ಕಾಂಗ್ರೆಸ್ ಉಮೇದ್ವಾರರು

ಮಂಗಳೂರು ಸರ್ಕಲ್‌ನಿಂದ ಶ್ರೀಮತಿ ಬಿ. ವೆಂಕಟರಾಯ ಬಾಳಿಗರನ್ನೂ ಪುರಸಭೆ ಪರವಾಗಿರುವ ಸ್ಥಾನಕ್ಕೆ ಶ್ರೀ॥ ಕೆ ಈಶ್ವರ, ಜಿಲ್ಲಾ ಬೋರ್ಡ್ ಮೆಂಬರ್, ಇವರನ್ನೂ ಅಖಿಲ ಭಾರತ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನವರು ಸೇವಕ ಮಾಡಿರುವರಲ್ಲದೆ ಆವರ ಹೆಸರುಗಳನ್ನು ಪ್ರಕಟಿಸಿರುವರು.

ಮುಸ್ಲಿಂ ಉಸಾಧ್ಯಾಯ ಸಂಘದ ವಾರ್ಷಿಕ ಮಹಾಸಭೆ.

ಮಂಗಳೂರು ಮುಸ್ಲಿಂ ಉಪಾಧ್ಯಾಯರ ಸಂಘದ ವಾರ್ಷಿಕ ಮಹಾಸಭೆಯು ಮಂಗಳೂರು ಮಹಮ್ಮದೀನ್ ಶಾಲೆಯಲ್ಲಿ ಇದೇ ಬರುವ ಮಾರ್ಚಿ ತಿಂಗಳ ಆದಿಭಾಗದಲ್ಲಿ ಜರಗಿಸಲ್ಪಡುವುದು

ಕಾಂಗ್ರೆಸ್ ಕಾರ್ಯಕರ್ತರುಗಳ ಸಭೆ.

ಮಂಗಳೂರಿನ ಕಾಂಗ್ರೆಸ್ ಕಾರ್ಯಕರ್ತರುಗಳಾದ ಶ್ರೀಗಳಾದ ಎನ್. ಎಸ್. ಕಿಲ್ಲೆ, ಬಿ ಭೋಜರಾವ್, ಹಿ ರಾಮರಾಯ ಮಲ್ಯರೇ ಮೊದಲಾದವರು ಕಳೆದ ತಾ ೨೫ರಲ್ಲಿ ಶ್ರೀ॥ ಯು ಸಿ ಎಸ್. ಭಟ್ಟರ ಆಧ್ಯಕ್ಷತೆಯಲ್ಲಿ ಮೈದಾನದಲ್ಲಿ ಒಂದು ಸಭೆ ಜರಗಿಸಿ ಅಲ್ಲಿ ಈಗ ಜಿಲ್ಲೆಯಲ್ಲಿ ಕಾಂಗ್ರೆಸ್ ಕೆಲಸವನ್ನು ನಡಿಸುವ ಮುಂದಾಳುಗಳು ಎಲ್ಲ ಅಧಿಕಾರಗಳನ್ನು ತಮ್ಮ ಕೈಯಲ್ಲಿಯೇ ಇರಿಸಿಕೊಂಡು ತಮಗೆ ಇಷ್ಟ ನಿಲ್ಲವರನ್ನು ಹೇಗೆ ಹೊರಹಾಕುವುದಕ್ಕೆ ಯತ್ನಿಸುತ್ತಿರುವರೆಂಬುದನ್ನು ವ್ಯಕ್ತಗೊಳಿಸಿದರು ಆದೇ ಸಂದರ್ಭದಲ್ಲಿ ತಮಗೆ ಕಾಂಗ್ರೆಸಿನಲ್ಲಿ ಒದಕು ಹುಟ್ಟುವ ಆಭಿಪ್ರಾಯವಿಲ್ಲವೆಂದೂ, ತಮ್ಮ ಕೈಲಾದ ಮಟ್ಟಿಗೆ ರಾಷ್ಟ್ರ ಸಭೆಯ ಧ್ವಜವನ್ನು ಹಿಡಿದು ಮುಂದಡಿಯಿಡುವುದಕ್ಕೆ ತಾವು ಸಿದ್ಧರೇ ಇರುವೆವೆಂದೂ ಹೇಳಿದರು ಶ್ರೀ॥ ಮಲ್ಲರು ತಾವು ಸಾಧ್ಯವಿರುವ ಮಟ್ಟಗೂ ರಾಜಿಯಂದ ತಮ್ಮೊಳಗಿನ ಬೇಧ ಭಿನ್ನಾಭಿಪ್ರಾಯಗಳನ್ನು ಇತ್ಯರ್ಥಗೊಳಿಸುವುದಕ್ಕೆ ಯತ್ನಿಸುವುದಾಗಿ ಆಶ್ವಾಸನೆಯಿತ್ತರು ಅವ ಕ್ಷರು ತಮ್ಮ ಭಾಷಣದಲ್ಲಿ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಬೆನ್ನಾಪಿಪ್ರಾಯಗಳು ಬಹುದಾಗಿಯೂ ಅವಲ್ಲಿ ಈ ಚುನಾವಣೆಯ ಕಾಲದಲ್ಲಿ ಸರ್ವರೂ ಒಂದಾಗಿ ರಾಷ್ಟ್ರಸಭೆಯ ವಿಜಯಕ್ಕಾಗಿ ಯತ್ನಿಸಬೇಕೆಂದೂ ಸರ್ವರನ್ನು ಪ್ರಾರ್ಥಿಸಿದರು

ಜನ್ಮ ದಿನಾಚರಣೆ.

ಸ್ವಾಮಿ ಶ್ರೀ ಶಿವಾನಂದ ಸರಸ್ವತಿಯವರ ೨೫ನೆ ವರ್ಷದವರು ತಮ್ಮ ಗುರುಗಳ ಜನ್ಮದಿನಾಚರಣೆಯನ್ನು ಕದ್ರಿ ಸ್ವಾಮಿಗುಡ್ಡೆ ರೋಡಿನಿಸ್ಥರುವ ತಮ್ಮ ನಿದ್ಧ ನಿರ್ಧಾರಯದ ಕಟ್ಟಡದಲ್ಲಿ ಕಳೆದ ರವಿವಾರ ಅತಿ ವಿಜೃಂಭಣೆಯಿಂದ ನೆರವೇರಿಸಿದರು ಅಂದು ದಿನವಿಗೆ ಅನ್ನದಾನವನ್ನು ಸಡಿಸಿದರು.

ಕೇರಳದ ನೃತ್ಯಕಲೆ.

ಮುಂಬಾಯಿ, ಮದ್ರಾಸ್, ಪೆಷಾವರ್ ನೋಡಲಾದ ಬ್ರಿಟಿಷ್ ರಾಜ್ಯದಲ್ಲಿಯೂ, ಮೈಸೂರು ಬರೋಡದೆ ಮುಂತಾದ ದೇಶೀಯ ಸಂಸ್ಥಾನಗಳಲ್ಲಿಯೂ ತಮ್ಮ ನೃತ್ಯಕಲೆಯನ್ನು ಪ್ರದರ್ಶಿಸಿ ವಿಶೇಷ ಬಹುಮಾನವನ್ನು ಪಡೆದ ಕೇರಳದ ಕಲಾಮಂಚಿಲದವರು ಬರುವ ಜನವರಿಯಲ್ಲಿ ದಕ್ಷಿಣ ಕನ್ನಡಕ್ಕೆ ಬಂದು ತಮ್ಮ "ತಕ್ಕಾಳಿ" ವೋಲಾದ ಮೂಕ ಆಡಗಳನ್ನು ಪ್ರದರ್ಶಿಸಿ ಕೇರಳದ ಕಲೆಯನ್ನು ದಕ್ಷಿಣ ಕನ್ನಡಿಗರಿಗೆ ತೋರಿಸಲಿರುವರು ಆ ಕಲಾ ಮಂದಲದ ಆಧ್ಯಕ್ಷರಾದ ಮಹಾಕವಿ ವಳ್ಳತ್ತೋಳ್ ನಾರಾಯಣ ಮೇನೋನ್‌ರವರು ಈ ಸಂಬಂಧವಾಗಿ ಮಂಗಳೂರಿಗೆ ಬಂದಿರುವರು

ಹರಿಜನ ಲೇಬರ್ ಲೀಗ್

ಈ ಲೀಗಿನ ಒಂದು ಸಭೆಯು ಕಳೆದ ವಾರ ಉಳ್ಳಾಲ ರಘುನಾಥಯ್ಯನವರ ಬಾಡಿಗಲಯದಲ್ಲಿ ಸಚಿವರಿ ತುಳುನಾಡು ಹರಿಜನರ ಪರಿಸ್ಥಿತ್ಯನ್ನು ಜರಗಿಸಬೇಕೆಂದೂ, ಎರುವ ಬೈನಾವಣೆಯಲ್ಲಿ ರುಸ್ಪ ಪಕ್ಷದ ಉಮೇದುವಾರರಿಗೇ ಜೆಂಬಲ ಕೊಡಬೇಕೆಂದೂ, ಕುಂದಾಪುರ ತಾಲೂಕಿನಲ್ಲಿ ಲಿಗಿನ ಶಾಖೆಯನ್ನು ತರಯ ಜಾಕಾಗಿಯೂ ರಲುಪುಗೆಳುದುವು

ಕದ್ರಿ ಮೇಳ

ಶ್ರೀ ಮಂಜುನಾಥೇಶ್ವರ ಪ್ರಸನ್ನ ಕದ್ರಿ ಜಾತ್ರಾ ತಾರ ಹೋಳಿದಿಯ ನಿತ್ಯೆಯ ದಿವಸ ದೇವರ ಸೇನೆಯ ಆಟವಾಡಿದರು ಈ ದಿವಸವೂ ದೇವಸ್ಥಾನದ ಪರಾಕ ದಲ್ಲಿಯೇ ಆಟವಾಗಲಿದೆ ನಿತ್ಯೆಯ ದಿವಸ ಜನಸಂದಣಿಯು ಅಪಾರವಾಗಿತ್ತು

ಡಾ॥ ಹರಡೀಕರರು

ಡಾ॥ ಹರಡೀಕರರೂ, ಶ್ರೀಮತಿ ಕಮಲಾ ದೇವಿಯವರೂ ಇನ್ನಿತರ ಕಾಂಗ್ರೆಸ್ ಮುಖಂಡರೂ ಪುತ್ತೂರು ತಾಲೂಕಿನಲ್ಲಿ ಪ್ರವಾಸ ಬೆಳೆಸಿ ಅಲ್ಲಿ ಕಾಂಗ್ರೆಸಿನ ಉದ್ದೇಶಗಳನ್ನು ಜನರಿಗೆ ತಿಳಿಸಿ ಮಹಾಜನರು ಕಾಂಗ್ರೆಸ್ ಉಮೇದ್ವಾರರಿಗೆ ಸಂಪೂರ್ಣ ಜಂಬಲ ಕೊಡಬೇಕೆಂದು ಕೇಳಿಕೊಂಡರು

ಡಾ॥ ಹರಡೀಕರರು ಮಂಗಳೂರಿನಿಂದ ಮಡಿಕೇರಿಗೆ ಹೊರಟುಹೋದರು.

ಶುದ್ಧಿ ಸಂಸ್ಕಾರ

ಕಳೆದ ಆದಿತ್ಯವಾರ ಮಂಗಳೂರು ಆರ್ಯಸಮಾಜ ಮಂದಿರದಲ್ಲಿ ಬಲ್ಲರೆದ ಒಬ್ಬ ಫ್ರೊಟೆಸ್ಟಾಂಟ್ ಕ್ರೈಸ್ತ ವಿಕ್ಟರ್ ಶ್ರೀನಿವಾಸ್ ಎಂಬವರ ಶುದ್ಧಿ ಸಂಸ್ಕಾರವು ಜರಗಿತು. ಅವರು ಕಣಾನೂರಿನ ಒಂದು ಮಾನ್ಯ ನಾಯರ್ ಕುಟುಂಬಕ್ಕೆ ಸೇರಿದವರಾಗಿದ್ದು ಸುಮಾರು ಹತ್ತು ವರ್ಷಗಳ ಮೊದಲು ಇವ್ವಿಗೆ ಬಂದು ಕ್ರೈಸ್ತ ಮತಾವಲಂಬಿಯಾಗಿದ್ದರು ಶ್ರೀ ನೋಪಸಪ್ಪ ತಿಂಗೆ ಅಂಗಡಿ ಇವರಿಗೆ ಗಾಯತ್ರೀ ಮಂತ್ರೋಪದೇಶದ ಮೂಲಕ ಆರ್ಯಧರ್ಮ ದೀಕ್ಷೆಯನ್ನು ಕೊಟ್ಟು ಕೆ. ಸಿ ಕೃಷ್ಣ ನಾಯರ ಎಂಬ ಅವರ ಮುಂಚಿನ ಹೆಸರನ್ನೇ ಇಟ್ಟರು ಈ ಸಮಾರಂಭಕ್ಕೆ ಸೇರಿದ ಸಭಿಕರನ್ನುದ್ದೇಶಿಸಿ ರಾ. ಕೆ ಅನಂತ ಭಟ್ಟರು ಹಿಂದೂ ಸಂಘಟನೆ ವಿಷಯವಾಗಿ ಭಾಷಣ ಕೊಟ್ಟರು ಶ್ರೀ ಕೃಷ್ಣನ್ ನಾಯರು ಮಲೆಯಾಳ ಬಾಷೆಯಲ್ಲಿ ಬೆಗೆಸಿ ಇವ್ವಿ "ಉದಯ ರ" ಎಂಬ ಮಾಸ ಪತ್ರಿಕೆಯನ್ನು ಹೊರಡಿಸಲಿಕ್ಕಿರುವರು.

ಶ್ರೀ. ಎ ಬಿ- ಶೆಟ್ಟ್ರು ಅನ್ಯಾಯ ಮಾಡಿರುವರೇ?

ಸಮಯಿಗ ಸಂಪಾದಕರೇ!

ಬರುವ ಎಸೆಂಬ್ಲಿ ಚುನಾವಣೆಯ ನಿಮಿತ್ತ ನನ್ನ ಎದ್ದಿ ಕೆಲವು ಗೃಹಸ್ಥರು, ನನ್ನ ಮೇಲೆ ಜಸರನ್ನಿ ತಪ್ಪು ಅವಿಪ್ರಾಯ ಹರಡಿಸುವುದಕ್ಕಾಗಿ, ನಾನು ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟು ಆಗಿರುವಾಗ, ಉದ್ಯೋಗ ಸಾಮಕಗಳಲ್ಲಿ ಬ್ರಾಹ್ಮಣರಿಗೆ ತಕ್ಕವ ಪ್ರಾತಿನಿಧ್ಯ ಕೊಡಲಿಲ್ಲವೆಂತ ಸುಳ್ಳು ಆರೋಪಣೆಗಳನ್ನು ಮಾಡುತ್ತಾ ರೆಂತ ಕೇಳುತ್ತೇನೆ ಆವಾ ನಾನು ಕ್ಲೈಲಾದ ವಷ್ಟಗೆ ಎಲ್ಲಾ ಜಾತಿಗಳ ಉಮೇದಾರರಿಗೆ ಯೋಗ್ಯತೆ ಪ್ರಕಾರ ಉದ್ಯೋಗಗಳನ್ನು ಸರ್ಮಾನತೆಯಿಂದ ಪಂಚಿಸಿ ಸೇವಕ ಮಾಡಿರುವೆನು ಕಳೆದ ತಾ ೨೧ ೧೧ ೩೬ನೇ ದಿವಸ ಜರಗಿದ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಕಾಸರಗೋಡು ಮೆಂಬರ್ ರಾ ಪಿ ವಿಟ್ಠಲ ಭಂಡಾರಿಗಳವರು ಕೇಳಿದ ಪ್ರಶ್ನೆಗಳಿಗೆ ಈಗಿನ ಪ್ರೆಸಿಡೆಂಟರಾದ ದಿವಾನ್ ಬಹದೂರ ಬಿ ಪಾಹುಬಲ ಹೆಗ್ಗಡೆಯವರೇ ಕೊಟ್ಟ ಉತ್ತರಗಳಿಂದ ಇಂಥ ಆರೋಪಣೆಗಳು ಎಷ್ಟು ಆಧಾರವಿಲ್ಲದಿದ್ದದ್ದು ಎಂಬುದು ಸ್ಪಷ್ಟವಾಗುವುದು ಈ ಪ್ರಶ್ನೋತ್ತರಗಳನ್ನು ಪ್ರಕಟಿಸಿ, ನಿಜವಾದ ಸಂಗತಿಗಳನ್ನು ಮುಂದಿಡುವಿರಾಗಿ ನಂಬುತ್ತೇನೆ

ಡಾಕ್ಟರ್ ಪಿ ವಿಠಲ ಭಂಡಾರಿಗಳವರ

ಪ್ರಶ್ನೆಗಳು ಮತ್ತು ಉತ್ತರ

1 **ಪ್ರಶ್ನೆ**—(a) ಮಾಜಿ ಸೈನಿಸೆಂಟ್ ರಾ॥ ಎ ಬಿ ಶೆಟ್ರು ಆವರ ಆಡಳಿತೆಯಲ್ಲಿ ಆಫ್ಕರ್ಸ ಆಫೀಸು, ಇಂಜಿನಿಯರ್ ಆಫೀಸು, ಪಬ್ಲಿಕ್ ಹೆಲ್ತ್, ಮತ್ತು ಮೆಡಿಕಲ್ ಸೆಕ್ಷನ್ ಮತ್ತು ಸೆಕೆಂಡರಿ ಶಾಲೆಗಳಲ್ಲಿ ಆಕ್ಟಿಂಗ್ ಮತ್ತು ಕಾಯಂ ಆಗಿ ನೇಮಕ ಮಾಡಿದ ಉದ್ಯೋಗಗಳ ಸಂಖ್ಯೆ ಎಷ್ಟು?

ಉತ್ತರ—166

ಪ್ರಶ್ನೆ—(b) ಇವ್ವಗಳಲ್ಲಿ ದ್ರಾವಿಡ ಬ್ರಾಹ್ಮಣರು ಗೌಡಸಾರಸ್ವತರು, ಸಾರಸ್ವತರು, ಮಹಮ್ಮದೀಯರು, ಕ್ರಿಸ್ತಿಯನರು, ಬಂಟರು (ಪರಿವಾರ ಬಂಟರುಕೂಡಾ) ಬಿಲ್ಲವರು, ಆಬ್ರಾಹ್ಮಣರು ಮತ್ತು ಹರಿಜನರ ಸಂಖ್ಯೆಗಳು ಎಷ್ಟು?

ಉತ್ತರ—

೧) ದ್ರಾವಿಡ ಬ್ರಾಹ್ಮಣರು	೨೪
೨) ಗೌಡಸಾರಸ್ವತರು	೧೫
೩) ಸಾರಸ್ವತರು	೯
೪) ಮಹಮ್ಮದೀಯರು	೧೩
೫) ಕ್ರಿಸ್ತಿಯನರು	೨೦
೬) ಬಂಟರು ಪರಿವಾರ ಬಂಟರು ಕೂಡಾ	೨೩
೭) ಬಿಲ್ಲವರು	೧೩
೮) ಬೇರೆ ಆಬ್ರಾಹ್ಮಣರು	೪೭
೯) ಹರಿಜನರು	೫

2 **ಪ್ರಶ್ನೆ**—(a) ರಾ॥ ಎ ಬಿ ಶೆಟ್ರು ಪ್ರಾಥಮಿಕ ಮತ್ತು ಹೈಸ್ಕೂಲ್ ಎಜುಕೇಶನಲ್ ಶಾಲೆಗಳಿಗೆ ಆಕ್ಟಿಂಗ್ ಮತ್ತು ಕಾಯಂ ಆಗಿ ನೇಮಕಮಾಡಿದ ಜನ್ಮ ಗಂಡರು ಮತ್ತು ಹೆಂಗಸು ಟೀಚರುಗಳ ಸಂಖ್ಯೆ ಎಷ್ಟು?

ಉತ್ತರ—152.

ಪ್ರಶ್ನೆ—(b) ಇವ್ವಗಳಲ್ಲಿ ಬ್ರಾಹ್ಮಣರು, ಬಂಟರು, ಬೈನರು, ಬೇರೆ ಆಬ್ರಾಹ್ಮಣರು, ಮಹಮ್ಮದೀಯರು ಮತ್ತು ಕ್ರಿಸ್ತಿಯನರು ಎಷ್ಟು?

ಉತ್ತರ—

೧) ಬ್ರಾಹ್ಮಣರು	೩೬
೨) ಬಂಟರು (ಪ್ರತಿವಾರ ಬಂಟರುಕೂಡಾ)	೩೪
೩) ಜೈನರು	೪
೪) ಬೇರೆ ಆಬ್ರಾಹ್ಮಣರು	೪೦
೫) ಮಹಮ್ಮದೀಯರು	೩೪
೬) ಕ್ರಿಸ್ತಿಯನರು	೧೬

ಎ. ಬಿ ಶೆಟ್ಟ್ರು.

ಸಿದ್ಧಕಿದ್ಯಾ ಅಭ್ಯಾಸಾಲಯ

ಇದೂ ತಾ ೨೬ನೇ ರವಿವಾರ ದಿವಸ ರಾತ್ರಿ ಸಿದ್ಧ ಸಮಾಜ ಸ್ಥಾಪಕರಾದ ಸ್ವಾಮಿ ನಿಮಾನಂದ ಪರಮ ಹಂಸರ ಜನ್ಮ ದಿನಾಚರಣೆ ನಿಮಿತ್ತ ಚಿತ್ರೆಯು ಎಲ್ಲ ಕವೆಗಳಿಂದ ಬಂದಿರುವ ಸ್ವಾಮಿಯವರ ವಿಶ್ವರ ಸುಸರಿ ಸ್ಮಾರಿಯಾಮವನ್ನು ಆಚ್ಚಾಶಿಸಲಾಯಿತು ಅಲ್ಲದೆ ಮಂದಿರಸ ಈ ಕಾರ್ಯವನ್ನು ಸೆಪಸಿಸಿಸಿಸಂತೆ ಪ್ರಯತ್ನಪಟ್ಟ ಜಲ್ಲಾ ಸಿದ್ಧ ವಿದ್ಯಾ ಪ್ರಚಾರಕರಾದ ಬ್ರಹ್ಮ ಶ್ರೀ ನಿಮಾನಂದರ ಹಿರಿಶ್ರಮದ ಫಲವಾಗಿ, ಸ್ವಾಮಿಯವರ ವಿಶ್ವ ವ್ಯಂಜದವರ ವಶ್ವ ಇತರ ಸಜ್ಜನರ ಸಹಾಯದಿಂದ ಒಂದು ಸಿನದ ಮೇಲಿನ ಜನರಿಗೆ ಸ್ಯಾಸ್ಥ್ಯ ಭೋಜನ ಮಾಡಿಸಲಾಯಿತು ಇದಕ್ಕಾಗಿ ಪ್ರಯತ್ನಪಟ್ಟ ಜಲ್ಲಾ ಪ್ರಚಾರಕರಾದ ನಿಮಾನಂದರಿಗೂ ಸ್ವಾಮಿಯವರಿಗೂ ಇತರರಿಗೂ ವಂದನೆಯನ್ನು ಆರ್ಪಿಸಿದ ಮಾಯಿ ಸಭೆಯು ವಿಸರ್ಜಿಸಲಾಯಿತು

THE BOMBAY LIFE ASSURANCE Co., LTD.

ESTD. 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances
3. Accident Risk covered on small extra premiums
4. Attractive Bonuses

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT:

P B 337 Mount Road, Madras	Visveswarapuram Circle Bangalore City	Sonnavaram Pathway Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY

FIGURES THAT SPEAK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs 68 00,000
Premium Income Over	Rs 22,54 000
Interest Income	Rs. 3,16,000
Claims Paid	Rs 5,75,000
Total Claims paid Over	Rs. 38,50,000
Total Business in Force Over	Rs 4,12,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ನಮ್ಮ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ದಯವಿಟ್ಟು ಆದಷ್ಟು ಬೇಗನೇ ಕಳುಹಿಸಿಕೊಡಬೇಕಾಗಿ ವಿನಂತಿ. ವಿ. ಪಿ. ಮಾಡಿರಲ್ಲಿ ೬ ಆಣೆ ಹೆಚ್ಚಿಗೆ ತೆರಬೇಕಾಗುವದು. ವಿ. ಪಿ. ಮೂಲಕ ಸ್ವೀಕರಿಸಲಿಚ್ಛಿಸುವವರು ಆ ದನ್ನು ಮುಂದಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇನೆ.

ಮೆನೇಜರ್, 'ನವಯುಗ.'

ಉಡುಪಿ.

ನವಯುಗ

ಉಡುಪಿ, ತಾ. ೩-೧೨-'೩೬ ಗುರುವಾರ

ಇನ್ನೊಂದು ಲೋಕ ಯುದ್ಧದ ಗುಡುಗಾಟ!

ನಾಳೆ ಮುಂಜಾನೆ ಏಳುವಾಗಲೆ ಲೋಕದ ಯಾವುದಾದರೊಂದು ಭಾಗದಲ್ಲಿ ಪ್ರಚಂಡ ಯುದ್ಧದ ಭೇರಿಯು ಹೊಡೆಯಲ್ಪಟ್ಟರೆ ಆಶ್ಚರ್ಯವಿಲ್ಲೆಂಬ ಪರಿಸ್ಥಿತಿಯು ಈಗ ಉಂಟಾಗಿದೆ. 1914ನೇ ಲೋಕಯುದ್ಧವು ಯುದ್ಧವನ್ನೇ ಕೊನೆಗೊಳಿಸಲು ಹೂಡಲ್ಪಟ್ಟುದೆಂಬ ಮಾತು ಇಂದೀಗ ಅರ್ಥರಹಿತವಾಗಿದೆ. ಲೋಕ ಶಾಂತಿ ರಕ್ಷಣೆಗಾಗಿ ರಾಷ್ಟ್ರ ಸಂಗತಿಯನ್ನು ಲಕ್ಷ್ಯಕ್ಕೆ ತಂದು ಈ ಸುಹಿತಗೆಳೆ ಇತ್ಯರ್ಥಕ್ಕಾಗಿ ಸ್ಥಾಪಿಸಲ್ಪಟ್ಟಿರುವ ರಾಷ್ಟ್ರಕೂಟವಿಂದು ನಾಮಾವಶೇಷವಾಗಿರುವುದು. 1914 ರಲ್ಲು ಜರ್ಮನಿಯ ಏಕ ತಂತ್ರಾಧಿಕಾರಿಯಾಗಿದ್ದ ಕೈಸರರ ಮಹತ್ವಾಕಾಂಕ್ಷೆಯು, ಪ್ರಚಂಡ ಯುದ್ಧ ಸಿದ್ಧತೆಯ ಪರಿಣಾಮವಾಗಿ ದೊಡ್ಡ ಕಾಡ್ಗಿಚ್ಚೆದ್ದಿತು. ಇಂದೀಗ ಅದಕ್ಕಿಂತಲೂ ಘೋರವಾದ ದಾವಾನಲಕ್ಕೆ ಜರ್ಮನಿಯೇ ಅಥವಾ ಕೈಸರರಂತಹ ಮಹತ್ವಾಕಾಂಕ್ಷೆಯ ನಿರಂಕುಶಾಧಿಕಾರವೇ ಕಾರಣವಾಗುವುದೋ ಎಂದು ಸಂದೇಹಗೊಳ್ಳುವಂತಾಗಿದೆ.

ಸಾಮ್ರಾಜ್ಯ ವ್ಯಾಪನಾಮತ್ತಿನಿಂದ ತುಂಬಿದ ಜಪಾನು, ಯಾವ ನ್ಯಾಯವೂ ಇಲ್ಲದೆ ಚೀನಕ್ಕೆ ಸೇರಿದ್ದ ಮಂಚೂರಿಯವನ್ನು ಅನ್ಯಾಯವಾಗಿ ಆಕ್ರಮಿಸಿ ಸ್ವಾಧೀನಪಡಿಸಿಕೊಂಡಾಗ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ಪ್ರಬಲ ರಾಷ್ಟ್ರಗಳು ತೋರಿಸಿದ ದುರ್ಬಲತನವು ರಾಷ್ಟ್ರಕೂಟದ ಅಸ್ತಿತ್ವಕ್ಕೆ ವಿಷಪ್ರಾಯವಾಯಿತು. ಜಪಾನಿನ ಉದಾಹರಣೆಯನ್ನು ಮುಸಲೋನಿಯವರು ಅನುಸರಿಸಿ ರಾಷ್ಟ್ರಕೂಟವನ್ನು ಧಿಕ್ಕರಿಸಿ, ಇಡೀ ಲೋಕವೇ ಜಗುಪ್ಸೆಗೊಳ್ಳುವಷ್ಟು ಭೀಕರ ಯುದ್ಧವನ್ನು ಬಡ ಅಬಿಸೀನಿಯದ ಮೇಲೆ ನಡಿಸಿ ಅದನ್ನು ತನ್ನ ಸಾಮ್ರಾಜ್ಯವಾಗಿ ಮಾಡಿದಾಗ ಪುನಃ ಇಂಗ್ಲೆಂಡು ಮತ್ತು ಫ್ರಾನ್ಸ್ ಸರಕಾರಗಳು ತೋರಿಸಿದ ಅಂಜುಬುರುಕತನವು, ನಡಿಸಿದ ತಂತ್ರವು ರಾಷ್ಟ್ರಕೂಟದ ಬುಡಕ್ಕೆನೇ ಕೊಡಲಿಯಾಯಿತು. ಅನಂತರ ಹಿಟ್ಲರ್ ಮುಸಲೋನಿಗಳು ಯಾವ ಅಂತರರಾಷ್ಟ್ರೀಯ ಒಪ್ಪಂದವನ್ನೂ ಗಣಿಸದೆ ರಾಷ್ಟ್ರಕೂಟವನ್ನು ತೃಣೀಕರಿಸಿ ತಾವೇ ತಾವಾಗಿ ನಡೆಯಹತ್ತಿದರು. ಅವರ ಸ್ವೇಚ್ಛಾಪರ ವರ್ತನೆಗೆ ಅಂಕುಶ ಹಾಕುವಷ್ಟರ ಧೈರ್ಯ ಮತ್ತು ಸಾಹಸವು ಫ್ರಾನ್ಸ್ ಇಂಗ್ಲೆಂಡುಗಳಿಗಿಲ್ಲದಾಯಿತು. ಇದರ ಪರಿಣಾಮವಾಗಿ ಎಲ್ಲೆಲ್ಲಿಯೂ ಅವರ ಕೈಯೇ ಮೇಲಾಗಿದೆ. ಅವರ ದರ್ಪ ಅಧಿಕಾರಗಳ ಪ್ರಭಾವವೇ ಅಧಿಕವಾಗಹತ್ತಿದೆ.

ಇಂದೀಗ ಅಂತರರಾಷ್ಟ್ರೀಯ ಒಡಂಬಡಿಕೆಗಳೆಲ್ಲಾ ಮೂಲೆಗುಂಪಾಗಿವೆ. ಯುದ್ಧೋಪಕರಣಗಳನ್ನೆಳಿಸುವ ಬದಲಿಗೆ ಪ್ರತಿತವ ಸಾಂಪತ್ತಿಕ ಮುಗ್ಗಟ್ಟಿನಲ್ಲಿ ಮತ್ತು ನಿರುದ್ಯೋಗದ ಘೋರ ಸಂಕಷ್ಟದಲ್ಲಿ, ಯುದ್ಧೋಪಕರಣಗಳನ್ನು 1914 ಕ್ಕಿಂತಲೂ 3 ಪಾಲು ಹೆಚ್ಚಿಸಲು ಕೋಟಿಗಟ್ಟಲೆ ಹಣವು ನೀರಿನಂತೆ ವ್ಯಯವಾಗುತ್ತಿರುವುದು. ಅತ್ಯಂತ ವಿನೇಕಪರ ರಾಷ್ಟ್ರವಾದ ಇಂಗ್ಲೆಂಡೂ ಈಗ ಪ್ರಚಂಡ ಯುದ್ಧ ಸಿದ್ಧತೆಗಾರಂಭಿಸಿರುವುದು. ಲೋಕದ ಪ್ರಬಲ ರಾಷ್ಟ್ರಗಳೆಲ್ಲಾ ಗುಪ್ತ ಯುದ್ಧ ಸಿದ್ಧತೆಯಲ್ಲಿ ಒಂದನ್ನೊಂದು ಹಿಂದೆ ಹಾಕುವ ಮೇಲಾಟದಲ್ಲಿ ತೊಡಗಿರುವವು. ನೂತ್ರವಲ್ಲದೆ ಒಂಪರೊಡನಿನ್ನೊಂದು ರಹಸ್ಯವಾಗಿ ಪರಸ್ಪರ ಸಹಾಯದ ಕವಲುಗಳನ್ನು ಮಾಡಿಕೊಳ್ಳುವ ಕುಟಿಲ ತಂತ್ರದಲ್ಲಿ ನಿರತವಾಗಿರುವವು.

ರಸ್ಯವು ಅಭೂತಪೂರ್ವವಾದ ನವೀನ ಪ್ರಯೋಗವೊಂದನ್ನು ಕಳದ 15 ವರ್ಷಗಳಿಂದ ನಡಿಸಿ, ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ರಾಷ್ಟ್ರಗಳಿಗೆ ಸರಿಮಿಗಿಲೆನಿಸುವ ಭವಿಷ್ಯವಿ..ಹೊಂದಿಕ್ಕಿಂತರ ರಾಷ್ಟ್ರೀಯ ಣೆಯನ್ನು ಕೊಳ್ಳುವುದು ಮತ್ತು ತಮ್ಮ ಕೂಟಗಳಲ್ಲಿ ತಕ್ಕ ಸ್ಥಾನಮಾನ ಪಡೆದಿರುವುದು. ರಸ್ಯದಪ್ರಾಮುಖ್ಯವನ್ನು ನೋಡಿ ಸಹಿಸಲಾರದೆ ಹಿಟ್ಲರರು ಆದರ ಮೇಲೆ ಮುಸಿದು ಬಿದ್ದು ಹಲ್ಲು ಮಸೆಯಹತ್ತಿರುವರು. ಇತ್ತಲಾಗಿ ಹಿಟ್ಲರರೊಂದಿಗೆ ಮುಸಲೋನಿಯವರೂ ಸೇರಿರುವರು. ಎಲ್ಲೆಲ್ಲಿಯೂ ರಸ್ಯವನ್ನು, ಅದರ ನವೀನ ಉಪಕ್ರಮದ ಅಭಿಪ್ರಾಯಗಳ ಪ್ರಚಾರವನ್ನು ವಿರೋಧಿಸಲು ಸೊಂಟಕಟ್ಟಿ ನಿಂತಿರುವರು. ಸ್ಪೈನಿನಲ್ಲೀಗ ನಡೆಯುತ್ತಿರುವ ಘೋರ ರಕ್ತಪಾತಕ್ಕೆ ಕೆಲಮಟ್ಟಿಗೆ ಕಾರಣರೆಂದರೆ ಹಿಟ್ಲರ್ ಮುಸಲೋನಿಗಳೆನ್ನಬಹುದು. ಪ್ರಬಲ ಬಹು ಪಕ್ಷದ ಜನಬೆಂಬಲ ಪಡೆದು ನ್ಯಾಯವಾಗಿ ಸ್ಥಾಪಿತವಾದ ಸ್ಪೈನಿನ ಸರಕಾರವು ರಸ್ಯದ ಪಕ್ಷಪಾತಿಯಿರುವುದೆಂದು ಆದನ್ನಣಗಿಸಿ, ತಮಗೆ ಬೇಕಾದ ರೀತಿಯ ರಾಜ್ಯಭಾರವನ್ನಲ್ಲಿ ಸ್ಥಾಪಿಸಲು ಹಿಟ್ಲರ್ ಮುಸಲೋನಿಗಳು ಸೂತ್ರಚಾಲನೆ ನಡಿಸಿರುವರು. ಇದೇ ಲೋಕ ಯುದ್ಧದ ಕೆಡಿಯಾಗಿ ಭಯಂಕರ ಬೆಂಕಿಯೇಳುತ್ತಿತ್ತು. ಆದರೆ ಇಂಗ್ಲೆಂಡು ಮತ್ತು ಫ್ರೆಂಚ್ ಸರಕಾರಗಳ ವಿನೇಕಪರಧೋರಣೆಯಿಂದದು ದೂರವಾಯಿತೆನ್ನಬಹುದೇ ಹೊರತು ನಿವಾರಿತವಾಯಿತೆನ್ನಲಾಗುವುದಿಲ್ಲ. ಸ್ಪೈನಿನಲ್ಲಿ ನಡೆವ ಸೂತ್ರಚಾಲನೆಯಿಂದ ಎಂದು ಎಂತಹ ಪರಿಸ್ಥಿತಿಯುಂಟಾಗುವುದೆನ್ನಲಾಗುವುದಿಲ್ಲ.

ಹಿಟ್ಲರ್ ಮುಸಲೋನಿಗಳು ಯುರೋಪಿನಲ್ಲಿ ತಮ್ಮ ಮಿತ್ರ ರಾಷ್ಟ್ರಗಳನ್ನು ಹೆಚ್ಚಿಸಿ ತಮ್ಮ ಸ್ಥಾನವನ್ನು ಬಲಗೊಳಿಸುವ ಸೂತ್ರ ಚಾಲನೆ ನಡಿಸುತ್ತಿರುವುದು ಮಾತ್ರವಲ್ಲದೆ, ಜಪಾನನ್ನೂ ತಮ್ಮ ಕೂಟಕ್ಕೆ ಸೇರಿಸಿಕೊಳ್ಳಲೆತ್ನಿಸಿರುವರು. ಕಳದ 15 ತಿಂಗಳ ಮಾತುಕತೆಗಳ ಫಲಿತಾಂಶವಾಗಿ ಜರ್ಮನಿ ಮತ್ತು ಜಾಪಾನುಗಳು ಗುಪ್ತ ಒಡಂಬಡಿಕೆಯೊಂದನ್ನು ಮಾಡಿಕೊಂಡಿರುವವು. ರಸ್ಯವನ್ನು ವಿರೋಧಿಸುವ ನಿಮಿತ್ತ ಈ ಒಪ್ಪಂದವೆಂದು ಪ್ರಕಟಿಸಲಾಗಿದೆ. ಆದರೆ ಅದರಲ್ಲಿ ಪರಸ್ಪರ ಸೇನಾ ಸಹಾಯದ ಶರ್ತಗಳು ಕೂಡಾ ಇರುವವೆಂದು ನಂಬಲಾಗಿದೆ. ಇದರಿಂದ ಸಹಜವಾಗಿ ರಸ್ಯವು ಉದ್ವೇಗಗೊಂಡಿದೆ. ಅಷ್ಟುಮಾತ್ರವಲ್ಲದೆ ಫ್ರಾನ್ಸ್ ಇಂಗ್ಲೆಂಡುಗಳೂ ಅತೃಪ್ತಿಗೊಂಡಿವೆ. ಅಮೆರಿಕವು ಸಂಶಯಗೊಳ್ಳುವಂತಾಗಿದೆ ರಸ್ಯವು ಜಾಪಾನಿನೊಡನೆ ಈ ಮೊದಲು ಮಾಡಿಕೊಂಡಿರುವ ಕರಾರುಗಳನ್ನೆಲ್ಲಾ ಮುರಿದು ಹಾಕಿ ಇನ್ನು ಮುಂದೆ ಯಾವ ಸಂಬಂಧವನ್ನೂ ಇಟ್ಟುಕೊಳ್ಳಬಾರದೆಂಬ ನಿರ್ಧಾರಕ್ಕೆ ಬಂದಿದೆ. ಜರ್ಮನಿಗೆ ಮೊದಲೇ ರಸ್ಯದ ಮೇಲೆ ಬಹಳ ಸಿಟ್ಟಿದೆ. ಒಳಸಂಚು ನಡಿಸಿದರೆಂಬ ಕಾರಣದಿಂದ ರಸ್ಯವು ಇತ್ತಲಾಗಿ ಹಲವು ಮಂದಿ ಜರ್ಮನರನ್ನು ಹಿಡಿದು ಮರಣ ಶಿಕ್ಷೆ ವಿಧಿಸಿದ ಮೇಲಂತೂ ಜರ್ಮನಿಯು ಕ್ರೋಧೋನ್ಮತ್ತವಾಗಿದೆ. ಸಂದರ್ಭ ನೋಡಿ ರಸ್ಯವನ್ನು ಬಗ್ಗು ಬಡಿಯಬೇಕೆಂದು, ರಸ್ಯದ ಪೂರ್ವದ ಪ್ರಬಲ ವೈರಿಯಾದ ಜಾಪಾನಿನೊಡನೆ ಒಳಗಿಂದೊಳಗೆ ಒಪ್ಪಂದ ಮಾಡಿಕೊಂಡಿದೆ. ಇದಕ್ಕೆನ್ನು ಇಟಲಿಯೂ ಸೇರದಿರಲಾರದು

ತನ್ನನ್ನು ಮುರಿಯಲು ಜರ್ಮನಿ, ಜಾಪಾನು, ಇಟಲಿಗಳು ಸಂಚುನಡಿಸಿ ಹೊಂಚುಹಾಕಿಕೊಂಡಿರುವೆಂಬುದನ್ನು ರಸ್ಯವು ಚೆನ್ನಾಗಿ ಬಲ್ಲುದು. ಆದುದರಿಂದಲೇ ಅದು ನೆಂಪೆ ಅಸಿಲ್ ಭಾರ್ತ್ ಪ್ರಚಂಡ ಯುದ್ಧ ಸಿದ್ಧತೆಮಾಡಿಕೊಂಡೇ ಬಂದಿರುವುದು. ತಾನೇ ಏಕಾಕಿಯಾಗಿ ಜರ್ಮನಿ, ಜಾಪಾನು ಮತ್ತು ಇಟೆಲಿಗಳನ್ನು ವಿರೋಧಿಸುವ ನೆಲ, ಜಲ ಮತ್ತು ವಿಮಾನ ಪಡೆಯನ್ನು ತಯಾರಿಸಿರುವುದು. ರಸ್ಯದಷ್ಟು ಪ್ರಚಂಡ ವಿಮಾನಪಡೆಯು ಲೋಕದ ಇನ್ನಾವ ರಾಷ್ಟ್ರದಲ್ಲಿಯೂ ಇಲ್ಲ. ಆದರ ಜಲ ಸೇನೆಯು ಲೋಕದ ಅತಿ ದೊಡ್ಡದಾದುದರಲ್ಲೊಂದೆಂದು ಈಗ ತಾನೆ ಪ್ರಕಟವಾಗಿದೆ. ಅಂದಮೇಲೆ ರಸ್ಯವು ಎಂದೂ ಆದರ ವೈರಿಗಳಿಗೆ ಬೆದರಿ ಸುಮ್ಮನಿರುವಂತಿಲ್ಲ. ಕೆಣಕಿದರೆ ಅದು ಎಷ್ಟಕ್ಕೂ ಪ್ರತೀಕಾರಮಾಡದಿರದು. ಆಗ ಅದೆಷ್ಟು ಭೀಕರ ಯುದ್ಧವುಂಟಾಗುವುದೆಂದು ಹೇಳಲು ಸಾಧ್ಯವಿಲ್ಲ.

ಒಳಗೊಂದು ಹೊರಗೊಂದು

ನವಯುಗವು ಒಳಗೊಂದು ಹೊರಗೊಂದು ರೀತಿಯನ್ನಿಟ್ಟುಕೊಂಡಿಲ್ಲ. ಹೃದಯವನ್ನು ತೆರೆದು ವಾಚಕರ ಮುಂದಿಡುವ ರೀತಿ ಅದರದು. ಆದುದರಿಂದ ನವಯುಗದ ಸರಣಿಯಲ್ಲಿ ಬರೆಯಲು ನಮ್ಮ ಮಂಗಳೂರಿನ ಬಂಧು ರಾಷ್ಟ್ರಬಂಧುವಿಗೆ ಎಂದಿಗೂ ಸಾಧ್ಯವಾಗಲಿಕ್ಕಿಲ್ಲವೆಂಬುದನ್ನು ನಾವೂ ಒಪ್ಪಿಕೊಳ್ಳುತ್ತೇವೆ. ರಾಷ್ಟ್ರಬಂಧುವು ಕಾಂಗ್ರೆಸ್ ಕಮಿಟಿಯನ್ನು ಟೀಕಿಸಿಲ್ಲವೇ? ಅದು ಟೀಕೆಗಿಳಿದಿದೆಯೆಂದೊಡನೆಯೇ ನಾವದನ್ನು ಕೆಣಕಿದುದೇನು? ಇದ್ದುದನ್ನು ಇದ್ದಂತೆ ಹೇಳದಾಕ್ಷಣ ನಮ್ಮ ಬಂಧುವಿಗೆ ಸಿಡ್ಡು ಹೊಡೆದಂತಾಯಿತೇ? ಅದು ವಿಷಯವನ್ನು ಬಿಟ್ಟು ನವಯುಗದ ಘೋರಣೆ, ಹಿಂದೆ ನಡೆದಿದ್ದ ಶ್ರೀ. ಕಾರಂತರ ಚುನಾವಣೆ, ಶ್ರೀ. ಎ. ಬಿ. ಶೆಟ್ಟರ ಮತ್ತು ಶ್ರೀಮತಿ ಕಮಲಾದೇವಿಯರ ಅವಸ್ಥಾಂತರದ ಕುರಿತೆಲ್ಲಾ ಏನೇನೋ ಬರೆದು ನವಯುಗದ ಮೇಲೆ ಕೆಸರೆರಚಲೆಳಸಿದುದು ಸಂಭಾವಿತತನವೆ? ಸುಸಂಬಂದ್ಧತೆಯೇ? ನಾವು ಮಾತ್ರ ಅದರ ಚಾಲಕ ಸಂಪಾದಕರುಗಳ ಅಂತರಂಗ ಬಹಿರಂಗಗಳ ಸಂಬಂಧ್ಧತೆಯನ್ನು ತುಸು ಒರೆಗೆ ಹಚ್ಚಿ, ವಿಶಿಷ್ಟ ಧ್ಯೇಯದಿಂದ ಪ್ರವರ್ತಿಸಲ್ಪಟ್ಟ ಪತ್ರಿಕೆಯ ಘೋರಣೆಯ ಮೇಲಿನ ಅದರ ಪರಿಣಾಮವನ್ನು ಬಯಲಿಗೆಳೆದರೆ ಅದು ಅಸಂಬದ್ಧ ವಿಷಯವಾಗುವುದೇ? ಈ ಮನೋವೃತ್ತಿಯೂ ತರ್ಕ ಸರಣಿಯೂ ಸಮ್ಮಿಂಪ ಸಾಧ್ಯವಿಲ್ಲೆಂದು ನಾವೂ ಅತ್ಯಂತ ವಿಷಾದಪೂರ್ವಕವಾಗಿ ಒಪ್ಪಿಕೊಳ್ಳುತ್ತೇವೆ.

ಒಡೆತನ ಸಂಪಾದಕತ್ವದ ಅಗಮು ನಿರ್ಗಮಗಳಿಂದ ಪತ್ರಿಕೆಯ ಧ್ಯೇಯದಲ್ಲಿ ಲವಲೇಶ ವ್ಯತ್ಯಾಸವಾಗುವಂತಿಲ್ಲವೆಂಬ ದೊಡ್ಡ ತತ್ವವನ್ನು ನಮ್ಮ ಬಂಧುವು ಉದ್ಘೋಷಿಸುವ ಮೊದಲು ಅದು ತನ್ನ ಆಂತರಂಗವನ್ನೇ ತುಸು ಪರೀಕ್ಷಿಸಿಕೊಂಡಿದ್ದರೆ ಒಳ್ಳೆದಿತ್ತು. ಈ ಋಣತತ್ವದಲ್ಲಿ ಎಷ್ಟರ ಮಟ್ಟಿನ ಹುರುಳಿರುವುದೆಂಬುದನ್ನು ಕಂಡುಕೊಳ್ಳಲು ಹೆಚ್ಚಿನ ವಿಚಾರವೇನೂ ಬೇಡ. ಆಚರಣೆ, ವ್ಯವಹಾರ್ಯತೆಯ ಗೊಡೆವೆಯೇ ಇಲ್ಲದೆ ಸಾರಿಬಿಡುವಂತಹ ಸಾಲಿಗೆ ಸೇರಿದ ತತ್ವಜೋಪೆಯದು. ಸಂಕುಚಿತ ಜಾತೀಯವಾಗಿದ್ದುದನ್ನು ವ್ಯಾಪಕ ಸರ್ವ ಜಾತೀಯವಾಗಿಯೂ, ಮಂದ ಗಾಮಿಯಾಗಿದ್ದುದನ್ನು ಉಗ್ರರಾಷ್ಟ್ರೀಯವಾಗಿಯೂ ನವಯುಗವನ್ನು ಮಾರ್ಪಡಿಸಿದ ಸಹಜವಾದ ಹೆಮ್ಮೆ ನಮ್ಮದು.

ವಿಚಾರಪ್ರೇರಿತ ರಾಷ್ಟ್ರೀಯತ್ವದ ಪ್ರತಿಪಾದನೆಯ ಆದರ್ಶವನ್ನು ಕಟ್ಟಿಕೊಂಡು ಒಡೆಯರ ಸಂಪಾದಕರ ಅವಸ್ಥಾ ವ್ಯತ್ಯಾಸಗಳಿಂದ ಘೋರಣೆಯಲ್ಲಾವ ವ್ಯತ್ಯಾಸವೂ ಆಗದ, ವೈಯಕ್ತಿಕ ವಿಚಾರಗಳಗೇನೇ ಎಡೆಗೊಡದ ನಮ್ಮ ಬಂಧುವು, ಆರೂನ್ ಮತ್ತು ಪ್ರಭಾಕರ ತಂಪನರ ಪ್ರತಿ ಸ್ಪರ್ಧೆಯ ಎಸಂಬ್ಲಿ ಚುನಾವಣೆಯ ಸಂದರ್ಭದ ವರ್ತನೆ, ಕಳೆದ ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ದೊಡ್ಡ ವಿಶ್ವಾಸಘಾತಕಿಗಳ ಅಭಿಪ್ರಾಯಗಳಿಗೆ ಕೊಟ್ಟ ಪ್ರಾಮುಖ್ಯತೆ, ಈ ಸಲ, ತನ್ನಿಚ್ಛೆಯ ಒಬ್ಬಿಬ್ಬರನ್ನು ಕಾಂಗ್ರೆಸಿನವರು ಆರಿಸುವಂತಿಲ್ಲೆಂದು ಸಕಾಲದಲ್ಲೇ ಟೀಕಾರಂಗಕ್ಕಿಳಿದು, ಕಾಂಗ್ರೆಸಿನ ಮೇಲಿನ ಅಲ್ಲಸಲ್ಲದ ಆರೋಪಗಳ ಕಂತೆಯಾಗಿರುವ, ಕೇವಲ ವೈಯಕ್ತಿಕ ಹಾಗೂ ಜಾತೀಯ ಸ್ವಾರ್ಥ ಸಾಧಕ ಶಲ್ಯತಂತ್ರದ ಲೇಖಾಂಕಗಳಗಿತ್ತ ಪ್ರೊತ್ಸಾಹದ ತನ್ನ ಆಂತರಂಗವನ್ನು ಚೆನ್ನಾಗಿ ಪರಿಶೋಧಿಸಿಕೊಂಡು ಅದಕ್ಕೆ ತಕ್ಕ ಪ್ರಾಯಶ್ಚಿತ್ತಮಾಡಿಕೊಂಡು ಆ ಮೇಲೆ ತತ್ವಜೋಪೆಗೆ ಹೊರಟಿದ್ದರೆ ಅದಕ್ಕೇ ನಾದರೂ ಬೆಲೆ ಬರುತ್ತಿತ್ತು.

"ಚುನಾವಣೆಯ ಕಾಲದಲ್ಲಿ ರಾಷ್ಟ್ರಸಭೆಗೆ ವಿಶ್ವಘಾತಮಾಡಿದವರು ಯಾರೇ ಆಗಿದ್ದರೂ ಅವರು ಗರ್ಹಣೀಯರು. ದೇಶ ಸೇವೆಗಾಗಿ ಒದ್ದಾಡಿ ಸೆರೆಮನೆ ಸೇರಿದವರೂ ವಿಶ್ವಾಸಘಾತಮಾಡಿದರು ಏಕೆ? ಧುರೀಣರೆನಿಸುವವರಲ್ಲಿ ಉದಾರ ಮನಸ್ಸು

ತೋರದುದರಿಂದ'' ಎಂಬೀ ನಮ್ಮ ಬಂಧು ವಿನ ವಾಕ್ಯಗಳು ಉದರ ಮನೋವೃತ್ತಿಯ ದಿಗ್ದರ್ಶನ ಮಾಡಿಕೊಡುವಂಥವಿವೆ. ಧುರೀಣರೆನಿಸುವವರಲ್ಲಿ ತಮ್ಮ ಸ್ವಾರ್ಥದೃಷ್ಟಿಗೆ ಬೇಕಾದಂತಹ ಉದಾರ ಮನಸ್ಸಿಲ್ಲದಿದ್ದರೆ ಕಾಂಗ್ರೆಸ್‌ಭಕ್ತರೆನಿಸಿದವರೂ ಕಾಂಗ್ರೆಸಿಗೆ ವಿರೋಧವಾಗಿ ನಡೆದು ಅದರ ಬದ್ಧ ನಿರೋಧಿಯ ಪಕ್ಷ ಹಿಡಿಯಬಹುದೇ? ಈ ದೃಷ್ಟಿಯಿಂದ ಕಳೆದ ಡಿಸ್ಟ್ರಿಕ್ಟ್‌ಬೋರ್ಡು ಚುನಾವಣೆಯ ಸಂದರ್ಭದಲ್ಲಿ ನಮ್ಮ ಬಂಧುವು ಕೈಕೊಂಡ ಧೋರಣೆಯೂ, ಅದೂ ಅದರ ಚಾಲಕರೂ ತನ್ನ ಮಿತ್ರರು ಸಹಾಯಕರೆಂದೆಲ್ಲಾ ದಿವಾನ್ ಬಹದ್ದೂರ್ ಹೆಗ್ಡೆಯರು ಕೊಟ್ಟ ಸರ್ಟಿಫಿಕೇಟೂ ಅದಕ್ಕೆ ಭೂಷಣಪ್ರಾಯವೇ ಸರಿ.

ಹಿಂದೂದೇಶ

ಸಭಾ ಮಂಟಪ ಕಟ್ಟಲ್ಪಟ್ಟತು.

ಬೊಂಬಾಯಿಯ ಗಲಾಟೆಗೆ ಕಾರಣನಾದ ಬೈಕುಲದ ವೀರಾಂಜನೇಯ ದೇವಸ್ಥಾನದ ಸಭಾ ಮಂಟಪವು ಈಗ ಕಟ್ಟಿ ಸಂಪೂರ್ಣವಾಗಿರುವುದು. ಅದನ್ನು ಮುನಿಸಿಪಾಲಿಟಿಯ ಅಧಿಕಾರಿಗಳು ಆದರ ಮೊಕ್ತೇಸರರಿಗೆ ಸೋಮವಾರ ಒಪ್ಪಿಸುವರು. ಈ ಸಂದರ್ಭದಲ್ಲಿ ಪುನಃ ಗಲಾಟೆಯಾಗುವುದೆಂಬ ಭೀತಿಯು ಜನರಲ್ಲಿ ಹೆಚ್ಚಿರುವುದರಿಂದ ಸರಕಾರವು ಹೆಚ್ಚಿನ ಪೋಲೀಸ್ ಬಂದೋಬಸ್ತಿನ ವ್ಯವಸ್ಥೆಮಾಡಿಸಿರುವುದು. ಗಲಾಟೆಯು ನಿಂತಿರುವುದಾದರೂ ಆಲ್ಲಲ್ಲಿ ಪ್ರತಿದಿನ ಒಬ್ಬಿಬ್ಬರನ್ನು ಹಿರಿಯುವ ಅಥವಾ ಹೊಡೆದು ಹಾಕುವ ಆಕ್ಕಸ್ಮಿಕಗಳು ಈ ವರೆಗೂ ನಿಂತಿಲ್ಲ. ಒಂದೆರೆ ಒಬ್ಬ ಹಿಂದುವೇ ಇನ್ನೊಬ್ಬ ಹಿಂದುವನ್ನು ಮುಸಲ್ಮಾನನೆಂದು ಬಗೆದು ಕೊಂದುಹಾಕಿರುವನು. ಕಳೆದ ನಾರಗಂಂಂಂಮಂದಿ ರಿಮಾಂಡಿನಲ್ಲಿರಿಸಲ್ಪಟ್ಟಿದ್ದು ೬೯೦ ಮಂದಿಯ ವಿಚಾರಣೆ ನಡೆದು ರೂ. ೫ ರಿಂದ ೧೦೦೦ ವರೆಗೆ ಜುರ್ಮಾನೆ, ಪುಲ್ಮಾನೆ ತೆರಲಿದ್ದರೆ ೨೫ಕ್ಕೆ ವಿಧಿಸಲಾಗಿದೆ. ೪೦೦ ಮಂದಿ ಮೇಲೆ ಕೊಲೆಯ ಆರೋಪ ಮಾಡಲಾಗಿದೆ. ನವೆಂಬರ ತಾ. ೨೮ರಲ್ಲು ಬೊಂಬಾಯಿಯ ಖಿಲಾಫತ್ ಪತ್ರಿಕೆಯಿಂದ೬೦೦೦ ಮತ್ತು ಸ್ಟಾಂಡರ್ಡ್ ಎಂಬ ಪತ್ರಿಕೆಯಿಂದ ೧೫೦೦ ರೂಪಾಯಿಗಳನ್ನು ಸರಕಾರದವರು ಜಾಮೀನುಕೇಳಿರುವರು

ಪಂಡಿತ ಜವ್ಹಾರಲಾಲ ನೆಹರುಗಳು

ಈಗ ಸಂಯುಕ್ತ ಪ್ರಾಂತದಲ್ಲಿ ನವೆಂಬರ ತಾ. ೨೮ರಿಂದ ಇದೇ ತಾ. ೧೫ ವರೆಗೆ ಸಂಚರಿಸುವರು. ಅವರು ಮೋಟರ್ ಕಾರಿನಲ್ಲಿ ದಿನಪೊಂದರ ೧೫೦ ಮೈಲುಗಳಂತೆ ಸಂಚರಿಸಿ ಐದಾರು ಸ್ಥಳಗಳನ್ನು ಸಂಪರ್ಶಿಸಿ ಹತ್ತು ಹನ್ನೆರಡಂತೆ ಭಾಷಣಮಾಡುತ್ತಿರುವರು. ಆವರು ನವಂಬರ ತಾ. ೨೯ರಲ್ಲು ಕೊಯ್ಮತ್ತೂರಿಗೆ ಹೋಗಿಕೆಯಲ್ಲಿ, ತಾವು ಪ್ರೈಸೆಂಟಾಗಿ ಆರಿಸಲ್ಪಟ್ಟಿರುವ ಕ್ಷಣ ಸಮಂತಾಮದವನ್ನು ಕಾಂಗ್ರೆಸಿನ ಪ್ರತಿನಿಧಿಗಳು ಸಮರ್ಥಿಸದಂತಾಗುವುದೆಂಬ, ಇಲ್ಲವೆ ಮಂತ್ರಿಪದವಿ ಸ್ವೀಕಾರಕ್ಕೆ ವಿರುದ್ಧವಾಗಿ ಓಟು ಹೊರತಾಗಿಯೂ ಮಂತ್ರಿಪದವಿ ತಾನೆನಿಸುವುದರಲ್ಲಿ ಆರ್ಥವಿಲ್ಲೆಂದು ಸ್ಪಷ್ಟಪಡಿಸಿರುವರು.

ಹೇಶಾವರಕ್ಕೆ ಮುಖ್ಯಂಡರ ಸಂದರ್ಶನ

ನವಂಬರ ತಾ. ೨೮ರಲ್ಲು ಸರ್ದಾರ್ ವಲ್ಲಭಾಯಿ ಪಟೇಲ್ ಮತ್ತು ಶ್ರೀ ಘೂಲಭಾಯಿ ದೇಸಾಯಿಯವರು ಪೇಶಾವರವನ್ನು ಸಂದರ್ಶಿಸಿ ಡಾ. ಖಾನರ ಆಸ್ಪತ್ರೆಯಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಭಾಷಣಗಳನ್ನಿತ್ತರು. ಈ ಸಂದರ್ಭದಲ್ಲಿ ರಿಪೋರ್ಟ್ ಬಂಗಡಿಗರು ಮಾತ್ರವಲ್ಲದೆ ಇತರ ಪ್ರೇಮಿಯ ಮಹಾನೀಯರೂ ಹಾಜರಿದ್ದರು; ಇಬ್ಬರು ಮುಖಂಡರಿಗೂ ಗಡಿನಾಡಿನ ಜನತೆಯ ಪರವಾಗಿ ಮಾನಪತ್ರವನ್ನರ್ಪಿಸಲಾಯಿತು; ಕಾಂಗ್ರೆಸ್ ಮುಖಂಡರನ್ನು ಗಡಿನಾಡಿಗೆ ಸರಕಾರವು ಪ್ರವೇಶಿಸ ಬಿಟ್ಟುದೆಂದರೆ ಇದೇ ಪ್ರಥಮವಾಗಿ ಈ ನೊದಲು ಗಾಂಧೀಜಿಯವನ್ನು ಕೂಡಾ ಪ್ರವೇಶಿಸ ಬಿಟ್ಟಿದ್ದಿಲ್ಲ

ವಿದೇಶ

ಅತ್ಯಂತ ಪ್ರಬಲ ನೌಕೆ

ಜಾಪಾನು ಮತ್ತು ಜರ್ಮನಿಗಳು ರಸ್ಯವ ವಿರೋಧವಾಗಿ ಒಪ್ಪಂದ ಮಾಡಿಕೊಂಡಿರುವುದರಿಂದ ರಸ್ಯವು ತೀವ್ರವಾಗಿ ಯುದ್ಧ ನೌಕೆಯನ್ನು ಕಟ್ಟಬೇಕಾಗಿದೆಯೆಂದು, ರಸ್ಯದ ನೌಕಾ ಸೇನೆಯ ಮುಖ್ಯ ನಾಯಕರಾದ ಎಡ್ಮಿರಲ್ ಒರ್ಲೊಫ್‌ರು ನವೆಂಬರ ತಾ. ೨೮ರಲ್ಲು ವ್ಯಕ್ತ ಪಡಿಸಿರುವರು ರಸ್ಯದ ನೌಕಾ ಸೇನೆಯು ಇಂದು, ರಸ್ಯದ ಮೇಲೆರಿ ಬರುವ ವೈರಿಯನ್ನು ನಿರ್ನಾಮಗೊಳಿಸುವಷ್ಟು ಪ್ರಬಲವಾಗಿರುವುದಂತೆ. ರಸ್ಯದ ವಿದೇಶ ಮಂತ್ರಿಗಳಾದ ಎಮ್. ಲಿಟ್ವಿನೋಫರು, ಇಜೆಲಿ, ಚಾಜಾನು, ಮತ್ತು ಜರ್ಮನಿಗೆರು ರಸ್ಯದ ವಿರೋಧವಾಗಿ ನಡಿಸುವ ಸೂತ್ರ ಚಾಲನೆಯನ್ನು ಖಂಡಿಸಿ, ರಸ್ಯದ ಸೇನೆಯು ಏಕಾಕಿಯಾಗಿ, ಒಬ್ಬ ವೈರಿಯನ್ನಾಗಲಿ, ವೈರಿಗಳ ಸಮೂಹವನ್ನಾಗಲಿ ಇದಿರಿಸುವಸ್ಟರ ಶಕ್ತಿಯುಳ್ಳದಾಗಿರುವುದೆಂದು ಹೇಳಿರುವರು.

ಉಡುಪಿ

ತಾಲೂಕು ಕೊಂಗ್ರೆಸ್ ಕಮಿಟಿಯ ವಾರ್ಷಿಕ ಮಹಾ ಸಭೆ:

ತಾ 29-11-36ನೇ ಸಂಜೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಶ್ರೀಯುತ ಸಿ. ಎ. ಪೈಯವರ ಅಸ್ಯಕ್ಷತೆಯಲ್ಲಿ ನೆರೆಯಿತು. ಕಾರ್ಯದರ್ಶಿಯವರು ಗತವರುಷದ ವರದಿಯನ್ನೊಪ್ಪಿಸಿ ಹೇಳಿ ಅದು ಸರ್ವಾನುಮತದಿಂದ ಮಂಜೂರಾಯಿತು ಕು. ಶ್ರೀ. ಪಿ. ಮಂಜುನಾಥ ನಾಯಕರು ಅಧ್ಯಕ್ಷ, ಶ್ರೀ ಎಮ್. ವಿಟ್ಠಲ ಹೆಗ್ಡೆಯರು ಕಾರ್ಯದರ್ಶಿ. ಶ್ರೀ. ಬಾಳ್ಕಟ್ಟ ಕೃಷ್ಣಯ್ಯ ಹೆಗ್ಡೆಯರು ಖಜಾನ್ದಾರರಾಗಿ ಆರಿಸಲ್ಪಟ್ಟರು. ಮೀಟಿಂಗ ತರಲ್ಲದೆ, ಶ್ರೀಗಳಾದ ', ಲಕ್ಷ್ಮಿನಾರಾಯಣ ನಾಯಕ್ ಕೆ. ವ್ಯಾಸಾಚಾರ್, ಬಿ. ಸದಾಶಿವ ಹೆಗ್ಡೆ. ಯು. ನಾಗಪ್ಪ ಕಾಮತ್, ಟಿ. ರಮೋನಾಥ ಪೈ. ಕೆ ಶ್ರೀನಿವಾಸ ಪೈ. ಮತ್ತು ಶ್ರೀಮತಿ ಮನೋರಮಾ ಬಾಯಿಯವರು ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಚುನಾಯಿಸಲ್ಪಟ್ಟರು. ಜಿಲ್ಲಾ ಕೊಂಗ್ರೆಸ್ ಕಮಿಟಿಗೆ ಶ್ರೀಯುತರಾದ ಪಿ. ಲಕ್ಷ್ಮಿನಾರಾಯಣ ನಾಯಕ್, ಬಿ ಸದಾಶಿವ ಹೆಗ್ಡೆ, ಎಲ್. ಎಸ್. ನಾಯಕ್, ಪಿ. ಎ ಸೈಯದರ ಚುನಾವಣೆಯಾಗಿ, ಮುಂದಿನ ಕಾರ್ಯ ಕ್ರಮವನ್ನು ನಿರ್ಧರಿಸುವ ಅಧಿಕಾರವನ್ನು ನಾರ್ಯಕಾರಿ ಮಂಡಳಿಗೆ ಕೊಡಲಾಯಿತು ಕಾರ್ಯದರ್ಶಿಯವರ ಧನ್ಯವಾದದೊಡನೆ ಸಭಾಂತ್ಯವಾಯಿತು.

ಭಾಷಣ—ಕಳೆದ ತಾ 28-11-36ರಲ್ಲಿ ಇಲ್ಲಿಯ ಹೆಮ್ಮಕ್ಕಳ ಟ್ರೈನಿಂಗ್ ಶಾಲೆಯಲ್ಲಿ ಜರ್ನಾ ಜಡ್ಜರ ಪತ್ನಿ ಬೇಗಮ್ ಅಮೀರುದ್ದೀನರು 'ಆಧುನಿಕ ಕಾಲ'ದ ಕುರಿತು ಬೋಧಪ್ರದ ಭಾಷಣವನ್ನು ಇಂಗ್ಲಿಷಿನಲ್ಲಿತ್ತರು ಶ್ರೀಮತಿ ಸುನೋರಮಾ ಬಾಯಿಯವರು ಭಾಷಣ ಕರ್ತರ ಪರಿಚಯ ಮಾಡಿಕೊಟ್ಟರು.

ಸ್ಕೌಟು ರೇಲಿ—ಇಡೀ ತಾಲೂಕಿನ ಸ್ಕೌಟುಗಳ ರೇಲಿಯು ಕಳೆದ ತಾ 28-11-36 ರಲ್ಲಿ ಅಜ್ಜರಕಾಡಿನ ಮೈದಾನದಲ್ಲಿ ಜರಗಿತು. ರಾತ್ರಿ ಶಿಬಿರಾಗ್ನಿಯ ಪ್ರದರ್ಶನವಿತ್ತು.

ವಿರೋಧ—ಸೈದಿಕ ಧರ್ಮವೀರೆ ಮಹಾಸಭೆಯ ನಡೆಯಿಂದ ಎರಡು ಸಾರ್ವಜನಿಕ ಸಭೆಗಳು ಕಳೆದ ತಾ 27 ಮತ್ತು 28ರಲ್ಲಿ ರಥಬೀದಿಯಲ್ಲಿ ಶ್ರೀ. ಶ್ರೀಪಾದಪಾನ ಹಂಜೆಯವರ ಅಧ್ಯಕ್ಷತೆಯಲ್ಲಿ ತಿರುವಾಂಕೂರು ಮಹಾರಾಜರು ಅಸ್ಪೃಶ್ಯರಿಗೆ ದೇವಾಲಯ ಪ್ರವೇಶ ಪನ್ನಿಸಿದುದನ್ನು ನಿಷೇಧಿಸುವದಕ್ಕಾಗಿ ಸೇರಿದವು. ಹಲವು ಸನಾತನಿಗಳು ಭಾಷಣವಿತ್ತರು.

ಉಷ್ಟಕಲಿಧಪ—ನಾಡಿಕೆಯಂತೆ ಉಡುಪಿ ಶ್ರೀಕೃಷ್ಣ ದೇವಸ್ಥಾನದ ಲಕ್ಷದೀಪ ಮಹೋತ್ಸವವು ಕಳೆದ ತಾ 26, 27, 28ರಲ್ಲಿ ಜರಗಿತು. ಶ್ರೀ ವೆಂಕಟ್ರಮಣ ದೇವಸ್ಥಾನ ದೀಪೋತ್ಸವವು ಕಳೆದ ತಾ30ರಲ್ಲಿ ಜರಗಿತು.

'ಕಲ್ಯಾಣಪುರ ಶುಗರ್ ಮಿಲ್ಸ್ ಲಿಮಿಟೆಡ್', ಇವರ ನೈಕ್ಷರಿಯನ್ನು ತೆರೆಯೋಣ ಸಮಾರಂಭವು ಇದೇ ತಿಂಗಳ ತಾ. ೨೬ನೇ ಶನಿವಾರ ಸಂಜೆ ೬ ಘಂಟೆಗೆ ದ. ಕನ್ನಡ ಜಿಲ್ಲಾ ಕಲೆಕ್ಟರರಾದ ಮಿ. ಎ. ಡಿ. ಕ್ಯೂಂಬೇ ಸಿ. ಐ. ಇ. ಐ. ಸಿ. ಎಸ್., ಇವರಿಂದ ಜರಗಿಸಲ್ಪಡುವುದು.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್—ಇದರ ಶಾಖೆ

ಯೊಂದು ತಾ 3-12-36ನೇ ಬೆಳಿಗ್ಗೆ 7-44ಕ್ಕೆ ಪ್ರೊದ್ಘಾಟಿಸಲ್ಪಡಿ ಶ್ರೀ. ಎ. ಪರಶುರಾಮರಾವ್ ಗುರು, ಪ್ಲೀಡರ ಆಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು.

ಕ್ರಿಕೆಟ್ ಸ್ಪರ್ಧೆ—ಇಲ್ಲಿಯ ವೈ. ಎಮ್. ಸಿ. ಏ ಮತ್ತು ಉಡುಪಿ ಟೀಮುಗಳ ನಡುವೆ ಕಳೆದ ತಾ 27-11-36ರಲ್ಲಿ ಅಜ್ಜರ ಕಾಡಿನಲ್ಲಿ ಕ್ರಿಕೆಟ್ ಮ್ಯಾಚು ನಡೆದು ಕೊಡಲಿನವರು ಜಯ ಶೀಲಂಗಿರುವರು. ಪ್ರಥಮ ಕಮಿಟಿಯವರು ನಿಶ್ಚಿತ ವೇಳೆಗೆ ಪರಿಯಾಗಿ ನೋಟೀಸು ಕೊಡಲಿಲ್ಲವಾದುದರಿಂದ ಇತರ ಟೀಮುಗಳಿಗೆ ಬರಲಾಗಲಿಲ್ಲವೆಂಬರ್ಥದ ಪತ್ರವೊಂದು ನಮ್ಮ ಬಳಗೆ ಬಂದಿರುವದು.

ಪ್ರತಿನಿಧಿಗಳು—ಫೈಜಪುರ ಕೊಂಗ್ರೆಸ್ಸಿನ ಪ್ರತಿನಿಧಿ ಹಾಗೂ ಕೆ. ಪ್ರಾಂ. ಕಾಂ. ಕಮಿಟಿಯ ಮೆಂಬರರಾಗಿ ಉಡುಪಿ ತಾಲೂಕಿನ ಶ್ರೀಯುತರಾದ ಪಿ. ಮಂಜುನಾಥ ನಾಯಕ್, ಕೆ. ಕೆ. ಶೆಟ್ಟಿ, ಬಿ. ಕೃಷ್ಣಜ್ಜು ಹೆಗ್ಡೆ, ಕೆ. ಶ್ರೀನಿವಾಸ ಪೈ, ಎಮ್. ವಿಠ್ಠಲ ಹೆಗ್ಡೆಯರು ಚುನಾಯಿಸಲ್ಪಟ್ಟಿದ್ದಾರೆ.

ಶ್ರೀ. ಪಿ. ಗೋಪಾಲ ನಾಯ್ಕರು ಉಡುಪಿ ಫ್ರೀ ಸ್ಕೂಲ್ ಬೆಂಚ್ ಮೆಚ್ಚೆಂಟ್ ಕೋರ್ಟಿನ ಹೊಸೆರೆ ಸ್ಟೆಕ್ಟರ್ ಮೇಜಸ್ಟ್ರೇಟರಾಗಿ ನೇಮಿಸಲ್ಪಟ್ಟಿರುವರು.

ನಿಧನ—ನಮ್ಮ ಜಿಲ್ಲೆಯ ಕೀರ್ತಿವಂತ ಸಾತ ಸ್ಥತ ಮಹಸೀಯರಾದ ಶ್ರೀ ಎಚ್. ನಾರಾಯಣ ರಾವ್, ಎಂ ಎ ಬಿಎಲು ಕೊಯಮುಜ್ಜೂರಿನಲ್ಲಿ ತಮ್ಮ ಸಂಬಂಧಿಕರ ಮನೆಯಲ್ಲಿ ಇತ್ತೀಚೆಗೆ ದಿವಂಗತರಾದುದು ಪೋಚೇನಯನಿದೆ.

ಈಗ ಬಂದ ವಾರ್ತೆ

ಕಾಂಗ್ರೆಸ್ ಪಕ್ಷದ ವಿಜಯ

ಪಶ್ಚಿಮ ತಂಜಾವೂರು ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಒಟ್ಟು 37 ಸೀಟುಗಳಲ್ಲಿ 26ನ್ನು ಕಾಂಗ್ರೆಸ್ ಪಕ್ಷದವರು ಗೆದ್ದಿರುವರು. ಪೂರ್ವ ತಂಜಾವೂರು ಜಿಲ್ಲೆಯಲ್ಲಿಯೂ ಕಾಂಗ್ರೆಸ್ ಪಕ್ಷೀಯರು ಸ್ಪಲ ಬಹು ಮತದಿಂದ ಆರಿಸಿ ಬಂದಿರುವರು.

ತಿರುವಾಂಕೂರು ಮಹಾರಾಜರ ಅಭಿನಂದನೆ. 25000 ಜನರ ಪ್ರಚಂಡ ಮೆರವಣಿಗೆ

ನವೆಂಬರ ತಾ 29ರಲ್ಲು ತಿರುವಾಂಕೂರಿನ ತಲೆಪೆನೂರು ಮೈದಾನಿನಲ್ಲಿ ಪ್ರಚಂಡ ಸಾರ್ವಜನಿಕ ಸಭೆಯು ಶ್ರೀ. ಸಿ. ರಾಜಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಕಲಾಸಾಂಕೂರು ಮಹಾರಾಜರನ್ನು ಅಭಿನಂದಿಸಿ ಅವರಿಗೆ ಮಾನಪತ್ರವೊಂದನ್ನು ಸುಂದರಮಾದ ಚಿನ್ನದ ಪೆಟ್ಟಿಗೆಯಲ್ಲಿ ಒಪ್ಪಿಸಲಾಯಿತು! ಇದನ್ನು ದಿವಾನರಾದ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರು ಮಹಾರಾಜರ ಪರವಾಗಿ ಸ್ವೀಕರಿಸಿರು; ಶ್ರೀ ಸಿ. ರಾಜಗೋಪಾಲಾಚಾರ್ಯರು ''ತಿರುವಾಂಕೂರು ಈಗ ಆಖಿಲ ಭಾರತದ ಮಾತ್ರವಲ್ಲ, ಇಡೀ ಲೋಕದ ದೃಷ್ಟಿಯನ್ನೆಳೆದಿದೆ'' ಮಹಾರಾಜರ ಮಹತ್ತಾದ ಸುಧಾರಣೆಯಿಂದ ಹಿಂದು ಧರ್ಮವು ಶುದ್ಧೀಕರಿಸಲ್ಪಟ್ಟಿದೆ. ಒಂದು ಧರ್ಮದ ಶುದ್ಧೀಕರಣದಿಂದ ಎಲ್ಲಾ ಧರ್ಮಗಳೂ ಶುದ್ಧೀಕರಿಸಲ್ಪಟ್ಟಿವೆ, ಈ ಕಾರಣದಿಂದ ತಿರುವಾಂಕೂರು ಸಂಸ್ಥಾನದ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸುವಂತೆ ಮಾಡಿರುವ ಮಹಾರಾಜರ ಆ ಚ್ಛಯು ಸ್ವಾಗತಿಸಲ್ಪಡತಕ್ಕುದ್ದಾಗಿದೆ. ತಿರುವಾಂಕೂರಿನ ತರುಣ ಮಹಾರಾಜರು ತನ್ನೀ ಕಾರ್ಯದಿಂದ ಮಹತ್ಕಾರ್ಯಗಳನ್ನು ಮಾಡಲು ನರೆತ ಕೊಡಲಿನ ಅನೆಸ್ಯವಿಲ್ಲೆಂಬುದನ್ನೂ ಸ್ಪಷ್ಟಪಡಿಸಿರುವರು; ಎಂದು ಹೇಳಿ ಮಹಾರಾಜರನ್ನು ಅಭಿನಂದಿಸಿರು; ಸಭೆಯ ನಂತರ ಸುಮಾರು 25,000 ಜನರು, ದೊಡ್ಡ ಆನೆಯೊಂದರ ಮೇಲೆ ಮಹಾರಾಜರ ಇಡಿ ಪೆಹ ಪ್ರಮಾಣದ ಚಿತ್ರವನ್ನಿಟ್ಟು ಮೆರವಣಿಗೆ ಯಿಂದ ಮಹಾರಾಜರ ಜಯ ಘೋಷವೆ ಬ್ಬಿಸುತ್ತಾ ಅರಮನೆಯೊಳಗಿಂದ ಹಾದು ಹೋದರು! ಮಹಾರಾಜರು, ಮಹಾರಾಣಿಯವರೇ ಮೊದಲಾದವರು ಅರಮನೆಯ ಮುಖಿದಲ್ಲಿ ನಿಂತು ಮೆರವಣಿಗೆಯನ್ನು ನೋಡುತ್ತಿದ್ದರು! ಶ್ರೀ ಪಿ. ರಾಜಗೋಪಾಲಾಚಾರ್ಯರೂ ಮೆರವಣಿಗೆಯೊಂದಿಗ್ದು ಮಹಾರಾಜರನ್ನು ವಂದಿಸಿದರು; ಆನೇಕ ಜನರು ಮಹಾರಾಜರ ಚಿತ್ರವುಳ್ಳ ಬಾವುಟಗಳನ್ನು ಹೊತ್ತಿದ್ದರು; ಮೆರವಣಿಗೆಯು ಆರಮನೆಯ ಹೊರದ್ವಾರಕ್ಕೆ ಮುಟ್ಟಿದಾಗ ನಿಡಿ ಮದ್ದಿನ ಪ್ರದರ್ಶನ ನಡೆದು ಮೆರವಣಿಗೆಯು ಚದರಿತು; ತಾ 30ನೇ ಬೆಳಿಗ್ಗೆ ಶ್ರೀಗಳಾದ ಪಿ. ರಾಜಗೋಪಾಲಾಚಾರ್ಯರು, ಕೆ. ವೆಂಕಟರಮಣ ಸಿಳ್ಳೈ, ಮತ್ತು ಜಿ. ರಾಮಚಂದ್ರನರು 46 ಜನ ಹರಿಜನ ಹುಡುಗರೊಂದಿಗೆ ಶ್ರೀ ಪದ್ಮನಾಭ ಸ್ವಾಮಿ ದೇವಸ್ಥಾನಕ್ಕೆ ಹೋಗಿ ಆರಾಧನೆ ನಡಿಸಿದರು ಇದಾದ ಮೇಲೆ ಶ್ರೀ ಆಚಾರ್ಯರು ಮಹಾರಾಜರು ಚಿರಾಯುವಾಗುವಂತೆ ಈಶ್ವರನು ಅನುಗ್ರಹಿಸಲಿ ಇದು ತನ್ನ ಜೀವನದ ಅತ್ಯಾನಂದ ಸಮಯವೆಂದು ಹೇಳಿದರು.

ಬೊಂಬಾಯಿಯ ಪರಿಸ್ಥಿತಿ

ನನಂತರ ತಾ ೨೯ರಲ್ಲು ಒಬ್ಬ ಹಿಂದು ಮತ್ತು ೩ ಮಂದಿ ಮುಸಲ್ಮಾನರು ತಿವಿಯಲ್ಪಟ್ಟಿರುವರು. ಇವರೆಲ್ಲೊಬ್ಬನು ಹುಮಗಸ್ಥನ್ನು ಕೊಲ್ಲಲ್ಪಟ್ಟಿರುವನು! ತಾ ೩೦ರಲ್ಲು ತಿವಿಯಲ್ಪಟ್ಟಿದ್ದ ಹಿಂದು ಆ ಸ್ಪತ್ರೆಯಲ್ಲಿ ಮೃತನಾಗಿರುವನು!

ರಾವ್ ಬಹದೂರ್ ಬಿರುದು ತ್ಯಾಗ

ತಂಜಾವೂರಿನ ಶ್ರೀ ರಾಮಾನಾಥನ್ ಚೆಟ್ಟಿಯಾರರು ನವಂಬರ ತಾ ೨೮ರಲ್ಲು ತನ್ನ ರಾವ್‌ಬಹದೂರು ಬಿರುದು ತ್ಯಾಗವಾಡಿ ಕಾಂಗ್ರೆಸ್ ಪಕ್ಷಕ್ಕೆ ಸೇರಿರುವರು! ಇವರು ತಾ ೨೯ರಲ್ಲು ಒಮ್ಮತದಿಂದ ತಂಜಾವೂರು ಮುನಿಸಿವಾಲಿಟಿಯ ಚೇರ್ಮರ್‌ಮೆಸರಾಗಿ ಆರಿಸಲ್ಪಟ್ಟಿರುವರು!

ಖಾನ್ ಅಬ್ದುಲ್ ಗಾಫರ್ ಖಾನರು

ನವಂಬರ ತಾ ೧೦ರಲ್ಲು ಕಾಂಗ್ರೆಸಿನ ಜನರಲ್ ಸೆಕ್ರಿಟರಿಗಳಿಗೆ ಪತ್ರ ಬರೆದು, ಫೈಜಪುರ ಕಾಂಗ್ರೆಸಿನ ಅಧ್ಯಕ್ಷ ಪದಕ್ಕೆ ತನ್ನ ಉಮೇದ್ವಾರಿಕೆಯನ್ನು ಹಿಂತೆಗೆದಿರುವರು!

ತಾಯಿ ಮತ್ತು 3 ಮಂದಿ ಹೆಮ್ಮಕ್ಕಳ ಆತ್ಮಹತ್ಯೆ.

ತಿರುಪತಿಯ ಕೆಂಚಮಾಂಬರಪ್ಪಿ ಎಂಬವ್ಲಿ ಸುಬ್ಬಕ್ಕ ಎಂಬ ಹೆಂಗಸೊಬ್ಬರು, ತನ್ನ ೧೮ ವರ್ಷದ ಮಗಳನ್ನು ಆಕೆಯ ಭಾಕರಿಯವನಿಗೆ ಕೊಟ್ಟು ಮದುವೆಮಾಡಬೇಕೆಂದು ಹೇಳಿದ್ದಕ್ಕಾಗಿಯಲು ಗಂದನವಕ್ಕೆ ಒಪ್ಪದೆ ಇಬ್ಬರಿಗೂ ರಾತ್ರಿ ಜಗಳವಾಯಿತು. ಮಲಗಿದ್ದ ಗಂಡನು ಹೊಲಕ್ಕೆ ಹೋಗಿದ್ದಾಗ ಸುಬ್ಬಕ್ಕನು ತನ್ನ ೩ ಮಂದಿ ಹೆಮ್ಮಕ್ಕಳೊಂದಿಗೆ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರುವರು! ಸುಬ್ಬಕ್ಕನು ತನ್ನ ಜ್ಯೋರ್ವ ಮಗಳನ್ನೂ ಬಾವಿಗೆ ಹಾಕಲು ಕರೆದೊಯ್ದಿರೂ ಆಗಳನ್ನು ಬಾವಿಗೆ ದೂಡಲು ಮರೆತು ಹೋಗಿ ಅವಳು ಬದುಕಿ ನಪೆದ ಸಂಗತಿಯನ್ನೆಲ್ಲಾ ತಿಳಿಸಿರುವಳು!

ಜರ್ಮನಿಗೆ ರಾಜ್ಯಾಸಲದು

ಒಟ್ಟಿನಲ್ಲಿ ಬಲಗೈಯಂತಿರುವ ಜನರಲ್ ಗೋರಿಂಗೆರು ನವಂಬರ ತಾ. 29ರಲ್ಲು ಗೋಸ್ಲಾರ್ ಎಂಬಲ್ಲಿ ಒಕ್ಕಲಿಗರ ಸಂಘದ ಮಹಾಸಭೆಯೊಂದರಲ್ಲಿ ಭಾಷಣವಿತ್ತುಗಾಗ, ''ಜರ್ಮನಿಯು ಈಗ 1914ರಲ್ಲಿದ್ದಮ್ಟು ಬಲ ಉಳಿದಿಲ್ಲ ಆಗ ಜರ್ಮನಿಯು ಅಂಜುಪುರುಕ ರಾಷ್ಟ್ರಿಮಂಟಿನಿಂದ ಆಳಲ್ಪಟ್ಟಿತ್ತು. ಈಗ ಆದನ್ನು ಪೌರುಷವಂತರು ಆಳುತ್ತಾರೆ. 66 ಮಿಲ್ಯ ಜರ್ಮನರಿಗೆ ಆವರಿರುವ ರಾಜ್ಯವು ಬಹಳ ಚಿಕ್ಕದಾಗಿರುವುದು. ಜರ್ಮನರ ಸಂಖ್ಯೆಯು ಇನ್ನು ಬೇಗನೆ 90 ಮಿಲ್ಯವಾಗುವುದು. ಆಗತ್ಯ ಬಂದಾಗ ಜರ್ಮನಿಯು ಒಕ್ಕಲಿಗರು ತಮ್ಮ ನೇಗಿಲನ್ನು ಹಿಡಿದಷ್ಟು ಬಲವಾದ ಮುಷ್ಟಿಯಿಂದ ಬಿಚ್ಚಿಸಿಡಿಯಬಲ್ಲರೆಂದು ನನಗೆ ದೃಢ ವಿಶ್ವಾಸ'' ಎಂದರು.

ಜರ್ಮನಿಗೆ ರಸ್ಯದ ಎಚ್ಚರಿಕೆ

''ಈ ವರ್ಷ ರಸ್ಯವಲ್ಲಿ 100,000 ಮಂದಿ ಸೈನಿಕ ವೈಮಾನಿಕರು ತಿದ್ಧಪಡಿಸಲ್ಪಟ್ಟಿರುವರು. ರಸ್ಯದ ವೈಮಾನಿಕ ಸೇನೆಯು ಯೋಗ್ಯತೆಯಲ್ಲಿಯೂ ಪ್ರಮಾಣದಲ್ಲಿಯೂ ಲೋಕದಲ್ಲಿ ಅತ್ಯಂತ ವ್ಯಲಭಾಪುವಾಗಿರುವುದು. ಯುದ್ಧ ವಿಮಾನಗಳು ಕಳೆದ ವರ್ಷದಿಂದ ಎಡತಪಸ್ಟು ಹೆಚ್ಚಿರುವವು. ಘಂಟೆಗೆ 360 ಮೈಲು ಹಾರಿ ವಿಮಾನಗಳನ್ನು ನಾಶಮಾಡುವ ಯುದ್ಧ ವಿಮಾನಗಳು ನಮ್ಮಲ್ಲಿ ಸೂಚಾರಿವೆ. 10 ನಿಮಿಷದಲ್ಲಿ ಗ

ದಕ್ಷಿಣ ಕನ್ನಡ.

ಮೂಲ್ಕಿ

ಸ್ಥಳೀಯ ಸಂಸ್ಥೆಗಳ ಉಪಾಧ್ಯಾಯರ ಸಾಮಾನ್ಯ ಮಾಸಿಕ ಸಭೆಯು ಇದೇ ಕಳೆದ ತಾ. ೨೧-೧೧-೩೬ನೇ ಶನಿವಾರ ಅಪರಾಹ್ನ ಘಂಟೆ ೨-೩೦ಕ್ಕೆ ಕೊಲ್ಕಾಡಿ ನಿರ್ವಾಹ್ಯಪ್ರಚಾರಿಣೀ ಹಾಯರ್ ಎಲಿಮೆಂಟರೀ ಶಾಲೆಯಲ್ಲಿ ಕೂಡಿಬಂತು. ಅಂದು ಲೇಬರ್ ಶಾಲೆಯ ಮುಖ್ಯ ಉಪಾಧ್ಯಾಯ ಸು. ಎ. ಯೆಸ್. ಕ್ಲೆರರು ಸಭಾಧ್ಯಕ್ಷರಾಗಿದ್ದರು. ಶಾಲಾ ಬಾಲಕಿಯರಿಂದ ಶ್ರೀ ದೇವತಾ ಪ್ರಾರ್ಥನೆ, ಗತಸಭೆಯ ವರದಿ ಓದುವುದು, 'ಸಸ್ಯಶಾಸ್ತ್ರ' ವಿಷಯದಲ್ಲಿ ಶ್ರೀ ಕೆ. ತಿಮ್ಮಪ್ಪ ಶೆಟ್ಟಿಯವರಿಂದ ಉಚಿತ ದರ್ಜಿಗೆ ಪಾಠ, 'ವಾಚನಾಭಿರುಚಿಯನ್ನು ಬೆಳೆಸುವ ಅಗತ್ಯ' ಎಂಬ ವಿಷಯದ ಮೇಲೆ ಶ್ರೀ ಟಿ. ಬಾಬು ಶೆಟ್ಟಿಯವರಿಂದ ಉಪನ್ಯಾಸ, ಸಂಘದ ಲೆಕ್ಕ ಪತ್ರ ವಿಚಾರ, ಸಭಾಧ್ಯಕ್ಷರ ಭಾಷಣ, ಉಪಕಾರ ಸ್ಮರಣೆ, ಇವೇ ಆದಿಯ ನಡೆದ ಮುಖ್ಯ ಕಾರ್ಯಭಾಗಗಳು. ಮುಂದಿನ ಸಭೆಯು ಇದೇ ಬರುವ ತಾರೀಕು ೨೩-೧-೩೭ನೇ ಶನಿವಾರ ಯಥಾ ಸಮಯಕ್ಕೆ ಕವ ತಾರು ಬೋರ್ಡು ಎಲಿಮೆಂಟರೀ ಶಾಲೆಯಲ್ಲಿ ಕೂಡ ಲಿರುವುದು.

'ಮೂಲ್ಕಿ ಗ್ರೇಂಡ್ ರೇಞ್ಜ್‌ಲ್' ಮೂಲ್ಕಿ ದಕ್ಷಿಣ ಕನ್ನಡ

50 ಮತ್ತು 60ಕ್ಕಿಂತ ಹೆಚ್ಚು ಪುಸ್ತಕಗಳನ್ನು ಪಡಕೊಂಡ ಮಹನೀಯರ ಹೆಸರುಗಳು

೧ ಶ್ರೀಮತಿ ಲೀಲಾವತಿ ಬ್ಯಾಂಆನಂತಯ್ಯ 853
೨ ಮ. ರಾ. ಯಂ. ಆರ್. ಪೊಂಜ ಆವರ್ಗಳ್ 504
೩ ಡಾಕ್ಟರ್ ಯನ್. ಯು. ಅಯ್ಯಂತಾಯ ಆವರ್ಗಳ್ ಕಾರ್ಕಳ 500, ೪ ಜ್ಯೊಂಟ್ ಮೆನೆಜರ್ಸ್, ಕಂಪ್ಯಾಂಡ್ ಬುಕ್ಕಿಂಗ್ ಏಜನ್ಸಿ 500, ೫ ಸೆಕ್ಕ ಟರಿ, ಸಿ. ಪಿ. ಸಿ. ಕಂಪೆನಿ, ಮಂಗಳೂರು 480, ೬ ಮ. ರಾ. ಯಂ. ಚಂದಯ್ಯ ಶೆಟ್ಟಿ ಆವರ್ಗಳ್ 286 ೭ ಡಾಕ್ಟರ್ ಯಂ. ಆರ್. ಕಾಮತ್ ಆವರ್ಗಳ್ 225, ೮ ಆರ್. ಆರನ್ನಾ, ಎಸ್ಟ್ಯೂಯರ್, 155 ೯ ಮ. ರಾ. ವಿ. ಕೆ. ಸ್ವಭುಯಂ, ಆವರ್ಗಳ್ 150 ೧೦ ಮ. ರಾ. ನಾಗೇಶ ಎ. ಶೇಣ್ಯೈ, ಮುಂಬೈ 110 ೧೧ ವಿ. ವಿ. ಸೂರ್ಯನಾರಾಯಣ ಶೆಟ್ಟಿ ಆವರ್ಗಳ್ ರೋಬರ್ಟಸನ್ ಪೇಟೆ 100, ೧೨ ಯಂ. ಬಿ. ಇದಿನಬ್ಬ, ಎಸ್ಟ್ಯೂಯರ್ 100, ೧೩ ಮ. ರಾ. ಎ. ಯನ್. ರಾಜಗೋಪಾಲರಾವ್ ಆವರ್ಗಳ್ 70, ೧೪ ಯಂ. ಕೆ. ಎಲ್ಲಪ್ಪ ಆವರ್ಗಳ್ 65, ೧೫ ಕೆ. ಸಂಜೀವ ಪೈ ಆವರ್ಗಳ್, ಬೆಂಗಳೂರು 55, ೧೬ ಬಿ. ರಘುರಾಮರಾವ್, ಆವರ್ಗಳ್, ಸೇಲಂ, 50, ೧೭ ಟಿ. ನರಹರಿ ಶೆಣ್ಯೈ ಆವರ್ಗಳ್ 50, ೧೮ ಬೋಳ ತಿಳುರಾವು ರಾವ್, ಆವರ್ಗಳ್, ಕಲ್ಲಿಕೋಟೆ 50.

ಮಹಾಜನರು ಇನ್ನೂ ಇನ್ನೂ ಯೋಗ್ಯ ಪ್ರೋತ್ಸಾಹಕೊಟ್ಟು ಈ ಸೋಡ್ತಿ ಯನ್ನು ಯಶಸ್ಸಿಗೊಳಿಸುವಂತ ಸಹಾಯಕೊಡ್ಬು ನಡಿಸಬೇಕಾಗಿ ವಿನಂತಿ.

ಬಿ. ಭೋಜರಾಜ್,
ಕಾರ್ಯದರ್ಶಿ.

ಹಡುಬಿದ್ರೆ

ಇಲ್ಲಿಯ ಮಾಮೂಲು ಪ್ರಕಾರ ಆಗುವ ತೀಮೆಯ ಕಂಬಳವು ಇದೇ ಧಾತು ಸಂವರದ ಮಾರ್ಗಶಿರ ಶು. ೧೦ಯು ಧನುರ್ಮಾಸ (ಪೆರಾರ್ದೆ) ೮ ತಾರೀಕು 23-12-36ನೇ ಬುಧವಾರ ದಿವಸ ಜರಗುವುದು.

ಹೆಸ್ಕತ್ತೂರು

ಇಲ್ಲಿಯ ಗ್ರಾಮಸ್ಥರ ಪ್ರಯತ್ನದಿಂದಲೂ, ಮೆನೇಜರರ ಪ್ರಯತ್ನದಿಂದಲೂ ಕಳೆದ ವರ್ಷ ಓಂಕಾರೇಶ್ವರ ಶಾಲೆ ಎಂಬ ಒಂದು ಶಾಲೆಯು ಸ್ಥಾಪಿತವಾಗಿ ಗವರ್ನಮೆಂಟಿನಿಂದ ಅಂಗೀಕಾರವು ದೊರೆಯಲ್ಪಟ್ಟಿತು. ಶಾಲೆಯಲ್ಲಿ ಈಗ ಸುಮಾರು 65 ಮಂದಿ ಹುಡುಗರೂ, 3 ಮಂದಿ ಉಪಾಧ್ಯಾಯರೂ ಹಾಜರಿರುತ್ತಾರೆ. ಶಾಲೆಯು ಇದೇ ರೀತಿ ಅಭಿವೃದ್ಧಿಯಿಂದ ಇರಬೇಕಾಗಿ ಹಾರೈಕೆ.

ಓರ್ವ ಗ್ರಾಮಸ್ಥ ನಿವಾಸಿ.

ಅಂಬಾಗಿಲು ಪತ್ರ

ನಮ್ಮ ಉಡುಪಿ ತಾಲೂಕಿನ ಹೆರ್ಗರು ಗ್ರಾಮದ ಅಂಬಾಗಿಲು ಏವೆಚ್ ಎಲಿಮೆಂಟರಿ ಶಾಲೆಗೆ ಕಟ್ಟಡಾಣ ವಿಲ್ಲ. ಕಟ್ಟಡವಿಲ್ಲದಿದ್ದ ಮೇಜೆ ಆ ಶಾಲೆಯಲ್ಲಿ ಪುಡುಗರು ಇರುವುದು ಕಷ್ಟವಲ್ಲವೇ? ಇದಲಿ, ಕೆಟ್ಟೋಣವೂ ಪುಡುಗರೂ ಇಲ್ಲದಿದ್ದರೂ ಸದರೀ ಶಾಲೆಯ ಟೀಚರ್ ಮೆನೇಜರರು ಕ್ವಾಸುಗಳನ್ನು ಮರದ ನೆರಳಲ್ಲಾದರೂ ವ ಮಳಿಗೆ ನೆನೆದಾದರೂ ಜರಗಿಸಬಹುದಿತ್ತು, ಎಂದರೆ ವಿದ್ಯಾದಾನವು ದೇಶ ಸೇವೆಯಲ್ಲದೆ ಮತ್ತೇನು? ಆದು ದರಿಂದ ಸದರೀ ಟೀಚರ್ ಮೆನೇಜರವರು ಬಿಸಿಲಿಗೆ ಬೆಂದು ವ ಮಳೆಗೆ ನೆನೆದು ತನ್ನ ತನುಮನವನ್ನು ನನೆಸಿ ದೇವರ ಮೆಚ್ಚುಗೆಗೆ ಪಾತ್ರರಾಗಬಹುದಿತ್ತು. ಆದೂ ಇಲ್ಲ, ಟೀಚರ್ ಮೆನೇಜರರಾದರೂ ಗತವರ್ಷದ ವರ್ಷಾವದಿ ಪರೀಕ್ಷೆ ಮುಗಿದ ಮೇಲಾದರೂ ಒನ್ನೆ ಆ ದಾರಿಯಾಗಿ ಹೋಗಿ ಬರುವುದಾದರೂ ಬೇಡವೇ? ಆದೂ ಇಲ್ಲ, ತನ್ನ ಖಾಸಗಿ ಕೆಲಸದಲ್ಲಿ ನಿರತರಾಗಿದ್ದು ಧರ್ಮಾರ್ಥ ಗ್ರೇಂಟು ಹೊಂದುವಾಗ ಆವರೇಕೆ ಕಷ್ಟಪಡುವ ಹನ್ಯಾಸಕ್ಕೆ ಕೈಯಿಕ್ಕುವರು?

ಅಯ್ಯಾ, ನಾನು ದ್ವೇತಿಸುಯೆಯಿಂದ ಪ್ರಕಟನೆ ದೆನೆಂದು ಭಾವಿಸದಿರಿ. ನೊನ್ನೆ ತಾ. ೨೦-೧೧-೩೬ನೇ ದಿನ ಉಡ್ತಿ ರೇಂಜ್ ಶಾಲಾ ಇನ್ಸ್‌ಪೆಕ್ಟರ್ ಮ. ರಾ. ಎಂ. ಮಾರ್ಟಿಸ್ ಆವರ್ಗಳ್, ಬಿ. ಎ. ಎಲ್. ಟಿ. ಯವರು ಸದ್ರಿ ಅಂಬಾಗಿಲು ಬಡಿದ್ ಎಲಿಮೆಂಟರಿ ಶಾಲೆಯನ್ನು ಸಂದರ್ಶಿಸಹೋದಾಗ ಗತವರ್ಷದ ಶಾಲೆಯಿದ್ದ ಸ್ಥಳವು ತೀರಾ ಬಿಂಗಾದಾಗಿದ್ದು ಶಾಲೆ ಬೇರೆ ಕಡೆಗೆ ಒಯ್ದರಬಹುದೆಂದು ಊಹಿಸಿ ಮಾನ್ಯ ಡಿ. ಇನ್ಸ್‌ಪೆಕ್ಟರವರು ಹುಡುಕಿ ಹುಡುಕಿ ಸೋತು ಕೊನೆಗೆ ದಾರಿಯಲ್ಲಿ ಸಿಕ್ಕ ವರನ್ನು ಕೇಳಿ ಆಸುಪಾಸಿನಲ್ಲಿ ವಿಚಾರಿಸುತ್ತಾ ಬಂದದ್ದೂ ಗತವರ್ಷದ ವರ್ಷಾವಧಿ ಪರೀಕ್ಷೆ ಮುಗಿದ ಮೇಲೆ ಸದ್ರಿ ಟೀಚರ್ ಮೆನೇಜರರನ್ನು ನಾವ ಕಂಡುದೇ ಇಲ್ಲವೆಂದು ಪ್ರತಿ ಒಬ್ಬನೂ ಹೇಳಿದ್ದೂ ನೋಡುವಾಗ ನಮಗೆಲ್ಲಾ ವ್ಯಸನವಾಗುತ್ತದೆ. ಸೇರಿಗೂ ಇರಲಿ ಈ ವಿಷಯ ಇಲಾಖಾದಿ ಕಾರಿಗಳು ಏನು ಮಾಡಲಿಕ್ಕಿರುವರೆಂದು ನೋಡಲಿಕ್ಕೆ ದೆ.

ಮಾರನೆದಿನ ತಾ. ೨೧-೧೧-೩೬ನೇ ದಿನವೂ ಮಾನ್ಯ ಡಿ. ಇ. ರವರು ಬಜೆ ಶಾಲೆಗೆ ಸಂದರ್ಶನೆಗೆ ಅದೇ ಮಾರ್ಗವಾಗಿ ಬರುವಾಗಲೂ ಸದ್ರಿ ಶಾಲೆ ಇದ್ದ ಸ್ಥಳವನ್ನು ಹುಡುಕಿಯೂ ನಿಕ್ಕದೆ ಬಜೆ ತಿರಾದಾ ವಿಲಾಸ ಏಲೆಡ್ ಎಲಿಮೆಂಟರಿ ಶಾಲೆಯ ವರ್ಷಾವಧಿ ಪರೀಕ್ಷೆಯನ್ನು ಮುಗಿಸಿ, ಸದರೀ ಶಾಲೆಯು ಉತ್ತಮ ಸ್ಥಿತಿಯಲ್ಲಿರುವುದನ್ನು ಕಂದು ಸಂತೋಷಪಟ್ಟರು.

ಸದಾ ಶಾಲೆಗಳ ಅಭಿವೃದ್ಧಿಗೆ ಸೂಚನೆಕೊಡತಕ್ಕ ಮಾನ್ಯ ಡಿ. ಇ. ರವರು ವರ್ಷಾವದಿ ಶಾಲೆಯತ್ತ ಕವ ಸೋರೆ ತೋರಿಸದೆ ಧರ್ಮಾರ್ಥ ಗ್ರೇಂಟು ತಿನ್ನಲೇ ಕೆಂದಿರುವ ಸೋಮೂರಿ ಟೀಚರ್ ಮೆನೇಜರರ ವಿಷಯದಲ್ಲಿ ಒಂದಿನ್ನಾದರೂ ಆಸ್ಪದಕೊಡಲಾರದೆಂಬುದು ನಮ್ಮ ನಂಬಿಕೆ.

ಅಂಬಾಗಿಲು ಗ್ರಾಮಸ್ಥರಲ್ಲೊಬ್ಬ.

ಶ್ರೀ ಮುಕಾಂಬಿಕಾ ಕ್ಷೇತ್ರ ಕೊಲ್ಲೂರು ಕುಂದಾಪುರ

ಇಲ್ಲಿಗೆ ಯಾತ್ರಾರ್ಥಿಯಾಗಿ ದಂಪತಿಯುಕ್ತರಾಗಿ ಬಂದಿರುವ ಕಾಸರಗೋಡು ತಾಲೂಕು ಮಂಜೇಶ್ವರ ಬಾಕ್ರಪೈಲು ಶ್ರೀಮಂತ ಮನೆತನಕ್ಕೆ ಸೇರಿದ ಯಮುನೆಮ್ಮ ಎಂಬವರು ಇದೇ ನವಂಬರ ತಾ. 4 ರಿಂದ 18 ರವರೆಗೆ ಇಲ್ಲಿಯ ಸೌಪರ್ಣಿ ಎಂಬ ನದಿಯಲ್ಲಿ ಸ್ನಾನ ಮಾಡಿ ಹತ್ತಿರದ ಕಾಡಿನಲ್ಲಿರುವ ಗರುಡ ಗುಹೆಯಲ್ಲಿ ಆಹೋ ರಾತ್ರಿಯಲ್ಲಿಯೂ ದೇವಿಯ ಧ್ಯಾನಾಸಕ್ತರಾಗಿ, ಏನೊಂದೂ ಆಹಾರತಿನ್ನದೆ, ಮೌನ ಮತ್ತು ಉಪವಾಸ ವ್ರತವನ್ನೇ ಕೈಕೊಂಡು, ಶ್ರೀ ದೇವಿಯ ಪ್ರೀತಿಗೆ ಪಾತ್ರರಾಗಿ ತಾ. 19-1 -3೭ರಲ್ಲು ಶ್ರೀ ಮುಕಾಂಬಿಕ ದೇವಸ್ಥಾನದಲ್ಲಿ ಸಮಸ್ತ ಬ್ರಾಹ್ಮಣರಿಗೂ, ಇತರ ಬಡಬಗ್ಗರಿಗೂ ಮೃಷ್ಟಾನ್ನ ಭೋಜನ ಗಳಿಂದಲೂ ದಕ್ಷಿಣೆಗಳಿಂದಲೂ ತೃಪ್ತಿಪಡಿಸಿ, ಈ ದಿನ ಮಧ್ಯಾಹ್ನವೇ ಶ್ರೀಕೃಷ್ಣನ ದರ್ಶನಕ್ಕಾಗಿ ರಜತಪೀಠಕ್ಕೆ ಪ್ರಯಾಣ ಬೆಳೆಸಿರುವರು.

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ !
ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳ್ತೆಯೊಳಗಿರುವ
"ಇಡ್ಯ ವಿದ್ಯಾದಾಯಿನೀ ಶಾಲೆ" ಮತ್ತು
ಹೊಸದಾಗಿ ಸ್ಥಾಪಿಸಲಿರುವ 'ಅನಾಥಾಲಯ'
ಇವುಗಳ ಸಹಾಯಾರ್ಥವಾಗಿ ನಿರ್ಮಿಸಿರುವ
ಗ್ರಾಮ್ಯಂಡ್ ವಿದ್ಯಾದಾಯಿನೀ ಸೋಡ್ತಿ
ತೆಗೆಯುವ ತಾರೀಕು: 17-1-1937.
ಸೋಡ್ತಿಯ ಮೊಬಲಗು ರೂ. 50,000.
1ನೇ ಇನಾಂ 8,000, 2ನೇ ಇನಾಂ 2,000
ಜುಮ್ಲಾ ಇನಾಮು 1,000 ಇನಾಮುಗಳ ಜುಮ್ಲಾ ಮೌಲ್ಯ 20,125
-:- ಟಿಕೇಟು 1ರ ನಾಲ್ಕಾಣೆ ಮಾತ್ರ -:-
20 ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ 4—0—0. ಎರಡು ಪುಸ್ತಕಗಳ ಬೆಲೆ ರೂ. 7—8—0. ಸೈಕಲ್ ಬಹುಮಾನಗಳೂ ಇವೆ.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು.
ಮೆನೇಜರ್: ಗ್ರಾಮ್ಯಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

From

M. R. Ry. K. Vittal Shetty
Avl.,
MEMBER, DISTRICT BOARD,
MANGALORE

To

The President,
DISTRICT BOARD,
South Kanara,
MANGALORE.

Sirs,

I am enclosing herein a resolution, which I intend moving at the next meeting of the Board.

You will please remember that at the last meeting, questions were asked as to the dates on which the annual road maintainance tenders were called and disposed off during the last three years, and the answers showed that in the years 1934-35 and 1935-36, the tenders were called in December and disposed off by the third week of January. Only this year, they were delayed during the Collector-President's regime. To the question, when the tenders for the year 1937-38 would be called and disposed off there was no definite reply from you and for a supplimentary question from the undersigned as to whether the President would expedite and dispose off the tenders for 1937-38 by the middle of January 1937, you will not give any assurance about the same. This has given rise to a reasonable apprehension that the annual road maintainance tenders for 1937-38 are being purposely delayed, on account of provincial elections. It is desirable that tenders should be settled early so that Contractors may collect metal and begin work in right time, so that the efficiency of road work may not suffer. The delay in the disposal of tenders is also undesirable, in view of the coming elections. I have therefore given notice of the following resolution which I propose to move at the next meeting of the Board. I hope you will take early action in the matter and avoid the necessity of my moving this resolution at the next meeting of the Board.

RESOLUTION

"This Board resolves that the road maintainance tenders for 1937-38 should be disposed off by the President, District Board, before the end of January 1937 and that every year the annual road maintainance tenders should be disposed off by the end of January i.e. two clear months preceding the year for which the annual road maintainance tenders are called."

I have the honour to be,
Sir,
Your most obedient servant,
Vittal Shetty
Member, District Board, South Kanara.

(ಶುಟಿ ೪ರಿಂದ)

ಡ್ಯೂರ್ ಡಾ॥ ಎ. ಬಿ. ರಾಮರಾವ್. ಬಿ. ಏ. ಎಂ. ಡಿ. ಅಧ್ಯಕ್ಷರು (೩) ಶ್ರೀ॥ ಪಿ. ಸುಬ್ಬರಾಮ ಶೆಟ್ಟಿ. ಎಂ. ಎಲ್. ಸಿ. ಉಪಾಧ್ಯಕ್ಷರು. (೪) ಶ್ರೀ॥ ನಾರಾಯಣ ಗೋವಿಂದ ನಾಯಕ್, ಶ್ರೀರಾಮಟಿಲ್ಕ್ ವ್ಯೂಯಿಂಗ್ ಕಾರ್ಖಾನೆಯ ಮ್ಯಾನೆಜರು ಕೋಶಾಧ್ಯಕ್ಷರು. (೫) ಶ್ರೀ ಕೆ. ಸಂಪದ್ಗಿರಿರಾವ್, ಎಂ. ಎ. ಗೌರವ ಕಾರ್ಯದರ್ಶಿಗಳು. (೬) ಶ್ರೀ ಪಂಡಿತ ಸಿದ್ಧನಾಥ ಪಂತರು ಸಂಚಾಲನ ಕಾರ್ಯದರ್ಶಿಗಳು. ಸದಸ್ಯರು.—ಶ್ರೀಮತಿಗಳಾದ (7) ಕಮಲಮ್ಮ ದಾನಪ್ಪ, ಬಿ. ಎ. (8) ಕಡಂಬಿ ದ್ವಾರಕಾ ಬಾಯಿ ವೇದಾಂತಿ (9) ಉಮಾಬಾಯಿ ಪೆಣಜೀಕರ್. ಧಾರವಾಡ. ಮತ್ತು ಶ್ರೀ॥ಗಳಾದ (10) ರಾಜಕಾರ್ಯ ಪ್ರವೀಣ ಪಿ. ಜಿ. ಡಿ. ಸೋಜಾ, ಬಿ. ಎ. ಬಿ. ಎಲ್, (11) ಡಾ॥ ಯು. ಪಿ. ನುಲ್ಕ, L. M & S. ಮಂಗಳೂರು. (12) ಪ್ರೋ॥ ಏ. ಆರ್. ಮಾಡಿಯಾ, ಬಿ. ಏ. (ಕಾಂಟಬ್) ಬಾರ್-ಎಟ್-ಲಾ. ಮೈಸೂರು. (13) ಆರ್. ಆರ್. ದಿವಾಕರ, ಎಂ. ಏ., ಎಲ್. ಎಲ್. ಬಿ. (14) ಟಿ. ಕೃಷ್ಣಮೂರ್ತಿ ಎಂ. ಏ., ಬಿ. ಎಸ್. ಸಿ. ಮೈಸೂರು. (15) ಗುಬ್ಬಿ ರಾಜಗೋಪಾಲಾಚಾರ್, ಎಂ. ಏ., ಎಲ್. ಎಲ್. ಬಿ. ತುಮಕೂರು.

ಪ್ರಚಾರಕ ಪ್ರತಿನಿಧಿಗಳು:—ಶ್ರೀ॥ಗಳಾದ ( ) ಗುರುನಾಥ ಜೋಶಿ, ಧಾರವಾಡ. (೭) ಕೃಷ್ಣಾನಂತ ಪೈ ವಿಶಾರದ, ಮಂಗಳೂರು. (೮) ಟಿ. ಬಿ. ಕೇಶವ ರಾವ್, ಬಳ್ಳಾರಿ. (೯) ಹಿರಣ್ಮಯಿ ವಿಶಾರದ, ಮೈಸೂರು (೧೦) ಎನ್ ನಾಗಪ್ಪ ಎಂ. ಏ. ಬೆಂಗಳೂರು.

ದಕ್ಷಿಣಭಾರತ ಹಿಂದೀ ಪ್ರಚಾರ ಸಭೆಯ ಪ್ರಾಂತೀಯ ಕಾರ್ಯ ವಿಭಜನೆಯ ನಯಮಾನುಸಾರವಾಗಿ ಮೈಸೂರು, ಮದ್ರಾಸ್ ಮತ್ತು ಮುಂಬಾಯಿ ಕರ್ನಾಟಕ ಜಿಲ್ಲೆಗಳ ಸಮಸ್ತ ಕಾರ್ಯಭಾರವನ್ನು ವೇಲ್ಲಂಡ ಸಭೆಯ ೧೯೩೭ನೇ ಜನವರಿಯಿಂದ ವಹಿಸಿಕೊಳ್ಳುವರು. ಪ್ರಾಂತದ ಹಿಂದೀ ಪ್ರಚಾರಕರು ಇದನ್ನು ಗಮನಿಸಬೇಕಾಗಿ ವಿನಂತಿ.

ಕರ್ನಾಟಕ ಏಕೀಕರಣ ಪರಿಷತ್ತು

ಪರಿಷತ್ತಿನ ಅಧ್ಯಕ್ಷ ಡಾಕ್ಟರ್ ಯು. ರಾಮರಾಯರ ವಿಚಾರಪೂರ್ಣ ಭಾಷಣ.

ಕನ್ನಡ ತರುಣರೆಲ್ಲರೂ ಕರ್ನಾಟಕ ಏಕೀಕರಣಕ್ಕಾಗಿ ಚಳವಳಿಸಿರಿ, ಸೋತಾ ದಿರಿ, ಉದ್ದೇಶ ಸಿದ್ಧಿಯಾಗುವನಕ ವಿರಮಿಸಬೇಡಿರಿ. ಕರ್ನಾಟಕವು ಸ್ವತಂತ್ರ ಪ್ರಾಂತನಾಗುವ ದಿನವೇ ಪ್ರತಿಯೋರ್ವ ಕನ್ನಡಿಗನ ಜೀವಮಾನದ ಅತ್ಯಭಿ ಮಾನದ ದಿನ. ಭಾಷಾನುಗುಣ ಪ್ರಾಂತರಚನೆಯ ತತ್ವವನ್ನು ಎಲ್ಲರೂ ಒಪ್ಪಿರು ತ್ತಾರೆ. ಕರ್ನಾಟಕವು ಸ್ವತಂತ್ರ ಪ್ರಾಂತವಾಗಲು ಸರ್ವ ಅನುಕೂಲತೆಗಳನ್ನು ಪಡೆದಿರುತ್ತದೆ. ಆದರೆ ಪ್ರಾಂತರಚನೆಗಿರುವ ಅಡ್ಡಿ ಯೆಂದರೆ ಆಳರಿಪರ ಚಿತ್ತವೃತ್ತಿ. ಕನ್ನಡಿಗರು ತನ್ನ ಸತ್ವವನ್ನು ಕಾಪಾಡಲು ಸೊಂಟಕಟ್ಟಿ ದ್ದೋರಾಡದಿದ್ದರೆ ಇತರ ಭಾಷೆಗಳ ಧಾಳಿಯಿಂದಲೂ ಈಗಣ ಕೃತ್ರಿಮ ಪರಿಸ್ಥಿತಿಯ ಪ್ರಭಾವದಿಂದ ಲೂ ಕನ್ನಡನಾಡ ನುಡಿಯೂ ಸಂಸ್ಕೃತಿಯೂ ಅಳಿದುಹೋಗುವ ಭೀತಿಯಿದೆ.

ಕನ್ನಡಿಗರಾದ ನಾವೆಲ್ಲಾ ವಿನಾಶದ ಸಮಾಪ ನಿಂತಿರುವೆವು. ನನ್ನ ದೃಷ್ಟಿ ಯಿಂದ ಕರ್ನಾಟಕ ಏಕೀಕರಣವೊಂದೇ ಸರ್ವರೋಗ ಪರಿಹಾರಕ ದಿವ್ಯ ಔಷಧ; ಅದೇ ಸಂಜೀವನ; ಅದೇ ಅಮೃತ; ಅದೊಂದೇ ನಮ್ಮನ್ನು ಬದುಕಿಸಬಲ್ಲುದು.

ಕನ್ನಡ ನಾಡಿನ ಸಹೋದರ ಸಹೋದರಿಯರೇ,

ಈ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಆರಿಸಿ ನನ್ನನ್ನು ಗೌರವಿಸಿದುದಕ್ಕಾಗಿ ತಮಗೆ ಹೃತ್ಪೂರ್ವಕವಾಗಿ ಕೃತಜ್ಞತೆಯನ್ನು ಸಮರ್ಪಿಸುತ್ತೇನೆ. ಈ ಪದವಿಗೆ ತರುಣರನ್ನು ಆರಿಸಬೇಕಾಗಿದ್ದಿತು. ಏಕೆಂದರೆ ಹಳೆ ಪೀಳಿಗೆಯವರಾದ ನಾವು ಕರ್ನಾಟಕದ ಏಕೀಕರಣಕ್ಕಾಗಿ ವಿಶ್ವಪ್ರಯತ್ನ ಮಾಡಿದೆವು; ಸೋತೆವು. ಕರ್ನಾಟಕದ ಏಕೀಕರಣ ಮತ್ತು ಅದರ ಪ್ರಾಂತ ನಿರ್ಮಾಣ ವೆಂಬ ಪ್ರಶ್ನೆವು ನಮ್ಮೆಲ್ಲರ ಪ್ರೀತಿಯ ವಿಷಯ. ಇದು ಮುಂದಿನ ಸಮಾಪವ ಭವಿಷ್ಯದಲ್ಲಿಯಾದರೂ ಫಲಿಸಬೇಕಾದರೆ ಈಗಿನ ಚಳವಳವನ್ನು ಬಿಡಬಾರದು ಅಲ್ಲದೆ ಉದ್ದೀಪ್ತಗೊಳಿಸಬೇಕು. ಇಂತಹ ಕಾರ್ಯಭಾರವನ್ನು ವಹಿಸುವುದಕ್ಕೆ ತರುಣರೇ ಸಮರ್ಥರು. ಪ್ರಾಂತೀಯ ಸ್ವಾತಂತ್ರ್ಯದ ಆವಿರ್ಭಾವದ ಕಾಲದಲ್ಲಿ ಸ್ವತಂತ್ರ ಕರ್ನಾಟಕ ಪ್ರಾಂತರಚನೆಯಾಗಿದ್ದು, ಹೊಸ ಪ್ರಾಂತದ ಹೊಸ ಗವರ್ನರರಿಗೆ ಸ್ವಾಗತ ಕೊಡುವುದಕ್ಕೂ ಬ್ರಿಟಿಷ ಸರಕಾರವನ್ನೂ ನಮ್ಮ ಸುವೈವನನ್ನೂ ಕೊಂಡಾಡುವುದಕ್ಕೂ ನಾವು ಕೂಡುಪ್ಪಾಗಿರುತ್ತಿದ್ದರೆ, ನಾವು ಚಳವಳ ಹೂಡುವುದಕ್ಕಾಗಿ ನೇರದಿರುತ್ತಿದ್ದರೆ, ಈ ಅಧ್ಯಕ್ಷರ ನಿಯೋಜನೆಯು ಸಂಭರ್ಭೋಚಿತವಾಗಿದ್ದಿತು. ಆದರೆ ಹೀಗಾಗಬೇಕೆಂಬುದು ದೈವ ಸಂಕಲ್ಪವಲ್ಲ. "ಬೇಕಾದುದನ್ನು ಕೇಳು; ಕೇಳಿದರೆ ದೊರೆಯುತ್ತದೆ" ಎಂಬುದು ದೈಬಲಿನ ಒಂದು ಉಕ್ತಿ. ಇಂದಿನ ಕಾಲದಲ್ಲಿ ಇದಕ್ಕೆ ತೋರುವ ಅಪವಾದಗಳೇ ಹೆಚ್ಚು. ನಾವು ಏಕೀಕರಣವು ಬೇಕೆಂದೆವು; ನಮಗೆ ಸಿಕ್ಕಲಿಲ್ಲ. ಆಂಧ್ರರು ಸ್ವತಂತ್ರ ಪ್ರಾಂತ ನಿರ್ಮಾಣಕ್ಕಾಗಿ ಆಗ್ರಹದಿಂದ ಆಂದೋಲನ ಮಾಡಿದರು. ಅವರಿಗೂ ಆ ಇಷ್ಟಾರ್ಥವು ಸಿದ್ಧಿಸಲಿಲ್ಲ. ಅವರೆ, ಅಪೇಕ್ಷಿಸದೆ, ಬೇಡದೆ ಎಂಬಂತೆ ಸಿಂಧಸ್ರಾಂತವನ್ನು ಮುಂಬಾಯಿಸರಕಾರದಿಂದ ತುಂಡರಿಸಿದರು ಪ್ರತ್ಯೇಕ ಪ್ರಾಂತವನ್ನಾಗಿ ಮಾಡಿದರು. ಒರಿಸ್ಸದ ವಿಷಯದಲ್ಲಿ ಇಷ್ಟು ಚಳವಳವೂ ಇರಲಿಲ್ಲ. ವಿರೋಧವೇ ಹೆಚ್ಚಾಗಿದ್ದಿತು. ಆದರೂ ಒರಿಸ್ಸವು ಇಂದು ಸ್ವತಂತ್ರ ಪ್ರಾಂತವಾಗಿ ವಿರಾಜಿಸುತ್ತದೆ. ತರುಣರೆಲ್ಲರೂ ಚಳವಳ ಹೂಡಿರಿ; ಹೋರಾಡಿರಿ; ಉದ್ದೇಶ ಸಿದ್ಧಿಯಾಗುವ ವರೆಗೆ ವಿರಮಿಸಬೇಡಿರಿ— ಎಂಬುದೇ ನನ್ನ ಪ್ರಾರ್ಥನೆಯಾಗಿದೆ. ನಮ್ಮೆಲ್ಲರ ಜೀವಮಾನವನ್ನೂ ರೂಪಿಸಿಕೊಂಡು ಬರುವ ದೈವಹಸ್ತವು ಅದೃಶ್ಯವಾಗಿ ಕೆಲಸಮಾಡುತ್ತಲೇ ಇದೆ. ಇನ್ನು ನಸಗುಳಿದ ಅಲ್ಪಾಯುಷ್ಯಾಲದೊಳಗೆ, ಕರ್ನಾಟಕವು ಸ್ವತಂತ್ರ ಪ್ರಾಂತವೆಂದು ಎಂದಾದರೂ ಕೇಳಿದರೆ ಅದೇ ನನ್ನ ಜೀವಮಾನವ ಅತ್ಯಂತ ಅಭಿಮಾನಾಸ್ಪದ ದಿನವೆಂದು ನಾನು ಭಾವಿಸುವೆನು.

೧ ಸಂಸ್ಕೃತಿಯ ಅಭಿವೃದ್ಧಿ

ಕರ್ನಾಟಕವು ಸ್ವತಂತ್ರ ಪ್ರಾಂತವಾಗಿ ತಲೆಯೆತ್ತಿ ನಿಲ್ಲಬೇಕು—ಎಂದು ನಾವು ಕೇಳುವುದಾದರೂ ಏಕೆ? ಮೊದಲಾಗಿ ಕನ್ನಡ ಸಂಸ್ಕೃತಿ, ಕನ್ನಡ ವಾಙ್ಮಯ ಇವುಗಳ ಸಂರಕ್ಷಣೆಯೂ ಅಭಿವೃದ್ಧಿಯೂ ಆಗಬೇಕಾದರೆ ಏಕೀಕರಣದ ಅವಶ್ಯತೆಯಿದೆ. ಇಂದು ಮೈಸೂರು, ಹೈದರಾಬಾದು, ಕೊಡಗು, ಸುದ್ರಾಸು, ಮುಂಬಯಿಗಳಲ್ಲಿ ಹರಿಹಂಚಾಗಿ ಹೋದ ನಮ್ಮ ನಾಡನ್ನು ಒಟ್ಟುಗೂಡಿಸಿ ಒಂದೇ ಆಡಳಿತದ ಅಂಕಿತಕ್ಕೆ ತಾರದೆ ಇದ್ದರೆ ಈ ಏಕೀಕರಣ ಎಂಬುವಕ್ಕೆ ಹೆಚ್ಚಿನ ಅರ್ಥವಿಲ್ಲ. ಇಂದು ಹಿಂದೂದೇಶದ ಪ್ರಾಂತಗಳು ಕೃತ್ರಿಮ ವಿಭಜನವನ್ನು ಹೊಂದಿವೆ. ಇವಕ್ಕೆ ಸಕಾರಣವಾವ ಆಧಾರವೇನೂ ಇಲ್ಲ. ಭಾಷಾ ಸಂಬಂಧಿಯಾವ ಕಾರಣವೂ ಇಲ್ಲ; ಮಾನವ ವಂಶಶಾಸ್ತ್ರವು ಇದಕ್ಕೆ ಆಧಾರಕೊಡುವುದಿಲ್ಲ. ಆಡಳಿತೆಯ ಅನುಕೂಲತೆಯಿಂದಲೂ, ಐತಿಹಾಸಿಕ ಘಟನೆಗಳಿಂದಲೂ ಸಾವಿಂದು ಹಲವು ಪ್ರಾಂತಗಳೊಳಗೆ ಚದರಿಹೋಗಿರುವೆವು. ಹಿಂದೂ ದೇಶಕ್ಕೆ ಬಂದ ಅನೇಕ ನೈಸರಾಯಿಗಳೂ, ಬ್ರಿಟಿಷ ರಾಜ್ಯ ತಂತ್ರಜ್ಞರೂ ಭಾಷಾನುಗುಣ ಪ್ರಾಂತರಚನೆಯ ತತ್ವವನ್ನು ಒಪ್ಪಿಕೊಂಡಿದ್ದಾರೆ. ಆದರೆ ಆಳುವ ಒಡೆಯರು ಮಾತ್ರ ಲಕ್ಷಿಸಲೇ ಇಲ್ಲ. ೧೯೨೦ನೇ ಇಸವಿಯಲ್ಲಿ ಕರ್ಜನ್ ನಾಷೇಬರ ಸರಕಾರವವರು ಹೀಗೆ ಬರೆದಿರುವರು:—ಹಿಂದೂದೇಶದ ಅನೇಕ ಸಮಸ್ಯೆಗಳನ್ನು ನಾವು ಬಿಡಿಸಬೇಕಾಗಿದೆ. ಹೊಸ ರೀತಿಯಲ್ಲಿ ಪ್ರಾಂತಗಳನ್ನು ವಿಭಾಗಿಸುವುದು ಅವುಗಳಲ್ಲಿ ಒಂದಾಗಿದೆ. ಇನ್ನೊಬ್ಬ ವೈಸರಾಯಿಗಳಾಗಿದ್ದ ಲಾರ್ಡ್ ಹಾರ್ಡಿಂಜರು ಹೀಗೆ ಎಂದಿದ್ದಾರೆ:-ಹಿಂದೂದೇಶದ ಪ್ರಾಂತಗಳನ್ನು ಭಾಷಾನುಗುಣವಾಗಿಯೂ, ಜನಾಂಗ ಸ್ವಭಾವಾನುಗುಣವಾಗಿಯೂ ರಚಿಸಬೇಕು. ಅಭಿವೃದ್ಧಿಯನ್ನು ಸಾಧಿಸುವುದರ ಕುರಿತು ಪ್ರಾಂತಗಳು ಪರಸ್ಪರ ಸ್ಪರ್ಧೆತೋರಿಸುವಂತೆ ಮಾಡಬೇಕು. ಕೊನೆಗೆ ಪ್ರತಿಯೊಂದೂ ಸ್ವತಂತ್ರವಾಗಿರುವಂತೆ ವ್ಯವಸ್ಥೆಮಾಡಬೇಕು. ನಾವು ಹಿಂದೀಯರಿಗೆ ಕೊಡತಕ್ಕ ಅನುಕೂಲತೆಗಳಲ್ಲಿ ಇದಕ್ಕಿಂತ ಹೆಚ್ಚಿನದೇನೂ ಇಲ್ಲ. ಹಿಂದೂದೇಶದ ರಾಜ್ಯಸೂತ್ರಗಳ ಕುರಿತು ಮೊಂಟೆಗ್ಯು-ಚೆಮ್ಸ್ಫೋರ್ಡ್ ನಾಷೇಬರು ಕೊಟ್ಟ ವರದಿಯಲ್ಲಿ ಹೀಗಿದ್ದಿತು:— ಮುಂದಿನ ರಾಜ್ಯಾಂಗ ರಚನೆಯಲ್ಲಿ ಪ್ರಾಂತ ರಚನೆಯನ್ನು ಬೇರೆ ರೀತಿಯಲ್ಲಿ ಮಾಡಬೇಕಾಗಿದೆ. ಇಂಗ್ಲೀಷು ತಿಳಿಯದವರು ಕೂಡ ರಾಜ್ಯಸೂತ್ರವಲ್ಲಿ ಎಂದರೆ ನ್ಯಾಯ ಸಭೆಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗಬೇಕು ಅಂತಹ ಪ್ರಾಂತ ವಿಭಜನೆಯಾಗಬೇಕು. ದೇಶ ಭಾಷೆಗಳೇ ಆಯಾ ಪ್ರಾಂತಗಳ ನ್ಯಾಯವಿಧಾಯಕ ಸಭೆಗಳ ಭಾಷೆಗಳಾಗಬೇಕು. ಬ್ರಿಟಿಷ ರಾಜ್ಯ ತಂತ್ರಜ್ಞರೊಳಗೆ, ಪರಿಷ್ಕೃತ ನ್ಯಾಯವಿಧಾಯಕ ಸಭೆಯ ಪ್ರಥಮ ಅಧ್ಯಕ್ಷರಾದ ಸರ್ ಫ್ರೆಡರಿಕ್ ಹ್ಯೂಟ್ ನಾಷೇಬರು ಹೀಗೆ ಅಭಿಪ್ರಾಯವನ್ನು ಕೊಟ್ಟಿದ್ದರು. 'ಹಿಂದೂದೇಶದ ರಾಷ್ಟ್ರಜೀವನದ ಏಕೀಕರಣದಲ್ಲಿ ಭಾಷೆಯು ದೊಡ್ಡ ದೊಂದು ಘಟಕವಾಗಿದೆ. ಪ್ರತಿಯೊಂದು ಪ್ರಾಂತಕ್ಕೂ ತನ್ನ ಭಾಷೆಯೆಂಬುದು ಇರಬೇಕು.' ಈಗಿನ ಪ್ರಾಂತಗಳ ಕುರಿತು ಮಾತಾಡುವಾಗ, ದ್ವಿದಳ ರಾಜ್ಯ ಪದ್ಧತಿ (Dyarchy)ನು ಜನಕರಾದ ಏಮಿಲಿಯನೆಲ್ ಕರ್ಟಿಸರು 'ಈ ಪ್ರಾಂತಗಳೆಂದರೆ ಇಂಗ್ಲೆಂಡಿನಲ್ಲಿ ರೂಢಮೂಲವಾಗಿರುವ ಸರಕಾರದ ಕೃತ್ರಿಮ ರಚನೆಗಳಾಗಿವೆ. ಪೂರ್ವದೇಶದಲ್ಲಿ ತನಗಿರುವ ದೊಡ್ಡ ಆಸ್ತಿತ ರಾಜ್ಯವನ್ನು ತುಂಡರಿಸರ ಆಳಕೆಗಳಲ್ಲಿ ವಿಭಾಗಿಸುವಂತೆ ಸರಕಾರವು ಈ ಪ್ರಾಂತಗಳನ್ನು ವಿಭಾಗಿಸಿದೆ. ಪ್ರಾಂತೀಯ ಘಟಕಗಳು ಯಾವುವು? ಅವನ್ನು ಹೇಗೆ ವಿಸರ್ಜಿಸಬೇಕು? ಎಂದು ವಿಚಾರಿಸುವ ಸನಯವೀಗ ಬಂದೊದಗಿರುವುದು. ಹೀಗೆ ಹೊಸ ವ್ಯವಸ್ಥೆಯನ್ನು ಮಾಡುವುದರಲ್ಲಿ ಮುಂದಣ ಎಷ್ಟೋ ಪೀಳಿಗೆಗಳ ಶಾಂತಿಸುಖಗಳು ಅವಲಂಬಿಸಿಕೊಂಡಿವೆ. ಹಿಂದೂನೇಶವ್ಯಾಪ್ತಿಯೊಳಗೂ ರಾಷ್ಟ್ರೀಯ ಸಂಸ್ಥೆಗಳೊಳಗೂ ಭಾಷಾನುಗುಣ ಪ್ರಾಂತರಚನೆಯ ಕುರಿತು ಏನೂ ಮತಭೇದವಿಲ್ಲ. ಹೆಚ್ಚು ಕಡಿಮೆ ಪ್ರತಿಯೊಬ್ಬ ರಾಷ್ಟ್ರ ನಭಾಧಿಪತಿಯೂ, ಕರ್ನಾಟಕದ ಹೊರಗೆ ಇರುವ ಪ್ರತಿಯೊಬ್ಬ ಧುರೀಣರೂ ಈ ಕುರಿತು ಅನುಕೂಲ ಮತವನ್ನೆ ಪ್ರಕಟಿಸಿರುವರು. ೧೯೨೦ನೆಯ ಇಸವಿಯಲ್ಲಿ ಕೈ. ವಾ. ಪಂಡಿತ ಮೋತೀಲಾಲ ನೆಹರುಗಳ ಅಧ್ಯಕ್ಷತೆಯಲ್ಲಿ ಕೂಡಿದ ಸಕಲ ಪಕ್ಷಗಳ ಸಮ್ಮೇಲನವು ಈ ತತ್ವಗಳನ್ನು ಅಂಗೀಕರಿಸಿತು; ರಾಷ್ಟ್ರ ಸಭೆಯವರು ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿಯೇ ಪರಿಗಣಿಸುತ್ತಾರೆ

(ಮುಂದುವರಿಯುವುದು)

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ.
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
ಅತ್ಯಂತ ಕಡಿಮೆ ಬೆಲೆ.

ಶ್ರೀ ಭುವನೇಂದ್ರ ಮೃತ್ಯುಂಜಯ

ಗುಡಪಿಪ್ಪಲಿ
(ಮುಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಕೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ಮೇಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಆರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ನಮ್ಮ ಪ್ರತಿನಿಧಿಗಳಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಆಸರಿಗೆ ವಿಫುಲವಾದ ಸೌಕರ್ಯಗಳಿವೆ.
ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರಕೊಳ್ಳಿರಿ.

ಕೈಗಾರಿಕೆಗಳು

(ಕಳೆದ ಸಂಚಿಕೆಯಿಂದ ಮುಂದರಿಸಿದ್ದು)

7 ಈ ಆಧಿಪತ್ಯದಲ್ಲಿರುವ ಕೈಗಾರಿಕೆಗಳಲ್ಲಿ ಕೆಲಸಕ್ಕೆ ಬೇಕಾಗಬಹುದಾದ ತಿಲ್ಪಿಗಾರರು, ಮೇಲ್ವಿಚಾರಾಧಿಕಾರಿಗಳು, ಛಾಪೆ ಮಾಡುವವರು, ಸೀಸದ ಕೆಲಸದವರು, ಇತ್ಯಾದಿ ಜನರನ್ನು ಒದಗಿಸಿಕೊಡುವದೇ ಈ ಮದ್ರಾಸಿನಲ್ಲಿರುವ ತಿಲ್ಪಿಶಾಸ್ತ್ರದ ಸರಕಾರಿ ಶಾಲೆಯ ಉದ್ದಿಶ್ಯವಾಗಿರುತ್ತದೆ. ಈ ಶಾಲೆಯಲ್ಲಿ ಈ ಕೆಳಗೆ ಹೇಳಿದ ಬೇರೆ ಬೇರೆ ವಿಷಯಗಳಲ್ಲಿ ತಿಕ್ಷಣಕೊಡುತ್ತಾರೆ.

ಮಿಕೆನಿಕಲ್ (ಯಾಂತ್ರಿಕ) ಇಂಜಿನಿಯರಿಂಗ್-5 ವರ್ಷ ಕಲಿಯುವೆಂಥಾದ್ದು. ಇಲೆಕ್ಟ್ರಿಕಲ್ (ವಿದ್ಯುಚ್ಛಕ್ತಿಯ) ಇಂಜಿನಿಯರಿಂಗ್ 4 ವರ್ಷ ತನಕ. ಛಾಪೆಮಾಡುವುದು 5 ವರ್ಷ. ಸೀಸದ ಕೆಲಸ 2 ವರ್ಷ. ವಿದ್ಯುತ್ತಿನ ತಂತಿಗಳನ್ನು ಕಟ್ಟುವದು 3 ವರ್ಷ. ಮರ, ಲೋಹ, ಸೀಸ ವ ಕಲ್ಲು ಇವುಗಳ ಕೆಲಸಮಾಡುವವರಿಗೆ ಪ್ರಯೋಜನಕ್ಕೆ ಬೀಳುವ ಯಂತ್ರ ನಕಾಶೆ ತಿಕ್ಷಣ ಪ್ರತಿಯೊಂದು ವಿಷಯ 2 ವರ್ಷ.

ಛಾಪೆಮಾಡುವವರಲ್ಲಿ ಮೂರು ತರದ ತಿಕ್ಷಣ ಕೊಡುತ್ತಾರೆ. ಒಂದರಲ್ಲಿ ಅಚ್ಚು ಮೊಳೆ ಕೂಡಿಸಿ ಪರೀಕ್ಷಾರ್ಥವಾಗಿ ಶರುವಿನ ಛಾಪೆ ಪ್ರತಿಯನ್ನು ತೆಗಿಯುವದನ್ನು ಕಲಿಸುತ್ತಾರೆ. ಎರಡನೇಯದರಲ್ಲಿ ಯಾಂತ್ರಿಕ ಕೆಲಸಮಾಡುವವರಿಗೆ ತಿಕ್ಷಣಕೊಡುತ್ತಾರೆ. ಈ ಶಾಲೆಯು ಎಷ್ಟರ ಮಟ್ಟಿಗೆ ಜನರಿಗೆ ಬೇಕಾದುದೆಂಬುದನ್ನು ಈಗ ಆದರಲ್ಲಿ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ (೧೬೦)ಯಿಂದ ನಾವು ತಿಳಿಕೊಳ್ಳಬಹುದು ಛಾಪಾ ಕೆಲಸದಲ್ಲಿಯೇ ಇದ್ದು ಅದರಲ್ಲಿ ನಿಪುಣತೆಯನ್ನು ಹೊಂದಬೇಕೆಂದು ತಿಳಿಸುವ ಉಮೇದ್ವಾರರಿಗೂ ಕೆಲಸಗಾರರಿಗೂ ಮಾತ್ರ ಈ ತಿಕ್ಷಣ ಕೊಡುವಂಥಾದ್ದು. ಈ ತಿಕ್ಷಣ ಹೊಂದಲಿಕ್ಕೆ ಕೊಂಚ ಶಾಲಾ ಫೀಸನ್ನು ತೆರಬೇಕು. ಸಹಾಯವಿಲ್ಲದೆ ಶಾಲಾಭ್ಯಾಸ ಮಾಡಲಿಕ್ಕೆ ಹಣದ ಅನುಕೂಲತೆ ಇಲ್ಲದ ಬಡ ಯೋಗ್ಯ ವಿದ್ಯಾರ್ಥಿಗಳಿಗಾಗಿ ಐದೈದು ವರ್ಷಗಳ ತನಕ ಕೊಡುವ ಹನ್ನೆರಡು ವೇತನಗಳನ್ನು ಇಟ್ಟಿರುತ್ತಾರೆ. ಇದಲ್ಲದೆ ಟೀನ ಜಾತಿಯ ವಿದ್ಯಾರ್ಥಿಗಳಿಗೆ ಲೇಬರ್‌ಕಮಿಶನರರು ಕೆಲವು ವೇತನಗಳನ್ನೂ ಕೆಲವು ಧರ್ಮಸಾಧನ ಸಂಸ್ಥೆಗಳು ಯೋಗ್ಯ ವಿದ್ಯಾರ್ಥಿಗಳಿಗೆ ಕೆಲವು ವೇತನಗಳನ್ನೂ ಕೊಡುತ್ತಾರೆ.

8 ಸರಕಾರಿ ಕೈಗಾರಿಕೆಯ ವ ಔದ್ಯೋಗಿಕ ತಿಕ್ಷಣದ ಶಾಲೆಗಳಲ್ಲಿ ಮೇರೆದ ಕೆಲಸವ ಯಾಂತ್ರಿಕ ಕೆಲಸವನ್ನು ಐದೈದು ವರ್ಷ ಕಲಿಸುತ್ತಾರೆ. ಈ ಶಾಲೆಗಳಲ್ಲಿ ತರಬೇತಿಯಾದ ನಿಪುಣರನ್ನು ಎಲ್ಲೆಲ್ಲಿಯೂ ಕೆಲಸದ ಒತ್ತೆ ಕರಸಿಕೊಳ್ಳುತ್ತಾರಲ್ಲದೆ ದಿನೇ ದಿನೇ ಅಂಥಾ ನಿಪುಣರನ್ನು ಕೆಲಸಕ್ಕೆ ಇಟ್ಟುಕೊಳ್ಳಲು ಹೆಚ್ಚಿನ ಜನರು ಅಪೇಕ್ಷೆಮಾಡುತ್ತಾರೆ. ಬಡ ಯೋಗ್ಯ ವಿದ್ಯಾರ್ಥಿಗಳಿಗೆ ಅನುಕೂಲವಾಗಬೇಕೆಂಬ ಉದ್ದಿಶ್ಯದಿಂದ ಈ ಶಾಲೆಗಳಲ್ಲಿ ಫೀಸು ವಸೂಲುಮಾಡುವುದಿಲ್ಲ ಕೈಗಾರಿಕೆ ಶಾಲೆಗಳಲ್ಲಿ ಕಲಿಯುವ ವಿದ್ಯಾರ್ಥಿಗಳಲ್ಲಿ ಪ್ರತಿ ಮೂರರಲ್ಲಿ ಒಬ್ಬರಿಗೆಂಬಂತೆ ಸರಕಾರದಿಂದ ವೇತನ ಸಿಕ್ಕುತ್ತದೆ. ಅಲ್ಲದೆ ಸ್ಥಳೀಯ ಸಂಸ್ಥೆಗಳೂ ಕೆಲವು ವೇತನಗಳನ್ನು ಕೊಡುತ್ತಾರೆ.

ಬರೆವಣ -ಬಾರ್ಕೂರು ಗಣಪಯ್ಯ ಉಡುಪ
ವ್ಯಾಸಭವನ ವಾಚನಾಲಯ, ಉಡುಪಿ

ನಲವಿನಿಂ ನವಯುಗವು ಪೆರ್ಚುವ
ಕಳೆಯ ಬೀರುತ ಜವ್ವನದ, ನಿಜ
ಕೆಳೆಯರನು ತಾನುಳಿಯೆ ಮರುಗದೆ ತಳುವದೈತಂದು
ಕಳೆದು ಕೂರತೆಯನಿಂದುವುರದೊಳು,
ಒಲಿಸಿತೈ ಜನಮನವ! ಕೀರುತಿ
ಯುಳಿಸಿ ಮೆರೆಸಲಿ ಉಡುಪಿ ಕೃಷ್ಣನು ಜನತೆಯೊಳಗೀಗ

೪ ಮದ್ರಾಸಿನಲ್ಲಿರುವ ಚರ್ಮದ ಕಸಬಿನ ಶಾಲಾ ಸಂಸ್ಥೆಯಲ್ಲಿ ಚರ್ಮದ ಕೆಲಸದವರಿಗೆ ಅವಶ್ಯಬೀಳುವ ವಿಷಯಗಳ ಕುರಿತು ಶೋಧನೆಗಳನ್ನು ನಡಿಸುತ್ತಾರೆ. ಚರ್ಮದ ಕಸಬಿಗೆ ಅಗತ್ಯವಿರುವ ವಸ್ತು ಪರೀಕ್ಷಾ ಕ್ರಮವನ್ನು ಕಲಿಸುತ್ತಾರಲ್ಲದೆ ಚರ್ಮದ ಕಸಬಿನವರಿಗೆ ಕೈಯಾರೂಪದ ತಿಕ್ಷಣವನ್ನೂ ಆಗತ್ಯವಿರುವ ಅನುಭವವನ್ನೂ ಈ ಶಾಲಾ ಸಂಸ್ಥೆಯಲ್ಲಿ ಕೊಡುತ್ತಾರೆ

10 ಕೈಗಾರಿಕೆ ಇಲಾಖೆಯವರ ಕೆಳಗೆ ಕಾರ್ಖಾನೆಗಳನ್ನಿಡುವ ವರ್ತಾಡಿನಲ್ಲಿ ಶರುವಿಗ ತಲಪೋರಿದ್ದು ಕಲಿಕೋಟೆಯಲ್ಲಿರುವ ಕೇರಳ ಸಾಬೂನು ಸಂಸ್ಥೆಯೇ ಹೀಗೆಯೇ ಬೇರೆ ಕಾರ್ಖಾನೆಗಳನ್ನಿಡಲು ಈ ತನಕ ಸಾಧ್ಯವಾಗಿಲ್ಲ. ಆದರೆ ಈ ಸಾಬೂನು ಕಾರ್ಖಾನೆಯನ್ನು ಯಾವ ಉದ್ದಿಶ್ಯದಿಂದ ಸರಕಾರದವರು ಇಟ್ಟಿದ್ದರೋ ಆ ಉದ್ದಿಶ್ಯವು ಸಫಲವಾಗಿಯದೆ. ಈ ಕಾರ್ಖಾನೆಯನ್ನು ಸರಕಾರದವರು ಇಟ್ಟಿದರ ಫಲವಾಗಿ ಈ ಆಧಿಪತ್ಯದಲ್ಲಲ್ಲಾ ಅನೇಕ ಸಾಬೂನು ಕಾರ್ಖಾನೆಗಳು ಅಲ್ಲಲ್ಲಿ ಏಳಲಿಕ್ಕೂ ಅನೇಕ ವಿದ್ಯಾರ್ಥಿಗಳಿಗೆ ಸಾಬೂನು ಮಾಡುವ ನಿಧಾನವನ್ನು ಕಲಿಯಲಿಕ್ಕೂ ಸಾಧ್ಯವಾಗಿಯದೆ. ಸಾಬೂನು ಸೂಡುವದು ವಿಲಕ್ಕೆ ಸಮ್ಮಂದಪಟ್ಟ ಇತರ ಕೈಗಾರಿಕೆಗಳ್ಲ ತಿಕ್ಷಣ ಕೊಡುವುದೇ ಕೇರಳ ಸಾಬೂನು ಸಂಸ್ಥೆಯ ಮುಖ್ಯ ಉದ್ದಿಶ್ಯವಾಗಿರುತ್ತದೆ ಅಲ್ಲಿ ತೈಲ ವ ಚರಬಿಗಳ ಕುರಿತು ಶೋಧನೆ ನಡಿಸಿ ಜನರಿಗೆ ಬೇಕಾದ ಅನುಭವಕೊಡುತ್ತಾರೆ. ಈ ಶಾಲೆಯ ಅಧಿಕಾರಿಗಳು ಶಾಲೆಯಲ್ಲಿ ಕಲಿತು ಹೊರಗೆಹೋದ ವಿದ್ಯಾರ್ಥಿಗಳೊಡನೆ ಸಂಬಂಧವನ್ನಿಟ್ಟುಕೊಂಡು ಅವರಿಗೆ ಬೇಕಾದ ಸಹಾಯ ಅನುಭವಗಳನ್ನು ಕೊಡುತ್ತಾರೆ ಅಲ್ಲಲ್ಲಿರುವ ಸಾಬೂನು ಕಾರ್ಖಾನೆಗಳನ್ನು ಸಂಪರ್ಕಿಸಿ ಆ ಕಾರ್ಖಾನೆಯ ಮ್ಯಾನೀಕರಿಗೆ ಸಾಬೂನು ವಿಧಾನದ ಕುರಿತು ಅನುಭವಕೊಟ್ಟು ಉತ್ಕೃಷ್ಟ ತರದ ಸಾಬೂನು ಮಾಡಲಿಕ್ಕೂ ಸಹಾಯವಾಗುತ್ತಾರೆ ಸಾಬೂನು ಕಾರ್ಖಾನೆಗಳ ಮ್ಯಾನೀಕರಲ್ಲಿ ಹೆಚ್ಚಿನವರು ಈ ಸಂಸ್ಥೆಯಲ್ಲಿ ತಿಕ್ಷಣ ಹೊಂದಿದವರೇ ಆಗಿರುತ್ತಾರೆ. ಈ ಸಂಸ್ಥೆಯವರು ತರಕಾರಿಗಳಿಂದ ಸಿಕ್ಕುವ ತೈಲಗಳನ್ನು ಪುಟಿಪಡಿಸಿ, ಮಿಶ್ರಮಾಡುವ ಕ್ರಮದ ಕುರಿತು ಶೋಧನೆಗಳನ್ನು ನಡೆಸಿ ತೈಲ, ಚರಬಿ ಕೈಗಾರಿಕೆಯವರಿಗೆ ಬೇಕಾದ ಅನುಭವವೆಲ್ಲಾ ಸಿಕ್ಕುವಂತೆ ಪ್ರಯತ್ನಿಸುತ್ತಾರೆ.

× × × ×

ಕೈಗಾರಿಕೆ ಇಲಾಖೆಗೆ ಸಮ್ಮಂಧಪಟ್ಟ ಶೋಧನಾ ಸಂಸ್ಥೆಗಳೇನೂ ಇಲ್ಲವಾದರೂ ಈ ಆಧಿಪತ್ಯದ ಕೈಗಾರಿಕೆಯವರಿಗೆ ಹೆಚ್ಚಿನ ಪ್ರಯೋಜನವಿರುವ ಸಂಗತಿಗಳ ಕುರಿತು ಈ ಇಲಾಖೆಯ ರಸಾಯನ ಶಾಸ್ತ್ರಜ್ಞರು ಶೋಧನೆ ನಡಿಸುತ್ತಿದ್ದಾರೆ. ತೈಲ, ಚರಬಿ, ಸಾಬೂನು ವಗೈರೆ ಪದಾರ್ಥಗಳ ಕುರಿತು ಮೇಲೆ ಬರೆದ ಕೇರಳ ಸಾಬೂನು ಸಂಸ್ಥೆಯಲ್ಲಿ ಶೋಧನೆ ನಡೆಸುತ್ತಾರೆ, ಚರ್ಮದ ವ ತೊಗಲು ಪದಮಾಡುವ ಕೈಗಾರಿಕೆಗಳ ಕುರಿತು ಮತ್ತು ಅಗತ್ಯವಿದ್ದರೆ ಬೇರೆ ಸಂಗತಿಗಳ ಕುರಿತು ಸಹಾ ಬೇಕಾದ ಶೋಧನೆಗಳನ್ನು ತೊಗಲು ಕಸಬಿನ ಸಂಸ್ಥೆಗೆ ಸನ್ಮಾನಧನಟ್ಟು ತೊಗಲು ಶೋಧನೆಯ ರಸಾಯನ ಶಾಸ್ತ್ರಜ್ಞರು ನಡಸುತ್ತಾರೆ. ಕೆಲವು ವರ್ಷಗಳಿಂದೀಚ ಬೆಂಗಳೂರಿನಲ್ಲಿರುವ ಹಿಂದೀ ವಿಜ್ಞಾನ ಸಂಸ್ಥೆಗೆ ಸರಕಾರದವರು ವರ್ಷಾವಧಿ ರೂ 5,000 ಧನ ಸಹಾಯವನ್ನು ಮಾಡುತ್ತಾರ. ಕೈಗಾರಿಕೆ ಇಲಾಖೆಯವರಿಗೆ ತಮ್ಮ ಕಾರ್ಯಬಾರದಲ್ಲಿ ಕಂಡುಬಂದ ಸಂಗತಿಗಳ ಕುರಿತು ಬೇಕಾದ ಶೋಧನೆಯನ್ನು ಸರಕಾರದವರು ಈ ವಿಜ್ಞಾನ ಸಂಸ್ಥೆಯಿಂದ ಮಾಡಿಸುತ್ತಾರೆ. ಈಚೆಗೆ ಕೆಲವು ವರ್ಷಗಳಲ್ಲಿ ಹುರಿಪಗ್ಗ ಕೈಗಾರಿಕೆಯ ಗೇರುಬೀಜ ಕೈಗಾರಿಕೆಯ ಸನ್‌ಹೆಂಪ್ ಎಂಬ ನಾರನ್ನು ಕೊಳೆಯ ಮಾಕುವ ಸೂಂಟೆಯನ್ನು ಶುದ್ಧಪಡಿಸಿ ಬೆಳ್ಳಗೆಮಾಡುವ-ಇತ್ಯಾದಿ ಕೈಗಾರಿಕೆಗಳ ವಿಷಯ ಕೈಗಾರಿಕೆ ಇಲಾಖೆಯವರು ಅನೇಕತರದ ವಿಶೇಷ ಶೋಧನೆಗಳನ್ನು ಮಾಡಿದ್ದಾರೆ ಮುಖ್ಯವಾಗಿ ಈ ಆಧಿಪತ್ಯದ ಯೋಗ್ಯ ಪ್ರದೇಶಗಳಲ್ಲಿ ಸಕ್ಕರ ಕೈಗಾರಿಕೆಯನ್ನು ಹೆಚ್ಚಿಸುವ ಕುರಿತು ಬಹಳ ಮನಸ್ಸು ಕೊಟ್ಟಿರುತ್ತಾರ. ಈ ಇಲಾಖೆಯ ಸಹಾಯದಿಂದ, ಸಲಹೆಕಾರದಿಂದ ನಡಸುವ ಆರು ಕಾರ್ಖಾನೆಗಳನ್ನು ಸ್ಥಾಪಿಸಿರುತ್ತಾರ ಈ ಆಧಿಪತ್ಯದಲ್ಲಿ ಹೀಗೆಯೇ ಬೇರೆ ಕಾರ್ಖಾನೆಗಳನ್ನು ಇಡಲು ಇನ್ನೂ ಎಡೆ ಇರುತ್ತದೆ.

(ಮದ್ರಾಸು ಸರಕಾರವರಿಂದ ಪ್ರಕಟಿಸಲ್ಪಟ್ಟಿದ್ದು)

ಬಾಲವಾಜ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾಲವಾಜ್ಮಯ
ಬೆಲೆ ೩೦
ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ

ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

ಇದರ 1936ನೇ ಸೆಪ್ಟೆಂಬರ್ ತಾ 30 ಕ್ಕೆ ಅಂತ್ಯವಾಗುವ ಒಂದು ವರುಷದ ವರದಿಯು ನಮ್ಮ ಕೈಸೇರಿದುದನ್ನು ಸಂತೋಷಪೂರ್ವಕವಾಗಿ ಸ್ವೀಕರಿಸುತ್ತೇವೆ. ವರದಿಯ ವರುಷದಲ್ಲಿ ಈ ಕಂಪೆನಿಯು ರೂ. 14,38,400ರ ಪ್ರೊಪೋಸಲುಗಳನ್ನು ಪಡೆದಿತ್ತು. ಅವುಗಳಲ್ಲಿ ರೂ 11,68,400 ರ ಪೊಲಿಸಿಗಳನ್ನು ಹಂಚಿದೆ. ವಾರ್ಷಿಕ ಉಳ್ಕನ್ನ ರೂ 53,192-7-0 ಜೀವ ವಿಮಾ ಫಂಡು ರೂ. 10,151-14-2

ಕಂಪೆನಿಯು ಹುಟ್ಟಿ ಆದುದು ಕೇವಲ ಒಂದು ವರುಷ. ಈ ಅವಧಿಯಲ್ಲಿ ಜನನ ಕಾಲದ ಎಲ್ಲಾ ಖರ್ಚನ್ನೂ ಭರ್ತಿಮಾಡಿ ಕೊಂಡುದು ಅನ್ಯಭಿನಂದನೀಯವಿದೆ. ಹೀಗೆ ಒಂದೇ ವರುಷದಲ್ಲಿ ಖರ್ಚನ್ನು ತುಂಬಿಕೊಳ್ಳಲು ಕರ್ನಾಟಕದಲ್ಲಿ ಕೆಲವೇ ಕಂಪೆನಿಗಳಿಗೆ ಸಾಧ್ಯವಾಗಿದೆ. ಕರ್ನಾಟಕದ ವೃಥನು ಶ್ರೇಣಿಯ ಬೇಂಕುಗಳಲ್ಲೊಂದಾದ ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಇದರ ಸಹಾಯದಿಂದ ಕಂಪೆನಿಯು ಅಭಿವೃದ್ಧಿಮುಖವಾಗಿದೆ ಈ ಸಂಸ್ಥೆಯ ಎಕ್ಟುನೆರಿಗಳಾದ ಪ್ರೊಪೆಸರ್ ಕೆ. ಬಿ ಸಾಧವೆ, ಎಂ. ಎ., ಎಫ್ ಆರ್. ಎ ಐ. ಎ. (ಲಂಡನ್) ಇವರು ಕಂಪೆನಿಯ ಸುಭದ್ರವಾದ ಪಹವಾಟು ಮತ್ತು ತಿಂಗಳೊಂದಕ್ಕೆ ಸರಾಸರಿ ಒಂದು ಲಕ್ಷದಷ್ಟರ ವಿಮೆಗಳಿಸಿ ಒಂದೇ ವರುಷದ ವರೆಗೆ ಆರಂಭದ ಖರ್ಚನ್ನು ತುಂಬಿಕೊಂಡ ಚಟುವಟಿಕೆಯನ್ನು ಬಹಳಮಾಗಿ ಶ್ಲಾಘಿಸಿರುವರು ಕಂಪೆನಿಯ ಮೆನೇಜಂಗ್ ಡೈರೆಕ್ಟರಾದ ಡಾ। ಟಿ. ಮಾಧವ ಪೈಗಳ ಹಾಗೂ ಅವರ ಸಹವ್ಯವಸಾಯಿಗಳ ಅತ್ಯಂತ ದಕ್ಷತೆಯ ಕಾರ್ಯಭಾರ, ಸುಲಭ ಕಂತು ಮತ್ತು ಸುಲಭ ದರದ ಪ್ರೀಮಿಯಮ್ ಮೊದಲಾದುವುಗಳಿಂದ ಈ ಸಂಸ್ಥೆಯ ಭವಿಷ್ಯವು ಬಹು ಭದ್ರವಾಗಿದೆ. ಪಾಲಿಸಿದಾರರ ಹಿತರಕ್ಷಣೆ, ಅತ್ಯಾಧುನಿಕ ರೀತಿ ನೀತಿ, ಮಿತವ್ಯಯ, ಮುಂತಾದುವು ಕಂಪೆನಿಯ ಅಭಿವೃದ್ಧಿಯ ಪಥದಲ್ಲಿ ಯಾವ ತೊಡಕನ್ನೂ ಇರಗೊಡಿಸಿಲ್ಲ ಅಂತೂ ಸರ್ವಾಂಗ ಸಮೃದ್ಧಿಯುಳ್ಳ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಜನತೆಯ ನಂಬಿಗೆ ಮತ್ತು ಪ್ರೋತ್ಸಾಹಕ್ಕೆ ಅರ್ಹವಾಗಿದೆ.

1937
ನೇ
ಇಸವಿಯ
ಡೈರಿಗಳು
ಮಾರಾಟಕ್ಕಿವೆ.
ಬೇಕಾದ ನಮೂನೆಯವು
ಬೇಕಾದ ಬೆಲೆಯವು
ಬಂದು ವಿಚಾರಿಸಿರಿ!
ನವಯುಗ ಆಫೀಸು,
ಉಡುಪಿ.

ಪ್ರೇಮ ವಿದ್ಯಾಪೀಠದ ಧ್ಯೇಯ

●

ಪಂಡಿತ ತಾರಾನಾಥರ ಭಾಷಣ.

[ಪ್ರೇಮ ವಿದ್ಯಾಪೀಠದ ವಿದ್ಯಾರ್ಥಿಯೊಬ್ಬನು ತನ್ನ ತಂದೆಯು ತನ್ನ ಸ್ನೇಲು ವೆಚ್ಚಕ್ಕೆ ತನಗೆ ಬೇಕುಬೇಕಾದಂತೆ ಹಣವನ್ನು ಕಳಿಸಲಿಕ್ಕೆ ಒಪ್ಪದೆ ಹೋದಾಗ ಆ ತಂದೆಯನ್ನು ತನ್ನ ಇಚ್ಛಾನುಸಾರ ಬಗ್ಗಿಸಬೇಕೆಂಬ ಆ ಕಾಂಕ್ಷೆಯಿಂದ "ತನಕ ಜಯವಾಗಬೇಕು. ಇಲ್ಲವಾದರೆ ಸಾಯುವ ವರೆಗೆ ಉಪವಾಸ" ಎಂಬ ಹಟದಿಂದ ಕಾಲೇಜ್ ಹೋಸ್ಟೇಲಿನಲ್ಲಿಯೇ ಇದ್ದುಕೊಂಡು ಯಾವ ಅಧಿಕಾರಿಗಳ ಅಪ್ಪಣೆಯನ್ನೂ ಪಡೆಯದೆ ಉಪವಾಸ ನಡೆಸಿಬಿಟ್ಟನು. ಆಸರೆ ೨೦ ದಿನಗಳ ಹತ್ತಿರಕ್ಕೆ ಬಂದರೂ ತಂದೆಯು ಸುತಾರಾಂ ಬಗ್ಗದೆ ಹೋಗಿರೋಣದರಿಂದ ಈ ವಿದ್ಯಾರ್ಥಿಯು ಉಪವಾಸಬಿಟ್ಟನು. ಈ ಸಮಯ ಇನ್ನೂ ಹಲವು ಕಾರಣಗಳಿಗಾಗಿ ಆತನ ಪರವಾಗಿ ಹಟ ಸಾಧಿಸುತ್ತಿದ್ದ ಪತ್ರಿಕೋದ್ಯನ್ನು ಶಾಲೆಯ ವಿದ್ಯಾರ್ಥಿಯನ್ನು ಡಿಸ್‌ಮಿಸ್ ಮಾಡಿದರು. ಮೆಡಿಕಲ್ ಕೋಲೇಜಿನ ಒಬ್ಬ ಇನ್ನೊಬ್ಬ ವಿದ್ಯಾರ್ಥಿಗೂ ಕಾಲೇಜ್ ಬಿಡಬೇಕಾಯಿತು. ಹಲಕೆಲವು ವಿದ್ಯಾರ್ಥಿಗಳಲ್ಲಿಯೂ ಸ್ವಲ್ಪ ಮನೋವೈಕಲ್ಯವು ಉಂಟಾಯಿತು ಅಂಥಾ ಸಂದರ್ಭದಲ್ಲಿ ಪಂಡಿತ ತಾರಾನಾಥರು ಅವರಿಗೆ ಕೊಟ್ಟ ಭಾಷಣದ ಸಾರಾಂಶವಿದು.]

●

ನಿಮಗೆಲ್ಲರಿಗೂ ಈ ಹೊತ್ತು ಎತಡು ಮಾತುಗಳನ್ನು ಹೇಳಬೇಕೆಂದು ಇವ್ವಿಗೆ ಕರೆದಿವ್ವೇನೆ. ಅತ್ತು ನಿಮ್ಮ ಹಿತಕ್ಕಾಗಿ, ತನ್ಮೂಲಕ ಸಂಘಹಿತಕ್ಕಾಗಿ; ದೇಶ ಹಿತಕ್ಕಾಗಿ.

ನೀವು ಅನೇಕರು ಸರಕಾರಿ ಶಾಲೆಗಳಲ್ಲಿಯೇ ಆಗಲಿ ಸಂಬಳಕ್ಕೆ ಅಧೀನರಾದ ಅಧ್ಯಾಪಕರಲ್ಲಿಯೇ ಆಗಲಿ ಎಂಟು ಹತ್ತು ವರ್ಷ ಅಭ್ಯಾಸಮಾಡಿ ಬಂದವರು. ಅಲ್ಲಿಯ ವಾತಾವರಣಕ್ಕೂ ಇಲ್ಲಿಯಪಕ್ಕೂ ಅಜಗಜಾಂತರವಿದೆ. ಇಲ್ಲಿ ನಿಮ್ಮನ್ನು ಹೆದರಿಸುವವರೂ ಇಲ್ಲ, ನಿಮ್ಮ ಬೇರು ಬೆಚ್ಚಿರಿಕೆಗಳಿಗೆ ಬಗ್ಗುವವರೂ ಇಲ್ಲ. ನೀವು ಹಿಂದೆ ಕಲಿತ ಶಾಲೆ ಕಾಲೇಜುಗಳಿಗೆ ನಿಮ್ಮನ್ನು ಬೆದರಿಸಲಿಕ್ಕೆ ಅಲ್ಲಿಯ ಅಧ್ಯಾಪಕರಿಗೆ ಸರಕಾರದ ಬೆಂಬಲವಿತ್ತು. ಅಘವಾ ಸರಕಾರಿ ಪರೀಕ್ಷೆಗಳ ಬೆಂಬಲವಾದರೂ ಇತ್ತು. ಇವರದರಿಂದ ನಿಮ್ಮನ್ನು ಗದರಿಸಬಹುದಾಗಿತ್ತು ಪಾಗೆಯೇ ನೀವು ನಿಮಗೆ ಸಾಕಷ್ಟು ಸಒಬ್ಯಬಲದೊರೆತಾಗ ಸಂಘ ಹಿಡಿದು ಅವರನ್ನು ಗದರಿಸಬಹುದಾಗಿತ್ತು. ಡಿಮೊಕ್ರೆಸಿ" ಪ್ರಜಾಸತ್ತೆಯ ಈ ದಿನಗಳಲ್ಲಿ ಗದ್ದಲ ಎಬ್ಬಿಸಿದವರನ್ನು ಗದರಿಸಿ ಬಗ್ಗಿಸುವುದು ನಿಮಗೆ ಸಾಧ್ಯ ನಿದ್ದರೂ ಇರಬಹುದು. ಅನುಕೂಲವಾದಂತೆ ನಿಮ್ಮನ್ನು ಗದರಿಸುವುದೂ ಅವರಿಗೆ ಸಾಧ್ಯವಿದ್ದಿರಬಹುದು. ಪರೀಕ್ಷಾ ಪದವಿಗಳಿಗೆ ಅವರು ಅದ್ದಕಾಲು ಹಾಕಬಹುದು ಎಂಬ ಭಯ ನಿಮಗೆ, ನಿಮ್ಮ ಚಳವಳಿಯಿಂದ ತಮ್ಮ ನೌಕರಿ ಸಂಬಳಗಳಿಗೇ ಸಂಗುನಾಮ ಎಲ್ಲಿ ಬೀಳುವುದೋ ಎಂಬ ದಿಗಿಲು ಅವರಿಗೆ. ಹೀಗೆ ಭಯ ಅನುಕೂಲತೆಗ ಸ್ಪೇ ಹೆಚ್ಚಾಗಿ ಸೋಡಿ ವರ್ತಿಸುವ ವಾತಾವರಣವನ್ನೇ ಉಸುರಿ ನೀವಿಲ್ಲಿಗೆ ಬಂದಿದ್ದೀರಿ.

ಅದನ್ನೆಲ್ಲಾ ನೀವು ಮರೆಯಬೇಕು. ಯಾಕೆಂದರೆ ನಿಮ್ಮನ್ನು ಪಚಾಯಿಸಲಿಕ್ಕೆ ಸರಕಾರಿ ಅಘವಾ ಅರ್ಧ ಸರಕಾರೀ ಪರೀಕ್ಷೆಗಳ ಅಯಿಘವು ನಮ್ಮಲ್ಲಿಲ್ಲ. ಅವನ್ನು ನಾವು ಇಚ್ಛಿಸುವುದೂ ಇಲ್ಲ. ಸಂಬಳ ನೌಕರಿ ಇವು ಹೋದಾವು ಎಂಬ ಭಯಕ್ಕೂ ಕಾರಣವಿಲ್ಲ. ಇಲ್ಲಿಯ ಅಧ್ಯಾಪಕರಿಗೆ ಇರುತ್ತದು ನೌಕರಿಯಲ್ಲಿ ದೀಕ್ಷೆ; ಸಂಬಳದ ಲಾಭವಲ್ಲ, ತಮ್ಮದೀಕ್ಷಾ ಸಾಧನೆಯ ಸಂತೋಷ ಒಂದೆ. ಇನ್ನು ನಮ್ಮಂದ ನಿಮಗೆ ಲಾಭವಾಗುವ ಸಾಧನಗಳೇ ಹೆಚ್ಚುಹೊರತು, ನಿಮ್ಮಿಂದ ನಮಗೆ ನಸ್ಟವಾಗುವ ಸಂಭವಗಳೇನೂ ಆಸ್ಟಿಲ್ಲ. ಹೀಗಿರುವಾಗ ಇಲ್ಲಿಯ ವಾತಾವರಣದಲ್ಲಿ ನೀವಲ್ಲಿ ಅಭ್ಯಸಿಸಿದ ಸಂಪುಗಳು, ಗಲಭೆಗಳು, ಕೆಲಸಕ್ಕೆ ಬಾರವು. ಇನ್ನಿ ಪ್ರೇಮವೇ ಮುಖ್ಯವು! ಇನ್ನಿ ನಾವು ಅಣ್ಣ ತಮ್ಮಂದಿರಂತೆಯೇ ಇರಬೇಕಾಗಿದೆ; ಹೊರತಾಗಿ ಯಜಮಾನ ಕೂಲಿಯಾಳುಗಳಂತಿರಲಿಕ್ಕಾಗದು. ಉದ್ಯಮಾಲಯಗಳ ತತ್ಸಾಧನಗಳು, ಇನ್ನಿ ಪ್ರೇಮಾಲಯದಲ್ಲಿ ಹೂಡಿದರೆ ಅವುಗಳ ಸ್ಥಾನ ಭ್ರಸ್ಟತೆಯಾಗುವುದು. ನಿಮಗೂ ಜಯವಾಗಮು; ಯಾಕಂದರೆ ಸ್ಥಾನಕ್ಕೆ ತಕ್ಕ ಕಾರ್ಯವನ್ನು ಮಾಡಿದರೇ ಜಯ. ಪ್ರೇಮವಿದ್ಯಾ ಪೀಠದಲ್ಲಿ ಬೆಳೆಯಲಿಕ್ಕೆ ಬೇಕಾದ್ದು ಪ್ರೇಮ. ಪ್ರೇಮಾಭಿವೃದ್ಧಿಗೆ ಆವಶ್ಯಕ ವಾದ್ದೇನೆಂದರೆ, ನಿರ್ಮಲ ವಿಚಾರ ರಶ್ಮಿ. ಇಲ್ಲಿ ಯಜಮಾನರೂ ಇಲ್ಲ, ದಾಸರೂ ಇಲ್ಲ. ಇಲ್ಲಿ ಹಕ್ಕುಗಳಿಗಿಂತ ಕರ್ತವ್ಯಗಳಿಗೇ ಪ್ರಾಮುಖ್ಯತೆ ಹೆಚ್ಚು ಇರುವುದು.

ಆದರೆ ಇಲ್ಲಿ ಜೋಪನ್ನೂನತೆಗಳು ಇಲ್ಲ, ಅವು ಉಂಟಾಗಲಿಕ್ಕಿಲ್ಲ ಎಂದು ಹೇಳಲಿಕ್ಕಾಗದು. ಯಾವನಲ್ಲಿ ಅಪೂರ್ಣತೆ ಇರುವ ತನಕ ಇವ್ವ ಆವಾರ್ಯನೇ! ಆದರೆ ಇನ್ನು ಪ್ರೇಮ ವಿಚಾರಗಳಿಂದ ತಿದ್ದುಪುಟೇ ನಮ್ಮ ಉಭಯತರ ಕರ್ತವ್ಯವೂ ಆಗಿರಬೇಕು. ಆದರೆ ಜೋಪನ್ನೂನತೆಗಳನ್ನು ಕೇವಲ ನಿಮ್ಮಗಳ ಅನುಕೂಲ ಅನಾನುಕೂಲತೆಗಳ ಸೃಷ್ಟಿಯಿಂದ ಮಾತ್ರ ನಿರ್ಧರಿಸಲಿಕ್ಕಾಗದು. ಯಾಕಂದರೆ, (೧) ನಿಮ್ಮ ದೃಷ್ಟಿಯು ಸಾಕಷ್ಟು ವಿಸ್ತಾರ್ಥವಾಗಿಯೂ ನಿರ್ಮಲವಾಗಿಯೂ ಇದೆಯೆಂದು ಒಪ್ಪಿಕೊಳ್ಳುವುದು ಅಷ್ಟು ಸುಲಭವಲ್ಲ (೨) ಒಂದು ಸಂಸ್ಥೆಯ ನಿಕಾಸದ ವಿಷಯದಲ್ಲಿ ಆ ಸಂಸ್ಥೆಯ ಹಿತಾಹಿತಗಳನ್ನೂ ಸಾಧ್ಯಾಸಾಧ್ಯತೆಗಳನ್ನೂ ಹೆಚ್ಚಾಗಿ ಗಮನಿಸಬೇಕಾಗುತ್ತದೆಯೇ ಹೊರತು, ಆದರೊಳಗಣ ಹಲಕೆಲವು ಸಂತೋಷ ಅಸಂತೋಷಗಳನ್ನು ಅನ್ಯಾಗಿ ಮನ್ನಿಸಲಿಕ್ಕಾಗುವದಿಲ್ಲ. ಅವಲ್ಲದೆ ಈ ವೈಯ್ಯಕ್ತಿಕ ದೃಷ್ಟಿಯನ್ನು ಗೆದ್ದು, ಸಂಸ್ಥೆಯ ವಿಕಾಸಕ್ಕಾಗಿ ಸಾಮಾಜಿಕ ಟೊಂಕ ಕಟ್ಟಿದ್ದೀರಿ ಎಂದು ಹೇಳಲಿಕ್ಕೂ ಆಗುವದಿಲ್ಲ, ಪಾನ್ನಲಿಕ್ಕೆ ಪ್ರತ್ಯಕ್ಷ ಪ್ರಮಾಣವಿಲ್ಲ. ಇದನ್ನೆಲ್ಲಾ ಸೋಡುತ್ತ ಎಲ್ಲವನ್ನೂ ನಿಮ್ಮ ದೃಷ್ಟ್ಯಾನುಸಾರ ನಿಮ್ಮ ಇಷ್ಟಾನುಸಾರವಾಗಲಿಕ್ಕಾಗುವುದಿಲ್ಲ.

ಸಂಸ್ಥೆಯ ಪ್ರಮುಖರಿಗೆ ಸಂಸ್ಥೆಯ ಹಿತವೇ ಮೊದಲಿನದು. ಈ ವಿಚಾರಾನುಕ್ರಾಂತಿಗಾಗಿ ಬಲವು ಕಷ್ಟಗಳು ಆಸಾಸಾರ್ಯ ಆಪಾ ಕಷ್ಟಗಳಲ್ಲಿ ಆ ಸಂಸ್ಥೆಯುದ್ಧರಲಿಚ್ಛಿಸುವ ವ್ಯಕ್ತಿಗಳು ನಿಮ್ಮಿಂಯೇ ತೀರಬೇಕು. ಇನ್ನಿ ನೀವು ಮಾ ಆ ಕಷ್ಟಗಳಿಗಳನ್ನೆಲ್ಲಾ ಮನ್ನಿಸುವೆವು ಎಂದು ನೈದಾಕಿಯೇ ಈ ಸಂಸ್ಥೆಯನ್ನು ಪ್ರವೇಸಿದ್ದೀರಿ. ಇನ್ನಿ ಸೇರಿದ ಮೇಲೆ ನಿಮ್ಮ ದೃಷ್ಟಿಗೆ ವಿಸಾದರೂ ಎಲ್ಲಿಯಾದರೂ ಕೊರತೆ ಕಂಡು ಬಂದರೆ, ಅದನ್ನು (ಸಂಕುಚಿತ ಸ್ವಾರ್ಥದೃಷ್ಟಿಯದಲ್ಲ, ನಿಸಾರ್ಥ, ನಚ್ಚೆಲಸ ವಿಚಾರದಿಂದ ತೋರಿಸಿ ಕೊಡುವ ಹಕ್ಕು ನಿಮಗಿದೆ. ಅಹಿತಕಾರಕ ಕಟ್ಟಳೆಗಳನ್ನಾದರೂ ಇದ್ದರೆ (ಅಸಂತೋಷಕಾರಕ ಅಲ್ಲ) ಅವನ್ನು ನೀವು ಅವಶ್ಯವಾಗಿ ಸ್ನೇಮದಿಂದ ತೋರಿಸಿ ಕೊಡಬಹುದು, ತಿಸ್ಪಸಲಿಕ್ಕೆ ಸಒದುದು. ಅದರೆ ತಿದ್ದಿಸುವ ರೀತಿಯೂ ಪ್ರೇಮದ ಹಾದಿಯನ್ನೇ ಹಿಡಿದಿರಬೇಕು. ರುದ್ಧ ವಿಚಾರ ಮಾರ್ಗವನ್ನೇ ತುಳಿಯಬೇಕು; ಅಲ್ಲದೆ ಬಲತ್ಕಾರವನ್ನಲ್ಲ. ಇವ್ವಲ್ಲವೂ ಯಾರಿಗಾದೂ ಸರಿಯಾದ ಮೇಸರೆ ಅಂಥವರಿಗೆ ಇನ್ನು ಇನ್ನಿ ಇರಬೇಕೆಂಬ ಒತ್ತಾಯವಿಲ್ಲ. ಅವು ತಮ್ಮ ಹಾದಿಯನ್ನೇ ಆವಶ್ಯಕವಾಗಿ ಹಿಡಿಯಬಹುದು.

ನಮ್ಮ ಧ್ಯೇಯಾಂಶಕ್ಕೆಗಳು ವಿದ್ಯಾಪೀಠವಷ್ಟಕ್ಕೆ ತೊಡನೆ ಹೊಂದಿವೆಯಾವೆ, ಉತ್ತರವೇ ಅಯಿತು. ಇನೆದೂ ಹೋಯಿವಿಲ್ಲವಾದರೆ, ನಮ್ಮ ಧ್ಯೇಯಗಳು ಉಚ್ಚ ತಮನೆಂದು ನಿಮ್ಮ ಸ್ಪಧರ ಪಿರ ದೃಸ್ಟಿಗೆ ಕಂಡು ಬಂದರೆ, ಅವಿಗಳನ್ನು ನೀವು ಮೇಲೆ ಅನುಕೂಲ ಮಾತಾವರಣಕ್ಕೆ ಹೋಗಿ ಅವ್ಯಕ್ತಕವಾಗಿ ಸುಧಿಸಿ ನನ್ನ ಅಕ್ಷೇಪಣೆಯಿಲ್ಲ. ಆದರೆ ನಿಮ್ಮ ಧ್ಯೇಯ ಕಾರ್ಯಗಳನ್ನೂ ನವತೆಯನ್ನೂ ಒಮ್ಮೆಯಾದೂ ನಿಮೇಕೆದ ಒಳಿಸುವುದಕ್ಕೆ ಹಕ್ಕಿದೆ. ನಿಮಗೆ ಪೋಲಿಪ್ಪೆಲ್ಲವು, ನೀವು ಮಾನಿಪ್ಪೆಲ್ಲವು, ನ್ಯಾಯವೆಂದು ಸಾಧಿಸುವಂತಿರೆ ಮಾತ್ರ ನಿಮಗೆ ಇಲ್ಲಿ ಜಾಗವಿಲ್ಲ. ಅಂಥವರು ಬಿಟ್ಟುಹೋಗುವುದು ಉತ್ತಮ.

ಈ ವಿಷಯಗಳನ್ನು ನಿಮಗೆ ಹೇಳಲಿಕ್ಕೆ ಕಾರಣ ಇವ್ವೆ! ನನಗೆ ಅಧಿಕಾರ ಚಲಾಯಿಸುವುದರಲ್ಲಿ ಪ್ರೇಮವಿಲ್ಲ. ಆದರೆ ಒಮ್ಮೊಮ್ಮೆ ಅಧಿಕಾರವನ್ನು ನಡೆಯಿಸಿಯೇ ತೀರುವಂತೆ ನಿಮ್ಮನಡತೆಗಳೇ ನನ್ನನ್ನ ನಿತ್ಯಪಡಿಸಿದಾಗ ಹಾಗೆ ಮಾಡುವುದು ನನಗೆ ಆಸ್ಪಿಮವಾಗಿ ಸಂಸ್ಥೆಯ ಹಿತದ ದೃಸ್ಟಿಯಿಂದ ಬೇ ನಾನು ಮಾತಕ್ಕೆ ಕರ್ತವ್ಯವನ್ನು ಮಾಡಬೇಕಾಗುತ್ತದೆ ಹಾಗೆ ಮಾಡುವ ಒತ್ತಾಯವು ನತಗಾಗಿಯೂ ಅಗದೆ ಇರಬೇಕಾದರೆ ನಿಮಗೆ ತೊಲ. ಜ್ಞಾನವು ಬೇಕು ಸ್ಪಸುವಿಕ್ಕಿಂತಲೂ ಪಮುಖವಾದ ಕ ದೆಗೆ ಹೆಚ್ಚಿನ ಗಮನವಿರಬೇಕು ಅದಕ್ಕಾಗಿ ಇರು ಮಾರ್ಗಗಳನ್ನು ಹೇಳಬೇಕಾಗಿ ತು. ಪ್ರೌ. ಪಿ. ಎಂ ಸೆಯ ಬೀದಿ ಅವರ ನಿಜ ಗುಣವು ನನ್ನ ಲಕ್ಷ್ಯವಿ ಹರಿಯಲಿ'

ಸಿದ್ಧವಾಗಿದೆ! ಸಿದ್ಧವಾಗಿದೆ!!

ಪಂಡಿತ ಜವಹರಲಾಲರ ಆತ್ಮಕಥೆ

ಕನ್ನಡ ಭಾಷಾಂತರ: ನವಜೀವನ ಕನ್ನಡ ಗುಂಪಿನಿಂದ

೧೯೩೬ ಸಂಪುಟ ಸಿದ್ಧವಾಗಿದೆ.

ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.

ಟಪ್ಪಾಲು ಖರ್ಚು ಪ್ರತ್ಯೇಕ

ಅತ್ಯುತ್ತಮ ಪ್ರತಿ	ರೂ.	೧೮ ೦ ೦
ಸಾಜನಾಲಯ ಪ್ರತಿ	,,	೬ ೦ ೦
ಸಾಮಾನ್ಯ ಪ್ರತಿ	,,	೫ ೦ ೦

ಡಿಸೆಂಬರ್ ತಿಂಗಳೊಳಗಾಗಿ

ಹಣ ಕಳುಹಿಸುವವರಿಗೆ ಟಪ್ಪಾಲು ಖರ್ಚು ಮುಸ್ಪತ್ತು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ

ಸಂಪಾದಕರು:—"ನವಜೀವನ" ಮತ್ತು "ಮಕ್ಕಳ ಪುಸ್ತಕ"

ಬಳೇಪೇಟೆ, ಬೆಂಗಳೂರು ಸಿಟಿ.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾಪ ಭೀತಿಯನ್ನು, ಸರಗೆ ಸಿಕ್ಕಿಕ್ಕಿ ಜ್ಞಾನೇಂದ್ರಿಯಗಳನ್ನು ಹೋಗಲಾಡಿಸಿ ಸ್ಥಿರ ಗುಣ ಉಂಟಾಗುವಂತೆ ಮಾಡುತ್ತದೆ ಈ ಗಳಿಗೆಗಳು ಆರೋಗ್ಯವ ವೃದ್ಧಿಮಾಡಿ ದೇಹಕ್ಕೆ ಶಕ್ತಿ ಮನಸ್ಸಿಗೂ ಬಲವುಂಟಾಗುತ್ತವೆ. ಹೃದಯ ಬಡಿತವನ್ನು ಸಮವಾಗಿಡುವ ಶಕ್ತಿ ಮತ್ತು ರಕ್ತಕ್ಕೆ ಪ್ರಮಾಣವಿಸುವುದು. ಕ್ರಯ:: ಪಪ್ಪೆ ಗಿಕ್ಕೆ ೧-೨-೦

ನಾಜೀಕರಣ ತೈಲ:— ಹೊರಗೆ ಪಚ್ಚಲು ಮಾಪ್ರದೇ ಮಾಲ್ಯದಷ್ಟಿ ನ್ನತೆ. ಅಕೇಕ ವಿದಗಳಲ್ಲಿ ರೋಗವನ್ನು ಕೆಡಿಸಿಕೊಂಡ, ಆಂರಿಂದ ಉಂಟಾಗ ನ ಆರಕ್ತಿ, ಸರಗಳ ಗರ್ಮಲ, ನಕ್ಷಂಕಕ್ತ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ನಂಜೀನಿಸಿಯಗಿರುವುದು. ನರಗಳಿಗೆ ಬಲವನ್ನು ಉಂಟುಮಾಡಿ ಸಂಘೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಬಿಸಿಯವನ್ನು ಮತ್ತುಸ್ಥಾವರಿಂದ ಗುಣ ಗೊತ್ತಾಗುತ್ತದೆ. ಕ್ರಯ:: ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಪ್ರಿತಮಾಡಿ, ನರಗಳನ್ನು ಬಲಪಡಿಸಿ, ಜಠರ ಉಸ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ನಿರ್ಬಲಾಂಗಗಳನ್ನ ಗಟ್ಟಿಪಡಿಸಿ, ಮೆದುಳನ್ನು ತಂಪುಗೊಡಿ, ದೇಹವಿಲವನ್ನೂ, ತೇಜಸ್ಸನ್ನೂ ಹೆಚ್ಚಿಸಪ್ಪುವ ದಿವ್ಯೌಷಧಿಯು, ಎವೆಜೋಷ್ಟ, ತಲೆ ನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯ:: ಡಬ್ಬಿ ಗಿಕ್ಕೆ ೩-೦-೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು. ಒಂದು ಕಾರ್ಡ್ ಬಾಕಿ.

ಆತಂಕ ನಿಗ್ರಹ ಫಾರ್ಮಸಿ, ೬೪. ಡಿಪ್ಪಿ ಪೇಪ ರಾಕ, ಬೆಂಗಳೂರು ಸಿಟಿ

ಭಾಷಾಂತರಕಾರರು

ದೊರೆಯದೆ ಹೇಚಾದುನಿರೇಕೆ?

ಇನ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಂದ ಮಾಡಿಕೊಡಲಾಗುವುದು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸವೊಡನೆ ವತ್ರ ವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'

('ನವಯುಗ ಕಛೇರಿ.' ಬಾಡುಸಿ.

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
ಉಲ್ಲ ಸವಿಗವನಗಳ ಸಂಗ್ರಹ

ಬೆಲೆ ಪಸ್ಟಂಡಾಗಿ ಉಡುಪಿ ರೂ ೧

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ' ಎಂಬ ಮಾತಿಗೆ ಪಾತ್ರವಾಗಿ ಉಲ್ಲವಕಾರಸಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದ ಅಂತರಂಗವು ಜೀತೋವಹಾರಿಯಾಗಿದ

ಮಾಸ] ವಿಶ್ವವಾಣಿ [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಟಿರುವ ಪತ್ರಿಕೆ ಇದೊಂದೇ, ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ
ಚಿತ್ರವಿಶಿಷ್ಟತೆಯ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ವಿಶೇಷ

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) .. . . ರೂ ೩—೮—೦
,, ,, (೬ ತಿಂಗಳಿಗೆ) .. .. ರೂ. ೨—೦—೦
ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—
ವ್ಯವಸ್ಥಾಪಕ—'ವಿಶ್ವವಾಣಿ' 'ಅನ್ನಪೂರ್ಣ', ವಿಶ್ವೇಶ್ವರಪುರಂ,
ಬೆಂಗಳೂರು ನಗರ.



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳಿ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಲಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮ್ಮಾನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಬೆಲ್ಲೆನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಲಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, **ರಥಬೀದಿ, ಉಡುಪಿ.**

ಸ್ತ್ರೀ ಮಲಯಾಳದ

ಸ್ವನಸಂಸ್ಕೃತಿಧಃ

THE MALAYALASTHA [illegible] OUSHADHA CO.
POST-CHALAPURAM, MALABAR

ರಹಸ್ಯಗಳು

ಇತೀಗ ತಿಳಿದುಬಂದಿದ ಪ್ರಖ್ಯಾತನಾವದು ಆಶ್ಚರ್ಯಸಾದಂಯಿದನ್ನು ಸ್ತ್ರೀಯರಿಗೆ ಒಳ್ಳಿಯ ಚೀಪ್ಪ ಔಷಧಿಸೊಟ್ಟನನ್ನು ತೋರಿಸಿ ನೋಡಿದ್ದಕ್ಕೆ, ಅತನ ಕಣ್ಣುಗಳು ಸ್ತ್ರೀಯರ ನಯಖಿಂದ ಕಳಗೆ ನ ವಸ್ತ್ರಗಳಿಕ್ಕೆ ಚಲಿಸಿ ಕೂಡಲೆ ಉನ್ಮತ್ತನಾಗಿ, ಹುಚ್ಚನಿಗೆ ಯೌವನಯುಕ್ತ ಸ್ತ್ರೀಯರ ಆಕರ್ಷಕನಾಗಿರುವಲ್ಲಿ ಎಂದು ನೋಡುವವು.



48 ದಿವಸಗಳಲ್ಲಿ ಮನೋಹರ ಕೆಂಬಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ವನನೆಡೆ:—ಆಕ್ಸ್ಯ, ಚಿಂತೆ, ಪ್ರಾಯ ಆಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಅಳತೆಯು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಒಳೆಯಿದಿದ್ದರೆ, ಜಾಸ್ತಿಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಆಫನಾ ಬರು ರಗ್ಗಾಗಿದ್ದರೆ, ನರಗಳು ಪುಟಿ, ಲವಾಗಿದ್ದ ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಥಲಪುರಮ್ ಇವರು ತಮ್ಮ ಪ್ರಖ್ಯಾತ ಚಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ನಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವವು ಸಡಿಲಾಗಿರುವಮಾಂಸವು ಸ್ಥಿರವಾಗವುದು ಮತ್ತು ಕುಚಗಳು ಯೋಗ್ಯವೂ ಹುಸೋಹರವೂ ಆದ ರೂಪಕ್ಕೆ ತರಲ್ಪಡುವವು ತಮ್ಮ ಸೌಂದರ್ಯಕ್ಕೆ ಪ್ರಸಿದ್ಧವಾದ ವಿಧಾನವನ್ನು ಕೊಡುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ಬಳಸಿಕೊಂಡು ಬಂದಿರುವ ರಹಸ್ಯಗಳಿವು

ಸ್ವನಸ್ಥೆಯ ನಂಬ್ರ 20—ಹಿಂಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೨ ನಂಬ್ರ ೨! ಹೊರಗಣ ಉಪಯೋಗಕ್ಕೆ ರೂ. ೨. ಧರ್ಮಾರ್ಥ ಕೆಲಸಿಸಲ್ಪಡುವ ಕಟಲಾಗಿಗ ದಯಮಾಡಿ ಬರೆಯಿರಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಥಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಋತುವೇದನೆಗಳು, ಸಂತತಿ ನಿರೋಧ, ಧಾತುಸ್ರಾವ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕೈಯಸಂಚಾರಿ, ವಾತರೋಗಕ್ಕಾಗಿ ಕ್ಷೀರಬಲ

ಪತ್ರವ್ಯವಹಾರ

(ಚಾತ್ಕಿದಾರರು ತನ್ನು ಸಂಪೂರ್ಣ ನಿಜ ಸಂಗತಿಗಳನ್ನು ನಮಗೆ ಕೊಡಬೇಕಾಗಿದೆ ಚಾತ್ಕಿಗಳು ಆದರೆ ಪ್ರಸಿದ್ಧಿ ಸಂಕ್ಷೇಪವಿದ್ದು ಚಾಗದಷ್ಟು ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಚಾತ್ಕಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.) ಸಂ. ನ.

ಇದೂ ಒಂದು ಸೋಜಿಗವಲ್ಲವೇ?

ಶಿರ್ವ ಪಂಚಾಯತ್ ಕೋರ್ಟಿನಲ್ಲಿ ಇತ್ತೀಚೆಗೆ ಒಂದು ಸೋಜಿಗದ ಸಂಗತಿಯು ನಡೆಯಿರುವಂತೆ: ರೋಮನ್ ಕೆಥೊಲಿಕ್ ಜಾತಿಯ ಮಿಂಗೇಲ್ ಬರ್ಗೊಜರೆಂಬ ಮನುಷ್ಯರು ಮಾಡಿಯಾಗಿ ಒಬ್ಬ ರೋಮನ್ ಕೆಥೊಲಿಕ್ ಹೆಗಸು ವ ಅವಳ ಮಗ ಇವರಿಬ್ಬರ ಮೇಲೆಯೂ, ಕಲಂದ ಬ್ಯಾರಿಯೆಂಬ ಮಹಮ್ಮದೀಯರ ಸೇಲೆಯೂ ವ್ಯಾಜ್ಯಗಳು ಬಾಕಿ ಬಿದ್ದುವಂತೆ! ಕ್ರಮಪ್ರಕಾರ ಪ್ರತಿವಾದಿಗಳಿಗೆ ವ್ಯಾಜ್ಯದ ನೋಟೀಸುಗಳು ಸಾದರಾಗಿದ್ದು ತನಕೆಗಾಗಿ ನಿಶ್ಚಯಿಸಲ್ಪಟ್ಟ ದಿನ ಅವರೂ ಹಾಜರಾಗಿದ್ದರಂತೆ ಈ ವ್ಯಾಜ್ಯಗಳ ವಿಷಯವನ್ನೇ ಆರಿಯದ ವಾದಿಯೂ ಕೂಡಾ ಸದ್ರಿ ಕೋರ್ಟಿನ ವಕೀಲರೆಬ್ಬರ (?) ಆ ಪೇಕ್ಷೆ ಮೇರೆಗೆ ಅಂದು ಕೋರ್ಟನ್ನು ಸಿದ್ಧರಾಗಿದ್ದರಂತೆ! ಪ್ರತಿವಾದಿಯರು ಪಾಪ! ಸದ್ರಿ ವಾದಿಗೆ ಒಂದು ಚಿಕ್ಕಾಸೂ ಕೊಡುವದು ಇರುವದಿಲ್ಲವಾಗಿ ಜೂಬ್ಬಿದ್ದುತ್ತಿದ್ದರಂತೆ! ವ್ಯಾಜ್ಯಗಳು ಎರಡು ತಿಂಗಳಿಗೆ ಬರುವದರೊಳಗೆ ವಾದಿಗ ತನ್ನ ಹೆಸರಿನಲ್ಲಿ ಎರಡು ವ್ಯಾಜ್ಯಗಳು ದಾಖಿಲ ಗಿದ್ದು ಅಂಮ ತನಕೆಗೆ ಇದಲ್ಲ ಟ್ಟಿರುವದಾಗಿ ಹೇಗೂ ತಿಳಿದುಬಂತಂತೆ! ಆವರಿಗೂ ಬಹಳ ಆಶ್ಚರ್ಯವಾಯಿತಂತೆ! ಅಂದು ಶಿರ್ವ ಮಂಚಿಕಲ್ ಸೇಟೆಯಲ್ಲಿರ್ರು. ಇದೇ ಸುದ್ದಿಯಂತೆ ಈ ವರ್ತಮಾನವು ವಿರ್ವ ಇಗರ್ಜಿ ಅಧಿಕಾರಿಗಳಿಗೆ ತಿಳಿಗ ಬಿತ್ತಂತೆ! ಆವರು ಕೂಡಲೇ ವಾದಿಯನ್ನು ಕರೆಯಿಸಿ, ಗೃಹಸ್ಥರನ್ನಿಟ್ಟು ಬುದ್ಧಿ ಹೇಳಿದರಂತೆ! ವಾದಿಯು ತಾನು ವ್ಯಾಜ್ಯಗಳನ್ನು ಹಾಕಲುಮಾಡಲಿಲ್ಲವೆಂದೂ ಸದ್ರಿ ವ್ಯಾಜ್ಯಗಳ ವಿಚಾರವು ತನಗೆ ಗೊತ್ತಿಲ್ಲವೆಂದೂ, ಪ್ರತಿವಾದಿಯರಿಗೂ ತನಗೂ ಯಾವ ತರದ ಲೇವಾದೇವಿಯೂ ಇಡೆದುಬಿಲ್ಲವೆಂದೂ ಒಪ್ಪಿದರಂತೆ! ಹಾಗಾದರೆ ಈ ಎರಡೂ ವ್ಯಾಜ್ಯಗಳು ಯಾರಿಂದ, ಹೇಗೆ ದಾಖಲುದುವು? ಪೈಸಿಂಟೆರು ಫ್ರಾನ್ಸಿಲಿಗೆ ಹ್ಯಾಗೆ ತೆಕ್ಕೊಂದರು? ಕೋರ್ಟಿನವರಿಂದ ಹೇಗೆ ತೀರ್ಮಾನಿಸಲ್ಪಟ್ಟವು? ಎಂಬಬೊಂದು ಇವರಿಗೆ ಸಮಸ್ಯೆಯಾಗಿದೆಯಂತೆ! ಇದು ನಿಜವಾಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳು ಈ ಕುರಿತು ಕೂಲಂಕುಶ ತನ್ಮ ನಡಿಸಿ, ತಪ್ಪಿತ್ತರನ್ನು ಶಿಕ್ಷೆಗೆ ಗುರಿ ಮಾಡಿದರೆ ನ್ಯಾಯದ ಹೆಸರಿನಲ್ಲಿ ನಡಿಯುತ್ತಲಿರುವ ಇಂತಹ ವಿದ್ಯಮಾನಗಳು ತಪ್ಪಗೆಟ್ಟಲ್ಪಟ್ಟಂತಾಗಿ ಸಲವು ನಿರ್ಭರ ಕುಟುಂಬಗಳು ರಕ್ಷಿಸಲ್ಪಡುವಂತಾಗುವ ದಲ್ಲವೇ? ಬಡವರ ಕಷ್ಟ ಹೇಳಿ ತೀರದು.

ನ್ಯಾಯಪ್ರಿಯ.

ಮಾನುಗಳನ್ನು ತೋಟಿವ ವಿಷದ ಮೂಲಕ ಕೊಲ್ಲೋಣ

ನಮ್ಮ ಜಿಲ್ಲೆಯಲ್ಲಿ ಅನೇಕ ಹೊಳೆಗಳಿದ್ದು ಇವುಗಳ ಮಾನುಗಳನ್ನು ಹಿಡಿಯುವ ವಿಧಾನಗಳು ಬಹಳ ವಿದ್ವರೂ, ತೋಟೆಗಳನ್ನು ಆಳವಾಗ ಸೀರಿನ್ನಿ ಹಾಕಿ ಒಡೆಯಿಸಿಯೂ, ಜಾಲಾಡಿ ಬೀಜದೇ ಮೊದಲಾದ ವಿಷಕರವಾದ ಪದಾರ್ಥಗಳನ್ನು ಆರೆದು ಸೀರಿನಲ್ಲಿ ಹಾಕಿಯೂ ಮಾನುಗಳನ್ನು ನಾಶಮಾಡುವ ಕ್ರಮವು ಈಗಲೇಗೆ ಎಲ್ಲೆಲ್ಲಿಯೂ ಹೆಚ್ಚುತ್ತಾ ಬರುತ್ತಿದೆ. ಈ ವಿಧಾನಗಳಿಂದ ಒಳ್ಳೊಳ್ಳೆ ಮಾನುಗಳು ಕೊಲ್ಲಲ್ಪಡುವುದಲ್ಲದೆ, ಆವುಗಳೊಂದಿಗೆ ಆವುಗಳ ಮುಂದಿನ ಸಂತತಿಗಳಾದ ಸಣ್ಣ ಸಣ್ಣ ಮಾರಿಗಳೂ ನಾಶಗಟ್ಟಲ್ಪಡುತ್ತಿವೆ ಸುಮುತ್ತವೆ. ತೋಟೆಗಳಲ್ಲಿ ವಿಷ ಪದಾರ್ಥಗಳನ್ನೂ ಹಾಕಿಸುವವರಿಗೆ ಒಂದು ಸಾಲು ವಿಾನು ಸಿಕ್ಕುವುದಾದರೆ, ನಾಲ್ಕು ಸಾಲು ಸೀರಿನೊಗೆಸೆ ಸತ್ತು ಯಾರಿಗೂ ಪ್ರಯೋಜನವಿಲ್ಲದೆ ನಾರವಾಗುವುದು ಇದರಿಂದ ನಮ್ಮ ಜಿಲ್ಲೆಯ ಹೊಳೆಗಳಲ್ಲಿ ಒಳ್ಳೆಯ ಸೂಸಲೆ ಯಾಗುತ್ತಿರುವುದೇ ಕಡಿಮೆಯಾಗಿ ಬಿಡುವ ಸಂಭವವಿದೆ.

ಈ ಪ್ರಕಾರ ಮೀನುಗಳನ್ನು ಹಿಡಿಯುವುದು ತಾನೂನಿಗೆ ವಿರೋಧವಾದದ್ದೆಂಬುದೇನೋ ನಿಜ ಆದರೆ ಆ ಕಾನೂನುಗಳ ಬರಹವು ಮಾತ್ರ ಕಾನೂನು ಪುಸ್ತಕಗಳಲ್ಲಿರುತ್ತಾನೆಯಲ್ಲದೆ, ಅವನ್ನು ಜಾರಿಮಾಡುವವರೇ ಇಲ್ಲ! ನಿರ್ಭೀತಿಯಾಗಿಯೂ ಬಹಿರಂಗವಾಗಿಯೂ ಜನರು ತೋಟೆ ಮತ್ತು ವಿಷಗಳನ್ನು ಹಾಕಿ ಮಾನುಗಳನ್ನು ಕೊಲ್ಲುವುದನ್ನು ನಾವು ಎಲ್ಲೆಲ್ಲಿಯೂ ಧಾರಾಳ ನೋಡಬಹುದು ಯಾಕೆಂದರೆ ದೊಡ್ಡ ದೊಡ್ಡ ಉದ್ಯೋಗಸ್ಥರ ಸ್ಥಾನಗಳ ಮೇಜುವಾನಿಗಳಿಗೂ ಊರಿನ ಗೌರವಗಳ ಮಟ್ಟು ಮುಂಜಿಗಳ ದಿನಕ್ಷಣ ಸಮಾರಂಭಕ್ಕೂ ಉತ್ತಮವಾದ ಮಾನುಗಳು ಧಾರಾಳ ಬೇಕಾದರೆ ಜೆಬ್ಬಾಗಿ ಈ ವಿದ್ಯಾನಗಳನ್ನೇ ಕೈಕೊಳ್ಳುವುದು ರೂಢಿಯಾಗಿದೆ ಹಾಗಾದರೆ ಕೇಳಿ ವವರಿರ!

ಸಾರ್ವಜನಿಕ ಹಿತವನ್ನೈಷಿಸಿ ಇಂತಹ ಮೀನು ಹಿಡಿತದ ಪದ್ಧತಿಯನ್ನು ಕಠಿಣವಾದ ಕಾನೂನಿನ ಮೂಲಕ ಸಂಪೂರ್ಣವಾಗಿ ನಿಷ್ಠಿಸಿಬಿಡಬೇಕು ಅತ್ಯಾವಶ್ಯಕವಾಗಿದೆ ಇದಕ್ಕಾಗಿ ನಾನು ಈ ಕೆಳಗಿನ ಸೂಚನೆಗಳನ್ನು ಸರಕಾರದ ಲಕ್ಷಕ್ಕೆ ತರುತ್ತೇನೆ.

೧ ಈ ಸಂಬಂಧವಾಗಿ ಈಗ ಇರುವ ಕಾನೂನುಗಳು ಸಾಕಷ್ಟು ಸಲತಕ್ಕೆ ಬಾರದವುಗಳಾಗಿದ್ದಲ್ಲಿ ಅವನ್ನು ತಿದ್ದುಪಡಿ ಮಾಡಿ, ಪತ್ತೇದಾರಿಗಳಿಗೆ ಆ ಕಾನೂನುಗಳನುಸಾರವಾಗಿ ಕಾರ್ಯ ನಿರ್ವಹಿಸಲು ಕಾರಣಗಳಿಗೆ ಸಚೇಕು (೧) ಇಂತಹ ಮೀನು ಹಿಡಿತವು ಸಳ್ಳೆ ಯದಂತೆ ನೋಡಿಕೊಳ್ಳುವ ವರೆಗೂ ಅಂತಹ ತಪ್ಪಿತಸ್ಥರನ್ನು ನಿಶ್ಚಿತ ಗೆ ಗುರಿಪಡಿಸುವಂತಹವೂ ಎಲ್ಲಾ ಗ್ರಾಮಗಳಲ್ಲಿಯೂ ಪೋಲೀಸ್ ಕೆಲಸ್ಯ ಅಬಕಾರಿ ಮತ್ತು ಫಿರಿ ಕ್ಯೂರಿಂಗ್ ಯಾರ್ಡ ಆ ಸೀಗರಿಗೂ ಪದೇ ಪದೇ ನೋಟೀಸು ಗಳು ಆಪಾಕ ಗೆಳನ್ನು ಕಳಿಸಬೇಕು ಸ್ವಸಿಕ್ಕಾಮಗಿ ಸತ್ತ ಮೀನುಗಳ ವ್ಯರ್ಥ ತೊಂ ಮತ್ತು ವಿಷ ಮಿಶ್ರಿತ ಮೀನುಗಳನ್ನು ಕೊಲ್ಲಲ್ಪಟ್ಟ ಗ್ರಾಮಗಳಲ್ಲಿ ಕೊಂ ನಿಷೇಧಿಸಲ್ಪಡುವಂತೆ ಕಠಿಣ ಕಾನೂನುಗಳನ್ನು ಜಾರಿಗೆ ತರಬೇಕು ಈ ಕಾನೂನುಗಳಿಗೆ ವಿರೋಧವಾಗಿ ನಡೆಯುವವರಿಗೆ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಮತ್ತು ಅಂತಹ ಮೀನುಗಳನ್ನು ಕೊಲ್ಲಲ್ಪಟ್ಟ ಗ್ರಾಮಗಳಲ್ಲಿ ಕೊಂಡು ಮಾರಾಟ ಮಾಡುವವರಿಗೂ ಕಠಿಣ ಶಿಕ್ಷೆಯನ್ನು ವಿಧಿಸಬೇಕು.

೨ ಮೀನುಗಳಿಗೆ ತೋಟೆ ಮತ್ತು ವಿಷ ಹಾಕೋಣವು ತಾನೂನಿಗೆ ವಿರೋಧವಂಬುದನ್ನೂ ಇಂತಹ ಕಾನೂನನ್ನು ನಿಯಾಮಿಸಿದವರಿಗೆ ಕಠಿಣ ಶಿಕ್ಷೆಯು ಆಗುವುದೆಂಬುದನ್ನೂ ಎಲ್ಲಾ ಗ್ರಾಮಗಳಲ್ಲಿಯೂ ಒಮ್ಮೆ ಮೈ ಡಂಗುರ ಹೊಡೆಯಿಸಬೇಕು ಮನುಷ್ಯರ ಆಹಾರ ಸಾಮಗ್ರಿಗಳಲ್ಲಿ ಎರಡನೆಯದೆಂದು ಹೆಸರು ಗೊಂಡ ಈ ಮತ್ಸ್ಯಾಹಾರಕ್ಕೆ ನಮ್ಮ ಜಿಲ್ಲೆಯಲ್ಲಿ ಉಂಟಾಗುವ ಈ ತರದ ಹಾನಿಯನ್ನು ಸರಕಾರವು ಬೇಗನೆ ಲಕ್ಷಕ್ಕೆ ತಕ್ಕೊಂದು, ಆಗತ್ಯವಿರುವ ಕಾನೂನು ತಿದ್ದುಪಡಿಯನ್ನು ಜಾರಿಗೆ ತಂದು, ತೋಟೆ ಮತ್ತು ವಿಷ ಬಾಕಿ ಎಾನುಗಳನ್ನು ಕೊಲ್ಲುವ ಪದ್ಧತಿಯನ್ನು ಬೇಗನೇ ನಿಲ್ಲಿಸುವುದು ಒಳ್ಳೆಯದು ಈ ನಿಟ್ಟಿನಲ್ಲಿ ಸವಯುಗದ ವಾಚಕ ಮಹಾಶಯರಿಂದ ಅನುಕೂಲ ಪ್ರತಿಕೂಲ ಎಾನಾಭಿಪ್ರಾಯಗಳನ್ನು ತಿಳಿಸಿಕೊಳ್ಳಲು ಅಪೇಕ್ಷಿಸುತ್ತೇನೆ.

ಬಿ. ಮೋಹನಪ್ಪ ತಿಂಗಳಾಯ

ಫೈಜಪುರದ ಕೊಂಗ್ರೆಸ್ ನಗರ.

ಲೇಖಕ:—M N Bhandary L. S E

ಆಖಿಲ ಭಾರತ ರಾಷ್ಟ್ರೀಯ ಸಭೆಯ ಐವತ್ತನೇ ಅಧಿವೇಶನವು, ದೇಶಂಬರ ತಿಂಗಳಲ್ಲಿ ಮಹಾರಾಷ್ಟ್ರದ ಫೈಜಪುರವೆಂಬ ಗ್ರಾಮದಲ್ಲಿ ಜರಗಲಿಕ್ಕಿರುವುದು ಪ್ರತಿ ವರ್ಷವೂ ಯಾವನಾದರೊಂದು ಸಂಸ್ಥಾನದ ಮುಖ್ಯ ನಗರದಲ್ಲಿ ಜರಗುತ್ತಿದ್ದ ನನ್ನ ರಾಷ್ಟ್ರ ಸಭೆಯ ಅಧಿವೇಶನವು, ಈ ವರ್ಷ ಫೈಜಪುರದ ಹಳ್ಳಿಯಲ್ಲಿ ಜರಗುವುದು ಕಾಂಗ್ರೆಸಿನ ಇತಿಹಾಸದಲ್ಲೊಂದು ಮುಖ್ಯ ಬದಲಾವಣೆಯೆನ್ನಬೇಕು. ದೇಶದ ಚಿತಿನೊಡ್ಡಣ ರಾಜಕೀಯ ಪಕ್ಷವು ಅಧಿವೇಶನವು ಜರಗಲಿಕ್ಕಿರುವ ಹಳ್ಳಿಯ ಭೌಗೋಳಿಕ ಮತ್ತು ಐತಿಹಾಸಿಕ ಸ್ಥಿತಿಯನ್ನು ತಿಳಿಯಿಸಿಕೊಟ್ಟಿಸುವವರು ಒನೇಕರಿರಬಹುದು.

ಫೈಜಪುರವು ಮುಂಬಾಯಿ ಸಂಸ್ಥಾನದ ಪೂರ್ವಕಾನ್ದೇಶ ಜಿಲ್ಲೆಯ ಯಾವಾಲ್ ತಾಲೂಕಿನಲ್ಲಿದೆ. ಇಲ್ಲಿಯ ಜನಸಂಖ್ಯೆಯು ಸುಮಾರು ಹತ್ತು ಸಾವಿರವಿರಬಹುದು. ಈ ಹಳ್ಳಿಯು ದಕ್ಷಿಣದ ಪ್ರಸ್ಥ ಭೂಮಿಯಲ್ಲಿ, ಸಿಂದ್ಯಾ ನುತ್ತು ಸಾತ್ಪುರ ಪರ್ವತಗಳ ಮಧ್ಯದಲ್ಲಿ ಗುಡ್ಡ ಬೈಲುಗಳಿಂದ ನಿಬಿಡವಾಗಿ, ಮನೋಹರವಾದ ನೈಸರ್ಗಿಕ ದೃಶ್ಯ ವೊಂದನ್ನು ಸೃದರ್ಸಿಸುತ್ತಿದೆ. ಈ ಪ್ರದೇಶದಲ್ಲಿ ಪೂರ್ವವು ಪಶ್ಚಿಮಕ್ಕೆಂತ ಎತ್ತರವಾಗಿದ್ದು ನರ್ಮದಾ ಮತ್ತ ತಪತೀ ನದಿಗಳು ಹತ್ತಿ ಮೂಡಿ ಮುಖವಾಗಿ ಹರಿದು ಅರಬಿ ಸಮುದ್ರವನ್ನು ಸೇರುತ್ತವೆ. ಇಲ್ಲಿ ದಶಂಬರ ತಿಂಗಳ್ಲಲ್ಲಿ ಚಳಿಯಿದ್ದರೂ ಉತ್ತರ ಹಿಂದೂಸ್ಥಾನದಷ್ಟು ವಿಶೇಷ ಚಳಿಯಿಲ್ಲ ಹತ್ತಿ ಮತ್ತು ನೆಲಗಡಲೆಯೇ ಇಲ್ಲಿಯ ಮುಖ್ಯ ಕೃಷಿ. ಒಂದಾನೊಂದು ಕಾಲದಲ್ಲಿ ಫೈಜಪುರವು ಕೆಂಪು ಮತ್ತು ನೀಲಿಬಣ್ಣದ ರಂಗಿನ ಕೈಗಾರಿಕೆಗೆ ಸ್ರಸಿದ್ಧಿ ಹೊಂದಿದ್ದಿತು. ತಪತೀ ನದಿಯ ದಡದಲ್ಲಿ ಸುಮಾರು ೪೨ ಎಕ್ರೆ ವಿಸ್ತೀರ್ಣ ಸ್ಥಳದಲ್ಲಿ 'ತಿಲಕ ನಗರ' ವು ಸಮಾಡಾ ಮತ್ತು ಫೈಜಪುರಕ್ಕೆ ಸುಮಧ್ಯ ದಲ್ಲಿ ಕಟ್ಟಲ್ಪಟ್ಟಿದೆ. ಫೈಜಪುರದ ಸಮೀಪ ದಲ್ಲಿ ಭರಣಪುರವಲ್ಲದೆ ಮಿಕ್ಕ ಯಾವ ಪಟ್ಟಣವೂ ಇಲ್ಲ. ಫೈಜಪುರದಲ್ಲಿ ರೈಲ್ವೆ ಸ್ಟೇಶನು ಇಲ್ಲದಿದ್ದರೂ, ಜಿ. ಐ. ಪಿ. ರೈಲ್ವೆ ಲೈನಿನಲ್ಲಿ ಭರಣಪುರ (Bhurampur) ಮತ್ತು ಭುಸವಾಲ್ (Bhusawal) ಎಂಬ ಎರಡಲ್ಲಿರುವ ಜಂಕ್ಷಾಡ್‌ದ ರೈಲ್ವೆ ನಿಲ್ದಾಣವ 'ತಿಲಕ ನಗರ'ದಿಂದ ನಾಲ್ಕು ಮೈಲು ದೂರದಲ್ಲಿದೆ.

ಆರ್ಯಾವರ್ತದಲ್ಲಿ, ಪಯೋಶಿನಿಯೆಂದು ಕರೆಯಲ್ಪಡುತ್ತಿದ್ದ ತಪತೀ ನದಿಯ ಸುತ್ತ ಮೆತ್ತಲಿನ ಜಿಲ್ಲೆಗಳು ಕ್ರಿ. ಪೂ. 250 (B. C.) ಕ್ಕೆ ಮೊದಲು ಅಶೋಕನ ಸಾಮ್ರಾಜ್ಯಕ್ಕೆ ಸೇರಿದ್ದಿತು. ಆ ಬಳಿಕ ಕೋಸಲರ ಲಿಛೀನಲ್ಲಲ್ಲಿದ್ದಿತೆಂದು ತಿಳಿದುಬರುತ್ತದೆ. ಗುಪ್ತವಂಶದ ರಾಜರಲ್ಲಿ ಹಿಂದೊಸ್ಥಾನದ ನೆಪೋಲಿಯಾನನೆಂದು ಪ್ರಖ್ಯಾತಿವಟ್ಟ ಸಮುದ್ರಗುಪ್ತನಿಂದ ಕಾನ್ದೇಶವು ಜಯಿಸಲ್ಪಟ್ಟಿತೆಂಬೂ, ಸಮುದ್ರಗುಪ್ತನು ಕಾಂಚೀಪುರದ ವರೆಗಿನ ಪ್ರದೇಶವನ್ನು ಜಯಿಸಿ, ವಿಜಯ ಯಾತ್ರೆ ಯಿಂದ ತಂತಿರುಗುವಾಗ ರಂಗಿನ ಕೈಗಾರಿಕೆಗೆ ಪ್ರಖ್ಯಾತಿವಟ್ಟ ಫೈಜಪುರದಲ್ಲ ಸೈನ್ಯ ಸಮೇತ ಸ್ವಲ್ಪ ಕಾಲ ವಿಶ್ರಮಿಸಿನೆಂಬೂ ತಿಳಿಮಬರುತ್ತವೆ. ಆ ಜಂತದ ಗುಹೆಗಳಲ್ಲಿ ಈಗಲೂ ರಜ್ಜಳಿಯದೆ ವಿರುವ ರಂಗುಗಳನ್ನು ಫೈಜಪುರದಿಂದ ಕೊಂದು ಹೋಗಿರಬೇಕೆಂದು ಕೆಲವರು ಹೇಳುತ್ತಾರೆ. ಸುಮಾರು ೭ ಮತ್ತು ೮ನೇ ಶತಮಾನದಲ್ಲಿ ಕಾನ್ದೇಶವು ಚಾಲುಕ್ಯರ ಆಧಿಪತ್ಯದಲ್ಲಿದ್ದು, ಆ ಮೇಲೆ ೧೨ನೇ ಶತಮಾನದಲ್ಲಿ ಯಾದವ ವಂಗಡದ ರಾಜರ ಕೈವೇರಿತು. ಬಿಲ್ಲಿ ಮನೆತನಕ್ಕೆ ಸೇರಿದ ಒಲ್ಲಾಪ್ಪದ್ದೀನನ ಸೋದರಳಿಯನಾದ ಹಲಾಉದ್ದೀನನು ದೇವಗಿರಿಯನ್ನು ಸೂರೆ ಮಾಡಿ ಹಿಂತಿರುಗುವಾಗ ಇಲ್ಲಿಯ ವ್ಯವಾರಗಳನ್ನು ಸುಲಿಗೆ ಮಾಡಿದನೆಂದು ತಿಳಿದು ಬರುತ್ತದೆ. ೧೩ನೇ ಶತಮಾನದಲ್ಲಿ ಕಾನ್ದೇಶವು ತಾಲ್ಲೂರಿನಲ್ಲಿ ರಾಜ್ಯಭಾರ ಮಾಡುತ್ತಿದ್ದ ಅಫಘಾನ್ ಸುಲ್ತಾನರ ವಶವಾಯಿತು. ೧೩೮೮ರಲ್ಲಿ ಕಾನ್ದೇಶ ರಾಜ್ಯವು ಮಾಲಿಕ್ ರಾಜನ ಆಧಿಕಾರಕ್ಕೊಳಪಟ್ಟಿತು. ೧೬೦೧ರಲ್ಲಿ ಮೊಗಲ್ ಸಾರ್ವಭೌಮನಾದ ಅಕ್ಬರ್ ಬಾದಶಹನಿಂದ ಜಯಿಸಲ್ಪಟ್ಟು, ಮೊಗಲ್ ಸಾಮ್ರಾಜ್ಯವು ಹರಿ ಹೆಂಜಾಗಿ ಹೋದ ಬಳಿಕ ಸಿಂಧ್ಯನ ಸ್ವಾಧೀನವಾಯಿತು. ಪೂರ್ವ ಕಾನ್ದೇಶವು ಗ್ವಾಲಿಯರ್ ಒಪ್ಪಂದದಿಂದ ಈಸ್ಟ್ ಇಂಡಿಯಾ ಕಂಪನಿಯವರಿಗೆ ದೊರಕಿತು. ಇದೇ ಕಾನ್ದೇಶದ ಐತಿಹಾಸಿಕ ಸಿಂಹಾವಲೋಕನ.

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ.

O. S 133/1936

ವಾದಿ—ಚರ್ಚಯ್ಯ ಭಟ್ಟ

ಪ್ರತಿವಾದಿರು—ನಾರಾಧವ ಭಟ್ಟ ಕೊಡು.

ಸದ್ರಿ ವ್ಯಾಜ್ಯದ ತನಿ ಪ್ರತಿವಾದಿ ಮೈನರ ಪಾರಮ್ಯಂಗ

೪ನೇ ಪ್ರತಿವಾದಿ ತಿಂಬಾ ಯಾನೆ ಸಾವಿತ್ರಮ್ಮ ೧ ಸಹಾ ೨ ಜನರಿಗೆ

ಸಾದಿಯು ಪ್ರತಿವಾದಿ ರ ಮೇಲೆ ಮೂಲಗೇಣಿ ನಾಕಿ ಬಗ್ಗೆ ನೂರಾದ ಮೇಲ್ಕಂಡ ಪಾಪೆಯಲ್ಲಿ ಸಿಮ್ಮು ಲೇನಾದರೂ ಗುಡಾಪರಕೆ ಇದ್ದರೆ ತಾರೀಖು ೭-೧೨-೧೯೩೬ ನೇ ದಿವಸ ಪಗಲು ೧೧ ಗಂಟೆಗೆ ಸದ್ರಿ ಕೋರ್ಟು ನು ಎದೆ ಹಾಜರಾಗಿ ಜ್ಞಾಪೀ ರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷ ವಾಗಿ ತೀರ್ಮಾನಿಸಲ್ಪಡುತಕ್ಕದ್ದು ಎಂಕ ಈ ಮೂಲಕ ತಿಳಿಸೋಣಾಗುತ್ತದೆ

(Sd.) K. Narasimha Kamath,

HEADER FOR PLAINTIFF.

Coondapoor, 25-11-36

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. No. 115/'36

ಅರ್ಜಿದಾರರು— ಸಾವಿತ್ರಮ್ಮ ಶೀಷಮ್ಮಸವರ ಮಗಳು ವ ಹಂಗ್ಳೂರು ಲಕ್ಷ್ಮಿನಾರಾಯಣ ಹಬ್ಬಾಸನ ಹೆಂಡತಿ, ಕುಂದಾಪುರ ತಾಲೂಕಿನ ಹಂಗ್ಳೂರು ಗ್ರಾಮ

ಎದ್ರಿನು — ಇಲ್ಲಾ

ಮೃತರಾದ ಅರ್ಜಿದಾರಳ ತಾಯಿ ಶೇಷಮ್ಮನವರು ತಾ. 2-1-'35ರಲ್ಲು ಬರದಿಟ್ಟ ವಿಲ್‌ನಾಮೆ ಪ್ರಕಾರ ಕುಂದಾಪುರ ಪೋಸ್ಟ ಆಫೀಸಿನಲ್ಲಿ ನಂಬ್ರ 39195ನೆಗೆ ಡಿ ಪೊಜಿಟಿನಲ್ಲರುವ ರೂ. 700-0-0 ವ ಅವರ ಸೋಲಣ ಬಡ್ಡಿ ಸಹಾ ಪೋಸ್ಟು ಆಫೀಸಿನಿಂದ ಪಡೆಯುವರೆ ಅರ್ಜಿದಾರಳು ತನಗೆ ವಾರಿಸ್ ಸರ್ಟಿಫಿಕೇಟು ಕೊಡಿಸ ಬೇಕಾಗಿ ನೋಟ್ಸಿಂದ ಸಂಜ್ಞಾಕ್ಕೆ ಅರ್ಜಿದಾಕ್ಕು ಸಾವಿರವಾದರಿಂದ ಸದ್ರಿ ಅರ್ಜಿಯು ತಾ 8-12-'36ಕ್ಕೆ ತನ್ನಿಗೆ ಇಟ್ಟಿರುವುದಾರಿಂದ ಆ ಕಾರಿತು ಯಾರಾದರೂ ಆಕ್ಷೇಪಸಗಳಿದ್ದಲ್ಲಿ ಅಂದು ಬೆಳಿಗ್ಗೆ 8 1/2 ಗಂ ನೇ ದಿವಸ ಪಗಲು ಗಂಟೆ 11ಕ್ಕೆ ನೋಟ್ಸಿಂಡ ಕೋರ್ಟಿನಲ್ಲಿ ಜಾಹೀರು ಮಾತಿ ಕೊಳ್ಳತಕ್ಕದ್ದು.

K. S. Shetty,

ಅರ್ಜಿದಾರನ ಕಡೆ ಎಡ್ವೊಕೇಟ್.

ಕುಂದಾಪುರ, 27-11-'36

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ಸ್ಪೈನಿನ ಘೋರ ಯುದ್ಧ

ಸರಕಾರದ ಪಕ್ಷದ ವಿಜಯ! ಬಂಡಾಯಗಾರರ ಘೋರ ಅತ್ಯಾಚಾರ!!

ಮೇದ್ರಿದಿನ ಮೇಲೆ ಈಗ ೩೨ ದಿನಗಳಿಂದ ಮುತ್ತಿಗೆ ಹಾಕಿ, ವಿಮಾನಗಳ ಮೂಲಕ ಎಡೆಬಿಡದೆ ಬೋಂಬಿನ ಮಳೆ ಸುರಿಸಿ ಭೀಕರ ಹಾವಳಿಮಾಡಿದರೂ ಬಂಡಾಯಗಾರರಿಗೆ ಅದನ್ನು ವಶ ಪಡಿಸಿಕೊಳ್ಳಲು ಸಾಧ್ಯವಾಗಿರುವುದಿಲ್ಲ. ಮಾತ್ರವಲ್ಲದೆ ಅವರ ಸೇನೆಗೆ ಕೆಲವು ರಣರಂಗಗಳಲ್ಲಿ ಅಪಜಯವಾಗಹತ್ತಿದೆ. ಮೇದ್ರಿದಿನ ಯುನಿವರ್ಸಿಟಿ ಪಟ್ಟಣಭಾಗದಲ್ಲಿ ಹೋರಾಡುತ್ತಿದ್ದ- ಬಂಡಾಯಗಾರ ಸೇನೆಯು ಬೇರೆ ಕಡೆಗೆ ಕಳುಹಿಸಲ್ಪಟ್ಟು ಅಲ್ಲಿಗೆ ವಲಂಟೀಯರ್ ಸೇನೆಯು ಕಳುಹಿಸಲ್ಪಟ್ಟಿದೆ. ಬಂಡಾಯಗಾರರು ತಮ್ಮ ಹಿಂಭಾಗದ ಸುರಕ್ಷಿತತೆಗೆ ಗಮನಕೊಡದೆ ಸೇನೆಯನ್ನೆಲ್ಲಾ ಮೇದ್ರಿದನ್ನು ಮುತ್ತುವುದಕ್ಕೇನೇ ಉಪಯೋಗಿಸಿದ್ದರು. ಇಂತಹ ಪರಿಸ್ಥಿತಿಯಲ್ಲಿ ಸರಕಾರದ ಕಡೆಯ ಸೈನಿಕರು ಬಂಡಾಯಗಾರ ಸೇನೆಯನ್ನು ಹಿಂದಿನಿಂದ ಆವರಿಸಹತ್ತಿರುವರು. ಬಂಡಾಯಗಾರರು ಯುದ್ಧ ವಿಮಾನಗಳಿಂದ ಬೋಂಬಿನ ಮಳೆಗರೆದರೂ ಲೆಕ್ಕಿಸದೆ ಸರಕಾರಿ ಕಡೆಯ ಸೈನಿಕರು ವೀರಾವೇಶದಿಂದ ಮುಂದೊತ್ತಿ ಬಲವೇರ ಪಟ್ಟಣದ ಗಡಿಪ್ರದೇಶದ ವರೆಗೆ ಮುಟ್ಟಿರುವರು. ಎಡೆಬಿಡದ ಮಳೆಯು ಮೇದ್ರಿದ್ ರಣರಂಗದ ಕಂದಕಗಳನ್ನು ಕೆಸರುತುಂಬಿದ ತೋಡುಗಳನ್ನಾಗಿ ಮಾಡಿರುವುದು. ಜಲ ಮತ್ತು ಆಕಾಶ ಯುದ್ಧವು ಅಸಾಧ್ಯವಾಗಿರುವುದು. ಒವೀಡೋ ರಣರಂಗದಲ್ಲಿ ಸರಕಾರದ ಮಿಲಿಶಾ ಸೈನಿಕರು ಬಹಳ ಸಾಹಸದಿಂದ ಕಾದಾಡಿ ಬಂಡಾಯಗಾರರಿಂದ ಕೆಲವು ಹಳ್ಳಿಗಳನ್ನು ವಶಪಡಿಸಿಕೊಂಡು ಒಹೋ ಮತ್ತು ಗ್ರಾಹೋ ಪಟ್ಟಣಗಳ ನಡುವಿನ ರಸ್ತೆಯನ್ನು ಕಡಿದು ಹಾಕಿರುವರು. ಇನ್ನೊಂದು ದಳ ಮಿಲಿಶಾ ಸೈನಿಕರು ಸಾನ್ ಸೆಬಾಸ್ಟಿಯನ್ ಪಟ್ಟಣದಿಂದ 10 ಮೈಲು ದೂರದ ವರೆಗೆ ಮುಂದೊತ್ತಿರುವರು.

ಬಂಡಾಯಗಾರರು ಹಲವು ಪಟ್ಟಣಗಳಿಗೆ ಮುಖ್ಯವಾಗಿ ಮೆವಾಗ ಬಂದರಿಗೆ ವಿಮಾನ ಮೂಲಕ ಬೋಂಬೆಸೆದು ಕೆಲವು ಹಡಗಗಳನ್ನು ಒಡೆದು ಹಾಕಿರುವರೆಂದು ವಿಮಾನಮೂಲಕ ಬೋಂಬೆಸೆದು ಕೆಲವು ಹಡಗಗಳನ್ನು ಒಡೆದು ಹಾಕಿರುವರೆಂದು ಅವರ ಕಡೆಯ ವಾರ್ತೆ.

ಮೇದ್ರಿದಿನಲ್ಲಿ ಬಂಡಾಯಗಾರರಿಗೆ ಒಂದು ಹೆಜ್ಜೆ ಕೂಡಾ ಮುಂದೊತ್ತಲಾಗಿರುವುದಿಲ್ಲ. ಅವರು ತಮ್ಮ ಸೇನಾರಚನೆಯನ್ನೇ ಬದಲಿಸಬೇಕಾಗಿದೆ. ಬಲವೇರದಲ್ಲಿರುವ ಬಂಡಾಯಗಾರರ ವಿಮಾನ ನಿಲಯಕ್ಕೆ ಸರಕಾರಿ ಕಡೆಯ ತೋಪಿನ ಗುಂಡು ಬಿದ್ದು 2 ದೊಡ್ಡ ವಿಮಾನಗಳು ಮುರಿದು ಹೋಗಿವೆ. ಆರೆವಾಸಿ ಬಲವೇರ ಪಟ್ಟಣಕ್ಕೆ ಬೆಂಕಿ ಹಿಡಿದು ಉರಿಯುತ್ತಿದೆ. ಕಳೆದ 4 ದಿನಗಳ ಬಂಡಾಯಗಾರರ 12 ಟ್ಯಾಂಕಿಗಳು ನಾಶಮಾಡಲ್ಪಟ್ಟು 6ನ್ನು ನೆಲಸ ಮಾಡದಂತೆ ಮಾಡಲಾಗಿದೆಯೆಂದು ಸರಕಾರದ ಕಡೆಯ ಸುದ್ದಿ.

ಮೇದ್ರಿದಿನ ಜನರ ಅವರ್ಣನೀಯ ಸಂಕಷ್ಟ.

ಸ್ಪೈನಿನಲ್ಲೀಗ ಬರ್ಬರವಾಗಿ ನಡಿಸಲ್ಪಡುವ ಯುದ್ಧದ ಪರಿಣಾಮವಾಗಿ ಜನತೆಗಾಗುವ ಹಾನಿಯನ್ನು ಆದಷ್ಟು ಕಡಿಮೆ ಮಾಡುವಂತೆ ಇಕ್ಕಡೆಯವರೊಡನೆಯೂ ಕೇಳಿಕೊಂಡು, ತಾವು ಸ್ವತಃ ಸಂಗತಿಗಳನ್ನೆ ಕಂಡು ತಿಳಿದು ಯುದ್ಧದ ಪೀಡೆಯನ್ನು ತಮ್ಮಿಂದ ಸಾಧ್ಯವಾದಷ್ಟು ಕಡಿಮೆಮಾಡಲೆತ್ನಿಸಲು, ಇಂಗ್ಲೆಂಡಿನ ಎಲ್ಲಾ ಪಕ್ಷಕ್ಕೆ ಸೇರಿದ ಕೆಲಮಂದಿ ಪಾರ್ಲಿಮೆಂಟ್ ಮೆಂಬರರು ಸ್ಪೈನಿಗೆ ಹೋಗಿರುವರು. ಅವರು ಮೇದ್ರಿದಿನ ಒಂದು ಮಿಲ್ಯಕ್ಕಿಂತಲೂ ಮಿಕ್ಕಿದ ಜನತೆಯ ಅವರ್ಣನೀಯ ಯಾತನೆಗಳನ್ನು ಕಂಡು ಮನಕರಗಿ ಅವರಿಗೆ ಹೊರಗಣವರು ಸಾಧ್ಯವಾದಷ್ಟು ಸಹಾಯಮಾಡಲೆತ್ನಿಸಬೇಕೆಂದು ವಿನಂತಿಮಾಡಿಕೊಂಡಿರುವರು. ಇವರ ಹೇಳಿಕೆಯಂತೆ ಮೇದ್ರಿದ್ ಪಟ್ಟಣದ ನಾಲ್ಕನೇ ಒಂದು ಭಾಗವು ಸಂಪೂರ್ಣ ನಾಶವಾಗಿ ಹೋಗಿರುವುದು. ಸೂರಾರು ಮಂದಿ ಕೊಲ್ಲಲ್ಪಟ್ಟಿರುವರು.

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 — 6	3—10	3 — 2	3 — 4
ಮುಕ್ತಿ ...	3 — 4	4 — 0	3 - 12	4 — 0
ಗುಡ್ಡು ಸುಗ್ಗಿ ...	3—10	3 - 14	3 - 6	3— 8
ಊರ ಅವ್ವಲ್ ಬೆಳ್ತಿಗೆ ...	4 - 4	4 - 12	4— 8	4—12
ರೆಂಗೂಸು ಬೆಳ್ತಿಗೆ ಗೋ. ೧ಕ್ಕೆ	6 - 2	7— 0	6 —10	6—12
ಗೋಡಿ ಗೋಣಿ ೧ಕ್ಕೆ ...	8 — 8	10 — 4	11 — 0	12— 0
ತೊಗರಿ ಗೋಣಿ ೧ಕ್ಕೆ ...	9 — 0	9 — 8	11— 8	...
ಹುರುಳಿ ಗೋಣಿ ೧ಕ್ಕೆ ...	5 — 4	5 —14	5 — 0	5— 8
ಕಡಲೆ ಗೋಣಿ ೧ಕ್ಕೆ ...	7—10	9 — 0	8 - 0	12— 8
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 8	18— 8
ಉದ್ದು ಗೋಣಿ ೧ಕ್ಕೆ ...	9— 8	10 — 0	9— 4	9— 8
ಪೆಸರು ಗೋಣಿ ೧ಕ್ಕೆ ...	9— 4	9 —12	10— 8	11— 0
ಊರುಬೆಲ್ಲ ಖಂಡಿ ೧ಕ್ಕೆ...	30— 0	35 — 0	20 — 0	25 — 0
ಉಪ್ಪು ಗೋಣಿ ೧ಕ್ಕೆ ..	4 - 8	4—12	4 —10	4 —12
ಟೊಬ್ರಿ ಖಂಡಿ ೧ಕ್ಕೆ ...	60 — 0	70 — 0	67— 8	70 — 0
ಟೊಬ್ರಿ ಹಿಂಡಿ ಖಂಡಿ ೧ಕ್ಕೆ	28— 0	30 — 8	33 — 0	36— 0
ಎಳ್ಳಿಂಡಿ ಖಂಡಿ ೧ಕ್ಕೆ ...	26— 4	28 —12	20— 0	21— 4
ಹೊಬ್ರಿ ಎಣ್ಣೆ ಮಣ ೧ಕ್ಕೆ	4—12	5—12	6— 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	7— 0	7— 0	5— 8	6 0
ಟಿಮಿಣಿ ಎಣ್ಣೆ ಪೆಟ್ಟಿಗೆ ೧ಕ್ಕೆ	6 — 5	6 — 5	6— 2	6— 4
ಮೋರಿನ ಪಕ್ಕರೆಮು ೧ಕ್ಕೆ	3 — 9	3— 5	3 — 3	3- 4
ಮೆಣಸು ...	2— 8	4— 0	2— 8	2—14
ಸಾಸಿವೆ ಮುಡಿ ೧ಕ್ಕೆ ...	5— 4	6- 0	5— 4	...
ಕಾಳುಮೆಣಸು ಮು. ೧ಕ್ಕೆ...	95— 0	102 — 0	110 0	120 — 0
ಗೇರುಬೀಜ ಮು ೧ಕ್ಕೆ ...	4 - 0	4— 4	4— 4	...
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	37— 8	40 — 0
ತಾಂಬ್ರ ತಗಡು ಮು. ೧ಕ್ಕೆ	9—12	9—14	12— 4	12 — 8
,, ಪಾತ್ರೆಗಳು ಮು. ೧ಕ್ಕೆ	12— 8	14— 0	14— 0	15— 0
ಚೀನಿ ಬೆಳ್ಳಿ ಸೇರು ೧ಕ್ಕೆ...	17— 8	18— 0	13 —12	14 0
ಹಿತ್ತಾಳೆ ತಗಡು ಮು. ೧ಕ್ಕೆ	10 — 0	10 — 0	10—	—
ಪವನು ೧ಕ್ಕೆ ...	92— 8	22— 8	22— 8	22— 8
ಹುಣಸೆ ಹುಳಿ ಖಂಡಿ ೧ಕ್ಕೆ	20— 0	25— 0	60 — 0	65— 0
ನೇಟಿವ್ ಕಾಫಿ ಖಂಡಿ ೧ಕ್ಕೆ	135 — 0	145— 0	...	...
ಫಿಚೇರಿ ಕಾಫಿ ಖಂಡಿ ೧ಕ್ಕೆ	165 — 0	175— 0	155 — 0	160— 0
ಮಡಿಕೇರಿ ಏಲಕ್ಕಿ ...	25 — 0	26— 8	...	...
ಕರಾಚಿ ಗೋದಿ ...	...	...	12— 0	...
ಏಲಕ್ಕಿ ಮಣ ೧ಕ್ಕೆ ...	...	...	56— 0	57— 0
ಹೊಸ ಕಾಫಿ ಖಂಡಿ ೧ಕ್ಕೆ	...	...	150— 0	155— 0

ನವಯುಗ ಚಕ್ರಬಂಧ ಸ್ಪರ್ಧೆ (ನಂ. ೩)

ಪ್ರಥಮ ಬಹುಮಾನ:—'ಉಡುಗರೆ' ದ್ವಿತೀಯ ಬಹುಮಾನ:-'ಇಲೆಕ್ಷನ್'

ಪ್ರಧಾನ ಮಂತ್ರಿಗಳು ಇದೇ ತಾ. 3 ಮತ್ತು 4ರಲ್ಲು ಎರಡೆರಡು ಸಲ ಚಕ್ರವರ್ತಿಗಳೊಡನೆ ದೀರ್ಘಸಮಯ ಮಾತುಕತೆನಡಿಸಿರುವರು. ಚಕ್ರವರ್ತಿಗಳ ತಮ್ಮಂದಿರೆಲ್ಲಾ ಲಂಡನಿಗೆ ಬಂದಿರುವರು. ಚಕ್ರವರ್ತಿಗಳು ತಾಯಿತಮ್ಮಂದಿರೊಡನೆಯೂ ಇತರ ರಾಜಪರಿವಾರದೊಡನೆಯೂ ಚರ್ಚಿಸಿರುವರು. ಚಕ್ರವರ್ತಿಗಳೊಡನೆ ಸಹಾನುಭೂತಿ ತೋರಿಸುವ ಜನ ಸಂಖ್ಯೆಯು ಅಧಿಕವಾಗುತ್ತಿರುವುದು. ಅವರು ಮಿಸೆಸ್ ಸಿಮ್ಸನರನ್ನೇ ವಿವಾಹವಾಗುವಂತೆ ಪಾರ್ಲಿಮೆಂಟಸಲ್ಲಿ ಹೊಸಕಾನೂನೊಂದನ್ನೇಕೆ ಮಾಡಬಾರದು? ಹಳೆಯ ಸಂಪ್ರದಾಯಕ್ಕೇನೇ ಏಕೆ ಕಟ್ಟುಬಿದ್ದಿರಬೇಕು. ತನ್ನಿಚ್ಛೆಯ ಸ್ತ್ರೀಯನ್ನು ವರಿಸುವ ಸ್ವತಂತ್ರವು ಚಕ್ರವರ್ತಿಗಳಿಗಿಲ್ಲವೆ? ಕಾನೂನನ್ನು ಬದಲಾಯಿಸಲು ಸಾಧ್ಯವಿಲ್ಲದಿದ್ದರೆ ಚಕ್ರವರ್ತಿಗಳು ಮಿಸೆಸ್ ಸಿಮ್ಸನರನ್ನು ವಿವಾಹವಾದರೂ ಅವರು ಪಟ್ಟದ ರಾಣಿಯಾಗದಿದ್ದರೆ ಸರಿ. ಕಿರೀಟ ಧಾರಣೆಗೂ ವಿವಾಹಕ್ಕೂ ಯಾವ ಸಂಬಂಧವೂ ಇಲ್ಲವೆಂಬ ನಾನಾ ಸೂಚನೆಗಳೆಲ್ಲಾ ಮುಂದೆ ಬಂದಿರುವವು. ಆದರೆ ಬಹುಮತವು ಈ ಸೂಚನೆಗಳಿಗೆ ವಿರೋಧವಿರುವುದು. ಇದೇ ತಾ. 4ರಲ್ಲು ಪಾರ್ಲಿಮೆಂಟ್ ಸಭೆಯಲ್ಲಿ ಪ್ರಧಾನ ಮಂತ್ರಿ ಬಾಲ್ಡ್ವಿನರು, ಚಕ್ರವರ್ತಿಗಳ ವಿವಾಹದ ಕುರಿತು ಯಾವ ಹೇಳಿಕೆಯನ್ನೂ ಈಗ ಕೊಡಲು ಸಾಧ್ಯವಿಲ್ಲ. ಆದರೆ ಅವರ ವಿವಾಹಕ್ಕೆ ಬೇಕಾಗಿ ಬ್ರಿಟಿಷ್ ರಾಜಮನೆತನದ ವಿವಾಹ ಕಾನೂನನ್ನು ಬದಲಾಯಿಸಲಿಕ್ಕಾಗಲಿ, ಚಕ್ರವರ್ತಿಗಳು ಮದುವೆಯಾಗಿಯೂ ಅವರ ಪತ್ನಿಯು ಪಟ್ಟದ ರಾಣಿಯಾಗದಿರುವ ವ್ಯವಸ್ಥೆಗಾಗಲಿ ಒಪ್ಪಲು ಸಾಧ್ಯವಿಲ್ಲೆಂದು ಸ್ಪಷ್ಟವಾಗಿ ತಿಳಿಸಿರುವರು. ಇದರಿಂದಾಗಿ ಎಡ್ವರ್ಡ್ ಚಕ್ರವರ್ತಿಗಳು ತನ್ನ ವಿವಾಹದ ಪ್ರಶ್ನೆಯನ್ನೆ ಮುಂದೆ ಹಾಕಬಹುದೆಂದು ಸುದ್ದಿಯುಂಟಾಗಿದೆ. ಬ್ರಿಟಿಷ್ ತರುಣ ತರುಣಿಯರು ಎಡ್ವರ್ಡ ಚಕ್ರವರ್ತಿಗಳ ಕುರಿತು ತುಂಬಾ ಸಹಾನುಭೂತಿಯುಳ್ಳವರಿದ್ದಾರೆ. ಇದೇ ತಾ. 4ರಲ್ಲು ಅರಮನೆಯ ಬಳಿ ಸುಮಾರು ೪೦೦೦ ಜನರು ಸೇರಿ ಚಕ್ರವರ್ತಿಗಳು ಸಿಂಹಾಸನ ತ್ಯಾಗ ಮಾಡಬಾರದು ಅವರಿಚ್ಛೆಯಂತೆಯೇ ವಿವಾಹವಾಗಬೇಕೆಂದೆಲ್ಲಾ ಉದ್ಘೋಷಿಸಿದರು. ಆದರೆ ಶ್ರದ್ಧಾಳು ಹಿರಿಯರು ಇದಕ್ಕೆ ವಿರೋಧವಿರುವರು. ಅದರಿಂದ ಬ್ರಿಟಿಷ್ ರಾಜಮನೆತನದ ಮತ್ತು ಸಾಮ್ರಾಜ್ಯದ ಗೌರವಕ್ಕೆ ದೊಡ್ಡಕುಂದುಂಟಾಗುವದೆಂದು ಅವರ ದೃಢ ನಿರ್ಧಾರವಿರುವುದು. ಅವರು ಎಡ್ವರ್ಡ್ ಚಕ್ರವರ್ತಿಗಳು ಸಿಂಹಾಸನ ತ್ಯಾಗಮಾಡಿದರೂ ಚಿಂತೆಯಿಲ್ಲ; ಮಿಸೆಸ್ ಸಿಮ್ಸನರನ್ನು ಪಟ್ಟದ ರಾಣಿಯಾಗಿ ಮಾಡಿಕೊಳ್ಳಬಾರದೆಂಬ ಅಭಿಪ್ರಾಯದಿಂದಿರುವರು. ಇದರಿಂದಾಗಿ ಚಕ್ರವರ್ತಿಗಳನ್ನೂ ಬ್ರಿಟಿಷ್ ಮಂತ್ರಿ ಮಂಡಲವನ್ನೂ ಮಹತ್ತಾದ ಸಮಸ್ಯೆಯೊಂದು ತಳಮಳಿಸಹತ್ತಿದೆ. ಇಡೀ ಲೋಕದಲ್ಲೇ ಕೋಲಾಹಲವನ್ನೆಬ್ಬಿಸಿದೆ. ಲೋಕದ ಪತ್ರಿಕೆಗಳೆಲ್ಲೆಲ್ಲಾ ಇದೇ ಸುದ್ದಿಯು ಪ್ರಾಮುಖ್ಯವಾಗಿ ಪ್ರಕಟಿಸಲ್ಪಡುತ್ತಿದೆ. ಈ ನಡುವೆ ಮಿಸೆಸ್ ಸಿಮ್ಸನರು ಅಮೇರಿಕದಿಂದ ಫ್ರಾನ್ಸಿಗೆ ಬಂದಿರುವರೆಂದು ತಿಳಿದು ಬಂದಿದೆ.

ಇದೇ ತಾ. ೫ರ ವರೆಗೆ ಎಡ್ವರ್ಡ್ ಚಕ್ರವರ್ತಿಗಳ ವಿವಾಹ ಸಂಬಂಧವಾದ ಸಮಸ್ಯೆಯು ಯಾವ ಇತ್ಯರ್ಥವು ಆಗಿರುವುದಿಲ್ಲ. ಇದೇ ತಾ. 7ರಲ್ಲು ಪ್ರಧಾನ ಮಂತ್ರಿಗಳು ಈ ಕುರಿತು ಹೇಳಿಕೆಯನ್ನೀಯಲಿರುವರು. ಚಕ್ರವರ್ತಿಗಳು ತನ್ನಿಚ್ಛೆಯ ಸ್ತ್ರೀಯನ್ನು ಪುದುವೆಮಾಡಿಕೊಳ್ಳುವ ನಿಮಿತ್ತ ಅವರು ಸಿಂಹಾಸನ ತ್ಯಾಗಮಾಡುವಂತೆ ಒತ್ತಾಯ ಮಾಡುವುದು ತಪ್ಪೆಂಬ ಅಭಿಪ್ರಾಯವು ಬಲಗೊಳ್ಳುತ್ತಿರುವುದು. ಚಕ್ರವರ್ತಿಗಳು ಸಿಂಹಾಸನ ತ್ಯಾಗಮಾಡಬೇಕೆಂದು ಸಲಹೆಯಾಯಲು ಯಾವ ಮಂತ್ರಿಗೂ ಅಧಿಕಾರವಿಲ್ಲ. ಈಗಿನ ವೈಶಮ್ಯವು ಚಕ್ರವರ್ತಿ ಮತ್ತು ಪಾರ್ಲಿಮೆಂಟ್‌ಗಳು; ಬ್ರಿಟಿಷ್ ಮಂತ್ರಿ ಮಂಡಲ ಮತ್ತು ಚಕ್ರವರ್ತಿಗಳೊಳಗಾಗಿದೆ. ಆದುದರಿಂದ ಪಾರ್ಲಿಮೆಂಟಿನ ಅಭಿಪ್ರಾಯ ಕೇಳದೆ ಮಂತ್ರಿ ಮಂಡಲಕ್ಕೆ ಯಾವ ಕೆಲಸಮಾಡಲೂ ಅಧಿಕಾರವಿಲ್ಲ. ಚಕ್ರವರ್ತಿಗಳು ತನ್ನ ಅಭಿಪ್ರಾಯವನ್ನು ತಾನಾಗಿಯಾಗಲಿ ಬರೆದಾಗಲಿ ಪಾರ್ಲಿಮೆಂಟಿಗೆ ತಿಳಿಸತಕ್ಕದ್ದೆಂದು ಮಿ. ಚರ್ಚಿಲ್ಲರ ಅಭಿಮತ ಬ್ರಿಟಿಷ್ ಮಂತ್ರಿ ಮಂಡಲವು ಪುನಹ ಒಮ್ಮೆ ಸೇರಿ ಚರ್ಚಿಸಿ ಮಂತ್ರಿಗಳ ಅಭಿಮತವನ್ನು ಪ್ರಧಾನ ಮಂತ್ರಿಗಳು ಚಕ್ರವರ್ತಿಗಳಿಗೆ ತಿಳಿಸಿರುವರು. ಮಿಸೆಸ್ ಸಿಮ್ಸನರು ಫ್ರಾನ್ಸ್‌ನಲ್ಲಿ ಪತ್ರಿಕಾ ಪ್ರತಿನಿಧಿಗಳ ಕಾಟವನ್ನು ತಪ್ಪಿಸಲು ಎಲ್ಲೆಲ್ಲೊ ಗುಪ್ತವಾಗಿ ಸಂಚರಿಸುತ್ತಿರುವರು. ಹೋದ ಹೋದಲ್ಲಿ ಪತ್ರಿಕಾ ಪ್ರತಿನಿಧಿಗಳು ಅವರ ಬೆನ್ನು ಹಿಡಿದಿರುವರು. "ನಾನಾವ ಪ್ಲೇಸನ್ನೂ ಮಾಡಿಲ್ಲ. ಎಲ್ಲಾ ವಿಷಯವನ್ನು ನಿರ್ಣಯಿಸುವ ಭಾರ ಅರಸರದು. ನನಗೀಗ ಏಕಾಂತವಾದ ವಿಶ್ರಾಂತಿ ಬೇಕಾಗಿದೆ" ಎಂದು ಮಿಸೆಸ್ ಸಿಮ್ಸನರು ಹೇಳಿರುವರು. ಚಕ್ರವರ್ತಿಗಳು ಎಂತಹ ನಿರ್ಣಯಕ್ಕೆ ಬಂದರೂ ತಾವವರಿಗೆ ಬೆಂಬಲವಾಗಿ ನಿಲ್ಲಲಿರುವೆನೆಂದು ಕೆಲಮಂದಿ ಪಾರ್ಲಿಮೆಂಟ್ ಮೆಂಬರರು ಅವರಿಗೆ ಪತ್ರ ಬರೆಯಲಾರಂಭಿಸಿರುವರು.

೫ನೇ ಪುಟದಿಂದ ಮುಂದರಿಸಿದ್ದು.

ಯಾಗಿ ಮುಂದೆ ನಡೆಯಬೇಕು. ಹೀಗೆ ಮಾಡಬೇಕಾದರೆ ಕಾಂಗ್ರೆಸಿನ ಕಾರ್ಯಕ್ರಮಕ್ಕೆ ನಾವು ಸಹಾಯವನ್ನು ಕೊಡಬೇಕು. ಅಂದರೆ ಈಗ ಕಾಂಗ್ರೆಸ್ ಕೈಕೊಂಡಿರುವ ಕೌನ್ಸಿಲು ಪ್ರವೇಶದ ಕಾರ್ಯಕ್ರಮಕ್ಕೆ ಹಿಂದೀ ಜನತೆಯು ಬೆಂಬಲ ಕೊಟ್ಟು ತಮ್ಮ ಪ್ರತಿಯೊಂದು ಓಟನ್ನೂ ಕಾಂಗ್ರೆಸ್ಸಿನಿಂದ ಆರಿಸಲ್ಪಟ್ಟ ಜನರಿಗೆ ಮಾತ್ರ ಕೊಡುವುದರಿಂದ ಆದೀತು.

ಕಾಂಗ್ರೆಸ್ಸಿಗೆ ಅಪಜಯವೆಂದರೆ ನನ್ನ ಅಪಜಯ, ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ನನ್ನ ಹೋರಾಟದಲ್ಲಿ ನನ್ನ ಪ್ರತಿಯೊಂದು ಓಟೂ ಕಾಂಗ್ರೆಸ್ಸಿನ ಶಕ್ತಿಯನ್ನು ಹೆಚ್ಚಿಸಿ ಸ್ವಾತಂತ್ರ್ಯದ ಸಮಾಪಕ್ಕೆ ನಮ್ಮನ್ನು ಒಯ್ಯುತ್ತದೆಂಬುದನ್ನು ನಾವು ಮರೆಯಲಾಗದು.

ಬಾಲವಾಜ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾಲವಾಜ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉಡುಪಿ

ಮಂಗಳೂರು.

(ನಮ್ಮ ಸ್ವಂತ ಜಾತ್ಮಿದಾರರಿಂದ)

ಸ್ವಾಸ್ಥ್ಯ ಸಂಘದವರ ಶಿಕ್ಷಣ ಶಿಬಿರ

ಮಂಗಳೂರಿನ ಸ್ವಾಸ್ಥ್ಯ ಸಂಘದವರು ಇದೇ ಬರುವ ತಾ. ೨೨ರಿಂದ ಸ್ವಾರಂಭಿಸಿ ಜನವರಿ ತಾ. ೭ರ ವರೇಗೆ ಒಂದು ಶಿಕ್ಷಣ ಶಿಬಿರವನ್ನು ಜರೆಯುವರು. ಇದಕ್ಕೆ ವಿದ್ಯಾರ್ಥಿಗಳಿಗೂ, ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೂ ಪ್ರವೇಶವಿದೆ. ಈ ಶಿಬಿರದ ಕಾರ್ಯಕಲಾಪಗಳಲ್ಲಿ ಭಾಗ ವಹಿಸುವವರು, ಅಥವಾ ಭಾಗ ವಹಿಸಲಿಚ್ಛಿಸುವವರು ಶ್ರೀ। ಆರ್. ಆರ್. ಹಟ್ಟೆಂಗಿಕರರೊಡನೆ ಬರೆದು ತಿಳಿಯಬಹುದು. ಶಿಬಿರವು ಮಂಗಳೂರಿನ ಬೈನ ಬಸ್ತಿಯ ವಸಾರದಲ್ಲಿ ನಡೆಯುವುದು.

"ಕನ್ನಡ ವಾಙ್ಮಯದಲ್ಲಿ ದಕ್ಷಿಣ ಕನ್ನಡದ ಸ್ಥಾನ"—

ಮದ್ರಾಸ್ ಯುನಿವರ್ಸಿಟಿ ಎಕ್ಸ್‌ಟೆನ್‌ಶನ್ ಬೋರ್ಡಿನ ಆಶ್ರಯದಲ್ಲಿ, ಸ್ಥಳೀಯ ಸೈಂಟ್ ಆಲ್ಫೋಸಿಯಸ್ ಕಾಲೇಜಿನ ಸಭಾಸದನದಲ್ಲಿ ವಿದ್ವಾನ್ ಮುಳಿಯ ತಿಮ್ಮಪ್ಪಯ್ಯನವರು ಮೇಲಿನ ವಿಷಯದಲ್ಲಿ ಅರ್ಧ ಗಂಭೀರ ಭಾಷಣವನ್ನಿತ್ತರು. ವಿದ್ವಾನ್, ಕೆ. ಶಂಕರಭಟ್ಟರು ಅಧ್ಯಕ್ಷರಾಗಿದ್ದರು.

ಉಪನ್ಯಾಸಕರು ತಮ್ಮ ಭಾಷಣದಲ್ಲಿ ತಾವು ಇಂದಿನ ವಾಙ್ಮಯದ ವಿಷಯವಾಗಿ ಮಾತಾಡುವುದಲ್ಲ ವೆಂದೂ, ಮತ್ತು ಆಗಿನ ದಕ್ಷಿಣಕ್ಕೆ ಕೊಡಿಪ್ಪ ಉತ್ತರಕನ್ನಡವನ್ನು ಸಹ ಸೇರಿಸಿ ತಾವು ಮಾತಾಡುವುದಾಗಿಯೂ ಹೇಳಿದರು. ನೈಪತುಂಗನು ದಕ್ಷಿಣ ಭಾಗಕ್ಕೆ ಪುಲಸೇರಿ ಎಂದು ಕರೆದಿಪ್ಪ ನೆಂದೂ, ಅನಂತರ ಇದೆ ತೆಂಕ ನಾಡೆಂದು ಕರೆಯಲ್ಪಟ್ಟ ತೆಂದೂ ಬರೆದುದಾಗಿ ಕಂಡು ಬರುತ್ತದೆಂದರು! ಆನ್ ಎಂದು ಹೇಳುವನರು ದಾಕ್ಷಿಣಾತ್ಯ ಕನ್ನಡಿಗರು ಎಂದೊಂದು ಕಡೆ ಉಲ್ಲೇಖಿಸಲ್ಪಟ್ಟಿದೆಯೆಂದರು. ಕವಿತೆಯ ವಿಷಯವಾಗಿ ಹೇಳುತ್ತಾ ಸೋಮರಾಜ ನೆಂಬವನು ಬಹಳ ಪ್ರಸಿದ್ಧನೆಂದೂ ಅವನು ದ. ಕನ್ನಡಿಗನೆಂದೂ, ಚೌಟ ಅರಸರ ಕಾಲದಲ್ಲಿದ್ದ ವನೆಂದೂ, ವೀರಶೈವಸುತಾವಲಂಬಿಯಾಗಿದ್ದ ವನೆಂದೂ, ಶ್ರೀಮಠದ ಕಾಲಕ್ಕಿಂತ ಸ್ವಲ್ಪ ಈಗಿನವನೆಂದೂ ಹೇಳಿದರು. ಇವನ ಕವಿತೆಗಳಲ್ಲಿ ಧಾರ್ಮಿಕ ವಿಶಾಲತೆ ಯಿರುವುದೆಂದರು. ಅನಂತರದ ದೊಡ್ಡ ಕವಿಗಳಲ್ಲಿ ಹೆಸರುವಾಸಿಯಾಡವನು ಸಾಳ್ವನು. ಇವನು ತಾರ್ಕ ಳವನು. ಇವನ 'ರಸರತ್ನಾಕರ' 'ಸಾಳ್ವ ಭಾರತ' ಇವು ಹೆಸರುವಾಸಿಯಾಡ ಗ್ರಂಥಗಳು, ಪದ್ಮನಾಭ ನೆಂಬ ಕವಿಯು ಮೂಲ್ಕಿಯವನು. ಇದೇ ರೀತಿ ಭಟ್ಟುಳಕಂಕ, ಮುನ್ಣ, ನಗರದ ಸುಬ್ಬಯ್ಯ, ಪಾರ್ತಿ ಸುಬ್ಬ ಇವರೇ ಮೊದಲಾದ ಕವಿಗಳ ವಿಷಯವನ್ನು ಹೇಳಿ, ಅವರು ಬರೆದ ಗ್ರಂಥಗಳಿಂದ ಉದಾಹರಣೆಗಳನ್ನೆತ್ತಿ ಕೊಂಡು ಮಾತಾಡಿದರು: ಆಧ್ಯಕ್ಷರು, ತಮ್ಮ ಭಾಷಣದಲ್ಲಿ ಕನ್ನಡನಾಡಿನ ಸುಮಾರು 1148 ಕವಿಗಳ ಪೈಕಿ ಸುಮಾರು 48-50 ಮಂದಿಗೆ ಕಡಿಮೆಯಿಲ್ಲವೆಪೆ ದ. ಕನ್ನಡದವರೆಂದೂ, ಅವರೆಲ್ಲರೂ ಒಂದೊಂದು ರೀತಿಯ ಉತ್ತಮ ಗ್ರಂಥಗಳನ್ನು ಬರೆದು ಕನ್ನಡ ವಾಙ್ಮಯದ ಸೇವೆ ಮಾಡಿದರೆಂದೂ ತಿಳಿಸಿದರು. ಧನ್ಯವಾದಗಳೊಂದಿಗೆ ಸಭೆಯು ಮುಗಿಯಿತು.

ಜಿಲ್ಲಾ ಆರ್ಥಿಕ ಸಭೆ—

ದಶಂಬರ ತಾ. ೧೫ನೇ ಶನಿವಾರ ದಿನ ಪೂರ್ವಾಹ್ನ ೧೧ ಘಂಟೆಗೆ ಸರಿಯಾಗಿ ದ. ಕನ್ನಡ ಜಿಲ್ಲಾ ಆರ್ಥಿಕ ಸಮಿತಿಯ ಸಭೆಯು ಕಲೆಕ್ಟರರ ಕಚೇರಿಯಲ್ಲಿ ಜರಗುವುದು. ಬೆರ್ಚ್‌ಗೆ ಬರತಕ್ಕ ವಿಷಯಗಳನ್ನು ಮುಂಚಿತವಾಗಿ ಆಫೀಸಿಗೆ ತಿಳಿಸಬೇಕೆಂದೂ ಸೂಚನೆ ಕೊಟ್ಟಿದ್ದಾರೆ.

ಹರಿಜನರ ಸ್ಪಾತಿನಿಧ್ಯ—

ಮದ್ರಾಸ್ ನ್ಯಾಯ ವಿಧಾಯಕ ಸಭೆಯಲ್ಲಿ ಹರಿಜನರ ಪರವಾಗಿರ ತಕ್ಕ ಒಂದು ಸ್ಥಾನಕ್ಕೆ ಮದ್ರಾಸಿನ ಪ್ರಜಾಪಕ್ಷದವರು (ನೇಷ್‌ಲ್ಸ್ ಪಾರ್ಟಿ) ಜಲ್ಲಾ ಎಜ್ಯುಕೇಷನ್ ಕೌನ್ಸಿಲ್ ಸದಸ್ಯರಾದ ಶ್ರೀ ಗೋಪಾಲ ಶಾಟ್ಟಿಯರನ್ನು ತಮ್ಮ ಪಕ್ಷದ ಉಮೇದ್ವಾರರನ್ನಾಗಿ ಆಂಗೀಕರಿಸಿರುವ ತ್ತಾರೆ.

ಸಭೆ ನಡೆಯದಂತೆ ಚಳವಳಿ—

ಕಳೆದ ತಾ. ೭ರಲ್ಲಿ ಜಿಲ್ಲಾ ಸರಕಾರಿ ನೌಕರರ ಒಂದು ಸಭೆಯು ಗವರ್ನಮೆಂಟ್ ಕಾಲೇಜಿನಲ್ಲಿ ಕೂಡಬೇಕಾಗಿತ್ತು. ಸದಸ್ಯರ ಪೈಕಿ ಒಂದು ಪಕ್ಷದವರು ಕನಸ್ಟೆಸ್ಟೆ ಸಂಖ್ಯೆಯಿಲ್ಲವೆಂದು ಜೊರ ಬಂದು ಮತ್ತೆ ಬಂದ ಸದಸ್ಯರನ್ನು ಒಳಗೆ ಹೋಗದಂತೆ ಗೇಟಿನ ಹತ್ತಿರ ಪಿಕೆಟ್ ಮಾಡಿದರೆಂದು ತಿಳಿದು ಬಂದಿದೆ. ಅಂತೂ ವಿಷಯಿಂಗು ನಡೆಯಲಿಲ್ಲ. ಸರಕಾರಿ ನೌಕರರೇ ಈ ರೀತಿ ಮಾಡಿದುದಾದರೆ ಏನೆನ್ನಬೇಕು?

ಮೆಡಿಕಲ್ ಆಫೀಸರರ ವರ್ಗಾವರ್ಗಿ-

ಇಲ್ಲಿನ ಅಸಿಸ್ಟೆಂಟ್ ಮೆಡಿಕಲ್ ಆಫೀಸರರಾದ ಡಾ ಪಿ. ಯಂ ವೆರ್ಗೀಸರು ಪುತ್ತೂರ್ ಸರಕಾರಿ ಆಸ್ಪತ್ರೆಯ ಸಿವಿಲ್ ಅಸಿಸ್ಟೆಂಟ್ ಸರ್ಜನರಾಗಿ ವರ್ಗಾಯಿಸಲ್ಪಟ್ಟಿರುವರು. ಅವರ ಸ್ಥಾನದಲ್ಲಿ ಡಾ। ಬಿ ರಾಮ ಭಟ್ ಜೀಯವರು ಇಲ್ಲಿಯ ಅಸಿಸ್ಟೆಂಟ್ ಮೆಡಿಕಲ್ ಆಫೀಸರರಾಗಿ ಸೇಮಕ ಹೊಂದಿರುವರು.

ಜಿ. ಕಾಂಗ್ರೆಸ್ ಕಾರ್ಯಕಾರಿ ಮಂಡಲಿಗೆ ಚುನಾವಣೆ—

ದ. ಕನ್ನಡ ಜಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಗೂ, ಮಂಗಳೂರು ತಾಲೂಕು ಮತ್ತು ಟೌನ್ ಕಾಂಗ್ರೆಸ್ ಕಮಿಟಿಗಳಿಗೂ ಸದಸ್ಯರನ್ನಾರಿಸುವ ಬಗ್ಗೆ ಸಜ್ಜಾದಲ್ಲಿದೇ ಚುನಾವಣೆಯಾಗಲಿದೆ.

ಕರ್ನಾಟಕ ಧುರೀಣರ ಬೇಡಿಕೆ—

ಡಾ। ಎನ್. ಎಸ್. ಹರಡೀಕರರು ಒಂದು ಸಂಪೇಕ್ಷವನ್ನು ದ. ಕನ್ನಡದ ಮತದಾರರಿಗೆ ಕಳುಹಿಸಿರುವರು. ಪಾರ್ಲಿಮೆಂಟರಿ ಬೋರ್ಡಿನ ಸದಸ್ಯರ ನಿಯಮವಾಗಿ ಕೆಲ ಆಕ್ಷೇಪಣೆಗಳು ಕೇಳಿಬರುವ ವಿಷಯವಾಗಿ ಹೇಳುತ್ತಾರೆ. ಆ ಸಂಸ್ಥೆಯವರು ನ್ಯಾಯ ರೀತಿಯಂಪಲೇ ವರ್ತಿಸುವರೆಂದೂ, ವೈಯಕ್ತಿಕ ದೃಷ್ಟಿಯಿಂದ ವರ್ತಿಸಲ್ಲವೆಂದೂ ತಿಳಿಸಿರುವರು. ಒರುವ ಚುನಾವಣೆಯಲ್ಲಿ ಕಾಂಗ್ರೆಸ್ ಸದಸ್ಯರೂ, ಕಾಂಗ್ರೆಸಿನ ವಿಷಯದಲ್ಲಿ ಸಹಾನುಭೂತಿ ಇರುವವರೂ ಎಲ್ಲರೂ ಒಂದಾಗಿ ಕಾಂಗ್ರೆಸ್ ಕಡೆಯ ಹುರಿಯಾಳುಗಳಿಗೇನೆ ಸಂಪೂರ್ಣ ಬೆಂಬಲವೀಯಬೇಕೆಂದೂ, ಆ ಮೂಲಕ ರಾಷ್ಟ್ರದ ಕ್ಷೇತ್ರಿಯನ್ನು ಕಾಪಾಡ ಬೇಕೆಂದೂ ಮತದಾರರನ್ನು ಸ್ವಾರ್ಥಿಸಿಕೊಂಡಿರುವರು.

ಉಡುಪಿ

ಗಾರ್ಡಿಯನ್ ಆಫ್ ಇಂಡಿಯಾ ಇನ್ಶುರೆನ್ಸ್ ಕಂಪೆನಿ, ಲಿಮಿಟೆಡ್ ಮದ್ರಾಸು ಈ ಸಂಸ್ಥೆಯ ಬ್ರಾಂಚ್ ಸೆಕ್ರೆಟರಿಯವರು ಆರ್ಗೇನೈಜರರೊಂದಿಗೆ ಉಡುಪಿಗೆ ಈ ವಾರದಲ್ಲಿ ಬಂದಿದ್ದು ಸ್ಥಳೀಯ ಪ್ರಮುಖರನೇಕರನ್ನು ಕಂಡು ತಮ್ಮ ಜೀವವಿಮಾ ಕಂಪೆನಿಯ ಮಾಹಿತಿಗಳನ್ನಿತ್ತು ಸ್ಪೆಸಲ್ ಏಜೆನ್ಸಿಗಳನ್ನು ಸ್ಥಾಪಿಸಿ ಮುಂದಕ್ಕೆ ಪ್ರಯಾಣ ಬೆಳೆಸಿದರು.

ಸಿಂಡಿಕೇಟ್ ಬ್ಯಾಂಕ್:—

ಇದರ ಶಾಖೆಯನ್ನು ಬೊಂಬಾಯಿಯಲ್ಲಿ ತೆರೆಯುವ ಪೂರ್ವ ಸಿದ್ಧತೆಗಾಗಿ ಅಲ್ಲಿಗೆ ಹೋಗಿದ್ದ ಡಾ। ಟಿ. ಮಾಧವ ಪೈಗಳು ಬರುವ ಎಪ್ರಿಲ್ ಯಾ ಮೇ ತಿಂಗಳಲ್ಲಿ ಶಾಖೆಯನ್ನು ಪ್ರಾರಂಭಿಸಲು ಅಣಿಮಾಡಿಟ್ಟು ಮರಳಿ ಬಂದಿರುವರು. ಬೊಂಬಾಯಿಯವರೆಲ್ಲರ ಮೆಹನಾಟಿಗೂ ಆನುಕೂಲವಾಗುವಂತೆ, ಸ್ಯಾಮುಯ್ಯಿ ಸ್ಟ್ರೀಟಲ್ಲೇ ಕಾರ್ಯಾಲಯವನ್ನು ತೆರೆಯಲಾಗುವುದೆಂದು ತಿಳಿಯುತ್ತೇವೆ.

ಡಾ। ಟಿ. ಮಾಧವ ಪೈಗಳು ಡಾಕ್ಟರ್ ಮಿಸ್. ಆರ್. ಎಸ್. ಕಾರಂದರನ್ನು ತನ್ನ ಆಸ್ಪತ್ರೆಯಲ್ಲಿ ಸೇನಿಸಿಕೊಂಡಿರುವರು; ಪ್ರಸೂತಿಕಾಗೃಹ (Maternity Home)ದ ವಿಭಾಗವನ್ನು ಕೂಡಾ ಮಾಡಿರುವರು.

ಗೀತಾ ಜಯಂತಿ.

ಇದೇ ಬರುವ ಮಾರ್ಗಶಿರ ಶುದ್ಧ ೧೧ ಯು ತಾ. 24-12-36ನೇ ಗುರುವಾರ ಅಪರಾಹ್ನ ಘಂಟೆ 3 ರಿಂದ 5ರ ವರೆಗೆ ಶ್ರೀ ಕೃಷ್ಣ ಸನ್ನಿಧಿಯ ವಸಂತ ಮಂಟಪದಲ್ಲಿ ಗೀತಾಜಯಂತ್ಯುತ್ಸವವನ್ನು ಜರಗಿಸುವುದಾಗಿ ನಿರ್ಣಯಿಸಿರುವುದರಿಂದ ಆಸ್ತಿಕ ಮಹಾಜನರೆಲ್ಲರೂ ಸನ್ನಿಹಿತರಾಗಿ ಸದರಿ ಉತ್ಸವವನ್ನು ಸಾಂಗಗೊಳಿಸಿ ತಜ್ಜನ್ಯ ಪುಣ್ಯಫಲ ಸಾತ್ರರಾಗಬೇಕಾಗಿ ಕೋರುವ,

ಮಿಯ್ಯಾರ ನರಸಿಂಹಾಚಾರ್,
ತಿರೋಣುಣಿ
ಜನರಲ್ ಸೆಜಂಟ್ಸ್,
ಪರ್ಯಾಯ ಶ್ರೀ ಪೇಜಾವರ ಮಠ, ಉಡುಪಿ.

ವಿ. ಸೂ:—ಈ ಸಂದರ್ಭದಲ್ಲಿ ಶ್ರೀಯುತ ಕೆ. ವೆಂಕಟ್ರಮಣಾಚಾರ್ಯರವರ ಗೀತೆಯ ಅಮೂಲ್ಯೋನವೇಶದ ವಿಷಯವಾಗಿಯೂ, ಶ್ರೀಯುತ ಪೇಜಾವರ ಸೀತಾರಾಮಾಚಾರ್ಯರವರ ಗೀತೆಯ ವಿಮರ್ಶೆಯ ವಿಷಯವಾಗಿಯೂ ಉಪನ್ಯಾಸಗಳು ಇರುವುವು.

ಸೂಚನೆ:—ಕಳೆದ ತಾ. ೧೭ರಲ್ಲಿ ಕೋರ್ಟಿಗೆ ಹೋಗಿ ಹಿಂದಿರುಗಿದ್ದ ಶ್ರೀ. ಕೆ. ನಾರಾಯಣ ಹೆಗ್ಡೆಯವರು ಆಕಸ್ಮಾತ್ ಹೃದಯಸ್ತಂಭದಿಂದ ಮೃತರಾದುದು ಶೋಚನೀಯವಿದೆ.

ಪತ್ರವ್ಯವಹಾರ

(ಬಾಕ್ಸಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಕುಗೆ ಕೊಡಬೇಕಾಗಿದೆ. ಬಾಕ್ಸಿಗಳು ಒಡಪ್ಪು ಸಂಕ್ಷೇಪವಿದ್ದು ಕಾಗದದ ಒಂದೇ ಮಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಬಾಕ್ಸಿದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)
ಸಂ. ನ.

ವೇದಮೂರ್ತಿಗಳಾದ
ಪಿ. ಯನ್.
ಬನ್ನಂಜೆ ರಾಮಾಚಾರ್ಯರಿಗೆ

ಸ್ವಾಮಿ,

ತಾವು ಶ್ರೀಕೃಷ್ಣ ಸಂದೇಶವನ್ನು "ವತ್ಸಲರ ಗೃಹ ಚಾರ" ಎಂಬ ಲೇಖನವನ್ನು ಬರೆದು "ಇದು ಯಾರ ನ್ನೂ ಉದ್ದೇಶಿಸಿ ಬರೆದುದಲ್ಲ" ಎಂತ ಶರಾ ಬರೆದಿರುವಿರಲ್ಲ. ಇದರ ಕುರಿತು ದಯವಾಡಿ ಈ ಕೆಳಗಿನ ಪ್ರಶ್ನೆಗಳಿಗೆ ನವಯುಗದ ಬರುವ ಸಂಚಿಕೆಯಲ್ಲಿಯೇ ಉತ್ತರ ಕೊಡುವಿರಾಗಿ ನಂಬುತ್ತೇನೆ.

೧ ನೀವು ಬ್ರಾಹ್ಮಣರು ಮತ್ತು ವಿಶ್ವ ವಿಚಾರ ಬಲ್ಲವರು.

೨ ನಿಮ್ಮ ವಿಶ್ವ ಪ್ರತಾರ ಮನುಷ್ಯನಿಗೆ ಮನಸ್ಸಾಕ್ಷಿಯಿಂಬುದೊಂದಿದೆಯೇ?

೩ ಹಾಗಿದ್ದರೆ ಮನಸ್ಸಾಕ್ಷಿಗೆ ವಿರೋಧವಾಗಿ ಯಾವದಾದರೊಂದು ಕೆಲಸವನ್ನು ಒಬ್ಬ ವ್ಯಕ್ತಿಯು ಮಾಡಿದರೆ ಆತನು ಪರಮ ಚಂಡಾಲನೆಂಬ ನಿಮ್ಮ ವಿಶ್ವಗೆಳು ಹೇಳುತ್ತಾರೆಂಬೋ?

೪ ಹಾಗಿದ್ದರೆ ನಿಮ್ಮ ಮನಸ್ಸಾಕ್ಷಿಗೆ ವಿರೋಧವಾಗಿ ತಾವು ಬೆಳಲಿಕ್ಕೆಲ್ಲನೆಂಬ ಭಾವನೆಯಿಂದ ಕೇಳುತ್ತೇನೆ. ನೀವು ಪೇಲಿನ ಲೀಮಿನವನ್ನು ಯಾರಾದೊರೊಬ್ಬ ವ್ಯಕ್ತಿಯನ್ನು ಉದ್ದೇಶಿಸಿಯೇ ಬರೆದ ದ್ದಲ್ಲವೋ?

೫ ಅದು ಹೌದಾದರೆ ಯಾರನ್ನು?

ಈ ಪ್ರಶ್ನೆಗಳಿಗೆ ನೀವು ಉತ್ತರವನ್ನು ಕೊಡದಿದ್ದರೆ ನಿಮ್ಮ ಬರದ ಮೇಲಿನ ಲೇಖನವು ನೀವು ಯಾರೊಬ್ಬ ವ್ಯಕ್ತಿಯನ್ನು ಉದ್ದೇಶಿಸಿಬರದ್ದೆಂತಲೂ ಮನಃಸಾಕ್ಷಿಗೆ ವಿರೋಧವಾಗಿ "ಇದು ಯಾವನ್ನೂ ಉದ್ದೇಶಿಸಿ ಬರೆದುದ್ದಲ್ಲ" ಎಂತಬರದ್ದೆಂತಲೂ ತಿಳಿಯುತ್ತೇನೆ.

ಕೆ. ರಾಮಕೃಷ್ಣ ರಾವ್

ತಿದ್ದು ಪಡಿ:— ಕಳೆದ ನವಯುಗದ ತುಳು ಸಂಚಿಕೆಯಲ್ಲಿ ತುಳುನಾಡ್ ಲಿಸಿ ಬಗಟ್ ನಂಬ್ರ ೧. ಬಗೆಯಿನ ಉತ್ತರ ಬರೆಯುವವರು ದಶಂಬರ ತಾ. ೧೧ ಎಂಬುದು ತಪ್ಪಾದ್ದರಿಂದ ದಶಂಬರ ೩೧ನೆ ತಾರೀಕಿನೊಳಗೆ ಕಳುಹಬೇಕೆಂದು" ಎಂಬಂತೆ ತಿದ್ದಬೇಕಾಗಿ ವಿಜ್ಞಪ್ತಿ.

ತುಳುನಾಡ್, ಪೊಳಲಿ.

THE BOMBAY LIFE ASSURANCE Co., LTD.
ESTD 1908
Church Gate Street, Fort - - BOMBAY.
SPECIAL FEATURES.
1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.
It pays you to represent this Company.
Wanted Agents in unrepresented parts.
Apply to:—
KOCHIKAR BROTHERS,
Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut.
Car Street, Mangalore	Udipi, S. India.	Charni Road, Bombay No. 4.

EVIDENCE OF SECURITY & STABILITY
FIGURES THAT SPAEK FOR THEMSELVES
TOTAL ASSETS Rs. 80,66,600
Summary of 1935 Accounts

Total Assets Over	... ...	Rs. 80,00,000
Life Funds Over	... ...	Rs. 68,00,000
Premium Income Over	...	Rs. 22,54,000
Interest Income	... ...	Rs 3,16,000
Claims Paid	... ...	Rs. 5,75,000
Total Claims paid Over		Rs. 38,50,000
Total Business in Force Over		Rs. 4,42,51,200

TOTAL BUSINESS IN FOICE Rs. 4,42,51,200

ಚಂದಾದಾರರಲ್ಲಿ

ನಮ್ಮ ಚಂದಾದಾರರೆಲ್ಲರೂ ತಮ್ಮ ಚಂದಾಹಣವನ್ನು ದಯವಿಟ್ಟು ಆದಷ್ಟು ಬೇಗನೇ ಕಳುಹಿಸಿಕೊಡಬೇಕಾಗಿ ವಿನಂತಿ. ವಿ. ಪಿ. ಮೂಲಕ ಸ್ವೀಕರಿಸಲಿಚ್ಛಿಸುವವರು ಆ ದನ್ನು ಮುಂಚಾಗಿ ತಿಳಿಸಬೇಕಾಗಿ ಅಪೇಕ್ಷಿಸುತ್ತೇವೆ.

ಮೆನೇಜರ್, 'ನವಯುಗ'
ಉಡುಪಿ

ನವಯುಗ

ಉಡುಪಿ, ತಾ ೧೦-೧೨-೧೩೬ ಗುರುವಾರ

ಪ್ರಾಥಮಿಕ ಶಿಕ್ಷಣ.

ಇದೇ ತಾ. ೩೦ರಲ್ಲು ಮಾನ್ಯ ಮದ್ರಾಸ್ ಗವರ್ನರರು, ಪ್ರಕೃತದ ಕೌನ್ಸಿಲನ್ನು ಕೊನೆಗೊಳಿಸುವಾಗ ಕೊಟ್ಟ ಭಾಷಣದಲ್ಲಿ, ಸರಕಾರವು ವ್ಯಾಂತದ ಪ್ರಾಥಮಿಕ ಶಿಕ್ಷಣದ ಕುರಿತು ತೆಗೆದುಕೊಳ್ಳಲಿರುವ ಆತ್ಯಂತ ಪ್ರಾಮುಖ್ಯ ಹಾಗೂ ಹೊಸ ರೀತಿಯ ಹೆಜ್ಜೆಯ ಕುರಿತು ಪ್ರಸ್ತಾಪಿಸಿದರು. ಈ ಸಂಬಂಧವಾದ ಸವಿವರವಾದ ಸ್ಟೇಟ್‌ಮೆಂಟೊಂದು ಇನ್ನು ಮುಂದೆ ಪ್ರಕಟವಾಗಲಿರುವುದೆಂದು ನಂಬಬೇಕಾಗಿದೆ. ಆದರೆ ಆ ಕುರಿತಾದ ಪ್ರಾಮುಖ್ಯ ವಿಷಯಗಳನ್ನು ಲೋಡ್ರ್ ಆಸ್ಟ್ರಿನ್‌ರು ಮಾತ್ರವಲ್ಲದೆ, ಖಾಸಗಿ ಆದಳತೆಗೊಳಗಾಗಿರುವ ಎಲಿಮೆಂಟರಿ ಶಾಲೆಗಳಿಗೆ ಟೀಚಿಂಗ್ ಗ್ರಾಂಟ್ ಕೊಡುವ ಮತ್ತು ಡಿವಿಜನಲ್ ಇನ್ಸ್‌ಪೆಕ್ಟರರನ್ನೂ ಎಡ್ಡಿಶನ್ ಸಬೋರ್ಡಿನೇಟ್ ಇನ್ಸ್‌ಪೆಕ್ಟರರನ್ನೂ ನೇಮಿಸುವ ಬಗ್ಗೆ ಹಣವನ್ನೊದಗಿಸಲು ಕೌನ್ಸಿಲಿನ ಮುಂಜಿ ಸ್ಪೆಷಲ್ ಮೆಂಟರಿ ಗ್ರಾಂಟಿನ ಸೂಚನೆ ತಂದಾಗ ಶಿಕ್ಷಣ ಮಂತ್ರಿಗಳೂ ಎತ್ತಿ ಹೇಳಿರುವರು. ಈಗಣಂತೆ ಸಾರ್ವತ್ರಿಕವಾದ ಗ್ರಾಂಟಿನ ಕದಿತದ ಬಡಲಿಗೆ ಇನ್ನು ಮುಂಪೆ, ಯೋಗ್ಯ ಶಾಲೆಗಳಿಗೆ ಸಂಪೂರ್ಣ ಎನೆಸ್ಟ್ ಗ್ರಾಂಟನ್ನೇ ಕೊಡಲಾಗುವುದು. ಪ್ರಸ್ತುತ ಪ್ರಮಾಣಕ್ಕಿಂತ ಕಳಪೆಯಾಗಿರುವ ಅಯೋಗ್ಯ ಶಾಲೆಗಳ ಗ್ರಾಂಟನ್ನು ಕಡಿಮೆ ಮಾಡಲಾಗುವುದು. ಅಧ್ಯಾಪಕರ ಪರಿಸ್ಥಿತಿಯನ್ನು ಸುಧಾರಿಸಿ ಒಲರ ಸಂಬಳವನ್ನು ಹೆಚ್ಚಿಸುವ ಆಲೋಚನೆ ನಬೆದಿದೆ. ಇನ್ಸ್‌ಪೆಕ್ಷನಿನ ಶಿಬ್ಬಂದಿಯು ಕೂಡಾ ಹೆಚ್ಚಿಸಲ್ಪಡುವುದು. ಪ್ರಾಥಮಿಕ ಶಿಕ್ಷಣ ಪ್ರಸಾರದ ಕುರಿತು ಡಾಕ್ಟರ್ ಸುಬ್ರಾಯನರ ಮಂತ್ರಿಮಂಡಲವು ಅನುಸರಿಸಿದ ಉದಾರ ಧೋರಣೆಗೆ ಪ್ರತಿ ವಿರುದ್ಧವಾಗಿ ನಡೆದು ಕೊಂಡು ಒಂದ ಜಸ್ಟಿಸ್ ಪಕ್ಷವು ಈಗಲಾದರೂ ಆ ಕುರಿತು ಕಣ್ಣು ತೆರೆಯುವಂತಾದುದು ಸಂತೋಷಕರ. ಮತ್ತು ಶಾಲೆಯ ಯೋಗ್ಯತೆಯನ್ನು ಹೆಚ್ಚಿಸಿ, ಆನಾವ್ಯಯವನ್ನು ಕಡಿಮೆ ಮಾಡುವ ಒಡ ಅಧ್ಯಾಪಕರ ಸ್ಥಿತಿಗತಿಯನ್ನು ಸುಧಾರಿಸುವ ಸೂಚನೆಗಳಿಲ್ಲಾ ಸರ್ವ ಸಮ್ಮತಿಯ ಒಪ್ಪಿಗೆ ಪೊರೆಯದಿರಲಾರದು.

ಆದರೆ ದೇಶಕ್ಕೆ ಹೆಚ್ಚಿನ ರಾಜಕೀಯ ಜವಾಬ್ದಾರಿಯು ದೊರೆತು ಪ್ರತಿಯೊಬ್ಬನೂ ರಾಜ್ಯಭಾರದ ಸಂಗತಿಗಳನ್ನು ತಿಳಿಕೊಳ್ಳುವ ಆವಶ್ಯಕತೆಯಿರುವ ಪ್ರಕೃತದ ಪರಿಸ್ಥಿತಿಯಲ್ಲಿ, ದೇಶದಲ್ಲಿ ಆತ್ಯಂತ ಶೋಚನೀಯವಾಗಿ ನೆಲೆಗೊಂಡಿರುವ ನಿರಕ್ಷತೆಯನ್ನು ತೊಲಗಿಸಿ ಹೆಚ್ಚಿನವರು ಓದು-ಬರಹ ಬಲ್ಲಪರಿಣಗುವಂತೆ ಮಾಡಲು ಯಾವ ಏರ್ಪಾಟು ಮಾಡಲಾಗಿದೆಯೆಂಬುದು ಮಾನ್ಯ ಗವರ್ನರ ಅಧವಾ ಶಿಕ್ಷಣ ಮಂತ್ರಿಗಳ ಭಾಷಣಗಳಿಂದ ತಿಳಿದುಬರಲಿಲ್ಲ. ಇದೇ ತಾ. ೩೦ರಲ್ಲು ಮದ್ರಾಸ್ ಕೌನ್ಸಿಲಿನಲ್ಲಿ ನಡೆದ ಚರ್ಚೆಯಲ್ಲಿ ಪ್ರಾಮುಖ್ಯ ವಿಷಯಗಳನ್ನೊಳಗೊಂಡಿತ್ತು. ಅಧ್ಯಾನಕರ ಸಂಬಳದ ಸ್ಕೇಲನ್ನೂ ಶಾಲೆಗಳ ಗ್ರಾಂಟನ್ನೂ ಹೆಚ್ಚಿಸಬೇಕೆಂದು ಹಲವು ಮೆಂಬರರು ಒತ್ತಿ ಹೇಳಿದರು. ಲೋಕಲ್ ಬೋರ್ಡು ಮತ್ತು ಖಾಸಗಿ ಆಡಳಿತಕ್ಕೊಳಗಾಗಿರುವ ಶಾಲೆಗಳ ಅಧ್ಯಾಪಕರಿಗೆ ಸಂಬಳವು ಬಹಳ ವಿಳಂಬವಾಗಿ ದೊರೆಯುವ ಅವ್ಯವಸ್ಥೆ ತೀವ್ರವಾಗಿ ಖಂಡಿಸಲ್ಪಟ್ಟಿತು. ಶಾಲೆಗಳ ಯಾವುದೊಂದು ವಿಧದ ಅನುಭವವಿಲ್ಲದವರನ್ನು ಇನ್‌ಸ್ಪೆಕ್ಟರರಾಗಿ ನೇಮಿಸುವ ಆಯುಕ್ತತೆಯ ಕುರಿತು ಟೀಕೆ ನಡೆದು ಶಾಲೆಗಳ ಸರಿಯಾದ ಅನುಭವವಿರುವವರು ಮಾತ್ರವೇ ಇನ್‌ಸ್ಪೆಕ್ಟರರಾಗಿ ನೇಮಿಸಲ್ಪಡಬೇಕೆಂದು ಸೂಚಿಸಲಾಯಿತು. ಜಿಲ್ಲಾ ಎಜ್ಯುಕೇರನಲ್ ಕೌನ್ಸಿಲುಗಳು ಅಸಾವಶ್ಯಕ ಮತ್ತು ಅಪ್ರಯೋಜಕವೆಂದು ಕೆಲಮಂದಿ ಮೆಂಬರರು ಟೀಕಿಸಿ ಅವನ್ನು ತೆಗೆದು ಹಾಗಿ ಪ್ರಾಥಮಿಕ ಶಿಕ್ಷಣದ ಸರ್ವಜವಾಬ್ದಾರಿಯನ್ನು ಸರಕಾರವೇ ವಹಿಸಿಕೊಳ್ಳಬೇಕೆಂದು ಅಭಿಪ್ರಾಯಪಟ್ಟರು. ಐಡೆಡ್ ಶಾಲೆಗಳು ಇರಬೇಕಾದರೆ ಅವುಗಳಿಗೆ ಉದಾರವಾದ ಸಹಾಯವನ್ನೀಯಬೇಕು. ಅವುಗಳು ಯೋಗ್ಯವಾಗಿ ನಡೆಸಲ್ಪದುವಂತೆ ಕಠಿಣ ಮೇಲ್ವಿಚಾರವನ್ನಿಡಬೇಕು. ಇಲ್ಲವಾದರೆ ಅವು ಯೋಗ್ಯ ರೀತಿಯಲ್ಲಿ ನಡೆಸಲ್ಪಡಲಾರವು. ಕೆಲವು ಕಡೆ ಲೋಕಲ್ ಬೋರ್ಡು ಮತ್ತು ಐಡೆಡ್ ಶಾಲೆಗಳೊಳಗೆ ಅನಾವಶ್ಯಕ ಮತ್ತು ಅಸುಚಿತವಾದ ಹೋರಾಟ ನಡೆಯುತ್ತವೆ ಎಂತಹ ಪ್ರತಿಸ್ಪರ್ಧೆಗೆ ಯಾಪ ಅಸ್ಪದವನ್ನೂ ದೊರೆಯದಂತಾಗಬೇಕು. ಸರಕಾರವು ಪ್ರಾಥಮಿಕ ಶಿಕ್ಷಣದಲ್ಲಿ ಮಾಡಬೇಕೆಂದಿರುವ ಸುಧಾರಣೆಯು ತೃಪ್ತಿಕರವಿರುವುದೆಂಬುದರಲ್ಲಿ ಸಂದೇಹವಿಲ್ಲ ಆದರೆ ನಿರಕ್ಷರತೆಯನ್ನು ನಿವಾರಿಸಲು ಇನ್ನೂ ಸಾಹಸಪರ ಹಾಗೂ ವಿತವ್ಯಾಪಕ ಏರ್ಪಾಡುಗಳು ಅತ್ಯಾವಶ್ಯಕವಿರುತ್ತವೆ. ಈ ಕಾರ್ಯವನ್ನು ಸರಕಾರವು ಇನ್ನು ಮುಂದೆ ಕೈಕೊಳ್ಳಬೇಕಾಗಿದೆ.

'ಲೇಂಡ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್'

ಹಿಂದುಸ್ಥಾನದಲ್ಲಿ ಆಸ್ತಿ-ಹಣ್ಣುವಳಿಗಳ ಪ್ರಶ್ನೆಯೇ ಪ್ರಾಮುಖ್ಯವಾದುದು. ನಮ್ಮ ದಕ್ಷಿಣ ಕನ್ನಡವು ಅದಕ್ಕೆ ಅಪವಾದವಾಗಿಲ್ಲ. ಕಳದ ಕೆಲವು ವರ್ಷಗಳಿಂದ ದವಸಧಾನ್ಯಗಳ ಬೆಲೆಯು ತೀರಾ ಇಳಿದು ಹೋಗಿ, ೧೦ ವರ್ಷಗಳ ಹಿಂದಿನ ಧಾರಣೆಯ ಮೂರನೇ ಒಂದೆಂಶಕ್ಕೆ ಬಂದಿದೆ; ಧಾನ್ಯಗಳ ಉತ್ಪತ್ತಿಯಿಯುವ ಆಸ್ತಿಯ ಬೆಲೆಯೂ ಅನೇ ಪಾಮಾಶಯಕ್ಕೆಳಿದಿದೆ. ಈ ಪರಿಸ್ಥಿತಿಯಲ್ಲಿಯೂ ಇಳಿತಾಯವಾಗದಿರುವದೆಂದರೆ, ತೀರ್ಪೆ ಮತ್ತು ಗೇಣಿಯ ಪರಿಮಾಣದಲ್ಲಿ. ಬಡರೈತರ ನಿತ್ಯ ಜೀವನದ ವೆಚ್ಚದಲ್ಲಿ ಹೀಗಾಗಿ ಇಂದಿನ ರೈತರಿಗೆ ಸುಖಸ್ವಾತಂತ್ರ್ಯವಲ್ಲ--ಆ ೧೦ ವರ್ಷಗಳ ಹಿಂದಿನ ಪರಿಸ್ಥಿತಿಯಾದರೂ ಒದಗಬೇಕಾದರೆ ಅಂದಿನ ಮೂರು ವಾಲನ್ನು ಈ ದಿನ ಗಳಿಸಬೇಕಾಗಿದೆ. ನಿರುದ್ಯೋಗ ಮತ್ತು ಸಂಸಾರದ ಹೆಚ್ಚಳದಿಂದ ಆ ಭಾಗದಲ್ಲಂತೂ ರೈತರ ಸ್ಥಿತಿಯು ತೀರಾ ಕಳತೆಯದಾಗಿದೆ. ರೈತರ ಈ ಭೀಕರ ಆಡಚಣೆಯ ನಿವಾರಣೆಗಾವ ಹಾದಿ? ಇಡೀ ದೇಶದ ಖ್ಯಾಮುಖ್ಯ ಪ್ರಶ್ನೆಯಲ್ಲಿ ಅಡಕವಾಗಿರುವ ಅದೊಂದು ಹಾದಿಯು ಬೇರೆಯೇ ಇದೆ; ಹೆಚ್ಚಿಗೆಯಾಗಿ ಬಂದು ಬಿದ್ದಿರುವ ಸದ್ಯದ ಬರಗಾಲಕ್ಕೊಂದು ಜರೂರಿನ ಶಮನವು ಬೇಕೇ ಬೇಕು; ಆದನ್ನು ಯಾವ ಯಾವ ಹಾದಿಗಳಲ್ಲಿ ಅನುಸರಿಸಲು ಸಾಧ್ಯವಿದೆಯೋ ಅವನ್ನೆಲ್ಲಾ ಮಾಡಿಯೇ ತೀರಬೇಕು.

ದ. ಕ. ಜಿಲ್ಲೆಯ ಕೆಲವು ಆಧ್ಯ ಮಹನೀಯರು 'ಲೇಂಡ್ ಇನ್‌ವೆಸ್ಟ್‌ಮೆಂಟ್ ಟ್ರಸ್ಟ್' ಎಂಬ ಸಂಸ್ಥೆಯನ್ನು ಸ್ಥಾಪಿಸುವ ಮನಸು ಮಾಡಿರುವದು ಸಂದರ್ಭೋಚಿತವಿದೆ. ಬೆಳೆಗಳ ಧಾರಣೆಯಿಳಿದ ದೆಸೆಯಿಂದ ಆಸ್ತಿಯ ಧಾರಣೆಯೂ ತಗ್ಗಿ ಸಣ್ಣ ಪುಟ್ಟ ರೈತರು ಹಿಂದಿನ ಸಾಲ, ಮತ್ತು ಕರಿಗೆಯನ್ನು ಸಂದಾಯಮಾಡುವ ಸಲುವಾಗಿ ತಮ್ಮ ಆಸ್ತಿಗಳನ್ನು ಮಾರಬೇಕಾಗಿ ಬಂದಿದೆ; ಅಂತಹ ಆಸ್ತಿಗಳನ್ನು ಪಡಕೊಳ್ಳುವ ವರನ್ನೂ ಅವೇ ಆಡಚಣೆಗಳು ಅಂಟಿಕೊಳ್ಳುತ್ತವೆ. ಹೀಗಾಗಿ ಆಸ್ತಿ ಪಡಕೊಳ್ಳುವದೆಂದರೆ ಮಹಾ ಸಾಹಸನಾಗಿ ಹೋಗಿರುವ ಈ ಕಾಲದಲ್ಲಿಯೇ ಬೇಂಕುಗಳು ರೇವಣ್ಣಾತಿಯ ನೋಲೆ ಸೇಕಡಾ ೭ ಯಾ ೮ ರಂತೆ ಬಡ್ಡಿ ಕೊಡಲು ತಯಾರಿರುವಾಗ ಹಣವೆಲ್ಲಾ ಸಹಜವಾಗಿ ಅವುಗಳಲ್ಲಿ ಸೇರಿ ಹೋಗಿದೆ ಪರಿಣಾಮವಾಗಿ 'ಆಗ್ಗ'ವಾಗಿ ಹೋದ ಆಸ್ತಿಗಳನ್ನಾದರೂ ಕೊಂಡುಕೊಳ್ಳುವವರು 'ಪ್ರಿಯ'ವಾಗಿ ಹೋಗಿದ್ದಾರೆ. ಇಲ್ಲೀಗ ಸಣ್ಣ ಪುಟ್ಟ ವರ್ಗದಾರರ ಎಲ್ಲಾ ಹಾದಿಗಳೂ ಮುಚ್ಚಲ್ಪಟ್ಟಂತೆಯೇ! ಇಂತಹ ಸಮಯದಲ್ಲಿ ಈ ಟ್ರಸ್ಟಿನಂತಹ ಸಂಸ್ಥೆಯ ಅಗತ್ಯವಿದೆಯೆಂದು ಬೇರೆ ಬೇಕಬೇಕಾಗಿಲ್ಲ. ಈ ಸಂಸ್ಥೆಯ ಮೂಲಕ ಹಲವು ಆಡಚಣೆಗಳನ್ನು ನಿವಾರಿಸಲು ಸಾಧ್ಯವಿದೆ. ಮೊದಲನೆಯದಾಗಿ ಸಾಲಿಗರಾದ ವರ್ಗದಾರರು ತಮ್ಮ ಆಸ್ತಿಗಳನ್ನು ಹೆಚ್ಚಿನ ಕಷ್ಟವಿಲ್ಲದೆ ಇದಕ್ಕೆ ಮಾರಬಹುದು. ಎರಡನೆಯದಾಗಿ ವಕ್ಕಲುಗಳು ಬಿಟ್ಟುಬೇಗಾರಿಗಳ ಉಪದ್ರವಿಲ್ಲದೆ ಗೇಣಿಯನ್ನೊಂದು ತೆತ್ತು ನೆಮ್ಮದಿಯಿಂದಿರಬಹುದು. ಮೂರ್ತವಲ್ಲ ವರ್ಷವರ್ಷವೂ ಏನಾದರೂ ಉಳಿತಾಯ ವಿದ್ದರೆ, ಅದನ್ನು ಈ ಸಂಸ್ಥೆಯಲ್ಲಿಯೇ ಜಮಾಯಿಸುತ್ತಾ ಬಂದು ತಾನು ಬೆವರಿಳಿಸಿ ದುಡಿದುಕೊಂಡು ಬರುತ್ತಿರುವ ಆಸ್ತಿಯನ್ನು ಕಾಲಕ್ರಮೇಣಕ್ರಯಕ್ಕೆ ಪಡಕೊಂಡು ತನ್ನದನ್ನಾಗಿ ಮಾಡಿಕೊಳ್ಳಬಹುದು. ಊರಲ್ಲಿ ಅಭಿಮಾನದಿಂದ, ಸಮಾನತೆಯಿಂದ ತಲೆಯೆತ್ತಿ, ತಾನೊಂದು ಸಂಸ್ಥೆಯ ಒಕ್ಕಲಾಗಿ ಬಾಳಬಹುದು. ಇನ್ನು ಈ ಸಂಸ್ಥೆ ಗಂತೂ ಅತ್ಯಂತ ಆಶಾದಾಯಕವಾದ ಭವಿಷ್ಯವಿದೆ ಬೆಳೆಗಳ ಧಾರಣೆಯು ಮುಂದಕ್ಕಂತೂ ಖಂಡಿತವಾಗಿ ಏರುವುದು. ಶೇಕಡಾ ೬೦ರಂತೆ ಪರಿದರೆ ಮೂಲ ಧನದ ಮೇಲೆ ಸುಮಾರು ಸೇಕಡಾ ೧೬ರಷ್ಟು ಪ್ರತಿಫಲ ಸಿಕ್ಕಬಹುದು. ಸೇಕಡಾ 100 ರಷ್ಟು ಏರಿದರೆ ಡಿವಿಡೆಂಡೂ ಸೇಕಡಾ ೩೬ ರಷ್ಟು ಏರುವದು. ಇನ್ನು ಈ ಕಂಪೆನಿಯ ಬಂಧವಾಳದ ಬಲದಿಂದ ಡಿಬೆಂಚರುಗಳ ಮೇಲೆ ೩½ ಅಥವಾ 4ರ ದರ ಬಡ್ಡಿಯಲ್ಲಿ ಹಣ ಪಡಕೊಂಡು ಆಸ್ತಿಯನ್ನು ಸೇಕಡಾ ೫½ರ ದರದಲ್ಲಿ ವಹಿಸಿಕೊಂಡು, ಲಾಭಾಂಶದಿಂದ ಖರ್ಚನ್ನು ಪೂರೈಸಿ ಸಾಲಗಾರರಾದ ವರ್ಗದಾರರಿಗೆ ಸಹಾಯವನ್ನೂ ಮಾಡಬಹುದು.

ಇಲ್ಲಿ ಒಂದು ವಿಷಯವನ್ನು ಸೂಚಿಸಲೇಳಸುತ್ತೇನೆ. ಹಣವೂ ಅರ್ಥಶಾಸ್ತ್ರ ನೈಪುಣ್ಯವೂ ಇದ್ದಲ್ಲಿ ಒದಗಬಹುದಾದ ಸೌಲಭ್ಯಗಳವು. ಅವುಗಳನ್ನು ಇನ್ನಷ್ಟು ವಿಶಾಲಗೊಳಿಸಿ ಜನತೆಯ ಹಿತಸಾಧಿಸಲು ಸಾಧ್ಯವಿದೆ. ಈಗ ಒಕ್ಕಲುಗಳಿಗೆ ಹೊರಿಸಲ್ಪಟ್ಟಿರುವ ಗೇಣಿಯು ವಿಪರೀತವಿದೆ. ಧನಿಗಳು ತಮ್ಮ ಶಕ್ತಿಯನ್ನೆಲ್ಲಾ ಉಪಯೋಗಿಸಿ, ಎಷ್ಟಕ್ಕೂ ವಸೂಲಾಗಲು ಸಾಧ್ಯವಿಲ್ಲದೆ ಬಾಕಿಯುಳಿಯುವ ಗೇಣಿಯ ಮೊತ್ತ ವೇನೂ ಕಡಿಮೆಯಿಲ್ಲ. ಸಂಸ್ಥೆಯ ಶಕ್ತಿಯು ಮಹತ್ವದ್ದು; ಅದಕ್ಕೆ ಅನುಕೂಲತೆ ಅಧಿಕ. ಅವನ್ನೆಲ್ಲಾ ಗೇಣಿ ವಸೂಲಿಯಲ್ಲಿಯೂ ಉಪಯೋಗಿಸಿಬಿಟ್ಟರೆ ಅನಿವಾರ್ಯವಾಗಿ ದೊರೆತ ರಿಯಾಯತಿಯೂ ಒಕ್ಕಲಿನವರಿಗಿಲ್ಲದಂತಾಗುವದು. ಆದ್ದರಿಂದ ಆ ಕಡಗೆ ಕಂವೆನಿಯು ಹೆಚ್ಚಿನ ಲಕ್ಷ್ಯವೀಯಬೇಕಾಗಿದೆ. ಒಕ್ಕಲಿನವರಿಗೆ ನ್ಯಾಯವಾಗಿ ಎಷ್ಟು ಗೇಣಿಯನ್ನು ತೆರಲು ಸಾಧ್ಯವಿದೆಯೆಂಬುದನ್ನು ಮೊದಲೇ ನೋಡಿಕೊಳ್ಳಬೇಕಾಗಿದೆ. ಇತ್ತ ಸಣ್ಣ ಪುಟ್ಟ ವರ್ಗದಾರರಿಗೆ, ಆ ಕಡಿಮೆ ಮಾಡಿದ ಗೇಣಿಯ ಪೆಟ್ಟು ಬೀಳದಂತಾಗಬೇಕು. ಅವರಿಂದ ಪಡಕೊಳ್ಳುವ ಆಸ್ತಿಯ ಬೆಲೆಯು ಮುಂದಕ್ಕೆ ಬಹಳವಾಗಿ ಏರುವ ಸಂಭವವಿದೆ. ಆ ಭವಿಷ್ಯದ ಪರಿಣಾಮವನ್ನು ಕಂವೆನಿಯು ಈಗಲೇ ಜ್ಞಾಪಿಸಿಕೊಂಡರೆ ತಪ್ಪಾಗದು. ಇಂತಹ ಉದಾರ ಧೋರಣೆಯಿಂದ ಅದರ ವ್ಯವಹಾರ ಕ್ಷೇತ್ರವು ಬೆಳೆಯದಿರದು. ಆರ್ಥಿಕ ಕ್ಷೇತ್ರದಲ್ಲಿ ನಿನ್ನೆಯಿಂದ ಮುಂದು ವರಿಯುವಾಗ ದೊರೆಯುವ ಹೆಚ್ಚಿನ ಅನುಕೂಲತೆಗಳನ್ನು ಅವರ ಮೂಲ ಆಧಾರಗಳಾದ ರೈತರ ಹಾಗೂ ಸಣ್ಣ ಪುಟ್ಟ ವರ್ಗದಾರರ ಹಿತಸಾಧನೆಯಲ್ಲಿ ಉಪಯೋಗಿಸಿದರೆ, ವ್ಯವಹಾರದ ವಿಸ್ತಾರಕ್ಕೂ ಅನುಕೂಲ; ಜನತೆಗೂ ಸೌಖ್ಯ. ಈ ಕಂಪೆನಿಯು ಇಂತಹ ಉಚ್ಚ ಸಾಧನೆಗಳೊಡನೆ ಬೇಗನೇ ಕಾರ್ಯಕ್ಷೇತ್ರಕ್ಕಿಳಿಯುವಂತಾಗಲೆಂದು ಹಾರೈಸುತ್ತೇವೆ.

ಕರ್ನಾಟಕ ವಿಶೇಕರಣ ಪರಿಷತ್ತು.

ಡಾ. ಯು. ರಾಮರಾಯರ ಆಧ್ಯಕ್ಷತೆಯಲ್ಲಿ ಬೆಳಗಾಂವಿಯಲ್ಲಿ ಜಯಶೀಲವಾಗಿ ನೆರವೇರಿತು. ಕರ್ನಾಟಕದ ಮಹಾ ದುರವಸ್ಥೆಯೆಂದರೆ ಬೇರೆ ಬೇರೆ ಆಧಿಕಾರಕ್ಕೊಳಪಟ್ಟು ಛಿನ್ನಛಿನ್ನವಾಗಿ ಹೋಗಿರುವದೆ; ಮೈಗೂಡಿ ಬೆಳೆಯಲನುಕೂಲವಿಲ್ಲದುದು. ಅದರ ನಿವಾರಣೋಪಾಯವನ್ನು ಪರಿಷತ್ತು ಸೂಚಿಸಿದೆ. ಆ ಸೂಚನೆಯನ್ನು ಕಾರ್ಯರೂಪದಿಂದ ಕಾಣುವಂತಾಗುವದೆಂದು ನೆನಸುತ್ತೇವೆ. ಸಭೆ, ಭಾಷಣಗಳಿಂದ ಕರ್ನಾಟಕ ವಿಶೇಕರಣದ ಅವಶ್ಯಕತೆಯನ್ನು ಮನಗಾಣಿಸಿದುದು ಸಾಕಾಗದಿರಬಹುದು; ಆದಕ್ಕೂ ಮಿಗಿಲಾಗಿ ಕೆಲಸವಾಗದುದೇ ನವಿಾದುಸಿ ತಿಗೆ ಕಾರಣವೆನ್ನಬಹುದು.

A copy of this prospectus has been duly filed with the Assistant Registrar of Joint Stock Companies, Mangalore.

SOUTHERN LAND TRUST LIMITED.

(INCORPORATED UNDER INDIAN COMPANIES ACT, 1913.)

Share lists will be kept open from Monday the 14th December to Monday the 21st December 1936.

(both days inclusive.)

Authorised Capital Rs. 5,00,000

Divided into 50,000 shares of Rupees Ten each.

Present issue 30,000 shares of Rs. Ten each.

PAYABLE AS FOLLOWS

On Application . . . . Rs. 2/ **On Allotment . . . . Rs. 2/**

Three calls of Rs. 2 each at an interval of not less than one month between each and between allotment and the first call.

The whole of the above issue is underwritten by the Managing Agents, Western Agencies Limited, without any commission or underwriting charges.

DIRECTORS:

1. A. SRINIVAS PAI Esq., B. A., B. L. (Ex-officio), *President, Kallyanpur Sugar Mills Ltd.*
   President, Canara Bank, Ltd.
2. DEWAN BAHADUR U. RAMA RAO, *Retired Secretary to the Government of Madras,*
   Director, Kalyanpur Sugar Mills Ltd.
3. N. RAMA RAO Esq., B. A., B. L., *Vice President, District Educational Council,*
   South Kanara and Director, Jaya Laxmi Bank, Ltd.
4. M. VENKATESH PAI Esq., (*Special*) *Banker, Director, Mangalore*
   Electric Supply Co., Ltd., Etc.

BANKERS:

CANARA BANKING CORPORATION (UDIPI) LIMITED.
CANARA INDUSTRIAL AND BANKING SYNDICATE LIMITED.
CANARA BANK LIMITED.

AUDITOR:

A. UMANATHA RAO Esq., B. A., G. D. A., DIP. (ECON.) REGISTERED ACCOUNTANT.

MANAGING AGENTS: **Western Agencies Limited**; *Registered Office*: **MANGALORE**

PROSPECTUS

OBJECTS:

THE Company is formed with the objects specified in the Memorandum of Association (copy whereof forms part of this Prospectus) and with the object specially of buying yielding agricultural land and small buildings. The advantages of Investment Trust Companies are well known providing as they do, facilities which would not be otherwise available, for spreading risks. The ordinary Investment Trust Companies utilise their funds for buying shares of Joint Stock Companies but as prices of shares are now very high and there is a possibility of prices going down the shares of such Investment Trust Companies are not a very attractive investment. On the other hand land prices are now at a very low level and should show a very good appreciation in a short time.

COMPANY'S PROSPECTS:

IT is possible at present to buy lands yielding 5 per cent to 6 per cent on the capital invested even after allowing for taxes, remissions and voids. It is the intention of the Directors to provide only 25 per cent of the purchase price from Capital and to finance as to 75 per cent by means of Debentures at about four per cent per annum.

Thus for every Rs. 100 worth of land bought by the Company, the income will be about Rs. 5 out of which 10 per cent is estimated to go as rent collection charges leaving Rs. 4/8 net. Out of this amount Rs. 3/- is payable to debenture holders as interest at 4 per cent on Rs. 75/- and Rs. 1/8 is available for dividend on Rs. 25/-.

At the same time it should be remembered that prices of all agricultural produce are now only a half or a third of their level eight or ten years back which means that there is a possibility of their rising by 100 per cent or 200 per cent. Even if they should rise by only 50 per cent, of which there seems to be every prospect, there would be a return of 15 per cent on the Capital invested while should prices on an average rise by 100 per cent a dividend of 24 per cent would become possible.

Investments of this kind secure all the advantages of land owning coupled with high yields which individual landowning does not secure while at the same time all the risks and difficulties connected with the collection of rent by individual owners are avoided. In short "Better than gilt edged" can truly be said of these investments.

CAPITAL APPRECIATION:

AN excellent feature of the best English Investment Trust Companies that has been incorporated in the Articles of Association is the provision that any capital appreciation realised by the Company during the variation of any of the Company's investments shall be treated as accretions of capital and shall in no circumstances be distributable among the shareholders as profits but shall only be available and applied for capital purposes.

AGREEMENTS:

THE following agreement will be entered into by the Company:

Agreement with Western Agencies Limited appointing them the Managing Agents of the Company. The terms and conditions of the agreement are printed as Schedule to the Memorandum and Articles of Association.

MANAGING AGENCY INTEREST & REMUNERATION:

The Articles of Association provide for the appointment of Western Agencies Limited as the Managing Agents of the Company for the period and upon the terms and conditions set out in the agreement referred to in Article 3 and printed as a Schedule to the Articles of Association of the Company. The remuneration payable to the Managing Agents by the Company as provided in the said agreement is (*a*) an office allowance of Rupees one hundred per mensem and (*b*) a commission of 5 per cent on the net profits of the Company, such commission to be increased to 10 per cent if and whenever a dividend of not less than 10 percent is declared by the Company.

DIRECTORS' QUALIFICATIONS, INTEREST & REMUNERATION:

No Directors other than Messrs A. Srinivas Pai and M. Venkatesh Pai who are directors of Western Agencies Limited have any interest in the promotion of the Company.

The qualification of a Director other than ex-officio and special shall be the holding of two hundred and fifty shares in the Company and until otherwise determined by the Company in a General Meeting the remuneration of each Director shall be Rs. 10/ for every meeting of Directors or Committee of Directors attended by him; and the Directors shall also be entitled to such travelling allowance as the Directors may from time to time fix.

If any Director being willing shall be called upon to perform, and shall perform, extra services or make any special exertions for any of the purposes of the Company then the Directors may remunerate the Director so doing, in such manner as shall be determined by the directors.

PRELIMINARY EXPENSES:

It is estimated that the preliminary expenses of and incidental to the formation and floating of the Company (exclusive of commission and brokerage) will not exceed in the aggregate Rs. 2500/- and are payable by the Company. No promotion money has been or will be paid.

MINIMUM SUBSCRIPTION:

The minimum subscription upon which the Company will proceed to allotment is 1,000 shares.

BROKERAGE AND COMMISSION:

The Article provides as follows:—

The Company may at any time pay a commission to any person for subscribing or agreeing to subscribe (whether absolutely or conditionally) for any shares in the Company or procuring or agreeing to procure subscriptions (whether absolute or conditional) for any shares in the Company but so that if the commission shall be paid or payable out of the capital, the statutory conditions and requirements shall be observed and complied with and the commission shall not exceed 5 per centum on the shares in each case subscribed or to be subscribed.

Brokerage at four annas for every share shall be payable to recognised brokers and banks in respect of shares which will be allotted on applications bearing their seal.

APPLICATION FOR SHARES:

Application for shares should be made on the form accompanying this Prospectus and sent to the Company's Registered Office together with a remittance of the amount payable on application. Where no allotment is made, the deposit will be returned in full and where the number of shares allotted is less than the number applied for the balance of the deposit will be applied towards amounts due on allotment. Failure to pay the amount payable on allotment will render previous payments liable to forfeiture. Applications for less than five shares will not be entertained.

Copies of the Prospectus and Forms of Application may be obtained from the registered office of the Company.

The Memorandum of Association and Articles of Association of the Company can be inspected at any time during business hours at the Registered Office of the Company. This Prospectus is issued subject to the provisions contained in the Memorandum of Association of the Company.

Share Certificates will be completed and ready for the delivery within three months after the allotment of shares.

Dated the 28th day of November 1936

A. Srinivas Pai. N Rama Rao.
U. Rama Rao. M. Venkatesh Pai

APPLICATION FOR SHARES

This form when completed, is to be sent entire to the Company's Banker at any of their branches, with a remittance for the amount payable on application at the rate of Rs. 2 per share.

Cheques are to be drawn in favour of "Southern Land Trust Limited" and crossed.

SOUTHERN LAND TRUST LTD.

(Incorporated under the Indian Companies Act, 1913.)

To

THE DIRECTORS,
SOUTHERN LAND TRUST LIMITED,
MANGALORE.

Gentlemen,

Having paid to the Company's Bankers the sum of Rs.
being the amount payable on application on shares in the abovenamed Company I/We request you to allot me/us that number of shares upon the terms of the Company's Prospectus dated 28th November 1936, and the Memorandum and Articles of Association and I/We hereby agree to accept the same or any smaller number that may be allotted to me/us and to pay the balance of Rs. 8/ per share as provided by the said prospectus; and I/We authorise you to place my/our name on the Register of Members in respect of the shares so allotted. Any amount unpaid in respect of the deposit sent is to be credited as payment or part payment of the amount due on allotment.

Yours faithfully,

Usual Signature

Date 1936.

Please write distinctly

Name in full
Mr. Mrs or Miss
Father's / Husband's name
Occupation
Full address

ಈಗಿನ ಪ್ರಾಂತಗಳನ್ನು ಭಾಷಾದೃಷ್ಟಿಯಿಂದ ಪುನರ್ವಿಭಾಗ ಮಾಡಬೇಕೆನ್ನುವುದಕ್ಕೆ ಪುಷ್ಟೀಕರಣವನ್ನೀಯುವ ಸ್ವದೇಶ ವಿದೇಶದ ನೂರಾರು ಮಂದಿ ಮಹನೀಯರ ಅಭಿಪ್ರಾಯಗಳನ್ನು ಕೊಡುವುದೇನೂ ಕಷ್ಟವಲ್ಲ. ಈ ಕುರಿತು ಹೆಚ್ಚಾಗಿ ಯಾರೊಳಗೂ ಮತಭೇದಗಳಿರುವಂತೆ ತೋರುವುದಿಲ್ಲ.

ಕನ್ನಡ ನುಡಿಯನ್ನು ಆಡುವ ಜನರು ಐದು ಭಿನ್ನಪ್ರಾಂತಗಳಲ್ಲಿ ಚೆದರಿ ಹಂಚಿ ಹೋಗಿರುವುದರಿಂದ ಕನ್ನಡ ನುಡಿಯ ಸಂಸ್ಕೃತಿಯ ಸಂರಕ್ಷಣೆಗೂ ಅಭಿವೃದ್ಧಿಗೂ ಏನು ತೊಡಕಾಗಿದೆ? ಎಂಬುದು ಸ್ವಾಭಾವಿಕವಾಗಿ ಏಳಬಹುದಾದ ಪ್ರಶ್ನೆ. ಮೈಸೂರಿನ ಮಟ್ಟಿಗೆ, ಅಲ್ಲಿನ ಪರಿಸ್ಥಿತಿಯು ಇತರ ಪ್ರಾಂತಗಳಿಂದ ಭಿನ್ನವಾಗಿದೆ. ಅಲ್ಲಿ ಪ್ರತ್ಯೇಕವಾದೊಂದು ವಿಶ್ವವಿದ್ಯಾಲಯ ವಿದೆ. ಕನ್ನಡ ಭಾಷೆ ಸಂಸ್ಕೃತಿಗಳ ಅಭಿವೃದ್ಧಿಗೆ ಅದು ಸಾಧ್ಯವಿರುವ ಪ್ರಯತ್ನಗಳನ್ನು ಕೈಕೊಂಡಿರುವುದರಿಂದ ಅಲ್ಲಿ ಭಾಷಾ ಸಂಸ್ಕೃತಿಗಳ ಮಟ್ಟವು ಮೇಲಾಗಿಯೇ ಇದೆ. ಮದ್ರಾಸಿನ ಆಡಳಿತದಲ್ಲಾದ ಒಂದು ವಿಷಾದಕರ ಪ್ರಸಂಗವನ್ನಿಲ್ಲಿ ಉದಾಹರಿಸೋಣ. ಮದ್ರಾಸಿನಲ್ಲಿ, ಹೆಮ್ಮಕ್ಕಳಿಗೆ ಉಚ್ಚ ಶಿಕ್ಷಣವನ್ನು ಕೊಡುವ ಸರಕಾರದ ಉಚ್ಚ ಶಿಕ್ಷಣಾಲಯವಾದ ಕ್ವೀನ್ ಮೇರೀಸ್ ಕಾಲೇಜಿನಲ್ಲಿರುವ ಕನ್ನಡ ಪಂಡಿತಸ್ಥಾನವನ್ನು ಸದ್ಯ ಕಿತ್ತುಹಾಕುತ್ತಾರೆ. ಎಂದರೆ ಮುಂದೆ ಅಲ್ಲಿ ಕನ್ನಡವನ್ನು ಕಲಿಸುವ ವ್ಯವಸ್ಥೆಯಿಲ್ಲ. ಕನ್ನಡ ತೆಗೆದುಕೊಳ್ಳುವ ೧೨ ಮಂದಿ ವಿದ್ಯಾರ್ಥಿನಿಯರಿಗೆ ಜೂನಿಯರ್ ಇಂಟರ್‌ಮೀಡಿಯೇಟ್ ಮತ್ತು ಬಿ. ಎ. ವರ್ಗಗಳಿಗೆ ಪ್ರವೇಶಕೊಡಲಿಲ್ಲ. ಇತರ ದೇಶಭಾಷೆಗಳನ್ನು ಕಲಿಸುವ ವ್ಯವಸ್ಥೆ ಅಲ್ಲಿದೆ; ಅದಕ್ಕೇನೂ ಭಂಗಬರಲಿಲ್ಲ. ಕನ್ನಡಕ್ಕೆ ಮಾತ್ರ ಅರ್ಧಚಂದ್ರಪ್ರಯೋಗ. ದಕ್ಷಿಣ ಕನ್ನಡವೆಂದರೆ ಸಣ್ಣ ಜಿಲ್ಲೆ. ಕ್ವೀನ್ ಮೇರೀಸ್ ಕಾಲೇಜಿನಿಂದ ಕನ್ನಡವನ್ನು ಕಿತ್ತುಹಾಕಿದರೆ ಅದರಿಂದ ತೊಂದರೆಯಾಗುವುದು ದಕ್ಷಿಣಕನ್ನಡಕ್ಕೆ ಮತ್ತು ಬೆಳ್ಳಾರಿಗೆ ಮಾತ್ರ! ಅಲ್ಲಿಯ ಕೆಲವರು ವಿದ್ಯಾರ್ಥಿನಿಯರಿಗಾಗಿ ಸಂಬಳಕೊಟ್ಟು ಪಂಡಿತರನ್ನಿಡುವುದು ಅವಶ್ಯವಿಲ್ಲ-ಎಂದು ಸರಕಾರವು ಆಧಾವ ವಿಶ್ವ ವಿದ್ಯಾಲಯವು ಈ ಹುಡುಗಿಯರೊಡನೆ, ಲ್ಯಾಟಿನ್ ಫ್ರೆಂಚ್, ಗ್ರೀಕ್ ಅಥವಾ ಪ್ರಪಂಚದಲ್ಲಿ ಹುಟ್ಟಿ ಬೆಳೆದ ಯಾವುದಾದರೊಂದು ಭಾಷೆಯನ್ನು ತೆಗೆದುಕೊಳ್ಳಿರೆಂದು ಅಧಿಕಾರಿಗಳು ಹೇಳುವಾಗ, ಈ ಪ್ರಸಂಗದ ವಿಷಮ ಸ್ವಭಾವವು ಎಂತಹುದು ಎಂದು ನಮ್ಮ ಅನುಭವಕ್ಕೆ ಬಾರದೆ ಇರದು. ಮೇಲಿಂದ ಮೇಲೆ ನೋಡುವವರಿಗೆ ಇದರಲ್ಲಿ ಏನೂ ಮಹತ್ವವು ತೋರಲಾರದು. ಆದರೆ ಇದು ಕನ್ನಡ ಸಂಸ್ಕೃತಿಗೆ ಬಲವಾದ ಆಘಾತವಲ್ಲವೇ? ಬಳ್ಳಾರಿ ಜಿಲ್ಲೆಯ ಉದಾಹರಣವನ್ನು ಎತ್ತಿಕೊಳ್ಳಿರಿ. ಈ ಜಿಲ್ಲೆಯ ಬಹು ಸಂಖ್ಯಾಕರು ಕನ್ನಡಿಗರು. ಆದರೆ ಸರಕಾರದ ನೋಟೀಸುಗಳು, ಎಲ್ಲ ತರದ ನೋಟೀಸುಗಳು ಎಲ್ಲವೂ ತೆಲುಗಿನಲ್ಲಿವೆ. ಮದ್ರಾಸಿಗೆ ಹೋಗುವ ಕನ್ನಡ ನಾಡಿನ ಮಕ್ಕಳು ಗ್ರೀಕ್ ಅಥವಾ ಲ್ಯಾಟಿನನ್ನು ಅಭ್ಯಾಸಿಸಬೇಕು; ಬಳ್ಳಾರಿಯ ಕೋರ್ಟು ಕಚೇರಿಗಳೊಡನೆ ವ್ಯವಹಾರ ಬೆಳೆಸುವವರು ತೆಲುಗನ್ನೇ ಅಶ್ರಯಿಸಬೇಕು---ಎಂದಾದರೆ ಇನ್ನು ಏನತ್ತು ವರ್ಗಗಳಲ್ಲಿ ಕನ್ನಡದ ಅವಸ್ಥೆ ಏನಾದೀತು? ಉತ್ತರ ಕನ್ನಡ, ಧಾರವಾಡಗಳಲ್ಲಿಯೂ, ಬಳ್ಳಾರಿಯಲ್ಲಿ ತೆಲುಗು ಇರುವಂತೆ ಇಲ್ಲಿ ಮರಾಠಿಯ ಪ್ರಾಬಲ್ಯ. ದೇಶದ ನಿವಾಸಿಗಳೆಲ್ಲ ಕನ್ನಡಿಗರು. ವ್ಯವಹಾರವು ಹೆಚ್ಚಾಗಿ ಮರಾಠಿಯಲ್ಲಿ! ಬೆಳಗಾವಿಯಲ್ಲಿಗೆ ಸೇರಿದ ಖಾನಾಪುರ, ಚಿಕ್ಕೋಡಿ ಸೂಪೆವೇಟೆಗಳಲ್ಲಿ ಮತದಾರರ ಪಟ್ಟಿಯನ್ನು ಮರಾಠಿಯಲ್ಲಿ ತಯಾರಿಸಿದ್ದಾರೆ. ಬಳ್ಳಾರಿಯಲ್ಲಿ ತೆಲುಗಿನಲ್ಲಿ ರಚಿಸಿದ್ದಾರೆ. ಬೆಳಗಾವಿಯು ಶುದ್ಧ ಕನ್ನಡ ಜಿಲ್ಲೆ. ಹೀಗಿದ್ದರೂ ಟಪ್ಪಾಲು ತಚೇರಿಯ ಫಾರ್ಮುಗಳು, ತಾಲೂಕು ಕಚೇರಿ, ನಗರ ಸಭೆ, ಲೋಕಲ್ ಬೋರ್ಡುಗಳು ಮೊದಲಾದ ಸಂಸ್ಥೆಗಳಿಗೆ ಸಂಬಂಧಪಟ್ಟ ಎಲ್ಲ ಫಾರ್ಮುಗಳೂ ಮರಾಠಿಯಲ್ಲಿವೆ. ಕನ್ನಡಕ್ಕೆ ತಿಲತರ್ಪಣವನ್ನು ಕೊಟ್ಟಿದ್ದಾರೆ. ಇಂದು, ಮೈಸೂರು ಮತ್ತು ಹೈದರಾಬಾದುಗಳನ್ನುಳಿದು, ಕರ್ನಾಟಕದ ಇತರ ಭಾಗಗಳಲ್ಲಿ ಕಡಿಮೆಯೆಂದರೆ ೮ ಉಚ್ಚ ವಿದ್ಯಾಲಯಗಳು ಎಂದರೆ ಕಾಲೇಜುಗಳಿವೆ; ೪೮ ಮಾಧ್ಯಮಿಕ ಶಿಕ್ಷಣಾಲಯಗಳು ಎಂದರೆ ಹೈಸ್ಕೂಲ್‌ಗಳಿವೆ. ಆದರೆ ಈ ಶಾಲೆಗಳಲ್ಲಿ ಅನುಸರಿಸುವ ಪಾಠಕ್ರಮಗಳು ಬೇರೆ ಬೇರೆ. ಇದರಿಂದ ಸಾಂಸ್ಕೃತಿಕ ಏಕೀಕರಣಕ್ಕೂ ಅಭಿವೃದ್ಧಿಗೂ ತಡೆಯಾಗಿದೆ. ಮುಂಬಯಿಯ ವಿಶ್ವವಿದ್ಯಾಲಯವು ಕನ್ನಡವ ಕಡೆಗೆ ಲಕ್ಷ್ಯಕೊಡುವುದಿಲ್ಲ; ಮದ್ರಾಸಿನ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಕೊನೆಯ ಸ್ಥಾನ. ಎಂದಮೇಲೆ ಕನ್ನಡನುಡಿಯ ಏಳಿಗೆಯಾಗುವುದು ಹೇಗೆ? ಕನ್ನಡಿಗರು ತಮ್ಮ ಸತ್ವವನ್ನು ಕಾಪಾಡಿಕೊಳ್ಳುವುದರಲ್ಲಿ ಸೊಂಟಕಟ್ಟ ಹೋರಾಡದಿದ್ದರೆ, ಇತರ ಭಾಷೆಗಳ ದಾಳಿಯಿಂದಲೂ, ಈಗಿನ ಕೃತಿಮ ಪರಿಸ್ಥಿತಿಯ ಪ್ರಭಾವದಿಂದಲೂ, ನಮ್ಮ ನಾಡನುಡಿಯೂ ಸಂಸ್ಕೃತಿಯೂ ಅಳಿದು ಹೋಗುವ ಭೀತಿಯಿದೆ.

ಆರ್ಥಿಕ ಅಭಿವೃದ್ಧಿ.

ಎರಡನೆಯದಾಗಿ ನಾವು ವಿಚಾರಿಸಬೇಕಾದ ವಿಷಯವೆಂದರೆ ಕನ್ನಡನಾಡಿನ ಕೈಗಾರಿಕೆಯ ಅಭಿವೃದ್ಧಿ; ಜನರ ಆರ್ಥಿಕ ಸುಧಾರಣೆ. ಅಪಾರವಾದ ಭೂಸಂಪತ್ತು ಕನ್ನಡನಾಡಿನಲ್ಲಿದೆ. ಕೃಷ್ಣಾ, ತುಂಗಭದ್ರಾ, ಘಟಪ್ರಭಾ, ಮಲಪ್ರಭಾ ಮೊದಲಾದ ಮಹಾನದಿಗಳ ಆಶ್ರಯವಾದ ನಮ್ಮ ನಾಡಿನಲ್ಲಿ ನೀರಾವರಿ ಕೆಲಸಗಳಿಗೆ ಒಳ್ಳೆಯ ಅವಕಾಶವಿದೆ. ಅಂತಹ ವ್ಯವಸ್ಥೆಯಿಂದ ನಮ್ಮ ನಾಡಿನ ಫಲವತ್ತತೆಯು ದ್ವಿಗುಣವಾಗುವುದು. ಭಟಕಳ, ವಲ್ಲೆ—ಎಂಬೆರಡು ಉತ್ತಮ ಬಂದರುಗಳಿವೆ. ಕನ್ನಡದ ಒಳನಾಡಿನಲ್ಲಿ ಹಾದು ಹೋಗುವ ಉಗಿಬಂಡಿಯ ದಾರಿಯನ್ನು ಪಶ್ಚಿಮ ಸಮುದ್ರ ತೀರದ ವರೆಗೆ ವಿಸ್ತರಿಸಿದರೆ, ಕರ್ನಾಟಕದ ವ್ಯಾಪಾರವು ಹಿಂದಿನ ಕಾಲದಲ್ಲಿದ್ದಂತೆ ಪ್ರಪಂಚದ ದೂರದೂರ ಪ್ರದೇಶಗಳಿಗೂ ಹರಡುವುದು. ಹಡಗು ಕಟ್ಟುವುದಕ್ಕೆ ಬೇಕಾದ ವೃಕ್ಷ ಸಂಪತ್ತು ನಮ್ಮಲ್ಲಿರುವುದು. ಕೊಬ್ಬರಿಗಿಟ್ಟ, ಕೋಲಾರ ಮೊದಲಾದೆಡೆಗಳಲ್ಲಿ ಕಂಡು ಬಂದಂತೆ ಚಿನ್ನದ ಗಣಿಗಳೂ ಮೆಂಗನೀಸ್ ಧಾತುವಿನಗಣಿಗಳೂ ಅಲ್ಲಲ್ಲಿ ಆನೇಕ ಇವೆ. ಈ ಕುರಿತು ಹೆಚ್ಚು ಶೋಧನೆ ನಡೆಸಿದ್ದಲ್ಲಿ ಸಂಪದಭಿವೃದ್ಧಿ ಇನ್ನಷ್ಟು ಆಗಬಹುದು. ನಮ್ಮ ನಾಡಿನಿಂದ ಹತ್ತಿ, ಹತ್ತಿ ಬೀಜ, ನೆಲಕಡಲೆ, ಕೊಬ್ಬರಿ, ಆಳಿಲೆಕಾಯಿ. (Myrabolam) ಯಾಲಕ್ಕಿ, ಕಾಫಿ ಮೊದಲಾದ ಎಷ್ಟೋ ಆಸಿದ್ದ ಪದಾರ್ಥಗಳು ರಫ್ತಾಗುತ್ತಿವೆ. ಬಟ್ಟೆ, ಉಣ್ಣೆಗಳ ಕೈಗಾರಿಕೆಗಳು ಹೆಚ್ಚಾಗಿ ಬೆಳೆಯುವ ಸಂಭವವಿದೆ. ಕೊನೆಯದಾಗಿ ವಿದ್ಯುತ್ಶಕ್ತಿಯೋಜನೆ. ಸಹ್ಯಪರ್ವತದ ವಾದ ಪ್ರಾಂತದಿಂದ ಅನೇಕ ನದಿಗಳು ಹರಿದು ಹೋಗುವದರಿಂದ ಅವುಗಳ ಪ್ರವಾಹದಿಂದ ವಿದ್ಯುತ್ ಸಂಯೋಜನೆ ಮಾಡುವುದು ಅಸಾಧ್ಯವಲ್ಲ. ಹೀಗೆ ಕರ್ನಾಟಕವು ಒಳ್ಳೆಯ ಸಂಪನ್ನ ರಾಷ್ಟ್ರವಾಗುವದು. ಸ್ವತಂತ್ರ ಕರ್ನಾಟಕವು ತನ್ನ ಕೈಗಾರಿಕೆಯನ್ನೂ ವ್ಯಾಪಾರವನ್ನೂ ಅಭಿವೃದ್ಧಿಗೊಳಿಸುವ ಯೋಜನೆಗಳನ್ನು ಏರ್ಪಡಿಸಿ ಮೈಸೂರಿನಂತೆ ಶ್ರೀಯಸ್ಸಿನ ದಾರಿಯನ್ನು ಹಿಡಿಯುವುದು. ಈಗಲಾದರೂ ಕನ್ನಡಿಗರು ಕೊಡುವ ಕಂದಾಯದಿಂದ ಒಬ್ಬ ಗವರ್ನರರ ಅಧೀನತೆಯಲ್ಲಿರುವ ಒಂದು ಪ್ರಾಂತದ ಆಡಳಿತದ ವೆಚ್ಚವನ್ನೆಲ್ಲ ನಡಿಸಿಕೊಂಡು ಬರಬಹುದೆಂಬುದು ಯಾರಿಗೂ ತಿಳಿಯದ ವಿಷಯವಲ್ಲ. ಕರ್ನಾಟಕ ಪ್ರಾಂತರಚನೆಗೆ ಅಡ್ಡಿಯಾಗಿ ಕಾಣುವುದು ಮತ್ತೇನೂ ಅಲ್ಲ. ಆಳುವವರ ಚಿತ್ತವೃತ್ತಿ.

ಕರ್ನಾಟಕವ ಇಂದಿನ ದುರವಸ್ಥೆ

೧೯೧೯ನೆಯ ಇಸವಿಯ "ಗವರ್ನಮೆಂಟ್ ಓಫ್ ಇಂಡಿಯಾ ಆಕ್ಟ್"ನಲ್ಲಿ ಸೂಚಿಸಲ್ಪಟ್ಟ ಪ್ರಾಂತಗಳ ಪುನರ್ವಿಭಾಗದ ಯೋಜನೆಯಲ್ಲಿ ಕರ್ನಾಟಕವು ಮಾತ್ರ ಸಂಪೂರ್ಣ ಅಲಕ್ಷಿಸಲ್ಪಟ್ಟಿದೆ. ನಾನು ಮೊದಲೇ ಹೇಳಿದಂತೆ, ಸಿಂಧುವು ಬೇರೆ ಪ್ರಾಂತವಾಯಿತು; ಒರಿಸ್ಸವು ಬೇರಾಯಿತು, ಬರ್ಮವು ಬೇರಾಗಿದೆ. ಆಂಧ್ರರ ಮಟ್ಟಿಗೆ ಪ್ರಾಂತವಿಭಜನೆಯು ಅಷ್ಟು ಲಾಭಕರವಾಗಿಲ್ಲ. ಅವರಿಗೆ ಬೇರೊಂದು ವಿಶ್ವವಿದ್ಯಾಲಯವಿದೆ; ವಿಶಾಖಪಟ್ಟಣದಲ್ಲಿ ಒಳ್ಳೆಯ ಬಂದರು ಇದೆ. ಆಂಧ್ರದೇಶದವರು ಮದ್ರಾಸಿನ ನ್ಯಾಯವಿಧಾಯಕ ಸಭೆಯಲ್ಲಿ ಪ್ರಬಲರೇ ಆಗಿರುವರು, ಸರಕಾರದೊಳಗೂ ಶಕ್ತಿಯನ್ನು ತೋರಿಸುತ್ತಿರುವರು. ಹೆಚ್ಚೇನು? ಆಂಧ್ರರೊಬ್ಬರು ಮೊನ್ನೆ ನೋನ್ನೆ ಎಂಬಂತೆ ಮದ್ರಾಸಿನ ಗವರ್ನರ್ ಪದವಿಯನ್ನು ಅಲಂಕರಿಸಿದರು. ಆಂಧ್ರರ ಸುದೈವಕ್ಕಾಗಿ ನಾವು ಮತ್ಸರಪಡುವುದಿಲ್ಲ. ನಮಗೆ ವಿಚಾರಣೀಯವಾದ ವಿಷಯ—ನಮ್ಮ, ಕನ್ನಡಿಗರ, ದುರವಸ್ಥೆ. ನಮ್ಮದು ಜೆದರಿಹೋದ ಜನಾಂಗ. ಬಂಧುಗಳಾದ ನಾವ್ಯಬಾಂಧವ್ಯವನ್ನು ಮರೆಯುತ್ತಿದ್ದೇವೆ. ಒಬ್ಬರು ಇನ್ನೊಬ್ಬರಿಗೆ ಅಪರಿಚಿತರಾಗುತ್ತೇವೆ. ಇದೇ ಏಕೀಕರಣವಿಲ್ಲದುದರಿಂದಾದ ದುಷ್ಪರಿಣಾಮ. ಕರ್ನಾಟಕಕ್ಕೆ ಇತಿಹಾಸದಲ್ಲಿ ಉಜ್ವಲವಾದ ಹೆಸರಿದೆ. ಅದರ ಭಾಷೆಯು ಒಳ್ಳೇ ಪರಿಪಾಕಹೊಂದಿದ ಸ್ವತಂತ್ರಭಾಷೆ. ಜೈನ, ಲಿಂಗಾಯತ, ಬ್ರಾಹ್ಮಣ ಕವಿ ಲೇಖಕರು ಬೇರೆ ಬೇರೆ ಸ್ಫೂರಣೆಗಳಿಂದ ನಮ್ಮ ಭಾಷೆಯ ಕಳಿಯೇರಿಸಿದರು. ಕನ್ನಡದ ಸಂಸ್ಕೃತಿಯು ವಿಶಿಷ್ಟವಾಗಿದೆ. ಮುಂದಿನ ರಾಜ್ಯಮಂಡಲದಲ್ಲಿ ಅದು ತನ್ನ ಮಹತಿಯನ್ನು ಕಾಣಿಸದೆ ಇರದು ಬ್ರಿಟಿಷರ ಆಗಮನಕ್ಕ ಪೂರ್ವದಲ್ಲಿ ಕರ್ನಾಟಕ ದೇಶವು ಅನೇಕಾನೇಕ ಕಲಹಸಮರಗಳ ಆಶ್ರಯವಾಗಿದ್ದಿತು; ಇದರಿಂದ ಕನ್ನಡನಾಡು ಭಗ್ನವಾಯಿತು. ೧೯ನೆಯ ಶತಮಾನದ ಪೂರ್ವಾರ್ಧದಲ್ಲಿ ಮಹಾರಾಷ್ಟ್ರ ಸಾಮ್ರಾಜ್ಯವು ಮುರಿದು ಬಿದ್ದಾಗ ಕರ್ನಾಟಕದ ಅವನತಿಯು ಸಂಪೂರ್ಣವಾಯಿತು. ಒಂದೆಡೆಯಲ್ಲಿ ಪ್ರಬಲರಾದ ಗುಜರಾಥಿ, ಮರಾಠಿ ಜನರೊಡನೆಯೂ, ಇನ್ನೊಂದೆಡೆ ಅಷ್ಟೇ ಪ್ರಚಂಡರಾದ ತಮಿಳರ, ತೆಲುಗರ ಕೂಡೆಯೂ ಕಟ್ಟುಬಿದ್ದ ಕನ್ನಡಿಗರಾದ ನಮ್ಮ ಜನರಿಂದು ಕಂಗೆಟ್ಟಿರುವರು. ಅವರ ಪರಿಸ್ಥಿತಿಯು ಶೋಚನೀಯವಾಗಿರುವುದು; ಭಾಷೆಯು ಹಾಳಾಗುತ್ತಿರುವುದು; ಸಂಸ್ಕೃತಿಯು ಮುರಿದುಬೀಳುತ್ತಿರುವುದು; ವಾಙ್ಮಯ ಸಂಕರಗೊಳ್ಳುತ್ತಿರುವುದು. ನಮ್ಮ ಪೂರ್ವೇತಿಹಾಸ, ಕಟ್ಟು ಕಟ್ಟಳೆ, ಸಾಹಿತ್ಯ ಕಲೆಗಳು ಎಲ್ಲವೂ ಮರೆತು ಹೋಗುತ್ತಿವೆ. ನಾವು ವಿನಾಶದ ಸವಿನಾಪದಲ್ಲಿಯೇ ನಿಂತಿರುವೆವು. ನೆನ್ನೆ ದೃಷ್ಟಿಯಿಂದೆ ಕರ್ನಾಟಕದ ಏಕೀಕರಣವೊಂದೇ ಸರ್ವರೋಗ ಪರಿಹಾರಕವಾದ ದಿವ್ಯೌಷಧ; ಅದೇ ಸಂಜೀವನ; ಅದೇ ಅಮೃತ; ಅದೊಂದೇ ನಮ್ಮನ್ನು ಬದುಕಿಸಬಲ್ಲುದು.

ಸರ್ವಮಾನ್ಯವಾದ ಅಪೇಕ್ಷೆ

ಕರ್ನಾಟಕ ಪ್ರಾಂತರಚನೆಗೆ ಸರಕಾರವೊದ್ದುವ ವಿಘ್ನಗಳೇನೆಂಬುದನ್ನು ನಾವಿಲ್ಲಿ ವಿಚಾರಿಸೋಣ. ಭಾಷಾನುಗುಣ ಪ್ರಾಂತರಚನೆಯ ಪ್ರಶ್ನೆಯನ್ನು ಪ್ರಾರಂಭದಲ್ಲಿ ಹಳೆಯ 'ಇಂಪೀರಿಯಲ್' ಲೆಜಿಸ್ಲೇಟಿವ್ ಕೌನ್ಸಿಲಿನಲ್ಲಿ ಎತ್ತಿಹಿಡಿದವರು ಕೈ. ವಾ. ಬಿ. ಎನ್. ರಮ್ಯರು. ೧೯೩೭ರಲ್ಲಿ ಕಾನ್ಸಿಲ್ ಓಫ್ ಸ್ಟೇಟ್‌ನಲ್ಲಿ ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ಮಾಡಬೇಕೆಂದು ನಾನು ರಠಾವು ತಂದೆನು ಇದಕ್ಕೆ ಸರಕಾರದವರ ಅಪೇಕ್ಷೆಗಳನ್ನು ಕ್ರೈಯರ್ ಸಾಹೇಬರು ಹೀಗೆ ಕೊಟ್ಟರು:—"ಮಹಾಶಯರಾದ ತಾವಿಬ್ಬರೂ (ನನ್ನ ಸ್ನೇಹಿತರಾದ ಶ್ರೀ. ರಾವ್‌ದಾಸ ಪಂತುಲ ಇವರು ಆಂಧ್ರನನ್ನು ಬೇರೆ ಪ್ರಾಂತವಾಗಿ ಮಾಡಬೇಕೆಂದು ಉಪಸೂಚನೆಯನ್ನು ತಂದಿದ್ದರು. ನಿಮ್ಮಿಬ್ಬರನ್ನೂ ಉದ್ದೇಶಿಸಿ ಹೇಳಿದ ಮಾತಿನು) ಜೆನ್ನಾಗಿ ವಿಚಾರಿಸಿ, ಈ ನ್ಯಾಯ ಸಭೆಯೊಳಗೆ ಪುನಃ ಇದೇ ನಿರ್ಣಯವನ್ನು ತಂದರೆ, ಜನರಿಗೆ ಇದು ಬೇಕಾಗಿದ್ದರೆ, ಪ್ರಾಂತೀಯ ನ್ಯಾಯಸಭೆಗಳಲ್ಲಿ ಇಂತಹ ಅಭಿಪ್ರಾಯಗಳು ಪ್ರಕಟವಾಗಿದ್ದರೆ, ಸಕಲ ಜಾತಿಗಳಿಗೂ, ಪ್ರಾಂತಗಳಿಗೂ ಮಾತ್ರವಲ್ಲ ಹಿಂದೂದೇಶಕ್ಕೂ ಇದರಿಂದ ಹಿತವಾಗುವದಿದ್ದರೆ, ನಾವು ಈ ಕಡೆಗೆ ಪೂರ್ಣ ಗಮನ ಕೊಡುವೆವು.

(ಮುಂದುವರಿಯುವದು)

ಕರ್ನಾಟಕ ಏಕೀಕರಣ ಪರಿಷತ್ತು

ಪರಿಷತ್ತಿನ ಅಧ್ಯಕ್ಷ ಡಾಕ್ಟರ್ ಯು. ರಾಮರಾಯರ ವಿಚಾರಪೂರ್ಣ ಭಾಷಣ.

ಕಳದ ಸಂಚಿಕೆಯಿಂದ ಮುಂದರಿಸಿದ್ದು.

ನಾರದನ ತಂಬೂರಿ

ಪಟ್ಟಣದಲ್ಲಿ ಕಲಿಯುಗದ ಕಳಚಲಾರದ ಅಂಟು! ಅಂಟಿದವನೊಡ್ಡಾಡಿ ಸಾಯುತಿರಲಿ॥ ನರನಾರಾಯಣ! ಶುಭವಾಗಲಿ ಮಾನವನಿಗೆ! ನಮ್ಮ ಎಂಟನೇ ಎಡ್ವರ್ಡ್ ಚಕ್ರವರ್ತಿಗಳಿಗೆ ಅಮೇರಿಕವ ಮಿಸೆಸ್ ಸಿಂಪ್ಸನ ಕೊಡನೆ ಮದುವೆಮಾಡಿಕೊಳ್ಳಬೇಕೆಂಬ ಮನಸಾಗಿದೆ; ಅವರು ಹಾಗೆ ಮಾಡಿಕೊಳ್ಳಬಾರದೆಂಬ ಮನಸು ಇಂಗ್ಲೆಂಡಿನ ಮಂತ್ರಿಮಂಡಲಿಗಾಗಿದೆ. ಮದುವೆಯಾಗುವದು ಅರಸರಿಗೆ ಮಾತ್ರವೆಂದಾದ ಮೇಲೆ ಮನಸು ಪಾರ್ಲಿಮೆಂಟಿನವರಿಗೂ ಆಗಬೇಕೇಕೆ? ದಯವಿಟ್ಟು ತಿಳಿಸುವಿರಾ! ಆವರವರ ಕೂಡಾಟ ವಿವರಿಗದೆ ಪೇಚಾಟ! । ಏನೆಲ್ಲ ಮರುಳಾಟ ಅಹಹ, ಜಗವೆ॥

○

'ಚಕ್ರವರ್ತಿಗಳು ದೇವರ ಕಡೆಗೆ ನೋಡಬೇಕು' ಎಂದೊಬ್ಬ ಮಹಪ್ಪುರುಗಳು ತಿಳಿಸಿದ್ದಾರೆ. ಅರಸರು ದೇವರನ್ನು ನೋಡುವದಿಲ್ಲವಾದರೆ ದೇವರಾದರೂ ಅರಸರು ಮಾಡುವದನ್ನು ನೋಡಬಹುದಲ್ಲ; ಸರಿಯಾದ ಸದ್ಬುದ್ಧಿಯ ಪ್ರಸಾದನೀಯ ಬಹುದಲ್ಲ. ದೇವರಿಗೆ ಬೇಕಾಗುವ ಬುದ್ಧಿಯನ್ನೂ ಮನುಷ್ಯರಾದ ರಾಜರೇ ನಿರ್ಮಿಸಿಕೊಡಬೇಕಾದರೆ, ದೇವರಿಗೇನು ಕೆಲಸವಯ್ಯಾ? ಅಯ್ಯಯ್ಯೋ! ಈ ಗುರುಗಳೆಲ್ಲಾ ಒಟ್ಟಾಗಿ ದೇವರನ್ನೇಕೆ ಈ ರೀತಿ ಸೋಮಾರಿತನಕ್ಕೆ ದೂಡುತ್ತಿರುವರೋ ಆ ದೇವರೇ ಬಲ್ಲ! ಮಾನವನು ಮಾಡಿದುದ ತನ್ನಿದೆನುವವನು ಕಡು। ಸೋಮಾರಿ! ಸೋಮಾರಿ!! ದೂರಿರವನ॥

○

ಕೃಷ್ಣಸಂದೇಶದ ಅಶ್ವತ್ಥಾಮನಿಗೆ ನಾರದನು ಲೌಕಿಕದಲ್ಲಿಯೇ ಬಿದ್ದುಕೊಂಡು ಭಗವನ್ನಾಮೋಚ್ಚಾರಣೆ ಕೂಡಾ ಮಾಡಲು ತಿಳಿಯದ ಅಜ್ಞಾನಿಯಾಗಿ ಹೋದನಲ್ಲಾ ಎಂಬ ಭಾರೀ ಕ್ರೋಧ. ಅಶ್ವತ್ಥಾಮಯ್ಯಾ! ನಿನ್ನ ಈ ಆರೋಪವನ್ನು ನಾನು ಒಪ್ಪಿಕೊಳ್ಳುತ್ತೇನಯ್ಯ. ನಾಲಿಗೆಯಲ್ಲಿ ಸಹಸ್ರ ನಾಮೋಚ್ಚಾರಣೆ ಮಾಡುತ್ತಿದ್ದವಂತೆಯೇ, ಮನಸ್ಸಿನಲ್ಲಿ ಮೊಕದ್ದಮೆಯ ಆಲೋಚನೆಗಳನ್ನೆಲ್ಲಾ ಮಾಡಿ ಮುಗಿಸುವ ಈ ದ್ವಿದಳ ಪಾಂಡಿತ್ಯವು ನನ್ನಲ್ಲಿಲ್ಲವಯ್ಯ! ನನ್ನಂತೆಯೇ ನೀವೂ ಏಕನುಪಿಯಾಗಿರುತ್ತಿದ್ದರೆ ಸಹಸ್ರ ನಾಮೋಚ್ಚಾರಣೆಗೊಂದು ಎರಡು ಘಂಟೆ, ದಾವೆಯ ವಿಚಾರಕ್ಕೊಂದು ಎರಡು ಘಂಟೆ, ಒಟ್ಟಿಗೆ ನಾಲ್ಕು ಘಂಟೆ ಬೇಕಾಗುತ್ತಿತ್ತು. ನಿನ್ನ ಪಾಂಡಿತ್ಯದಿಂದ ಎರಡು ಘಂಟೆ ಸಾಕಾಗುತ್ತದಲ್ಲಾ-ಅಹಹ! ಆ ವಿದ್ಯೆ ನನಗೂ ಬರುತ್ತಿದ್ದರೆ!! ಬಾಯಿಯಲಿ ಪರಮಾರ್ಥ! ಮನದೊಳಗೆ ಇಹವೆತ್ತ! ಎರಡು ಲೋಕವನಾಳಿ ಬಾಳಬೇಕು॥

○

ನಾರದನು ಸುಧಾರಕರ ಒತ್ತಾಯದಿಂದ ಸುಧಾರಕನಾದುದೋ ಹೇಗೆ? ಎಂದು ಅನುಮಾನ ಪಡುತ್ತೀಯಲ್ಲ. ಅಶ್ವತ್ಥಾಮಣ್ಣ! ಸುಧಾರಕರಲ್ಲಿ ಹೀಗೆಯೇ ನಡೆದುಕೊಳ್ಳಬೇಕೆಂಬ ಒತ್ತಾಯವೇನೂ ಇಲ್ಲಣ್ಣಾ ಮಂತ್ರ ಬಾರದಿದ್ದರೂ ಬಾಯಿ ಮಣಮಣ ಮಾಡಿ ನಕ್ಷತ್ರ, ಸಂವತ್ಸರಗಳ ಹೆಸರನ್ನಾದರೂ ಉಚ್ಚರಿಸದಿದ್ದರೆ ಪಂಕ್ತಿಯಲ್ಲಿ ಕೂತುಕೊಳ್ಳಲಾಗುವುದಿಲ್ಲವೆಂದೇನೂ ಇಲ್ಲ ನೋಡು. ಆದ್ದರಿಂದ ಒತ್ತಾಯಕ್ಕಾಗಿ ನಾನೇನೂ ಮಾಡಿಲ್ಲ; ನೀನೇನೂ ಮಾಡಬೇಡ. ಆದೀತೆ? ಬಡ ಸುಧಾರಕ ನಾನು! ಬಡ ಸನಾತನಿ ನೀನು! ನಿನಗೆ ಪರಲೋಕ ಗತಿ ನನಗೆ ಬೇಡ!

○

ನನ್ಮಿಲ್ಲೀಗ ಅನಾಹುತ ಆಲ್ಲಲ್ಲಿ ಅನಾವೃತ ಪತ್ರಗಳ ಸಂಚಾರ ತುಸು ಹೆಚ್ಚಿದಂತಿದೆ. ಶ್ರೀಮತಿ ಕಮಲಾದೇವಿಯರಿಗೊಂದು ಅನಾವೃತ ಪತ್ರ, ಮೊನ್ನೆ ರಾಷ್ಟ್ರಬಂಧುವಿನಲ್ಲಿ ಬಂದಿತ್ತು. "ನೀವು ದಕ್ಷಿಣ ಕನ್ನಡದ ಪಾರ್ಟಿಗಳನ್ನೆಲ್ಲಾ ಒಂದುಗೂಡಿಸಬೇಡವೇ ಅಮ್ಮಾ?" ಎಂದು ಗಲಿಬಿಲಿಯಿಲ್ಲದ ಕೊಂಗ್ರೆಸುವಾಲರು ಕೇಳುತ್ತಾರೆ. ದೊಡ್ಡವರು, ಬಡವರೆಂಬ ಪಾರ್ಟಿಗಳನ್ನೇನೇ ಒಂದುಗೂಡಿಸುವ ಯೋಜನೆ ಶ್ರೀಮತಿಯವರಿಗಿದೆಯಂತೆ. ಆದಕ್ಕೆ ದೊಡ್ಡವರು ಒಪ್ಪುವದಿಲ್ಲ. ಶ್ರೀಮತಿಯವರಿಗೆ ಅಣ್ಣನು ತೋರಿಸಿ ಕೊಡುವ ಈ ಪಾರ್ಟಿಗಳನ್ನೂ ಒಟ್ಟು ಕೂಡಿಸುವ ಮನಸ್ಸಿರಬಹುದು; ಆದರೆ ಇಲ್ಲಿಯೂ ರಾಜಕೀಯದಲ್ಲಿ ದೊಡ್ಡವರಾಗಬೇಕೆಂದು ಬಯಸುವವರು ಒಪ್ಪುವದಿಲ್ಲ. ಈ ಪರಿಸ್ಥಿತಿಯಲ್ಲಿ 'ಅಮ್ಮ' ಏನು ಮಾಡಿದರಾದೀತೆಂದು ಹೇಳುವ ಕೆಲಸ ಅಣ್ಣನವರಿಗೇ ಇರಲಿ! ಕಣ್ಣು ಬಿಡಬೇಕಣ್ಣಾ, ಕಣ್ಣು ಬಿಡಬೇಕಣ್ಣಾ! ಬಾಯಿಬಿಟ್ಟಂತೆಯೇ ಕಣ್ಣು ಬಿಡಿರಿ!! —ನಾರದ

ಕಲ್ಯಾಣಪುರ ಸಕ್ಕರೆ ಕಾರ್ಖಾನೆ.

ಇದನ್ನು ತೆರೆಯುವ ಸಮಾರಂಭವು ಕಳೆದ ಶನಿವಾರ ಸಂಜೆ ಘಂಟೆ ೫ಕ್ಕೆ ಸರಿಯಾಗಿ ಸಂಭ್ರಮದಿಂದ ನಡೆಯಿತು. ಜಿಲ್ಲಾ ಕಲೆಕ್ಟರರಾದ ಮಿ ಕ್ರೋಂಬಿಯವರು ಅಧ್ಯಕ್ಷರಾಗಿದ್ದರು. ಸಭಾಸ್ಥಳವು ತಳಿರುತೋರಣಗಳಿಂದ ಶೃಂಗಾರಿಸಲ್ಪಟ್ಟಿತು. ಮಂಗಳೂರಿನ ಕಾರ್ಖಾನೆಯ ಡೈರೆಕ್ಟರರು ಶೇರುಹೋಲ್ಡರರೇ ಮೊದಲಾದವರೂ, ಊರುಪಿಯ ಕೆಲಮಂದಿ ಗ್ರಹಸ್ಥರೂ, ಕಲ್ಯಾಣಪುರದ ಆಸುಪಾಸಿನವರೂ ಒಟ್ಟು ಸುಮಾರು 200 ಮಂದಿ ನೆರೆದಿದ್ದರು. ಅಧ್ಯಕ್ಷರು ಆಗ್ರಾಸೀನರಾದೊಡನೆಯೇ ಸಕ್ಕರೆ ಕಾರ್ಖಾನೆಯನ್ನು ಸ್ಥಾಪಿಸಿರುವ ಕಂಪೆನಿಯ ಮೆನೆಜರರಾದ ಶ್ರೀ ಎ. ಶ್ರೀನಿವಾಸ ಪೈಗಳಿಗೆ ಬರಲು ಅನಾನುಕೂಲವಾದ ದಿಂದ ಕಾರ್ಖಾನೆಯು ಸ್ಥಾಪನೆ ಮತ್ತು ಕಾರ್ಯಕಲಾಪಗಳ ವರದಿಯನ್ನು ಮಂಗಳೂರಿನ ವಕೀಲರೂ ಕಂಪೆನಿಯ ಡೈರೆಕ್ಟರರೆಲ್ಲೊಬ್ಬರೂ ಆದ ಶ್ರೀ. ವೈಕುಂಠ ಬಾಳಿಗರು ಓದಿ ಹೇಳಿದರು. ಉಡುಪಿ ಮತ್ತು ಕುಂದಾಪುರ ತಾಲೂಕುಗಳಲ್ಲಿ 900 ಎಕ್ರೆಗಳಲ್ಲಿ ಕಬ್ಬು ಬೆಳೆಸಲ್ಪಡುತ್ತದೆ. ಕಲ್ಯಾಣಪುರ ಸಕ್ಕರೆ ಕಾರ್ಖಾನೆಗೆ 200 ಎಕ್ರೆಗಳ ಕಬ್ಬು ಸಾಕಾಗುತ್ತದೆ. ಇಡೀ ಜಿಲ್ಲೆಗೆ 4000 ಟನ್ನು ಸಕ್ಕರೆ ಹೊರಗಿಂದ ಆಮದಾಗುತ್ತದೆ. ಕಲ್ಯಾಣಪುರ ಸಕ್ಕರೆ ಕಾರ್ಖಾನೆಯಿಂದ 600 ಟನ್ನು ಸಕ್ಕರೆ ಮಾತ್ರ ಪ್ರಕ್ಷಾತ ತಯಾರಿಸಬಹುದಾಗಿದೆ. ಈಗ ದಕ್ಷಿಣಕನ್ನಡದಲ್ಲಿ ಬೆಳೆಸಲ್ಪಡುವ ಕಬ್ಬು ಉತ್ತಮತರದ್ದಲ್ಲ. ಆಧುನಿಕ ಬೇಸಾಯ ಕ್ರಮದಂತೆ ಕಬ್ಬು ಬೆಳೆಸಲ್ಪಡುವುದಿಲ್ಲ. ಆದುದರಿಂದ ಕಂಪೆನಿಯವರು ಉತ್ತಮ ಕಬ್ಬನ್ನು ಆಧುನಿಕ ಕ್ರಮದಲ್ಲಿ ಬೆಳೆಸುವಂತೆ ರೈತರಿಗೆ ಬೇಕಾದ ಗೊಬ್ಬರ ಮತ್ತು ಬೀಜದ ಕಬ್ಬನ್ನೊದಗಿಸುವ ಕೆಲಸವನ್ನು ಕಂಪೆನಿಯು ನಡೆಸಿದಿರುವುದು, ಜಿಲ್ಲೆಯ ಒಂದೇ ಒಂದಾದ ಈ ಸಕ್ಕರೆ ಕಾರ್ಖಾನೆಗೆ ಜನರೆಲ್ಲಾ ಬೇಕಾದ ಪ್ರೋತ್ಸಾಹವಿತ್ತು ಅದು ಜಯಶೀಲವಾಗುವಂತೆ ಮಾಡಬೇಕೆಂಬುದೇ ಶ್ರೀ. ವೈಕುಂಠ ಬಾಳಿಗರ ಭಾಷಣದ ಸಾರಾಂಶ ವಿದ್ದಿತ್ತು. ಆ ಮೇಲೆ ಕಲ್ಯಾಣಪುರ ಹೈಸ್ಕೂಲಿನ ಹೆಡ್‌ಮಾಸ್ತರರಾದ ಫಾದರ್ ಟೆಲ್ಲಿಸರು, ಧೂಪದ ಕಾರ್ಖಾನೆಯು ನಂತುಹೋದ-ದರಿಂದ ಕಾರ್ಖಾನೆಯ ಸ್ಥಳವು ಹಾಳುಬಿದ್ದಿತ್ತು. ಕಲ್ಯಾಣಪುರದ ಜನರ ಸಾಂಪತ್ತಿಕ ಸ್ಥಿತಿಯು ಕೆಟ್ಟುಹೋಗಿತ್ತು, ಈಗ ಕಾರ್ಖಾನೆಗೆ ಹೊಸ ಜೀವ ಬಂದಿದೆ ಕಲ್ಯಾಣಪುರಕ್ಕೆ ಒಳ್ಳೇ ಕಾಲ ಬಂದಿದೆಯೆಂದು ತಾನಣಿಸುತ್ತೇನೆ

ಕಲ್ಯಾಣಪುರ ಸಕ್ಕರೆಯನ್ನು ಪಯೋಗಿಸುವುದೇ ಪ್ರತಿಯೊಬ್ಬ ದಕ್ಷಿಣ ಕನ್ನಡಿಗರ ನಿರ್ಧಾರವಾಗಬೇಕು ಆಗ ಕಲ್ಯಾಣಪುರ ಕಾರ್ಖಾನೆಯು ದಿನೇ ದಿನೇ ಅಭಿವೃದ್ಧಿ ಹೊಂದದಿರದು. ಹಾಗಾಗಲೆಂದೇ ತನ್ನ ಆಶೀರ್ವಾದವೆಂದರು. ಆ ಮೇಲೆ ಡಾಕ್ಟರ್ ಟಿ. ಮಾಧವ ಪೈಗಳು, ಕಲ್ಯಾಣಪುರ ಸಕ್ಕರೆ ಕಾರ್ಖಾನೆಯು ಪಡೆದ ಆಕಸ್ಮಿಕವಾದ ಅನುಕೂಲತೆಗಳನ್ನು ವಿವರಿಸಿ ಕಾರ್ಯದಕ್ಷರಾದ ಪೈರೆಕ್ಟರು ಕೈ ಕೆಳಗೆ ಅದು ಜಯಶೀಲವಾಗದಿರದೆಂದು ಹೇಳಿ, ಕಬ್ಬು ದೊರೆಯದ ತಿಂಗಳುಗಳಲ್ಲಿ ಕಾರ್ಖಾನೆಯು ಇನ್ನಾವುದಾದರೂ ಕೆಲಸ ನಡೆಯುವಂತೆ ನೋಡಬೇಕೆಂದೂ, ಭಿನ್ನ ಉತ್ಪತ್ತಿಗಳೇನಾದರೂ ಕಂಡುಕೊಳ್ಳುವ ಪ್ರಯತ್ನ ನಡೆಸಲ್ಪಡಬೇಕೆಂದೂ ಸೂಚಿಸಿ ಕಾರ್ಖಾನೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸಿದರು. ಮತ್ತು ಇಂತಹ ಉದ್ಯಮಗಳಿಗೆ ಸರಕಾರದ ಸಹಾಯವು ಅಗತ್ಯವೆಂದರು. ದಿವಾನ್ ಬಹದೂರು ಹೆಗ್ಡೆಯರು ಕಲ್ಯಾಣಪುರ ಸಕ್ಕರೆಯು ಹಳ್ಳಿಗರಿಗೆ ಬಹಳ ಪ್ರಯೋಜನವಾಗುವಂತಾಗದಿರದು. ಧನಿಕರೂ, ಕಾರ್ಯದಕ್ಷರೂ ಆದ ಚಾಲಕರ ಆಡಳಿತದಲ್ಲಿ ಕಾರ್ಖಾನೆಯು ಯಶಸ್ವಿಯಾಗದಿರದು. ಇದಕ್ಕೆ ಜಿಲ್ಲೆಯವರೆಲ್ಲರೂ ಸಹಾಯವೀಯಬೇಕೆಂದರು. ಅಧ್ಯಕ್ಷರು, ಕಾರ್ಖಾನೆಯ ಸ್ಥಾಪಕರನ್ನು ಅಭಿನಂದಿಸಿ, ಇಂತಹ ಉದ್ಯಮಗಳಿಗೆ ಕೂಡಿದ ಮಟ್ಟಿನ ಸಹಾಯ ಮಾಡುವೆನೆಂದು ಆಶ್ವಾಸನೆಯಿತ್ತು ಕಾರ್ಖಾನೆಯನ್ನು ತೆರೆದರು.

●

ಸ್ವೀಕಾರ ಮತ್ತು ನಿಮರ್ಶೆ

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಮದ್ರಾಸ್. ಇದರ ಅಂಕೆ ಸಂಖ್ಯೆಗಳನ್ನೊಳಗೊಂಡ ಅಭಿವೃದ್ಧಿ ಸೂಚಕ ವರದಿಯು ನಮ್ಮ ಹಸ್ತಗತವಾಗಿದೆ.

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ ತೈಲಗಳು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಕೂಲೆ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾತಾಭೇದಿ, ಅತಿಸಾರಗಳ ನೀಲೆ
(ಅತ್ಯಂತ ಗುಣಕಾರಿ)

ತುಪ್ತೀಯರಿಷ್ಟ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ನಮ್ಮ ಪ್ರತಿನಿಧಿಗಳಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರಕೊಳ್ಳಿರಿ.

OUR CINEMA PAGE

REVIEWS

SAMSARA NOWKA
A DEVI FILMS KANNADA TALKIE.

BY MASTER YENKANNA

ನಮ್ಮ ಸಿನೆಮಾ ಪುಟ ಸಂಸಾರ ನೌಕ ವಿಮರ್ಶೆ

ಕನ್ನಡ ನಾಡಿನವರು ಕಲಾಸೇವೆಯಲ್ಲಿ ಹಿಂದುಳಿಯಬಾರದು—ಚಲನ ಚಿತ್ರಕಲೆಯಲ್ಲಿ ತಮಿಳು ತೆಲುಗರಂತಾಗಬಾರದು ಎಂಬ ಮಹದುದ್ದೇಶದಿಂದಲೂ, ಸಿಂಹರು ಇನ್ನು ಮುಂದೆ ಉತ್ತಮ ಕಥೆಗಳಿಗಾಗಿ ಕಣ್ಣು ಬಿಟ್ಟು ಅರಸಲಿ—ಶ್ರೀ ಚಿಟ್ಟೆಯಾರರಂತಹರು ಮಿದುಳನ್ನು ಸಯೋಗಿಸಿ ನಿರ್ದೇಶಿಸಲೆಂದೂ, ಕನ್ನಡ ಚಿತ್ರಗಳು ಆಗುವುದಿದ್ದರೆ ಅದು ಕನ್ನಡನಾಡಿನ ಕಲಾವೈಭವಕ್ಕೆ ಮಸಿ ಬಳೆಯುವಂತಹದಾಗುವುದು ಬೇಡ—ಹಾಗಾಗುವುದಿದ್ದರೆ ನಮಗೆ ಕನ್ನಡ ಚಿತ್ರಗಳೇ ಆಗತ್ಯವಿಲ್ಲೆಂದೂ ಈ ಲೇಖನವನ್ನು ಬರೆದೆ. ಕನ್ನಡ ನಾಡಿನ ನಾವು ಕಲಾವಂತರು—ನಾವು ಕಲೆಯನ್ನರಿತಿರುವೆವು—ನಾವು ಕಲಾಸೇವೆ ಮಾಡುತ್ತಿದ್ದೇನೆ—ಎಂದು ಹೆಮ್ಮೆ ಕೊಚ್ಚಿಕೊಳ್ಳುವ ಎಲ್ಲರಿಗೂ ಈ ಲೇಖನವನ್ನೋದುವ ಅಧಿಕಾರವಿದೆ—ಸಂಪಾದಕ ವರ್ಗದವರಿಗೆ ಪುನರ್ಮುದ್ರಿಸುವ ಹಕ್ಕನ್ನಿತ್ತಿದ್ದೇನೆ.

—ಲೇಖಕ.

ನಾಡಿನ ಪ್ರತಿಯೊಬ್ಬ ನಾಟ್ಯಕಲಾ ಪ್ರೇಮಿಗೂ ಇವರ ಕಥೆಯು ತಿಳಿದಿದೆ. ಅಲ್ಲದೆ ತಿಂಗಳಿಗೆ ಕನ್ನಡ ನಾಡಿನ ಅನೇಕ ಮಂದಿ ಇದನ್ನು ಬಲಸಚಿತ್ರರೂಪದಿಂದ ನೋಡಿರುವರು. ಆದರಿಂದ ಈ ಕಥೆಯನ್ನು ಹೇಳಲು ಹೋಗದೆ-ವಿಮರ್ಶೆಯ ನಿರ್ದಾಕ್ಷಿಣ್ಯ ಕತ್ತಿಗೆ ಸ್ವಾತಂತ್ರ್ಯವನ್ನಿತ್ತಿದ್ದೇನೆ. ನಾನು ಬರೆದ ವಿಷಯವು ಹೆಚ್ಚಿಗೆ ಎಂದು ಕಾಣುವುದಿದ್ದರೆ ಓದುಗರು ಚಿತ್ರವನ್ನು ಪುನಃ ಕಂಡು ಆರಿತುಕೊಳ್ಳಬಹುದು. ಕಡಿಮೆಯಾಯಿತೆಂದಿದ್ದರೆ ಓದುವ ಹೊತ್ತು ಕೂಡಿಸಿ ಕೊಳ್ಳಬಹುದು.

ನಾಟಕ ರೂಪದಲ್ಲಿ ಜನಮನರಂಜನೆ ಮಾಡಿದ ಈ ಕಥೆಯನ್ನು ಚಲನಚಿತ್ರಕ್ಕೆ ಹೊಂದಿಸಿ ಸಿಂಪರು ಬರೆದಿದ್ದಾರೆ. ಬರೆದುದೇನೂ ತಪ್ಪೆಂದು ನಾವು ಹೇಳಲಾರೆವು. ಕಾರಣ ಅಂತಹರು ಬರೆಯಬೇಕಾದ್ದೇಸೋ ಸಹಜ. ಆದರೆ ತಲೆಯೆಂಬ ಹೊರೆಯನ್ನು ಭುಜದ ಮೇಲಿಂದ ಕೆಳಗಿಳಿಸಿ-ಆಮೂ, ಪುನಃ ಭುಜದ ಮೇಲೆ ತನ್ನ ಇಚ್ಛೆಯಂತೆ ಬರಬಾರದೆಂದು ಪಟ್ಟಿಗೆಯಲ್ಲಿ ಬೀಗ ಮುದ್ರೆಮಾಡಿ ಇರಿಸಿ, ಈ ನಾಟಕವನ್ನು ಅಥವಾ ಕತೆಯನ್ನು ಬರೆದುದು ಅಪ್ಪಬುದ್ಧ. ಚಲನ ಚಿತ್ರವನ್ನು ನೋಡಿದವರಿಗೆ ಒಂದು ಸಾವಿರ ರೂ. ಕೊಡುವೆನೆಂದು ಸಂಬಸುವ ಬದಲು ಉತ್ತಮ ಕಥೆಯನ್ನು ಬರೆದುಕೊಟ್ಟವರಿಗೆ ಒಂದು ಸಾವಿರಕೊಡುವೆ ನೆಂದಾದರೂ ಲೇಖಕರನ್ನು ನಂಬಿಸಿ ಕಥೆಯನ್ನು ಪಡೆದು ಚಲನಚಿತ್ರವಾಗಿ ತಯಾರಿಸಬಹುದಿತ್ತು. ಮೇಧಾವಿಗಳಲ್ಲವೆಂದು ನಾನೆನ್ನಲಾರೆ. ಆದರೆ ಈ ಕಥೆಯನ್ನು ನೋಡಿದಾಗ ಮಾತ್ರ ಆ ಮೇಧಸ್ಸು ಆವಿಯಾಗಿದೆಯೇ ಎಂದು ಕೇಳಿದೆ ಇರಲಾರೆ.

ಅಭಿನಯದ ಗಂಧವೇ ಅಂಟಿರದ ಹಲಕೆಲವು ನಟರ ಕೂಟದಿಂದ ಸಿಂಪರು ಕನ್ನಡನಾಡಿನ ಕಲಾವಂತರಿಗೆ ಉಪಾಹಾರವನಿತ್ತು ಮಿ ಬೇಸರ. ರೂಪವಿಲ್ಲದ (Personality) ನಟರೆಂದು ಸಿಂಪರಿಂದ ಕರೆಯಿಸಿಕೊಂಡವರ ಕೂಟವಿದು. ಗಂಟಲಿಗೆ ಪೌಂಡುಗಟ್ಟಲೆ 'ಗ್ರೀಸ್' ಉಪಯೋಗಿಸಿದರೂ ಸ್ವರ ಒಡೆಯದ ಗಾನ ಪಟುಗಳು, ಬಂಡಿಗಟ್ಟಲೆ ಕರಿಮೆಣಸು ತಿನಿಸಿದರೂ ಮಾತು ವಿರಳವಾಗದ ವಾಚಾಲರು, ಮಣ್ಣಿನ ಮೂರ್ತಿಗಳ ಮುಖದಂತೆ ಬಾಯಿಯೊಂದು ಹೊರತು ಉಳಿದ, ಮುಖದ ಯಾವ ಭಾಗವೂ ಅಲುಗದ ಅಭಿನಯ ಕೇಸರಿಗಳು.

ಇನ್ನು ಚಿತ್ರದ ಕುರಿತು: ಪ್ರತಿಯೊಬ್ಬ ನಟನಿಗೂ ನಲಿಗೂ ಸಿಂತುಕೊಳ್ಳದೆ ಅಭಿನಯ ಅಥವಾ ಸ್ಪೂರ್ತಿಕೂಡಾ ಹೊರಡದೆಂಬುದು ಅಚ್ಚರಿಯ ವಿಷಯ. ಪ್ರತಿಯೊಬ್ಬರೂ ಕೆಮರಾದ ಕೆದೆಗೆ ತಮ್ಮ ಮುಖವಿ (ಮುಸುಡು) ವನ್ನು ತೋರಿಸಿ ಸಾಟ ಒಪ್ಪಿಸುವ ಭಾಷಣಕಾರರು. ಚಿತ್ರದಲ್ಲಿನ ಕಪ್ಪು ಕೆಲೆಗಳನ್ನು ಒಂದೊಂದಾಗಿ ಆರಂಭದಿಂದ ಅಂತ್ಯದ ವರೆಗೆ ಹೇಳುವೆ. ವಿಮರ್ಶೆಯೇಸೋ ಬಸಳ ಉದ್ದ ಬೆಳೆಯುತ್ತದೆ ಎಂದು ನೀವು ತಿಳಿಯಬಹುದು. ಆದರೆ ಇಂತಹ ಚಿತ್ರದ ಕುರಿತು ವಿಮರ್ಶೆಯನ್ನು ಮಾಡದೆ ನಿರ್ವಾಹವಿಲ್ಲದಾಗಿದೆ. ಮೊದಲನೆಯಾಗಿ ಕನ್ನಡನಾಡಿನಲ್ಲಿ ತಯಾರಾದ ಚಿತ್ರಗಳು ನಾಲ್ಕು. ಇವುಗಳಲ್ಲಿ ಒಂದಕ್ಕಿಂತ ಒಂದು ಮಿಗಿಲಾಗಿ ಪುಟಿವನ್ನು ತರತಕ್ಕ ಚಿತ್ರಗಳೇ ಆಗಿರುವುವು. ನೋಡಲನೆಯ ಚಿತ್ರವು "ಸತೀ ಸುಲೋಚನ"ವೆಂಬ ಪೌರಾಣಿಕ ಚಿತ್ರ. ಇದಲ್ಲಿನ ನಟರ ಕೂಟದಿಂದಾಗಿ ಈ ಚಿತ್ರವು ಕೊಂಚ ಕಾಲ ಬಾಳಿತು. ಅಲ್ಲದೆ ಚಿತ್ರವು ತುಂಬಾ ಬೇಸರವನ್ನು ತರುವಂತಹದಿದ್ದಿತು. ನಂತರದಲ್ಲಿ "ಧ್ರುವ ಕುಮಾರ" ಇದೂ ಮೊದಲನೆಯ ಚಿತ್ರವನ್ನು ಯಾವ ಕಾರಣದಿಂದಲೂ ಮಿಗಿಸಲಿಲ್ಲ. ಮೂರನೆಯದಾಗಿ ತಮಿಳು ತೆಲುಗು ಚಿತ್ರಗಳನ್ನು ಅಭಿಕವಾಗಿ ನಿರ್ದೇಶಿಸುತ್ತಿರುವ ರಾಜಾ ಚಂದ್ರಶೇಖರರಿಂದ ನಿರ್ದೇಶಿಸಲ್ಪಟ್ಟ ಗುಬ್ಬಿ ವೀರಣ್ಣನವರ "ಸದಾರಮೆ" ಇದು ವೀರಣ್ಣನವರು ಇದುವರೆಗೆ ನಾಟ್ಯಕಲಾ ಸೇವೆಮಾಡಿದರೆಂದು ಯಾರಾದರೂ ಹೇಳಬಹುದಿದ್ದರೆ ಅದೆಲ್ಲ ಸುಳ್ಳು ಎನ್ನಿಸುವಂತಹದಿತ್ತು. ವೀರಣ್ಣನವರೂ ಅವರಸಹನಟರೂ ತಮ್ಮ ಮುಖಕ್ಕೆ ಮಸಿಹಚ್ಚಿಕೊಂಡರು. ಚಾಲಕರಾದ ಚಂದ್ರಶೇಖರರು ಇದಕ್ಕೆ ಹೆಚ್ಚಿನ ಸಹಾಯಕರಾದರು. ನಂತರ ಇದು ನಾಲ್ಕನೆಯ ಚಿತ್ರ. ಸಿಂಹರೇ ಇದರ ಲೇಖಕರು ಸಿಂಹರ ನಾಟಕಕ್ಕೆ ಬೆಲೆಯನ್ನು ತಂದವರು ಶ್ರೀಪಾದ್ ಪೀಠರು. ಅವರಲ್ಲವಿದ್ದರೆ ಸಿಂಹರ ನೌಕೆಯು ಖಂಡಿತವಾಗಿಯೂ ಇನ್ನು ಪ್ರಬ್ಯುತವಾಗುತ್ತಿರಲ್ಲಿ. ಆದರಲ್ಲಿ ಸಿಂಹರೇ ಮಾಧುರಿನ ಸಾಹಿತ್ಯವನ್ನು ಅಭಿನಯಿಸುತಿದ್ದರು.

ಆದರೆ ಈಗ ಈ ಪಸಕ ಹೆಸರೇ ಕೇಳಿರದ ನಟರ ಕೂಟವನ್ನು ಹಿಡಿಯಿಕೊಂಡಾಗ ಅದೂ ಪಟಿನೆಯ ಗಂಧವೂ ಅರಿತಿರದವರನ್ನು ಕೂಡಿಕೊಂಡು ಸಿಂಹರು ತನ್ನ ಪ್ರೌಢತ್ವವನ್ನು ಹೂಡಿದ್ದಾರೆ. ತನ್ನೊಡನಿದ್ದ ಹೊಜ್ಜಲ್ಲ ಚಲನಚಿತ್ರಕ್ಕೆ ಬಿರ್ಜು ಮಾಡುವುದಕ್ಕಿಂತಲೂ ಅಭಿನಯಚಿತ್ರಕ್ಕೆ ಬಿರ್ಜು ಮಾಡಿದ್ದಾರೆ. ಅಂತೂ ತನ್ನ ನೌಕೆಯನ್ನು ಪುದುರಿಸಿನಿಂದ ಹೊರ ಬಿಟ್ಟರು. ಅವು ಎಲ್ಲಾ ಕಡೆಗೂ ಹೋಗುವಂತೆ ಮಂಗಳೂರು ಬಂದರಕ್ಕೂ ಕೆಲಸಮಯದ ಹಿಂದೆ ಬಂದಿತ್ತು ಎನ್ನೋಣ.

ಸಿಂಹರ ಸಾಹಸಿಕ ಉದ್ಯಮದಲ್ಲಿ ನಮ್ಮದೂ ಸಹಾನುಭೂತಿ. ಆದರೆ ಅವರು ಇನ್ನು ಮುಂದೆ ಚಲಚ್ಚಿತ್ರ ತಯಾರಿಸಬೇಕೆಂಬ ಹುಚ್ಚು ಇದ್ದರೆ ಉತ್ತಮ ನಟರನ್ನು ನಿರ್ದೇಶಕರನ್ನು ಪುಡುಕಿಕೊಳ್ಳಲಿ. ಇಲ್ಲವಾದಲ್ಲಿ ಸಿಂಹರು ಸಂಸಾರನೌಕೆಯ ಜಾಹೀರಾತನ್ನು ಕೊಡುತ್ತಿರಲು ಹೇಗೆ ಅವನ್ನು ಜೊಗಸಲು ಬೇಕಾದ ಶಬ್ದಗಳು ಶಬ್ದಕೋಶದಲ್ಲೇ ಇಲ್ಲೆಂದೋ ಆದೇ ರೀತಿಯಿಂದ ಬೈಯಲು ಬೇಕಾದ ಶಬ್ದಗಳೂ ಇಲ್ಲ ಎಂದೆನ್ನಬೇಕಾಗುತ್ತದೆ.

(ಮುಂದಿನ ವಾರ ಮುಂದುವರಿಯುವುದು)

THE
GUARDIAN OF INDIA
INSURANCE COMPANY, LTD.

Head Office: **MADRAS.** Branch: **MANGALORE.**

Capital— Indian.
Management—Entirely Indian & Efficient.

LOW PREMIUMS.
CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURITY

Life is uncertain, Savings are uncertain,
Insurance is the only remedy for this uncertainty

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S. Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd, Mangalore Branch.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ
ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು -- ಉದಾರವಾದ ಶರ್ತಗಳು
ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,
ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.
ಅತ್ಯಾಕರ್ಷಕವಾದ ಶರ್ತಗಳು---ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.
ಇವುಗಳ ಬಾಧಕಕ್ಕೆ ಜೀವವಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು
ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಜ್ಯಾಂಗ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ** ಇವರೊಡನೆ ಬೆಳಸಬೇಕಾಗಿ ವಿನಂತಿ.

ವಿಶೇಷ ಸೂಚಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., ***Branch Secretary,*** **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—**ಮದ್ರಾಸು.**

ದ್ವಿತೀಯ ಸಂಸ್ಕರಣ

ಕಾವ್ಯಪುಷ್ಪಮಾಲ್ಯ

ವಿಶ್ವಕರ್ನಾಟಕದೊಗಿನ
ಅಧುನಿಕ ಕವಿ ಪ್ರಮುಖರ
೪೮ ಸುಮಿಗವನಗಳ ಸಂಗ್ರಹ

ಬೆಲೆ ಹನ್ನೆರಡಾಣೆ

ಕರಿಯರ ಉಪಾಧ್ಯಾಯ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ' ಎಂಬ ಮುನ್ನುಡಿಗೆ ಪಾತ್ರವಾಗಿ ಉಲ್ಲಾವೆಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದ ಆಂತರಂಗವು ಚೇತೋಪಹಾರಿಯಾಗಿದ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ನಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮೆನೇಜರ್—'ನವಯುಗ',
ಉ ಡು ಪಿ.



ಗೃಹಕೈತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಕಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಕಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ ಮಲಯಾಳದ

ಸ್ತನೋತ್ತೇಧಃ

THE MALAYALA STHANO STHEDAH OUSHADHA CO. Post CHALAPURAM MALABAR

ರಹಸ್ಯಗಳು

ಇದೀಗ ತಿಳಿದುಬಂದಿದೆ ಪುರುಷರನ್ನಾವುದು ಅಳಿಸಿಹಾಕುವೆಂಬುದನ್ನು ಸ್ತ್ರೀಯರೀಗೆ ಒಲ್ಲರು ಸೀರೆ ಪುರುಷನ ಚಿತ್ತವನ್ನು ಹೊರಕ್ಕೆಸೆದು ನೋಡಿದ್ದರೆ, ಅವರ ಕೆನ್ನೆಗಳು ಸ್ತ್ರೀಯವಯವದಿಂದ ಕೆಳಗೆ ಕುಚಸ್ಥಳಕ್ಕೆ ಜಲಿಸಿ ಕುಚಗಳು ಉನ್ನತವಾಗಿ, ದೃಢವಾಗಿ ಎತ್ತಾವಸಯುಕ್ತವಾಗಿ ಆಕರ್ಷಕವಾಗಿರುವೆಂ ಎಂದು ನೋಡುವಳ

೪೮ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.



ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೆಡೆ:—ಅಕ್ಕಸ್ಥ, ಚಂತೆ, ಪ್ರಾಯ ಅಗಾಗಿನ ಹೆರಿಗೆ ನಿಮಿತ್ತ ಸ್ತ್ರೀಯರ ಎದೆಯ ಅಳತೆಶೇಷನು ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಜಿದ್ದುಕೊಂಡಿದ್ದರೆ, ಟೊಳ್ಳಾಗಿ ಆಫಸಾ ಏದು ತೆಗ್ಗಾಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರದಿದ್ದರೆ

ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

ಸ್ಥಾಪಿತವಾದದು | [1907ರಲ್ಲಿ

ವೇಲ್ಯುವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70** ಲಕ್ಷ ಮಿಕ್ಕಿವೆ
ವಿಮಾ ಹಣ ಪಾವತಿ ರೂ. **37** ಲಕ್ಷ ಮಿಂಚಿವೆ.

ಹೊಸತಾಗಿ ವಿಮೆಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಆವಶ್ಯಕತೆಗೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿಮಾ ಯೋಜನೆಗಳಿವೆ.

ವಿಜ್ಞಪ್ತಿ ಶರ್ತಗಳು:—ಅತ್ಯಧಿಕ ನಷ್ಟೆಯ ಕಮಿಶನ್ನಿನಿಂದ ಬಹಳ ಲಾಭದಾಯಕವಾಗಿವೆ. ವಿಶೇಷ ಪಾಯಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಒರಕೊಳ್ಳಿರಿ

P. D. BHARGOVA,
General Manager, AJMER,
SUPERINTENDENT. 278, Linga Chetty Street, MADRAS
Or Chief Agent:—
BELLARY: MADURA: TRICHINAPOLY: VELLORE.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 12-30 ಮಂಗಳವಾರ ಮಧ್ಯಾಹ್ನ 12-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸಮುತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. **1—4—0.**

ಸಂಪಾದಕರು:-
ಬಿ. ಲಕ್ಷ್ಮಣದೇವ ವಿದ್ಯಾರ್ಥಿ.

ಉತ್ಕೃಷ್ಟವಾದ ಕಥೆ, ಕವನಗಳಿಂದೊಡಗೂಡಿ, ಪ್ರತಿಮಾಸದ 15ನೇ ತಾರೀಕಿಗೆ ತಪ್ಪದೆ ಹೊರಡುವದು

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಆಳಕ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಬೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಆರ್ಥಿಕ ರಾಜಕೀಯ ವಿಚಾರಗಳು. ಸೈಜ್ಞಾನಿಕ ವಿಷಯಗಳು-ಪರದೇಶ್ಯಗಳ ಸಮಾಚಾರಗಳು-ಗ್ರಂಥ ವಿಮರ್ಶೆ ಇವುಗಳ ನೆಪ್ಪಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಟುಕುವಂಥ ಸೂತನ ವಿಧಾನಗತಿಯಾದ ಪತ್ರಿಕೆಯು ಇದೊಂದೆ.

ವಾರ್ಷಿಕ ಚಂದಾ ರೂ ೩—೮—೦.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಪಿ.

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳು ಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ತಿಂಗಳ ಬಾಬ್ತು ಸಾ ಶೆ. 4. 1 ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ
ಅಂಗೀಕರಿಸಲ್ಪಡುವುವು.

ಬ್ಯಾಂಕಿಂಗ ಸಮ್ಮಂಧಪಟ್ಟ ಎಲ್ಲಾ ತರದ ವ್ಯವಹಾರಗಳು ಸಡೆಸಲ್ಪಡುತ್ತವೆ—
ಅಂದರೆ—ಹೈ ನೋಟು, ಹುಂಡಿ, ಸರಕು, ವಸ್ತುಗಳ ಮೇಲೆ ಸಾಲಕೊಡಲಾಗುತ್ತದೆ.
ಭಂಗಾರದ ಆಡಾನ ವೈಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುತ್ತದು.
ರೂ. 10ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ. ಶೆ 8. ಮತ್ತು
251ರಿಂದ ಮೇಲ್ಪಟ್ಟು ಸಾಲಗಳಿಗೆ ಸಾ. ಶೆ. 7

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಾಲಕೊಡಲಾಗುತ್ತದೆ. ಖಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A B Shetty, ಚೆಯರ್‌ಮೇನ್. **K Gopalakrishna Shetty.** ಸೆಕ್ರೆಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈನುಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಕುಪ್ಪ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI BROS.
ಪಿ. ಎ. ಪೈ ಬ್ರದರ್ಸ್,
ಆಸ್ಪತ್ರೆ ಎದುರು, ಉಡುಪಿ.

ಕೆಸಿಗಿಡಗಳು.

ಸವೊಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೩ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡತ್ತದೆ ಒಂದು ಮರ ಪ್ರಬುದ್ಧವಾಗಲ್ಕಿ ಹಣ್ಣಾಗುವುದು. ಒಂದು ಎಕ್ರೆಯಲ್ಲಿ ವರ್ಷಕ್ಕೆ ರೂ. ೨೦೦ರವರೆ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೆ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಆದರಲ್ಲಿ ಕಬ್ಬಿಣ ಪತ್ತೆ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ನೃಷ್ಟಿಯಾಗುವುದು. ತುರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. ೧-೮-೦ ಮಾತ್ರ. ನಮ್ಮಲ್ಲಿ ಉತ್ತಮ ಪೂರ್ತ ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವದು

ಮಂಗಳೂರಿಲ್ಲಿ ವಿಜಯ ಬ್ಯಾಂಕಿನಲ್ಲಿಯೂ ಸ್ವಾಡಪೋಪು, ಹಂಪನಕಟ್ಟೆಬಜ್ಜಿಯೂ ಸೋಮೇಶ್ವರಾಜಿ ಎಂಡ್ ಕೊ. ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆವೋಲ್ಪ್ ಸ್ಟೋರ್ಟಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಬಾಪು, ಜಿ. ದಕ್ಷಿಣಕನ್ನಡ.

ಕುಂದಾಪುರ ಡಿವಿಜನಿನ ಕಾಂಗ್ರೆಸ್ ಮತ್ತು ಜಸ್ಟಿಸ್ ಪಕ್ಷಗಳ ಪ್ರಚಾರಕ್ರಮ

ಶ್ರೀ. ಎ. ಬಿ. ಶೆಟ್ರು ಬ್ರಾಹ್ಮಣ ವಿರೋಧಿಯೇ?

ಕುಂದಾಪುರ ಡಿವಿಜನಿನಲ್ಲಿ ಜಸ್ಟಿಸ್ ಪಕ್ಷದ ಪರವಾದ ಚುನಾವಣೆಯ ಪ್ರಚಾರ ಕಾರ್ಯವು ಕೇವಲ ವ್ಯಕ್ತಿಪರವಾಗಿದೆ. ಈ ಡಿವಿಜನಿನ ಕಾಂಗ್ರೆಸ್ ಪಕ್ಷೀಯ ಉಮೇದ್ವಾರಿಯ ಕುರಿತು, ಬೇರೆಬೇರೆ ಸ್ಥಳಗಳಲ್ಲಿ, ಭಿನ್ನಭಿನ್ನ ವ್ಯಕ್ತಿಮತ್ತು ಸಮಾಜಗಳವರಲ್ಲಿ ನಾನಾಸುಳ್ಳು ಆರೋಪಣೆಮಾಡಿ ತನ್ನ ಸ್ವಾರ್ಥ ಸಾಧಿಸುವ ಕುಹಕತನವನ್ನು ಪಲಂಬಿಸಿದೆ. ಬ್ರಾಹ್ಮಣರ ಸಹಾಯವನ್ನು ಕೇಳಹೋಗುವಾಗ ಶ್ರೀ ಎ ಬಿ. ಶೆಟ್ರು ಬ್ರಾಹ್ಮಣರ ವಿರೋಧಿಗಳು; ಅವರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾಗಿದ್ದಾಗ ಬ್ರಾಹ್ಮಣೇತರರಿಗೇನೇ ಹೆಚ್ಚಿನ ನೌಕರಿಗಳನ್ನಿತ್ತು ಬ್ರಾಹ್ಮಣರಿಗೆ ಅನ್ಯಾಯಮಾಡಿದವರೆಂಬುದೇ ಪ್ರಾಮುಖ್ಯ ಆರೋಪ. ಆದರೆ ಕಳೆದ ಡಿಸ್ಟ್ರಿಕ್ಟ್ ಬೋರ್ಡು ಸಭೆಯಲ್ಲಿ ಶ್ರೀ ಎ. ಬಿ. ಶೆಟ್ರು ಯಾವ ಯಾವ ಜಾತಿಯವರಿಗೆಲ್ಲಾ ನೌಕರಿಗಳನ್ನು ಕೊಟ್ಟಿರುವರೆಂಬ ಸ್ಪಷ್ಟನೆಗಳಿಗೆ ಈಗಣ ಪ್ರೆಸಿಡೆಂಟರೇ ಕೊಟ್ಟ ಉತ್ತರದಿಂದ, ಶ್ರೀ ಎ ಬಿ. ಶೆಟ್ರು ಬ್ರಾಹ್ಮಣರಿಗೆ ನ್ಯಾಯವನ್ನೇ ಮಾಡಿರುವುದು ಮೊತ್ತವಲ್ಲದೆ, ಸರಕಾರವು ಲೋಕಲ್ ಬೋರ್ಡುಗಳಿಗೂ ಅನ್ವಯಿಸಿರುವ ಜಾತೀಯ ಪ್ರಮಾಣ (Communal G.O.) ನಿಯಮ ಪ್ರಕಾರ ಬ್ರಾಹ್ಮಣರಿಗೆ, ಹೆಚ್ಚು ಪ್ರಕಾರ ಮೊರೆಯುವುದಕ್ಕಿಂತಲೂ ಹೆಚ್ಚಿನ ನೌಕರಿಗಳನ್ನು ಅವರಿಗೆ ಕೊಟ್ಟಿರುವರೆಂಬುದು ಸುವ್ಯಕ್ತವಾಗಿರುವುದು. ಈ ಸಂಗತಿಯು ಪತ್ರಿಕೆಗಳಲ್ಲೆಲ್ಲಾ ಪ್ರಕಟವಾಗಿರುತ್ತಾ ಶ್ರೀ ಶೆಟ್ರು ಬ್ರಾಹ್ಮಣರಿಗೆ ಅನ್ಯಾಯಮಾಡಿದವರೆಂದು ಸಾರುತ್ತಾ ಹೋಗುವುದರಲ್ಲಿ ಅರ್ಥವಿದೆಯೇ?

ಅಳಿಯಸಂತಾನ ಮಸೂದೆಯ ಪ್ರಶ್ನೆ

ಕುಂದಾಪುರ ತಾಲೂಕಿನಲ್ಲಿ ಕೆಲವೆಡೆ, ಶ್ರೀ. ಎ. ಬಿ ಶೆಟ್ರು ಅಳಿಯ ಸಂತಾನ ಮಸೂದೆ ತಂದು, ಅಳಿಯ ಕಟ್ಟಿನವರನ್ನೇ ನಾಶಮಾಡಲೋಡಿದವರೆಂಬ ಪ್ರಚಾರ ಕಾರ್ಯವು ನಾಡವ ಸಮಾಜದಲ್ಲಿ ಪ್ರಬಲವಾಗಿ ನಡೆಸಲ್ಪಟ್ಟಿರುವುದು. ಬೈಂದೂರಿನ ಮಹನೀಯರೊಬ್ಬರು ಈ ವಿಷಯದಲ್ಲಿ ದೊಡ್ಡ ಪ್ರಚಾರಕರಾಗಿರುವರು.

ಈ ವಿಷಯದಲ್ಲಿಯೂ ಬಹಳವಾಗಿ ಅಸತ್ಯ ಪ್ರಚಾರವು ನಡೆದಿರುತ್ತದೆ. ಅಳಿಯ ಸಂತಾನ ಮಸೂದೆಯು ಕೌನ್ಸಿಲಿನಲ್ಲಿ ಮಂಜೂರಾಗುವಾಗ ಕೆಲವು ಮಾರ್ಪಾಟುಗಳನ್ನು ಹೊಂದಿತು. ಇದಕ್ಕೆ ಅಳಿಯ ಸಂತಾನವರು ಕೆಲವರ ಪ್ರಬಲ ವಿರೋಧವಿರುವುದೆಂದು ಶ್ರೀ. ಎ. ಬಿ. ಶೆಟ್ರು ಮನಗಂಡೊಡನೆಯೇ ತಾನೇ ಮಾನ್ಯ ಗವರ್ನರರ ಭೇಟಿಮಾಡಿ, ಕೌನ್ಸಿಲಿನಲ್ಲಿ ಮಂಜೂರಾದ ಮಸೂದೆಯಲ್ಲಿ ಕೆಲವು ತಿದ್ದುಪಡಿ ಮಾಡುವುದು ಅವಶ್ಯವೆಂದು ಆಗ್ರಹಪಟ್ಟರು. ಅಳಿಯ ಸಂತಾನಿಗರಲ್ಲಿ ಮಸೂದೆಯ ಕುರಿತು ಪ್ರಬಲ ಐನ್ನಾಭಿಪ್ರಾಯ ಮತ್ತವ್ಯೂಟಾದುದರಿಂದ, ಆದರ ವ್ಯಾಪ್ತಿನೆಯಿಂದ ಅಳಿಯ ಕಟ್ಟಿನವರನ್ನು ವಿನಾಯತಿ ಪಡಿಸಲಾಯಿತು. ಶ್ರೀ. ಎ ಬಿ. ಶೆಟ್ರು ಮತ್ತು ಇತರ ಅಳಿಯಸಂತಾನ ಮಸೂದೆಯ ಸಮರ್ಥಕರು ತಾವೇ ರಾಜಿಯ ಮನಸ್ಸು ತೋರಿಸಿ ಹೆಚ್ಚಿನ ಜನತೆಗೆ ಸ್ವೀಕಾರ್ಯವಾದ ತಿದ್ದುಪಡಿಗಳಿಗಾಗಿ ಪ್ರಯತ್ನಿಸಿದ್ದಲ್ಲಿ ಅಳಿಯ ಸಂತಾನ ಲೀಗಿನ ಚಳವಳಿಯು ಎಷ್ಟರ ಮಟ್ಟಿಗೆ ಜಯಶೀಲವಾಗುತ್ತಿತ್ತೋ ಅನಂತರ ಶ್ರೀ. ಎ. ಬಿ. ಶೆಟ್ರು, ಅಳಿಯ ಕಟ್ಟಿನಲ್ಲಿ ಪ್ರಬಲ ಬಹು ಪಕ್ಷೀಯರ ಸಮ್ಮತವನ್ನು ಇನ್ನೊಂದು ಮೆಸೂದೆಯನ್ನು ಕೌನ್ಸಿಲಿನಲ್ಲಿ ತಂದರು. ಶ್ರೀ. ಎ ಬಿ ಶೆಟ್ರು ತಂದರೆಂಬೊಂದು ಕಾರಣದಿಂದಲೇ ಅಳಿಯ ಸಂತಾನ ಲೀಗಿನವರು ಇವನ್ನೂ ವಿರೋಧಿಸಲು ಕಂಕಣ ಬದ್ಧರಾಗಿ ಹೋರಟುದರಿಂದ ಶ್ರೀ. ಶೆಟ್ರು ಅದನ್ನು ಬೆಟ್ಟುಬಿಡಬೇಕಾಯಿತು ಸಂಗತಿಗಳು ಹೀಗಿರುತ್ತಾ ಶ್ರೀ. ಎ. ಬಿ ಶೆಟ್ರು ಅಳಿಯಕಟ್ಟಿನವರ ಇಚ್ಛೆಗೆ ವಿರೋಧವಾಗಿ ಅಳಿಯ ಸಂತಾನ ಮಸೂದೆಯನ್ನು ತರುವ ಆಗ್ರಹತೊಟ್ಟು ಅಳಿಯ ಕಟ್ಟಿನವರಿಗೆ ಹಾನಿಮಾಡಲೆಷ್ಟಿದವರೆಂಬ ಅಪವಾದವು ಕೇವಲ ದ್ವೇಷ ಪ್ರೇರಿತವಾದುದಲ್ಲವೇ? ಈಗಣ ಚುನಾವಣೆಗೂ ಅಳಿದು ಹೋಗಿರುವ ಅಳಿಸಂತಾನ ಮಸೂದೆಗೂ ಅರ್ಥಾರ್ಥ ಸಂಬಂಧವಾದರೂ ಏನು? ಶ್ರೀ. ಎ. ಬಿ. ಶೆಟ್ರು ಕುರಿತು ಜನರ ಮನಸ್ಸನ್ನು ಕೆಡಿಸಿ ಅವರಿಗೆ ಓಟು ದೊರೆಯದಂತೆ ಮಾಡಬೇಕೆಂಬ ಕ್ಷುದ್ರ ಉದ್ದೇಶದಿಂದಲೇ ಇಂತಹ ಆರೋಪಗಳು ಮಾಡಲ್ಪಡುತ್ತವೆ ಯೆಂಬುದು ತುಸು ವಿಚಾರಿಸಿದರೆ ಸ್ಪಷ್ಟವಾಗುವುದು.

ಕೇವಲ ವ್ಯಕ್ತಿ ದ್ವೇಷಾಸೂಯಾ ಪ್ರಚಾರ

ದಕ್ಷಿಣ ಕನ್ನಡದಲ್ಲಿ ಜಸ್ಟಿಸ್ ಪಕ್ಷದ ಚುನಾವಣೆಯ ಪ್ರಚಾರ ಕಾರ್ಯವು ಕೇವಲ ವ್ಯಕ್ತಿ ದ್ವೇಷಾಸೂಯೆಯ ಕ್ಷುದ್ರ ಪ್ರಚಾರವಾಗಿರುವುದು. ಯಾವುದಾದ್ಯರೊಂದು ತತ್ವ ಹಿಡಿದು, ಜನಹಿತಸಾಧನೆಯ ಯಾವ ಪ್ರಶ್ನೆಯನ್ನಾದರೂ ಪ್ರತಿಪಾದಿಸಿ ಜಾಹೀರಾದ ಪ್ರಚಾರವೇನೂ ನಡೆಸಲ್ಪಡುವುದಿಲ್ಲ ಸಾರ್ವಜನಿಕ ಸಭೆಗಳೇನೂ ನಡೆಸಲ್ಪಡುವುದಿಲ್ಲ. ಜಸ್ಟಿಸ್ ವಕ್ತಲ್ಕೆ ಜನರೇಕ ಓಟು ಕೊಡಬೇಕೆಂಬ ಪ್ರಸ್ತಾವನ್ನೇ ಎತ್ತುವ ನರಿಲ್ಲ. ಪ್ರತಿಸ್ಪರ್ಧಿಗಳ ಮೇಲೆ ಅಲ್ಲಾಸಲ್ಲದ ಆರೋಪ ಹೂಡಿ, ಕಾಂಗ್ರೆಸಿನ ಕುರಿತು ಜನರಲ್ಲಿ ನಾನಾ ದುರಭಿಪ್ರಾಯವನ್ನುಂಟು ಮಾಡಿ ತಮ್ಮ ಬೇಳ ಬೇಯಿಸುವುದೇ ದಕ್ಷಿಣ ಕನ್ನಡ ಜಸ್ಟಿಸ್ ಪಕ್ಷೀಯರ ಪ್ರಚಾರ ಕ್ರಮವಾಗಿದೆ. ಜಸ್ಟಿಸ್ ಪಕ್ಷದ ಉಮೇದ್ವಾರಿಗಳ ಪರವಾಗಿ ಓಟುಪಡೆಯಲು ಎಲ್ಲ ರೀತಿಯ ಕುಟಿಲ ತಂತ್ರಗಳೂ ನಡೆಸಲ್ಪಡುತ್ತಿವೆ ಇಂದೋ ನಾಳೆಯೋ ಸಾಯಲಿರುವ ಜಸ್ಟಿಸ್ ಪಕ್ಷದ ವತಿಯಿಂದ ನೌಕರಿಕೊಡಿಸುವ ಬಾಯಿಮೆಯನ್ನು ಕೆಲವರಿಗೆ ತೋರಿಸಲಾಗಿದೆ. ಅತ್ಯಂತ ಕಡಮೆ ಪಿಂಡರುಳ್ಳವರಿಗೆ ಮಾತ್ರ ಕಂಟ್ರಾಕ್ಟುಗಳನ್ನಷ್ಟೋ ಪೆಟೇಷಂದು ಸರಕಾರದ ಕಠಿಣ ನಿಯಮವಿದ್ದರೂ ಹಲವರಿಗೆ ಪಿಂಡರುಗಳ ಆಕ್ಷೆಯು ಒಲೆ ಬೀಸಲಾಗಿದೆ. ಈ ಉದ್ದೇಶದಿಂದ ವರ್ಷಾವಧಿ ರನ್ನ ಕೆಲಸದ ಪಿಂಡರು ಕರೆಯುವುದನ್ನು ವಿಳಂಬಿನಲಾಗಿದೆಯೆಂದು, ಸುದ್ದಿಯುಂಟಾಗಿದೆ. ಇಂತಹ ಪ್ರಚಾರ ಕಾರ್ಯವು ಆದೆಷ್ಟು ಯುಕ್ತವಾದುದು ಮತ್ತು ಸದಾ ಸರಕಾರದ ಬಾಲ ಹಿಡಕೊಂಡೇ ಹೋಗುವ ಜಸ್ಟಿಸ್ ಪಕ್ಷಕ್ಕೆ ಜನರು ಎಷ್ಟೊಂದು ಬೆಂಬಲವೀಯುವುದೇ ಕೆಂಬುದನ್ನು ಜನರೇ ವಿಚಾರಿಸಿ ತಿಳಕೊಳ್ಳತಕ್ಕದ್ದು.

ಡಾಕ್ಟರ್ ಯು. ರಾಮರಾಯರು-

ಮೊದಲಿಂದಲೂ ಕಾಂಗ್ರೆಸಿಗಾಗಿ ಕೆಲಸ ಮಾಡಿಕೊಂಡು ಬಂದ ಮಹನೀಯರು, ಅಂಧವರನ್ನು ಸ್ಥಳೀಯ ಕಾಂಗ್ರೆಸ್ ಮುಖಂಡರ ಸೊತ್ತ ಚಾಲನೆಯಿಂದಾಗಿ ಅಪ್ಪರ್ ಹೌಸಿಗೆ ಕಾಂಗ್ರೆಸ್ ಕಡೆಯ ಉಮೇದ್ವಾರಿಯಾಗಿ ಆರಿಸಲಿಲ್ಲೆಂದು ಕೆಲವಡೆ ಬ್ರಾಹ್ಮಣರ ಮನಸ್ಸನ್ನು ಕೆಡಿಸುವ ಪ್ರಯತ್ನ ನಡೆದಿದೆ. ಡಾಕ್ಟರ್ ರಾಮರಾಯರು ಕಳೆದ ನವಂಬರ ಮಧ್ಯದಲ್ಲೇನೇ, ತನ್ನ ಅಪ್ಪರ್ ಹೌಸಿನ ಉಮೇದ್ವಾರಿಕೆಯನ್ನು ಹಿಂತೆಗೆದು ಕರ್ನಾಟಕ ಪ್ರಾಂತಿಕ ಪಾರ್ಲಿಮೆಂಟರಿ ಬೋರ್ಡಿಗೆ ಬರಕೊಂಡಿರುವರು. ಸೂತ್ರಜಾಲನೆಯು ಯಾವ ಕಡೆಯಿಂದ ನಡೆದಿದೆಯೆಂಬ ನಿಜವೃತ್ತಾಂತವನ್ನು ಕ್ರಮೇಣ ಪ್ರಕಟವಾಗದಿರದು

ಎಲ್ಲೆಲ್ಲಿಯೂ ಕಾಂಗ್ರೆಸಿಗೆ ಸಹಾನುಭೂತಿ.

ಪ್ರತಿಯೊಂದು ಕಡೆಯಲ್ಲಿಯೂ ಕಾಂಗ್ರೆಸಿನ ಕುರಿತು ಜನರಲ್ಲಿ ಸಂಪೂರ್ಣ ಸಹಾನುಭೂತಿಯು ತೋರಿಬರುತ್ತಿರುವುದು. ಪುತ್ತೂರು ಡಿವಿಜನಿನಲ್ಲಿ, ಹಲವು ರೀತಿಯಲ್ಲಿ ನಿರ್ಭಯವಾಗಿ ಜಿಲ್ಲೆಯ ಹಿತ ಸಾಧನೆ ಮಾಡಿರುವ ಶ್ರೀ. ಕೆ. ಆರ್. ಕಾರಂತರ ಎದುರಾಗಿ ಶ್ರೀ ಧರ್ಮಸ್ಥಳ ಹೆಗ್ಡೆಯವರನ್ನು ಎತ್ತಿಕಟ್ಟುವ ಪ್ರಯತ್ನವು ನಿಷ್ಫಲವಾಗಿದ್ದುದು. ಜಸಮತಾವಲಂಬಿಯೂ ವಿವೇಕಿಗಳೂ ಆದ ಶ್ರೀ ಧರ್ಮಸ್ಥಳ ಹೆಗ್ಡೆಯವರು ಈ ಕುತಂತ್ರಕ್ಕೊಳಗಾಗದೆ ಸ್ವತಂತ್ರತೆಯಿಂದ ತನಗೆ ತೋರಿದ ಮಾರ್ಗವನ್ನೇ ಹಿಡಿದಿರುವರು. ಹೀಗೆ ಜಸ್ಟಿಸ್ ಪಕ್ಷೀಯರು ಪುತ್ತೂರಲ್ಲಿ ಭಗ್ನಮನೋರಥರಾಗಿ ಕಂಗೆಟ್ಟಿರುವರು. ಮಂಗಳೂರು ಡಿವಿಜನಿನಲ್ಲಿ ಅವರು ಬಹಳ ಪೇಚಾಟದಲ್ಲಿ ಬಿದ್ದಿರುವರು. ಶ್ರೀ. ವೆಂಕಟ್ರಾಯ ಬಾಳಿಗರಂತಹ ಜನಸ್ತಿಯ ಉಮೇದ್ವಾರಿಯು ಇದಿರಲ್ಲಿ ಅವರ ಪ್ರಯತ್ನವು ಸುಃಖ ನಾಧ್ಯವಾಗಿ ನಡೆಯದಂತಾಗಿದೆ. ಶ್ರೀ. ಕಾರ್ನಾಡು ಸದಾಶಿವರಾಯರನ್ನು ನಿಲ್ಲಿಸಿಲ್ಲಿ ವೆಂಬ ಆರೋಪವು ಅವರ ಕುಹಕತನವನ್ನೇ ಬಯಲಿಗೆಳೆಯುವಂತಹದಾಗಿದೆ. ಯಾಕಂದರೆ ಶ್ರೀ. ಬಾಳಿಗರು ಶ್ರೀ. ರಾಯರ ವರವಾಗಿ ಹಿಂತೆಗೆಯುಲುದ್ಯುರಿಸಿರುವರೆಂದಾಗ ಜಸ್ಟಿಸ್ ಪಕ್ಷದ ಉಮೇದ್ವಾರಿಯು ಹಾಗೆ ಮಾಡಲು ಸಿದ್ಧರಿಲ್ಲ. ಈ ರೀತಿಯ ಕುಹಕ ಪ್ರಚಾರವೆಲ್ಲಾ ಕಾಂಗ್ರೆಸಿನ ಕಡೆಯ ಪ್ರಬಲ ಪ್ರಜಾ ರದಿಪಕ್ಷದಲ್ಲಿ ನಡೆಯದಾಗಿದೆ. ಎಲ್ಲಿ ಹೋದರು ಜನರು ವಿಶೇಷವಾಗಿ ತರುಣ ಜನಾಂಗವು ಕಾಂಗ್ರೆಸಿಗೆ ಸಹಾಯ ಮಾಡಲು ಕಂಕಣಬದ್ಧವಾಗಿ ಮುಂದೆ ಬಂದಿದೆ. ಕುಂದಾಪುರ ಡಿವಿಜನಿನ ಹಲವು ಬ್ರಾಹ್ಮಣಕೇಂದ್ರಗಳಲ್ಲಿಯೇ ಈ ವಾರ ಸಭೆಯು ನಡೆದ, ಸಂಗತಿಗಳನ್ನೆಲ್ಲಾ ಸರಿಯಾಗಿ ವಿವರಿಸಿದಾಗ, ಪ್ರಮುಖ ಮಹನೀಯರೆಲ್ಲಾ ತ್ಯಪ್ತಿಗೊಂಡು ತಾವು ಕಾಂಗ್ರೆಸಿಗೆ ಸಹಾಯ ಮಾಡಲು ಮುಂದೆ ಬಂದಿರುವರು. ಕಾಂಗ್ರೆಸಿನ ಪರವಾಗಿ ಎಡಬಿಡದೆ ಪ್ರಚಾರಕಾರ್ಯ ನಡೆದಲ್ಲಿ ದಕ್ಷಿಣ ಕನ್ನಡದಲ್ಲಿ ಕಾಂಗ್ರೆಸ್ ಉಮೇದ್ವಾರಿಗಳ ಜಯವು ನಿಶ್ಚಯವೆಂದು ನಿಸ್ಸಂದೇಹವಾಗಿ ಹೇಳಬಹುದು.

WHEN YOU BUY SHARES
IN THE
Southern Land Trust Ltd.
YOU BUY LAND
WITHOUT ITS ATTENDANT RATE COLLECTION WORRIES
Present issue 30,000 Shares of Rs. 10/- each.
SHARE LIST OPEN
FROM 14—12—36 TO 21—12—36.
APPLY THROUGH YOUR BANKER

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮುಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧-೦-೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂತಾರತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಷ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಫಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬೆಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತರಡಿನ ಪಾಟ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕಿಟ್ಟು ಮಾಡುವದು
೧೭ ಮೀನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾಸುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೇಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಿಪ್ರಭಾತಕ್ಕೆ ಔಷಧ
೨೮ ಬಾಲಾಮೃತ ಮಾಡುವದು
೨೯ ಶಿಷ್ನವೃದ್ಧಿಗೆ ಔಷಧ
೩೦ ಪರಬತ್ತು ಮಾಡುವದು
೩೧ ಭಳಿಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ವಠಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಕು ಖಜ್ಜಿ ಮುಲಾಮು ಮಾಡುವದು
೩೫ ನಾಸೀಪ್ರಡಿ ಮಾಡುವದು
೩೬ ಮನೆ, ವಕಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ, ಕುಂಬಳ ಮುಂತಾದ ಕಾಯಿಗಳಿಗೂ, ಹೂವು, ಶೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೇ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲು ಬಟ್ಟಿಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಥ್ ಕಂಟ್ರೋಲ
೫೩ ಅರಗಿನ ಬಣ್ಣ ತಯಾರಿಸುವದು
೫೪ ಗಿಲೀಟು ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳೆಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪೆಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.

ಸ್ಪಷ್ಟ ಸಂಕೇತ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಸಿ. ಎಸ್. ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕಳಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ

—- ಈ ಪುಸ್ತಕದೊಳಗಿನ ವಿಷಯಗಳು —-

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ. ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶ ಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ. ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ. ೨೯ ಕುಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳನೆಕ್ಕಿದಕ್ಕೆ ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪು ಬಣ್ಣಕ್ಕೆ. ೩೬ ಕುಚ ವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಆವಸ್ಥೆಗಳು. ೩೮ ಆವಸ್ಥೆ ಮೇಲಿಂದ ಪ್ರೇಮದ ಇಮುವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ತೂಡುಪ ಉಪಾಯ. ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜೀಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಟ್ಯಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯುಗಳಿವೆ. ಸ್ಪಷ್ಟ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಮಂಗಳೂರು ಸಮಾಚಾರ

(ನಮ್ಮ ಸ್ವಂತ ಬಾತ್ಮೀದಾರರಿಂದ)

ತಾ 14 12-1936

ಮಂಗಳೂರು ನಗರಸಭೆ

ಕಳೆದ ತಾ 7ನೇ ಭಾನುವಾರ ಸಾಯಂಕಾಲ 6 ೫೦ಕ್ಕೆ ಸರಿಯಾಗಿ ಮಂಗಳೂರು ನಗರಸಭೆಯ ಸಾಮಾನ್ಯ ಸಭೆಯೊಂದು ನಗರಸಭಾಮಂದಿರದಲ್ಲಿ ಸೇರಿತು ಡಾ! ಕೆ ವಿಟ್ಠಲಶೆಟ್ಟಿಯವರು ಅಧ್ಯಕ್ಷ ಸ್ಥಾನವಹಿಸಿದ್ದರು ಶ್ರೀ ಯಂ ಮಾದವರಾಯರು ತಂಗಿ ಹರಿಜನರಿಗೆ ಕ್ಷೇತ್ರಪ್ರವೇಶನ ಮೊದಲಾದವರ ಹುಕುಮನ್ನು ದಯಪಾಲಿಸಿದ ತಿರುವಾಂಕೂರಿನ ಮಹಾರಾಜರಿಗೆ ಧನ್ಯವಾದಗಳನ್ನು ಈ ಸಭೆಯು ಅರ್ಪಿಸುತ್ತದೆಂಬ ರೆಸಲ್ಯೂಷನ್ನನ್ನು ಮಾನ್ಯ ಮಾಯಿತು ಇವಾದ ಮೇಲೆ ನಗರಸಭೆಯ ಕಛೇರಿಗಳು ಉತ್ತಮ ಸ್ಥಿತಿಯಲ್ಲಿವೆಯೆಂದು ಜಿಲ್ಲಾ ಕೆಲಸಗಾರರು ಬರೆದ ವಿಷಯವನ್ನು ಅಧ್ಯಕ್ಷರು ಸಭೆಯ ಮುಂದೆ ಓದಿದರು ನಗರಸಭೆಯ ಕೈಕೆಳಗಿನ ಉಪಾಧ್ಯಾಯರ ವೇತನದ ವಿಷಯವಾಗಿ ಕೆಮಿಟಿಯವರು ಸಭೆಯ ಮುಂದಿರಿಸಿದ ಸ್ಕೇಲಿನ ಪಟ್ಟಿಯು ಅಂಗೀಕೃತವಾಯಿತು ಶ್ರೀ ಯಂ ರಂಕೆರನಾರಾಯಣ ರಾಯರು ಮಂಗಳೂರು ಒಂದರನ್ನು ಉತ್ತಮ ಸ್ಥಿತಿಗೆ ತರಬೇಕೆಂದು ಸೂಚಿಸಿ ಭಾಷಣಮಾಡುತ್ತಾ ಮಂಗಳೂರು ಮ್ಯೂನಿಸಿಪಾಲಿಟಿಯನ್ನು ಬಂದರದ ಪಾಲ್ಸ್ಯಾಯ ಅತ್ಯಗತ್ಯವೆಂದು ಹೇಳಿದರು ಅಧ್ಯಕ್ಷರು ಈ ಉತ್ತಮ ಸಲಹೆಗಳಿಗಾಗಿ ಸಭೆಯ ವಂದನೆಗಳನ್ನು ಶ್ರೀಮತಿ ರಾಮಿಯಿಗೆ ಒಪ್ಪಿಸಿದರು ಜಿಲ್ಲಾ ಎಜುಕೇಷನ್ ಕೌನ್ಸಿಲಿಗೆ ಒಬ್ಬ ಸದಸ್ಯರನ್ನು ಆರಿಸುವ ಕೆಲಸವು ನಡೆಯಿತು ರಾವ್ ಬಹದ್ದೂರ್ ಸಂಕಟರಾಯರೂ ಡಾ! ಗಿರಿಧರರಾಯರೂ ಉಮೇದ್ವಾರರಾಗಿ ನಿಂತರು ಶ್ರೀ ವೆಂಕಟರಾಯರಿಗೆ ಬಹುಮತ ದೊರೆತು ಅವರೇ ಆರಿಸಲ್ಪಟ್ಟರು ಇನ್ನಿತರ ಸಾಮಾನ್ಯ ವಿಷಯಗಳಿಗೆ ಬೆರ್ಚಿಸಿ ತೀರ್ಮಾನಿಸಿದ ಬಳಿಕ, ಮತ್ತು ಕೆಲ ಬಿಡಿನ ಬಗ್ಗೆ ಹಣ ಮಂಜೂರುಮಾಡಿದ ಅನಂತರ ಸಭೆಯು ಮುಕ್ತಾಯವಾಯಿತು

ಅದ್ಭುತ ನ್ಯಾಯಾಮ ಪ್ರದರ್ಶನ

ಕೇರಳದ ಕೆಲಾರಿ ಪ್ರದರ್ಶನ ಮಂಡಲದವರು ತಾ. 11ರಲ್ಲಿ ತಮ್ಮದೊಂದು ಪ್ರದರ್ಶನವನ್ನು ಸ್ಥಳೀಯ ಆಲ್ಬೋಸಿಯನ್ ಕಾಲೇಜಿನ ಮೈದಾನದಲ್ಲಿ ಏರ್ಪಡಿಸಿದರು ಪ್ರೊಫೆಸರ್ ಶ್ರೀನಿವಾಸಾಚಾರ್ಯರು, ಮಂಗಳೂರಿನ ಜನರ ಪರವಾಗಿ ವಂದನಾದಗಳನ್ನರ್ಪಿಸಿದರು

ಕಾಂಗ್ರೆಸ್ ಪ್ರಚಾರ ಕಾರ್ಯ

ಬರುವ ಎಸೆಂಬ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರಿಗೆ ಬಹುಮತ ದೊರಕುವಂತೆ ಮಾಡುವ ಉದ್ದೇಶದಿಂದ ಜಿ ಸಿ ಇಲೆಕ್ಷನ್ ಬೋರ್ಡಿನ ಅಧಿಕಾರಿಗಳು ನಗರದ ಬೀದಿಬೀದಿ ಕಡೆಗಳಲ್ಲಿ ಪ್ರತಿ ನಿತ್ಯವೂ ಸಭೆಗಳನ್ನು ಜರಗಿಸಿ ಅಲ್ಲಿ ಭಾಷಣಗಳಾಗುವಂತೆ ಏರ್ಪಾಡುಮಾಡಿರುವರು

ಕೆದ್ರಿ ಪಂಚಾಯತ ಬೋರ್ಡು

ಕೆದ್ರಿಗೊಂದು ಪಂಚಾಯತ ಬೋರ್ಡು ಆಗಿದೆ ಈ ಬೋರ್ಡಿನ ಸದಸ್ಯರ ಚುನಾವಣೆಯು ಕಳೆದ ತಾ 12ರಲ್ಲಿ ನಡೆಯಿತು

ಕೆದ್ರಿ ದಿವ್ಯೋತ್ಸವ

ಕೆದ್ರಿ ಶ್ರೀ ಮಂಜುನಾಥೇಶ್ವರಸ್ವಾಮಿಯಲ್ಲಿ ಜರಗತಕ್ಕ ದೀಪೋತ್ಸವವು ನಿನ್ನೆಯ ದಿವಸ ನಡೆಯಿತು

ಮಿಕನ್ ಸ್ಕೂಲ್ ವರ್ಧಂತಿ

ಮಂಗಳೂರು ಬಿ. ಇ ಯಂ ಹೈಸ್ಕೂಲ್ ವರ್ಧಂತಿಯು ಬರುವ ತಾ 19ನೇ ಜನವರಿ ದಿವಸ ನಡೆಯಲಿರುವುದು

ಗವರ್ನಮೆಂಟ್ ಕಾಲೇಜ್ ದಿನಾಚರಣೆ

ಸ್ಥಳೀಯ ಗವರ್ನಮೆಂಟ್ ಕಾಲೇಜಿನ ದಿನಾಚರಣೆಯು ಎಂದಿನಂತೆ ಜರಗುವ ರೀತಿಯಲ್ಲಿ ನಿನ್ನೆಯ ದಿವಸ ಆತಿ ವಿಜೃಂಭಣೆಯಿಂದ ನಡೆಯಿತು ಬೆಳಿಗ್ಗೆ ಆಟಗಳು, ಮಧ್ಯಾಹ್ನದ ಅನಂತರ ಸತ್ಕಾರ ಸಭೆ, ನಾಟಕ ಇತ್ಯಾದಿಗಳು ನಡೆದುವು

ಮದ್ಯ ತಯಾರಿಸಿದವರ ದಸ್ತಗಿರಿ

ಕಳೆದ ತಾ ೬ರಲ್ಲಿ ಗುಪ್ತವಾಗಿ ತಾಳಿ ತರಾಬನ್ನು ತಯಾರಿಸಿ ಮಂಗಳೂರಿಗೆ ಜಟ್ಟಿದಲ್ಲಿ ಗಪ್ತವಾಗಿ ಸಾಗಿಸುತ್ತಿದ್ದಾಗ ಫೂರಿಂಗಿಪೇಟೆ ರೌಂಜನ ಎಕ್ಸೈಜ್ ಕ್ಸ್ ಇನ್ಸ್‌ಪೆಕ್ಟರರಾದ ಶ್ರೀ ಕೆ ಯಂ ಹಕ್ಕು ರವರು ಜವಿನ ಸಮೂಹ ಆ ಜಟ್ಟಿದಲ್ಲಿದ್ದವರನ್ನು ದಸ್ತಗಿರಿ ಮಾಡಿ ಜಟ್ಟಿದಲ್ಲಿದ್ದ ಸರಂಜಾಮನ್ನು ಹಿಡಿದರು ಆ ಸೊಕದ್ದಮೆಯು ಈಗ ನೆಕೆಂಡ್ ಮ್ಲಾಸ್ ನ್ಯಾಯಸ್ಥೈಟರ ಮುಂದೆ ವಿಚಾರಣೆಯಾಗುತ್ತಿದೆ

ಕ್ವೀನ್ ಮೇರೀಸ್ ಕಾಲೇಜಿನಲ್ಲಿ ಕನ್ನಡ ಶಿಕ್ಷಣ

ಕೆಲವು ಕಾಲದ ಹಿಂದೆ ಕ್ವೀನ್ ಮೇರೀಸ್ ಕಾಲೇಜಿಂದ ಕನ್ನಡ ಕಲಿಸುವ ವಿಷಾದನ್ನು ನಿಲ್ಲಿಸುವರೆ ಮದ್ರಾಸ್ ಸರಕಾರದವರು ಒಂದು ಹುಕುಂ ಕೊಟ್ಟ ಪ್ರಸ್ತೆ ತಗೆ ಆ ಹುಕುಮನ್ನು ರದು ಪಡಿಸಿ ಪುನಃ ಕನ್ನಡ ಕಲಿಸುವ ಅನುಕೂಲತೆಯನ್ನು ಮಾಡಿದ್ದಾರೆ ಇನ್ನು ಮೇಟ್ ಕನ್ನಡ ಕಲಿಯುವ ವಿದ್ಯಾರ್ಥಿಯರು ಕ್ವೀನ್ ಮೇರಿಸ್ ಕಾಲೇಜಿಗೆ ದಾಖಿಲಾಗಬಹುದೆಂದು ತಿಳಿದುಬರುತ್ತದೆ

'ಹಣದ ಬೆಲೆಯನ್ನು ಇಳಿಸುವುದು ಮತ್ತು ಹಾಗಂದರೇನು'

ಮದ್ರಾಸ್ ಯುನಿವರ್ಸಿಟಿ ಎಕ್ಸ್‌ಟೆನ್‌ಶನ್ ಬೋರ್ಡಿನ ಆಶ್ರಯದಲ್ಲಿ ಮದ್ರಾಸ್ ಯುನಿವರ್ಸಿಟಿಯ ಇಕೊನೊಮಿಕ್ಸ್ ಪ್ರಾಧ್ಯಾಪಕರಾದ ಪ್ರೊ ಪಿ ಎಸ್ ಲೋಕಾಧನ್ ಯಂ ಎ, ಬಿ ಎಸ್ ಸಿ, ಯವರು ಕಳೆದ ತಾ 12ರಲ್ಲಿ ಆಲೋಸಿಯನ್ ಕಾಲೇಜಿನಲ್ಲಿ ಮೇಲಿನ ವಿಷಯವಾಗಿ ಭಾಷಣವಿತ್ತರು

ತಿದ್ದುಪಡಿ

ನವಯುಗದ ಕಳೆದ ತಾ 10ರ ಸಂಚಿಕೆಯಲ್ಲಿ, ಮಂಗಳೂರು ಸಮೂಚಾರದಲ್ಲಿ 'ಸಭೆ ನಡೆಯಬೇಕೆ ಬೇಡವೆ' ಎಂಬ ಶೀರ್ಷನಾಮದ ಕೆಳಗೆ, ಸದಸ್ಯರ ಸ್ಕೈಕೆ ಒಂದು ಪಕ್ಷದವರು ಹೊರಬಂದು ಮತ್ತೆ ಬಂದ ಸದಸ್ಯರನ್ನು ಒಳಗೆ ಹೋಗದಂತೆ ಗೇಟಿನ ಹತ್ತರ ಪಿಕೆಟ್ ಮಾಡಿದರೆಂದು ಬರೆದಿದ್ದೆನಷ್ಟೆ ಈ ವರ್ತಮಾನವನ್ನು ನನಗೆ ಕೊಟ್ಟವರು ಆ ಮೀಟಿಂಗಿಗೆ ಹೋದವರು ಅವರ ಮಾತು ವಿಶ್ವಾರ್ಹವಾದುವೆಂದು ಸಂಪೂರ್ಣ ನಂಬಿ ನಾನು ವಾರ್ತೆ ಬರೆದುದಾಗಿರಲಿಲ್ಲವೆ ಯಾವ ನೌಕರನ್ನೂ ಆಕ್ಟೆಸಿಸುವ ಉದ್ದೇಶದಿಂದಲ್ಲ ಈಗ ಆಂತಹ ಪಿಕೆಟಿಂಗ್ ನಿಜವಾಗಿ ನಡೆದಿಲ್ಲವೆಂದು ವಿಚಾರಿಸಿ ತಿಳಿದುದರಿಂದ ಕಳಿಪಾರ ನಾನು ಬರೆದುದು ದಸ್ಕಂದು ಅದನ್ನು ಈ ಮೂಲಕ ಸಾಮಾನ್ಯ ತೆಗೆದುಕೊಳ್ಳುತ್ತೇನಲ್ಲದೆ ಸಳ್ಳನ್ನು ಸತ್ಯವೆಂದು ಕೊಡ್ಡುದರಿಂದ ಈ ರೀತಿ ಪ್ರಚಾರಮಾಡಿ ಸಿದುದಾಗಿಯೂ ಹಾಗೆ ಪೆರುಮೋಸದಿಂದ ಆದ ತಪ್ಪಿಗೆ ನೌಕರರು ಯಾರೂ ಬೇಸರಪಡುವಾದುಗಿಯೂ ಈ ಮೂಲಕ ಸ್ಪಾರ್ದಿಸುತ್ತೇನೆ

ಖೂನಿ ಮಕದ್ದಮೆ

ಕಳೆದ ಜೂನ್ ತಿಂಗಳಲ್ಲಿ ಕುದ್ರೋಳಿಯಲ್ಲಿ ಗುರುವಪ್ಪನೆಂಬವನನ್ನ ಚೂರಿಯಿಂದ ತಿವಿದು ಖೂನಿ ಮಾಡಿದ ತುಕ್ಕ ಪೂಜಾರಿಯ ವಿಚಾರಣೆ ಸೆಶ್ಷನ್ಸ್ ಕೋರ್ಟಿನಲ್ಲಿ ನಡೆದು, ಆವನಿಗೆ ಸೆಶ್ಷನ್ ಜಡ್ಜರು ಜನ್ಮಟ್ಟು ಏಕ್ಷೆಯನ್ನು ವಿಧಿಸಿದರು

ಕುಂದಾಪುರ ತಾಲೂಕು ಬಿಜಾಡಿ ಗ್ರಾಮದ ಆಣ್ಣಾಜಿ ಬುದ್ಯರೆಂಬವರನ್ನು ಪೂಜೆಗೆ ಕೂತಿದ್ದ ವೇಳೆಯಲ್ಲಿ ಕಡಿದುಕೊಂದ ಮಂಜುನಾಥ ಆಟುರಿಗೆ ಸೆಶ್ಷನ್ ಜಡ್ಜರು ವಿಚಾರ ನಡೆಸಿ ಜನ್ಮಟ್ಟುಪಿನ ವಿಕೆ ವಿಧಿಸಲಾಯಿತು

ವಿಟ್ಲದಲ್ಲಿ ಬೆಂಕಿಯ ಪ್ರತಾಪ 4 ಮಂದಿಯ ಮರಣ

ಕಳೆದ ತಾ 12ರಲ್ಲಿ ವಿಟ್ಲ ಬಸ್ ಸ್ಟಾಂಡಾ ಬಳಿ ಹುಲ್ಲುಮಾಡಿಸಿ ಒಂದು ಮನೆಗೆ ಬೆಂಕಿ ತಗಲಿ ಅಮ ಸುಟ್ಟು ಬೂದಿಯಾಯಿತು ಆದೆ ಸುಮಿನಲ್ಲಿದ್ದ ಸುಮಾರು ೫೦ ಮನೆಗಳೂ ದಸ್ಮಾವು ಬೆಂಕಿ ಆರಿಸಲು ಸಾಧ್ಯವಾಗಿಲ್ಲ ಒಂದು ಸುನಯಲ್ಲಿ ಬೆಂಕಿಯಿಂದ ತಪ್ಪಿಸಿಕೊಳ್ಳಲಾರದೆ ಮೂವರು ಹೆಂಗಸರೂ ಒಬ್ಬ ಮುದುಗನೂ ಳೈನಾದರೆಂದು ವಿಟ್ಲದಿಂದ ಬಂದವರೊಬ್ಬರು ತಿಳಿಸ ತ್ತಾರೆ

ಬೋಳಾರದಲ್ಲಿ ಜಾಹೀರ ಸಭೆ ಕಾಂಗ್ರೆಸ್ಸಿಗಾಗಿ ಜನರ ಭಾರೀ ಉತ್ಸಾಹ

ಚುನಾವಣೆ ಪ್ರಚಾರ ಕಾರ್ಯದ ಮೊದಲನೆಯ ಜಾಹೀರ ಸಭೆಯು ಗಿನೆಯ ತಾರೀಕು ಭಾನುವಾರ ಸಂಜೆ ೫ ೫೫ಕ್ಕೆ ಮೊದಲ್ ತಿಳಿಸಿದಂತೆ ಬೋ ೨ರ ಜಟ್ಟಿ ನಡೆಯಿತು ಸುತ್ತುಮುತ್ತಲಿನ ಅಸೆಕ ಜನರು ಸಭೆಯಲ್ಲಿ ನೆರೆದಿದ್ದರು ಮಾಜೀ ಲೆಜಿಸ್ಲೇಟಿವ್ ಕೌನ್ಸಿಲ್ ಮೆಂಬರರಾದ ಶ್ರೀ ಜೆ ಎ ಸಲ್ಡಾನಾ ಇವರು ಅಧ್ಯಕ್ಷಸ್ಥಾನವನ್ನು ಸಂಪಾದಿಸಿದರು ಈ ಸಭೆಯಲ್ಲಿ ಶ್ರೀಯುತರಾದ ಡಾನಿರಲೆಟ್ಟು, ಫಲ್ರ್ಸ್ ಅಬ್ದುಕರ್, ಪಿಂಟೊ, ವೆಂಕಟ್ರಾಯ ಎಂಳಿಗೆ ಮೊದಲಾದವರು ಹಾಜರಿದ್ದರು ಕಾಂಗ್ರೆಸ್ ಚುನಾವಣೆಯ ಕುರಿತು ಡಾ! ವಿಠಲರೆಟ್ಟು ಮತ್ತು ಶ್ರೀಯುತ ಮೋಹನಪ್ಪ ತಿಂಗಳಾಯರು ಭಾಷಣ ಮಾಡಿದರು ಕಾಂಗ್ರೆಸ್ಸಿನ ಸಭೆಕೆಲ್ಲರೂ, ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಬಾರೀ ಉತ್ಸಾಹವನ್ನು ತೋರಿಸಿದರು

ಡಾ! ವಿಠಲ ರೆಟ್ಟು ತಮ್ಮ ಭಾಷಣದಲ್ಲಿ ಕಾಂಗ್ರೆಸ್ಸಿನ ಜನಪರ ಮೊದಲು ಈ ವರೆಗೂ ಯಾವ ರೀತಿ ಹಿಂದೀ ಸ್ವಾತಂತ್ರ್ಯಕ್ಕಾಗಿ ಕೆಲಸ ಮಾಡುತ್ತಾ ಬಂದಿದೆ ಎಂಬುದನ್ನು ಸ್ಪಷ್ಟ ಮಾಡಿದರು ಗಯಾಶಿರಲ್ಲಿ ಆಚರಣೆಗೆ ಬಂದ ಮೊಂಟೆಗ್ಯೂ ಚೇಮ್ಸ್‌ಫರ್ಡ ಸುಧಾರಣೆಗಳು ಬಂದಾಗ ಜಸ್ಟಿಸ್ ಪಾರ್ಟಿಯವರು ಹೇಗೆ ತಮ್ಮ ಸ್ವಾರ್ಥವನ್ನು ಸಾಧಿಸಲು ಕಾಂಗ್ರೆಸ್ಸಿನವರು ಕಾಯಿದ ಮಂಡಲಗಳನ್ನು ಒಪ್ಪಿಸ್ಕರಿಸಿ ಆಪ್ತರಿಗೆ ಒಳ್ಳೊಹಕ್ಕು ಮಂತ್ರಿ ಪದವಿಗಳನ್ನು ಸ್ವೀಕರಿಸಿ ಬ್ರಿಟಿಷ್ ಸರಕಾರಕ್ಕೆ ಹಿಂದೂಸ್ತಾನವನ್ನು ತಮ್ಮ ಆಧೀನಪಡಿಟ್ಟುಕೊಳ್ಳಲು ಅನುಕೂಲ ಮಾಡಿಕೊಟ್ಟರು ಎಂಬುದನ್ನು ವಿವರಿಸಿ ಹೇಳಿದರು ಕಳಿವ ವರ್ಷ ಬ್ರಿಟಿಷ್ ಸರಕಾರವು ಹಿಂದೀಯರ ಮನಸ್ಸಿಗೆ ವಿರುದ್ಧವಾಗಿ ಹಿಂದೀ ರಾಜ್ಯಶಾಸನವನ್ನು ಹಿಂದೀ ಜನತೆಯ ಮೇಲೆ ಹೊರಿಸಿದುದಕ್ಕೆ ಇವನ್ನು ನಿರಾಕರಿಸುವುದಕ್ಕಾಗಿ ಕಾಂಗ್ರೆಸ್ ನಿರ್ಣಯಮಾಡಿದೆ ಹಿಂದೀ ಜನತೆಯು ಆತರಕ್ಕೆ ಕಾಂಗ್ರೆಸ್ಸಿಂದ ಮಾತ್ರ ಸಾಗಿತು ಕಾರಣ ಎಲ್ಲರೂ ಕಾಂಗ್ರೆಸ್ಸಿನ ಕಾರ್ಯಕ್ರಮವನ್ನು ಸಹಕರಿಸಬೇಕೆಂದು ಆರಿಕೆ ಮಾಡಿದರು ಶ್ರೀ ಅಂಗಳಾಯ ಇವರು ಡಾ! ವಿಠ್ಠ ಭಾಷಣದ ನಂತರ ಮಾತನಾಡಿದರು ಅವರು ಕಾಂಗ್ರೆಸ್ಸಿನ ಕಾರ್ಯಕ್ರಮಗಳ ಕುರಿತು ಜನರಿಗೆ ಮನವರಿಕೆಯಾಗುವಂತೆ ತಿಳಿಸಿ ಕಾಂಗ್ರೆಸ್ಸಿಗೆ ಸಂಪೂರ್ಣ ಸಹಾಯ ಮಾಡಬೇಕೆಂದು ವಿನಂತಿ ಮಾಡಿದರು

ಸ್ಥಳೀಯರಲ್ಲಾ ಬ್ರರು ಎದು ನಂತರ ಶ್ರೀ ಕಾರ್ಣಾಡ ಸದಾಶಿವರಾಯರನ್ನು ಏಕೆ ನಿಲ್ಲಿಸಲಿಲ್ಲ ಮತ್ತು ಕಳಿವ ಡಿಸ್ಟ್ರಿಕ್ಟ್ ಬೋರ್ಡು ಚುನಾವಣೆಯ ಕುರಿತು ಕೆಲ ಪ್ರಶ್ನೆಗಳನ್ನು ಕೇಳಿದರು ಡಾ! ರಟು ಪ್ರತ್ಯುತ್ತರವಾಗಿ ಎಲ್ಲವನ್ನೂ ತಿಳಿಸಿ ಹೇಳಿದರು ಕಡಗೆ ಪ್ರಶ್ನೆಗಳನ್ನು ಕಳಿದ ಮರೇಯರು ಪ್ರಸಿ ಎದು ಇಂತು ತಮ್ಮ ಅನುಮಾನಗಳು ಸಂಪೂರ್ಣ ಪರಿಹಾರವಾಯಿವೆಂತೆ ಲೂ, ಇದರಲ್ಲಿ ಕಾಂಗ್ರೆಸ್ಸಿನ ತಪ್ಪು ಯಾವುದೂ ಇಲ್ಲ ವೆಂದೂ ಒಪ್ಪಿಗೆಯಾಯಿತು ಅಧ್ಯಕ್ಷರ ಕೆಲವು ಮಾತುಗಳಾದ ಮೇಲೆ ಸಭೆಯು ಮುಕ್ತಾಯವಾಯಿತು

ಉಡುಪಿ

ಆಟಗಳೆ ಹಂದ್ಯ:—ಪಾಡಿಕಯಂತೆ ಪರ್ಯಾಯದ ಗುಕ್ಕೆ ಜರಗುವ ಪಂದ್ಯವು ಈ ವರ್ಷವೂ ಗಾಂಧೀ ಮೈದಾನದಲ್ಲಿ ಜರಗಿತ ತಾಲೂಕಿನ ಕೆಲವು ಶಾಲೆಗಳು ಭಾಗಿ ಮಹಿಳೆಯ ಎತ್ತರಕ್ಕೆ ಹಾಯಿಕೆ ಉಡಿ ಕೆ ಜಿಗಿಯುವುದು, ಓಟ ಮೊದಲಾದ ವಿವಿಧ ಭಾಗಗಳಲ್ಲಿ ಸ್ಪರ್ಧಾಯತ್ತು ಈ ಸ್ಪರ್ಧೆಯ ಜೂನಿಯರ್, ಮತ್ತು ಸೀನಿಯರ್ ಎರಡರಲ್ಲಿಯೂ ಕೂಡಾ ಮಾಧವ ಬೋರ್ಡಿಂಗ್ ಹೈಸ್ಕೂಲಿನವರು ವಿಜಯಗಳಿಸಿ ಕಪ್ಪನ್ನು ಪಡೆದಿರುವರು

THE BOMBAY LIFE ASSURANCE Co., LTD.

ESTD 1906

Church Gate Street, Fort - - BOMBAY

SPECIAL FEATURES.

1 Rebate on yearly payment of policies.
2 Rebate for larger assurances
3. Accident Risk covered on small extra premiums
4. Attractive Bonuses

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries

BRANCHES AT.

P B 337 Mount Road, Madras	Visveswarapuram Circle Bangalore City	Soumyalayam Pathiyara Calicut
Car Street, Mangalore	Udipi, S India	Chaira Road Bombay No 4

EVIDENCE OF SECURITY & STABILITY

FIGURES THAT SPAEK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00 000
Life Funds Over	Rs 68 00,000
Premium Income Over	Rs 22,54 000
Interest Income	Rs 3,16 000
Claims Paid ..	Rs 5,75 000
Total Claims paid Over	Rs 38,50,000
Total Business in Force Over	Rs 4,42,51,200

TOTAL BUSINESS IN FORCE Rs. 4,42,51,200

ಮಂಗಳೂರಿನ ಚಂದಾದಾರರಲ್ಲಿ

ನಮ್ಮ ಮಂಗಳೂರಿನ ಚಂದಾದಾರರು ತಮ್ಮ ಚಂದಾಹಣವನ್ನು ಅಜ್ಜಿಯೇ ಕೆನರಾ ಪ್ರೆಸ್‌ನಲ್ಲಿ ಕೊಟ್ಟು ರಸೀದಿ ಪಡಕೊಳ್ಳಬಹುದು

ಮೆನೇಜರ್, 'ನವಯುಗ'.

ನವಯುಗ

ಉಡುಪಿ, ತಾ. ೧೭-೧೨-'೩೬ ಗುರುವಾರ

ಬ್ರಿಟಿಷ್ ಸಾಮ್ರಾಜ್ಯದ ದುರ್ದೈವ.

ಎಂಟನೆಯ ಎಡ್ವರ್ಡರು ಇಂದಿನ ಕಾಲ ಗುಣಕ್ಕೆ ತಕ್ಕ ರಾಜರಾಗಿದ್ದರು. ಪ್ರಜಾ ಹಿತ, ದೀನ ದರಿದ್ರ ಜನಸೇವೆಯೇ ಅವರ ಅನುದಿನದ ಹಂಬಲಾಗಿದ್ದಿತು. ಅವರು ಕಟ್ಟುಕಟ್ಟಳೆಯ ಗೌರವ ಆಡಂಬರದ ಯಾಂತ್ರಿಕ ಮನಸ್ಸಿನ ರಾಜರಾಗಿರದೆ ಸ್ವತಂತ್ರ ವಿಚಾರ ಮತ್ತು ಆಚರಣೆಯ, ಯಾವ ಕೃತಕ ಆಡಂಬರವೂ ಇಲ್ಲದ ಸರಳಸ್ವಾಭಾವಿಕತನದ, ವಿಶೇಷವಾಗಿ ಮಾನವ ಅಂತಃಕರಣವುಳ್ಳ ಅರಸರಾಗಿ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳ ಹೃದಯವಲ್ಲಿ ಸನ್ಮಾನ್ಯ ಸ್ಥಾನಪಡೆದಿದ್ದರು. ಇತ್ತಲಾಗಿ ತಾನೆ ಅವರು ವೇಲ್ಸ್‌ದೇಶದ ದೀನದಲಿತಜನರ ಸಂಕಷ್ಟಗಳನ್ನು ಸ್ವತಃ ಕಂಡು ಬಹಳ ಕನಿಕರಗೊಂಡು, ಕೆಲಸಮಾಡಿಸಿ ಮನಸ್ಸುಳ್ಳ ವರಿಗೆಲ್ಲಾ ಕೆಲಸಕೊಡಲು ಏನಾದರೊಂದು ವ್ಯವಸ್ಥೆ ಮಾಡಬೇಕೆಂದು ಹೇಳಿದ್ದರು. ಲೋಕದ ಅತಿ ಪ್ರಬಲ ಸಾಮ್ರಾಜ್ಯದ ಚಕ್ರವರ್ತಿಗಳಾಗಿಯೂ ಇಷ್ಟೊಂದು ಮಾನವ ಭಾವನೆಗಳಿಂದ ಪ್ರೇರಿತರಾಗಿದ್ದ ರಾಜರು ಅತ್ಯಪೂರ್ವವೇ ಸರಿ. ತನ್ನದೇ ಆದ ವ್ಯಕ್ತಿತ್ವವನ್ನು ಕಾಪಾಡಿಕೊಂಡು, ತನಗೆ ತೋರಿದ ರೀತಿಯಲ್ಲಿ ಪ್ರಜಾಸೇವೆಮಾಡಲು ನಿರ್ಭಯ ಹಾಗೂ ನಿರ್ಭಿಡೆಯಿಂದ ಕೆಲಸಮಾಡುತ್ತಿದ್ದ ಎಡ್ವರ್ಡರ ಆಳ್ವಿಕೆಯು ಬ್ರಿಟಿಷ್ ಸಾಮ್ರಾಜ್ಯದ ಇತಿಹಾಸದಲ್ಲಿ ಹೊಸಯುಗವೊಂದನ್ನೇ ಆರಂಭಿಸದಿರಬೆಂಬ ಆಲೋಚನೆಯವುಂಟಾಗಿತ್ತು.

ಆದರೆ ವಿಧಿಯ ಲೀಲೆಯು ಅಗಾಧವಾದುದು. ತನ್ನ ಅಂತರಾಳದಲ್ಲಿ ಎಂತಹ ವೈಚಿತ್ರ್ಯವನ್ನೆಲ್ಲಾ ಹುದುಗಿಸಿಟ್ಟುಕೊಂಡು ಸಂದರ್ಭಾನುಸಾರ ಫಕ್ಕನೆ ಹೊರಗೆಸೆದು ಮಾನವ ಯೋಜನೆ ಹಂಚಿಕೆಗಳನ್ನೆಲ್ಲಾ ಗಾಳಿಗೋಪುರವಾಗಿ ಮಾಡಿಬಿಡುವುದು. ವಿನೆಸ್ ಸಿಮ್ಸನ್‌ಳ ಪ್ರಣಯಬಂಧ, ಆದಕ್ಕಾಗಿ ಎಡ್ವರ್ಡರ ಸಿಂಹಾಸನ ತ್ಯಾಗ, ತತ್‌ಕ್ಷಣ ಆರನೇ ಜೋರ್ಜರ ಸಿಂಹಾಸನಾರೋಹಣ ಇವೆಲ್ಲಾ ಮಿಂಚಿನಂತೆ ಚಮಕಿತವಾಗಿ ಲೋಕನಸ್ಸೇ ವಿಸ್ಮಯಗೊಳಿಸಿರುವು. ಕಳೆದ ೨೬ ವರ್ಷಗಳಿಂದ ಯಾವ ಸಾಮ್ರಾಜ್ಯದ ಹಿತಸಾಧನೆಯು ಎಡ್ವರ್ಡರ ಅನುದಿನದ ಚಿಂತನೆಯಾಗಿದ್ದಿತೋ, ಯಾವ ಸಾಮ್ರಾಜ್ಯದನಕ್ಕಾಗಿ ಅವರು ಬಾಲ್ಯಾರಭ್ಯ ಅವಿರತವಾಗಿ ತರಬೇತಿ ಹೊಂದುತ್ತಿದ್ದರೋ, ಯಾವ ಪ್ರಜಾನುರಾಗವು ಅವರ ಹೃದಯದಲ್ಲಿ ಬೇರೂರಿ ಶರೀರದೊಂದಿಗೆ ಸೇರಿಹೋಗಿದ್ದಿತೋ ಅದನ್ನೆಲ್ಲಾ ಒಂದು ಕ್ಷಣದಲ್ಲಿ ಕಡಿದೊಗೆದು, ಆಂದರೆ ತನ್ನ ಅಂದಿನ ವರೆಗಿನ ಜೀವನ ವೈಕ್ಷವನ್ನೇ ಅಮೂಲಾಗ್ರವಾಗಿ ಕಿತ್ತುಹಾಕಿ, ಒಂದಿನ್ನು ಬೇಸಬೇಸರವಿಲ್ಲದೆ ಇತರರ ಮನಸ್ಸನ್ನೊಂದಿಸುವ ನೋಯಿಸದೆ ತನ್ನ ಲೋಕವ್ಯಾಪಿ ಸಾಮ್ರಾಜ್ಯದ ಪ್ರಜೆಗಳ ಹೃದಯವನ್ನು ಕರಗಿಸಿ, ಇಡೀ ಲೋಕದ ಸಹಾನುಭೂತಿ ಪಡೆದು, ಪ್ರಣಯಕ್ಕಾಗಿ ಯಾವ ಸಿರ್ಬಂಧವೂ ಇಲ್ಲದೆ ಸ್ವೇಚ್ಛೆಯಿಂದ ಲೋಕದ ಇತಿಹಾಸದಲ್ಲೇ ಅಪ್ರತಿಮವಾದ ಅತಿ ಪ ಹತ್ತಾದ ತ್ಯಾಗ ಮಾಡಿರುವ ಸಂಗತಿಯು ಮಾನವಾತೀತ ವಾದುದೆಂದರೂ ಅತಿಶಯೋಕ್ತಿಯಾಗದು. ಆಂತೆಯೇ ಪ್ರಜೆಗಳಲ್ಲರ ಹೃದಯ ಮೂರ್ತಿಯಾಗಿ ಪ್ರತಿಷ್ಠಿತರಾದ ಪ್ರಭುವನ್ನ ಇಡೀ ಸಾಮ್ರಾಜ್ಯದ ಭದ್ರತೆ ಮತ್ತು ಗೌರವ ರಕ್ಷಣೆಗಾಗಿ ಯಾವ ವಿಪ್ಲವ ಕೋಲಾಹಲವೂ ಇಲ್ಲದೆ ತೆಗೆದು ಹಾಕಿ ಅವರ ಸ್ಥಾನದಲ್ಲಿ ಮತ್ತೋರ್ವ ವ್ಯಕ್ತಿಯನ್ನು ಪ್ರತಿಷ್ಠಿಸಿರುವ ಬ್ರಿಟಿಷ್ ಪಾರ್ಲಿಮೆಂಟಿನ ಔಚಿತ್ಯ, ಸ್ಥೈರ್ಯ ಮತ್ತು ವಿವೇಕವು ಇಡೀ ಲೋಕದ ಮೆಚ್ಚಿಗೆಗೆ ಪಾತ್ರವಾಗಿರುವುದು.

ಬ್ರಿಟಿಷ್ ಪ್ರಭುವಿಗೆ ಪ್ರಜೆಗಳ ಹೊರತು ದೋರೊಂದು ಇಚ್ಛೆಯಿರಲಿಲ್ಲ. ಪ್ರಜೇಚ್ಛೆಯೇ ಪ್ರಭುವಿನ ಇಚ್ಛೆಯೆಂಬುದು ಸಿದ್ಧವಾಗಿರುವುದು. ಲೋಕದಲ್ಲೆಲ್ಲಾ ಅತ್ಯಂತ ಪುರಾತನ ಹಾಗೂ ಸುದೃಢವಾದ ಇಂಗ್ಲೆಂಡಿನ ಸತ್ಪೆಯ ಪ್ರಭಾವವು ಇಂದೀಗ ಸುವ್ಯಕ್ತವಾಗಿರುವುದು.

ಎಡ್ವರ್ಡ್ ರಾಜರ ಸಿಂಹಾಸನ ತ್ಯಾಗವು ಇಡೀ ಸಾಮ್ರಾಜ್ಯದ ದುರ್ದೈವವಾಗಿರುವುದು. ಯಾಕಂದರೆ ಎಡ್ವರ್ಡರು ಪ್ರಜೆಗಳ ಅಪೇಕ್ಷೆ, ಮತ್ತು ಆಕಾಂಕ್ಷೆಗಳನ್ನು ಮನ್ನಿಸುವ ಉದಾರ ಮನೋವೃತ್ತಿಯ ರಾಜರೆಂದಿದ್ದರು. ಬ್ರಿಟಿಷ್ ಸಾಮ್ರಾಜ್ಯದ ಅಧೀನ ರಾಜ್ಯಗಳ ಕುರಿತು ಕೂಡಾ ಅತ್ಯಂತ ಸಹಾನುಭೂತಿಯುಳ್ಳವರಿದ್ದರು. ಹಿಂದು ದೇಶದಲ್ಲಿ ಅವರ ಕಿರೀಟ ಧಾರಣೋತ್ಸವವು ಹೊಸ ಯುಗವೊಂದನ್ನೇ ಆರಂಭಿಸುವಂತಹದಾಗುವ ದೆಂಬ ಅಕೋದಯವುಂಟಾಗಿದ್ದಿತು. ಇಡೀ ಸಾಮ್ರಾಜ್ಯವೇ ಅವಿಭಕ್ತಶರೀರ, ಅದರ ಪ್ರತಿಯೊಂದು ಭಾಗವೂ ಆ ಶರೀರದ ಪ್ರಾಮುಖ್ಯವಾದೊಂದು ಅಂಗವೆಂಬ ಆ ವ್ಯಾಪಕ ಭಾವನೆಯು ಎಡ್ವರ್ಡರಲ್ಲಿ ನೆಲೆಗೊಂಡಿದ್ದಿತು.

ವಿಶೇಷವಾಗಿ ಅವರು ದೀನ ದರಿದ್ರ ನಿರುದ್ಯೋಗಪೀಡಿತ ಜನರ ದೊಡ್ಡ ಆಶಯದಂತಿದ್ದರು. ತನ್ನೀ ರಾಜ್ಯವಲ್ಲಿ ದುಃಖ ಸಂಕಷ್ಟವೆಂಬುದಿರಬಾರದು; ಜನರೆಲ್ಲಾ ಸುಖಸಂತೋಷದಿಂದಿರಬೇಕು, ಸರ್ವರಿಗೂ ಸರಿಯಾದ ಉದ್ಯೋಗಾನುಕೂಲತೆಗಳು ದೊರೆಯಬೇಕೆಂಬುದೇ ಎಡ್ವರ್ಡರ ಪ್ರಬಲ ಇಚ್ಛೆಯಾಗಿದ್ದಿತು. ಅದರಂತೆ ಅವರು ತ್ರಿಕರಣಶುದ್ಧವಾಗಿ ಆಚರಿಸುತ್ತಿದ್ದರು. ಈಗ ಎಡ್ವರ್ಡರ ನಂತರ ಪಟ್ಟಕ್ಕೆ ಬಂದಿರುವ ಅವರ ತಮ್ಮ ಆರನೇ ಜೋರ್ಜರು ತನ್ನ ಅಣ್ಣನ ಹೆಜ್ಜೆಯನ್ನೇ ಅನುಸರಿಸಿ, ಅವರ ಮನೋವೃತ್ತಿ ಮತ್ತು ಧೋರಣೆಯನ್ನೇ ಮೆರೆಸಿ, ಪ್ರಜಾನುರಾಗ ಪಡೆದು ಚಿರಕಾಲರಾಜ್ಯ ವಾಳಿ ಕೀರ್ತಿ ಸಡೆಯಲೆಂದೇ ನಮ್ಮ ಹಾರೈಕೆ.

ದೇಶ--ವಿದೇಶ

ಚೀನದ ಸೇನೆಯ ಬಂಡಾಯ

ಚೀನದ ಉತ್ತರದ ಶಾನ್ಸಿ ಪ್ರಾಂತದ ಪ್ರಧಾನ ಪಟ್ಟಣವಾದ ಸಿಯಂಫು ಎಂಬಲ್ಲಿರುವ ಚೀನೀ ಸೈನಿಕರು, ಚೀನೀ ರಾಷ್ಟ್ರೀಯ ಸರಕಾರದ ಪ್ರಧಾನ ಮಂತ್ರಿಗಳೂ ಸೇನಾಧ್ಯಕ್ಷರೂ ಆದ ಮಾರ್ಷಲ್ ಚ್ಯಾಂಗ್ ಕೈ ಶೆಕ್ಕರ ವಿರೋಧವಾಗಿ ಬಂಡಾಯವೆದ್ದು ಅವರನ್ನು ತಡೆದಿಟ್ಟಿರುವರೆಂದು ಸುದ್ದಿ ಬಂದಿದೆ. ಈ ಸೈನಿಕರು ಜಪಾನಿಗೆ ಬದ್ಧ ವಿರೋಧಿಗಳೆನ್ನಲ್ಪ. ಉತ್ತರದ ಕಮ್ಯೂನಿಸ್ಟರೊಂದಿಗೆ ಸಹಾನುಭೂತಿಯುಳ್ಳವರು ವರೆಂದು ಮಾರ್ಷಲ್ ಚ್ಯಾಂಗರು ಆಪ್ತರಿಂದ ಅವರನ್ನು ಪುಸಿಯೆನ್ ಎಂಬಲ್ಲಿಗೆ ಹೋಗಲು ಹುಕುಮು ಕೊಟ್ಟರು. ಆದರೆ ಅವರದನ್ನು ಉಲ್ಲಂಘಿಸಿ ಚ್ಯಾರಿಗ್ ಸುವೆನ್ ಕೆಯಾಂಗ್ ಎಂಬ ಸೇನಾನಾಯಕರ ನುಂದಾಳುತ್ವದಲ್ಲಿ ಮಾರ್ಷಲ್ ಚ್ಯಾಂಗರನ್ನೇ ಕರ್ಬಂಧದಲ್ಲಿರಿಸಿರುವರು. ಚ್ಯಾಂಗರು ಸುರಕ್ಷಿತವಾಗಿರುವರೆಂದು ತಿಳಿದು ಬರುತ್ತದೆ. ಚೀನವು ಕೂಡಲೆ ಜಪಾನಿನೊಡನೆ ಯುದ್ಧ ಆರಂಭಿಸಬೇಕು. ಉತ್ತರದ ಕಮ್ಯೂನಿಸ್ಟರನುಅಂಗೀಕರಿಸಬೇಕು. ರಸ್ಯದೊಡನೆ ಒಪ್ಪಂದ ಮಾಡಿಕೊಳ್ಳ ಬೇಕೆಂಬೇ ಈ ಸೈನಿಕರ ಕೋಳಿಕೆಯಾಗಿದೆ. ಚೀನದ ರಾಷ್ಟ್ರೀಯ ಸರಕಾರದವರು ಸೋದಲು ಮಾರ್ಷಲ್ ಚ್ಯಾಂಗರನ್ನು ಬಿಟ್ಟುಬಿಡಬೇಕು. ಆ ಮೇಲೆ ಬಂದಾಯಗಾರರ ಕೋಳಿಕೆಗಳನ್ನು ಆಲೋಚಿಸಬಹುದೆಂದು ತಿಳಿಸಿರುವರು. ಸಿಯಂಫುನಿನ್ನಲ್ಲಿ ಬಂದಾಯಗಾರ ಮತ್ತು ವಿಧೇಯ ಸೈನಿಕರೊಳಗೆ ಕದನ ನಡೆದಿರುವುದಂತೆ. ಬಂಡಾಯಗಾರರ ಕಡೆಯಲ್ಲಿ ಸುಮಾರು ೭ ಲಕ್ಷ ಸೇನೆಯಿರುವುದೆಂದು ತಿಳಿದುಬರುತ್ತದೆ

ಕ್ವೆಟ್ಟದಲ್ಲಿ ಪುನಹ ಭೂಕಂಪ

ಕ್ವೆಟ್ಟದಲ್ಲಿ ಕಳೆದ ವರ್ಷ ಮೇ ತಿಂಗಳ ತಾ ೩೧ ರಲ್ಲಿ ಘೋರ ಭೂಕಂಪವಾಗಿ ದೊಡ್ಡ ಅನಾಹುತ ವಾಗಿರುವದಲ್ಲೆ. ಈಗ ಆದಾಗಿ ೧೯ ತಿಂಗಳ ನಂತರ ಇದೇ ತಾ ೧೫ನೇ ಬೆಳಿಗ್ಗೆ ಪುನಹ ಒಂದರ ಹಿಂದೊಂದು ಎರಡು ಸಲ ಸಾಕಷ್ಟು ತೀವ್ರ ಕಂಪಪೂರ್ಣವಾಯಿತು ಭೂಕಂಪದ ಮೊದಲು ಗರಗಸ ರಬ್ಬವುಂಟಾಗಿದ್ದಿತು ಮಾಹಿತಿಗಳು ಆಗಿರುವುದಿಲ್ಲ!

ರಾಮ್ಮಾಡಿನಲ್ಲಿ 100 ಮಂದಿ ಸ್ವಯಂಸೇವಕರ ದಸ್ತಗಿರಿ

ರಾಮ್ಮಾಡ್ ಜಲ್ಲೆಯ ಪಲ್ಲತ್ತೂರು ಎಂಬಲ್ಲಿ ಇಂದೇ ತಾ ೧೫ನೇ ರಾತ್ರಿ ರಾಮ್ಮಾಡ್ ಜಲ್ಲಾ ಮೋರ್ಚ ಚುನಾವಣೆಯ ಸಂಬಂಧವಾಗಿ ಕಾಂಗ್ರೆಸ್ ಪರವಾದ ಸಭೆ ನಡೆಯುವಾಗ ಒಬ್ಬನು ಚನರ ನಮನೆ ನೇಸೇ ಮೋಟಾರುಕಾರು ತಂದು ಸ್ವಲ್ಪ ಗಲಾಟೆಯಾಗಿದ್ದಿತು! ಇದೇ ತಾ ೧೫ರಿಂದಲ್ಲಿ ಸುಮಾರು ನೂರು ಮಂದಿ ಕಾಂಗ್ರೆಸ್ ಸ್ವಯಂಸೇವಕರು ದಸ್ತಗಿಹಿದ ಕೊಂಡು ಪಲ್ಲತ್ತೂರಿಗೆ ಮಾರ್ಚ್ ಮಾಡುವಾಗ ಕೈದುಮಾಡಲ್ಪಟ್ಟಿರುವರು' ಇವರನ್ನು ಕರ್ಪೆ ಕುಡಿ ಪೋಲೀಸ್ ಸ್ಟೇಶನಿಗೆ ತಂದು ಲೋಕ್‌ಅಪ್ಪಿನಲ್ಲಿ ಇಡಲಾಗಿದೆ'

80 ಟಪ್ಪಾಲುಚೀಲಗಳು ಸುಟ್ಟುಹೋದುವು

ಇದೇ ತಾ ೧೫ರಲ್ಲು ಬೊಂಬಾಯಿ ಕಲ್ಯತ್ತ ಮೈಲು ಟ್ರೈನಿನ ಟಪ್ಪಾಲು ಬಂಡಿಗೆ ಚಾರ್ಕೆರಾ ಎಂಬಲ್ಲಿ ಬೆಂಕಿ ಹಿಡಿದು ೮೦ ಟಪ್ಪಾಲು ಚೀಲಗಳು ಸುಟ್ಟು ಹೋಗಿರುವವು. ಇದರಲ್ಲಿ ಪರದೇಶಗಳ ಟಪ್ಪಾಲೂ ಇದ್ದಿತು. ಈ ಬೆಂಕಿಯ ಕಾರಣವೇನೆಂದು ತಿಳಿದಿಲ್ಲ. ಪೋಲೀಸರು ಈ ಕುರಿತು ಪತ್ತೆ ನಡಿಸುತ್ತಿರುವರು ಸುಮಾರು ರೂ. ಒಂದು ಕೋಟಿಯಷ್ಟು ನಷ್ಟವಾಗಿ ಬಹುದೆಂದು ನಂಬಲಾಗಿದೆ.

ಗುಂಟೂರಿನಲ್ಲಿ ಬಿರುಗಾಳಿ ಹಾವಳಿ

ಯಿಂದ ಒಟ್ಟು ರೂ. ೧ ಕೋಟಿ ನಷ್ಟವಾಗಿರಬಹುದೆಂದು ಅಂದಾಜು ಮಾಡಲಾಗಿದೆ. ಬಿದ್ದು ಹೋದ ಹುಲ್ಲು ಜಾವನಿಯ ಮನೆಗಳಲ್ಲಿ ಹಾಗೆಯೇ ಇನ್ನು ಒಟ್ಟು ೧೯ ಸಾವಿರಗಳಲ್ಲಿ ೬೩೭ ಮನೆಗಳು ಬಿದ್ದು ಹೋಗಿವೆ ಇವುಗಳನ್ನು ಸರಿಮಾಡಲು ಇಲ್ಲವೆ ಪುನಹ ಕಟ್ಟಲು ರೂ. ೨,೭೭,೭೫೬ ಬೇಕಾಗಿವೆ ಸುಮಾರು ರೂ. ೬೫,೬೭೦ರಷ್ಟರ ಬೆಳೆ ನಾಶವಾಗಿದ.

ಈಗ ಬಂದ ವಾರ್ತೆ

ಸ್ಪೈನಿನ ಅಂತಃಕಲಹ

ಸ್ಪೈನಿನ ಅಂತಃಕಲಹವು ಯಥಾಪ್ರಕಾರ ನಡೆಯುತ್ತಿರುವುದು. ನೇದ್ರಿದನ್ನು ಗೆಲ್ಲಲು ಬಂಡಾಯಗಾರರು, ಜರ್ಮನಿಯ ಸೇನೆಯ ಸಹಾಯದಿಂದ ಪ್ರಚಂಡ ಪ್ರಯತ್ನ ಮಾಡಲಿರುವರು. ಇದಕ್ಕೆ ಸರಕಾರದ ಕಡೆಯವರೂ ರಸ್ಯದ ಸಹಾಯದಿಂದ ತಕ್ಕ ಸಿದ್ಧತೆ ನಡಿಸುತ್ತಿರುವರು. ಸ್ಪೈನಿನ ಯುದ್ಧವು ಆಂತರರಾಷ್ಟ್ರೀಯ ಹೋರಾಟವಾಗಿ ಪರಿಣಮಿಸದಂತೆ ಅದನ್ನು ಮಧ್ಯಸ್ತಿಕೆಯಿಂದ ಇತ್ಯರ್ಥ ಪಡಿಸಬೇಕೆಂದು ಇಂಗ್ಲೆಂಡು ಮತ್ತು ಫ್ರಾನ್ಸ್‌ಗಳು ಸೂಚಿಸಿರುವವಷ್ಟೆ. ಇದಕ್ಕೆ ಇಟಲಿ ಮತ್ತು ಪೋರ್ಚುಗಿಸ್ ಸರಕಾರಗಳು ಒಪ್ಪಿರುವುದಿಲ್ಲ. ಜರ್ಮನಿ ರಸ್ಯ ಮೊದಲಾದ ರಾಷ್ಟ್ರಗಳು ಒಪ್ಪಿಗೆ ಸೂಚಿಸಿರುವವು.

ಎಡ್ವರ್ಡರು

ಇದೇ ೧೫ರಲ್ಲು ಗುಪ್ತವಾಗಿ ವಿಯನ್ನಕ್ಕೆ ಹೋಗಿರುವರು. ಅವರು ಫ್ರಾನ್ಸ್ ಮತ್ತು ಸ್ವಿಟ್ಸರ್‌ಲಂಡಿನಲ್ಲಿ ಸಂಚರಿಸುವಾಗ ಪೋಲೀಸ್ ಪಹರೆಯಿದ್ದಿತು. ಎಡ್ವರ್ಡರು ವಿಯೆನ್ನಾದಲ್ಲಿ ಬೇರನ್ ರೋತ್ಸ್‌ಚೈಲ್ಡ್ ಎಂಬವರ ಭವ್ಯ ನಿವಾಸದಲ್ಲಿ ವಾಸಿಸಲಿರುವರು. ಎಷ್ಟು ಕಾಲದವರೆಗೆ ಇಲ್ಲಿರಲಿರುವರೆಂಬುದು ತಿಳಿದಿಲ್ಲ. ವಿನೆಸ ಸಿಮ್ಸನಳ ವಿವಾಹ ವಿಚ್ಛೇದದ ಕುರಿತು ಆಕ್ಷೇಪವುಂಟಾಗಿರುವುದೆಂದು ತಿಳಿದುಬರುತ್ತದೆ.

ಫೈಜಪುರ ಕಾಂಗ್ರೆಸ್

ಸಿದ್ಧತೆಯೆಲ್ಲಾ ಸಂಪೂರ್ಣವಾಗಿರುವುದು ಇದೇ ತಾ ೭೦ಕ್ಕೆ ಗಾಂಧಿಯವರು ಆಲ್ಲಿಗೆ ಹೋಗಲಿರುವರು ತಾ ೨೨ಕ್ಕೆ ಪಂಡಿತ ಜವಾಹರಲಾಲರು ಹೋಗುವರು ಪಂಡಿತರನ್ನು ಸ್ಟೇಟು ಸ್ಪೇಶನ್ನಲ್ಲಿ ಎದುರ್ಗೊಂಡು ೫ ಮೈಲುಗಳ ವರೆಗೆ ಮೆರವಣಿಗೆ ನಡಿಸಲಾಗುವುದು ಸ್ವೀಕೃತಿ ಕರಿಗೂ ಪ್ರತಿನಿಧಿಗಳಿಗೂ ಊಳಿಗೊಳ್ಳಲು ಮತ್ತು ಊಟದ ವ್ಯವಸ್ಥೆಯು ಚೆನ್ನಾಗಿ ನಡೆದಿರುವುದು

ಕೆರೆಕುಡಿಯಲ್ಲಿ ಲಾತಿ ಚಾರ್ಜು

ರಾಮ್ಮಾಡಿನ ಕೆರೆಕುಡಿಯೆಂಬಲ್ಲಿ ೧೦೦ ಮಂದಿ ಕಾಂಗ್ರೆಸ್ ಸ್ವಯಂ ಸೇವಕರು ಕೈದು ಮಾಡಲ್ಪಟ್ಟಿರುವರಷ್ಟೆ. ಇದರಿಂದಾಗಿ ಕರೆಕುಡಿ ಪೋಲೀಸ್ ಸ್ಟೇಶನಿನ ಬಳಿ ಇದೇ ತಾ ೭ರಲ್ಲು ಜನರು ಸೇರಿದಸ್ತಗಿರಿಯ ವಿರೋಧ ಪ್ರದರ್ಶನ ಮಾಡಲು ಪೋಲೀಸರು ಲಾತಿ ಪ್ರಯೋಗ ಮಾಡಿ ಜನರನ್ನು ಚೆದರಿಸಿರುವರೆಂದೂ, ೧೫ ಮಂದಿಯ ವರೆಗೆ ಗಾಯಗೊಂಡಿರುವರೆಂದೂ, ಇಬ್ಬರಿಗೆ ಬಹಳ ಪೆಟ್ಟುಗಿರುವುದೆಂದೂ ತಿಳಿದು ಬರುತ್ತದೆ.

ಚೀನದಲ್ಲಿ ಸೈನಿಕರ ಬಂಡಾಯ

ಉತ್ತರ ಚೀನದ ಸಿಯಂಫು ಎಂಬಲ್ಲಿ ಜಾಂಗ್ ಸುಯೆಲ್ಲಾಂಗ್ ಎಂಬ ಚೀನೀ ಸರಕಾರದ ಸೇನಾನಾಯಕರು, ಮಾರ್ಷಲ್ ಚ್ಯಾಂಗರನ್ನು ಮಾತ್ರವಲ್ಲದೆ ಸರಕಾರದ ಇತರ ಕೆಲ ಮಂದಿ ಮುಖಂಡರನ್ನೂ ನಿರ್ಬಂಧದಲ್ಲಿರಿಸಿರುವರು. ಈ ಸಂಬಂಧವಾಗಿ ಚೀನದ ಮುಖ್ಯ ಮುಖ್ಯ ಪಟ್ಟಣಗಳೆಲ್ಲೆಲ್ಲಾ ಮಾರ್ಷಲ್ ಚ್ಯಾಂಗ್ ಮಾಡಲಾಗಿದೆ. ಚೀನೀ ಸರಕಾರವು ಸೇನಾನಾಯಕ ಜಾರಿಗೆಲ್ಲಾಂಗರನ್ನು ಸೇನಾನಾಯಕತ್ವದಿಂದ ತೆಗೆದು ಹಾಕಿರುತ್ತದೆ.

ಮಂಗಳೂರು.

ಇವ್ಲಿಯ ಎಸ್ ಆರ್. ಎಸ್ ಹೋಮಿನಲ್ಲಿ ತಾ. ೧೦—೧೨—೩೬ರಲ್ಲಿ ಒಂದು ಸಮಾಜ ಕೂಟವು. ಮಂಗಳೂರಿನ ಸಬ್ ಜಡ್ಜರಾದ ಶ್ರೀ ನಾರಾಯಣ ಮೆನೋನರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬೈಲೂರು ಸದಾನಂದ ಹೆಗ್ಡೆ ಬಿ ಎ ಬಿ. ಎಲ್‌ರವರು ಆಭ್ಯುದಯ ಸೂಚನೆ ಮಾಡುತ್ತಾ ತರುಣರೆಲ್ಲರೂ ರಾಷ್ಟ್ರೀಯ ಮನೋವೃತ್ತಿಯವರಾಗ ಬೇಕೆಂದು ವಿವರಿಸಿದರು. ನಾನಾಕಾಲಿ ವಿನೋದಗಳು ನಡೆದು ಸಭಾಂತ್ಯವಾಯಿತು.

ದಿವಂಗತ ಶ್ರೀ. ನರಸಿಂಹಾಚಾರ್ಯರು

ರಾವ್ ಬಹದೂರ್ ಆರ್. ನರಸಿಂಹಾಚಾರ್ಯರು ದಿವಂಗತರಾದುದು ಕರ್ನಾಟಕಕ್ಕೊಂದು ದೊಡ್ಡ ಫಕ್ಕೆಯೇ ಸರಿ ಶ್ರೇಯುತರು ಕವಿಚರಿತ್ರೆ, ಸೀತಾ ಮಂಜರಿ ಮೊದಲಾದ ಪಲವು ಪ್ರಸ್ತಕಗಳನ್ನು ಬರೆದಿದ್ದರಲ್ಲದೆ, ಕವಿಗಳೂ ಆಗಿದ್ದರು. ಕನ್ನಡನಾಡಿನ ಉತ್ಕೃಷ್ಟ ಪ್ರಾಕ್ತನ ಸಂಶೋಧಕರಾಗಿದ್ದು ಹೆಚ್ಚಿನ ತೀರ್ಥಗಳಿಸಿದ್ದರು ಶ್ರೇಯುತರ ನಧನದಿಂದ ಕರ್ನಾಟಕಕ್ಕೆ ಮಹತ್ತಾದ ಹಾನಿಯೊದಗಿತೆಂದು ಬೇರೆ ಬೇಳಬೇಕಾಗಿಲ್ಲ.

ಉಡುಪಿ

ಮುಂದರಿಸಿದ್ದು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಇದರ ಶಾಖೆಯೊಂದು ನಿನ್ನೆ (೧೬-೧೦-೩೬) **ತಾಡಪತ್ರಿ** (ಆನಂತಪುರ ಜಿಲ್ಲೆ) ಯಲ್ಲಿ ತೆರೆಯಲ್ಪಟ್ಟಿತು. ಬೆಳಿಗ್ಗೆ ಸುಮೂರ್ತದಲ್ಲಿ ಉದ್ಘಾಟನೆ ನಮೋ ಂಭವೊ ಸಂಗಡಲೇ ಪನಲಕ್ಕೆ ಪೂಜೆಯೂ ನಡೆದು, ತಾಂಬೂಲ ಚವ ಕಾದಿ ಸಾಮಾನ್ಯ ಸತ್ಕಾರ ಗಳು ನೆರೆದವರಿಗಾದುವು ಈ ರೀತಿಯಿಂದ ತುಂಬಾ ವ್ಯವಹಾರವು ಸಿರಿಕ್ಕಿತೆಂತಾಗಿದೆ.

ವಿಜಯ ನಗರ ಸ್ಮಾರಕೋತ್ಸವದ ನಲುವಾಗಿ ಕೀರ್ತನಕೇಸರಿ ಶ್ರೀ. ಬಿ ವಿಠಲರಾಮ ರಾಜ್ಯಗಳು ಇಲ್ಲಿಯ ವಿಜಯ ನಗರ ಸಮಿತಿಯ ಆಶ್ರಯದಲ್ಲಿ ತಾ. ೧೬ರಲ್ಲಿ ಭಾಷಣವಿತ್ತರು ರಾತ್ರಿ ಪರಿಕಥೆಯೂ ಇತ್ತು.

ಶ್ರೀ ಎ. ಬಿ. ಶೆಟ್ಟಿ ಭಾಷಣ.

ಕುಂಬಾಸುರ ಡಿವಿಜನಿನ ಕೊಂಗ್ರೆಸ್ ಉಮೇದ್ವಾರಿಯಾದಶ್ರೀ ಎ. ಬಿ ಶೆಟ್ಟಿ ಎಮ್ ಎಲ್, ಸಿ.ಯವರು "ಬರುವ ಸುಧಾರಣೆಗಳು" ಎಂಬ ವಿಷಯವಾಗಿ ನಿನ್ನೆ ಸಂಜೆ ೫½ ಗಂಟೆಗೆ (೧೪-೧೨-೩೬ ಬುಧವಾರ) ಶ್ರೀ ರಾಮಕೃಷ್ಣ ಧಿಯೇಟರಿನಲ್ಲಿ ಭಾಷಣಮಾಡಿದರು ವಕೀಲ್ ಶ್ರೀ ಎಮ್ ನಿಡ್ಲ ಕಾಮತರು ಅಧ್ಯಕ್ಷರಾಗಿದ್ದರು

ಮಾನ ನಷ್ಟ ದಾವೆಯ ತೀರ್ಮಾನ:— ಚಿತ್ರ ದುರ್ಗದ ನೇಶನಲ್ ಕೆಸ್ಟೋರೆಂಟಿನ ಶ್ರೀ. ಕೆ ನಾರಾಯಣಪ್ಪನವರೂ, ಆವರ ಕುಟುಂಬದವರೂ ಬ್ರಾಹ್ಮಣರಲ್ಲವೆಂದು ಇಲ್ಲಿಯ ಪಾಜಾವರ ಮಠಾಧೀಶ ಶ್ರೀ. ವಿಶ್ವಮಾನ್ಯತೀರ್ಥ ಶ್ರೀಪಾದಂಗಳವರು ತಿಳಿಸಿದಂತೆ ಶ್ರೀ ಶ್ರೀಸಮಸರಸ್ವತಿಯವರು ಪ್ರಸಿದ್ಧ ಮಾಡಿದ ಹಿಂದು ಇವರಿಬ್ಬರ ಮೇಲೂ, ಮೇಲಿನವರು ಮಾನ ನಷ್ಟ ದಾವೆ ಹೂಡಿದ್ದು, ಮೆಜಸ್ಟೇಟ್ ಕೋರ್ಟಿನಲ್ಲಿ ಶ್ರೀಪಾದಂಗಳವರಿಗೂ ರೂ ೨೦೦ ಜುಲ್ಮಾನೆಯಾಗಿ ತೆತ್ತಬೇ. ಆ ಕುರಿತು ನಡೆದ ಅಪೀಲಿನಲ್ಲಿ ಶ್ರೀಪಾದಂಗಳವರು ನಿರಪರಾಧಿಗಳೆಂದು ತೀರ್ಮಾನವಾಗಿರುವುದು. ಎದುರೇ ಆವಾಜಿತರಾದ ಶ್ರೀ ಶ್ರೀಸಮಸರಾಯರ ಪಕ್ಷಕ್ಕೆ ಬಾಲ್ಯ ಮಾತ್ರ ಕಾರಣವಾಗಿದ್ದ ವೆಂದು ಪ್ರಕಟವಾಗಿದೆ.

ಹರಿಜನ ಉನ್ನೋದ್ಧಾರರು:— ಮದ್ರಾಸ ಲೆಜಿಸ್ಲೇಟಿವ್ ಎಸೆಂಬ್ಲಿ ಮಿನೋದ್ಧಾರಕಾರಿ ಕಾರಿದಾದ ದಿವಿಸಿನಲ್ಲಿ ಹರಿಜನ ಗೃಹಸ್ಥರಾದ ಶ್ರೀಗಳಾದಕೆ ಈಶ್ವರ (ಕೋಂಗ್ರೆಸ್) ಗೋಪಾಲ ನಾಯರನ್ನು (ಸ್ವತಂತ್ರ ಸಾರ್ವ) ಬಿ ಬಾಬು (ಜಸ್ಟಿಸ್) ಈ ಮೂವರು ಸದಸ್ಯರು. ಇವರ ಸೋಮಿಸರಿನ್ ಅರ್ಜಿಗಳು ಕಳೆದ ತಾ. ೮ರಲ್ಲಿ ಕುಂಪಾಪುರ ಸೆಶೆಲಕ್ಟರರ ಮುಂದೆ ಧಾವಿಲಾಗಿದ್ದು ತಾ. ೧೦ರಲ್ಲಿ ವಿಚಾರಣೆ ನಡೆದು ಆಂಗೀಕರಿಸಲ್ಪಟ್ಟಿರುವುದು ಉಡುಪಿ ಮುನ್ಸಿಪಲ್ ಕೌನ್ಸಿಲರುಗಳಾದ ಶ್ರೀಯುತ ಕಸುಬ್ಬಯ್ಯನವರು ಸ್ವತಂತ್ರ ವಕ್ಷದ ಉಮೇದಾರಿಯಾಗಿ ಸ್ಪರ್ಧಿಸಿದ ದಿವಿಜನಿನ ಜನರಲ ಸೀಟಿಗೆ ನಿನ್ನ ಲರುವರೆಂದು ತಿಳಿದುಬಂದಿದೆ

ದಿವಂಗತ ಶ್ರೀ. ಕಂದಕ ಈಶ್ವರನವರು

ಅತ್ಯಂತ ಸರಳ ಮತ್ತು ಶಾಂತ ಸ್ವಭಾವಗಳೂ ಉತ್ಸಾಹೀ ತರುಣರೂ ಆದ ಶ್ರೀ ಕಂದಕ ಈಶ್ವರನವರು ನಿನ್ನೆ ತಾ. ೫-೧೨-೩೬ ರಲ್ಲಿ ಸುದ್ದಾಸಿನಲ್ಲಿ ದಿವಂಗತರಾದುದು ಕೇಳಿಬಂಯಬಹೆ. ಕನ್ನಡ ಪತ್ರಿಕೆಗಳಲ್ಲಿ ಈ ತರುಣರ ಲೇಖನ, ಕವ, ಕವಿತೆ ಮುಂತಾವು ಆಗಾಗ ಪ್ರಕಟವಾಗುತ್ತಿದ್ದವು, ಆವುಗಳಲ್ಲಿ ಇನ್ನೂ ಸುಧಾರಿಸಿಲ್ಲದಿವಿ ಲಕ್ಷಣಗಳನ್ನು ತೋರಿಸುತ್ತಿದ್ದವು ತ್ಯಾಗ ಶೀಲ, ನಿರ್ಹಿದ್ರ ಗುಣ, ಪ್ರೇಮ ಇವೆಲ್ಲಾ ಆವರಲ್ಲಿ ಮಾಸು ಹೊಕ್ಕು ಗಳಾಗಿದ್ದವು

ಕೆಲಕಾಲ ನಮ್ಮ ಜಲ್ಲೆಯಲ್ಲಿ ಹಿಂದೀ ಪ್ರಚಾರಕರಾಗಿದ್ದು ಉತ್ತಮ ಕೆಲಸಮಾಡಿದ್ದರು ಇತ್ತೀಚೆಗೆ ಮುಬ್ಬಾಸಿಗೆ ತೆರಳಿ ಅಲ್ಲಿ ಸ್ವಾಮಿ ಶ್ರೀ ಲಕ್ಷ್ಮಣಾನಂದರ ಸಹವಾಸದಲ್ಲಿದ್ದರು ವೃದ್ಧ ಕೇಯ ತರಬೇತಿಯಲ್ಲಿ ದ್ದಂತೆಯೇ ವಿಸೂಚಿಕಾ ಜ್ವರ ಪೀಡಿತರಾಗಿ ಹಾಸಿಗೆ ಹಿಡಿದು ನಾಲ್ಕಾರು ದಿನಗಳಲ್ಲಿ ಈ ಲೋಕವನ್ನು ಬಿಟ್ಟುಬಂತಾಯಿತು ಒಳ್ಳೆಯ ಬಾಳ್ವೆಬಿದ್ದ ತರುಣರ ಈ ರೀತಿಯ ಅಕಾಲ ನಿಧನವು ಸಂತಾಪಕರವಿದೆ.

ನಿಡಂಬಳ್ಳಿ ಎಲಿಸೆಂಟರಿ ಶಾಲೆ ಕೋನ್ಸೆ

ತಾ 12-12-1936ರಲ್ಲಿ ಈ ರಿಲು ಪರಾಗದಲ್ಲಿ ಕಲ್ಯಾಣಪುರ ಸಕ್ಕರೆ ಕಾರ್ಖಾನೆಯ ಸುಪರ್ವೈಸರರಾದ, ಪಿ ಎಸ್ ಅನ್ಯಕೊಟ್ಟಿನವರಿಕರ ಆಪ್ಯಕ್ಕರೆಯಲ್ಲಿ ಡಿಪ್ಲಿವರ್ಸರು ಮಾಹೋತ್ಪವವು ಆತೀ ವಿಜೃಂಭಣೆಯಿಂದ ಜರಗಿತು ಬಾಲಕರೆ ಕೋಲುಟೆ, ಲಾಠಿ, ಪಿರಮಿಡ್, ಪ್ಯಾಡುಬಸೋವಗೆಳಾ ಪ್ರದರ್ಶಿಸಲ್ಪಟ್ಟವು ಬಾಲಾ ಮುಖ ಉಪಾಧ್ಯಾಯರು, ಮೆನೇಜರರಿಂದ ಶ್ರೀಯುತ T ಆಂಗರ ನವರು, ಊರ ಗುಣಕೆತಪ್ಪರ ಮುಖೋತ್ಸವ, ಈ ವಿಷಯವಸ್ತುತ್ತಿ ಕೊಂಡು, ಜೆರೋ ಬಾರ್ಡಾಪ್ಪಿತ್ತರು, ಬಿಗಸ್ ಪಾಕ್ಟರಿಯ ಅಮ್ಮಾರಿ ಇನ್ಸ್‌ಪಕ್ಟರಾದ, ರಾಮಕೃಷ್ಣನವರು ತಮ್ಮ ಸ್ವಂತ ಹಸ್ತದಿಂದ ತಾಲೂಕು ತಮಿಲ್ವರಿಂದ ಬಂದಿರುವ ಬ್ಯಾಜುಗಳನ್ನು ಬಾಲಿಗೆ ಹಂಚಿದವು ಬಾಲಿಗೆ ತಂಡಿ ಹಂಚಿದ ಬಳಿಕ ಸಭಾ ಅಭ್ಯಕ್ಷರಿಗೂ, ಸ್ಕೌಟ್ ದಳಕ್ಕೆ ಸಹಾಯ ಇತ್ತರುವ ಕೆವೆಡಿಂಪ್ ಫಾದರ್, ಪಿ ಡಿ ಕೆಸ್ಟಲ್ಲಿರಿಗೂ, ವಸ್ತ್ರವಾದವನ್ನು ಸಮರ್ಪಿಸಿದ ಮೇಲೆ ಸಭಾಂತ್ಯವಾಯಿತು

ಫಲಿಮಾರು

ತಾ. 8 12 36 ಮಾನ್ಯ ಜಲ್ಲಾ ಕಲಕ್ಟರ್ ದೊರೆಗಳವರೂ, ಡಿ. ಪೂಜ್ಯ ಸ್ವಾಮೆಂಟರೂ, ಈ ದಿನ ಬೆಳಿಗ್ಗೆ ಘಂಟೆ 8ಕ್ಕೆ ಶ್ರೀ ಪಲಿಮಾರು ಮಠಕ್ಕೆ ಬಂದು ಜಿಲ್ಲಾ ಇಕೋನೋಮಿಕ್ ಕೌನ್ಸಿಲಿಂದ ಫಲಾನಾರಿಗೆ ಆಗಬೇಕಾದ ಸಹಾಯಗಳನ್ನು ಕುರಿತು ಶ್ರೀ ಶ್ರೀಗಳವರನ್ನೂ, ಫಲಿಮಾರು ಪಂಚಾಯ್ತಿ ಜೋರ್ಡ್ ಪ್ರೆಸಿಡೆಂಟರೇ ಮೊದಲಾದ ಊರ ನೆಯು ವಿಸರ್ನೂ ವಿಚಾರಿಸಿ, ಪಕ್ಕಾತ ಅಗತ್ಯವಿರುವ ಸಲಿ ಮಾರು ಒಳ್ಳೆಂಜ ಮಾರ್ಗವನ್ನು ಅವನ್ನು ಹೇಗೆಸೇ ಆಗುವಂತೆ ಯೋಗ್ಯ ಪ್ರಚ್ಛಾಮಾದಲಾಗುವುದೆಂದೂ ಸಂದಿಕೂರು ಫಲಿಮಾರು ಸದಿಗೆ ಕಾಲು ಸಾಕವೆಯನ್ನು ಕೂಡಲೆ ಹಾಕಿಸಿಲಾಗುವುದೆಂದೂ ಭರವಸೆ ಯನ್ನು ಕೊಟ್ಟರಲ್ಲದೆ ಪಲಿಮಾರಿಗೆ ಆಗತ್ಯವಿರುವ ಸಾಮಾನುಗಳ ಕೆಟ್ಟೋಣದ ಬಗೆ ಕೂಡಾ ಗ್ರಾಂಟು ಕೊಡುವ ವಿಷಯವಾಗಿ ಆಲೋಚಿಸುವುದಾಗಿಯೂ ತಿಳಿಸಿದರು ಉಡುಪಿ ತಾಲೂಕು ತಮಿಲ್ವಾರರನ್ನೂ ಉಡುಪಿ ಡೆಂಜನ ಎಗ್ಸಿಕ್ಯೂಟಿವ್ ಆಫೀಸರ್‌ನ್ನೂ ಕೂಡಿಕೊಂಡು ಆಸ್ಪತ್ರೆಯೇ ಮೊದಲಾದ ಮುಖ್ಯ ಸ್ಥಳಗಳನ್ನು ಸಂದರ್ಶಿಸಿ ಕಾರ್ಯಕ್ರಮದೊರೆಗಳವರು ಬಿಳಿಯ ಸಂತೋಷವಪಟ್ಟರು ಆಸ್ಪತ್ರೆಗೆ ಆಗತ್ಯ ವಿರುವ ಮಾರ್ಪಾಗಳನ್ನು ಒಪಗಿಸುವ ವಿಚಾರಮಾಗಿ ತಾವು ಕೈಲಾದಷ್ಟು ಪ್ರಯತ್ನಿಸುವುದಾಗಿ ದಿ. ಜೋ. ಪೈಸಿಂದೂ ಭರವಸೆಯನ್ನಿತ್ತು ಸುಮಾರು 10 10ಗಂಟೆಗೆ ಕಾರ್ಯಕ್ರಮಕ್ಕೆ ತೆರಳಿದರು

ಕರ್ನಾಟಕ

ವಿಜಯ ನಗರ ಮಹೋತ್ಸವಕ್ಕೆ ಶ್ರವಣ ಬೆಳಗುಳದ ಶ್ರೀಗಳವರ ಸಂದೇಶ.

ವಿಜಯ ನಗರದ ಸ್ಮಾರಕೋತ್ಸವವು ನಮ್ಮ ಭಾರತ ಭೂಮಿಗೆ ಅನಂದವನ್ನುಂಟುಮಾಡುವುದಾಗಲಿ.

ಭಾರತಾದೇವಿಯ ವಿಜಯ ನಗರ ನಾಮ್ನಾಜ್ಯ ಸ್ಮಾರಕ ಮಂದಿರದ ಪ್ರತಾರಕರಾಗಿ ಬಂದಿರುವಲೇ ವಿವಿಧಾಕಾರ ರಾಷ್ಟ್ರಗಳ ಮುಮಿನಚನಗಳಿಂದಲೂ ಅವರು ಆವಿಚಾರವನ್ನು ಕೊಟ್ಟರುವ ಮುದ್ರಿತವಾದ ಪ್ರಕಟಿತ ಪತ್ರಗಳಿಂದಲೂ ಎಲ್ಲಾ ವಿಷಯಗಳು ನಮ್ಮ ಅವಗಾಹನೆಗೆ ಬಂದಿರುವವು

ಈ ಮಂಡಳಿಯ ಕೈಕೊಂದ ನಿಜಯನಗರ ಸಾರ್ವತ್ರಿಕ ಸ್ಮಾರಕೋತ್ಸವ ನೋದಲಾದ ಕಾರ್ಯಗಳಿಗೆ ವಿಜಯವು ಪ್ರಾಪ್ತವಾಗುತ್ತಿದೆಂದು ನಮ್ಮ ಮನಃಪೂರ್ವಕವಾದ ಸಂದೇಶವಾಗಿರುತ್ತದೆ

ಈ ಮಂಡಳಿಯ ಕೈಕೊಂಡ ಕಾರ್ಯಪ್ರಪ್ರಸ್ತುತ ನಾವಿದ್ದೇವೆ ಈ ಸ್ತುತ್ಯ ಕಾರ್ಯವನ್ನು ಭಾರತ ಶ್ರೀ ಬಿಗಳೆಲ್ಲರೂ ಅವರ ಸಹ ನೆಯೊತ್ತಿಗೆಗಳನ್ನು ತೋರಿ ಸಬೇಕೆಂದೂ ಕೂಡಿ ವಲ್ಲಗೆ ತಕ್ಕ ಸಹಾಯಗಳನ್ನು ಒದಗಿಸಿಕೊಡಬೇಕೆಂದೂ ಸಕಲ ಮಹಾಜನರಿಗೂ ಉತ್ತೇಜನವ ಕೊಡುತ್ತಿರುತ್ತವ

ಇತಿ ಭದ್ರಂಭೂಯಾತ್

THE

GUARDIAN OF INDIA

INSURANCE COMPANY, LTD.

Head Office: **MADRAS.** Branch: **MANGALORE.**

Capital— Indian

Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURITY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S. Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd, Mangalore Branch.

ತೀರಾ ದೇಶೀಯ ಭಂಡವಾಳ—ತೀರಾ ದೇಶೀಯ ಆಡಳಿತೆ

ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ನಿಮಿಯ ದರಗಳು --- ಉದಾರವಾದ ರರ್ತಗಳು

ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ನಿರ್ಮಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಅತ್ಯಾಕರ್ಷಕವಾದ ಶರ್ತಗಳು—ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವನಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು

ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು **ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು** ಶಾಖೆ ಇವರೊಡನೆ ಬೆಳಿಸಬೇಕಾಗಿ ವಿನಂತಿ.

ನಿರೀಕ್ಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., *Branch Secretary*, **The Guardian of India Insurance Co., Limited,**
MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೪—ಮದ್ರಾಸು.

ದಕ್ಷಿಣ ಕನ್ನಡ

ಕುಂದಾಪುರ

ಬೋರ್ಡು ಹೈಸ್ಕೂಲಿನ ವಿದ್ಯಾರ್ಥಿಗಳು ಉಡುಪಿ ಜಮಖಾನ ಕಮಿಟಿಯವರಿಂದ ಏರ್ಪಡಿಸಿದ ಪಂದ್ಯಾಟಗಳಲ್ಲಿ ಜಯಶೀಲರಾಗಿ ಜೂನಿಯರ್ ಸೀನಿಯರ್ ಎರಡು ಕಪ್‌ಗಳನ್ನು ಪಡೆದಿರುವ ಸಂಗತಿಯನ್ನು ತಿಳಿಸಲು ಸಂತೋಷವೆನ್ನಿಸುತ್ತದೆ. ಜೂನಿಯರ್ ಕಪ್ ನಮ್ಮ ಹೈಸ್ಕೂಲುಸೇರಿ 3 ವರ್ಷವಾಯಿತೆಂತಲೂ, ಸೀನಿಯರ್ ಕಪ್ ಈ ಸ್ಕೂಲ್ ಪಡೆದು 2 ವರ್ಷವಾಯಿತೆಂತಲೂ ತಿಳಿದು ಬರುತ್ತದೆ. ಡ್ರಿಲ ಮಾಸ್ಟರ್ ಶ್ರೀ ರಾಮಣ್ಣ ಶೆಟ್ರು ಈ ಹೈಸ್ಕೂಲಿಗೆ ಬಂದ ಮೇಲೆ ಜಯಾಂಗನೆಯು ಇಲ್ಲಿ ಮರೆಮಾಡಿಕೊಂಡಂತೆ ತೋರುತ್ತದೆ. ಡ್ರಿಲ್ ಮಾಸ್ಟರ್, ಶ್ರೀ ಶೆಟ್ರು ಅಭಿನಂದನೀಯರಿರುತ್ತಾರೆ.

ಕುಂದಾಪುರ ಬೋರ್ಡ್ ಹೈಸ್ಕೂಲಿನ ವರ್ಧಂತಿ ಮಹೋತ್ಸವವು ಇದೇ ದಶಂಬರ ತಾ. 19–20ರಲ್ಲು ಜರಗಲಿರುವುದು. ಮ. ರಾ. ಡಿಸ್ಟ್ರಿಕ್ಟ್ ಎಜುಕೇಶನಲ್ ಆಫೀಸರರಾದ ಶ್ರೀ ಮಾನ್ ಕೃಷ್ಣಸ್ವ ಎಮ್. ಎ., ಎಲ್. ಟಿ. ಇವರು ಅಧ್ಯಕ್ಷರಾಗಲು ಸಮ್ಮತಿಸಿರುವರು. ಈ ಶಾಲೆಯ ಹಳೆಯ ವಿದ್ಯಾರ್ಥಿಗಳು ಹಾಗೂ ಎಲ್ಲಾ ಮಹನೀಯರು ಸಹಕರಿಸಬೇಕಾಗಿ ಸ್ಕೂಲ್ ಡೇ ಕಮಿಟಿಯವರ ವಿನಂತಿ ಇದೆ.

ಕಾಂಗ್ರೆಸ್ ಚುನಾವಣೆಯ ಪ್ರಚಾರ ಕಾರ್ಯ.

ಮಧ್ಯಾಹ್ನ ನ್ಯಾಯ ವಿಧಾಯಕ ಸಭೆಗಳ ಚುನಾವಣೆಯ ವಿಷಯ ಮಹಾಜನರ ಸಭೆಯು ಕುಂದಾಪುರ ಗಾಂಧಿ ಮೈದಾನ್‌ನಲ್ಲಿ (ನರಿಬೇಣದಲ್ಲಿ) ಇದೇ ತಾ. 12-12-36ನೆ' ಶನಿವಾರ ಸಾಯಂಕಾಲ ಘಂಟೆ 5ಕ್ಕೆ ಶ್ರೀಯುತ ಎ. ಡಿ. ಎನ್. ಹೆಬ್ಬಾರವರು ಬಿ. ಎ., ಬಿ. ಎಲ್ ಎಡ್ವೋಕೇಟ್ ಇವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲ್ಪಟ್ಟು ಜನ ಸಂದಣಿಯು ತುಂಬಾ ನೆರೆದಿತ್ತು. ಅಂದೇ ಮಂಗಳೂರಿನಿಂದ ದಯಮಾಡಿಸಿದ ಶ್ರಿ ಹಿ. ರಾಮರಾಯಮಲ್ಯರು ನಮ್ಮ ಕುಂದಾಪುರವು ಗಾಂಧಿ ಚಳವಳಿದಲ್ಲಿ ಆಗ್ರಗಣ್ಯವಹಿಸಿ ಕಾಂಗ್ರೆಸಿನ ಮೇಲೆರುವ ತನ್ನ ಭಕ್ತಿ ವಿಶ್ವಾಸವನ್ನು ಪ್ರದರ್ಶಿಸಿದ ಸಂಗತಿಗಳನ್ನು ಸವಿಸ್ತಾರವಾಗಿ ಕೊಂಡಾಡಿ ಇಂದಿನ ಚುನಾವಣಾ ರಂಗದಲ್ಲಿ ತನ್ನ ಕೀರ್ತಿಯನ್ನು ಕಾಪಿಟ್ಟುಕೊಳ್ಳುವಂತೆ ಭರವಸೆಯನ್ನು ವ್ಯಕ್ತಪಡಿಸಿದರು. ಶ್ರೀಮಾನ್ ಎ. ಬಿ. ಶೆಟ್ರು ಕಾಂಗ್ರೆಸು ಚುನಾವಣೆಯ ಹೋರಾಟ ಕ್ಷೇತ್ರಿಯ ಉದ್ದೇಶ ಕಾಯಿದೆ ಕೌನ್ಸಿಲುಗಳಲ್ಲಿರುವ ಪಕ್ಷಭೇದಗಳ ಆವಶ್ಯಕತೆ, ಕಾಂಗ್ರೆಸು ಬಹುಪಕ್ಷವನ್ನು ಸೇರಿದು ಕಾಯಿದೇ ಕೌನ್ಸಿಲುಗಳಲ್ಲಿ ಸೇರುವುದರಿಂದ ದೇಶಕ್ಕಾಗುವ ಪ್ರಯೋಜನವೇ ಮೊದಲಾದುವನ್ನು ಸುರಸವಾಗಿ ವಿವರಿಸಿದರು. ಆ ಮೇಲೆ ಶ್ರೀಮಾನ್ ಕೆ. ರಾಮಕೃಷ್ಣ ಕಾರಂತರವರು ನಮ್ಮ ಜಿಲ್ಲೆಯ ಇಂದಿನ ಆರ್ಥಿಕ ಪರಿಸ್ಥಿತಿ ಧನಿ ಒಕ್ಕಲುಗಳ ಸಂಕಷ್ಟ. ನಿರಕ್ಷರತೆ, ಘೋರಿಪ್ಪ ನೋಂದರೆ ಹೊಸ ಶಾಸನ ಮಂಡಲಗಳ ಅಸಮರ್ಥತೆ, ದೇಶದ ಆದಾಯದಲ್ಲಿ ಹೆಚ್ಚಿನ ಭಾಗವು ನೌಕರ ಶಾಹಿಯ ತಲಬಿನಲ್ಲಿಯೇ ಹೋಗಿ ಬಿಡುವ ವಿಧಾನ ಇವುಗಳನ್ನು ತುಂಬಿಟ್ಟಗುವಂತೆ ವಿವರಿಸಿ ಈ ಎಲ್ಲಾ ತೊಂದರೆಗಳನ್ನು ನಿವಾರಿಸಲಿಕ್ಕೆ ಆಥವಾ ಇದಕ್ಕಾ ತಪ್ಪುಗಳು ಜನತೆಗೂ ದೇಶಕ್ಕೂ ತಿಳಿದು, ಜಾಗೃತವಾಗಲಿಕ್ಕೆ ಇರುವ ಒಂದೇ ಒಂದು ಉಪಾಯವೆಂದರೆ ಕಾಂಗ್ರೆಸು ಕೌನ್ಸಿಲುಗಳನ್ನು ಸೇರುವುದು. ಇದರಲ್ಲಿ ಜಾತಿಮತ ಭೇದವನ್ನು ಬಿಟ್ಟು ದೇಶದ ಶ್ರೇಯಸ್ಸನ್ನು ಬಯಸುವ ಕಾಂಗ್ರೆಸು ಪಾರ್ಟಿಯಿಂದ ಆರಿಸಿದ ಉಮೇದ್ವಾರರಿಂಬುದನ್ನು ಮರೆಯಬೇಡಿರಿ. ಎಂದು ಸುದೀರ್ಘ ಭಾಷಣವನ್ನಿತ್ತರು; ಆ ಮೇಲೆ ಶ್ರೀಮಾನ್ ಎನ್. ಎಸ್. ಕಿಲ್ಲೆಯವರು ಕಾಂಗ್ರೆಸಿನ ಇಂದಿನ ಧೋರಣೆ. ಆದರ ಹಿಂದಿನ ಕಾರ್ಯಕಲಾಪ, ತ್ಯಾಗ, ನಿಸ್ವಾರ್ಥತೆ. ಕಾಂಗ್ರೆಸು ಧ್ವಜವನ್ನು ಎತ್ತಿ ಹಿಡಿದು ಆಳರಸರಲ್ಲಿ ಸಂಗ್ರಾಮ ಹೂಡಿದ ಗಾಂಧಿಯವರು ಜವಾಹರಲಾಲರೇ ಮೊದಲಾದ ದೇಶ ಮುಖಂಡರ ನಿಸ್ವಾರ್ಥ ಪರಿಶ್ರಮ. ಅದರಿಂದ ದೇಶಕ್ಕೆ ದೊರೆತ ಪ್ರಯೋಜನ. ನಮ್ಮ ಪ್ರಾಂತದ ಜಸ್ಟೀಸು ಪಾರ್ಟಿಯ ಆಡಳಿತದಿಂದ ನಮಗಾದ ಹಾನಿ, ಬ್ರಾಹ್ಮಣ ಅಬ್ರಾಹ್ಮಣರೆಂಬುದುಮಾಡಿದ ಗೃಹಚ್ಛಿದ್ರ, ಇವುಗಳನ್ನು ಆವೇಶಪೂರ್ವಕವಾಗಿ ವಿವರಿಸಿ ಈ ಚುನಾರಣಾರಂಗದಲ್ಲಿ ಕಾಂಗ್ರೆಸು ತನ್ನ ಎದುರಾಳಿಯನ್ನು ಹೇಗೆ ನಾಮಾವಶೇಷಮಾಡಿ ಕೀರ್ತಿಧ್ವಜವನ್ನು ಎತ್ತಿ ಹಿಡಿಯಬೇಕೆಂದು ತನ್ನ ಅಪ್ರತಿಮ ವಾಕ್ಚಾತುರ್ಯದಿಂದ ಭಾಷಣವನ್ನಿತ್ತರು. ತರುವಾಯ ಸಭಾಧ್ಯಕ್ಷರು ತನ್ನ ಸುರಸ ಭಾಷಣದಲ್ಲಿ ಎಲ್ಲರೂ ಕಾಂಗ್ರೆಸಿಗೆ ಓಟುಕೊಟ್ಟು ಸಹಕರಿಸಿ ದೇಶದ ಕೀರ್ತಿಯನ್ನು ಕಾದುಕೊಳ್ಳುವುದು ಪ್ರತಿ ಒಬ್ಬ ಭಾರತೀಯನ ಕರ್ತವ್ಯವೆಂಬುದನ್ನು ಮನಗಾಣಿಸಿ ಭಾಷಣವನ್ನಿತ್ತರು. ಆ ಮೇಲೆ ಶ್ರಿ. ಬಿ. ಶಿವರಾಮ ಶೆಟ್ರು ವಕೀಲ್ ಇವರು ಸಭಾಧ್ಯಕ್ಷರಿಗೂ, ಭಾಷಣ ಕರ್ತರಿಗೂ, ಸಭಿಕರಿಗೂ ಧನ್ಯವಾದವನ್ನಿತ್ತ ತರುವಾಯ್ತ ಸಭೆ ಚದರಿತು.

ಇದೇ ತಾ. 11ನೇ ಬೆಳಿಗ್ಗೆ ಶ್ರೀ ಗಳಾದ ಎ. ಬಿ. ಶೆಟ್ರು ಕಾರಂತರೇ ಮೊದಲಾದವರು ಕುಂದಾಪುರದಿಂದ ಕುಂಭಾಸಿಗೆ ಹೋಗಿ ಅಲ್ಲಿಯ ಪ್ರಮುಖ ಜನರ ಸಭೆಸೇರಿಸಿ ಭಾಷಣಗಳನ್ನಿತ್ತರು ಎಂದು ಸಂಜೆ ಕಿರಿಮಂಜೇಶ್ವರಕ್ಕೆ ಹೋಗಿ ಅಲ್ಲಿಯ ದೇವಸ್ಥಾನದ ಮುಂಭಾಗದಲ್ಲೊಂದು ಸಾರ್ವಜನಿಕ ಸಭೆ ನಡಿಸಿದರು. ಶ್ರೀ ನಾರಾಯಣ ಹೆಬ್ಬಾರರು ಈ ಸಭೆಯ ಅಧ್ಯಕ್ಷರಾಗಿದ್ದರು. ಶ್ರೀಗಳಾದ ಎ. ಬಿ. ಶೆಟ್ರು, ಕೆ. ಆರ್. ಕಾರಂತರು, ಎನ್. ಎಸ್. ಕಿಲ್ಲೆಯವರು ಮತ್ತು ಶ್ರೀ ರಾಮರಾಯಮಲ್ಯರಲ್ಲದೆ ಶ್ರೀ ಸೂರಪ್ಪ ಹೆಬ್ಬಾರರು, ಕಾಂಗ್ರೆಸ್ ಉಮೇದ್ವಾರಿಗಳಿಗೆ ಓಟು ಕೊಡುವ ಆವಶ್ಯಕತೆಯ ಕುರಿತು ಮಾತಾಡಿದರು. ಶ್ರೀ ಎ. ಬಿ. ಶೆಟ್ರು ಡಿಸ್ಟ್ರಿಕ್ಟ್ ಬೋರ್ಡು ಪ್ರೆಸಿಡೆಂಟರಾಗಿದ್ದಾಗ ಬ್ರಾಹ್ಮಣರಿಗೆ ಅನ್ಯಾಯ ಮಾಡಿರುವರೆಂದೆಲ್ಲಾ ವಿರೋಧ ಪಕ್ಷೀಯರು ಆಧಾರರಹಿತವಾದ ಆರೋಪಗಳನ್ನು ಮಾಡಿ ಕುಹಕತನದಿಂದ ಓಟು ಪಡೆಯಲು ಪ್ರಚಾರಕಾರ್ಯ ನಡೆಸಿದ್ದರು ಈ ವಿಷಯದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನಲ್ಲಿ ಪ್ರಶ್ನೆಗಳು ಕೇಳಲ್ಪಟ್ಟಾಗ ದೊರೆತ ಉತ್ತರದಿಂದ ಶ್ರೀ. ಶೆಟ್ರು ಬ್ರಾಹ್ಮಣ ಸಮಾಜಕ್ಕೂ ಸರಿಯಾದ ನ್ಯಾಯವನ್ನು ಮಾಡಿರುವರೆಂದೂ, ಎಲ್ಲಾ ಸಮಾಜಗಳಿಗೂ ನ್ಯಾಯದೊರೆಯುವಂತೆ ಪ್ರಯತ್ನಿಸುತ್ತಿದ್ದರೆಂದೂ ಸ್ಪಷ್ಟವಾಗಿ ತಿಳಿದುಬಂದ ವಿಷಯವನ್ನು ವಿವರಿಸಿ ಜನರಲ್ಲಿ ಹಬ್ಬಿದ್ದ ದುರಭಿಪ್ರಾಯವನ್ನು ತೊಲಗಿಸಲಾಯಿತು. ಕುಂದಾಪುರದ ಜನರಲ್ಲಿ ಕಾಂಗ್ರೆಸಿನ ಕಡೆಗೆ ತುಂಬಾ ಸಹಾನುಭೂತಿಯಿದೆಯೆಂಬುದು ಹೋದ ಹೋದಲ್ಲೆಲ್ಲಾ ಜನರ ಪ್ರೋತ್ಸಾಹದಿಂದ ವ್ಯಕ್ತವಾಗುತ್ತಿತ್ತು.

ಕಾರ್ಕಳ.

ಶ್ರೀ ವೀರ ಮಾರುತಿದೇವಾಲಯದಲ್ಲಿ ವರ್ಷಂಪ್ರತಿ ನಡೆಯತಕ್ಕ ಭಜನೆ ಸಪ್ತಾಹ ಮಹೋತ್ಸವವು ಈ ವರ್ಷ ಇದೇ ತಿಂಗಳ ತಾ. 15ರ ದಿನ ಪ್ರಾರಂಭವಾಗಿ 25ರ ತನಕ ವಿಜೃಂಭಣೆಯಿಂದ ನಡೆಯಲಿರುವುದು.

ಇಲ್ಲಿಯ ಒಂದು ಪ್ರಾಚೀನ ಸ್ಮಾರಕವೂ. ವಿಹಾರಸ್ಥಾನವೂ ಆಗಿರುವ ಚತುರ್ಮುಖ ಬಸದಿಯವರು ಪಾದಕೆಲ್ಲಿನ ಹಾಳಿಗೆಗಳನ್ನು ಬೆಂಕಿಹಾಕಿ ತಗೆಯುತ್ತಿರುವುದರಿಂದ ಬಸದಿಯ ಭವ್ಯತೆಗೆ ತಡೆಯಾಗಿರುವದಲ್ಲದೆ, ಅದರ ಪ್ರಾಕೃತಿಕ ಕೋಪೆಯೂ ಕೆದುಕಂತಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಪದ್ಧತಿಯನ್ನು ಕೂಡಲೇ ನಿಲ್ಲಿಸಬೇಕಾಗಿದೆ.

ಕಾರ್ಕಳ ಸುತ್ತು ಮುತ್ತಲಿರುವ ದುರ್ಗಮಾಳ ಕೆರ್ವಾಶೆ, ಮೊದಲಾದ ಮಲೆ ಪ್ರಾಂತ್ಯಗಳಲ್ಲಿ ಈಗೀಗ ಸನ್ನ ದೊಡ್ಡ ಕಳ್ಳತನಗಳಾಗುವುದು ಹೆಚ್ಚುತ್ತಿದ್ದು ಬಡಗ್ರಾಮವಾಸಿಗಳು ಅಲ್ಲಿ ಜೀವಿಸುವುದೇ ಕಷ್ಟವಾಗಿದೆ ಎಂದು ಮೊರೆಯಿಡುತ್ತಾರೆ. ಪೋಲೀಸ ಇಲಾಖೆಯವರು ಸ್ಪಲ್ಪ ಅತ್ತ ಗಮನ ಕೊಟ್ಟರಾಗಬಹುದು.

ಈ ತಾಲೂಕಿನ ಕಾಂಗ್ರೆಸ ಕಮಿಟಿ, ಪಾರ್ಲಿಮೆಂಟರಿ ಕಮಿಟಿ ಮತ್ತು ಜಿಲ್ಲಾ ಕಮಿಟಿಗೆ ಈ ತಾಲೂಕಿನ ಪ್ರತಿನಿಧಿಗಳ ಚುನಾವಣೆಯಾಗಿರುವದು. ಶ್ರೀ. ಸಿ. ಮಂಜುನಾಥ ಕಾಮತರವರು ಹೊಸ ವರ್ಷಕ್ಕೆ ತಾಲೂಕು ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿರುವರು.

ತಾ. 9-12-1936ರಲ್ಲು ಕಾರ್ಕಳ ಶ್ರೀಮತ್ ಭುವನೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಜರಗಿದ ಗೀತಾ ಪರೀಕ್ಷಾ ಸ್ಪರ್ಧೆಯಲ್ಲಿ ಇಲ್ಲಿಯ ಶಿವಬ್ರಾಹ್ಮಣ ವರ್ಗದ ಶ್ರೀಮತಿ ಕಮಲಾ ಬಾಯಿ ಶಿರೋಮಣಿ ವಿದ್ಯಾರ್ಥಿ ಇವರು ಪ್ರಥಮ ಪಾರಿತೋಷಕವನ್ನು ಪಡೆದು ವಿಜಯಿಯಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ಪೆರ್ಡೂರು.—ಚುನಾವಣೆಯ ಕಾರ್ಯನಿಮಿತ್ತ ಕೊಂಸ್ಸೆಸು ಉಮೇದ್ವಾರಿಗಳು ಇಲ್ಲಿ ಸಂಚರಿಸಿ ಹೋದರು!

ನಿಜಗುರು ಶ್ರೀ ವಿವೇಕಾನಂದ ಸೇವಾ ಸಂಘ

ಈ ಸಂಘದ ವಿಶೇಷ ಸಭೆಯೊಂದು ತಾ. 6-12-36ರಲ್ಲು ಪಂಡಿತ ಕೆ. ಗೋಪಾಲಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಕಳ, ಬೈಲೂರು, ಕಣಂಜಾರು, ಎಳಿಯಾಳ, ಪಳ್ಳಿ, ಶಿರ್ಲ, ಬೆಳ್ಳಿ ಮೊದಲಾದ ಸ್ಥಳಗಳಿಂದ ಅನೇಕ ಸದ್ಗೃಹಸ್ಥರು ಚಿತ್ತೈಸಿದ್ದರು ಪ್ರಥಮತಃ ಶ್ರೀ ತಿಮ್ಮರಾಯ ನಾಯ್ಕರು "ಬ್ರಹ್ಮಚರ್ಯ"ದ ವಿಷಯವಾಗಿ ಏರ್ಪರ್ಯ ಭಾಷಣ ಮಾಡಿದರು. ಅನಂತರ ಶ್ರೀಯುತ ಎನ್. ಸಂಜೀವ ಶೆಟ್ರು ಮತ್ತು ಶ್ರೀ. ಪಿ. ಎಸ್. ನಿಜಗುರು, ಬಿ. ಎ., ಇವರು ಈ ವಿಷಯವನ್ನು ಪ್ರಸ್ತಾಪಿಸುತ್ತಾ, ಬ್ರಹ್ಮಚರ್ಯದ ಮಹತ್ವಿಕೆಯನ್ನು ಮನಗಾಣಿಸಿದರು. ಅನಂತರ ಕಾರ್ಕಳದ ಎಜ್ಯೂಕೇಟ್ ಶ್ರೀ. ಬಿ. ಸದಾನಂದ ಹೆಗ್ಡೆಯರು ಕಾಂಗ್ರೆಸಿನ ಧ್ಯೇಯ ಧೋರಣೆಗಳನ್ನು ವಿವರಿಸಿ, ಜಸ್ಟಿಸ್‌ಪಕ್ಷದ ಸ್ವಾರ್ಥಪರ ಧೋರಣೆಯನ್ನು ಟೀಕಿಸಿ ದೇಶದ ಬಿನ್ನೆಲುಬಿನಂತಿರುವ ಕಾಂಗ್ರೆಸಿಗೇನೇ ಬರುವ ಚುನಾವಣೆಯಲ್ಲಿ ಸರ್ವತ್ರ ವಿಜಯವು ದೊರೆಯುವಂತೆ ಪ್ರಯತ್ನಿಸುವುದು ಪ್ರತಿಯೊಬ್ಬ ಭಾರತೀಯನ ಆದ್ಯ ಕರ್ತವ್ಯವೆಂದು ವಿವರಿಸಿ, ಸ್ಫೂರ್ತಿದಾಯಕಮಿದ ಭಾಷಣವನ್ನತ್ತು ಸಭಿಕರಲ್ಲಿ ಜಾಗೃತಿಯನ್ನುಂಟು ಮಾಡಿದರು. ಶ್ರೀ. ಎಮ್. ಸಂಕಪ್ಪ ಹೆಗ್ಡೆಯರೂ ಇದೇ ವಿಷಯವನ್ನು ಸಮರ್ಥಿಸಿ, ಕಾಂಗ್ರೆಸಿನ ಪರವಾಗಿ ಉಮೇದ್ವಾರರಾಗಿರುವ ಶ್ರೀ. ಎ. ಬಿ. ಶೆಟ್ರಿಗೇನೇ ಬರುವ ಚುನಾವಣೆಯಲ್ಲಿ ಜಯವಾಗುವಂತೆ ಹಾರೈಸಿ ಭಾಷಣವನ್ನಿತ್ತರು. ಕೊನೆಗೆ ಅಧ್ಯಕ್ಷರ ಭಾಷಣವಾಗಿ, ಧನ್ಯವಾದಗಳಿಂದ ಸಭೆಯು ಕೊನೆಗೊಂಡಿತು.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾದ ಧಾತುನಷ್ಟ, ನರಗಳ ನಿಶ್ಶಕ್ತಿ, ಇವುಗಳನ್ನು ಹೋಗಲಾಡಿಸಿ ಶಾಶ್ವತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆರೋಗ್ಯವಾಗಿ ಹಸನವನ್ನುಂಟುಮಾಡಿ ದೇಹಕ್ಕೂ ಮತ್ತು ಮನಸ್ಸಿಗೂ ಬಲಹೀನತ್ವವನ್ನು ಹೋಗಲಾಡಿಸಿ ದುಸ್ಸಾಧ್ಯವನ್ನು ನುಚ್ಚು ನೂರು ಮಾಡಿ ಜ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು.

ಕ್ರಯಃ ಡಬ್ಬಿ ೧ಕ್ಕೆ ೧–೦–೦,

ವಾಜೀಕರಣ ತೈಲಃ—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ವಕೃತ ಅನೇಕ ವಿಧಗಳಲ್ಲಿ ಶರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಅಶಕ್ತಿ, ನರಗಳ ದುರ್ಬಲ, ನಪುಂಸಕತ್ವ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯಾಗಿದುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಔಷಧವನ್ನು ಹಚ್ಚುವುದರಿಂದ ಗುಣವಾಗುತ್ತಾ ಗುತ್ತದೆ.

ಕ್ರಯಃ ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯಃ— ರಕ್ತವನ್ನು ಶುದ್ಧಿಮಾಡಿ, ನರಗಳನ್ನು ಬಲಪಡಿಸಿ, ಅತಿ ಉಷ್ಣ, ಕೈಕಾಲುಗಳ ಉರಿ, ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ದೇಹಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಷಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾದುದು. ಕ್ರಯಃ ಡಬ್ಬಿ ೧ಕ್ಕೆ ೨–೦–೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮಾಫಿಯಾಗಿ ಕಳುಹಿಸುವೆವು ಒಂದು ಕಾರ್ಡು ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಚಾರ್ಕ, ಬೆಂಗಳೂರು ಸಿಟಿ

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇವರ ಔಷಧಗಳ ವೈಶಿಷ್ಟ್ಯ ಏನು?

—೦—

ದೇಶೀಯ ಉದ್ಯಮ
100 ವರ್ಷಗಳ ಅನುಭವದಿಂದ ತಯಾರಿ.
ಶಾಸ್ತ್ರೀಯ ರೀತಿಯ ಸಿದ್ಧತೆ.
ಅತ್ಯಂತ ಗುಣಕಾರಿ.
ಸ್ವರ್ಣ, ರಜತಪದಕಗಳನ್ನು ಪಡೆದ ದಿವ್ಯೌಷಧಗಳು.
ಅತ್ಯಂತ ಕಡಿಮೆ ಬೆಲೆ.

ಭುವನೇಂದ್ರ

ಗುಡಪಿಪ್ಪಲಿ
(ಮಕ್ಕಳ ಜೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಕೂಲಿ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ನಾಂತಿಭೇದಿ, ಅತಿಸಾರಗಳ ನೀಲಿ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಅರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ.
ನಮ್ಮ ಪ್ರತಿನಿಧಿಗಳಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು. ಅವರಿಗೆ ವಿಪುಲವಾದ ಸೌಕರ್ಯಗಳಿವೆ.

ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರಕೊಳ್ಳಿರಿ.

ಆಡಳಿತದ ಸೌಕರ್ಯ.

ಪ್ರಾಂತಗಳ ಪುನರ್ವಿಭಜನ ಮಾಡುವಾಗ, ಮುಖ್ಯವಾದ ಮೂರು ಸೂತ್ರಗಳನ್ನು ಅನುಲಕ್ಷಿಸಬೇಕೆಂದು ಲಾರ್ಡ್ ಹಾರ್ಡಿಂಜರು ಹೇಳಿದ್ದರು. ಅವುಗಳಾವುವೆಂದರೆ :—(೧) ಪ್ರಾಂತಗಳ ಮಧ್ಯದ ಗಡಿಗಳು ಸಮರ್ಪಕ ರೀತಿಯಲ್ಲಿರಬೇಕಾದರೆ, ಅವುಗಳು ಒಂದೇ ಭಾಷೆಯನ್ನಾಡುವ, ಅವ್ಯವಚ್ಛಿನ್ನವಾದ, ಆಡಳಿತದ ಘಟಕವಾಗುವ ಪ್ರದೇಶವನ್ನು ಒಳಕೊಂಡಿರಬೇಕು. (೨) ಇಂತಹ ಸೀಮಾ ನಿರ್ಧಾರವು ಜನರ ನ್ಯಾಯಸಮ್ಮತವಾದ ಆಕಾಂಕ್ಷೆಗಳನ್ನು ಪೂರೈಸಬೇಕು. (೩) ರಾಜಕೀಯ ದೃಷ್ಟಿಯಿಂದಲೂ ಆಡಳಿತದ ದೃಷ್ಟಿಯಿಂದಲೂ ಇಂತಹ ವಿಭಾಗವು ಉಪಯುಕ್ತವಾಗಿರಬೇಕು. ಕರ್ನಾಟಕದ ಮಟ್ಟಿಗೆ ಈ ಮೂರು ಶರತ್ತುಗಳೂ ಸಫಲವಾಗುತ್ತವೆ —ಎಂಬುದನ್ನು ಸರಕಾರಕ್ಕೆ ತಿಳಿಸಲಾಯಿತು. ಭಾವಿ ಕರ್ನಾಟಕ ಪ್ರಾಂತ್ಯದಲ್ಲಿ ಎಂಟು ಜಿಲ್ಲೆಗಳೂ ಐದು ತಾಲೂಕುಗಳೂ ಸಮಾವೇಶ ಹೊಂದುವುವು. ಈ ಪ್ರದೇಶಗಳ ವಿಸ್ತಾರ ಸುಮಾರು 35408 ಚದರ ಮೈಲು; ಜನಸಂಖ್ಯೆ ಸುಮಾರು 6 ½ ಮಿಲಿಯ. ಕರ್ನಾಟಕ ಏಕೀಕರಣ ಸಮಿತಿಯ ಅಂದಾಜು ಇದು. ಸರಕಾರದಿಂದ ನೇಮಕಹೊಂದಿದ ಮುಂಬಯಿಯ ಸದಸ್ಯರಾದ ಜೆ. ಇ. ಬಿ. ಹೋಟ್ಸನ್ನರು ತಮ್ಮ ಅಸದೃಶವಾದ ಶೈಲಿಯಲ್ಲಿ ಹೊಸದಾಗಿ ನಿರ್ಮಿಸಲ್ಪಡುವ ಕರ್ನಾಟಕ ಪ್ರಾಂತವನ್ನು ಈ ರೀತಿಯಲ್ಲಿ ಹಾಸ್ಯರಸ ಭರಿತವಾಗಿ ವಿವರಿಸಿದರು:-"ಹೊಸ ಕರ್ನಾಟಕ ಪ್ರಾಂತವು ಸುತ್ತಲೂ ಅಂಚಿನಿಂದ ಕೂಡಿದ ಒಂದು ಚಿಕ್ಕ ಕುಳಿಯಂತಿರುವುದು. ಆ ಕುಳಿ ಮೈಸೂರು. ಈ ಹೋಲಿಕೆಯು ಮೈಸೂರಿಗೆ ಅಪಹಾಸ್ಯವಾಗಬೇಕೆಂಬ ಉದ್ದೇಶದಿಂದ ಹೇಳಲ್ಪಟ್ಟಿಲ್ಲ. ಆ ಅಂಚು —ಎಂದರೆ ಮೈಸೂರಿನ ಸುತ್ತಲು ಇರುವ ಕನ್ನಡ ಮಾತಾಡುವ ನಾಡುಗಳು. ಅದರ ಬದಿಯಲ್ಲೊಂದು ಮಣ್ಣ ಮುದ್ದೆಯಂತೆ ಮುಂಬಾಯಿಯ ನಾಲ್ಕು ಕನ್ನಡ ಜಿಲ್ಲೆಗಳಿವೆ." ಕರ್ನಾಟಕ ಏಕೀಕರಣ ಸಮಿತಿಯವರು ಒಂದು ಭೂಚಿತ್ರವನ್ನು ತಯಾರಿಸಿದ್ದಾರೆ; ಆಧಾರಗಳನ್ನು ಸಂಗ್ರಹಿಸಿದ್ದಾರೆ. ಈ ಬಗ್ಗೆ ಅವರಿಗೆ ಅಭಿನಂದನವನ್ನು ಸಮರ್ಪಿಸಬೇಕು. ಅವರು ತಯಾರಿಸಿದ ಭೂಚಿತ್ರವನ್ನು ನೋಡಿದರೆ, ವಿಚಾರಕ್ಕೆ ಒಪ್ಪುವ ಯಾವ ಮನುಷ್ಯನೂ, ಕರ್ನಾಟಕದ ಪ್ರದೇಶಗಳು ಒತ್ತೊತ್ತಾಗಿದ್ದು ಅವ್ಯವಚ್ಛಿನ್ನತೆಯಿಂದ, ಒಂದೇ ಪ್ರಾಂತದ ಚತುಸ್ಸೀಮೆಗಳೊಳಗೆ ಇರಲು ಅರ್ಹವಾಗಿಲ್ಲ ಎಂದು ಹೇಳಲಾರನು. ಹೋಟ್ಸನ್ನರ ಮಾತು ನಿರಾಧಾರವಾದುದು. ಅಲ್ಲದೆ ಅವರ ಪ್ರಾಂತವಲ್ಲಿ ಕೂಡಾ ಮಧ್ಯೆ ಮಧ್ಯೆ ಸಣ್ಣ ಸಣ್ಣ ಆಕ್ರಿತ ಸಂಸ್ಥಾನಗಳಿದ್ದು, ಆ ಪ್ರಾಂತದ ವ್ಯಾಪನೆಗೆ ಮಧ್ಯದಲ್ಲಿ ಭಂಗತರುತ್ತವೆ ಎಂಬುದನ್ನು ಹೋಟ್ಸನ್ನರು ಮರೆತಿದ್ದಾರೆ. ಆರ್ಥಿಕ ಸ್ಥಿತಿಯಾದರೂ ಹೇಗಿದೆ? ಕರ್ನಾಟಕ ಪ್ರಾಂತದಲ್ಲಿ ೩೫ ಲಕ್ಷ ಆದಾಯ; ವೆಚ್ಚ ೨೧೦ ಲಕ್ಷ; ಉಳಿವ ೪೮ ಲಕ್ಷದ ವೆಚ್ಚದಿಂದ ನ್ಯಾಯವಿಧಾಯಕ ಸಭೆಯ, ಗವರ್ನರರ ಶ್ರೀಮದ್ಭಾಂಭೀರ್ಯದ ವೆಚ್ಚವನ್ನು ಕೂಡ ನಿರ್ವಹಿಸಬಹುದು. ಅಂಗ್ರೆಯರ ಕೆಲವೇ ತಿಂಗಳೊಳಗೆ ಪ್ರಾಂತೀಯ ಸ್ವಾತಂತ್ರ್ಯವು ಆಡಳಿತಕ್ಕೆ ಬರುವುದು. ಈಗಲೆ ಚುನಾವಣೆಯ ಪೂರ್ವರಂಗವು ಪ್ರಾರಂಭವಾಗಿದೆ. ೧೯೩೫ನೆಯ ಇಸವಿಯ ಸುಧಾರಣೆಯ ಮಸೂದೆಯಲ್ಲಿ ಕೂಡ, ಹೊಸ ಪ್ರಾಂತರಚನೆಗೆ, ಪ್ರಾಂತೀಯ ಸರಕಾರವೂ ನ್ಯಾಯ ಸಭೆಗಳೂ, ಸಂಯುಕ್ತ ಸರಕಾರವೂ, ನ್ಯಾಯಸಭೆಯೂ ತಮ್ಮ ಸಮ್ಮತಿ ಅಸಮ್ಮತಿಗಳನ್ನು ಸೂಚಿಸಬಹುದೆಂಬ ವಿಷಯವು ಅಡಕವಾಗಿರುವುದು. ಮಸೂದೆಯಲ್ಲಿ ಈ ಸಂಬಂಧವಾದ ನಿಯಮವು ಹೀಗಿದೆ:

ಸೆಕ್ಷನ್ 290:-(1) ಈ ನಿಯಮದ ಶರತುಗಳಿಗೆ ಅಧೀನವಾಗಿ, ಚಕ್ರವರ್ತಿಗಳು 'ಆರ್ಡರ್ ಇನ್ ಕೌನ್ಸಿಲು'ಗಳ ಮುಖಾಂತರ

(ಎ) ಹೊಸ ಪ್ರಾಂತವನ್ನು ನಿರ್ಮಿಸಬಹುದು.

(ಬಿ) ಯಾವುದಾದರೊಂದು ಪ್ರಾಂತದ ವಿಸ್ತಾರವನ್ನು ಹೆಚ್ಚಿಸಬಹುದು.

(ಸಿ) ಯಾವುದಾದರೊಂದು ಪ್ರಾಂತದ ವಿಸ್ತಾರವನ್ನು ಕಡಿಮೆಮಾಡಬಹುದು.

(ಡಿ) ಒಂದು ಪ್ರಾಂತದ ಗಡಿಗಳನ್ನು ಬದಲಾಯಿಸಬಹುದು.

ಆದರೆ, ಇಂತಹ ಹುಕುಂ ಪಾರ್ಲಿಮೆಂಟಿನ ಮುಂದೆ ಬರುವ ಮುಂಚೆ, ಚಕ್ರವರ್ತಿಗಳ ಆಜ್ಞಾ ಪ್ರಕಾರ ಭಾರತ ಮಂತ್ರಿಗಳು, ಸಂಯುಕ್ತ ರಾಜ್ಯದ ಸರಕಾರದ ಮತ್ತು ನ್ಯಾಯವಿಧಾಯಕ ಸಭೆಯ ಸಂಬಂಧಪಟ್ಟ ಪ್ರಾಂತೀಯ ಸರಕಾರದ ಮತ್ತು ಅಲ್ಲಿಯ ನ್ಯಾಯವಿಧಾಯಕ ಸಭೆಯ ಅಭಿಪ್ರಾಯವನ್ನು ಕೇಳಿಕೊಳ್ಳತಕ್ಕದ್ದು.

(2) ಈ ನಿಯಮಾನುಸಾರವಾಗಿ ಕೊಡುವ ಆಜ್ಞೆಯಲ್ಲಿ, ಹೀಗೆ ಬದಲಾಯಿಸಲ್ಪಟ್ಟ ಪ್ರಾಂತವು ಸಂಯುಕ್ತ ರಾಜ್ಯಮಂಡಲಿಯ ನ್ಯಾಯವಿಧಾಯಕ ಸಭೆಗೆ ಕಳುಹಿಸುವ ಪ್ರತಿನಿಧಿಗಳ ಸಂಖ್ಯೆಯನ್ನೂ, ಪ್ರಾಂತೀಯ ನ್ಯಾಯವಿಧಾಯಕ ಸಭೆಯಲ್ಲಿಯೂ ಆಗಬೇಕಾದ ವ್ಯತ್ಯಾಸವನ್ನೂ, ಅದರ ಗಡಿಯ ಹೆಚ್ಚು ಕಡಿಮೆಯನ್ನೂ, ಸಾಲಮೂಲ ಮತ್ತು ತಾತ್ಕಾಲಿಕವಾಗಿಯೂ ಅನಂತರವೂ ಬರಬಹುದಾದ ಹಣದ ಪ್ರಶ್ನೆಗಳೆಲ್ಲವನ್ನೂ ಒಳಕೊಂಡಿರಬಹುದು.

ಆದರೆ ಇಂತಹ ವ್ಯತ್ಯಾಸದಿಂದ ಸಂಯುಕ್ತ ರಾಜ್ಯಮಂಡಲಿಯ ಎರಡು ನ್ಯಾಯವಿಧಾಯಕ ಸಭೆಗಳ ಸದಸ್ಯರ ಸಂಖ್ಯೆಯಲ್ಲಿ ಹೆಚ್ಚು ಕಡಿಮೆಗಳು ಆಗಕೂಡದು.

(3) ಈ ನಿಯಮದಲ್ಲಿ ಪ್ರಾಂತವೆಂದರೆ ಗವರ್ನರರ ಅಧವಾ ಚೀಫ್ ಕಮಿಶನರರ ಆಧೀನವಲ್ಲಿರುವ ಪ್ರಾಂತ—ಎಂದರ್ಥ.

ಭಾರತ ರಾಷ್ಟ್ರಸಭೆಯ ಮಟ್ಟಿಗೆ ಪ್ರಾಂತವಿಭಜನೆಯ ವಿಷಯದಲ್ಲಿ ತೊಡಕುಗಳೇನೂ ಇಲ್ಲ. ಭಾಷಾನುಗುಣವಾಗಿ ಎಷ್ಟು ಪ್ರಾಂತಗಳನ್ನು ವಿಭಾಗಿಸುವುದು ಸಾಧ್ಯವೋ ಅವುಗಳನ್ನು ವಿಭಾಗಿಸಿಯೇ ಬಿಡಬೇಕೆಂದು ಅದು ನಿರ್ಧರಿಸಿದೆ. ಕರ್ನಾಟಕವು ಪ್ರತ್ಯೇಕ ಪ್ರಾಂತವಾಗಬಹುದೆಂಬ ಬಗ್ಗೆ ಸರ್ವಪಕ್ಷದ ಪರಿಷತ್ತಿನಲ್ಲಿ ಈ ನಿರ್ಣಯವಾಗಿದೆ.

ಕರ್ನಾಟಕ ಪ್ರಾಂತರಚನೆಯ ಆವಶ್ಯಕತೆಯನ್ನು ಕುರಿತು ಏಕೀಕರಣಸಂಘದವರೆ ಮತ್ತು ಪ್ರಾಂತಿಕ ರಾಷ್ಟ್ರಸಭೆಯ ಪ್ರತಿನಿಧಿಗಳೊಬ್ಬರು ಚೆನ್ನಾಗಿ ವಾದಿಸಿದರು. ಅವರು ಅನೇಕ ಮಹತ್ವದ ಆಧಾರಗಳನ್ನು ನಮ್ಮ ಮುಂದಿಟ್ಟರು. ಏಕೀಕರಣದ ಸಾಧ್ಯತೆಯನ್ನು, ಸಮಾಧಾನಕರ ರೀತಿಯಲ್ಲಿ ರುಜುಪಡಿಸಿದರು. ನಮ್ಮ ಎಲ್ಲ ಪ್ರಶ್ನೆಗಳಿಗೆ ಸಮರ್ಪಕ ಉತ್ತರವಿತ್ತರು. ಆದುದರಿಂದ ಕರ್ನಾಟಕದ ಏಕೀಕರಣವನ್ನು ಬಹಿರಂಗ ಕಾರಣಗಳಿಂದ ಒಪ್ಪಿಕೊಳ್ಳಬೇಕಾಗುತ್ತದೆ.

'ಏಕೀಕರಣಕ್ಕೆ, ಎಲ್ಲರಲ್ಲಿದಿದ್ದರೂ, ಕರ್ನಾಟಕಸ್ಥರಲ್ಲಿ ಬಹುಜನರು ಒಪ್ಪುತ್ತಾರೆ. ಹಿಂದೂ ಮುಸಲ್ಮಾನ ಪ್ರಶ್ನೆ ಅಲ್ಲಿಲ್ಲ. ಆಬ್ರಾಹ್ಮಣ-ಬ್ರಾಹ್ಮಣ ಸಮಸ್ಯೆಯು ಸ್ವಲ್ಪ ಮಟ್ಟಿಗೆ ಇದ್ದರೂ ಇದು ಏಕೀಕರಣವನ್ನು ಬಾಧಿಸುವುದಿಲ್ಲ. ಕೆಲಮಂದಿ ಬ್ರಾಹ್ಮಣರು ವಿರೋಧಿಸುವುದಿದ್ದರೂ ಸುವ್ಯವಸ್ಥಿತ ವಿರೋಧವು ಎಲ್ಲಿಯೂ ಕಂಡುಬರುವುದಿಲ್ಲ. ಗಡಿನಾಡಿನಲ್ಲಿರುವ ಮಹಾರಾಷ್ಟ್ರೀಯರಿಗೆ ತಮ್ಮ ಭಾಷೆಗೆ ಧಕ್ಕೆ ತಗಲಬಹುದೆಂಬ ಭೀತಿಯಿದೆ ಎಂಬುದು ನಮಗೆ ತಿಳಿಸಲ್ಪಟ್ಟಿತು. ಆದರೆ ಈ ಬಗ್ಗೆ ರಕ್ಷಣೆಗಳನ್ನು ಇಡಬಹುದು.

'ಆರ್ಥಿಕ ದೃಷ್ಟಿಯಿಂದ ಕರ್ನಾಟಕದ ವಿಭಜನೆಕ್ಕೆ ಏನೂ ತೊಂದರೆಯಿಲ್ಲ. ಬ್ರಿಟಿಷ ಕರ್ನಾಟಕದಲ್ಲಿ ಈಗಲೂ ವ್ಯಯಕ್ಕಿಂತ ಹೆಚ್ಚು ಆದಾಯವಿದೆ. ಆದರೆ ಕೊನೆಯ ನಿರ್ಧಾರವನ್ನು ಭಕ್ಕನೆ ಮಾಡಲಾಗವುದಿಲ್ಲ. ಕರ್ನಾಟಕವ ಪ್ರಾಂತ ರಚನೆಗೆ ಬಹಿರಂಗವಾಗಿ ಕಂಡುಬರುವ ಕಾರಣಗಳು ಸಮರ್ಪಕವಾಗಿವೆ ಎಂದಿಷ್ಟೇ ಹೇಳಬಲ್ಲವು. ಈ ಪ್ರಾಂತದ ಸೀಮೆಗಳಾವುವೆಂಬುದನ್ನೂ ಈಗ ಹೇಳಲಾಗುವುದಿಲ್ಲ. ಗಡಿನಾಡುಗಳಲ್ಲಿ ಎರಡೆರಡು ಭಾಷೆಗಳರಬಹುದು. ಗಡಿಗಳನ್ನು ನಿರ್ಣಯಿಸುವುದಕ್ಕೆ ವಿಚಕ್ಷಣರ ಸಮಿತಿಯನ್ನು ಏರ್ಪಡಿಸಬೇಕು. ಅವರು ಆ ಸ್ಥಳಗಳಿಗೆ ಹೋಗಿಯೇ ವಿಚಾರಿಸಬೇಕು.'

ಮುಂಬಾಯಿ ಮದ್ರಾಸುಗಳ ನ್ಯಾಯವಿಧಾಯಕ ಸಭೆಗಳಲ್ಲಿಯೂ, ಸಂಯುಕ್ತ ರಾಜ್ಯಮಂಡಲಿಯ ನ್ಯಾಯವಿಧಾಯಕ ಸಭೆಗಳಲ್ಲಿಯೂ, ರಾಷ್ಟ್ರಸಭೆಯ ಸದಸ್ಯರು ಅಧಿಕ ಸಂಖ್ಯಾಕರಾಗಿದ್ದರೆ, ನಮ್ಮ ಕಾಂಕ್ಷೆಯು ಸಫಲವಾಗಬಹುದು. ನಾವೀಗ ಮಾಡಬೇಕಾದುದೇನೆಂದರೆ, ಕರ್ನಾಟಕ ಏಕೀಕರಣ ಪ್ರಯತ್ನದ ಅಂಗವಾಗಿ, ಕನ್ನಡ ನಾಡಿನ ಎಲ್ಲ ಭಾಗಗಳಲ್ಲಿಯೂ ರಾಷ್ಟ್ರಸಭೆಯ ಸದಸ್ಯರನ್ನೇ ಮುಂಬಾಯಿ ಮದ್ರಾಸುಗಳ ನ್ಯಾಯವಿಧಾಯಕ ಸಭೆಗೆ ಆರಿಸಬೇಕೆಂದು ಪ್ರಚಂಡ ಚಳವಳವನ್ನು ಹೂಡಬೇಕು. ಇದರಿಂದಲೆ ನಮ್ಮ ಅಭ್ಯುದಯವಾಗಬೇಕಾಗಿದೆ. ರಾಷ್ಟ್ರಸಭೆಗೆ ಸೇರಿದ ಇತರ ಪಕ್ಷೀಯರು ಜಯಮೆಹೊಂದುವ ಸಂದರ್ಭವಿದುವಲ್ಲ, ಆಂಧ್ರನರು ಕರ್ನಾಟಕದ ಏಕೀಕರಣ ಪ್ರಾಂತರಚನೆಯ ಬಗ್ಗಾಗಿ ಪ್ರಯತ್ನಪಡಬೇಕೆಂದು ಅವರಿಗೆ ತಿಳಿಸುವೆವು. ಕನ್ನಡಿಗ ಮತದಾರರ ಕರ್ತವ್ಯವಾಗಿದೆ. 'ಉತ್ತಿಷ್ಠತ ಜಾಗ್ರತ!' ಎಂಬ ಉಪನಿಷತ್ತಿನ ವಾಣಿಯನ್ನು ಸ್ಮರಿಸಿ ನಾವು ಕೆಲಸಕ್ಕೆಳಿಯಬೇಕಾಗಿದೆ. ಕೆಲಸಕ್ಕೆಳಿಯದಿದ್ದರೆ ನಮ್ಮ ಪತನವಾಗುವುದರಲ್ಲಿ ಸಂದೇಹವಿಲ್ಲ

ಕರ್ನಾಟಕ ಏಕೀಕರಣ ಪರಿಷತ್ತು

ಪರಿಷತ್ತಿನ ಅಧ್ಯಕ್ಷ ಡಾಕ್ಟರ್ ಯು. ರಾಮರಾಯರ ವಿಚಾರಪೂರ್ಣ ಭಾಷಣ.

ಕಳದ ಸಂಚಿಕೆಯಿಂದ ಮುಂದರಿಸಿದ್ದು

ಲದ ಸಿಂಧವು ಪ್ರತ್ಯೇಕ ಪ್ರಾಂತವಾಗಿರಬಲ್ಲುದಂತೆ; ಕರ್ನಾಟಕವು ಆಗಿರಲಾರದೇ? ಸಿಂಧಕ್ಕೆ ಕೇಂದ್ರ ಸರಕಾರದ ಧನ ಸಹಾಯಬೇಕು; ಕರ್ನಾಟಕ ಪ್ರಾಂತಕ್ಕೆ ಅದರ ಆವಶ್ಯಕತೆಯೂ ಇಲ್ಲ.

ಸಣ್ಣ ಸಣ್ಣ ಪ್ರಾಂತಗಳನ್ನು ರಚಿಸುವುದರಿಂದ ಅವುಗಳ ಆಡಳಿತವು ದುರ್ಬಲವಾಗುತ್ತದೆ; ಅವು ಪ್ರಬಲವಾದ ಕೇಂದ್ರ ಸರಕಾರದ ಅಧೀನತೆಗೆ ಒಳಪಟ್ಟು, ಅದರ ಧನ ಸಹಾಯವಿಲ್ಲದೆ ಕಾರ್ಯನಿರ್ವಾಹ ಮಾಡುವುದಕ್ಕೆ ಸಮರ್ಥವಾಗುವಂತಿಲ್ಲ—ಎಂಬ ಭೀತಿಯನ್ನು ಸರಕಾರದ ಕರ್ಣಧಾರರು ಕೌನ್ಸಿಲ್ ಆಫ್ ಸ್ಟೇಟ್‌ನಲ್ಲಿ ವ್ಯಕ್ತಪಡಿಸಿದರು. ಆಳರಸರ ಈ ದೋಷಮಯ ದೃಷ್ಟಿಗಿಂತ ಭಿನ್ನವಾದ ಉದಾಹರಣೆಗಳನ್ನೆ ನಾವು ಪ್ರಪಂಚದಲ್ಲಿ ಕಾಣುವೆವು. 'ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕ'ದಲ್ಲಿ ಸಣ್ಣ ದೊಡ್ಡ ೪೮ ಪ್ರಾಂತಗಳು ಸ್ವತಂತ್ರವಾಗಿರುತ್ತವೆ. ಇವುಗಳಲ್ಲಿ ಬಲು ಚಿಕ್ಕ ಪ್ರಾಂತದ ವಿಸ್ತಾರ ೭೦ ಚದರ ಮೈಲು; ಬಲು ದೊಡ್ಡ ಪ್ರಾಂತವು ೧೫ ಲಕ್ಷ ಚದರ ಮೈಲು ವಿಸ್ತೀರ್ಣವುಳ್ಳದ್ದು. ಸ್ವಿಜರ್‌ಲೇಂಡು ದೇಶವು ೧೫೯೫೧ ಚದರ ಮೈಲು ವಿಸ್ತಾರವಾಗಿದ್ದು ೩,೫೧೫,೭೪೩ ಜನ ಸಂಖ್ಯೆಯಿಂದ ಕೂಡಿದ್ದರೂ ಭಾಷಾನುಗುಣವಾದ ೩೭ ಪ್ರಾಂತಗಳುಳ್ಳುದಾಗಿದೆ. ಪ್ರತಿಯೊಂದು ಪ್ರಾಂತವೂ ಸ್ವತಂತ್ರ! ಇವುಗಳಲ್ಲಿ ಒಂದೂ ನಮ್ಮ ಯಾವುದಾದರೂ ಎರಡು ತಾಲೂಕುಗಳಿಗಿಂತ ಹೆಚ್ಚು ವಿಸ್ತೀರ್ಣತೆಯನ್ನು ಹೊಂದಿಲ್ಲ ಅಧಿಕಾರಿಗಳು ತಮ್ಮ ಪ್ರಭುತ್ವದ ಪ್ರಭಾವವನ್ನು ತೋರ್ಪಡಿಸಿದ್ದಿದ್ದರೆ ಹೊಸ ಪ್ರಾಂತಗಳು ಹೊಸರೀತಿಯಲ್ಲಿ ಅಭಿವೃದ್ಧಿ ವಿಕಾಸವನ್ನು ಹೊಂದಬಲ್ಲವು. ಆದುದರಿಂದ ಒಂದು ಅಕ್ಷೇಪವು ನಿರಾಧಾರವೆನ್ನಲು ಇನ್ನೇನೂ ಆಧಾರಗಳು ಬೇಡ. ಎರಡನೆಯ ಆಕ್ಷೇಪಕ್ಕೆ ಸಮರ್ಪಕವಾದ ಉತ್ತರವನ್ನು ಈ ಮೊದಲೇ ಕೊಟ್ಟಿರುವೆನು. ಇನ್ನು ರಾಜಕೀಯ ಸೌಲಭ್ಯ ಮತ್ತು ಆಡಳಿತದ ಸೌಕರ್ಯದ ಕುರಿತು ಒಂದೆರಡು ಮಾತುಗಳನ್ನಷ್ಟು ಹೇಳಬೇಕಾಗಿದೆ. ನಾವು ಕನ್ನಡಿಗರು. ಸಂಖ್ಯಾಬಲದಿಂದಲೂ, ವಿದ್ಯಾ, ಸಂಸ್ಕೃತಿ, ಸಂಪತ್ತು ಮೊದಲಾದುವುಗಳ ಬಲದಿಂದಲೂ, ರಾಜ್ಯ ಭಾರವಲ್ಲಿ ಕೈಹಾಕುವುದಕ್ಕೆ ಅರ್ಹರಾಗಿದ್ದೇವೆ. ಆದರೆ ಇಂದು ಅವಕ್ಕೆ ಎಡೆಯಿಲ್ಲ. ಮುಂಬಾಯಿ, ಮದ್ರಾಸುಗಳಲ್ಲಿ ಈಗಲೆ ನಮ್ಮ ವರ್ಚಸ್ಸಿಗೆ ಭಂಗಬಂದಿದೆ. ಮುಂದೆ ಪ್ರಾಂತೀಯ ಸ್ವಾತಂತ್ರ್ಯದ ಕಾಲದಲ್ಲಿ ಕನ್ನಡಿಗರನ್ನು ಕೇಳುವವರಾರೂ ಇರಲಾರರು. ಆದುದರಿಂದ ನಮ್ಮ ಭವಿಷ್ಯವನ್ನು ಉಜ್ವಲಗೊಳಿಸುವುದಕ್ಕೆ ಯಾವ ದೃಷ್ಟಿಯಿಂದ ನೋಡಿದರೂ, ನಮ್ಮ ಪ್ರಾಂತವು ಸ್ವತಂತ್ರವಾಗಲೇ ಬೇಕು.

ನಮ್ಮ ಕರ್ತವ್ಯ

ಹಾಗಾದರೆ, ನಾವೇನು ಮಾಡಬೇಕು? ಎಂಬುದನ್ನೀಗ ವಿಚಾರಿಸೋಣ. ಇನ್ನು

ನಾರದನ ತಂಬೂರಿ

ಮಾನುಷತ್ವದ ಇದಿರು । ಲೋಕವೇ ಮಣಿಯುತಿದೆ । ಧನ-ಮಾನವೆಲ್ಲವನು ।
ತೃಣವೆನುವದು ॥ ನರನಾರಾಯಣ! ಶುಭವಾಗಲಿ ಮಾನವಳಿ-ನಮ್ಮ ಎಂಟನೇ ಎಡ್ವರ್ಡರು ಮಿಸೆಸ್ ಸಿಂಪ್ಸನಳಿಗಾಗಿ ಕಿರೀಟವನ್ನು ಬಿಟ್ಟರು—ಸಿಂಹಾಸನ ತ್ಯಾಗ ಮಾಡಿದರು. ಕಿರೀಟವನ್ನೇರಿಸಿಕೊಳ್ಳುವ ತಲೆಯೂ, ಸಿಂಹಾಸನವೇರುವ ಕಾಲುಗಳೂ ಇಪ್ಪರೂ ಹಾಗೆ ಮಾಡಲು ಅವರಿದ್ದಾಗಲಿಲ್ಲ—ಕಾರಣವಿಷ್ಟೆ! ಅವರಲ್ಲಿ ತಲೆ ಕಾಲು ಮಾತ್ರವಲ್ಲ— ಹೆಚ್ಚಿಗೆಯಾಗಿ ಒಂದು ಹೃದಯವೂ ಇತ್ತು! ನರನಾರಾಯಣ॥ ಲೋಕಕಿಂತಲು ನರಗೆ ತನ್ನ ಹೃದಯವೆ ಸಹಿಹ । ಸಹಿಹದಾ ಕರೆ ಕೇಳದಿರುವ ಮಂಟ? ॥

●

ಇಂಗ್ಲೆಂಡಿನಲ್ಲಿ ಲಿಬರಲ್—ಕನ್ಸರ್ವೇಟಿವ್ — ಲೇಬರ್— ಮೊದಲಾದ ಬೇರೆ ಬೇರೆ ಪಕ್ಷಗಳಿವೆ. ಅರಸರು ಮಾನವತ್ವವನ್ನು ಕಾಯಲು ಬದ್ಧಕಂಕಣರಾಗಿರೊಡನೆ ಈ ಎಲ್ಲಾ ಪಕ್ಷೀಯರೂ ಒಟ್ಟಾಗಿ 'ಪದ್ಧತಿಯನ್ನು ಕಾಪಾಡಲು ಸೊಂಟಕಟ್ಟಿನಿಲ್ಲುವರು! ನರನಾರಾಯಣ! ರಾಜರ ಪತ್ನಿಯಾಗುವಳು ಒಬ್ಬನ ಕೈಯಿಂದ ಇನ್ನೊಬ್ಬನ ಕೈಗೆ ಬರುವ ಪದ್ಧತಿಯಿಲ್ಲ—ರಾಜತ್ವವಾದರೂ ಒಬ್ಬರಿಂದ ಇನ್ನೊಬ್ಬರಿಗೆ ಹೋಗುವ ಪದ್ಧತಿಯಿದೆ. ಇವೆರಡರಲ್ಲಿ ಎರಡನೆಯದೇ ನಡೆದುಹೋಯಿತು! ತಿಳಿಯತಲ್ಲಾ—ಇಂಗ್ಲೆಂಡಿನಲ್ಲಿ ಅಧಿಕಾರವು ಯಾವುದರ ಕೈಯಲ್ಲಿದೆ ಎಂಬುದು? ನರನಾರಾಯಣ! ಪದ್ಧತಿಯ ಪಥದಿದಿರು ಕೈತೋರಿಸರು ಜನರು! ಬಿಳಿಯರು ಇಳಿಬಿಡದೆ ಕಾಯ್ವರದನು! ॥ ನರನಾರಾಯಣ!

●

'ನಾವು ಅಭಿವೃದ್ಧಿನರ ಹಾದಿಯನ್ನೇ ಹಿಡಿಯುವವರು' ಎಂದು ಆಂಗ್ಲೇಯರು ಯಾವಾಗಲೂ ಜೇಳುವುದುಂಟಲ್ಲ—ಅದು ನಿಜ. ನಮ್ಮಲ್ಲಿಯ ಆಶ್ರಿತ ರಾಜರು ಬಿಳಿಹುಡುಗಿಯರನ್ನು ಮದುವೆಯಾಗುವವರಲ್ಲಿ ಆತಂಕವೇನೂ ಇಲ್ಲ; ಕರಿ ಬಣ್ಣವು ಬಿಳಿಹಾಗುವದೆಂದರೆ ಅಪರ್ಯಾಪ್ತ ಅಭಿವೃದ್ಧಿಯಾಗುವದೆಂದೆ! ಎಡ್ವರ್ಡ್ ಚಕ್ರವರ್ತಿಗಳಂತಹ ತ್ಯಾಗಿಗಳು ಮಿಸೆಸ್ ಸಿಂಪ್ಸನರಂಥ ಸಾಮಾನ್ಯರನ್ನು ಮದುವೆಯಾಗುವದೆಂದರೆ ಅಪರಿಮಿತ ಅವನತಿಯಾಗುವದೆಂದೆ ಆಶ್ರಿತ ರಾಜರಾಗಲೀ ಬ್ರಿಟಿಷ ರಾಜರಾಗಲೀ ಅಭಿವೃದ್ಧಿಯ ಹಾದಿ ಹಿಡಿಯಬೇಕೆಂದೇ ಬ್ರಿಟಿಷ್ ಪದ್ಧತಿಯು ಅರ್ಥ. ಎರಡರ ಅರ್ಥವೂ ಒಂದೇ ಎಂದು ತಿಳಿಯಿತಲ್ಲ! ಮಾನುಷತ್ವದ ಮುಂದೆ ಬಡವ-ಬಲ್ಲಿದರಿಲ್ಲ! ಮಾನವರ ಕಣ್ಮುಂದೆ ಅನರ ರೂಪು!॥ ನರನಾರಾಯಣ!

●

ಪಂಡಿತ ನೆಹರುಗಳಿಗೆ ಕೊಂಗ್ರೆಸ್ ಅಧ್ಯಕ್ಷತನದ ಡಬ್ಬಲ್ ವರ್ಷವು ದೊರೆತಂತಾಯಿತು. ಇವರು ಮಿಕ್ಕ ಅಧ್ಯಕ್ಷರ ಥಬ್ಬಲ್ ಕೆಲಸಮಾಡುತ್ತಾ ಬಂದರು-ಕೊಂಗ್ರೆಸಿನವರೆಲ್ಲಾ 'ಡಬ್ಬಲ್' ಕೆಲಸಮಾಡಬೇಕೆಂದು ಬೋಧಿಸುತ್ತಾ ಬಂದರು. ಇವರ ಬುದ್ಧಿವಾದವನ್ನು ಕೊಂಗ್ರೆಸಿನವರು ಕಲ್ಲಿತರೆಂಬುದಕ್ಕೆ ದೃಷ್ಟಾಂತ ದೊರೆಯಿತು-ಕೊಂಗ್ರೆಸಿನ ಅಧ್ಯಕ್ಷರ ಕಾಲವನ್ನೆ 'ಡಬ್ಬಲ್'ಮಾಡಿಬಿಟ್ಟರು. ಪಂಡಿತ ನೆಹರುಗಳಿಗೆ 'ಇನ್ನೊಮ್ಮೆ (once more) ಪ್ಲಾಕೆಬಿಟ್ಟರು. ಜೇ ಕಾವ್ಯಸಾಹಸವ್ವು, ನೆಹರುಗಾಪ ಸಿಹಿಹಾಡು! ಒಮ್ಮೆಗೇ ಮುಗಿದವೇ ಜನರ ನಡುವೆ? ! ನರನಾರಾಯಣ!

●

ಪಂಡಿತ ಜವಾಹರಲಾಲರು ಕಾಯದೇ ಮಂಡಲಗಳ ಕೊಂಗ್ರೆಸ್ಸು ಉಮೇದ್ವಾರರಿಗೆ ಹೇಳುತ್ತಾರೆ. "ನಿಮ್ಮ ಗೌರವಕ್ಕಿಂತಲೂ ಜವಾಬ್ದಾರಿ ಹೆಚ್ಚಿನದು" ಗೌರವಕ್ಕಾಗಿಯೇ ರಣ ರಂಗಕ್ಕೆ ಳಿದವರಿದ್ದರೆ ತಂಧವರಿಗೆ ತುಸು ಬೇಸರಕೊಡುವ ಮಾತಿದು. ಪಂಡಿತರ ಆ ವಾಕ್ಯವು ಸಂಪೂರ್ಣವಾಗಿಲ್ಲ. ಅದರ ಉತ್ತರಾರ್ಧವು ಹೀಗಿದೆ. "ಜವಾಬ್ದಾರಿಯೇ ಹೆಚ್ಚಿನದೆಂದು ತಿಳಿಕೊಂಡು ಕೆಲಸ ಮಾಡಿದರೆ, ಆ ಜವಾಬ್ದಾರಿಯೇ ನಿಮಗೆ ಅತಿ ಹೆಚ್ಚಿನ ಗೌರವವನ್ನು ತಂದು ಕೊಡುವದು." ಜವಾಹರರ ಮಾತು ಒಂದು ಸುತ್ತಾಗಿ ಮೊದಲಿನ ನೆಲೆಗೇ ಬರುತ್ತದೆ ನೋಡಿ! ಭೂಮಿಯು ಮಾತ್ರವಲ್ಲ, ಭೂಮಿಯೊಳಗಿನ ಎಲ್ಲಾ ವಿಷಯಗಳೂ ಹೀಗೆಯೇ ಸುತ್ತುತ್ತಿರುವುದು! ಯಶ ಮತ್ತು ಗೌರವವು ನಮ್ಮ ಕೆಲಸದ ನೆರಳು; । ರೂಪು ಕೆಟ್ಟಿರೆ, ನೆರಳು ಕೆಡದಿರುವುದೇ? ॥ ನರನಾರಾಯಣ.

●

ಕೋನೆಮ್ಬ್ರಾ ಎಮ್. ಎನ್. ರಾಯ್ ಗಳು ಜೈಲಿನಿಂದ ಹೊರ ಬಂದ ಮೇಲೆ ಅತ್ಯಂತ ಜಾಣ್ಮೆಯಿಂದ ಪರಿಸ್ಥಿತಿಯ ಪರಿಶೀಲನೆಗಳಿದಿದ್ದಾರೆ. ಸಮತಾವಾದಿಗಳ ಪ್ರತ್ಯೇಕ ಪಕ್ಷ, ಮಂತ್ರಿ ಸಂಪದಸ್ವೀಕಾರ, ಥೈತರ ಹಾಗೂ ಕೂಲಿಗಾರರ ಸಂಘ ಸ್ಥಾಪನ ಇವುಗಳಲ್ಲೆಲ್ಲಾ ಇವರು ಸಮತಾವಾದಿಗಳಿಗೆ ಅಜ್ಞೊಂದು ಅನುಕೂಲವಾಗಿಲ್ಲ. ಆದರೆ ಸಮತಾವಾದಿಗಳಿಗೆ 'ಅಜ್ಞಾನಿಗಳ ಕೂಡೆ ಅಧಿಕ ಸ್ನೇಹಕ್ಕಿಂತ ಸುಜ್ಞಾನಿಗಳ ಕೂಡೆ ಸ್ನೇಹವೇ ಬೇಕು' ಎಂಬಂತಾಗಿದೆ. 'ರೋಯ್' ಎಂಬೊಡನೆನೆ 'ಆಯ್' ಅನ್ನುವ ಆಪ್ರಾಗತಿಕರು ತೃಪ್ತಿಗೊಂಡಿಲ್ಲ. ಅವರಿಗೆ ಈಗಿನ ಪರಿಸ್ಥಿತಿಯಲ್ಲಯೇ ಬೇಕಾದಷ್ಟು ತೃಪ್ತಿಯಿರುವಾಗ, ಬೇರೆ ತೃಪ್ತಿಯಾದರೂ ಇನ್ನೆಲ್ಲಿಕೆ ಬೇಕು? ಪರಿಸ್ಥಿತಿಗೆ ಮರೆಯಾಗಿ ಎದೆಯು ತೆಗೆದಿಟ್ಟಿಲ್ಲಿ । ತೃಪ್ತಿಯಲ್ಲಿಗೂ ಧಾವಿಸುವದೆ? ॥ ನರ ನಾರಾಯಣ.

●

ವಿಚಾರಣೆಯಿಲ್ಲದೆ ಕೆಲವರನ್ನು ಬಂಧಿಸಿರುವದು ಸರಿಯಲ್ಲವೆಂದು ಕೊಂಗ್ರೆಸ್ ವರ್ಕಿಂಗ್ ಕಮಿಟಿಯು ಸಾರುತ್ತದೆ. ಒಳಗಿಂದೊಳಗೆ ಹಂಚಿಕೆ ನಡಿಸಿದವರ ಗುಟ್ಟನ್ನು ಬಯಲು ಮಾಡುವದೇ ಮುಖ್ಯ. ಅವರು ಮಾಡಿದುದೂ ಗುಟ್ಟು; ಇವರದಕ್ಕೆ ಮಾಡಿದುದೂ ಗುಟ್ಟೇ ಎಂದಾದರೆ ನಿಜವಾದ ಗುಟ್ಟು ಯಾರದೆಂಬುದು ಹೇಗೆ ಗೊತ್ತಾಗಬೇಕಣ್ಣಾ! ಹಂಚಿಕೆಯ ಹೊರ ಹಾಕಿ ಜೆಳ್ಳಿಕೆಗೊಡ್ಡಿದ ಮೇಲೆ । ನ್ಯಾಯ ನೀತಿಯ ರೂಪು ತೋರದಿಹುದೆ? ॥ ನರನಾರಾಯಣ!

—ನಾರದ.

ಸ್ವಯಂಸೇವಕರು ಬೇಕು

ಬರುವ ಮದ್ರಾಸ್ ಕಾಯದೇ ಮಂಡಲಗಳ ಚುನಾವಣೆಗಾಗಿ, ಉಡುಪಿ ತಾಲೂಕಿನಲ್ಲಿ ಕೊಂಗ್ರೆಸ್ ಪ್ರಚಾರವನ್ನು ಮಾಡಬಲ್ಲ ಅನುಭವ, ಉತ್ಸಾಹ, ಶಿಸ್ತು ಇರುವ ಸ್ವಯಂಸೇವಕರು ಬೇಕಾಗಿದ್ದಾರೆ. ಸ್ವಯಂಸೇವಕರಾಗಲೆಚ್ಛಿಸುವವರು ಕೂಡಲೇ ಕೆಳಗಿನ ವಿಳಾಸಕ್ಕೆ ಬರೆಯಬೇಕು.

ಕಾರ್ಯದರ್ಶಿ,
ತಾಲೂಕು ಕೊಂಗ್ರೆಸ್ ಕಮಿಟಿ, ಉಡುಪಿ

ವಿದ್ಯಾದಾನಕ್ಕೆ ಪ್ರೋತ್ಸಾಹಿಸಿರಿ !
ಹಿಂದೂ ವಿದ್ಯಾದಾಯಿನೀ ಸಂಘದವರು ತಮ್ಮ ಆಡಳ್ತೆಯೊಳಗಿರುವ
" ಇಡ್ಯ ವಿದ್ಯಾದಾಯಿನೀ ಶಾಲೆ " ಮತ್ತು
ಹೊಸದಾಗಿ ಸ್ಥಾಪಿಸಲಿರುವ ' ಅನಾಥಾಲಯ '
ಇವುಗಳ ಸಹಾಯಾರ್ಥವಾಗಿ ಏರ್ಪಡಿಸಿರುವ
ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ
ತೆಗೆಯುವ ತಾರೀಕು: 17-1-1937.
ಸೋಡ್ತಿಯು ಮೊಬಲಗು ರೂ. 50,000.
1ನೇ ಇನಾಂ 8,000, 2ನೇ ಇನಾಂ 2,000
ಜುಮ್ಲಾ ಇನಾಮು 1,000, ಇನಾಮುಗಳ ಜುಮ್ಲಾ ಮೌಲ್ಯ 20,125
--- ಟಿಕೇಟು 1ರ ನಾಲ್ಕಾಣೆ ಮಾತ್ರ ---
10 ಟಿಕೇಟುಗಳಿರುವ 1 ಪುಸ್ತಕದ ಬೆಲೆ ರೂ 4—0—0. ಎರಡು ಪುಸ್ತಕಗಳ ಬೆಲೆ ರೂ. 7—8—0. ಸೈಕಲ್ ಬಹುಮಾನಗಳೂ ಇವೆ.
ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯುವುದು.
ಮೆನೇಜರ್: ಗ್ರ್ಯಾಂಡ್ ವಿದ್ಯಾದಾಯಿನೀ ಸೋಡ್ತಿ, ಸುರತ್ಕಲ್, (ದ. ಕ.)

ನವಯುಗಕ್ಕೆ ಇಂದೇ ಚಂದಾದಾರರಾಗಿರಿ!

ಸಿದ್ಧವಾಗಿದೆ! ಸಿದ್ಧವಾಗಿದೆ!!
ಪಂಡಿತ ಜವಹರಲಾಲರ ಆತ್ಮಕಥೆ
ಕನ್ನಡ ಭಾಷಾಂತರ: ನವಜೀವನ ಕನ್ನಡ ಗುಂಪಿನಿಂದ
ಒಂದನೆಯ ಸಂಪುಟ ಸಿದ್ಧವಾಗಿದೆ.
ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.
ಟಪ್ಪಾಲು ಖರ್ಚು ಪ್ರತ್ಯೇಕ.
ಅತ್ಯುತ್ತಮ ಪ್ರತಿ .... ರೂ. ೧೮ ೦ ೦
ವಾಜನಾಲಯ ಪ್ರತಿ .... ,, ೭ ೦ ೦
ಸಾನಾನ್ಯ ಪ್ರತಿ .... ,, ೫ ೦ ೦
ಡಿಸೆಂಬರ್ ತಿಂಗಳೊಳಗಾಗಿ
ಹಣ ಕಳುಹಿಸುವವರಿಗೆ ಟಪ್ಪಾಲು ಖರ್ಚು ಮುಫತ್ತು.
ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.
ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.
ಸ್ವಾಧಿಕಾರಿ:—"ನವಜೀವನ" ಮತ್ತು "ಮುಕ್ಕಳ ಪುಸ್ತಕ"
ಬಳೇಪೇಟೆ, ಬೆಂಗಳೂರು ಸಿಟಿ.

OUR CINEMA PAGE | REVIEWS | SAMSARA NOWKA A DEVI FILMS KANNADA TALKIE | BY MASTER VENKANNA

ನನ್ನ ಸಿನೆಮಾ ಪುಟ

ಕಳೆದ ಸಂಚಿಕೆಯಿಂದ ಮುಂದರಿಸಿದ್ದು.

ಚಿತ್ರದಲ್ಲಿನ ಹೊಲಸನ್ನೆಲ್ಲಾ ಆರಂಭದಿಂದ ಕೊನೆಯ ತನಕ ಎತ್ತಿ ಹೇಳುವೆ. ಚಿತ್ರವನ್ನು ಕಂಡವರು ನೆನಪುಮಾಡಿಕೊಳ್ಳಲಿ—ನೋಡುವವರು ತುಲನೆಮಾಡಲಿ.

ಬಾಲ ವಿಧವೆ ಜನಂದದಿಂದ ಹಾಡುತ್ತಿದ್ದಾಗ ಆದೇನೋ ನ್ಯೂ ಥಿಯೇಟ್ರಿನವರ "ಮಿಲಿಯನೇರ್" ಚಿತ್ರದಲ್ಲಿನ ಒಂದು ದೃಶ್ಯದ ಅಣಕಾಟದಂತೆ ಕಾಣಿಸುತ್ತಿದೆಯಲ್ಲ! ಕಾಗೆಗೆ ನವಿಲಿನ ಗರಿಯನ್ನು ಕಟ್ಟಿ ನರ್ತನ ಮಾಡಿಸಿದ ಸಿಂಹರ ಮತ್ತು ಜಿಟ್ಟಿಯಾರರ ಸಾಹಸವನ್ನೆ ಬಹುದು. ದುಃಖದಿಂದ ಇದ್ದ ಸುಶೀಲೆಯ ಕಡೆಗೆ ಬರುವ ಮೊದಲು ಮಾಧು ಆಜೆಯ ಕೋಣೆಯಲ್ಲಿ ಏನೋ ಮಾಡುತ್ತಿದ್ದನಲ್ಲ, ಅದೇನು, ಮತ್ತು ಯಾರ ಅಪೇಕ್ಷೆಗಾಗಿ ಕಾದಿದ್ದ?—ಸುಂದರ ಸರಳೆಯರ ಪ್ರೇಮ ಸಲ್ಲಾಪವ ದೇಕೆ ನಿಂತೇ ನಡೆಯಿತು? ಕುಳಿತರೆ ಆಪ್ರಣಯಭರಿತ ಸುಧೆಯೂ ಹರಿಯದೇ? ಪ್ರೇಮ ಸಲ್ಲಾಪಗಳು ಹೇಗಾಗುವವೆಂದು ನನಗಿನ್ನೂ ಅರಿವಿಲ್ಲವಾದರೂ ನಿಂತುಕೊಂಡು ಆಗದೆಂಬ ಅರಿವು. ಬಡತನ- ಬಡತನ-ಎಂದು ದುಃಖಿಸಿದ ಪ್ರಾಣಿಗಳಿಗೆ ಆಗ ಹಾಡನ್ನು ಹಾಡಲು ಮನಸ್ಸು ಬಂತೆ? ಬಡತನವು ಆನಂದವೇ?- ಇನ್ನು 'ಮೂರು ವರ್ಷಗಳ ನಂತರ'-ಬಡತನವು ಸುಂದರ ಸರಳೆಯರನ್ನು ಸುಟ್ಟಿತು. ಮಗುವೊಂದು ಅಜ್ಜೀ ಹರುಕು ಕೋಣೆಯಲ್ಲಿ ಮಲಗಿತ್ತು. ಕೂಗುತ್ತಿರುವುದೂ ಕೇಳಿಸುತ್ತಿತ್ತು—ದುಃಖದಿಂದ ಸರಳೆ ನೇಣು ಹಾಕಿಕೊಳ್ಳಲು ತಯಾರಾಗುವಳು. ಆಗ ಬದಿಯ ಒಂದು ಬಾಗಿಲಿನ ಮೇಲೆ ಒಂದು ಮನುಷ್ಯ ಪ್ರಾಣಿಯ ನೆರಳು ಕಾಣಿಸುವುದು ಬಹುಶಃ ಜಿಟ್ಟಿಯಾರರದೇ ಇರಬೇಕಲು. ಇತರರಿಗೆ ಹಾಗೆ ಚಿತ್ರ ತೆಗೆಯುತ್ತಿರುವಾಗ ನಿಂತುಕೊಳ್ಳುವ ಧೈರ್ಯಬಾರದು. ಅವೂ ಅಲ್ಲದೆ ದೇಹವಿರದ ತಲೆ ಮಾತ್ರ ಇದ್ದುದು ಇನ್ನೊಂದು ಆಧಾರ. ಸಿಂಹರು—ಆಗಿರಲಿಕ್ಕೆ ಸಾಧ್ಯವೇ ಇಲ್ಲ. ಕಾರಣ ಅವರು ಕೆಮರಾದ ಹಿಂದೆ ನಿಂತುಕೊಂಡು ಸರಳೆ ಸಾಯುವದನ್ನು ನೋಡುವ ಕುತೂಹಲದಿಂದ ಆವಳ ಮುಖಕ್ಕೆ ದೀಪ (Torch) ಟಾರ್ಚ್ ಹಾಕುತ್ತಿದ್ದರು. ಸುಂದರ ಸರಳೆಯರ ಭಾಷಣವು ಉತ್ತಮವಿದ್ದಿತು. ಅಷ್ಟರಲ್ಲಿ ಸ್ನಾನ ಮುಗಿಸಿ ಮನೆಯ ಕಡೆಗೆ ಬಂದ 'ದೊಷ್ಟಮ್ಮ' ಇವರ ಭಾಷಣವಾಗಲೆಂದು ಹೊರಗೇ ಕೊಂಚ ಹೊತ್ತು ನಿಂತಿದ್ದು ಆ ಮೇಲೆ ಒಳಗೆ ಬಂದಳು. ಒಟ್ಟಿನಲ್ಲಿ ಎಲ್ಲರ ಭಾಷಣವೂ ಉತ್ತಮವಿತ್ತೆಂದು ಹೇಳಿದ ಮೇಲೆ ಸಟರ ಭಾಷಣವ ಕುರಿತು ಹೇಳಲಾರೆ. ಅಂತೂ ಅವರಲ್ಲಿ ಯಾರ ಭಾಷಣ ಉತ್ತಮವೆನ್ನುವುದೇ ಕಠಿನ ಸಮಸ್ಯೆಯಾಗಿದೆ.—ಆಚಾರಿ ಮಗಳ ಮದುವೆಯ ಕುರಿತಾಗಿ ಸ್ವಸ್ತಾಪವಾಗಿದ್ದಾಗ ಆಚಾರಿಯೊಡನೆ ಆಕೆ ಹೇಳಿದ ಮಾತು ಉತ್ತಮ ಭಾಷಣವಾಗಿತ್ತು. ಅದನ್ನೆಕೆ ನನ್ನೊಡನೆ (ಅಂದರೆ ಕೆಮರಾಕ್ಕೆ ನೋಡಿ) ಹೇಳಿದ್ದೇ ಹೊರತು ಆಚಾರಿಯೊಡನೆ ಹೇಳಲಿಲ್ಲ. ಸಂಗೀತ ಭಯಂಕರವಾಗಿತ್ತು. ಮಾತು ನುಡಿಯುವಾಗ ಅಕ್ಷರ ಶಬ್ದಗಳನ್ನು ಕಚ್ಚಿ ಕಚ್ಚಿ ಮಾತನಾಡಲು ಕೊಚ್ಚಿಕೊಳ್ಳುವದೇ ಕೊಚ್ಚಿಕೊಳ್ಳುವದಾಗಿ ವರಿಣಮಿಸುತ್ತಿತ್ತು. ಆಕೆಯ ಭಾಷಣಗಳನ್ನು ಕೇಳಿದವರಿಗೆ ಈಕೆ ಅಬಲೆಯೆಂಬ ಯೋಚನೆಯೇ ಬರುತ್ತಿದ್ದಿಲ್ಲವಾದರೂ ಆಕೆ ಮದುವೆಗೆ ಸಮ್ಮತಿ ಇತ್ತಳಂತೆ. ಅದಿರಲಿ ಮುಂದೆ ನೋಜೋಣ-ನರಳೆ ಸುಂದರರ ಮಾತುಕತೆಗಳೆಲ್ಲಾ ಅವೇಕೋ ಅನೈಜ-ಅಣಕಾಟ-ಕೃತಕ ಸುಡಿಗಳಂತೆ ಕಾಣುತ್ತಿವೆ. ಅವರು ತಾವು ರಂಗಭೂಮಿಯ ಮೇಲೆ ನಿಂತು (ಕುಳಿತಿರಲಿಲ್ಲ) ಭಾಷಣವನ್ನು ಮಾಡುತ್ತಿದ್ದೇವೆ—ವಾಚಾಲತೆ ತೋರಿಸುತ್ತಿದ್ದೇವೆ ಎಂದು ತಿಳಿದಿದ್ದುದೇ ಇದಕ್ಕೆ ಕಾರಣವಿರಬೇಕು. ಮಗುವೊಂದನ್ನು ಸಿಂಹರು ಮಲಗಿರುವಾಗಲೇ ಅಪಹರಿಸಿ ಅಮಲು ಪದಾರ್ಥ ಕುಡಿಸಿಯೋ ತಂದು ಚಿತ್ರವನ್ನು ತೆಗೆದಂತಿವೆ.

ದೊಷ್ಟಮ್ಮನಂತಹ ಒಂದು ವ್ಯಕ್ತಿಯ ಪೈಗೆ ಐನೆಯ ಶತಮಾನದ ಪ್ರಾಣಗಳೆರಡು ಬಲಿಬಿದ್ದು ಕಪ್ಪಕಡುತ್ತಿರುವುದು ಅವೇಕೋ ಅವ್ಯಬುದ್ಧವಾಗಿದೆ. ಸಿಂಹರ ಕೆಮರಾ ಮ್ಯಾನರು ವಾರ್ತಿನ ಚಿತ್ರಕೆಗೆಯಲು ಬಹಳ ಶ್ರಮವಪಟ್ಟಿರುವಂತೆ ಪಾಪ! ಇಂತಹ ಪಾರ್ಟಿನಲ್ಲಿ ಉರಿಯುವ ಬಿಸಿಲಲ್ಲಿ ಸುಂದರನು ಪ್ರಖ್ಯಾತ ಭಾಷಣನೀಯಂತೆ ನಾಡಿರುವರು. ಇನ್ನೊಂದೆಡೆಯಲ್ಲಿ ಸಿಂಹರಂತಪರೇ ಆಚಾರ್ಯರೆಂಬಂತೆಯೂ ಶ್ರೀಯುತರು, ಜಮೀನ್‌ದಾರರ ಮನೆಯಲ್ಲೇ ಹಲವು ಕಾಲದಿಂದಿದ್ದ ಆಚಾರ್ಯರು ಸ್ತ್ರೀನೇಷಧಾರಿಗಳಾದ ದಿಕ್ಕಿಲ್ಲದ ಸುತ್ತು ಮಾಧವನ್ನು ಗುರುತಿಸದಂತೆ ಮಾಡಿರುವರು.

ಒಟ್ಟಿನಲ್ಲಿ ಹೇಳುವುದಿದ್ದರೆ ಇಂತಹ ನಾಟಕಗಳು ಚಲನಚಿತ್ರ ಪ್ರಪಂಚವನ್ನು ಪ್ರವೇಶಿಸುವ ಮಾತಂತಿರಲಿ ರಂಗಭೂಮಿಗೆ ಕೂಡಾ ಬರಕ್ಕೆ ಯೋಗ್ಯತೆ ಉಳ್ಳವುಗಳಲ್ಲ.

ಅಂತೂ ಚಿತ್ರವು ಈ ವರೆಗಿನ ಕನ್ನಡ ಚಿತ್ರಗಳಿಗಿಂತ ಉತ್ತಮವಿದ್ದೆ ದಕ್ಕೂ, ಸಿಂಹರ ಜಾಣ್ಮೆರಾತಿನ ಮಹಾ ಸಾಹಸಕ್ಕೂ ಇಷ್ಟಾದರೂ ಉತ್ತಮ ಚಿತ್ರವನ್ನು ನಾಡಿಗರಿಗಿತ್ತುದಕ್ಕೂ ನಾನು ನಾಡಿಗರಲ್ಲೊಬ್ಬನಾಗಿ ಅಭಿನಂದಿಸುತ್ತೇನೆ.

ಕನ್ನಡನಾಡಿಗೆ ಕನ್ನಡ ಚಿತ್ರಗಳು ಬೇಕಾಗಿವೆ. ಆದರೆ ಇಂತಹವು ಇನ್ನು ಬೇಡ!

'ಸೂಜಿ'

ಸಂಸಾರ ನೌಕ ವಿಮರ್ಶೆ

ಸ್ವೀಕಾರ ವಿಮರ್ಶೆ

'ಬ್ರಿಟಿಷ್ ಸಾಮ್ರಾಜ್ಯ ಕಾಹಿ ಮತ್ತು ಹಿಂದುಸ್ಥಾನ'

ಶ್ರೀಯುತ ಎಮ್. ಎನ್. ಚಂಡೂರರಿಂದ ರಚಿಸಲ್ಪಟ್ಟ ಎರಡಾಣೆ ಬೆಲೆಯ ಚಿಕ್ಕ ಪುಸ್ತಕವಿದು ಮಹತ್ವದ ಸಂಗತಿಗಳನ್ನೊಳಗೊಂಡಿದೆ. ಬ್ರಿಟಿಷರು ಹಿಂದುಸ್ಥಾನವನ್ನು ಆಳಲಾರಂಭಿಸಿದಂದಿನಿಂದ ಈ ತನಕವೂ ಅನುಸರಿಸಿಕೊಂಡು ಬಂದ ಧೋರಣೆಯ ಪರಿಚಯವಿದೆ. ಹಿಂದುಸ್ಥಾನದಲ್ಲಿ ಉದ್ಯೋಗ ಮತ್ತು ವ್ಯಾಪಾರಕ್ಕಿರುವ ಅನುಕೂಲತೆ- ಆ ಅನುಕೂಲತೆಯು ಬ್ರಿಟಿಷರಿಂದ ಸಾಮ್ರಾಜ್ಯ ಶಾಹಿಯನ್ನು ಬಲಪಡಿಸಲು ಉಪಯೋಗಿಸಲ್ಪಟ್ಟ ರೀತಿ, ಹಿಂದುಸ್ಥಾನ ಮತ್ತು ಇತರ ದೇಶಗಳಿಗಿರುವ ತಾರತಮ್ಯ- ಇವೆಲ್ಲಾ ಆಧಾರ ಸಮೇತ ತೋರಿಸಲ್ಪಟ್ಟಿವೆ. ಭಂಡವಾಳಗಾರರು ವಿಶಾಲ ಧೋರಣೆಯನ್ನು ಹಿಡಿದರೆ ಅವರ ಅಭಿವೃದ್ಧಿಗೆ ಎಂತಹ ಉತ್ತಮ ಹಾದಿಯಿರುವ ದೆಂಬುದನ್ನು. ಅವರೀ ವಿಚಾರಕ್ಕೆ ಹೋಗದೆ ಹೇಗೆ ಮಸಲಾಯಿಸಲ್ಪಟ್ಟ ಶ್ರಮ ಜೀವಿಗಳ ದುಡಿತದ ಒಂದಂಶವನ್ನು ಹೊಂಚಿ, ಬಹುಭಾಗವನ್ನು ಹೊರಹೋಗಲು ಬಿಟ್ಟು ದೇಶವನ್ನು ದಾರಿದ್ರ್ಯಕ್ಕೆಡೆ ಮಾಡಿರುವ ರೆಂಬುದನ್ನೂ ಈ ಪುಸ್ತಕದಲ್ಲಿ ಸಕಾರಣವಾಗಿ ತೋರಿಸಿದೆ. ಕನ್ನಡ ಸಾಹಿತ್ಯದಲ್ಲಿ ಬಹು ವಿರಳವಾಗಿರುವ ಇಂತಹ ಪುಸ್ತಕಗಳು ಹೆಚ್ಚು ಸಂಖ್ಯೆಯಿಂದ ಹೊರ ಬೀಳುವ ಆವಶ್ಯಕತೆಯಿದೆ.

ಬಾಲವಾಜ್ಮಯದ
ಆವಶ್ಯಕತೆ ಮತ್ತು ನಿರ್ಮಾಣದ
ವಿಷಯಕವಾದ ಪ್ರಬಂಧ
ಬಾಲವಾಜ್ಮಯ
ಬೆಲೆ ಮೂರಾಣೆ
ಉಪಾಧ್ಯಾಯರ ಪ್ರಕಟನ ಸಮಿತಿ,
ಉಡುಪಿ

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ
ಜಗತ್ಪ್ರಸಿದ್ಧ

"ಗೊನೊಕಿಲರ್"
(ರಿಜಿಸ್ಟರ್ಡ್)

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಅಪ್ರತಿಮ ವಿಜ್ಞಾನ ಅಂಗ್ಲೇಯ ಮತ್ತು ಆಯುರ್ವೇದ ವಿದ್ಯಾಗಣಿಗಳೊಂದಾ ಸಲಕಾರಿಯಾಗಿದೆ ಇನ್‌ಜೆಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನನ್ನ **ಗೊನೊಕಿಲರ್** ಎಂಬ ವಿಷಧವನ್ನು ಉಪಯೋಗಿಸಿನೋಡಿರಿ. ಎಷ್ಟೇ ದೀರ್ಘಕಾಲದಿಂದ ಅನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೊನೊಕಿಲ್ಲರ್, ಸ್ತ್ರೀಪ್ರಮೇಹ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳಿಗೆ ಬಾತುವಿಕೆ, ಸರ್ವಪ್ರಕಾರವ ಪ್ರಮೇಹ (ಎಸ್ಟೇ ಹಳತು ಯಾ ಯಾವತೇ ಸ್ಥಿತಿಯಲ್ಲಿರಲಿ), ಸೊಪ, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಧಾತುಸ್ರಾವ, ಬೀಳಿಸ್ಥ ಪರಿಯಂತ ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩—೧—೦ (ಮೂರು) ಎ. ಪಿ. ಥರ್ಡ್ ಪೇ ತಯಾರಿಸುವ ಏಕಮಾತ್ರರು: ಡಾಕ್ಟರ್ ಡಿ. ಎನ್. ಜಸಾನಿ, ಗಿರಗಾಂವ ಬ್ಯಾಕ್ ರೋಡ್, ಮುಂಬಯಿ ೪.

Sole Manufacturer. Dr. D. N. JASANI, GIRGAUM BACK ROAD BOMBAY 4.



ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ. ಕೊಂಡು ಕೊಳ್ಳುವಿಕೆಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ.

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ಕರಿಯ ರಂಗಪ್ಪ ಬೆಳೆ ಪಣ್ಣೆರಡಾಣೆ

ಉಡುಪಿ

ವಿಶ್ವಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
೬೮ ಸವಿಗವನಗಳ ಸಂಗ್ರಹ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ತರನೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ', ಎಂಬ ಮಾನ್ಯ ಣಗ ಮಾತ್ರವಾಗಿ ಉಲ್ಲೇಖವಕಾಶವಲ್ಲಿಯೇ ದ್ವಿತೀಯಾವೃತ್ತಿಯನ್ನು ಹೊಂದಿದ ಗ್ರಂಥ' ಬಾಹ್ಯಾಂಗವು ನಯನಮನೋಹರವಾಗಿದ ಅಂತರಂಗವು ಜೇತೋವಹಾರಿಯಾಗಿದ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮನೇಜರ್---'ನವಯುಗ',
ಉ ಡು ಪಿ .



ಗೃಹಕೃತ್ಯಕ್ಕೆ ಬೇಕಾದ ವಿಧವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಕಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ಸಮಾನೆಯು ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಕಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ ಮಲಯಾಳದ

ಸ್ತನೋತ್ತೇಧಃ

THE MALAYALA STHANO STHEDAH OUSHADHA CO., Post-CHALAPURAM MALABAR.

ರಹಸ್ಯಗಳು

ಇದೀಗ ವೇದವಾಯಿತೆ, ಪುರುಷರನ್ನಾದರು ಆಕರ್ಷಿಸ ಪ್ರಯತ್ನವಿದನ್ನು ಸ್ತ್ರೀಯರಿಗೆ ಒಳ್ಳಲು ಸೀಸ್ತ ಪುರುಷನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯು ನುಬಂದಿಂದ ಇಳಗೆ ಕುಬ್ಜಳಕ್ಕೆ ಚಲಿಸಿ ಕುಚಗಳು ಉನ್ನತವಾಗಿ, ದೃಢವಾಗಿ ಆಕರ್ಷಕವಾಗಿರುವವೋ ಎಂದು ನೋಡುವವು

೫೬ ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.



ಪ್ರಖ್ಯಾತ ಮಲಯಾಳಿ ರಹಸ್ಯ ಸ್ತನಸ್ಥೆಡೆ:-ಅಭ್ಯಸ್ಥ, ಬಂತಿ, ಪ್ರಾಯ ಆಗಾಗಿನ ಹಿರಿಗೆ ನಿಮಿತ್ತ ಸ್ತ್ರೀಯರ ಎದೆಯ ಅಳಕಶಕ್ತಿಯ ನಷ್ಟವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಜಪ್ಪುಟಿಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಆಳವಾಗಿ ಏನು ತೋರ್ಪಡದೆ, ಸರಿಯಾದ ಮಬಲವಿಲ್ಲದಿದ್ದು ಕುಚಗಳನ್ನು ಸ್ಥಿರವಾಗಿ ದೃಢಪಡಿಸಲಾರವಾಧರೆ

ದಿ ಮಲಯಾಳಿ ಔಷಧ ಕಂಪೆನಿ, ಫಲಪುರಮ್ ಇವರು ನಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವೆನು, ಬಿಟ್ಟುಕೊಂಡಿದ್ದು ನಿರೀಕ್ಷೆಯಾಗಿ ಜಪ್ಪ ಚಿಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವುದು, ಟೊಳ್ಳಕೆಯವು ತುಂಬಿ ಬರುವಡು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ಮುಂದಗಾಲಿಯೂ ಮಾಡಲ್ಪಡುವುದು ಸಡಿಲಾಗಿರುವಮಾಂಸವು ಸ್ಥಿರವಾಗಲ್ಪಡುವುದು ಮತ್ತು ಕುಚಗಳು ಯೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು ನಮ್ಮ ಸೌಂದರ್ಯಕ್ಕೆ ಪ್ರಸಿದ್ಧ ಹೊಂದಿರುವ ಮಲಯಾಳಿ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಯಶೀಲವಾಗಿ ನಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವು

"ಸ್ಥನಸ್ಥೆಜ ನಂಬ್ರ ೫೦—ಗೆ ತಗದುಕೊಳ್ಳುವುದಕ್ಕೆ ನಂಬ್ರ ರೂ. ೨. ನಂಬ್ರ ೫೧ ಹೊರಗಣ ಉಪಯೋಗಕ್ಕೆ ರೂ. ೨. ಧರ್ಮಾರ್ಥ ಕಳುಹಿಸಲ್ಪಡುವ ಬಟಲಾಗಿಗೆ ದಯಮಾಡಿ ಬರಕೊಳ್ಳಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಫಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟ್ಟುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕೈಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಪತ್ರವ್ಯವಹಾರ

(ಜಾಹ್ನಿದಾರರು ತಮ್ಮ ಕಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿತೆ. ಬರಹಗಳು ಅಡಕ್ಷರ ಸಂಕ್ಷೇಪವಿದ್ದು, ಕಾಗದದ ಒಂದೇ ಮಗ್ಗುಲಲ್ಲಿ, ಶಾಯಿಯಿಂದ ಬರೆಯಲ್ಪಟ್ಟು ಪ್ರಕಟಣಾರ್ಹವಾಗಿರಬೇಕು. ಬ್ರಹ್ಮದಾರರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ.)

ಸಂ. ನ

ಓಟರರೇ! ಎಚ್ಚರಿಕೆ!

ನಮ್ಮ ದೇಶದ ಸ್ವಾತಂತ್ರ್ಯ ಸವಿಗರಲ್ಲಿ ಕೌನ್ಸಿಲು ಪ್ರತಿನಿಧಿಯು ಅನಿವಾರ್ಯವೆಂದು ಕಾಂಗ್ರೆಸು ನಿಶ್ಚಯಿಸಿ, ಇಂದು ಈ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳುವುದು ನಮ್ಮ ಜನ್ಮಿಯ ಕೆಲವು ವೃತ್ತ ಪತ್ರಗಳು ಈಗಿಂದೀಗಲೇ ಕಾಂಗ್ರೆಸು ಉಮೇದ್ವಾರರ ವಿಷಯ ಆಲ್ಲ ಸಲ್ಲದ ಆರೋಪಗಳನ್ನು ಹಾಕುತ್ತ, ಟೀಕಿಸಲುಸ್ಯುತ್ತಿರುವುದು ತುಂಬಾ ವಿಷಾದಕರ. ಟೀಕಿಸುವ ಭರದಲ್ಲಿ ಶ್ರೀಯುತ ಕಾರಂತ, ನಿವರಾಯರನ್ನು ಕೊಡಾ ಟೀಕಿಸುವುದಕ್ಕೆ ಹಿಂಜರಿಯಲಿಲ್ಲ. ಇದು ಏತಕ್ಕೆ? ಇವರೀರ್ವರೂ ನಮ್ಮ ಜಿಲ್ಲೆಯ ಹಿರಿಕ್ಕಿಗಿ ಹೆಣಾಡುವವರಲ್ಲವೇ? ರೈತರ ಗೋಳುಂಟುಯಿತು? ಅವರ ಪರಿಹಾರಕ್ಕೆ ಇವರೀರ್ವರೇ ಬೇಕು ಕೊಳಿ ಕೋಗ ಪಟ್ಟಿತು; ಸೂಪರ್ ದೊರೆಗಳಿಂದಿನೆ ಆರಿಕೆವಾಡಿಕೊಳ್ಳಲು ಇವರೀರ್ವರೇ ಬೇತಾದರು ಆಂಧವರು ಕಾಂಗ್ರೆಸು ಉಮೇದ್ವಾರರಿಯುದು "ಪುತ್ತೂರಿನ ಮಿತಜ್ಞರು" ರಂತಹ ಅನಾವೃತ ಪತ್ರದವರಿಗೂ ಅಂತಹ ಲೇಖನಗಳಿಗೆ ಅಸ್ಪದವೀಯುವ ಪತ್ರಿಕೆಗಳಿಗೂ ಸರಿಯೋರಲ್ಲ. ಇದು ಏಕೆ? ವೃತ್ತ ಪತ್ರಗಳ ಉದ್ದೇಶವು ಸ್ವಾಮುಖ್ಯವಾಗಿ ಸರ್ವಸಾಮಾನ್ಯರ ದೃಷ್ಟಿಯನ್ನು ಸರಿದಾರಿಗೆ ತರುವುದಕ್ಕೆ. ತನಗೆ ಬೇಕಾದ ಉಮೇದ್ವಾರರನ್ನು ಕಾಂಗ್ರೆಸು ನಿಶ್ಚಿತವಿಲ್ಲವೆಂಬ ಅರೋಪವೆ ಮೇಲೆ ಬೇಕಿಸುವುದು ಉಚ್ಚಲ ರ್ಯಾಯ ಮತ ಪತ್ರಿಕೆಗಳಿಗೆ ತರವಲ್ಲ.

ಕಾಂಗ್ರೆಸು ನಿನ್ನೆ ಮೊನ್ನಿನ ಸಂಸ್ಥೆಯಲ್ಲ. ಲಕ್ಷೋಪಲಕ್ಷ ನಿಸರ ನಿಸ್ವಾರ್ಥ ಸೇವೆಯಿಂದ ಕಟ್ಟಲ್ಪಟ್ಟ ಸಂಸ್ಥೆ ಅದು. ಪ್ರಚೆಂದ ಬಲಿಷ್ಠ ಸರಕಾರವು ಕೂಡಾ ನಿಸ್ಪತ್ತೆ ಕೊಂಗ್ರೆಸಿನ ಸಾಹಸವನ್ನು ಕಂಡು ಬೆರಗಾಗಿದೆ. ಅದಿರಿಂದಲೇ ಮಾಜಿ ನೈಸರಾಯ ಬೋರ್ಡ ಅನಿಸರು ಮಹಾತ್ಮಾ ಗಾಂಧಿಯವರಿಗೆ ಭೇಟಿಕೊಟ್ಟರು. ಒಪ್ಪಂದ ಮಾಡಲು ಒದಂಬಟ್ಟರು. ಇಂದು ಕೊಂಗ್ರೆಸು ಚುನಾವಣೆ ರಂಗಕ್ಕೆ ಳಿದಿದೆ ಜಸ್ಟೀಸ್ ಪಾರ್ಟಿ ಅಧಿಮ ಇನ್ನಿತರ ಪಾರ್ಟಿಗಳು ಚುನಾವಣೆ ರಂಗಕ್ಕೆ ಳಿದಂತೆ ಕೊಂಗ್ರೆಸು ತನ್ನಮೊದು ಧ್ಯೇಯ ಕಾರ್ಯಕ್ರಮವಿಲ್ಲದೆ, ಬಂದಿಲ್ಲ. ಕೌನ್ಸಿಲುಗಳಿಗೆ ಹೋಕ್ಕರೆ ತಮ್ಮ ಕಾರ್ಯಕ್ರಮವೇನು ಎಂಬುದನ್ನು ಬಹಿರಂಗವಾಗಿ ತನ್ನ ಚುನಾವಣೆಯ ಜಾಹೀರು ಪತ್ರಿಕೆಯಲ್ಲಿ ಗೊತ್ತು ಪಡಿಸಿರುವುದು

ಇರಲಿ, ಜಸ್ಟೀಸ್ ಪಾರ್ಟಿಯು ಕೌನ್ಸಿಲಿಗೆ ಹೋಕ್ಕು ಆದೆಷ್ಟು ಜನರ ಒಳ್ಳಿತನ್ನು ಬಯಸಿದೇ ಆ ಪಾರ್ಟಿಯು ಮಂತ್ರಿ ಪದವಿ ಸ್ವೀಕರಿಸಿ ಏನು ಮಾಡಿತು? ತನ್ನ ಹಿತೈಷಿಗಳು, ಸಂಬಂಧಿಕರು ಮುಂತಾದವರಿಗೆ ಸರಕಾರಿ ಉದ್ಯೋಗಗಳನ್ನು ಕೊಡಿಸಿತು. ಇಷ್ಟೆ ಆಲ್ಲವೆ? "ರೈತರ ಪರಿಸ್ಥಿತಿಯು ಕರುಣಾಜನಕವಾಗಿದೆ; ತೀರ್ವೆಯನ್ನು ಕಮ್ಮಿ ಮಾಡಬೇಕು" ಎಂದು ಶ್ರೀಯುತ ಎ ಬಿ. ಶೆಟ್ಟಿರವರು ಕೌನ್ಸಿಲಿನಲ್ಲಿ ತಂದ ರಾವಾಗಿ ಆದೆಸ್ಟು ಮಂದಿ ಜಸ್ಟೀಸ್ ಪಕ್ಷದವರು ಓಟು ಕೊಟ್ಟರು? ಇಂದು ನಮ್ಮಲ್ಲಿ ಕೆಲವು ಮುಂದಾಳುಗಳು ಕಾಂಗ್ರೆಸಿನ ಎಮರುಳಿಯಾಗಿ ನಿಲ್ಲಲು ಡೊಂಕಕಟ್ಟರುವರು ನಿಜವಾಗಿಯೂ ಅವರು ನಮ್ಮ ಜಿಲ್ಲೆಯ ಜಸ್ಟೀಸ್ ಪಾರ್ಟಿಯ ಅಧಾರಸ್ತಂಭಗಳು ಇಂದು ತಾವು ಆದೇ ಪಾರ್ಟಿಯ ಪ್ರತಿನಿಧಿಗಳಿಂದು ಹೇಳಲು ಅಂಜುತ್ತಿದ್ದಾರೆ ಇದು ಏಕೆ? ಆ ಪಾರ್ಟಿಯ ಪರವಾಗಿ ನಿಂತರೆ ತಮಗೆ ಟಾನ್ಸ್ ಇಲ್ಲವೆಂದು ಅವರಿಗೆ ಗೊತ್ತಿದೆ ಅಪ್ಪೆ! ಇರಲಿ, ಈ ಪ್ರತಿನಿಧಿಗಳು ಸ್ವತಂತ್ರರಾಗಿ ನಿಂತರೆನ್ನೋಣ, ಸ್ವತಂತ್ರವಾಗಿ ಕೌನ್ಸಿಲಿಗೆ ಹೊಕ್ಕು ಇವರೀರವೇನು ಮಾಡಲುಡಿತಾರೆ ಒಂದು ಪಾರ್ಟಿಯ ಬೆಂಬಲವಿಲ್ಲದ ನಿನು ತನ್ನ ಯಾವ ತರದ ರಾವಾಪ ಮಂಜೂರಾಗುವುದೂ ಅಸಾಧ್ಯ ಆದುದರಿಂದ ಸ್ವತಂತ್ರ ಪಕ್ಷದವರಿಗೆ ಓಟು ಕೊಡುವುದರಿಂದ ನಮಗೆ ಪ್ರಯೋಜನವಿದೆಯೆ? ಬದಲಾಗಿ ಒಂದು ಪಾರ್ಟಿಯಿಂದ ನಿಂತ ಉಮೇದ್ವಾರರಿಗೆ ನಾವು ಓಟನ್ನು ಕೊಟ್ಟರೆ ಪ್ರಯೋಜನ ನಿಶ್ಚಯ ನಿಗುವುದು ಇಂದು ಮದ್ರಾಸಿನ ಓಟರರು ಕೋರ್ಪರೇಶನಿಗೆ ಕೊಂಗ್ರೆಸು ಪ್ರತಿನಿಧಿಗಳನ್ನೇ ಕಳುಹಿಸಿದ್ದರಿಂದ ಕಾಂಗ್ರೆಸು ಬಹುಮತದಿಂದ ಒಳಹೊಕ್ಕಿ ತಮಗೆ, ತಮ್ಮ ಓಟರರಿಗೆ ಹಿತವಾದ ರಾಪಾಯಗಳನ್ನೇ ಮುಂದಕ್ಕೆ ತರುತ್ತಿದ್ದಾರೆ ಕೋರ್ಪರೇಶನು ರೂಪಾಯಿ ವಸೂರಕ್ಕಿಂತ ಹೆಚ್ಚಿನ ವೇತನವನ್ನು ತನ್ನ ಯಾವತ್ತೂ ಉದ್ಯೋಗಿಸ್ಥರಿಗೆ ಕೊಡುವುದೆಂದು ಕಾಂಗ್ರೆಸು ಪಾರ್ಟಿಯವರು ರೆರಾಪು ತಂದರು. ರೆರಾವು ಬಹುಮತದಿಂದ ಮಂಜೂರಾಯಿತು ಸುಬು ಲೋಲುಪರಾಗಿ ಮೆರೆಯುತ್ತಿದ್ದ ಹುದ್ದೇದಾರರಿಗೆ ಎಚ್ಚರಿಕೆ ಉಂಟುಮಾಡುತು ಕೋರ್ಪರೇಶನಿಗೆ ವರ್ಷಕ್ಕೆ ೪೦೦೦ ರೂಪಾಯಿಗಳ ಉಳಿತಾಯವಾಯಿತು ಕೋರ್ಪರೇಶನಿನ ಆರೋಗ್ಯ ಇಲಾಖೆಯವರೆಲ್ಲರೂ ಖಾದಿಯನ್ನೇ ಧರಿಸಬೇಕೆಂದು ಕಾಂಗ್ರೆಸು ಪಾರ್ಟಿಯು ರೆರಾಪು ತಂದಿತು ಇದರಿಂದ ಆದೆಷ್ಟು ನೊಲವ ಬಡ ಸಂಸಾರಗಳಿಗೆ ಸಂತೃಪ್ತಿ ಯಾಗಲಿಕ್ಕಿಲ್ಲ? ಇದರಿಂದ ನಮಗೆರಡು ವಿಷಯಗಳು ಮಂದಬ್ಬುಗುವುವು —( ) ನಾವು ಪಾರ್ಟಿಯ ಧ್ಯೇಯಗಳನ್ನು ಪರಿಟೀಲಿಸಿ ಅಂತಹ ಪಾರ್ಟಿಯವನ್ನೇ ಕೌನ್ಸಿಲುಗಳಿಗೆ ಳಿಸಿ ಸಿದಲ್ಲಿ ನಮಗೆ ಹಿತವಿವ (೨) ಕಾಂಗ್ರೆಸು ದೇಶದ ಹಿತಕ್ಕಾಗಿ ಹೆಣಗಾದುವ ಸಂಸ್ಥೆ. ಇನ್ನು ವಿದಿತವಾಗುವುದು. ಆದ್ದರಿಂದ ಈ ವಿಷಯವನ್ನು ಎಲ್ಲಾ ಓಟರರು ಗಮನಕ್ಕೆ ತಂದುಕೊಳ್ಳಬೇಕು. ಕಾಂಗ್ರೆಸಿನ ಪ್ರತಿನಿಧಿಗಳು ನಿಮ್ಮ ಜಾತಿಯವರಲ್ಲದಿರಬಹುದು. ನುರಿತ ವರಲ್ಲದಿರಬಹುದು; ಆದರೆ ಉಚ್ಚಕ್ಕೈಯಿಗಳ ಸಂಸ್ಥೆಯ ಪ್ರತಿನಿಧಿಗಳಾಗಿ ನಿಂತಿರುವುದರಿಂದ ಅಂತಹರಿಗೆ ನ ಓಟನ್ನು ಕೊಡಿರಿ ಕಾಂಗ್ರೆಸಿನ ಎಮರಾಳಿಯಾಗಿ ನಿಲ್ಲಲಿರುವ ಪ್ರತಿನಿಧಿಗಳು ಬುದ್ಧಿವಂತರಿರಬಹುದು. ವದೋವೈದ್ಯರಿರಬಹುದು; ಕಾರ್ಯದಕ್ಷತೆಯಿದ್ದಿ ನಿಪುಣರಿರಬಹುದು; ಕೌನ್ಸಿಲು ಡಿಸ್ಟ್ರಿಕ್ಟ್ ಬೋರ್ಡುಗಳಲ್ಲಿ ಆನೇಕ ವರ್ಷಗಳಿಂದಿವ್ರು ಒಳ್ಳೇ ಸುಡಿತವರಿರಬಹುದು. ಅಂತಹರಿಂದ ನಮಗೇನೂ ಪ್ರಯೋಜನವಿಲ್ಲ ಆವರಿಂದ ಒಳಹೊಕ್ಕು ನಾವು ಮಾಡಲಾಗದು ಆದ್ದರಿಂದ ಆವರಿಗೆ ನಮ್ಮ ಓಟನ್ನು ಕೊಡದಿರಿ ಬದಲಾಗಿ, ದೇಶದ ಹಿತಕ್ಕಾಗಿ ಏನತ್ತು ವರುಸಗಳಿಂದ ಆನೇಕ ದುಡಿಗಳನ್ನು ಹೆಣಾಡಿದ ಸಂಸ್ಥೆಯಿದೆ ಕಾಂಗ್ರೆಸು, ಆವರ ಪ್ರತಿನಿಧಿಗಳನ್ನೇ ಕೌನ್ಸಿಲುಗಳಿಗೆ ಳಕುಹಿಸಿರಿ

G. G. PAI

ಮತವಾನದಲ್ಲಿ ಹಳ್ಳಿಯ ಕೂಟಗಳ ಕೆಲಸ

ಗ್ರಾಮೋದ್ಧಾರಗಳನ್ನು ಗುರಿಯಾಗಿಟ್ಟುಕೊಂಡು ಬಗೆಬಗೆಯ ಹೆಸರುಗಳಿಟ್ಟ ಕೊಂಡು ಹಳ್ಳಿಗಳಲ್ಲಿ ಎಡೆಬಿಡದೆ ಕೆಲಸಮಾಡುತ್ತಿರುವ ಹಳ್ಳಿಯ ಸಂಘಗಳು ಈ ಕಾಲದಲ್ಲಿ ಹಲವಿವೆ. ತಿಂಗಳಿಗೊಂದರಂತೆ ಎರಡರಂತೆ ಸಭೆಗಳನ್ನು ಕೂಡಿಸಿ ಶಿಸ್ತಾಧ್ಯರಿಂದ, ಕೆಲಸಮಾಡುವ ಯುವಕರನ್ನು ಆ ಸಭೆಗಳಲ್ಲಿ ನ್ನೋ ಕಾಣಬಹುದು. ತಲ್ಲೇಖನ್ನೂ ತೆಸಿಸಿ ಕುಡಿಯುವ ವಸ್ತರ ತಾಲ್ಲೂಮಿ ಹಳ್ಳಿಯ ಸ್ಥಿಯಂಸೇವಕರಿಗೆ ಇರಬೇಕಾಗಿದೆ. ವಿದ್ಯೆಯ ಗಂಧವಾಗಿಯು ಸರಿಯಿಸಿ ವಸರಿಸಿದವ ಈ ಕಾಲದಲ್ಲಿ, ಪೇಟೆ ಪಟ್ಟಣಗಳ ನವ ಸುಧಾರಣೆಗಳ ಏರಿಳಿತಗಳಿಗೆ ಬೆದರಿ ಕೆತ್ತು ಸೀಡಿ ನೋಡಿ ತಳನುಳಿಸುವ ಹಳ್ಳಿಯ ಧ್ರುವ ಜೀವಿಗಳ ನಡುವೆ ಕೆಲಸಮಾಡುವವೆಂದರೆ ದೊಡ್ಡ ಸಮಸ್ಯೆಯೇ ಸರಿ! ಸುಧಾರಕರಿಗು ಪಟ್ಟಣಗಳಲ್ಲಲ್ಲಿಯೆಮ ಹಳ್ಳಿಗಳನ್ನು ಕಾರ್ಯರಂಗವಾಗಿ ಸ್ವೀಕರಿಸಿದ ಯುವಕರು ವಾತ್ರ ಆಲ್ಲಿಯ ಏರು ತಗ್ಗುಗಳಲ್ಲಿ ಆಲೆದು ಸ್ಥೀತಿ ವಿಸಾಸಗಳಂದ ಗ್ರಾಮಸ್ಥರ ಸೌಹಾರ್ದ ಸಂಪಾದಿಸಬಲ್ಲರು, ಆಂದ ಧ್ರುವಾದಿಗಳು ದೃಢ ಮೂಲವಾಗಿರುವ ಹಳ್ಳಿಗರಿಗೆ ರಾಜಕೀಯ ಪಾಸಾವ ರಾಪವಿರುಡಿಸುವಂತೆ ಮೋಡಿನಿ ತಲೆಯಲ್ಲಾಡಿಸುವಂತೆ ಮಾಡಲು ಆವರೇ ಶಕ್ತರು! ಹಳ್ಳಿಗಳ ಹಿಂದಿನ ಗೊದ್ದು ಆಜಾರುವಿಗಳಿಗೂ, ನವಸುಧಾರಿತ ಕ್ರಮಗಳಿಗೂ ಮಧ್ಯೆ ಗೊಡಿಸುವಂತೆ ನಿಂತು ಒಂದು ಗೂಡಿಸುವ ಇಂಜಿ ಯುವಕರ ಕೆಲಸವನ್ನು ಬರೆಗೆಳೆಯು ವ ಸುಸಂದರ್ಭವು ಸನ್ನಿಹಿತವಾಗುತ್ತಿದೆ ಸ್ಫೂರ್ತಿಯುತ ಯುವಕರು ಹಳ್ಳಿ ಸಂಘಗಳ ಮೂಲಕ ಒಟ್ಟಾಗಿ ವೇಕವ ಮೂಲೆಮೂಲೆಗಳಲ್ಲಿ ಕಾರ್ಯಕ್ಷೇತ್ರಗಳನ್ನು ಸ್ಥಾಪಿಸಿದಮಾಗ ಇಂದು ಸಂದರ್ಭಗಳು ವಿನಂಪ್ರತಿ ನೆಲಂದ ಮೇತೆ ಒದಗಿ ಬಂದರೂ ಸಂತೋಷವೆ ಮಾನೇ ಸರಿ.

ಹಳ್ಳಿಗರ ಆಂದ ಶ್ರದ್ಧಾದಿಗಳ ನಿವಾರಣೆಯೊಂದಿಗೆ, ಜೂಜು ಜುಗಾರಿಗಳೆಂಥಾ ದುಶ್ಚಟ್ಯಸಗಳನ್ನು ಹೋಗಲುಡಿಸಿ, ಚೀಸಾಯಿದ್ದಲ್ಲಿ ಸುಧಾರಣೆ, ಹಳ್ಳಿ ಕೈಗಾರಿಕೆಗಳ ಪ್ರೋತ್ಸಾಹ, ಸ್ವದೇಶೀ ಪ್ರಚಾರಾದಿಗಳನ್ನು ಮಾಡುವುದು ಕೂಡಿಗಳ ಸಾದನೆ—ಒಟ್ಟಿಗೆ ಹಳ್ಳಿಗರಲ್ಲಿ ಚೇತನವನ್ನು ಎಬ್ಬುನೂಡಿ, ಎಲ್ಲಾ ವಿದದಲ್ಲಿಯೂ ಸಮಾನಾಮಪ—ನ್ಯಾಯವಾಪ ಸ್ಪಾತಂತ್ರ್ಯಕ್ಕೆ ತಯೊರುಗೊಳಿಸಬೇಕೆಂಬ ಗಂಭೀರ ಧ್ಯೇಯವು ಪ್ರತಿಯೊಂದು ಹಳ್ಳಿ ಸಂಸ್ಥೆಯಲ್ಲೂ ಒಡೆದು ಕಾಣುತ್ತದೆ. ಹೀಗಿರುವಾಗ ಆಯಾಯ ಕಾಲದ ಸ್ಥಿತಿಗತಿಗಳನ್ನು ಸ್ಪಾಗತೀಕರಿಸಿಕೊಂಡು, ಜನತೆ ಯೊಡನೆ ಬೆರೆಯುವುದರಲ್ಲಿ ತಪ್ಪಿ ಬೀಳದೆ ಒಗ್ಗಟ್ಟಿನಿಂದ ನುಂದುವರಿಯಲು ಕಲಿತುವನ್ನು ಕಾರ್ಯತಃ ತೋರಬೇಕಾಗಿದೆ ಹಳ್ಳಿಗಳ ಪ್ರತಿನಿಧಿಗಳಂತಿರುವ ಈ ಕೂಡಿಗಳು—ಇಡೀ ದೇಶದ ಮುಂದಾಳುಗಳು ಅಬಿಲ ಭಾರತ ಹಿತಕಾರಿಗಳಾದ ಕೆಲಸಗಳಲ್ಲಿ ತೊಡಗಿರುವಾಗ, ನಮ್ಮಗಿದ್ದಿರೆ ಸಾಕಾಗದು. ಹುರಿಗೊಂಡು ಮುಂದುಗಿ ದೇಶದ ಜಯಕ್ಕಾಗಿ ಹೋರಾಟಮತ್ತಿರುವ ರಾಷ್ಟ್ರೀಯ ಸಭೆಗೆ ಸಭಾ ಪ್ರತಿನಿಧಿಗಳಿಗೆ, ಬೆಂಬಲವಾಗಿ ನಿಂತು ಕೆಲಸಮಾಡಬೇಕಾಗಿದೆ ಬರುವ ಮದ್ರಾಸು ನ್ಯಾಯವಿಧಾಯಕ ಸಭೆಯ ಚುನಾವಣೆಯನ್ನು ಮತದಿನವನ್ನು ಆನ್ಯಾಯದ ರೀತಿಗೆ ಹೋಗಬಿಡದೆ, ಸದುಪಯೋಗಮಾಡುವಂತೆ ನೋದಬೇಕಾಗಿದೆ. ಆದಕ್ಕಾಗಿ ಹಳ್ಳಿಗಳಲ್ಲಿ ದಿನಂಪ್ರತಿ ಎಂದಂತೆ ಮನವಸೆಗೊಡುವಿ ಪ್ರಚುರಿಸುವ, ಪೇಟೆ ಪಟ್ಟಣಗಳಿಂದ, ಕಾಂಗ್ರೆಸ್ಸಿನ ಸಹಾಯಾರ್ಥವಾಗಿ ಕೆಲಸ ಮಾಡಲು ಹಳ್ಳಿಗಳಿಗೆ ಬರುವ ಮುಬಂಡರೊಡನೆ ಸಹಕರಿಸುವ, ಎದುರು ಪಕ್ಷೀಯರಿಗೆ ಎಲ್ಲಾ ವಿದದಲ್ಲೂ ಕೈಗನ್ನಡಿಕೊಟ್ಟು ಹಿಂದಿರುಗಿಸುವಂತೆ ಯುಸುವ—ಯುವಕರ ಕಮ್ಮಿಟಿಗಳ ನೇಮಕವಾಗ ಬೇಕಾಗಿದೆ —ದಯೆ, ದಾಕ್ಷಿಣ್ಯ, ಮಾ ವಿಸ್ಸುತ, ದೂಡ್ಡಸ್ಥಿಕ, ಹೆದರಿಕೆ ಮುಂತಾದುವುಗಳಂದ ಕಟ್ಟು ಬೀಳದೆ ಮನಸ್ಯೆತ್ವವ ತಮ್ಮಲ್ಲೂ ಇಬೆಯಿಂಬುದನ್ನೂ, ಕಾಂಗ್ರೆಸ್ಸಿನ (ದೇಶದ ಪಕ್ಷದ) ಎದುರಳಿಗಳಿಗೆ ಉಳಿಗಾಲವ ಇನ್ನೂ ಉಳಿದಿಲ್ಲವೆಂಬುದನ್ನೂ ಕಾರ್ಯತಃ ಜಗತ್ತಿಗೆ ತೋರಬೇಕಾಗಿದೆ

ಕಾರ್ಯದರ್ಶಿ, ಹಳ್ಳಿಯ ಕೂಟ, ಶಿವ.

ಮದ್ರಾಸ್ ಕೌನ್ಸಿಲ್ ಮೆಂಬರಿಕೆ ಚುನಾವಣೆ

ಶ್ರೀಮಾನ್ ಮಜಯ್ಯ ಹೆಗ್ಗಡೆಯವರು ಕೌನ್ಸಿಲ್ ಮೆಂಬರಿಕೆಗೆ ಉಮೇದ್ವಾರರಾಗುವೆನೆಂದು ಪತ್ರಿಕೆಯಲ್ಲಿ ತಿಳಿಸಿದ್ದು ಸಂತೋಷವಾರ್ತೆ. ಈ ಹಿಂದೆ 1925ನೇ ಇಸವಿಯಲ್ಲಿ ಶ್ರೀಯುತ ಧರ್ಮಸ್ಥಳ ಮಂಜಯ್ಯ ಹೆಗ್ಗಡೆಯವರು ಕೌನ್ಸಿಲಿನ ಸೆಂಬರಿಕೆ ಸ್ಪಾನಕ್ಕೆ ಉಮೇದ್ವಾರರಾಗಿ ನಿಂತು ಅಲ್ಪಾವಧಿಯ ಮೆಂಬರ ಸ್ಥಾನಕ್ಕೆ ಚುನಾಯಿಸಲ್ಪಟ್ಟು ಮೆಂಬರರಾಗಿದ್ದಾಗ್ಯೆ ತಾನು ಮಾಡಿರುವ ಕಾರ್ಯಕಲಾಪಗಳ ವರದಿಯನ್ನು ಬಲೆದು ಪುಸ್ತಕ ರೂಪವಾಗಿ ಪ್ರಕಟಿಸಿ ತನ್ನನ್ನು ಆರಿಸಿದ ಮಹಾಜನರಿಗೆ ಕಳುಹಿಸಿಕೊಟ್ಟಿದ್ದು ಹಲವರಿಗೆ ತಿಳಿದ ವಿಷಯ ಇದರಿಂದ ಚುನಾವಣೆಯ ಸಮಯದಲ್ಲಿ ಮಾತ್ರವೇ ಆಲ್ಲದೆ, ಮೆಂಬರಿಕೆಯಿಂದ ನಿವೃತ್ತರಾದ ಬಳಿಕವೂ ಜನರ ಪರವಾಗಿ ತವಗಿರತಕ್ಕ ಜವಾಬ್ದಾರಿಯನ್ನು ಮರೆಯಲಿಲ್ಲವೆಂಬುಮಸ್ಸನ್ನಸ್ಟವಾಗುವುದು. ಮಾತ್ರವಲ್ಲ ಇತರ ಮಂಬರಿಗೂ ಇದೊಂದು ಅದರ್ಶ ಮಾರ್ಗವಾಗಿರುವುದು. ಮತ್ತು ತನ್ನ ವರದಿ ಪುಸ್ತಕದಲ್ಲಿ ಹೇಳಿರುವಂತೆ ಮೆಂಬರನಾಗಿರದ ಇತರ ಸಮಯದಲ್ಲಿ ಕೂಡಾ ಜನರ ಪರವಾಗಿ ವಿದ್ಯೆ, ಆರೋಗ್ಯ, ಕೃಷಿ, ಕೈಗಾರಿಕೆ, ಗ್ರಾಮಉದ್ಧಾರಗಳೇ ಮೊದಲಾದ ದೇಶೋದ್ಧಾರ ಕಾರ್ಯದಲ್ಲಿ ತನುಮನಧನಗಳಂದ ಸಹಾಯಮಾಡುತ್ತಿರುವುದು ಹಲವರಿಗೆ ತಿಳಿದ ವಿಷಯ

ವಿವಿಧ ಮತಗಳಲ್ಲಿ ಆಜ್ಞಾನವೆಂಬ ವಿರೋಧಾಭಿಪ್ರಾಯಗಳಿದ್ದರೆ ಹೋಗಲಾಡಿಸಿ ಸ್ವೋಗ್ಯ ಸಾಮಾನ್ಯಿಗೆ ಕೆಲವು ವರ್ಷಗಳಿಂದ ಕರ್ನಾಟಕದ ಎಲ್ಲಾ ಪ್ರಾಂತ್ಯಗಳ ಯೋಗ್ಯ ವಿದ್ಯಾವಂತರ ಸಹಾಯದಿಂದ ಪಡಿಸಿಕೊಂಡು ಬರುವ ವಿವಿಧ ಧರ್ಮ ಸಮ್ಮೇಳನವು ಬಯಸುವಿಗಳಿಗೆ ತಿಳಿದ ವಿಷಯವೇ ಆಗಿದೆ.

ದೇಶದ ಕೈಗಾರಿಕೆ, ಆರೋಗ್ಯ ಮತ್ತು ಕೃಷಿಯ ಆಭಿವೃದ್ಧಿಗಾಗಿ ವಸ್ತು ಪ್ರದರ್ಶನ, ಆಯುರ್ವೇದ ಸಮ್ಮೇಳನ ಕೃಷಿ ಪ್ರದರ್ಶನ ಮುಂತಾದ ಕಾರ್ಯಗಳು ಮೂಲಕ ಪ್ರೋತ್ಸಾಹಿಸುತ್ತಲಿರುವುದೂ ಎಲ್ಲರಿಗೆ ಗೊತ್ತಿರುವ ವಿಷಯವೇ ಜನರಲ್ಲಿ ಧಾರ್ಮಿಕ ಬುದ್ಧಿಯು ಜಾಗೃತಿಯಾಗಿ ಆಸ್ತಿಕ್ಯ ಬುದ್ಧಿಯು ನೆಲೆಗೊಳ್ಳಲು ಧಾರ್ಮಿಕ ಗ್ರಂಥಗಳನ್ನು ಆದಿಕವಿ ಜನರ ಆಭಿರುಚಿಗನುಸರಿಸಿ ಬರೆಯಲು ಅನುಕೂಲಿಸುವಂತೆ ಬಹುಮಾನ ಸ್ಪರ್ಧೆಗಳ ಮೂಲಕ ಪ್ರಯತ್ನಿಸುವುದೂ ಎಲ್ಲವರೂ ಬಲ್ಲ ಸಂಗತಿಯೇ ಆಗಿದೆ ಇಂತಹ ಸಾರ್ವಜನಿಕ ಕೆಲಸಗಳನ್ನು ಕೈಕೊಂಡಿದ್ದು ಕಾಂಗ್ರೆಸ್ಸಿಗೆ ಸೇರದಿರುವ ಮಾತ್ರಕ್ಕೆ ಇವರು ದೇಶ ಮತ್ತು ಜನಾಂಗಕ್ಕೆ ಆಗದವರೆಂದು ಭಾವಿಸುವುದು ಸರಿಕಾಣುವುದಿಲ್ಲ. ಹೆಸರೇನೆ, ಭಾವನೇನೆ, ಕಲಿ, ಕೈಗಾರಿಕೆಗಳಲ್ಲಿ ಹೆಚ್ಚಿನ ಆಸಕ್ತಿಯುಳ್ಳವರಾದ ಇವರು ಆಂಗ್ಲ ವಿದ್ಯಾಭ್ಯಾಸವನ್ನು ಹೊಂದಿದ್ದರೂ ಪ್ರಾಮುಖ್ಯವಾದ ಪೂರ್ವ ಸಂಪ್ರದಾಯ ತತ್ವಗಳನ್ನು ವಿರೋಧಿಸದ ವಿಚಾರಪುಳ್ಳ ಸನಾತನಿಯಾಗಿಯೂ ಕಾಲೋಚಿತವಾದ ಸುಧಾರಣಾಪ್ರಿಯರೂ ಆಗಿರುವುದಾರೆಂಬುದು ಇವರ ಪರಿಚಿತರಿಗೆ ಗೊತ್ತಿರುವ ವಿಷಯವಾಗಿದೆ

ಶ್ರೀಯುತ ಹೆಗ್ಗಡೆಯವರು ಬ್ರಾಹ್ಮಣ ಬ್ರಾಹ್ಮೇತರರೆಂಬ ಭೇದವನ್ನುದದೆ ತನ್ನ ಆಧೀನವಿರುವ ಧರ್ಮಸಂಸ್ಥೆಯ ಮೂಲಕ ಪರಿಹಿತ ಕಾರ್ಯಗಳಲ್ಲಿ ನಿರತರಾಗಿರುವುದು ಕೂಡಾ ವಿಚಾರಣೀಯ ವಿಷಯವು ಆದೂ ಹಲವರು ಪತ್ರಿಪತ್ರಿಕೆಗಳಲ್ಲಿ ಬರೆದ ಲೇಖನಪತ್ರಿವ ಮುಖೇನ ಭಾಷಣಗಳಲ್ಲಿ ವ ಆಡುವ ಸುಡಿಗಳಲ್ಲಿ ಕುತ್ತಿತವಾಗಿ ಶ್ರೀ ಹೆಗ್ಗಡೆಯವರನ್ನು "ಜಸ್ಟಿಸ್" ಪಕ್ಷಕ್ಕೆ ಸೇರಿದವರೆಂಬ ಭೇದಭಾವವನ್ನು ಮಾಡಿ ಬ್ರಾಹ್ಮಜನ್ಯರ ಆನುಯೆಯನ್ನು ಪುಟ್ಟಿಸಲಿಕ್ಕೆ ಪ್ರಯತ್ನಿಸುವುದು ಶೋಚನೀಯ. ಹಾಗೂ ತಮ್ಮ ಸಂಸ್ಥೆಯನ್ನು ಕಾರ್ಯಾನಿಂದ ವಿರಹಿತ ಪಡಿಸಿದವರಾಗಿ ಇತರ ಸಂಸ್ಥೆಗಳ ಪರವಾಗಿ ಎಸೋದೂ ಪ್ರಯತ್ನ ಮಾಡಿಲ್ಲವೆಂಬುದು ಆವಿಚಾರದ ಮನಕಾಗಿದೆ ಇದರ ನಿಜಾಂಶ ಸ್ಥಿತಿಯನ್ನು ಅವರು ಪ್ರಕಟವಡಿಸಿದ್ದ "ಕೌನ್ಸಿಲಿನ್ನಿನ ಸ್ಥಾನ ಮಂಬಿಗಳ" ಎಂಬ ಪ್ರಸ್ತಕದಲ್ಲಿ ಹಾಗೂ ಪತ್ರಿಕೆಗಳಲ್ಲಿ ಎರವಾಗಿ ಬರೆದು ತಿಳಿಸಿದ್ದಾರೆ ಈ ವೋದಲೇ ಆನೇಕರು ಅರಿತಿರಬಹುದು.

ತಾನು ಸ್ಥಿತಃ ಬ್ರಾಹ್ಮಣೇತರನಾಗಿದ್ದು ತನ್ನ ಸಂಸ್ಥೆಯು ಇತರ ಅಧಿಕಾರಕ್ಕೊಳಪಡದೆ ಸ್ವತಂತ್ರವಾಗಿ ಕಾರ್ಯಕ್ಕೆ ಸಂಬಂಧ ಪಟ್ಟಿದ್ದರೂ ಇತರ ಸಾರ್ವಜನಿಕ ಧರ್ಮ ಸಂಸ್ಥೆಗಳಂತೆ ಸರ್ವರ ಹಿತವೃದ್ಧಿಯಿಂದ ಆಭಿವೃತಿ ಸ

ರಿಂದ ಈ ಮೇಲಿನ ವಿಚಾರವನ್ನು ಜನರ ಹಿತದೃಷ್ಟಿಯಿಂದ ಬರೆದು ತಿಳಿಸಿರುವುದಾಗಿದೆ. ಶ್ರೀಯುತರ ದೇಶಸ್ಪಿಯಾದ ಆಪೇಕ್ಷೆಯನ್ನು ಸಮರ್ಥಿಸಿ ಚುನಾವಣೆಯಲ್ಲಿ ಆವರು ಜಯಪ್ರದರಾಗುವಂತೆ ಮಾಡಲು ಸರ್ವದೇವರ ಹಿತೈಷಿಗಳು ಸಿದ್ಧವಾಗಿರುವರಾಗಿ ನಂಬುತ್ತೇನೆ. ಹೀಗೆ ಮಾಡುವುದರಿಂದ ಶ್ರೀ ಹೆಗ್ಗಡೆಯವರನ್ನು ಇನ್ನೂ ಹೆಚ್ಚಿನ ಧರ್ಮ ವ ದೇಶದ ಸಾರ್ವಜನಿಕ ಕಾರ್ಯಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿದಂತಾಗುವುದು.

ಕೆಮ್ಮಣ್ಣು ನಾರಾಣಪ್ಪಯ್ಯ.

Mr. ಕೆ. ರಾಮಕೃಷ್ಣರಾಯರಿಗೆ

ಸ್ವಾಮಿ'

ತಾವು ಕಳೆದ 10–12–36ನೇ ನವಯುಗದಲ್ಲಿ ನನಗೊಂದು ಪ್ರಶ್ನೆಮಾಲೆಯನ್ನಿತ್ತಿರುವಿರಿ ಆದರೆ ಇಂತಹ ಲೇವಿನಗಳು ಎಷ್ಟೋ ಈ ಮೊದಲೇ ಪ್ರಕಟವಾಗಿದ್ದರೂ ಈ ರೀತಿ ವ್ಯಕ್ತಿಗತವೆಂದು ಹುಟ್ಟಿಕೊಂಡವರೇ ಇಲ್ಲ. ಆದ ಪ್ರಯುಕ್ತ ಇಂತಹ ಪ್ರಶ್ನೆಗಳಿಗೆ ಉತ್ತರ ಕೊಡುವ ಆವಶ್ಯಕತೆಯೇ ನನಗೆ ಕಾಣುವುದಿಲ್ಲವಾದರೂ ನಿಮ್ಮ ವಿಶೇಷ ಕುತೂಹಲನಿವಾರಣಾರ್ಥವಾಗಿ ಬರೆಯಬೇಕಾಯಿತು ಕವಿದೃಷ್ಟಿಗೆ ಯಾವುದೂ ಆಗೋಚರವಲ್ಲ. ಆಂತರ್ಯೇ ಪ್ರಪಂಚದಲ್ಲಿ ಯಾವ ಘಟನೆಯೂ ಅಸಂಭವ ಪ್ರಾ ಅಲ್ಲ. ಹೀಗಿರುತ್ತಾ ನಾನಾದರೂ ನನ್ನ ಕಲ್ಪನಾನಗರದ ತೆರೆಯೊಂದನ್ನು ವಾಚಕರ ಮನೋರಂಜನೆಗಾಗಿ ಚಿಕ್ಕ ಕತೆಯನ್ನಾಗಿ ಸೃಷ್ಟಿಸಿರುವೆನು. ಈ ಕಲ್ಪಿತ ಕಥೆಯನ್ನು ನಾನು ಯಾವನೊಬ್ಬ ವಿಶಿಷ್ಟ ವ್ಯಕ್ತಿಯನ್ನೂ ನಿರ್ದೇಶಿಸಿ ಬರೆದುದಲ್ಲವೆಂದು ನಿಮ್ಮ ಮನಃಶಾಂತಿಗಾಗಿ ಇನ್ನೂ ಒತ್ತಿ ಹೇಳುವೆನು. ಹೀಗಿದ್ದರೂ ದಾರಿಯಲ್ಲಿ ಬಿದ್ದಿರುವ ಟೊಪ್ಪಿಯನ್ನು ತಾನೇ ತನ್ನ ತಲೆಗೆ ಇಟ್ಟುಕೊಂಡು ಸಂತಾಪಪಟ್ಟ ಮುಹಾರೆಯನ ಮಾರ್ಗವನ್ನು ಯಾರಾದರೂ ಅವಲಂಬಿಸಿದರೆ, ಅದಕ್ಕೆ ನಾನು ಭಾಗಿಯಾಗಬೇಕೇ?

P. N. ಬನ್ನಂಜೆ ರಾಮಾಚಾರ್ಯ.

1937

ನೇ

ಇಸವಿಯ

ಡೈರಿಗಳು

ಮಾರಾಟಕ್ಕಿವೆ.

ಬೇಕಾದ ನಮೂನೆಯವು

ಬೇಕಾದ ಬೆಲೆಯವು

ಬಂದು ವಿಚಾರಿಸಿರಿ!

ನವಯುಗ ಆಫೀಸು,

ಉಡುಪಿ.

ಭಾಷಾಂತರಕಾರರು

ದೊರೆಯದೆ ಹೋಗುವುದಿಲ್ಲ

ಇನ್ಶೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದುವುಗಳಿಗೆ ಸಂಬಂಧಪಟ್ಟ ಮತ್ತು ಇತರ ಎಲ್ಲಾ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರ ವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'

C/o **'ತೆರಿಯರ ಪ್ರಪಂಚ,' ಉಡುಪಿ.**

ಪೇಟೆ ಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 – 6	3—10	3 – 2	3 — 4
ಪುಕ್ಕುತಿ ...	3 — 4	4 0	3 12	4 – 0
ಗಂಡ್ಡು ಸುಗ್ಗಿ ...	3—10	3 14	3 – 6	3— 8
ಊರ ಅಕ್ಕಿ ಬೆಳ್ತಿಗೆ ...	4 — 4	4 —12	4 — 8	4—12
ರಂಗೂನು ಬಿ ಗೋ. ೧ಕ್ಕೆ	6 - 2	7 – 0	6 –10	6 12
ಗೋದಿ ಗೋಣಿ ೧ಕ್ಕೆ ...	8 — 8	10 - 4	11 - 0	12 — 0
ತೊಗರಿ ಗೋಣಿ ೧ಕ್ಕೆ ...	9 — 0	9— 8	11— 8	...
ಹುರುಳಿ ಗೋಣಿ ೧ಕ್ಕೆ ...	5 – 2	5 – 8	5 — 0	5— 8
ಕಡಲೆ ಗೋಣಿ ೧ಕ್ಕೆ ...	7—10	9 – 0	8 0	12 8
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 8	18 8
ಉದ್ದು ಗೋಣಿ ೧ಕ್ಕೆ ...	9 — 8	10 - 0	9 — 4	9 - 8
ಹೆಸರು ಗೋಣಿ ೧ಕ್ಕೆ ...	9 – 4	9 -12	10— 8	11— 0
ರಾಗಿ ಗೋಣಿ ೧ಕ್ಕೆ ..	4 – 0	6 — 0	...	...
ಬೂರುಬೆಲ್ಲ ಖಂಡಿ ೧ಕ್ಕೆ...	30— 0	35— 0	20 — 0	25 – 0
ಉಪ್ಪು ಗೋಣಿ ೧ಕ್ಕೆ ..	4 8	4—12	4 – 10	4—12
ಬೊಬ್ಬು ಖಂಡಿ ೧ಕ್ಕೆ ...	60— 0	70— 0	67 - 8	70 – 0
ಬೊಬ್ಬು ಹಂಡಿ ಖಂಡಿ ೧ಕ್ಕೆ	27— 0	28 - 8	33 — 0	36— 0
ಎಳ್ಳೆಂಡಿ ಖಂಡಿ ೧ಕ್ಕೆ ...	22— 8	25 — 0	20 — 0	21— 4
ಹೊಬ್ಬು ಎಣ್ಣೆ ಮಣ ೧ಕ್ಕೆ	4—15	5—14	6 8	6—12
ಎಳ್ಳೆಣ್ಣೆ ಮಣ ೧ಕ್ಕೆ ...	...	6 — 0	5 – 8	6 — 0
ಹಿಪ್ಪೆ ಎಣ್ಣೆ ಪೆಟ್ರಿಗೆ ೧ಕ್ಕೆ	...	6 – 5	6 — 2	6— 4
ಪೋರಿಸ ಪಕ್ಕರೆ ಮಿ. ೧ಕ್ಕೆ	...	3— 9	3 — 3	3 - 4
ಮೆಣಸು ...	3— 8	4— 0	2 – 8	2—14
ಸಾಸಿವೆ ಮುಡಿ ೧ಕ್ಕೆ ...	5— 4	6 - 0	5— 4	..
ಕೊತ್ತಂಬರಿ ಮಣ ೧ಕ್ಕೆ ...	2— 8	3 – 0	...	..
ಕಾಳುಮೆಣಸು ಖ. ೧ಕ್ಕೆ..	95— 0	102 – 8	110 0	120 – 0
ಗೇರುಬೀಜ ಮು ೧ಕ್ಕೆ ...	4— 2	...	4 – 4	...
ಕಬ್ಬಿಣ ಖಂಡಿ ೧ಕ್ಕೆ ...	35— 0	37— 8	37— 8	40 — 0
ತಾಮ್ರ ತಗಡು ಮಿ ೧ಕ್ಕೆ	9 —1	9 11	12 - 4	12 — 8
,, ಪಾತ್ರೆಗಳು ಮು ೧ಕ್ಕೆ	12 8	14 – 0	14— 0	15— 0
ಬೀನ ಜೊಳ್ಳ ಸೇರು ೧ಕ್ಕೆ...	17 8	18 — 0	13 12	14 0
ಏಕಾಳಿ ತಗಡು ಮು ೧ಕ್ಕೆ	10 0	...	10 —	—
ಪವನು ೧ಕ್ಕೆ ...	22 – 8	...	22 8	...
ಹುಣಸೆ ಹುಳಿ ಖಂಡಿ ೧ಕ್ಕೆ	20 0	25 – 0	60 0	65 0
ನೇವಿ ಕಾಫಿ ಖಂಡಿ ೧ಕ್ಕೆ	140 0	150 0	...	...
ಫಿಬೇರಿ ಕಾಫಿ ಖಂಡಿ ೧ಕ್ಕೆ	160 — 0	170 — 0	155 0	160— 0
ವಡಕೇರಿ ಏಲಕ್ಕಿ ...	25— 0	26 – 8	...	...
ರೌಂಡ್ ಗೋದಿ ...	...	...	12— 0	...
ಏಲಕ್ಕಿ ಮಣ ೧ಕ್ಕೆ ...	45— 0	55 – 0	56 0	57— 0
ಹೂಸ ಕಾಫಿ ಖಂಡಿ ೧ಕ್ಕೆ	...	...	150 – 0	155 — 0
ಭತ್ತ ಮುಡಿ ೧ಕ್ಕೆ ...	1— 4	1— 8	...	...
ತುಪ್ಪ ಮಣ ೧ಕ್ಕೆ ...	17 0	18— 0	...	...

ಸಹಕಾರ ಸಂಘಗಳು.

ಕಳೆದ ಸಂಚಿಕೆಯಿಂದ ಮುಂದುವರಿದ್ದು

ಜಮಿನು ಅಡಮಾನ ಬ್ಯಾಂಕುಗಳು

ಈ ಅಧಿಪತ್ಯದಲ್ಲಿ ಸರಕಾರ ಶಾಖೆಯ ಕಾರ್ಯವು ಹೆಚ್ಚುತ್ತಾ ಬರುತ್ತಿರುವ ನಡುವೆ ಕೃಷಿಗಾರರಿಗೆ ಸಾಲ ಪಾವತಿ ಬಗ್ಗೆ ಸ್ವಲ್ಪ ದೀರ್ಘ ಅವಕಾಶವು ದೊರಕುವಂತೆ ಜಮಿನು ಅಡಮಾನ ಬ್ಯಾಂಕುಗಳನ್ನು ಸ್ಥಾಪಿಸಿದ್ದು ಒಂದು ಹೊಸ ಸಂಗತಿಯಾಗಿರುತ್ತದೆ. ಸರಕಾರದವರು ಮೊದಲು ನಾಲ್ಕು ಸ್ಥಾನಗರ್ಗನ್ನು ಆರಿಸಿ ಪರೀಕ್ಷಾರ್ಥವಾಗಿ ಅಲ್ಲಿ ಸಹಕಾರ ಕ್ರಮದಂತೆ ನಡಿಯುವ ಜಮಿನು ಅಡಮಾನ ಬ್ಯಾಂಕುಗಳನ್ನು ಸ್ಥಾಪಿಸಿದರು. ಆ ಮೇಲೆ ಜಮಿನು ಈಡಿನ ಮೇಲೆ ಸಾಲಗಳನ್ನು ಕೊಡುವ ಕ್ರಮವನ್ನು 1925ರಲ್ಲಿ ಜ್ಯಾರಿಗೆ ತಂದರು. ಕೃಷಿ ಜಮಿನುಗಳ ಮೇಲೆ ಇರುವ ಅಡವಿನ ಸಾಲಗಳನ್ನು ಪರಿಹರಿಸಿ ಜಮಿನುಗಳನ್ನು ಬಿಡಿಸಿಕೊಳ್ಳಲಿಕ್ಕೂ ಕೃಷಿಗಾರರ ಇತರ ಪ್ರಾಚೀನ ಸಾಲಗಳ ಪರಿಹಾರಕ್ಕೂ ಒಂದು ದಾರಿಯನ್ನು ಕಲ್ಪಿಸಿ ಕೃಷಿಗಾರರನ್ನು ಸಾಲ ವಿಮುಕ್ತರನ್ನಾಗಿ ಮಾಡುವುದು ಈ ಬ್ಯಾಂಕುಗಳ ಮುಖ್ಯ ಉದ್ದಿಶ್ಯವಾಗಿತ್ತು. ಇದಲ್ಲದೆ ಈ ಬ್ಯಾಂಕುಗಳು ಜಮಿನುಗಳನ್ನು ರೂಪಿತಪಡಿಸುವುದು ಮತ್ತು ಕೃಷಿ ವಿಧಾನಗಳನ್ನು ಸುವ್ಯವಸ್ಥೆಗೆ ತರುವುದರ ಕುರಿತು ಸಹಾ ಪ್ರಯತ್ನಿಸಬೇಕೆಂದು ಆ ಲೋಚಿಸಿತ್ತು. ಈ ಕಾರ್ಯಕ್ಕೆಲ್ಲಾ ಬೇಕಾದ ಹಣವು ಬ್ಯಾಂಕುಗಳಿಗೆ ಪಾಲಿನ ಬಂಡವಾಳ–ದೇವಣಾತಿಗಳು–ಸಾಲಪತ್ರಗಳು ಇವುಗಳ ಮೂಲಕ ಸಿಕ್ಕೀತೆಂದು ಎಣಿಸಿತ್ತು. ಆದರೆ ಈ ಎಣಿಕೆಗಳೆಲ್ಲಾ ಕಾರ್ಯಕ್ಕೆ ಬರಲಿಲ್ಲ. ಯೋಗ್ಯ ತರದ ಭದ್ರತೆಯನ್ನು ಕೊಟ್ಟರೂ ನಮ್ಮ ಸಾಲಪತ್ರಗಳನ್ನು ಆಲ್ಲಲ್ಲಿ ಮಾರುವುದು ಕಷ್ಟವೆಂಬುದು ಎರಡೇ ವರ್ಷಗಳೊಳಗೆ ಈ ಬ್ಯಾಂಕುಗಳಿಗೆ ಅನುಭವಕ್ಕೆ ಬಂತು. ಈ ಕಷ್ಟವೇ ಆ ಬ್ಯಾಂಕುಗಳ ಉನ್ನತಿಗೆ ಮುಖ್ಯ ಅಭ್ಯಂತರವಾಯಿತು. 1929ನೇ ವರ್ಷದ ಅಕ್ಟೋಬರದಲ್ಲಿ ಸರಕಾರನವರು ಈ ಕುರಿತು ಒಂದು ಏರ್ಪಾಡನ್ನು ಮಾಡಿದರು. ಈ ಏರ್ಪಾಡಿನ ಮೇರೆಗೆ ಜಮಿನು ಅಡಮಾನದ ಮೂಲ ಬ್ಯಾಂಕುಗಳು ತಮ್ಮ ಸೊತ್ತನ್ನು ಕೇಂದ್ರ ಜಮಿನು ಅಡಮಾನ ಬ್ಯಾಂಕಿಗೆ ಪರಾಭಾರೆಮಾಡಿಕೊಡುವುದು. ಆ ಸೊತ್ತುಗಳ ಜವಾಬ್ದಾರಿಯಿಂದ ಕೇಂದ್ರ ಬ್ಯಾಂಕಿನವರು ಸಾಲಪತ್ರಗಳನ್ನು ಮಾರಾಟಕ್ಕೆ ಹೊರಡಿಸುವುದು, ಆ ಸಾಲಪತ್ರಗಳ ಮಾರಾಟದಿಂದ ಬಂದ ಹಣದಿಂದ ಕೇಂದ್ರ ಬ್ಯಾಂಕಿನವರು ಮೂಲ ಬ್ಯಾಂಕುಗಳನ್ನು ನಡಿಸುವುದು, ಹೀಗೆಂದು ನಿಶ್ಚಯವಾಯಿತು. ಸರಕಾರದವರು ಇದಕ್ಕನುಸಾರವಾಗಿ ಒಂದು ಜಮಿನು ಅಡಮಾನದ ಕೇಂದ್ರ ಬ್ಯಾಂಕನ್ನು ಸ್ಥಾಪಿಸಿದರು. ಈ ಕೇಂದ್ರ ಬ್ಯಾಂಕಿನವರು ಒಟ್ಟಾರೆ ಬ್ಯಾಂಕಿಗೆ ಅಡವ್ಯಮಾಡಿಕೊಟ್ಟ ಸೊತ್ತುಗಳ ಅರ್ಧಾಂಶ ಮೌಲ್ಯಕ್ಕೆ ಹೆಚ್ಚಾಗದಷ್ಟು ಮೊಬಲಿಗಿನ ಸಾಲಪತ್ರಗಳನ್ನು ಹೊರಡಿಸಿಕುತ್ತಾರೆ. ಸಾಲಪತ್ರಗಳನ್ನು ಪಡೆದವರಿಗೆ ಸಲ್ಲತಕ್ಕದ್ದೆಲ್ಲಾ ಸರಿಯಾಗಿ ಸಂದಾಯವಾಗಿರುತ್ತದೋ ಎಂದು ನೋಡಿಕೊಳ್ಳಲಿಕ್ಕೆ ಒಬ್ಬ ಟ್ರಸ್ಟೀ (ಪ್ರಕೃತಕ್ಕೆ ಸಹಕಾರ ಸಂಘಗಳ ರಿಜಿಸ್ಟ್ರಾರರೇ) ಯನ್ನು ನೇಮಕನಮಾಡಿದ್ದಾರೆ. ಜಮಿನು ಅಡಮಾನ ಸಾಲಗಳ ಕುರಿತು ತಾವು ಮಾಡಿದ ಯೋಜನೆಯು ಫಲಕಾರಿಯಾಗುವಂತೆ ಸರಕಾರದವರು ಮೊದಲಿನಿಂದಲೂ ಈ ಬ್ಯಾಂಕಿನವರಿಗೆ ಅನೇಕ ತರದಲ್ಲಿ ಸಹಾಯಮಾಡುತ್ತಿದ್ದಾರೆ ಅರ್ಜಿದಾರರು ಈಗಾಗಿ ಕೊಡುವ ಅಡವಿನ ಭೂಮಿಗಳಿಗೆ ತನಿಖೆಯಿಂದ ಸರಿಯಾದ ಮೌಲ್ಯ ಕಟ್ಟುವರೆ ಒಂದು ವಿಶೇಷ ಶಿಬಂದಿಯನ್ನು ಸರಕಾರದವರು ತಮ್ಮ ಖರ್ಚಿನಿಂದಲೇ ಇಟ್ಟಿದ್ದಾರೆ. ವರ್ಷ ಹೋಗುತ್ತಾ ಹೋಗುತ್ತಾ ಜಮಿನು ಅಡಮಾನದ ಮೂಲ ಬ್ಯಾಂಕುಗಳ ಸಂಖ್ಯೆಯು ಮೆಲ್ಲಗೆ ಹೆಚ್ಚಿ ಬಂದು ಈಗ ಈ ಅಧಿಪತ್ಯದಲ್ಲಿ ಒಟ್ಟಿಗೆ 79 ಅಂತಹ ಮೂಲ ಬ್ಯಾಂಕುಗಳು ಇರುತ್ತವೆ. ಕೇಂದ್ರ ಜಮಿನು ಅಡಮಾನ ಬ್ಯಾಂಕು ಈಗ ಸ್ಥಿರವಾಗಿ ನೆಲೆಹೊಂದಿತೆಂದು ಹೇಳಬಹುದು. ಕೇಂದ್ರ ಜಮಿನು ಅಡಮಾನ ಬ್ಯಾಂಕಿನವರು ಮಾರಾಟಕ್ಕೆ ಹೊರಹಾಕುವ ಸಾಲಪತ್ರಗಳನ್ನು ತೆಕ್ಕೊಳ್ಳಲಿಕ್ಕೆ ಜನರಲ್ಲಿ ಆತುರತೆಯುಂಟಾಗುವಂತೆ ಆ ಸಾಲಪತ್ರಗಳ ಅಸಲು ಬಡ್ಡಿ ಹಣವ ಕುರಿತು ಸರಕಾರದವರು ಭದ್ರತೆಯನ್ನು ಕೊಟ್ಟಿರುತ್ತಾರೆ ಇಂಡಿಯನ್ ಟ್ರಸ್ಟಿ ಆಕ್ಟನ್ನು ಈಚೆಗೆ ತಿದ್ದು ಪಡಿಮಾಡುವಾಗ ಈ ಸಾಲಪತ್ರಗಳು "ಟ್ರಸ್ಟಿ ಹೊಣೆಪತ್ರ" ಗಳಾಗಿ ಎಣಿಸತಕ್ಕದ್ದೆಂದು ವಿಧಿಸಿರುತ್ತದೆ. ಇದಲ್ಲದೆ ಈ ಜಮಿನು ಅಡಮಾನ ಬ್ಯಾಂಕುಗಳಿಗೆ ರಿಜಿಸ್ಟ್ರೀ ಫೀಸಿನಿಂದ ಸಂಪೂರ್ಣ ವಿನಾಯತಿಯನ್ನು ಕೊಟ್ಟಿರುತ್ತಾರೆ.

ಸಹಕಾರ ಸಂಘಗಳಿಗೆ ಸರಕಾರದವರು ಕೊಟ್ಟ ವಿಶೇಷ ರಿಯಾಯತಿಗಳಲ್ಲಿ ಕೆಲವನ್ನು ಈ ಕೆಳಗೆ ಕಾಣಿಸಿಯಿದೆ:– (1) ಸಹಕಾರ ಸಂಘಗಳು ವಿವಾದಗಳನ್ನು ಕೋರ್ಟಿಗೆ ಕೊಂಡುಹೋಗದೆ ಅವುಗಳನ್ನು ಪಂಚಾಯತಿಯಿಂದ ತೀರ್ಮಾನಿಸಬಹುದು. ತೀರ್ಪುಗಳ ಮತ್ತು ಪಂಚಾಯತುದಾರರ ಫೈಸಲುಗಳ ಜ್ಯಾರಿ ಬಗ್ಗೆ ಒಂದು ವಿಶೇಷ ಶಿಬಂದಿ ಇರುತ್ತದೆ.

ಮುಂದುವರಿಯುವುದು

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ಪರಿಗಣ ನಮ್ಮ
ವಿಲಿಯಮ್ ಎಂಡ್ ಕೋ ರನರ
ರಾಜ ಮೆತ್ತು ರಾಣಿಯ ಟ್ರೇಡ್‌ಮಾರ್ಕ್‌ಗಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸ ಮಾಡಲಾಗಿದೆ

ಅಮೃತಾಂಜನ ಡಿಪೋವಿನ ತ್ರಿವರ್ಣದ 'ರೈಸಿಂಗ್ ಸನ್'

ಈ ನೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮಾರ್ಪಾಟಿನಿಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ

ಅಮೃತಾಂಜನ ಡಿಪೋ, —- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೇ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ಸಯಸನುನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರ ದಲ್ಲಿ ೩ನೆಯ ವರುಷದ ೧೨ನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ಈಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳುವಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನು ಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚವೆಚ್ಚೆ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮೂರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ವಿವರಗಳಿಗೆ ಹಸ್ತಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ,** ಬೆಳಗಾಂವಿ.

DIAMONDS! DIAMONDS!!

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! **ವಜ್ರಗಳು** BEST BRILLIANCY!!

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ ಸ್ಟ್ರಾಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡು ಕೊಳ್ಳುವವರಿಗೆ ಬಜಾರ ಧಾರಣೆಗಿಂತ 5 ಪರ್ಸಂಟಿಗೆ ಕಡಿಮೆಯಾಗಿದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪೆಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೆಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಲಪ್ತವ್ಯಾದಿಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಖಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಗೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: ಯಮ್. ಯಸ್. ಭಟ್ಕಳ್.

ಉತ್ತಮ ವರ್ಗದ **ಶ್ರೇಷ್ಠವಾದ**

ಸರಸ್ವತಿ

ಸ್ತ್ರೀಸಾಹಿತ್ಯ ಸಚಿತ್ರ **ಮಾಸಪತ್ರಿಕೆ**

ಇದೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಯತ್ನಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಆವಶ್ಯಕವಾದ ಶಿಕ್ಷಣ-ಸಾಹಿತ್ಯ, ಕೆಲಸ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಸಣ್ಣ ಸಣ್ಣ ಕಥೆಗಳು, ನಾಟಕಗಳೂ ಕರ್ನಾಟಕದ ಸುಪ್ರಸಿದ್ಧ ಲೇಖಕ ಲೇಖಕಿಯರಿಂದ ಆರಿಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮಂಜೂರಾಗಿದೆ. ಪ್ರಕಟನೆಗೆ ಆತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, ಬೆಂಗಳೂರು ನಗರ

The Commonwealth Assurance Co., Ltd.

(ESTD. 1929)

Chairman, Mr. N. C. Kelkar. Ex- M. L. A.

HEAD OFFICE: **POONA CITY.**

CHIEF AGENCY OFFICE **HAMPANKATTA, MANGALORE.**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1932ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಪುಸ್ತಿಲ್ಲದ್ದ ಎಲ್ಲಾ ಪೊಲಿಸಿದಾರರಿಗೆ

ಈ ಕಂಪೆನಿಯು 1000ಕ್ಕೆ ರೂ. 10 ಮೆತ್ತು 12ರಷ್ಟರ ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರೆಕೊಳ್ಳಿರಿ--

ದಿ ಕೋಮನ್‌ವೆಲ್ತ್ ಎಶ್ಯುರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಎ. ಬಿ. ಶೆಟ್ಟಿ, ಎಸ್ಕ್ವಾಯರ್, M.L.C., ಪ್ರೆಸಿಡೆಂಟ್.

ಡಾ। ಎಂ. ಆರ್. ಕಾಮತ್, L.M.P., ವೈಸ್ ಪ್ರೆಸಿಡೆಂಟ್.

ಬಿ. ಭೋಜರಾವ್, ಎಸ್ಕ್ವಾಯರ್, ಕಾರ್ಯದರ್ಶಿ.

ಟಿಕ್ಕಿ ಆಫೀಸು ತಾರೀಕು 25—1—'37] [ಸೋಡ್ತಿ ತೆಗೆಯುವ ತಾರೀಕು 31—1—'37

ಟಿಕೇಟು ೧ರ ಖರೀದಿ ಆಣೆ ನಾಲ್ಕು ಮಾತ್ರ. ೨೦ ಟಿಕೇಟುಗಳಿರುವ ಪುಸ್ತಕಕ್ಕೆ ರೂ. ಐದು ಮಾತ್ರ.

ಜನರಲ್ ಸಮಿತಿಯ ಇತರ ಸದಸ್ಯರು:

ಮ। ರಾ। ಎಮ್. ಆರ್. ಪೂಂಜ, ಆನರ್ಸ್
ಜಾರ್ಜ್ ಪಿ. ಆರಾನ್ನಾ, ಎಸ್ಕ್ವಾಯರ್,
ಮ। ರಾ। ಬೋಳ ವಾಸುದೇವ ರಾವ್, ಆನರ್ಸ್
,, ವಿ. ನರಸಿಂಹ ಕಾಮತ್, ಆನರ್ಸ್
,, ವಿ. ಕೆ. ಪ್ರಭು, ಆನರ್ಸ್
,, ಚಂದಯ್ಯ ಶೆಟ್ಟಿ, ಆನರ್ಸ್
,, ಕೆ. ರಾಜು ಹೆಗ್ಡೆ, ಆನರ್ಸ್
,, ಯು. ಕೃಷ್ಣ ರಾವ್, ಆನರ್ಸ್
,, ಯು. ಕೃಷ್ಣರಾಯ ರೈ, ಆನರ್ಸ್
,, ಎಮ್. ಕೆ. ಬಸಪ್ಪ, ಆನರ್ಸ್

ಎಮ್. ಬಿ. ಇದ್ದಿನಬ್ಬ, ಎಸ್ಕ್ವಾಯರ್
ಮ। ರಾ। ಎಚ್. ಶ್ರೀನಿವಾಸ ಎ. ರೈ, ಆನರ್ಸ್
,, ಎಚ್. ಸುಬ್ಬ ಚಂಪಾ, ಆನರ್ಸ್
,, ಎಮ್. ಕೆ. ಪೂವಪ್ಪ, ಆನರ್ಸ್
,, ಎಮ್. ಆರ್. ಸುವರ್ಣ, ಆನರ್ಸ್
,, ಕೆ. ಯು. ಪೈ, ಆನರ್ಸ್, ಬಿ. ಎ.
,, ಯು. ದೇವರಾಯ ರೈ, ಆನರ್ಸ್
,, ಸಂ. ಎಚ್. ವಾಸುದೇವಯ್ಯ, ಆನರ್ಸ್
,, ಪಿ. ಜೋಗಪ್ಪ ಕಾಮತ್, ಆನರ್ಸ್
,, ಬಿ. ಪದ್ಮನಾಭ ಭಟ್, ಆನರ್ಸ್

ಆರ್. ಆರಾನ್ನಾ, ಎಸ್ಕ್ವಾಯರ್
ಮ। ರಾ। ಕೆ. ಕೃಷ್ಣರಾವ್, ಆನರ್ಸ್, ಬಿ. ಎ., ಎಲ್. ಬಿ.
,, ಕೆ. ಅಣ್ಣಪ್ಪ ಭಟ್‌ಜಿ, ಆನರ್ಸ್
,, (ಡಾಕ್ಟರ್) ಎಮ್. ಉಮೇಶ ರಾವ್, ಆನರ್ಸ್, ಎಲ್. ಎಮ್. ಎಂಡ್ ಎಸ್.
,, (ಡಾಕ್ಟರ್) ಕೆ. ಶ್ಯಾಮ ಶೆಟ್ಟಿ, ಆನರ್ಸ್, ಎಲ್. ಎಮ್. ಪಿ.
,, ಯು. ವಿ. ರೈ, ಆನರ್ಸ್
ವೆರಿ ರೆವರೆಂಡ್ ಜೋರ್ಜ್ ಮೆನೆಜಸ್, (ಡಿ. ಡಿ. ವಿಕಾರ್)

ಟಿಕೇಟು ಪುಸ್ತಕ ಇತ್ಯಾದಿಗಳಿಗೆ ಕಾರ್ಯದರ್ಶಿಯವರಿಗೆ ಬರೆಕೊಳ್ಳಿರಿ.

ನವಯುಗ ಆಫಿಸಿನಲ್ಲಿ ಟಿಕೇಟು ದೊರಯುತ್ತದೆ.

ಪ್ರೇಮ ವಿದ್ಯಾಪೀಠ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇದರ ಹೊಸವರ್ಷವು ಜೂಲ್ಯಾಯಲ್ಲಿ ಮೊದಲಾಗುತ್ತದೆ. ಮಯೂರಿಯು ಉದ್ಯೋಗ ಬೇಕಾಗಿವ್ಯರೆ ಇಲ್ಲಿ ಶಿಕ್ಷಣವನ್ನು ಪಡೆಯಿರಿ. ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರೆಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್ ಗಳಿವೆ. ಪ್ರೊಸ್‌ಪೆಕ್ಟಸ್ ಮಾಹಿತಿಗಾಗಿ ಕೂಡಲೆ ೩ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ **ಸುನೀತಿಬಾಯಿ,**

ಬಿ. ಎ. ಎಲ್. ಟಿ., ಎಫ್. ಪಿ. ಎಸ್. ಎಸ್, ಭಿಷಗ್ಭತ್ನಿ, ರಿಜಿಸ್ಟ್ರಾರ್-

---

LAXMI BRAND COFFEE POWDER.

Pure & Superior quality, will last long without losing its flavour and colour.

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

TRADE MARK

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ **ಲಕ್ಷ್ಮೀಮಾರ್ಕಿನ ಕಾಫಿಹುಡಿಯನ್ನೇ** ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.

ನಮ್ಮಲ್ಲಿ ಕಬ್ಬಿಣದ ಟ್ರೆಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಿ ಕಂತುಗಳಿಂದಲೂ ಮಾರುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

Sold also by Instalments

ಮಾಸ] **ವಿಶ್ವವಾಣಿ** [ಪತ್ರಿಕೆ.

ಸಂಪಾದಕರು—**ಎ. ನ. ಕೃಷ್ಣರಾಯರು.**

ಸಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಬರುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಭಾಗದ ವೈಶಿಷ್ಟ್ಯ—ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗದಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮಾತ್ರ.

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) ... ... ರೂ. ೩—೮—೦

,, ,, (೬ ತಿಂಗಳಿಗೆ) ... ... ರೂ. ೨—೦—೦

ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫—೦—೦

ವಿಶ್ವವಾಣಿಯು ಮೈಸೂರು, ಮುಂಬಯಿ, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಪೂರ್ತಿಯಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ.

ಆದುದರಿಂದ **'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.**

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣಾ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

ಶ್ರೀ [illegible]ಕಾಶಿಯಲ್ಲಿ ತಂ'ಹಾರಾಗಕ್ಕೆ ರೇಶ್ಮೆ ಮಾಲುಗಳ ಕೆಟಲಗಿಯ, ಕಾತೀಕಕ್ಕೆ [illegible], ವಿಶ್ವೇಶ್ವರ ಪಟ 1, ಈ 3 ಸಾಮಾನುಗಳು 1 ಆಣೆಸ್ಟೇ ಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ಟ್ಯಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಾಡಿ ಕೆಡಪಾಮ್ಲಿ, ಸೇಟಾ, ಕೋಟಿಂಗ್, ಕಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಊಲ್ಲನ್ ಜಾಕ್, ಧಾವಲೆ, ನಾಸುಂಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಾಗು 1 ಮಾತ್ರ ಇನಾಂ. ಈಗಿನ ಹೊಸನಮೂನೆಯ ವಡಲು ಬುಟ್ಟಿ ಹಾಕಿದ ಜರೀ ಪೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವಡಲು ಸಾದಾ 16ಮೊಳದ ಪೀರೆ 1ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಅರೆ ಕಡಮೆ 16ಮೊಳ ಕ್ವಜರ್ ಅಂಚು ರೂ. 10½ ಯಿಂದ ರೂ. 16, ಖಣ 1ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಖರ್ಚೂ ಪ್ರತ್ಯೇಕ. ಅರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ವಿರೋಮಣಿ ನಾರಾಯಣಾಚಾರ್ಯ & ಕಂಪೆನಿ, ಚೌಕಂಬಾ, ಬೆನಾರಿಸ್, ಕಾಶಿ.

USE ALWAYS

SUVASINI AGAR BATHIES

[REGD.]

SUPPLY AGENCY LTD., UDIPI.

Do you want

That your calendars should be very attractive?

THEN YOU WILL ENTRUST YOUR

Calendar Printing

— WORK TO —

THULUNAD PRESS, UDIPI

Single Colour, Double Colour, Tricolour

Printing orders executed neatly & beautifully.

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY

Registered No. M. 3618 ೨೦ ಪುಟಗಳು---ಬಂದಾಣಿ NAVAYUGA
A Nationalist Kanarese Weekly, UDIPI, S. I.

It will pay you to advertise in 'NAVAYUGA' The Leading Nationalist Kanarese Weekly of Karnatak
FOR ARTES OF ADVT. Etc.
APPLY TO THE MANAGER

ನವಯುಗ

ವಾಚಕರೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟು
ಮಂಗಳೂರು ಉಡುಪಿಗಳಲ್ಲಿ
ಜಯಶೀಲವಾಗಿ
ಅಭಿನಯಿಸಲ್ಪಟ್ಟು
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೪ ೦
ತಿರುಪತಿ ಪುಸಂಜ, ಉಡುಪಿ.

VOL. XV.-NO. 17 24-12-1936

ಮೂಡ ಬಾನಿನ ಕಣ್ಣು ಕೆಂಗಿಡಿಮುಕ್ಕಾರುತಿದೆ,
ಬನದ ನಾಡೊಳು ಬೆಳಗುತಿದೆ ತುಮುಲನಾಪ;

ವಾರಪತ್ರಿಕೆ
ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳನ ಮೊಗವಬ್ಬ,
'ನವಯುಗ'ದ ರುಪ್ರಿರವಿಯಾರಕ್ಕ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ದಶಂಬರ ೨೪, ೧೯೩೬ [ಸಂಚಿಕೆ ೧೭

THE
Canara Industrial & Banking
SYNDICATE, LIMITED.

Head Office:
MUKUNDA NIVAS,
UDIPI, S. I.

BRANCHES:

1	Bangalore City	16	Kanhangad
2	Belgaum	17	Kasargode
3	Byadgi	18	Karkala
4	Bellary	19	Udipi
5	Adoni	20	Uppinangadi
6	Hospet	21	Karwar
7	Nandyal	22	Kumta
8	Prodattur	23	Ankola
9	Tadpatri	24	Honavar
10	Taliparamba	25	Bhatkal
11	Hubli	26	Sirsi
12	Gadag	27	Sagar
13	Mangalore	28	Coondapoor
14	Cannanore	29	Brahmavar
15	Payyanur	30	Hungarcutta

Beg to announce the opening of a branch at
BOMBAY
in April next in the ground floor of the new building erected by Rao Sahib Patil at Sir Phirozshah Mehta Road in front of the new site of the Reserve Bank of India. The exact date will be announced later.

ADVANCES ON
GOLD, GOVERNMENT SECURITIES, GENUINE TRADE BILLS, MERCHANTILE COMMODITIES & OTHER APPROVED SECURITIES ARE GRANTED AT LOW RATES.

CHEQUES, BILLS R. R.'s, BILL OF LADING AND ALL KINDS OF MERCANTILE INSTRUMENTS ARE COLLECTED AND NEGOTIATED. REMITTANCES TO PLACES WHERE THE SYNDICATE HAS BRANCHES AND ALSO TO OTHER IMPORTANT PLACES OF INDIA AND THE WORLD, SUCH AS BOMBAY, CALCUTTA, KARACHI, MADRAS, BEZWADA, CALICUT, COCHIN, AND LONDON, PARIS, NEW YORK ETC., ARE ARRANGED AT FAVOURABLE RATES.

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ
ಬ್ಯಾಂಕ್—ಬ್ಯಾಂಕರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ಠೇವಣಾತಿಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ಠೇವಣಾತಿಗಳು 3 ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ 4½%, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 5%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ 6%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುದು.

ಒಂದು ವರುಷದ ಯಾ ಹೆಚ್ಚಿಗೆ ಅವಧಿಯ ಖಾಯಂ ಠೇವಣಾತಿಗಳಿಗೆ ಮೇಲೆ ಕಾಣಿಸಿದ ದರದಲ್ಲಿ 6 ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು. ಜೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು. ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತ್ ಕ್ಯುಮುಲೇಟಿವ್ ಠೇವಣಾತಿಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ, ಹೆಚ್ಚಿನ ಮಾಹಿತಿ [illegible] ಕೊಳ್ಳಿರಿ.

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸಾಸ್ವಾದ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದ ಕ್ಷಯೂ ಅನಾಯಾಸವಾಗಿ ದೊರೆಯುವುವು. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ. ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಿಕಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಪಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ರೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, *President & Manager,*

ಯಂ. ಆರ್. ಪೂಂಜ, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ—

ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ ಎ.ಯವರಿಂದ ಅನುವಾದಿಸಲ್ಪಟ್ಟು ಟಾಲಸ್ಟಾಯಿಯವರ ಕಥೆಗಳೆಲ್ಲಾ ಕನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ,

ಪ್ರತಿಗಳು ಸಿಗುವ ಸ್ಥಳ—

ಕಿರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ಮಂಡಲದ ಪರವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!
ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಸಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಲ್ಲಿ) ಹೊರಡುವುದು!

ಅಲ್ಲದೆ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್
ಕೊಲೆರಾ ರೋಗಕ್ಕೆ ರಾಮಬಾಣ ಔಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

ಭೈರವ ಮಾತ್ರೆಗಳು
ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.
೧೦೦ ಮಾತ್ರೆಗಳಿಗೆ ರೂ ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ

ಯು. ಪಿ ಮೇಸ್ತ, ಗೋಲ್ಡ್ ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

***Head Office*: UDIPI.**

Branches: **MANGALORE and KATAPADI.**

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು

ಗುಣ ಬಾರದಿದ್ದರೆ — **ಸ್ತ್ರೀಧರ್ಮ ಸಂಜೀವಿನೀ ಚೂರ್ಣ (ರಿಜಿಸ್ಟರ್ಡ)** — ಹಣ ಪರತ

ಈ ಚೂರ್ಣವು ಕೆಂಪು ಬಳೆ ತರಗಿಗೆ ಶತ್ರುವಾಗಿರುವುದು. ಅನಿಯಮಿತತನದಿಂದ ಮುಟ್ಟಾಗುವಿಕೆ, ಕ್ಷೀಣ ವೈಯಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯ ದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟು ಮು. ರಿ ಎ. ಎಮ್ ಇನ್ಸ್‌ಪೆಕ್ಟರ ಬೆಳಗಾವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಗಿನ ರಕ್ತ ಗುಲ್ಮದ ಗಂಟು ನಾಮಶೇಷವಾಯಿತು; ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇಷ್ಟದಂತಾದವು. ೫೧ ದಿವಸದ ಡಬ್ಬಿಯು ಕಿಮ್ಮತು ರೂ. ೩ ಟ.ಖ. ಆಣೆ, ೮. ಡಬ್ಬಿಗೆ ೪ರೂ.] **ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ)** [೨ ಪಿ ಖರ್ಚು ಆಣೆ ೮,

ಬಹಳಸಾರಿ ಹಡಿಯುವುದರಿಂದ ಆತಿಶಯ ಅಶಕ್ತಿಯಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂದಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು. ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು. ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ನೋಡಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮುಖ್ಯ ಸರ್ಟಿಫಿಕೇಟು ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂಲ ಕೇಳವಾ ಮಾಹುವಾ ಜಿ. ಇಟಾವೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಸಮಾಚಾರ ಸಂಗ್ರಹ

ನೋಬೆಲ್ ಬಹುಮಾನ--ಗಾಂಧಿಜಿಯವರಿಗೆ ತಿರುವಾಂಕೂರಿನ ಆಹ್ವಾನ--ಕೈಗಾರಿಕೆಯಲ್ಲಿ ಗಾಂಧಿಜಿಗಳ ನೂತನ ಶೋಧನೆ--ಫೈಜಪುರ ಕಾಂಗ್ರೆಸ್ಸು--ಕೊಂಗ್ರೆಸು ಅಧಿವೇಶನ

ಕೈಗಾರಿಕೆಯಲ್ಲಿ ಗಾಂಧಿಜಿಗಳ ನೂತನ ಶೋಧನೆ

ಹಳೆಯ ವರ್ತಮಾನ ಪತ್ರಿಕೆಗಳಿಂದ ಅಗ್ಗದ ಹಾಗೂ ಬೆಚ್ಚಗಿನ ಹಾಸು ಹೊದಿಕೆಗಳನ್ನು ಮಾಡುವುದು.

ಹಳೆ ಬಟ್ಟೆಯ ಜೋಳಿಗೆಯನ್ನು ಮಾಡಿ ಅದರೊಳಗೆ ಹಾಳು ಕಾಗದವನ್ನು ತುಂಬಿಸಿ ಅದಕ್ಕೂ ಬಟ್ಟೆಗೂ ನಡುವೆ ಹಾಳು ಹತ್ತಿಯ ತೆಳುವಾದ ಹೊದಿಕೆಯನ್ನಿಟ್ಟು ಹೊಲಿದು 'ಕ್ವಿಲ್ಟ್' ನಂತಹ ಹಾಸು ಹೊದಿಕೆಗಳನ್ನು ಮಾಡಿಸಿರುವರು. ತಾನೂ ಅಂತಹದೊಂದನ್ನು ಉಪಯೋಗಿಸುವರು. ಒಂದೊಂದಕ್ಕೆ ಬೆಲೆ ನಾಲ್ಕಾಣೆಗೆ ಮಿಾರುವುದಿಲ್ಲವಂತೆ.

ಫೈಜಪುರ ಕಾಂಗ್ರೆಸ್ಸು

ಕಾಂಗ್ರೆಸ್ಸು ಜರಗುವ ಸ್ಥಾನಕ್ಕೆ ಹೆಸರು ಟಳಕ ನಗರ. ಆದರ ನವದ್ವಾರಗಳು ಇತಿಹಾಸ ಪ್ರಸಿದ್ಧ ಪುರುಷರ ಹೆಸರುಗಳಿಂದ ಭೂಷಿತವಾಗಿದೆ. ಪ್ರಮುಖ ದ್ವಾರದ ಹೆಸರು ಶಿವಾಜಿಗೇಟ್. ಉಳಿದವುಗಳಿಗೆ ಜಾನ್ಸೀರಾಣೀಗೇಟ್, ಪೋಲಾಪುರ ಶಾಹಿದ್‌ಗೇಟ್, ಅನ್ಸಾರೀಗೇಟ್, ರಾನಡೇ ಗೇಟ್, ಗೋಖಲೇಗೇಟ್, ಸರ್ವಜನಿಕಾಕಾಗೇಟ್, ಸೇನಾಪತಿಭಾಘಾತ್‌ಗೇಟ್ ಎಂದು ಹೆಸರಿಟ್ಟಿದ್ದಾರೆ.

ಸ್ವಾಗತ ಸಮಿತಿಯ ಇಪ್ಪತ್ತೈರಡು ಉಪಸಮಿತಿಗಳು ಕಾಂಗ್ರೆಸ್ಸು ಸಮಾರಂಭದ ವ್ಯವಸ್ಥೆಯನ್ನೆಲ್ಲ ಉತ್ಸಾಹದಿಂದ ನೋಡಿಕೊಳ್ಳುತ್ತಿವೆ. ಒಂದು ಸಾವಿರದ ಇನ್ನೂರು ಡೆಲಿಗೇಟ್ (ಪ್ರತಿನಿಧಿ)ಗಳೂ ನಾಲ್ಕು ಸಾವಿರ ಸಂದರ್ಶಕರೂ ಬಂದಾರಲ್ಲದೆ ಸುತ್ತಮುತ್ತಲಿನ ಊರುಗಳಿಂದ ಸುಮಾರು ಮೂವತ್ತು ಸಾವಿರ ಕೃಷಿಕರೂ ಸೇರಿಯಾರೆಂದು ನಿರೀಕ್ಷಿಸಲಾಗಿದೆ. ಕಾಂಗ್ರೆಸ್ಸಿನ ಹಿಂದಿನ ಅಧ್ಯಕ್ಷರುಗಳಲ್ಲಿ ಪಂಡಿತ ಮಾಲವೀಯರು, ವಲ್ಲಭಾಯಿ ಪಟೇಲ್, ಸರೋಜಿನಿ ನಾಯ್ಡು, ಮೌಲಾನಾ ಅಬ್ದುಲ್ ಕರೀಮ್, ಬಾಬೂರಾಜೇಂದ್ರ ಪ್ರಸಾದ್, ಮಹಾತ್ಮಾ ಗಾಂಧಿ ಇವರುಗಳ ಆಗಮನದ ನಿರೀಕ್ಷಣೆ ಇದೆ. ಗಾಂಧಿಜಿಯವರು ಕೇವಲ (Visitor) ಸಂದರ್ಶಕರಾಗಿ ಟಿಕೇಟು ಪಡಕೊಂಡು ಅಧಿವೇಶನವನ್ನು ಪ್ರವೇಶಿಸುವರು.

ತಾ. 5-1-'37ರಲ್ಲಿ ಪಂಡಿತ ಮದನಮೋಹನ ಮಾಲವೀಯರ ೭೭ನೆಯ ಜನ್ಮದಿನಾಚರಣೆ

ಕಾಶಿಯ ಹಿಂದೂ ಯುನಿವರ್ಸಿಟಿಯಲ್ಲಿ ಅಂದು ಈ ಜಯಂತ್ಯೋತ್ಸವವನ್ನು ಬಹು ವಿಜೃಂಭಣೆಯಿಂದ ಜರಗಿಸುವಂತೆ ಆದಕ್ಕಾಗಿ ಒಂದು ಸಮಿತಿಯು ಏರ್ಪಟ್ಟಿದೆ. ಆ ದಿನದ ಕಾರ್ಯಕಲಾಪಗಳಲ್ಲಿ ಶ್ರೀ ವಿಷ್ಣುಯಾಗ, ಮಹಾ ಮೃತ್ಯುಂಜಯ ಜಪ, ಭಗವದ್ಗೀತಾ ಪಾರಾಯಣ, ಪ್ರಾರ್ಥನೆ ಇತ್ಯಾದಿಗಳು ಸೇರಿವೆ. ಈ ಸಂದರ್ಭವ ಸ್ಮಾರಕವಾಗಿ ಹಿಂದಿಯಲ್ಲಿ ಒಂದು ಸಾವಿರ ಪುಟವ (Commemoration Volume) ಸ್ಮಾರಕ ಗ್ರಂಥವನ್ನು ಪ್ರಕಟಿಸುವ ಏರ್ಪಾಡೂ ನಡೆದಿರುತ್ತದೆ.

ನೋಬೆಲ್ ಬಹುಮಾನ

ಈ ವರ್ಷದ ನೋಬೆಲ್ ಬಹುಮಾನವು ಯುಜೀನ್ ಓಸೆಲ್ ಎಂಬ ಅಮೇರಿಕದ ನಾಟಕ ಕರ್ತನಿಗೆ ದೊರಕಿತು. ಈತನ ತಂದೆಯು ನಟ. ಈತನೂ ಬಾಲ್ಯವನ್ನು ನಾಟಕ ಕಂಪೆನಿಯ ಸಂಚಾರ ಜೀವನವನ್ನು ಕಳೆದವನು. ಯೌವನದಲ್ಲಿ ಅಲಕ್ಷ್ಯ ಜೀವನವನ್ನು ನಡೆಸಿ ಕ್ಷಯದ ಚಿನ್ಹೆಗಳು ಕಂಡು ಬಂದಾಗ ಒಂದು ನೆನೆಟೋರಿಯಮ್ (ಆರೋಗ್ಯವರ್ಧಕ ಗೃಹ) ನಲ್ಲಿದ್ದ. ಇದು ಸುಮಾರು 1913ರಲ್ಲಿ. ಆಗ ಆತನಿಗೆ ತಾನು ಬರಹಗಾರನಾಗಬೇಕೆಂದು ತೋರಿ ಬರೆಯತೊಡಗಿದನಂತೆ. ಅನಂತರ ಆತನ ಪ್ರಿನ್ಸ್‌ಟನ್ ಯುನಿವರ್ಸಿಟಿಯಲ್ಲಿದ್ದು ಅಲ್ಲಿ ಪಾಸಾಗಲಾರದೆ ಅದನ್ನು ಬಿಟ್ಟು ಊರುಳುಗಲ್ಲಿನಂತೆ ಕನ್ನ ಜೀವನವನ್ನು ನಡೆಸುತ್ತ ನಾಟಕ ಬರೆಯುತ್ತಿದ್ದ, ಆಗೋಚರ ವ್ಯಕ್ತಿಯಾಗಿದ್ದ ಆತ ನಿನ್ನಿನ ವರೆಗೆ. ಇಂದು ಅವನು ನಮ್ಮ ಕವಿ ರವೀಂದ್ರರಂತೆ ನೋಬೆಲ್ ಬಹುಮಾನ ಹೊಂದಿದ ಪ್ರಪಂಚ ವಿಖ್ಯಾತ ಸಾಹಿತ್ಯ ಶಿಖಾಮಣಿ!

ಮಿಸ್ ರಾಜಲಕ್ಷ್ಮಿ ಎಂಬ ಎಂಟು ವರುಷದ ಭಾರತೀಯ ಬಾಲಿಕೆಯು ತನ್ನ ಭರತನಾಟ್ಯ ಪ್ರದರ್ಶನದಿಂದ ರಂಗೂನಿನಲ್ಲಿ ವಿಶೇಷ ಪ್ರಖ್ಯಾತಿಯನ್ನು ಪೊಂದುತ್ತಿದ್ದಾಳೆ.

ಸಿಲೋನಿನ ಸರಕಾರವು ಶಾಲೆಗೆ ಹೋಗುವ ಒಡಪುಕ್ಕಳಿಗೆ ಪೌಷ್ಟಿವರ್ಧಕ ಊಟವನ್ನೊದಗಿಸುವುದಕ್ಕಾಗಿ ರೂ. 1,000,000 ವನ್ನು ಮಿಾಸಲಾಗಿ ತೆಗೆದಿಟ್ಟಿದೆ. ಪುಷ್ಟಿವರ್ಧಕ ಆಹಾರವೆಂದರೆ ಕೇಸಕ್ಕೆಯನ್ನ, ಬೇಳೆಗಳು, ಕಾಯಿಪಲ್ಯ, ತೆಂಗಿನ ಎಣ್ಣೆಯೂ ತುಪ್ಪ, ಮಿಾನು ಮತ್ತು ಹಾಲು ಮೊಸರು. ಸಮರ್ಥ ಅಡಿಗೆಯವರನ್ನು ನೇಮಿಸಲಾಗುವುದು. ಇಂತಹ ಊಟದಿಂದ ವಿದ್ಯಾರ್ಥಿಗಳ ಶಾರೀರಕ ಬದಲಾವಣೆಗಳನ್ನು ಪರಿಶೀಲಿಸಿ ವರದಿಯನ್ನೊಪ್ಪಿಸಲಿಕ್ಕೆ ನಾಲ್ಕು ಶಾಲೆಗಳಿಗೊಬ್ಬನಂತೆ ಮೆಡಿಕಲ್ ಆಫೀಸರನೂ ನಿಯಮಿಸಲ್ಪಡುವನು.

ಡಾಕ್ಟರ್ ಕುರ್ತುಕೋಟಿ ಶಂಕರಾಚಾರ್ಯರು ತಾನು ಹಿಂದೂ ಮಹಾಸಭೆಯ ಅಧ್ಯಕ್ಷತೆಯನ್ನು ಸ್ವೀಕರಿಸಿದುದು ಅದು ಹಿಂದುಗಳು ಸ್ವತಂತ್ರರ ಹೊಂದದಂತೆ ನಕ್ಷತೆಯಿಂದ ಕಾರ್ಯ ನಿರ್ವಹಿಸುವಂತೆ ಮಾಡುವುದಕ್ಕಾಗಿಯೆಂದೂ ಇತರ ಜನಾಂಗಗಳು ಹೇಗೆ ತಮ್ಮ ದೇಶ ತಮ್ಮ ಸಂಸ್ಕೃತಿ ಎಂದು ಆಗ್ರಹದಿಂದ ಅವನ್ನು ರಕ್ಷಿಸಿಕೊಂಡು ಅಭಿವೃದ್ಧಿಗೆ ತರುತ್ತಿರುವರೋ ಹಾಗೆಯೇ ಹಿಂದುಗಳೂ ಹಿಂದೂದೇಶ ಹಿಂದೂ ಸಂಸ್ಕೃತಿ ಇವುಗಳನ್ನು ಅಭಿಮಾನದಿಂದ ಕಾಯ್ದುಕೊಂಡು ಮೇಲ್ಮೆಗೆತರಲಿಕ್ಕೆ ಯತ್ನಿಸಬೇಕಲ್ಲದೆ ಅನ್ಯಮತೀಯರ ತಿರುಳಿಲ್ಲದ ಮಾತಿಗೆ ಮರುಳಾಗಬಾರದೆಂದೂ ನಾಸಿಕದಲ್ಲಿ ಜರಗಿದೊಂದು ದೊಡ್ಡ ಸಭೆಯಲ್ಲಿ ತನ್ನ ಧ್ಯೇಯವನ್ನೂ ಆಕಾಂಕ್ಷೆಗಳನ್ನೂ ವಿವರಿಸಿ ಹೇಳಿದರು.

ಗಾಂಧಿಜಿಯವರಿಗೆ ತಿರುವಾಂಕೂರಿನ ಆಹ್ವಾನ

ತಿರುವಾಂಕೂರಿನಲ್ಲಿ ಅಮಿರಿಗೆ ದೇವಸ್ಥಾನ ಪ್ರವೇಶದ ಹಕ್ಕು ದೊರೆತುದರ ಸಂತೋಷೋತ್ಸವ ಸಮಾರಂಭಕ್ಕಾಗಿ ಗಾಂಧಿಜಿಯವರನ್ನು ಕರೆದಿರುತ್ತಾರೆ. ಅವರು ಜನವರಿಯ ಪ್ರಥಮ ವಾರದಲ್ಲಿ ಅಲ್ಲಿಗೆ ಕೆರಳಿ ಸಮಾರಂಭದಲ್ಲಿ ಸಹಭಾಗಿಗಳಾಗುವರು.

ವಿಜಯನಗರದ ಸ್ಮಾರಕೋತ್ಸವ

ವಿಜಯನಗರದ ಆರನೇ ಶತಮಾನೋತ್ಸವವು ಈ ತಿಂಗಳ ತಾ. 25ರಿಂದ ಹೊಸಪೇಟೆಯಲ್ಲಿ ಆರಂಭವಾಗಲಿರುವದು. ಈ ಮಹೋತ್ಸವ ನಡೆಯುವ ಸ್ಥಳಕ್ಕೆ ಶ್ರೀ. ಕೃಷ್ಣದೇವರಾಯ ನಗರವೆಂದು ನಾಮಕರಣ ಮಾಡಲಾಗಿದೆ. ಉತ್ಸವದ ಮುಖ್ಯ ಮಂಟಪವು ಸಿದ್ಧವಾಗಿರುವದು. 10 ಸಾವಿರ ಜನರು ಸಭೆ ಸೇರುವಷ್ಟು ವಿಶಾಲವಿರುವ ಈ ಮಂಟಪವು ಕರ್ನಾಟಕದ ಗತ ವೈಭವವನ್ನು ಜ್ಞಾಪಕಕ್ಕೆ ತರುವ, ಶ್ರೀಕೃಷ್ಣದೇವರಾಯರೇ ಮೊದಲಾದ ಕರ್ನಾಟಕ ಪುಣ್ಯ ಪುರುಷರ ಚಿತ್ರಗಳಿಂದಲಂಕರಿಸಲ್ಪಡುವದು. ಈ ಮಹೋತ್ಸವಕ್ಕೆ ಆಗಮಿಸಲಿರುವ ಸುಮಾರು 20 ಸಾವಿರ ಜನರ ಊಟದ ವ್ಯವಸ್ಥೆ ಮಾಡಲಾಗಿದೆ.

ಶ್ರೀ ಸರ್ ವಿಶ್ವೇಶ್ವರಯ್ಯ, ಕುರ್ತುಕೋಟಿ ಮಹಾ ಭಾಗವತರು-ಇವರಿಬ್ಬರಲ್ಲಿ ಒಬ್ಬರು ಮಹಾ ಸಭೆಯ ಅಧ್ಯಕ್ಷರಾಗುವರು. ಅವಿಲ ಭಾರತದ ಪ್ರಮುಖರಿಗೆಲ್ಲಾ ಆಮಂತ್ರಣಗಳು ಹೋಗಿವೆ. ಸಂಗೀತವೇ ಮೊದಲಾದ ಮನೋರಂಜಕ ಕಲಾ ಪ್ರದರ್ಶನಗಳಿಗೂ ಆಸ್ಪದವೀಯಲಾಗಿದೆ. ಕರ್ನಾಟಕ ಇತಿಹಾಸ ಸಮ್ಮೇಲನವು ಮೈಸೂರಿನ ಶ್ರೀ. ಎಂ. ಎಚ್. ಕೃಷ್ಣ, ಎಮ್. ಎ. ಡಿ. ಲಿಟ್ ಇವರ ಅಧ್ಯಕ್ಷತೆಯಲ್ಲಿಯೂ ವ್ಯಾಯಾಮ ಪರಿಷತ್ತು ಔಂಧದ ಮಹಾ ಮಹಾರಾಜರ ಅಧ್ಯಕ್ಷತೆಯಲ್ಲಿಯೂ ಜರಗುವುದು. ವ್ಯಾಯಾಮ ಪರಿಷತ್ತಿಗೆ ಶ್ರೀ. ಎಸ್. ಆರ್. ಶಾಸ್ತ್ರಿಗಳು ಅಧ್ಯಕ್ಷರಾಗುವರು. ಕರ್ನಾಟಕದ ಸುಪ್ರಸಿದ್ಧ ಸಂಗೀತ ಗಾರರೆಲ್ಲಾ ಆಗಮಿಸುವರಲ್ಲದೆ, ಮೈಸೂರಿನ ಪ್ರಸಿದ್ಧ ನಟರೂ, ಮಂಗಳೂರಿನ ಯಕ್ಷಗಾನ ಪಟುಗಳೂ ಬಂದು ಉತ್ಸವದಲ್ಲಿ ಭಾಗವಹಿಸಲಿರುವರು. ಆಯುರ್ವೇದ ಸಮ್ಮೇಲನ, ಪ್ರೊ. ಕೆ.ವಿ.ಅಯ್ಯರರ ವ್ಯಾಯಾಮ ಪ್ರದರ್ಶನ ಮೊದಲಾದುವೂ ಇರುವವು. ಮೈಸೂರು ಮತ್ತು ಕೊಲ್ಹಾಪುರದ ಪ್ರಸಿದ್ಧ ಜಟ್ಟಿಗಳು ಬರುವರು. ಕರ್ನಾಟಕದ ೩೦-೩೫. ವ್ಯಾಯಾಮ ಶಾಲೆಗಳು ತಮ್ಮ ಪ್ರದರ್ಶನಗಳನ್ನು ಮಾಡಿತೋರಿಸಲಿರುವರು. ಅಂತೂ ಕರ್ನಾಟಕದ ಎಲ್ಲಾ ವಿದ್ಯೆಗಳಿಗೂ ಅಂದಿನ ಉತ್ಸವದಲ್ಲಿ ಸ್ಥಾನವನ್ನೀಯಲಾಗಿದೆ. ಸುಮಾರು ೩೦ ಸಾವಿರ ಜನರು ಕರ್ನಾಟಕದ ನಾಲ್ಕೂ ಕಡೆಗಳಿಂದ ಬಂದು ಇಳಿದು ನೆರೆಯಬಹುದೆಂದು ನಿರೀಕ್ಷಿಸಲಾಗಿದೆ.

ಕೊಂಗ್ರೆಸು ಅಧಿವೇಶನ.

ಫೈಜಪುರದ ಕೊಂಗ್ರೆಸು ಮಹಾಸಭೆಯ ಸಕಲ ಸಿದ್ಧತೆಗಳೂ ಸಾಂಗವಾಗಿ ನೆರವೇರಿವೆ. ತಿಲಕನಗರದ ರಜನೆಯು ಸಂಪೂರ್ಣವಾಗಿದೆ. ಫೈಜಪುರದ ಸಮೀಪವ ರೈಲ್ವೇ ನೈಶಿನಲ್ಲಿ ದಿನಂಪ್ರತಿ ತುಂಬಾ ಪ್ರಯಾಣಿಕರು ಬಂದಿಳಿಯುತ್ತಿದ್ದಾರೆ. ಅವಿಲ ಭಾರತದಿಂದ ೧೫೦೦ ಮಂದಿ ಪ್ರತಿನಿಧಿಗಳೂ, ೪೦೦೦ ಮಂದಿ ಸಂದರ್ಶಕರೂ ೩೦ ಸಾವಿರ ಮಂದಿ ರೈತರೂ ಕೂಡಬಹುದೆಂಬ ನಿರೀಕ್ಷೆಯಿದೆ. ರೈತರ ಮೆರವಣಿಗೆಯು ತಿಲಕನಗರದೊಳಗೆ ಪ್ರವೇಶಿಸಬಹುದೆಂದು ಸ್ವಾಗತಸಮಿತಿಯವರು ಸಮ್ಮತಿ ನಿರುವರು.

ESTD 1906

CANARA BANK,

LIMITED

OFFICES AT

Alleppey	Chikmagalur	Kasargod
Arsikere	Cochin	Mangalore-Bunder
Badagara	Coondapoor	Mangalore-City
Bangalore-City	Davangere	Manjeshwar
Bombay-Fort	Dodballapur	Moolky
Bombay-Mandvi	Ernaculam	Payyannur
Buntwal	Ganguli	Puttur
Calicut	Hubli	Udipi
Cannanore	Karkala	

Total Working Funds Rs. 5,00,000

ಈ ವಾರದ ಕಥೆ

• ಅ ಜ್ಞಾ ನ ಸಾ ಗ ರ •

ತರಂಗ ೧

'ನೊಕ್ಕೆಯ ಕೊದಿ'

ಬೊಮ್ಮು ಸೆಟ್ಟಿಯ ಹೊಟ್ಟೆಯನ್ನು ಕುಕ್ಕುತಿದ್ದುದು ಮಿತಿಮೀರಿ ತಿಂದ ರೊಟ್ಟಿ; ಆದರೆ ಆವನಿಗೆ ಮನಸಾದುದು ಮಾತ್ರ ನೊಕ್ಕೆಯ ಕಣ್ಣು ಕುಕ್ಕಲಿಕ್ಕೆ! ನೊಕ್ಕೆಯ ಕಣ್ಣು ಸೆಟ್ಟಿಯ ಹೊಟ್ಟೆಯ ಮೇಲಿನ ಚರ್ಮವನ್ನು ಕಂಡೀತು; ಒಳಗಿನ ಅನ್ನಕೋಶವನ್ನು ಕಾಣಲಿಕ್ಕೆ ಅದೇನು 'ಎಕ್ಸ್‌ರೇ' ಅಲ್ಲವಷ್ಟೆ! ಸೆಟ್ಟರ ಹೊಟ್ಟೆಯುಬ್ಬರಿಸಿದ ಆಪರಾಧವನ್ನು ನೊಕ್ಕೆಯ ಮೇಲೆ ಹಾಕಿಬಿಟ್ಟರೆ ಭಟ್ಟರಿಗೆ ಅರ್ಧ ಮುಡಿ ಉದ್ದಿನ ಲಾಭ; ಸೆಟ್ಟರಿಗೆ ಮುಂದಕ್ಕೂ ಅಷ್ಟೇ ರೊಟ್ಟಿ ತಿನ್ನುವ ಚಾನ್ಸು!

ಬೊಮ್ಮು ಸೆಟ್ಟಿಯು ಒಂದೊಂದು ಸಲ ಕೋಳಿಯಂಕಕ್ಕೆ ಹೋಗುವುದಿತ್ತು—ಜುಗಾರಾಡಲಿಕ್ಕಲ್ಲ. ದಿನವೆಲ್ಲ ತಿಂಗಳೆಲ್ಲ ವರ್ಷವೆಲ್ಲ ಹೊಲದಲ್ಲಿ ಗೇಯುತ್ತಿದ್ದ ಬೇಸರವನ್ನು ಕಳೆಯಲಿಕ್ಕೆ. ಹೋಗುವಾಗ ತನ್ನ 'ಬೀರ ಕೆಂಚ'ನನ್ನು ಕಂಕುಳಲ್ಲಿ ಹಿಡಿದುಕೊಂಡು ಹೋಗುವ್ದೊಂದು ವಾಡಿಕೆ. ತನಗೂ ಒಂದು ಅಂಕದ ಕೋಳಿಯಿದೆಯೆಂಬ ಆತ್ಮ ಸಂತೋಷಕ್ಕಾಗಿ. ಅನುಕೂಲವಾದ ಸಂದರ್ಭ ದೊರೆಯದಿದ್ದರೆ ಅದರ ಕಾಲಿಗೆ ಬಾಳು ಕಟ್ಟಬ್ತಿದ್ದಿಲ್ಲ. ಮೊನ್ನೆಯಂತೂ ಬೀರಕೆಂಜನನ್ನು ಕಾಣಲಿಕ್ಕೆ ಬಿಡುವ ಯೋಜನೆಯೇ ಬೊಮ್ಮನಿಗಿದ್ದಿಲ್ಲ. ಏಕೆಂದರೆ ಕೆಂಚನಿಗೆ ಅಂದು ಮುಪ್ಪು ಎಂದು ಕುಕ್ಕುಟ ಪಂಚಾಂಗ ನೋಡಿ ಮತದ ಭಟ್ಟರು ಹೇಳಿದ್ದರು. ಪಂಚನಿಗೆ ಯೌವನ ಅಂದು. ಆದರೆ ಬೊಮ್ಮನಿದು ಪಂಚನಿಲ್ಲವಷ್ಟೆ! ಅವನು ಕೋಳಿ ಪಡೆಯನ್ನು ನೋಡುತ್ತ ತಿರುಗುತ್ತಿದ್ದ. ಅಷ್ಟರಲ್ಲಿ ಬೊಗ್ರ ಪೂಜಾರಿಯು ಬೊಮ್ಮನನ್ನು ನೋಡಿ, 'ಬಾರಯ್ಯ ನಿನ್ನ ಪೈತ್ಯ ಬೀರ ಕೆಂಚನಿಗೂ ನನ್ನ ಭೋರ ನಂಚನಿಗೂ ಬಿಡೋಣ!' ಎಂದ. ಕೇಳಿದವರೆಲ್ಲರೂ ಬೊಗ್ರನ ಎದೆಗಾರಿಕೆಯನ್ನು ನೋಡಿ ನಕ್ಕರು! 'ಬೊಮ್ಮ, ಬಿಟ್ಟು ಬಿಡು! ಒಂದು ಕ್ಷಣದಲ್ಲಿ ಆಟ ಮುಗಿದು ಹೋಗುತ್ತೆ' ಎಂದನು. ಬೊಗ್ರನು ಅದರಿಂದೆಲ್ಲ ಎದೆಗುಂದಲಿಲ್ಲ. ಆಂದು ಪಂಚನಿಗೆ ಯೌವನವೆಂದು ಭಟ್ಟರು ಹೇಳಿದ್ದು ಅವನು ಮರೆತಿಲ್ಲ. ಆದರೆ ಬೊಮ್ಮನಿಗೆ ಬಹಳ ಅಳುಕು ತನ್ನ ದಕ್ಕೆ ಬೊಗ್ರನದು ಎಣೆಯೇ ಅಲ್ಲವಾದರೂ ಕೆಂಚನಿಗೆ ಇಂದು ಮುಪ್ಪು ಎಂದು ಭಟ್ಟರು ಹೇಳಿದ್ದುದು ಅವನೂ ಮರೆತಿಲ್ಲ ಅಂತೂ ಕೂಡಿದನರ ಒತ್ತಾಯದಿಂದೆ ಬಾಳುಕಟ್ಟಿದ ಬೀರಕೆಂಚನು ವೈಭವಲನೆಯ ಹಾರುವಿಕೆಗೆ ಎದುರಾಳಿಯ ಹೊಟ್ಟೆಯುಬ್ಬಕ್ಕೂ ಸೀಳಿ ಪಂಚನ ಪಂಚ ಪ್ರಾಣಗಳನ್ನೂ ಕ್ಷಣದಲ್ಲಿ ಹಾರಿಸಿಬಿಟ್ಟು 'ಕೊಕ್ಕೊಕ್ಕೋಕೋ' ಎಂದು ಆಲ್ಲೆಲ್ಲ ವ್ರತಿಧ್ವನಿಗೊಳಿಸುವಂತೆ ಕುಕ್ಕುಟ ನಾದವೆಬ್ಬಿಸಿದ!

ಬೊಮ್ಮ ಸೆಟ್ಟಿಗೆ ಕೋಳಿರೊಟ್ಟಿಯೆಂದರೆ ಪ್ರಾಣ. ಎಂದ ಮೇಲೆ ಅಂದೆಂತೂ ಅವನಲ್ಲಿ ಕೋಳಿರೊಟ್ಟಿಯಾಗಿತ್ತೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಮಾತ್ರವಲ್ಲ, ಅಂದು ನೆಂಟರ್ಯಾರು ಇಲ್ಲದಿದ್ದುದರಿಂದ ಹಿಂದೆಂದೂ ಪಿಟ್ಟಿಯ ಹೊಟ್ಟೆ ಕಾಣದಿದ್ದಷ್ಟು ರೊಟ್ಟಿಯು ಬಿದ್ದು ಬಿಟ್ಟತು ಅದರೊಳಗೆ. ಬೊಮ್ಮನು ಐವತ್ತು ವರುಷ ದಾಟಿದವ. ಹದಿನೂರಿಗೇದ ಅವನ ಒಡಲು ಹಿಂದಿನಂತೆ ಈಗಲೂ ತಿಂದು ದಕ್ಕಿಸಿಕೊಳ್ಳಲಾಪುದೆ? ಅದು ಮರುದಿನ ಉಚ್ಚರಿಸಿಕೊಂಡು ಬಡಬಡ ಡುಬ್ ಡುಬ್ ಎಂದಿತು. ಹೀಗಾಗಲು ತನ್ನ ಶಕ್ತಿಗುಂದಿದ ದೇಹಕ್ಕೆ ಆರಗಲಾರದ ರೊಟ್ಟಿಯ ಹೊರೆಯನ್ನು ಹೊರಿಸಿದುದೇ ಕಾರಣವೆಂದು ಬೊಮ್ಮನಿಗೆ ತಿಳಿಯಲಿಲ್ಲ. ಊರವರ ಪದ್ಧತಿಯಂತೆ ಅವನ ಆಲೋಚನೆಯ ಹಾದಿಯೇ ಬೇರೆ. 'ಹೀಗೇಕಾಯಿತು? ಹೊಟ್ಟೆ ಬಡಬಡ ಡಬ್‌ಡಬ್ ಎನ್ನುವುದು 'ಕೊದಿ'ಯಿಂದ! ಯಾವ 'ಕೊಟ್ಟದವ'ನ ದೃಷ್ಟಿಬಿತ್ತು? ಸರಿ, ನಾನು ಕೋಳಿಯನ್ನು ಹಿಡಿದುಕೊಂಡು ಬರುತ್ತಿದ್ದಾಗ ನೊಕ್ಕೆ ಎದುರಾಗಿ ಬಂದಿದ್ದಳು. ನನಗೆ ದಾರಿಬಿಟ್ಟು ಕೊಟ್ಟು ಒರೆ ಸರಿದು ನಿಂತು ಕೋಳಿಯನ್ನು ನೋಡಿ ನೀರು ಸುರಿಸಿರಬೇಕು! ಆಗಲೇ ಯೋಚಿಸಿದ್ದೆ - ಇಂದಿನ ರೊಟ್ಟಿ ಒಂದೇ ಸರಿಯಾಗಿ ಬೇಯುವುದಿಲ್ಲ; ಬೆಂದರೂ ರುಚಿಯಾಗುವುದಿಲ್ಲ. ಒಂದು ವೇಳೆ ಬೆಂದುಗಿದು ರುಚಿಯಾದರೂ ಏನಾದರೊಂದು 'ಮಲಾಮತ್ತು' ಮತ್ತಾದರೂ ಆಗದಿರದೆಂದು. ಹಾಗೇ ಆಯಿತಲ್ಲ ಈಗ!' ಎಂದು ಬೊಮ್ಮನು ಯೋಚಿಸುತ್ತ 'ಕಲೆಂಬ'ಯ ಮೇಲೆ ಹೊರಳುತ್ತಿರಲು ದೇಯಿ ಬಂದಳು. ನಡೆದ ಕತೆಯನ್ನು ಕೇಳಿ 'ಆಯ್ಯೊ! ನಿಮಗೆಲ್ಲ ಬುದ್ಧಿ ಬರುವುದು ಯಾವಾಗ? ಯಾವಾಗ ನೊಕ್ಕೆ ನೋಡಿದಳೆಂದಾಯಿತೋ ಆಗಲೇ ಅಲ್ಲಿಯ ಮಣ್ಣು ತೆಗೆದು ಕೋಳಿಗೆ ಮೂರು ಸುತ್ತು 'ಸೊಳದು' ಅವಳ ಹಿಂದೆ ಬಿಸಾಡಬೇಕಿತ್ತು! ರೊಟ್ಟಿ ಬೇಯಿಸುವ ಮೊದಲು ಮೂರು ಹಾಸು ಕೂಡಿದಲ್ಲಯ ಮಣ್ಣು ತಂದು ಕಾವಲಿಗೆ 'ಸೊಳದು' ನೊಕ್ಕೆಯ ಮನೆಯ ದಿಕ್ಕಿಗೆ ಜೆಲ್ಲಬೇಕಿತ್ತು! ಆದರೆ ಈಗ ಅದನ್ನೆಲ್ಲ ಹೇಳಿ ಏನು ಪ್ರಯೋಜನ? ಪೆದ್ದಣ್ಣ ಭಟ್ಟರೆ ಹೇಳಿಕಳುಹಿಸಿ ಉಪ್ಪು ಹುಳಿ ಮಂತ್ರಿಸಿ ತೆಗೆದುಕೊ. ಮೊನ್ನೆ ನಮ್ಮ ಅಣ್ಣು ಅಕ್ಕನ ಮನೆಗೆ 'ಮಾರ'ಗೆ ಹೋದವ ಹಂತಿರುಗಿ ಬಂದವನಿಗೂ ಹೀಗೇ ಆಗಿತ್ತು. ಭಟ್ಟು ನಮ್ಮ ತೋಡೇ ಚಪ್ಪರದಲ್ಲಿ ಏನಾದರೂ ಆಗಿತ್ತೊ ಎಂದು ನೋಡಲಿಕ್ಕೆ ಬಂದವರು ಅಣ್ಣುವಿನ ಅವಸ್ಥೆ ನೋಡಿ ಸಿಂತಲ್ಲೇ ಒಂದಿಷ್ಟು ಉಪ್ಪು ಹುಳಿ ಮಂತ್ರಿಸಿ ಕೊಟ್ಟರು. ಮೂರು ದಿವಸದಲ್ಲಿ ನಿಲ್ಲುತ್ತೆ ಎಂದಿದ್ದರು. ಹಾಗೇ ಆಗಿದೆ. ಈ ಊರಿಗೊಂದು ನೊಕ್ಕೆ ನಮ್ಮ ತುಂಡೆಯ ಊರಿಗೊಂದು ಡಾಯಿದ! ಯಾಕೆ ಸಾಯವುದಿಲ್ಲವೋ ಇವರು' ಎಂಧೆಂಧಾ ಪ್ರಾಯದವರಿಗೆ ಬರುತ್ತೆ ಸಾವು! ಈ ಮುದಿಕೊರಡುಗಳು ಆ ಯಮನಿಗೂ ಬೇಡವಾಗಿದೆಯೋ ಏನೊ' ಎಂದು ದೇಯಿಯು ಹೇಳಿ ಮರದ ಹಾದಿಯಾಗಿ ಹೋಗುವ ತಾನೇ ಪೆದ್ದಣ್ಣ ಭಟ್ಟರನ್ನು ಕಳುಹಿಸಿಕೊಡುವುದಾಗಿ ಮಾತು ಕೊಟ್ಟು ಹಾದಿ ಹಿಡಿದಳು.

ಭಟ್ಟರು ಬಂದರು. ಬಂದವರೇ ತೊಡಗಿದರು—"ನೊಕ್ಕೆಯಿಂದ ಊರಿಗೆ ಕ್ಷೇಮವಿಲ್ಲ! ಆದರೆ ಏನು ಮಾಡಲಿ! ಮುದುಕಿ, ಮಕ್ಕಳಿಲ್ಲ, ಮರಿಯಿಲ್ಲ, ದಿಕ್ಕಿಲ್ಲ, ದಾತರಿಲ್ಲ! ಅಂಧವಳು ಒಂದು ಮುಷ್ಟಿ ಪಡಿಗೆ ಬಂದಾಗ ಹೇಗೆ ಓಡಿಸುವುದು! ಆದರೆ ಆವಳು ಬಂದವಳು—ನಿಮ್ಮ ಕೋಳಿಗೀಳಿ ಬಿಡಿ, ನಮ್ಮ ಹೆರುವೇ ಸೊಪ್ಪು ಮುರಿಯುವುದನ್ನು ನೋಡಿದರೂ ಸಾಕು! ಮತ್ತದನ್ನು ತಿಂದವನಿಗೆ ಬರಕತ್ತೇ ಇಲ್ಲ. ಕೇಳಿ, ಮೊನ್ನೆ ನಾಗಿ ಪೆಡ್ತಿ ಒಳ್ಳೇ ಎಳೆ ಹರುವೆಸೊಪ್ಪು ತಂದು ಕೊಟ್ಟಿದ್ದಳು. ಆಂದರೆ, ಆವಳು ಕೆರೆದಂಡೆಯಲ್ಲಿ ಹರುವೆ ಬೀಜ ಬಿತ್ತುತ್ತಿದ್ದಾಗ ನಾನು ಹಾದು ಹೋಗುತ್ತಾ ಅದು ಜೆನ್ನಾಗಿ ಮೊಳೆದು ಬೆಳೆದು ಬರುತ್ತದೆಂದೂ, ಹುಗಾದರೆ ಅದನ್ನು ಬಾಯಿಗೆ ಹಾಕುವಮೊದಲು ನಮ್ಮ ದೇವರಿಗೊಂದಿಷ್ಟು ತಂದುಕೊಟ್ಟು ಬಿಡೆಂದೂ ಹೇಳಿದ್ದೆ. ಹಾಗೇ ತಂದಿದ್ದಳೆನ್ನಿ. ನಮ್ಮವಳಿಗೆಂತೂ ಎಳೆ ಹಿರಿವೆಯ 'ಸಿಂಹ' ಎಂದರೆ ಪ್ರಾಣ. ಆದ್ದರಿಂದ 'ಸಿಂಹ' ಮಾಡುವುದಕ್ಕಾಗಿ ಅದನ್ನು ಹೆಚ್ಚುತ್ತಿದ್ದಳು. ಅಷ್ಟರಲ್ಲಿ ಬಂತೇ ಬಂತು, ಆ ಶನಿ ನೊಕ್ಕೆ 'ಪಡಿಹಾಕೆ' ಎನ್ನುತ್ತ! ಕೂಡಲೇ ನಮ್ಮವಳಿಗೆಂತೂ ಎಳೆ ಹಿರಿವೆಯ 'ಸಿಂಹ' ಮರೆಯಾಡಿದಳು. ಆದರೂ ನೊಕ್ಕೆ ನೋಟ ಬೀಳದೆ ಹೋಗಲಿಲ್ಲ. ಮೂರುದಿನ ದಣಿದು ದಣಿದು ನುಣ್ಣಾಗಿ ಹೋದಳು ನಮ್ಮವಳು! ಇನ್ನೊಂದು ಗೊತ್ತೇ? ನೊಕ್ಕೆ ನೋಡ ಬೇಕೆಂದೂ ಇಲ್ಲ. ಕೇವಲ ಯೋಚಿಸಿ ಯೋಚಿಸಿ ಬಾಯಿಂದ ನೀರು ಸುರಿಸಿದರೂ ಸಾಕಾಗುತ್ತೆ—ಕಳೆದ ವಾರ ನಮ್ಮ ವ್ಯಾನು ಭಾಗ ರಾಮರಾಯರಲ್ಲಿ ಭಾರೀ ಬೇಗರೌತಣವಾಗಿತ್ತಷ್ಟೆ! ಅಲ್ಲಿಗೆ ನನ್ನ ಮಗ ಊಟಕ್ಕೆ ಹೋಗುತ್ತಿದ್ದ. ಅವನ ಬೆನ್ನು ಹತ್ತಿ ನೊಕ್ಕೆಯ ಸವಾರಿಯೂ ಹೋಯಿತು ದಾರಿಯಲ್ಲಿ ಈ ಪೆಂಗ ಅವಳಿಗೆ ಅಲ್ಲಿ ಮಾಡುತ್ತಿದ್ದ ಜಲೇಬಿ, ಲಾಡು, ಶೀರಾ, ಸಜ್ಜಿಗೆ ಹೋಳಿಗೆ ಇವುಗಳ ವರ್ಣನೆಮಾಡುತ್ತಾ ಹೋದ! ಫಲವಾಗಿ ಊಟಮಾಡಿ ಒಂದವ ಎರಡು ದಿನ ಏಳಲಿಲ್ಲ. ಹೀಗೆ ಇವರಿಬ್ಬರ ಕೊದಿ ಇಳಿಸಲಿಕ್ಕೆ ಸಾವಿರ ಸಾವಿರ ಸಲ ಮಂತ್ರಿಸಿದ ಉಪ್ಪು ಹುಳಿಯನ್ನು ಮೂರು ಮೂರುಬಾರಿ ಮೂರು ದಿನ ಕೊಡಬೇಕಾಗಿ ಬಂತು! ಅಷ್ಟು ಬಿಗಿಹಿಡಿದು ಕೂತುಬಿಟ್ಟತ್ತು ನೊಕ್ಕೆ ಕೊದಿ! ಬೊಮ್ಮಾ ನಿನ್ನ ಅವಸ್ಥೆಯೂ ಹಾಗೇ. ಆದುದರಿಂದ ಇಲ್ಲೇ ಏನಾದರೂ ತಲ್ಪ ಸ್ವಲ್ಪ ಮಂತ್ರಿಸಿಕೊಟ್ಟರೆ ನಾಟಲಾರದು. ಉಪ್ಪು ಹುಳಿಯೊಂದಿಗೆ ಶುಂಟಿ-ಹಿಂಗು-ಜೀರ್ಸಾಲೆಸೆಣಸು ನುರಿದು ನೊಕ್ಕೆಯ ಕಣ್ಣು ಬಾಯಲ್ಲಿ ನೀರಿಳಿಯುವ ತನಕವೂ ಸಾವಿರಾರು ಸಲ ಮಂತ್ರಿಸಿಕೊಟ್ಟರೇ ಶೀಘ್ರ ಗುಣವಾಪ್ತಿ! ತತ್ಕಾಲಕ್ಕೆ ಆ ರೀತಿ ನಿನ್ನೆ ವೆಂಕಪ್ಪನಿಗಾಗಿ ಮಂತ್ರಿಸಿದ್ದರಲ್ಲೇ, ಆಪತ್ಕಾಲಕ್ಕಿರಲೆಂದು ಸ್ವಲ್ಪ ಇಟ್ಟಿದ್ದನ್ನು ತಂದಿದ್ದೇನೆ, ತೆಗೆದುಕೋ ಮಧ್ಯಾಹ್ನಕ್ಕೆ, ಸಾಯಂಕಾಲಕ್ಕೆ ನಾಳೆನಾಡದಿನೆಲ್ಲ ಪ್ರತ್ಯೇಗ ಪ್ರತ್ಯೇಕ ಜಪಿಸಿ ಜಪಿಸಿ ಇಡುತ್ತೇನೆ. ಜನ ಕಳುಹಿಸಿ ತರಿಸಿಕೋ. ಆದರೆ ನೆನಪಿರಲಿ! ಅದನ್ನು ಹಿಡಕೊಂಡು ಬರುವವ ಮಾತಾಡಬಾರದು! ಅದನ್ನು ಕೆಳಗಿಡಬಾರದು! ಅಂತೂ ನಿನಗಾಗಿ ಎರಡು ದಿನ ದಣಿಯುತ್ತೇನೆ. ಕರೆದ ಬಾಯಿಗೆ ಬರುವ ಬಂಟ ನೀನು! ಆದುದರಿಂದ ನನಗೇನೂ ಕೊಡಬೇಕಾಗಿಲ್ಲ. ಮಂತ್ರಸಿದ್ಧಿಗಾಗಿ ದೇವತೆಯ ಕಾಣಿಕೆ—ಹೆಚ್ಚಿಲ್ಲ—ಮೂರು ದಿನಕ್ಕೆ ಮೂರು ರೂಪಾಯಿ ಕೊಟ್ಟು ಬಿಡು. ನಗದಿಯಿಲ್ಲದಿದ್ದರೆ ಉದ್ಯೋ, ಹೆಸರೋ ಏನಾದರೂ ಕಳುಹಿಸಿಬಿಡು. ಮೂರೇ ದಿನದೊಳಗೆ ಇಳಿಸಿಬಿಡುತ್ತೇನೆ" ಎಂದರು. ಬೊಮ್ಮ ಶೆಟ್ಟಿಗೆ ಆಗಲೇ ಹೊಟ್ಟೆ ಚೆನ್ನಾಗಿ ಉಬ್ಬರಿಸಿ ಉಸಿರಾಡುವುದೇ ಕಷ್ಟವಾಗುತ್ತಿತ್ತು. ದುಡ್ಡಿನ ಕಡೆಗೆ ನೋಡುವ ಕಾಲವಾಗಿದ್ದಿಲ್ಲ ಅದು! ಒಮ್ಮೆಗೆ ಆ ವೇದನೆಯಿಂದ ಪಾರಾಗುವದಾದರೆ ಏನೂ ಕೊಟ್ಟುಬಿಡೋಣ ಎನ್ನಿಸುವಂತಹ ಸನ್ನಿವೇಶದಲ್ಲಿದ್ದ ಆತ. ಅದು ಕಾರಣ ಭಟ್ಟರ ಹಿಂದೆಯೇ ಅರ್ಧಮುಡಿ ಉದ್ದು ಒಂದು ಕಳಸೆ ಹೆಸರು, ಸೆಟ್ಟಿಯ ಮನೆಯಿಂದ ಹೊರಟು ಹೋದವು! ಸಂಜೆಯಲ್ಲಿ ಬೊಮ್ಮ, ಸೆಟ್ಟಿಯು ನೊಕ್ಕೆಯೇನುಮಾಡುತ್ತಿದ್ದಾಳೆಂದು ನೋಡಿಕೊಂಡು ಬಾಯಿಂದು ಕಳುಹಿಸಿದ ಹುಡುಗನು ಹಿಂತಿರುಗಿ ಬಂದು ಆವಳು ತನ್ನ ಮುರುಕು ಗುಡಿಸಲ ಮುಂದೆ ಕಣ್ಣೀರು ಸುರಿಸುತ್ತ ಮೂಗಿನಿಂದ ನೀರು ಹಿಂಡಿ ಹಾಕುತ್ತಾ ಬಗ್ಗಿ ಕೂತಿದ್ದಾಳೆಂದು ಹೇಳಿದ! ಸರಿ, ಭಟ್ಟರ ಮಂತ್ರ ನಾಟಿತು! ನಾಳೆ ತಾನು ನೆಟ್ಟಗಾಗುವೆನು! ಎಂದು ಯೋಚಿಸುತ್ತ ಭಟ್ಟರಲ್ಲಿಂದ ಉಪ್ಪು ಹುಳಿಯನ್ನು ಮಾತಾಡದೆ ತರುವ ಹೊಣೆಗಾರಿಕೆಯನ್ನು ಯಾರ ಮೇಲೆ ಹೊರಿಸುವುದೆಂದು ವಿಚಾರಿಸಿ ವಿಚಾರಿಸಿ ಕೊನೆಗೆ ಬೇರೆ ಯಾರನ್ನೂ ಸಂಬಲಾರದೆ ತನ್ನ ಹೆಂಡತಿಯನ್ನೇ ಆ ಮಹತ್ತಾದ ಜವಾಬ್ದಾರಿಯ ಕೆಲಸಕ್ಕೆ ಕಳುಹಿಸಿಕೊಟ್ಟ! ತಾನು 'ಕಲೆಂಬ'ಯ ಮೇಲೆ ಹೊರಳಿ ಹೊರಳಿ ಒಂದೆರಡು ವಾಯು ಹೋಗಿ ತುಸು ಹೊಟ್ಟೆ ಸಡಿಲಾದಂತೆ ತೋರಲು ಆಗ ತಾನೆ ಉಪ್ಪು ಹುಳಿಯು ತನ್ನ ಹೆಂಡತಿಯ ಕೈಗೆ ಬಿದ್ದರಬೇಕೆಂದು ಊಹಿಸಿದ ಬೊಮ್ಮ ಸೆಟ್ಟಿ.

(ತರಂಗ ಮುಗಿವುದು ಮುಂದಿನ ಸಂಚಿಕೆಯಲ್ಲಿ)

'ವಿಚಾರ ಪ್ರಿಯ'

• ಜವಾಹಿರಲಾಲರ ಅಧ್ಯಕ್ಷತೆ - ನವಯುಗದ ಚೆನ್ನಾಟ •

ಲೇಖಕರು:—**ಪಂಡಿತ ತಾರಾನಾಥರು,** ತುಂಗಭದ್ರಾ.

ಪಂಡಿತ ಜವಾಹಿರಲಾಲರು ಇನ್ನೊಮ್ಮೆ ಕೊಂಗ್ರೆಸಿನ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟದ್ದು ಬಹಳ ಸಂತೋಷದ ವಿಷಯ. ಇವರ ಚುನಾವಣೆಯ ಮಹತ್ವವು ಸಾಮಾನ್ಯವಾದದ್ದಲ್ಲ. ಇವರೊಡನೆ ಶ್ರೀ. ರಾಜಗೋಪಾಲಾಚಾರ್ಯರು, ಶ್ರೀ. ವಲ್ಲಭಭಾಯಿ ಪಟೇಲರು, ಶ್ರೀ. ಸುಭಾಷಚಂದ್ರರು ಆ ಸ್ಥಾನಕ್ಕೆ ರಾಷ್ಟ್ರದ ಮುಂದೆ ಉಮೇದು ವಾರರಾಗಿದ್ದರು. ಆದರೆ ಇವರೆಲ್ಲರೂ ತಾವಾಗಿಯೇ ಹಿಂದೆಗೆದದ್ದು ಬಹು ಶ್ಲಾಘನೀಯವೇ ಸರಿ. ಇವರ ಈ ವರ್ತನೆಯಿಂದ ಇವರ ಮಾನಕ್ಕೆ ಮೆರುಗು ಬಂದಿದೆಯೇ ಹೊರತಾಗಿ ಮೊಬ್ಬು ಮುಚ್ಚಲಿಲ್ಲ.

ಆದರೆ ಜವಾಹಿರಲಾಲರ ಮಹತ್ವವನ್ನು ತೋರಿಸುವಾಗ ಈ ಮಹಾನುಭಾವರ ವಿಷಯವನ್ನೂ ಸ್ವಲ್ಪ ಚರ್ಚಿಸಲೇ ಬೇಕಾಗುತ್ತದೆ. ಇದನ್ನೊಂದು ಪ್ರಶ್ನೆಯ ಮೂಲಕ ಸುಲಭವಾಗಿ ತೋರಿಸಿಕೊಡಬಹುದು. ಪಂಡಿತರ ಬದಲಿಗೆ ಇವರ ಸೈಕೆ ಯಾರಾದರೊಬ್ಬರು ಅಧ್ಯಕ್ಷರಾಗಿಬಿಟ್ಟಿದ್ದರೆ ಏನು ವ್ಯತ್ಯಾಸವಾಗುತ್ತಿತ್ತು?

ಇದಕ್ಕೆ ಉತ್ತರ ಕೊಡಬೇಕಾದರೆ ಅಧ್ಯಕ್ಷರು ಎಷ್ಟು ವಿಧದವರಿದ್ದಾರೆ ಎಂದು ನೋಡಬೇಕಲ್ಲವೆ? ಮುಖ್ಯವಾದ ತರಗತಿಗಳವರನ್ನೇ ಹೇಳುವದಾದರೆ ಇವರು ಎರಡು ವಿಧದವರು ಎಂದು ಹೇಳಬಹುದು. (೧) ಮಾಮೂಲನ್ನು ಒತ್ತಿ ಹೇಳಿ ನಡೆಸುವವರು. (೨) ಹೊಸ ಮಾಮೂಲನ್ನೇ ಹುಟ್ಟಿಸಿ ನಡೆಸುವವರು. ಜನಹಿತಕ್ಕೆ ಇಬ್ಬರೂ ಬೇಕು. ಯಾವುದೂ ವಸ್ತುವೇ ಆಗಲಿ, ಜೀವಿಯೇ ಆಗಲಿ, ಅದನ್ನು ಹುಟ್ಟಿಸಿ ಬಿಟ್ಟಷ್ಟಕ್ಕೇ ಕೆಲಸ ಮುಗಿಯುವದಿಲ್ಲವಷ್ಟೆ? ಹುಟ್ಟಿಸಿದ್ದನ್ನು ಬೆಳೆಸುವದೂ ಅವಶ್ಯಕವೇ ಅಲ್ಲವೇ? ಆದರೆ ಹುಟ್ಟಿಸಿದ್ದೇ ಏನೇನೂ ಇಲ್ಲವಾದ ಕಡೆ ಬೆಳೆಸತಕ್ಕದ್ದಾದರೂ ಏನದು? ಬೆಳವಣಿಗೆ ಹುಟ್ಟಿನ ನಂತರದ ಕೆಲಸ ತಾನೆ? ಹುಟ್ಟೇ ಇಲ್ಲದೆ ಬೆಳವಣಿಗೆಗೇ ಆಗಲಿ ಬೆಳೆಸುವವರಿಗೇ ಆಗಲಿ ಜಾಗವೆಲ್ಲಿದೆ? ಈ ದೃಷ್ಟಿಯಿಂದ ನೋಡಿದರೆ ಹುಟ್ಟಿಸುವವರ ಮಹತ್ವವೇ ಹೆಚ್ಚು ಎಂದು ಹೇಳಬೇಕಾಗುತ್ತದೆ.

ಅದರಲ್ಲಿಯೂ ಕಾರ್ಯರಂಗವು ದಿನೇ ದಿನೇ ಬದಲಾಗುತ್ತಿರುವ ಕಡೆ ಅದಕ್ಕೆ ಹೊಂದಿಕೆಯಿಂದ ಇದಿರಾಗುವಂತೆ ಹೊಸ ಹೊಸ ಉಪಾಯಗಳನ್ನು ಹುಡುಕಿ ತೆಗೆಯುವವರು ಬೇಕು. ಬುದ್ಧಿಯಿಂದ ಮಾತ್ರ ಅಂಥ ಉಪಾಯಗಳನ್ನು ತೆಗೆದಿಟ್ಟರೆ ಸಾಲದು; ಅವುಗಳಿಗೆ ಜನಾಂಗದ 'ಸೈ' ಹಾಕಿಸುವ ವ್ಯಕ್ತಿತ್ವವೂ ಬೇಕು. ಆವುಗಳನ್ನು ನಡೆಸಿ ತೋರಿಸಲಿಕ್ಕೆ ಬೇಕಾವ ಅನುಭವವೂ ಬೇಕು, ಸಾಹಸವೂ ಬೇಕು.

ಈ ದೃಷ್ಟಿಯಿಂದ ಜವಾಹಿರಲಾಲ ಇತ್ಯಾದಿ ನಮ್ಮೆಲ್ಲ ಉಮೇದುವಾರರನ್ನು ಪರೀಕ್ಷಿಸೋಣ. ಶ್ರೀ. ರಾಜಗೋಪಾಲಾಚಾರ್ಯರು ಮತ್ತು ವಲ್ಲಭಭಾಯಿ ಪಟೇಲರು ಮಹಾತ್ಮರ ಪಟ್ಟ ಶಿಷ್ಯರು. ಅವರು ಹೇಳಿದ್ದನ್ನು ಹೇಳಿದಂತೆಯೇ ಬಜಾಯಿಸುವವರು ಇವರಿಬ್ಬರೂ. ಮಹಾತ್ಮರು ತತ್ವವನ್ನು ಹೇಳಿದರೆ ಇವರಿಬ್ಬರೂ ಅದರ ಉತ್ತಮ ಪ್ರಚಾರಕರು. ಆಚಾರ್ಯರಲ್ಲಿ ಆ ತತ್ವವನ್ನು ಶಿಸ್ತಿನಿಂದ ಮಾಡಿ ತೋರಿಸುವ ಶಕ್ತಿ ಒಂದೇ ಅಲ್ಲ, ಅದನ್ನು ಸ್ಪಷ್ಟವಾಗಿ ವಿವರಿಸುವ ಶಕ್ತಿಯೂ ಧಾರಾಳವಾಗಿದೆ. ಇಬ್ಬರೂ ನಾಹಸಿಗಳು, ಧೀರರು. ಆದರೊಂದು ಮಾತು. ಮಹಾತ್ಮರ ಸ್ವರಾಜ್ಯ ಸಾಧನ ಸೂತ್ರಗಳು ಒನ್ಮೆ ಎಲ್ಲರ ಒಪ್ಪಿಕೆ ಮೆಚ್ಚಿಕೆಯನ್ನು ಪಡೆದು ಪ್ರಬಲವಾಗಿದ್ದಿದ್ದರೂ, ಇಂದು ಅವು ಮಂತ್ರಗಳಾಗಿ ವೆಯೇ ಹೊರತು ತಂತ್ರಗಳಾಗಿ ಕರ್ಮರಂಗದಲ್ಲಿ ಅಷ್ಟಿಲ್ಲ. ಆ ಸೂತ್ರಗಳು ಹುಟ್ಟಿ ಬಲತ ಕಾಲವು ಇಂದಲ್ಲ. **ಇಂದಿನ ಕಾಲಕ್ಕೆ ತಕ್ಕ ತತ್ವ ಸೂತ್ರವನ್ನು ಮಹಾತ್ಮರೇ ಇನ್ನೂ ಹುಟ್ಟಿಸಲಿಲ್ಲ.** ಹೀಗಿರುವಾಗ ಈ ಎರಡು ಯೋಧರ ಇಂದಿನ ವರೆಗಿನ ಮನೋಗತಿಯ ತಕ್ಕಡಿಯಿಂದಲೇ ಇವರನ್ನು ಇಂದೂ ತೂಕಿಸಿ ನೋಡುವದಾದರೆ, ಇವರಿಬ್ಬರಲ್ಲಿಯೂ ಕಾಲಕ್ಕೆ ತಕ್ಕ ಸೂತ್ರವಿಲ್ಲ. ಅದು ಮಹಾತ್ಮರಿಂದ ಬರಬೇಕು, ಎಂದ ಮೇಲೆ ಪಟೇಲರು ಇಂದು ಕುದುರೆ ಇಲ್ಲದ ರಾಹುತರಾದರೆ, ಆಚಾರ್ಯರು ಆನೆ ಇಲ್ಲದ ಮಾಹುತರು ಎನ್ನಬೇಕಾಗುತ್ತದೆ.

ಇವರು ಒಂದು ವೇಳೆ ಅಧ್ಯಕ್ಷರಾಗಿದ್ದಿದ್ದರೆ ಕಾಲಕ್ಕೆ ತಕ್ಕ ಸೂತ್ರವನ್ನು ಹುಟ್ಟಿಸಿ ಕೊಡುತ್ತಿದ್ದರೋ ಏನೋ? ಅವನ್ನು ಕೊಡುವ ಶಕ್ತಿ ಇವರಲ್ಲಿಲ್ಲ ಎಂದು ಹೇಗೆ ಹೇಳಲಿಕ್ಕಾದೀತು? ಆದರೆ ಇಂದಿನ ಚುನಾವಣೆಗೆ ಮುಂದಿನ ಸಾಧ್ಯತೆಗಳು ಕೋರಿಕೆಗಳು ಆಧಾರವಾಗಲಾರವಷ್ಟೆ? ಇಂದಿನ ವರೆಗಿನ ಇವರ ಕಾರ್ಯ ಮನಃಸ್ಥಿತಿಗತಿಗಳನ್ನು ನೋಡಿದರೆ, ಇವರಿಬ್ಬರೂ ಗಾಂಧಿ ದರ್ಜೆಗೆ ಸೇರಿದವರು, ಮಾಮೂಲನ್ನು ಹುಟ್ಟಿಸುವವರಲ್ಲ, ನಡೆಸುವವರು. ಆದರೆ ದೇಶಕ್ಕೂ ಕಾಲಪರಿಸ್ಥಿತಿಗೂ ಮಾತ್ರ ಆ ಮಾಮೂಲು ಆಪ್ಯಾಗಿ ಬೇಕಾಗಿಲ್ಲ. ಆದಕ್ಕಾಗಿಯೇ ಒಮ್ಮೆ ಧೀರೋತ್ಪಾದಕರಾದ ಮಹಾತ್ಮ ಗಾಂಧಿಯವರ ಸಾಬಲ್ಯವು ಕೂಡ ಇಂದು ಸಾಕಷ್ಟು ಬೆಳಗುವದಿಲ್ಲ. ಶ್ರೀ. ಸಿ. ಆರ್ ದಾಸರು ಅಂದೊಂದು ಕಾಲಕ್ಕೆ ತಕ್ಕಂತೆ ಹುಟ್ಟು ಸಿದ ಸ್ವರಾಜ್ಯ ಪಾರ್ಟಿಗೆ ಅಂಥ ಮಹಾತ್ಮರು 'ಸೈ' ಹಾಕಿದರೆ ಹೋದರೂ ಮೊನ್ನೆ 'ಸೈ' ಹಾಕಿಯೇಬಿಟ್ಟರು. ಹೊಸ ಹುಟ್ಟನ್ನುಂಟುಮಾಡಿದರು ಎಂದೇ ಮಹಾತ್ಮರಿಗೆ ಅಷ್ಟು ಮಾನ ಬಂತು, ದಾಸರಿಗೂ ತಕ್ಕಷ್ಟು ಮಾನ ಬಂತು.

ಸಾರಾಂಶ—ಎಂಥ ಮಹಾತ್ಮನೇ ಆಗಲಿ, **ತನ್ನ ಧ್ಯೇಯಾನುಭವ ಸೂತ್ರಗಳನ್ನು ದೇಶ ಕಾಲ ಪರಿಸ್ಥಿತಿಗೆ ತಕ್ಕಂತೆ ಹೊಂದಿಸದೇ ಹೋದರೆ, ಕಾಲಚಕ್ರವೇ ಅವನನ್ನು ಬದಿಗೊಯ್ದು ಹಾಕುವುದು. ಅದರ್ಥಗಳನ್ನು ವಸ್ತುಸ್ಥಿತಿಗೆ ಹೊಂದಿಸಿ ಕೊಡುವನನೇ ಆ ಕಾಲಕ್ಕೆ ಆಗ್ರಗಾಮಿ.** ಆಗ ಆತನ ಮುಂಪಾಳುತನಕ್ಕೂ ಜನತೆಯ ಹಿಂಪಾಳುತನಕ್ಕೂ ಜಯೇಯ ಪ್ರಕೃತಿಯ ಪ್ರವೃತ್ತಿಯೇ ಆಧಾರ. ಆಧಾರವನ್ನು ಬಿಟ್ಟು ಯಾವ ವಸ್ತುವೂ ನಿಂದಿರಲೊಲ್ಲದು, ಯಾವ ತತ್ವವೂ ನಿಂದಿರಲೊಲ್ಲದು.

ಈಗ ಸುಭಾಷಚಂದ್ರ ಬೋಸರನ್ನು ವಿಮರ್ಶಿಸೋಣ. ಇವರ ಧೈರ್ಯ ಸೈರ್ಯ ತ್ಯಾಗ ಮೇಧಸ್ಸುಗಳ ವಿಷಯ ಚರ್ಚೆಗೆ ಆಸ್ಪದವೇ ಇಲ್ಲ. ಈಗಾಗಲೇ ಒರೆಗೆ ಹಚ್ಚಿ ಬೆಳಗಿದ ಗುಣಗಳವು. ಇಷ್ಟೇ ಅಲ್ಲ, ಇವರಲ್ಲಿ ಹೊಸ ಸ್ವಾತಂತ್ರ್ಯ ಸೂತ್ರವೂ ಇದೆ. ಇದನ್ನು ಇವರು ಪ್ರಕಟಿಸಿಯೂ ಇದ್ದಾರೆ. (ಇವನ್ನು ಸಂಪೂರ್ಣವಾಗಿ ವಿವರಿಸುವದು ಈ ಲೇಖನಕ್ಕೆ ಸೇರಿದ ಸಂಗತಿಯಲ್ಲ).

ಆ ಸೂತ್ರದ ಸಾರಾಂಶ ಇಷ್ಟೇ. ತನ್ನ ಕರ್ಮ ಬಲದಿಂದ ಕೊಂಗ್ರೆಸ್‌ಗೆ ಈಗಾಗಲೇ ಬಂದಿರುವ ಅಂತಸ್ಥನ್ನೂ ಶಕ್ತಿಯನ್ನೂ ಕೊಂಗ್ರೆಸ್ ಪಕ್ಷದವರು ಉಪಯೋಗಿಸಿಕೊಂಡು- **ಜಹುಜನರ ಸಮ್ಮತಿ ಇರಲಿ. ಇರದೆ ಹೋಗಲಿ—ರಾಜ್ಯ ಸೂತ್ರಗಳನ್ನು ಕಸಗೊಂಡು ಕೈಕೊಳ್ಳುವುದು ತಮ್ಮ ಕರ್ಮಫಲ ಎಂದು ತಾವು ಭಾವಿಸಿಕೊಂಡು ತಮ್ಮ ಅಧಿಕಾರವನ್ನು ಸ್ಥಾಪಿಸುತ್ತ ಬಲಪಡಿಸುತ್ತ ಹೋಗಬೇಕು.** ಹಾಗೆ ಇಷ್ಟರ ವರೆಗೆ ಮಾಡದೆ ಹೋಮದೇ ಗಾಂಧಿ ನೆಹರೂ ಇತ್ಯಾದಿಗಳ ದೊಡ್ಡ ತಪ್ಪು ಎಂದು ಸುಭಾಷರ ಮತ.

ಈ ಮತಕ್ಕೂ ಪಿಟ್ಸರ್ ಮುಸೊಲಿನಿಯವರ "ಫ್ಯಾಸ್ಸಿಸ್‌ಮ್"ಗೂ ಬಹಳ ವ್ಯತ್ಯಾಸವಿಲ್ಲ (ಇದರಲ್ಲಿ ತಮ್ಮ ತಮ್ಮ ದೇಶದ ಮಟ್ಟಿಗೆ ಹಿತವಿದ್ದರೂ ಇರಬಹುದು. ಇದನ್ನೆಲ್ಲ ಚರ್ಚಿಸುವುದು ಈ ಲೇಖನಕ್ಕೆ ಬಾಹ್ಯವಾದ ವಿಷಯ). ಇಲ್ಲಿ ನೋಡಬೇಕಾದ್ದು ಇಷ್ಟೇ. ಬಹುಜನಕ್ಕೆ ಇವರ ಮತವು ಸಮ್ಮತವೋ? ಅದಕ್ಕವರು ಬಹುಜನ ಸಮ್ಮತಿಗಾದರೂ ಎತಕ್ಕೆ ಕಾದಿರಬೇಕು ಎನ್ನುತ್ತಾರೆ. ಹಾಗೆಂದ ಮೇಲೆ **ಯೋಗ್ಯಾಯೋಗ್ಯ ನ್ಯಾಯಾನ್ಯಾಯಗಳ** ಒರೆಗಲ್ಲು ಒನ್ಮೆಗೇ ಒಡೆದು ಚೂರಾಗಿ ಬಿದ್ದಂತಾಯಿತು! ಬರೇ **ಸಾಧ್ಯಾಸಾಧ್ಯಾಗಳ** ಅನುಕೂಲತೆ ಒಂದೇ ಉಳಿಯಿತು! ಹಾಗೊನ್ಮೆ ಆಯಿತೋ, **ಇದು ದೇಶಕವೆಲ್ಲದರ ಕೆಲಸವಲ್ಲ, ಒಂದೇ ಒಂದು ಪಾರ್ಟಿಯ ಶಕ್ತಿಯನ್ನು ಆವಲಂಬಿಸಿದ ವಿಷಯವಾಯಿತಿದು.** ಆ ಪಾರ್ಟಿಯನ್ನು ಬಲಪಡಿಸುವುದು ಅವರ ಮುಂದಾಳುವಿನ ಕೆಲಸ. ಅದು ಯೋಗ್ಯವೇ ಇರಲಿ, ಅಯೋಗ್ಯವೇ ಇರಲಿ, ಆ ಮುಂದಾಳುವಿಗೆ ಈಗ ಅನುಕೂಲತೆಯೇನೋ ಇಲ್ಲ.

ಈಗ ಪಂಡಿತ ಜವಾಹಿರಲಾಲರೊಬ್ಬರೇ ಉಳಿದರು. ಇವರ ಕಾರ್ಯ ಮನಃಸ್ಥಿತಿಗತಿಗಳನ್ನು ಪರೀಕ್ಷಿಸೋಣ. ಅವರ ಧ್ಯೇಯೋಪಾಯಗಳನ್ನೂ ಬಿಡಿಸಿ ನೋಡೋಣ. ಅವರ ವ್ಯಕ್ತಿತ್ವಾನುಭವಗಳನ್ನೂ ನೋಡೋಣ. ಅವರ ಧೈರ್ಯತ್ಯಾಗಗಳ ವಿಷಯವಂತೂ ಪ್ರಶ್ನೆಯೇ ಇಲ್ಲವಷ್ಟೆ! ಇವರಿಗೆ ಸ್ವರಾಜ್ಯವೆಂದರೇನು? ಈ ಒಂದೇ ಪ್ರಶ್ನೆಗೆ ಇವರ ದೃಷ್ಟಿಯಿಂದಲೇ ಉತ್ತರಕೊಟ್ಟರೆ ಎಲ್ಲವೂ ಸ್ಪಷ್ಟವಾಗುವದು:—

೧. ಇಂಥಾದು ಹೊಸ ಯುಗವೇ! ಈ ಕಾಲ ಪರಿಸ್ಥಿತಿಯನ್ನು ನೋಡಲಾಗಿ ಪಂಚ ಖಂಡಗಳೂ ಒಂದೇ. ರಾಜ್ಯರಾಜ್ಯಗಳ ನಾಮರೂಪ ರೀತಿಗಳು ಏನೇ ಇರಲಿ, ಅವೆಲ್ಲವೂ ನವಯುಗ ಪ್ರಭಾವಕ್ಕೆ ಒಳಪಟ್ಟೇ ಇವೆ. **ಈ ಬೆಳಕನ್ನು ಕಣ್ಣು ತೆರೆದು ನೋಡುವುದೇ ಸ್ವರಾಜ್ಯದ ಮೊದಲ ಪಾಠ.**

೨. ಬೇಗಿರುವಾಗ ಯಾವೊಂದು ದೇಶಕ್ಕೂ ತನ್ನದೇ ಎಂಬ ಸ್ವಾತಂತ್ರ್ಯವು ಬೇರೆಯಾಗಿ ಲಭಿಸದು.

೩. ಇಂಥ ಯುಗಕ್ಕೆ ಹೊಂದಿಕೊಂಡು ನಡೆಯಬೇಕಾದರೆ ಪ್ರತಿ ದೇಶಕ್ಕೂ ಎರಡು ಕರ್ತವ್ಯಗಳಿರುತ್ತವೆ. ತನ್ನ ವ್ಯಕ್ತಿತ್ವವನ್ನು ಶೋಧಿಸುವುದು ಒಂದು. ಆದರ ಬಲದಿಂದ ಇವೆಲ್ಲವುಗಳೊಡನೆ ಹೊಂದಿಕೊಂಡು ಬೆಳೆಯುವುದು ಇನ್ನೊಂದು. ಒಂದನ್ನು ಬಿಟ್ಟು ಇನ್ನೊಂದು ಲಭಿಸದು.

೪. ಈ ವ್ಯಕ್ತಿತ್ವದ ಜೀವ ಜೀವಾಳವು ಆಯಾ ರಾಜ್ಯದ ಸ್ವತ್ತು ಸಂಪತ್ತುಗಳನ್ನು ಹುಟ್ಟಿಸುವ ಬಹುಸಂಖ್ಯಾತ ಉದ್ಯೋಗಿಗಳಲ್ಲಿದೆಯೇ ಹೊರತು ಕೂತುಣ್ಣುವ ಅಲ್ಪ ಸ್ವಲ್ಪ ಧನಾಢ್ಯರ ಕೈಯಲ್ಲಿ ಮಾತ್ರ ಇಲ್ಲ.

೫. ಆದರೆ ಈ ಉದ್ಯೋಗಿಗಳ ಹಿತವು ತಮ್ಮ ತಮ್ಮ ದೇಶ ರಾಜ್ಯವನ್ನು ಬೇರೆ ಯಾಗಿ ಸ್ವತಂತ್ರ ಪಡಿಸಿಟ್ಟುಕೊಳ್ಳುವುದರಲ್ಲಿಲ್ಲ; ತಮ್ಮ ಶಕ್ತಿಯನ್ನೆರಿತು ತಾವು ಸ್ವತಂತ್ರವಾಗಿ ಇತರರೆಲ್ಲರೊಡನೆ ಹೊಂದಿಕೊಳ್ಳುವದರಲ್ಲಿಯೇ ಇದೆ.

೬. ಇದಕ್ಕಾಗಿ ನಿಜವಾದ ವಿಶ್ವಹಿತವು ಉದ್ಯೋಗಿಗಳ ಹಿತ ಜಾಗ್ರತೆಗಳನ್ನು ಆವಲಂಬಿಸಿಯೇ ಇದೆ.

೭. ಆದುದರಿಂದ ಎಲ್ಲ ಕಡೆಯೂ **ಇವರನ್ನು ಎಚ್ಚರಿಸಿ ಉದ್ಧರಿಸಿ ರಾಜ್ಯ ಸೂತ್ರಗಳನ್ನು ಕೈಕೊಳ್ಳಲರ್ಹರಾಗುವಂತೆ ಮಾಡುವುದೇ ನಿಜವಾದ ಸ್ವರಾಜ್ಯ ಸಾಧನ.**

ಈ ಸಾಧನಕ್ಕೆ ಅಡ್ಡಬರುವ ಎಲ್ಲ ಅಸ್ತ್ರೆಗಳನ್ನು ಮುರಿದೊಗೆಯುವುದೂ ಒಂದು ಧರ್ಮವೇ ಆಗಿಬಿಟ್ಟ ತಲ್ಲಣೇಳ್ ಅಂಥ ತಾತ್ಪರ್ಯ ಕರಿಗೆ?

ಯುಗ ಮಹಿಮೆಯನ್ನರಿತವರಲ್ಲ ಮಹಾತ್ಮರ ಪ್ರಸ್ತಾನ ಸಾಧನಗಳೂ ಇವೇ.

ಬೇಗಿರುವಾಗ ಜವಾಹಿರಲಾಲರ ಅಧ್ಯಕ್ಷತೆಯೂ ಯುಗ ಮಹಿಮೆಯ ಒಂದು ಚೆನ್ನಾಟವೇ ಎನ್ನಬಹುದಲ್ಲವೇ?

(ಪ್ರೇಮವಿದ್ಯಾ ಬೀಜ ಪತ್ರಿಕೋದ್ಧಮ ಬಾಲಮಂಡಲ)

1937
ನೇ
ಇಸವಿಯ
ಡೈರಿಗಳು
ಮಾರಾಟಕ್ಕಿವೆ.
ಬೇಕಾದ ನಮೂನೆಯವು
ಬೇಕಾದ ಬೆಲೆಯವು
ಬಂದು ವಿಚಾರಿಸಿರಿ!
ನವಯುಗ ಆಫೀಸು,
ಉಡುಪಿ.

ಕಸ್ತೂರಿ ಮಿಶ್ರಣ ದಶಮೂಲವೆಂಬ

ಸೂತಿಕಾ ರಸಾಯನ

ಇದರ ಶೋಧನ, ರಸಾಯನ, ಸುಖಸೇವನ ಎಂಬೀ ಮೂರು ಗುಣಗಳು ಚಿರಸ್ಮರಣೀಯಗಳಾಗಿವೆ.

I. ಶೋಧನ ಗುಣ:—ಶೋಧನದಿಂದ ಪ್ರಸವಾನಂತರ ಗರ್ಭಕೋಶದ ಸರ್ವತರದ ನಂಜನ್ನು ಹೊರಗೆ ಹಾಕಿ ಪ್ರಸೂತವಾದ ಗರ್ಭಕೋಶವನ್ನು ಮೂರು ದಿವಸಗಳೊಳಗೆ ಅಂಕುಚಿತವಾಗಿ ಮಾಡುವದು.

II. ರಸಾಯನ ಗುಣ:—ರಸಾಯನದಿಂದ ಸೂತಿಕಾ ಸ್ತ್ರೀಯು ಗರ್ಭದ ಬೆಳವಣಿಗೆಬಗ್ಯೆಯೂ, ಪ್ರಸವವೇದನಾ ಬಗ್ಯೆಯೂ ತಾನು ಕಳಕೊಂಡ ಮೂಲ ಶಕ್ತಿಯನ್ನು ಇನ್ಮುಡಿಯಾಗಿ ತಿರುಗಿ ಹೊಂದುವಳು.

III. ಸುಖಸೇವನ:—ಸುಖಸೇವನದಿಂದ ಮಧುರ ಮನೋಹರವಾದ ಈ ರಸಾಯನವು ಪ್ರಾಣಾಂತಿಯರ ಅರುಚಿ, ಅಗ್ನಿಮಾಂದ್ಯ, ನಿದ್ರಾನಾಶ ಮೊದಲಾದುವುಗಳನ್ನು ಹೋಗಲಾಡಿಸುವುದಲ್ಲದೆ ಪ್ರಸವಾನಂತರದ ತೀಕ್ಷ್ಣವೇದನೆಯನ್ನು ಶೀಘ್ರದಿಂದ ನಿಲ್ಲಿಸುವದು.

ಒಬ್ಬರು ಬಾಣಂತಿಗೆ ಎರಡು ಬಾಟ್ಲಿ ಬೇಕಾಗುವದು. ಕ್ರಯ ಬಾಟ್ಲಿ 1ಕ್ಕೆ ರೂ. 2-0-0.

ಎಮ್. ವಿ. ಶಾಸ್ತ್ರಿ, ಆಯುರ್ವೇದ ಭೂಷಣ
ಮಂಗಳೂರು, ದ.ಕ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ



ಸ್ಥಾಪನೆ: 1926

18 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡು, ಪೇದೆಗಳ ಬೇಜು, ನೊನೊಗ್ರಾಮ್ ಸೀಲು, ಇತ್ಯಾದಿಗಳನ್ನು ಪ್ರತಿಯೊಬ್ಬರ ಅಭಿರುಚಿಗೊಪ್ಪುವಂತೆ ಸುಲಭ ದರಗಳಲ್ಲಿ ಮಾಡಿಕೊಡೋಣಾಗುವುದು.

ಹೆಬ್ಬೆಟ್ಟು ಒತ್ತುವ ಸೆಟ್ಟುಗಳು ಕೂಡಾ ಸಿಗುವವು.

ಮಿಕ್ಕ ವಿಚಾರಗಳನ್ನು ನಮ್ಮ ಆಫೀಸಿಗೆ ಸ್ವತಹ ಬಂದು ಯಾ ಪತ್ರ ಮುಖೇನ ತಿಳಿಕೊಳ್ಳಬಹುದು.

ಮಂಗಳೂರಲ್ಲಿ ರೈಲು ಬಂಡಿಗಳ ಸಮಯ

ಗಾಡಿಗಳು	ಹೊರಡುವ ಘಂಟೆ.	ತಲಪುವ ಘಂಟೆ
ಮಿಕ್ಸೆಡ್	ಬೆಳಿಗ್ಗೆ 5-55	ರಾತ್ರಿ 8-55
ಕಾಂಜಂಗಾಂಡ್ ಪ್ಯಾಸೆಂಜರ್	ಬೆಳಿಗ್ಗೆ 8.25	ಮಧ್ಯಾಹ್ನ 1-20
ಮೈಲ್	ಬೆಳಿಗ್ಗೆ 9-50	ಸಂಜೆ 4-20
ಫಾಸ್ಟ್ ಪೆಸೆಂಜರ್	ಮಧ್ಯಾಹ್ನ 12-45	ಮಧ್ಯಾಹ್ನ 2-40
ಕಾಸರಗೋಡ್ ಪ್ಯಾಸೆಂಜರ್	ಮಧ್ಯಾಹ್ನ 3-20	ಸಂಜೆ 6-15
ಶಟಲ್	ಸಂಜೆ 5-25	ಬೆಳಿಗ್ಗೆ 9-20

ಜನರಲ್ ಎಶ್ಯೂರೆನ್ಸ್ ಸೊಸ್ಯಾಟಿ ಲಿಮಿಟೆಡ್.

ಸ್ಥಾಪಿತನಾದದ್ದು.] [1907ರಲ್ಲಿ

ವೇಲ್ಯು ವೇಶನ್ ವರ್ಷ 1936.

ಕೊನೆಯ ಬೋನಸು ಎಲ್ಲಕ್ಕಿಂತಲೂ ಅತಿ ಹೆಚ್ಚಾಗಿರುವುದು.

ಬೇರೆ ಬೇರೆ ಫಂಡುಗಳು ರೂ. **70 ಲಕ್ಷ** ಮಿಕ್ಕಿವೆ.
ವಿಮಾ ಹಣ ಪಾವತಿ ರೂ. **37 ಲಕ್ಷ** ಮಿಕ್ಕಿನೆ.

ಹೊಸತಾಗಿ ನಿಮಿಗೆ ಸೇರುವವರು ಹೊಸ ವೇಲ್ಯುವೇಶನಿನ ಉಳಿತಾಯದಲ್ಲಿ ಪಾಲು ಪಡೆಯುವರು. ಎಲ್ಲಾ ತರದ ಅವಶ್ಯಕತೆ ಮತ್ತು ಸ್ಥಿತಿಗತಿಗೆ ಸರಿಹೋಲುವ ವಿವಿಧ ಯೋಜನೆಗಳಿವೆ.

ವಿಜನ್ಸ್ ಶರ್ತಗಳು:—ಅತ್ಯಧಿಕ ನಷ್ಟೆಯ ಕಮಿಶನಿನಿಂದ ಬಹಳ ಲಾಭದಾಯಕನಾಗಿವೆ. ವಿಶೇಷ ಮಾಹಿತಿಗಾಗಿ ಈ ಕೆಳಗಣ ವಿಳಾಸಗಳಿಗೆ ಬರಕೊಳ್ಳಿರಿ

P. D. BHARGOVA,
*General Manager, **AJMER,***
SUPERINTENDENT, 278, Linga Chetty Street, MADRAS
Or Chief Agent:—
BELLARY: MADURA: TRICHINAPOLY: VELLORE.

ಸ್ಟೀಮರು ಸಮಯ

	ತಲಪುವುದು	ಹೊರಡುವುದು
ಮಂಗಳೂರು	ಗುರುವಾರ ಬೆಳಿಗ್ಗೆ ಗಂಟೆ 9 ಸೋಮವಾರ ಬೆಳಿಗ್ಗೆ ಗಂಟೆ 6	ಶನಿವಾರ ಬೆಳಿಗ್ಗೆ ಗಂಟೆ 9 ಮಂಗಳವಾರ ಬೆಳಿಗ್ಗೆ ಗಂಟೆ 9
ಮಲ್ಪೆ	ಗುರುವಾರ ಬೆಳಿಗ್ಗೆ ಗಂಟೆ 3 ಆದಿತ್ಯವಾರ ಸಂಜೆ ಗಂಟೆ 6	ಶನಿವಾರ ಮಧ್ಯಾಹ್ನ 2-30 ಮಂಗಳವಾರ ಮಧ್ಯಾಹ್ನ 2-30
ಕುಂದಾಪುರ		ಶನಿವಾರ ಸಂಜೆ ಗಂಟೆ 3 ಮಂಗಳವಾರ ಮಧ್ಯಾಹ್ನ 3

ನಮ್ಮ ಉನ್ನತಿಗಾಗಿ ನಾವೇನು ಮಾಡಬೇಕು? ಇತ್ಯಾದಿ ಸಮಸ್ಯೆಗಳಿಗೆ ಸದ ತ್ತರವನ್ನು ಕೊಡುವ ಪತ್ರಿಕೆ ಎಂದರೆ

ಸದ್ಧರ್ಮ ಪ್ರಚಾರಕ

ವಾ. ಚ. 1—4—0.

ಸಂಪಾದಕರು:-
ಬಿ. ಲಕ್ಷ್ಮಣದೇವ ವಿದ್ಯಾರ್ಥಿ.
ಉತ್ಕೃಷ್ಟ ಕತೆ, ಕವನಗಳಿಂದೊಡಗೂಡಿ, ಪ್ರತಿವರ್ಷದ 15ನೇ ತಾರೀಕಿಗೆ ತಪ್ಪದೆ ಹೊರಡುವುದು.

ಸದ್ಧರ್ಮ ಪ್ರಚಾರಕ, ಕಾರ್ಯಾಲಯ,
ಅಳಕೆ ರಸ್ತೆ, ಮಂಗಳೂರು

ಪ್ರವಾಸಿ.

ಅತ್ಯುತ್ತಮವಾದ ಸಚಿತ್ರ ಕನ್ನಡ ಮಾಸಪತ್ರಿಕೆ.

ಜ್ಞೋಧಪ್ರದವಾದ ಲೇಖನಗಳು-ಮಹಾಪುರುಷರ ಜೀವನ ಚರಿತ್ರೆಗಳು ಉತ್ತಮ ಕಥೆಗಳು-ಅರ್ಥಿಕ ರಾಜಕೀಯ ವಿಚಾರಗಳು. ವೈಜ್ಞಾನಿಕ ವಿಷಯಗಳು-ಪರಿಣಾಮಗಳ ಸಮಸ್ಯೆಗಳು-ಸ್ತ್ರೀಯ ವಿಮರ್ಶೆ ಇವುಗಳ ನೆಪ್ಪುಳಗೊಂಡ ಹೊಸ ರೀತಿಯ ಮಾಸಪತ್ರಿಕೆ. ಕೈಗೆಲಸವೆಂಬ ನೂತನ ವಿಭಾಗವಿರುವ ಪತ್ರಿಕೆಯು ಇದೊಂದೆ.

ವಾರ್ಷಿಕ ಚಂದಾ ರೂ 3—8—0.

ಪ್ರವಾಸಿ ಕಾರ್ಯಾಲಯ
ಕಾಸರಗೋಡು, ದಕ್ಷಿಣಕನ್ನಡ.

THE VIJAYA BANK Ltd.,

Head Office: MANGALORE. Branch Office: Court Road, UDIPI.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು. ಶಾಖೆ: ಕೋರ್ಟು ರಸ್ತೆ, ಉಡ್ಡಿ

ಚಾಲ್ತಿ ಠೇವಣಾತಿಗಳು ಸಾ. ಶೆ. 2. ಸೇವಿಂಗ್ಸು ಬ್ಯಾಂಕ್ ಠೇವಣಾತಿಗಳುಸಾ. ಶೆ. 3½
ಕಾಯಂ ಠೇವಣಾತಿಗಳು 3 ತಿಂಗಳ ಬಾಬ್ತು ಸಾ. ಶೆ. 3½
6 ವ.ತ್ತು 9 ತಿಂಗಳ ಬಾಬ್ತು ಸಾ ಶೆ. 4. 1ವರ್ಷದ ಬಾಬ್ತು ಸಾ. ಶೆ. 5.
2 ವರ್ಷದ ಮೇಲಿನವುಗಳ ಬಾಬ್ತು ಸಾ. ಶೆ. 5½ ದರದ ಬಡ್ಡಿಯಲ್ಲಿ
ಅಂಗೀಕರಿಸಲ್ಪಡುವುವು.

ಬ್ಯಾಂಕಿಗೆ ಸಮ್ಬಂಧಪಟ್ಟ ಎಲ್ಲಾ ತರದ ವ್ಯವಹಾರಗಳು ನಡೆಸಲ್ಪಡುತ್ತವೆ—
ಅಂದರೆ—ಪ್ರೊ ನೋಟು, ಹುಂಡಿ, ಸರಕು, ವಗೈರೆ ಮೇಲೆ ಸಾಲಕೊಡಲಾಗುತ್ತವೆ,
ಭಂಗಾರದ ಒಡವೆ ಮೇಲೆ ಈ ಕೆಳಗಿನ ದರದ ಬಡ್ಡಿಯಲ್ಲಿ ಸಾಲ ದೊರೆಯುವುದು.
ರೂ. 1ರಿಂದ 99ರ ವರೆಗೆ ಸಾ. ಶೆ. 9. 100ರಿಂದ 250ರ ವರೆಗೆ ಸಾ: ಶೆ. 8. ಮತ್ತು
251ರಿಂದ ಮೇಲ್ಪಟ್ಟ ಸಾಲಗಳಿಗೆ ಸಾ. ಶೆ. 7.

ವಿಶೇಷ ಸೂಚನೆ:—ಬಡವರಿಗೆ ಸಹಾಯವಾಗುವಂತೆ ಕಡಿಮೆಯೆಂದರೆ ರೂಪಾಯಿ 10/ ಸಹಾ ಸಾಲಕೊಡಲಾಗುತ್ತದೆ. ಪಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಕೊಳ್ಳಿರಿ.

A. B Shetty, ಚೆಯರ್‌ಮೇನ್. **K. Gopalakrishna Shetty** ಸೆಕ್ರಟರಿ.

ವಿಜಯ ಬೇಂಕ್ ಲಿಮಿಟೆಡ್, ಕದ್ರಿರೋಡ್, ಮಂಗಳೂರು.

ಸ್ವದೇಶಿ ಕೈಗಾರಿಕೆಯನ್ನು ಪ್ರೋತ್ಸಾಹಿಸಿರಿ.

ಸ್ವದೇಶಿ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಅಭಿರುಚಿಗೆ ಒಪ್ಪುವ ಎಲ್ಲಾ ತರದ ಸೀರೆಗಳು ಬಗೆಬಗೆಯ ಬಣ್ಣದಲ್ಲಿ, ಅಂಚಿನಲ್ಲಿ, ನಮೂನೆಯಲ್ಲಿ ದೊರೆಯುತ್ತವೆ.

ಕುದ್ಧ ಖಾದಿ ಮತ್ತು ಮಿಲ್‌ಬಟ್ಟೆಗಳೂ ವಿಕ್ರಯಿಸಲ್ಪಡುತ್ತವೆ.

P. A. PAI, BROS.
ಪಿ. ಎ. ಪೈ ಬ್ರದರ್ಸ್,
ಅಸ್ಪತ್ರೆ ಎದುರು, ಉಡುಪಿ.

ಕಸಿಗಿಡಗಳು.

ಸಪೋಡಿಲ್ಲ (ಚಿಕ್ಕು)

ಈ ಮರವು ನಮ್ಮ ಜಿಲ್ಲೆಯ ಎಲ್ಲಾ ಭಾಗದಲ್ಲಿಯೂ ಸರಿಯಾಗಿ ಬೆಳೆದು, ೪ನೇ ವರ್ಷದಲ್ಲಿಯೇ ತಪ್ಪದೆ ಫಲಬಿಡುತ್ತವೆ ಒಂದು ಮರದಲ್ಲಿ ಸಾವಿರಗಟ್ಟಿ ಹಣ್ಣಾಗುವುದು. ಒಂದು ಎಕ್ಕರೆಯಲ್ಲಿ ವರ್ಷಕ್ಕೆ ರೂ. ಸಾವಿರದ ಮೇಲೆ ಉತ್ಪತ್ತಿಯಾಗುವುದು. ಹಣ್ಣು ಅತಿ ಮಧುರ, ಒಳ್ಳೆ ರುಚಿ, ಕಾಯಿಲೆಯವರಿಗೆ ಉತ್ತಮ ಆಹಾರ ಅದರಲ್ಲಿ ಕಬ್ಬಿಣ ಸತ್ವ ಮತ್ತು ವಿಟಮಿನ್ ತುಂಬ ಇರುವದರಿಂದ ರಕ್ತವನ್ನು ಸೃಷ್ಟಿಸುವುದು. ಮರದಲ್ಲಿ ಯಾವಾಗಲೂ ಹಣ್ಣು ಇರುವುದು. ಎಲ್ಲ ತೋಟದಲ್ಲಿಯೂ ಇರತಕ್ಕದ್ದು. ಗಿಡ ಒಂದರ ಕ್ರಯ ರೂ. 1-0-0 ಮಾತ್ರ. ನಮ್ಮಲ್ಲಿ ಉತ್ತಮ ಮಾವು ಮತ್ತು ಇತರ ಕಸಿ ಗಿಡಗಳು ಕೂಡ ದೊರೆಯುತ್ತವೆ. ಕ್ರಯಪಟ್ಟಿಗೆ ಕೆಳಗಣ ವಿಳಾಸಕ್ಕೆ ಬರೆಯುವುದು.

ಮಂಗಳೂರಲ್ಲಿ ವಿಜಯ ಬ್ಯಾಂಕಿನಲ್ಲಿಯೂ, ಸ್ಯಾಡಶೋಪು, ಹಂಪನಕಟ್ಟೆಯಲ್ಲಿಯೂ, ಸೋಮಯಾಜಿ ಎಂಡ್ ಕೊ, ರಥಬೀದಿಯಲ್ಲಿಯೂ ಮತ್ತು ಜಿಲ್ಲೆಯ ಎಲ್ಲಾ ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರ್‌ಗಳಲ್ಲಿಯೂ ಮೇಲಿನ ಎಲ್ಲಾ ಗಿಡಗಳು ದೊರೆಯುತ್ತವೆ.

ಕೆ. ಎಮ್. ಶೆಟ್ಟಿ, ಕೆನರಾ ನರ್ಸರಿ,
ಪೋಸ್ಟ್ ಕಾಪು, ದ. ಕೆನ್ನಡ

ವಿಜಯನಗರ ಸಾಮ್ರಾಜ್ಯದ ಆರನೇ
—ಶತಮಾನೋತ್ಸವ—

ಕರ್ನಾಟಕಾಧಿಪತ್ಯದ ಗತವೈಭವದ ಸ್ಮಾರಕ.

(ಲೇಖಕ:—M. N. Bhandary, L. S. E.)

ವಿಜಯನಗರ ಸಾಮ್ರಾಜ್ಯದ ಆರನೇ ಶತಮಾನೋತ್ಸವವನ್ನು ಕರ್ನಾಟಕ ಏಕೀಕರಣ ಚಳವಳಿಯ ಕಾರ್ಯಕ್ರಮಗಳಲ್ಲೊಂದಾಗಿ, ಇದೇ ದಶಂಬರ ತಿಂಗಳಲ್ಲಿ, ಹರಿಹರಂಚಾಗಿ ಬಿದ್ದಿರುವ ಕರ್ನಾಟಕವು ಹೊಂಪಿಯಲ್ಲಿ ಆಚರಿಸಲಿಕ್ಕಿರುವುದು. ಮದ್ರಾಸ್ ಸಂಸ್ಥಾನದ ಬಳ್ಳಾರಿ ಜಿಲ್ಲೆಯ ಹೊಸಪೇಟೆಯಿಂದ ಏಳು ಮೈಲು ದೂರದಲ್ಲಿ, ತುಂಗಭದ್ರಾ ತೀರದಲ್ಲಿ ಇಂದು ಕಾಣಬಿದ್ದಿರುವ ಹೊಂಪಿಯು ಹಿಂದೊಮ್ಮೆ ವಿಜಯನಗರ ಸಂಸ್ಥಾನದ ರಾಜಧಾನಿಯಾಗಿದ್ದಿತು. ಇತಿಹಾಸ ಪ್ರಸಿದ್ಧವಾದ ಈ ಹಾಳು ಹಂಪಿಯಲ್ಲಿದ್ದ ಕರ್ನಾಟಕ ಸಾಮ್ರಾಜ್ಯದ ಗತ ವೈಭವವನ್ನು ಎಲ್ಲಾ ಕನ್ನಡಿಗರ ಸ್ಮರಣೆಗೂ ತರಲೇಕೆಂಬುದೇ ಈ ಮಹೋತ್ಸವವನ್ನು ಆಚರಿಸುವ ಉದ್ದೇಶ.

ಇಂದಿಗೆ ಆರು ಶತಮಾನಗಳಿಗೆ ಮೊದಲು ವಿಜಯನಗರ ಸಾಮ್ರಾಜ್ಯವು ಸ್ಥಾಪಿಸಲ್ಪಟ್ಟ ಚಿರಸ್ಮರಣೀಯ ದಿನವು ಅಖಿಲ ಕರ್ನಾಟಕದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಕೆತ್ತಲ್ಪಟ್ಟ ಪುಣ್ಯ ದಿನ. 'ತುಂಗಭದ್ರಾ ನದಿಯೇ ಈ ರಾಜಧಾನಿಯ ಕಂದಕ. ಸೀಮಕೂಟವೇ ಇದರ ಕೊತ್ತಳ. ಜಗದ್ರಕ್ಷಕನಾದ ಶ್ರೀ ವಿರೂಪಾಕ್ಷನೇ ಇಲ್ಲಿಯ ಅಧಿನಾಥ. ಈ ರಾಜ್ಯದ ನಾಯಕನೇ ರಾಜಾಧೀಶನಾದ ಹರಿಹರರಾಯ'. ಆಂತೂ ವಿದ್ಯಾರಣ್ಯರ ಕೃಪೆಯಿಂದ ಹರಿಹರ ರಾಯನು ಬಳ್ಳಾರಿಯ ಹಂಪಿಯ ಹೆಳೆಯಲ್ಲಿ ಸ್ಥಾಪಿಸಿದ ಈ ಚಿಕ್ಕ ರಾಜ್ಯವು ವಿಜಯನಗರಾಧೀಶರ ೩೩೦ ವರ್ಷಗಳ ಆಳ್ವಿಕೆಯಲ್ಲಿ ನಿಶ್ಚಿಂತೆಯ ಸ್ಥಿತಿಗೆ ಬಂದು ಸುತ್ತಮುತ್ತಲಿನ ಪ್ರಾಂತಗಳೆಲ್ಲಾ ಜಯಿಸಲ್ಪಟ್ಟು, ಒಂದು ದಿನ ಹಿಂದೂದೇಶದ ಇತಿಹಾಸದಲ್ಲಿ ಅತಿ ಹೊಂದು ಪ್ರಾಮುಖ್ಯ ಸ್ಥಾನವನ್ನು ಪಡೆಯುದು ಕನ್ನಡಿಗರ ಪ್ರಾದುರ್ಭಾವದ ಪರಮಾವಧಿಯೆನ್ನಬೇಕು. ಒಂದೊಮ್ಮೆಗೆ ಹಿಂದು ರಾಜ್ಯವಾಗಿದ್ದ ವಿಜಯನಗರವು ಇದರ ಬಲಿಷ್ಠರಾದ ರಾಜರ ಅಸಂಖ್ಯಾತ ವಿಜಯ ಯಾತ್ರೆಗಳಿಂದ ವಿಶಾಲವಾದ ಸಾಮ್ರಾಜ್ಯವಾಗಿ ಮಾರ್ಪಟ್ಟಿತು. 'ರಾಜಧಾನಿಯಾದ ಹಂಪಿಯು ಸಿರಿಯ ನೆಲೆವೀಡಾಯಿತು. ರಾಜಕೀಯ ಧಾರ್ಮಿಕ ವಿಚಾರಗಳಲ್ಲಿ ವಿಶಾರದರೂ ಪ್ರಜ್ಞಾತರೂ ಪ್ರಜಾವಂಧುಗಳೂ ಆದ ವಿಜಯ ನಗರಾಧೀಶರಲ್ಲಿ ಪ್ರಾರಂಭದಲ್ಲಿ ಸಾಮ್ರಾಜ್ಯ ಶಾಹಿಯ ದರ್ಪವಿರಲಿಲ್ಲ. ದಿಗಂತ ವಿಶ್ರಾಂತವಾದ ವಿಜಯನಗರ ಸಾಮ್ರಾಜ್ಯದ ವೈಭವವೂ ಕೀರ್ತಿಯೂ ಪರದೇಶದ ಪ್ರವಾಸಿಗಳನ್ನೂ ವ್ಯಾಪಾರಿಗಳನ್ನೂ ಬೆರಗುಗೊಳಿಸಿತು. ಹೀಗೆ ವಿಜಯನಗರದ ಆಸ್ಥಾನಕ್ಕೆ ಬಂದ ಯೂರೋಪೀಯನ್ ಜನಾಂಗಗಳಲ್ಲಿ ಪೋರ್ಚುಗೀಸರು, ಇಟೆಲಿಯಾನರು ಮತ್ತು ಆಫ್ರಿಕ ಖಂಡದ ಮೂರರು.

ಶ್ರಿಂಗೇರಿಯ ವಿದ್ಯಾಪೀಠದಲ್ಲಿ ಪಾಂಡಿತ್ಯವನ್ನು ಪಡೆದ ವಿದ್ಯಾರಣ್ಯರೇ ಹರಿಹರ ರಾಯನ ಬಲಗೈಯಂತಿರುವಾಗ, ಕರ್ನಾಟಕ ಮತ್ತು ತೆಲುಗು ಕವಿಗಳಿಗೂ, ಕಲಾಶಾಸ್ತ್ರಕ್ಕೂ, ಜೈನ, ಹಿಂದೂ, ವೀರಶೈವ ಪಂಗಡಕ್ಕೆ ಸೇರಿದ ತತ್ವ ವಿದ್ಯಾ ವಿಶಾರದರಿಗೂ ಬೇಕಾದ ಸಂಭಾವನೆ, ಪುರಸ್ಕಾರಾದಿಗಳೂ ಪ್ರೋತ್ಸಾಹವೂ ಆಗಾಗ್ಗೆ ದೊರೆಯುತ್ತಿದ್ದುದು ವಿಶೇಷವಲ್ಲ. ಕರ್ನಾಟಕ ಮತ್ತು ತೆಲುಗು ಸಾಹಿತ್ಯದೊಂದಿಗೆ ನಾಗರಿಕತೆಯ ಹೆಗ್ಗುರುತುಗಳಾದ ಕವಿತೆ, ಸಂಗೀತ ಕಲೆ, ನಾಟ್ಯಕಲೆ, ಕಲಾಶಾಸ್ತ್ರ, ಶಿಲ್ಪಶಾಸ್ತ್ರ ವಿಜ್ಞಾನ ಶಾಸ್ತ್ರ, ಭೌತಿಕ ಶಾಸ್ತ್ರ ಮೊದಲಾದವುಗಳು ವಿಜಯ ನಗರದ ರಾಜರ ಕಾಲದಲ್ಲಿ ತುಂಬಾ ಸುಧಾರಿತ ಸ್ಥಿತಿಯಲ್ಲದ್ದುವೆಂಬುದಕ್ಕೆ ಬೇಕಾದ ಆಧಾರಗಳಿವೆ.

ರಾಜಧಾನಿಯ ವೈಭವ

ಪೋರ್ಚುಗೀಸ್, ಫ್ರೆಂಚ್, ಇಟೆಲಿಯಾನ್, ಪ್ರವಾಸಿಗಳಾದ ಪಾಯಿನ್ ನುನಿಝ್ ಮತ್ತು ಡ್ಯುಆರ್ಟ್ ಬಾರ್ಬೋಸ ನೊದಲಾದವರು ವಿಜಯನಗರ ಸಾಮ್ರಾಜ್ಯದ ಪ್ರಾದುರ್ಭಾವದ ಸಮಯದಲ್ಲಿ ಇಲ್ಲಿಯ ಸಾರ್ವಭೌಮರ ಮತ್ತು ಅವರ ಚಕ್ರಾಧಿಪತ್ಯದ ಕುರಿತು ತಮ್ಮ ಅಭಿಪ್ರಾಯವನ್ನು ವಿಸ್ತಾರವಾಗಿ ಬರೆದಿರುತ್ತಾರೆ. ಈ ವಿದೇಶ ಲೇಖಕರು ವಿಜಯ ನಗರದ ರಾಜಧಾನಿಯ ಭವ್ಯವಾದ ಕಟ್ಟಡಗಳು, ನಗರದ ಆಗಾಗ್ಗೆ ಸಂಭ್ರಮದಿಂದ ಆಚರಿಸಲ್ಪಡುವ ಉತ್ಸವಗಳು, ನಗರ ನಿವಾಸಗಳ ಧಾರ್ಮಿಕ ಮತ್ತು ಸಾಮಾಜಿಕ ವಿಚಾರಗಳು, ನಗರ ರಕ್ಷಣೆಗೆ ಬೇಕಾಗುವ ಕೋಟೆ ಕೊತ್ತಳಗಳು, ಕೃಷಿ ಸುಧಾರಣೆಗಾಗಿ ಕೈಕೊಂಡ ದೊಡ್ಡ ನೀರಾವರಿ ಯೋಜನೆಗಳು ಪೋರ್ಚುಗೀಸ್ ಮತ್ತು ಮೂರಿಶ್ ಜನಾಂಗಗಳೊಡನೆ ಬೆಳೆಸಿದ ಅಂತಾರಾಷ್ಟ್ರೀಯ ವಾಣಿಜ್ಯ ವ್ಯವಹಾರ ಮಾತ್ರವಲ್ಲದೆ ದಖ್ಖಣದ ಸಾನುಪ್ರದೇಶದಲ್ಲಿ ಅತ್ಯಂತ ಪ್ರಬಲವಾದ ಈ ಸಾಮ್ರಾಜ್ಯದ ಆಡಳಿತ, ಇವೇ ಮೊದಲಾದವುಗಳ ಕುರಿತು ಉಲ್ಲೇಖಿಸಿ, ನಿಷ್ಪಕ್ಷಪಾತತೆಯಿಂದ ಬರೆದ ಐತಿಹಾಸಿಕ ಲೇಖನಗಳಿವೆ. 1509 ರಿಂದ 1530ರ ವರೆಗೆ ರಾಜ್ಯಭಾರಮಾಡಿದ ಎರಡನೇ ಕೃಷ್ಣದೇವರಾಯನ ಕಾಲದಲ್ಲಿ ಮಲಬಾರು ಮತ್ತು ಕೊರಮಂಡಲ ತೀರಗಳ ಮಧ್ಯದಲ್ಲಿರುವ ಸುಮಾರು 600 ಗ್ರಾಮಗಳಷ್ಟು ಅಗಲವಿರುವ ಪ್ರದೇಶವು ವಿಜಯನಗರ ಸಾಮ್ರಾಜ್ಯದ ಆಡಳಿತಕ್ಕೆ ಸೇರಿದ್ದಿತೆಂದು ನುನಿಝ್ ಎಂಬ ಲೇಖಕನು ಬರೆಯುತ್ತಾನೆ. ಪಶ್ಚಿಮ ಕರಾವಳಿಯಲ್ಲಿರುವ ಹೊನ್ನಾವರ, ಭಟ್ಕಳ, ಮೂಲ್ಕಿ, ಪುಂಗೂರು ಮತ್ತು ಬೇಕಲ ಮೊದಲಾದ ಬಂದರುಗಳು ಪಾಶ್ಚಾತ್ಯ ಜನಾಂಗಗಳ ವ್ಯಾಪಾರದ ಹಡಗುಗಳು ತಂಗುವ ಬಂದರ ಸ್ಥಳಗಳಾಗಿದ್ದವು. ನುನಿಝ್ ಗ್ರಂಥಕಾರನು ರಾಜಧಾನಿಯ ಕುರಿತು ಹೀಗೆಂದು ಬರೆದಿರುತ್ತಾನೆ. ನಾನೊಮ್ಮೆ ಹಂಪಿ ನಗರದ ಸಮೀಪವಲ್ಲಿರುವ ಗುಡ್ಡವನ್ನು ಹತ್ತಿ ನೋಡಲು ಜನ ಸಮೂಹದಿಂದಲೂ, ಆನೆ

(ಗಳಸಿ ಪುಟ ನೋಡಿ.)

"ಬ್ರೇಕ್ ಪಿಲ್ಲು"

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವ ಭಂಗಮಾಡಲು ಕಂಡು ಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ವಿಷಾಗುಗಳು ಸೇರಿಲ್ಲ, ಕಸ್ತೂರಿ, ಚಿನ್ನ ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ನಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲವೆಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ. ೫—೦—೦ ೩೦ ಮಾತ್ರೆಗಳು ರೂ. ೩—೦—೦

ಕಾಗದ ಪತ್ರಗಳು ಇಂಗ್ಲೀಷಿನಲ್ಲಿರಬೇಕು.

ಡಾ. ಎ. ಎಸ್. ಮೂರ್ತಿ,
ಚೀಕಾಕೋಲ್ ಗಂಜಾಮ್ ಡಿಸ್ಟ್ರಿಕ್ಟ್.

ಸುವರ್ಣ ತಾಯಿತ! ಬಂಗಾರದ ತಾಯಿತ!!
ಹಿಮಾಲಯ ಪರ್ವತದಲ್ಲಿ ವರ್ಷಗಟ್ಟಲೆ ತಪಸ್ಸು ಮಾಡಿ ಸಿದ್ಧಿಯನ್ನು ಪಡೆದ ಮಹಾ ಯೋಗೀಶ್ವರರಿಂದ ಕಂಡು ಹಿಡಿಯಲ್ಪಟ್ಟದ್ದು.

ಈ ತಾಯಿತವನ್ನು

ಧರಿಸಿದ ಮಾತ್ರದಿಂದ ಸಕಲ ಇಷ್ಟಾರ್ಥಗಳೂ ನೆರವೇರುವುವು. ಪರೀಕ್ಷಿಸಲಪೇಕ್ಷಿಸುವವರು

"ಯೋಗೀಶ್ವರರ ಶಕ್ತಿ ಸಾಹಸ"

ಎಂಬ ಪುಸ್ತಕವನ್ನು ಧರ್ಮಾರ್ಥವಾಗಿ ಪಡೆಯಬಹುದು.

ಪತ್ತೆ:—ಪಂಡಿತ್ ಎ. ವಿ. ಆರಮನೆ
ಚಿಕಾಕೋಲ್

ಸಿದ್ಧವಾಗಿದೆ! ಸಿದ್ಧವಾಗಿದೆ!!

ಪಂಡಿತ ಜವಹರಲಾಲರ ಆತ್ಮಕಥೆ

ಕನ್ನಡ ಭಾಷಾಂತರ: ನವಜೀವನ ಕನ್ನಡ ಗುಂಪಿನಿಂದ

ಗಿನೆಯ ಸಂಪುಟ ಸಿದ್ಧವಾಗಿದೆ.

ದಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.

	ಟಪ್ಪಾಲು ಖರ್ಚು ಪ್ರತ್ಯೇಕ
ಅತ್ಯುತ್ತಮ ಪ್ರತಿ	ರೂ. ೧೮ ೦ ೦
ವಾಚನಾಲಯ ಪ್ರತಿ	,, ೭ ೦ ೦
ಸಾಮಾನ್ಯ ಪ್ರತಿ	,, ೫ ೦ ೦

ದಿಸೆಂಬರ್ ತಿಂಗಳೊಳಗಾಗಿ

ಹಣ ಕಳುಹಿಸುವವರಿಗೆ ಟಪ್ಪಾಲು ಖರ್ಚು ಮುಖಪುಟ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್ ಕೊಡಲಾಗುವುದು.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.
ಸಂಪಾದಕರು:—"ನವಜೀವನ" ಮತ್ತು "ಮಕ್ಕಳ ಪುಸ್ತಕ"
ಬಳೇಪೇಟೆ, ಬೆಂಗಳೂರು ಸಿಟಿ.

ಹೊಸದು! • ಐರಾವತ • ತೀರಾ ಹೊಸದು!!

ಇದರಲ್ಲಿ—ಕಾಮಶಾಸ್ತ್ರ, ಕೈಗಾರಿಕೆಯ ವಿಷಯ, ಇಂದ್ರಜಾಲ-ಮಹೇಂದ್ರಜಾಲ, ಕಾಯದೇಭಾಗ, ತಂತ್ರ-ಮಂತ್ರ-ಯಂತ್ರ, ಸರ್ವ ಮುಹೂರ್ತ ವಿಷಯ, ವೈದ್ಯಭಾಗ. ಈ ಪ್ರಕಾರ ೭ ಪ್ರಕರಣಗಳಿದ್ದು ಅತ್ಯಂತ ಮಹತ್ವದ ವಿಷಯಗಳು ಅಡಕವಾಗಿವೆ. ಇದರ ಬೆಲೆ ರೂ- ೧---೦---೦ ವಿ. ಪಿ. ಚಾರ್ಜು ಬೇರೆ.

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

— ಚಿಂತಾರತ್ನ —

ಇದರಲ್ಲಿ ಜಾತಕಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ, ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ. ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ
೨ ಮೇಣಬತ್ತಿ ತಯಾರಿಸುವ ರೀತಿ
೩ ಕಾಷ್ಟಿಕ್ ಸೋಡಾ ತಯಾರಿಸುವದು
೪ ಬಿಸ್‌ಕ್ಯೂಟ ತಯಾರಮಾಡುವದು
೫ ದಶಾಂಗ ತಯಾರಮಾಡುವದು
೬ ಪೆಪ್ಪರಮೆಂಟ ಮಾಡುವದು
೭ ದೂಪದ ಘಟ್ಟಿ ಮಾಡುವದು
೮ ಭಂಗಾರ ಮಾಡುವದು
೯ ಬಳ್ಳಿ ತಯಾರಮಾಡುವದು
೧೦ ಜರ್ಮನ್ ಶಿಲ್ವರ ಧಾತು
೧೧ ಊದಿನಕಡ್ಡಿ ತಯಾರಮಾಡುವದು
೧೨ ತರಡಿನ ಪಾಟ ತಯಾರಮಾಡುವದು
೧೩ ಕುಂಕುಮವನ್ನು ತಯಾರಿಸುವದು
೧೪ ಹಸಿ ಕುಂಕುಮ ತಯಾರಿಸುವದು
೧೫ ಗೋದೀಸರಿ ಕೆಡದಂತೆ ಮಾಡುವದು
೧೬ ಬುಕ್ಕೆಟ್ಟು ಮಾಡುವದು
೧೭ ಮಿನಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು
೧೮ ಅಷ್ಟಗಂಧ ಸಾಮಾನುಗಳು
೧೯ ಭರ್ಪ ತಯಾರಮಾಡುವದು
೨೦ ಕಟ್ಟಿಗೆ ಲೋಹಗಳಿಗೆ ಹಚ್ಚುವ ಬಣ್ಣ ಮಾಡುವದು
೨೧ ಕಾಗದವನ್ನು ಮಾಡುವದು
೨೨ ಮೆಂಥೋಲ ಎಣ್ಣೆ ತಯಾರಿಸುವದು
೨೩ ಕನ್ನಡಿಯ ಮೇಲೆ ಬರೆಯುವದು
೨೪ ದಂತಮಂಜನ ಮಾಡುವದು
೨೫ ರಕ್ತಶುದ್ಧಿ, ಧಾತುವೃದ್ಧಿ ಔಷಧಿ
೨೬ ಕಸ್ತೂರಿ ಮಾತ್ರೆ ಮಾಡುವದು
೨೭ ಕುಚಪ್ರಭಾತಕ್ಕೆ ಔಷಧ
೨೮ ಜಾಲಾಮೃತ ಮಾಡುವದು
೨೯ ವೀರ್ಯವೃದ್ಧಿಗೆ ಔಷಧ
೩೦ ಷರಬತ್ತು ಮಾಡುವದು
೩೧ ಧಳಜ್ವರದ ಗುಳಿಗೆ ಮಾಡುವದು
೩೨ ಬೂಟಪಾಲೀಸ ಮಾಡುವದು
೩೩ ಮನೆ, ಅರಾರ, ಅಂಗಡಿ ಮೊದಲಾದುವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು
೩೪ ಹುರುಳು ಖಜ್ಜು ಮುಲಾಮು ಮಾಡುವದು
೩೫ ನಾಸೀಪುಡಿ ಮಾಡುವದು
೩೬ ಮನೆ, ಅರಾರ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು
೩೭ ಜರ್ದಾತಂಬಾಕ ಮಾಡುವದು
೩೮ ಒದನೆ. ಕುಂಬಳ ಮುಂತಾದ ಕಾಯಿಗಳಿಗೂ, ಮಾವು, ಲೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು
೩೯ ಸಿಮೆಂಟ್ ತಯಾರಿಸುವದು
೪೦ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳನ್ನು ತಯಾರಿಸುವದು
೪೧ ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು
೪೨ ಇಸ್ಪೀಟಿನ ಚಮತ್ಕಾರ
೪೩ ಮುಖ ನೋಡಿಕೊಳ್ಳುವ ಕನ್ನಡಿ ಮಾಡುವದು
೪೪ ಸುವಾಸನೆ ಎಣ್ಣೆ ತಯಾರಿಸುವದು
೪೫ ಕೇದಿಗೆ ದವನದೆಣ್ಣೆ ಮಾಡುವದು
೪೬ ಯಾವ ಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು
೪೭ ಗಂಧಕದ ಬಟ್ಟಲ ತಯಾರಿಸುವದು
೪೮ ಕರ್ಪೂರ ಮಾಡುವದು
೪೯ ಬ್ರೆಡ್ಡು ತಯಾರಿಸುವದು
೫೦ ನೂಲು ಬಟ್ಟೆಗೆ ಬಣ್ಣ ಹಾಕುವದು
೫೧ ಕಪ್ಪು, ಕೆಂಪು, ಹಸುರು, ಹಳದಿ ಬಣ್ಣ ತಯಾರಿಸುವದು
೫೨ ಬರ್ಧ ಕಂಪ್ಯೋಲ
೫೩ ಆರಗಿನ ಬಣ್ಣ ತಯಾರಿಸುವದು
೫೪ ಗಿಲೀಟ ಮಾಡುವದು
೫೫ ತಾಮ್ರದ ಮೇಲೆ ಭಂಗಾರದ ಗಿಲೀಟು ಮಾಡುವದು
೫೬ ತಾಮ್ರ, ಹಿತ್ತಾಳೆಗೆ ಬೆಳ್ಳಿ ಗಿಲೀಟು ಮಾಡುವದು
೫೭ ಕಡ್ಡಿ ಪಟ್ಟಿಗೆ ತಯಾರಿಸುವದು
೫೮ ರೋಜವಾಟರ ತಯಾರಿಸುವದು

ಇತ್ಯಾದಿ ೧೭೦ ವಿಷಯಗಳಿವೆ.
ಸ್ಪಷ್ಟ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿದ್ದೆ.
ಬೆಲೆ ೧ ರೂಪಾಯಿ . . (ವಿ. ಪಿ. ವೆಚ್ಚ ಬೇರೆ)

ಸಿ. ಎಸ್. ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕ್ಷಾಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ

--- ಈ ಪುಸ್ತಕದೊಳಗಿನ ವಿಷಯಗಳು ---

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ. ೩ ಶಶಕ ಜಾತಿ ಪುರುಷನ ಲಕ್ಷಣ. ೪ ಮೃಗಜಾತಿ ಪುರುಷನ ಲಕ್ಷಣ. ೫ ವೃಷಭಜಾತಿ ಪುರುಷನ ಲಕ್ಷಣ. ೬ ಅಶ್ವಜಾತಿ ಪುರುಷನ ಲಕ್ಷಣ. ೭ ಪದ್ಮಿನಿಜಾತಿ ಸ್ತ್ರೀಯಳ ಲಕ್ಷಣ. ೮ ಚಿತ್ರಿಣಿಜಾತಿ ಸ್ತ್ರೀಯಳ ಲಕ್ಷಣ. ೯ ಶಂಖಿನಿಜಾತಿ ಸ್ತ್ರೀಯಳ ಲಕ್ಷಣ. ೧೦ ಹಸ್ತಿನಿಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ.) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತವೆಂಬುದನ್ನು ತಿಳಿಯುವದು. ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು. ೧೬ ಚಂದ್ರಕಲೆಯ ಸ್ಥಾನಗಳು. ೧೭ ಸ್ತ್ರೀವಶೀಕರಣ. ೧೮ ಪುರುಷವಶೀಕರಣ. ೧೯ ಪದ್ಮಿನಿ ಸ್ತ್ರೀಯಳನ್ನು ವಶ ಮಾಡಿಕೊಳ್ಳುವ ಉಪಾಯ. ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩ ಭೋಗಕ್ಕೆ ಯೋಗ್ಯ ಸ್ಥಳ. ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ. ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು. ೨೭ ಪರಸ್ತ್ರೀ ಗಮನದಿಂದಾಗುವ ಹಾನಿ. ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ. ೩೦ ಬಾಯಿ ದುರ್ಗಂಧ ಹೋಗುವುದಕ್ಕೆ. ೩೧ ಮಡಿಬಕ್ಕೆಗೆ. ೩೨ ಕೇಶರಂಜನಕ್ಕೆ. ೩೩ ತಿಗಳನೆಕ್ಕಿದಕ್ಕೆ. ೩೪ ಕೂದಲು ಉದುರುವುದಕ್ಕೆ. ೩೫ ಶರೀರದ ಕಪ್ಪುಬಣ್ಣಕ್ಕೆ. ೩೬ ಕುಚ ವೃದ್ಧಿಗೆ. ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು. ೩೮ ಅವಸ್ಥೆ ಮೇಲಿಂದ ಪ್ರೇಮದ ಇಮಿವಿಕೆ. ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ. ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು. ೪೧ ಸತಿಪತಿಗಳು ಕೂಡುವ ದಿವಸ ಫಲ. ೪೨ ಗರ್ಭ ನಿಂತ ದಿವಸ ಫಲ. ೪೩ ಗರ್ಭ ನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿ ಮೇಲಿಂದ ಕೂಸಿನ ಲಕ್ಷಣ. ೪೫ ವಿಕಾಶಯೋನಿಗೆ ಉಪಾಯ. ೪೬ ಯೋನಿ ಸಂಕೋಚಕ್ಕೆ. ೪೭ ಶಿಶ್ನ ವೃದ್ಧಿಗೆ. ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ ೪೯ ಪುರುಷರಿಗಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ. ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ. ೫೧ ವಾಜೀಕರಣ ಪ್ರಯೋಗ. ೫೨ ಸ್ತ್ರೀಯರನ್ನು ಜಯಿಸುವುದಕ್ಕೆ. ೫೩ ಬಹಳ ಮುಟ್ಯಾಗುತ್ತಿದ್ದರೆ. ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ತಡೆದಿದ್ದರೆ. ೫೬ ಗರ್ಭಾಶಯ ಶುದ್ಧಿಗೆ. ೫೭ ಗರ್ಭಧಾರಣಕ್ಕೆ. ೫೮ ಗರ್ಭಪಾತಕ್ಕೆ ಉಪಾಯ.

ಇತ್ಯಾದಿ ೧೭೦ ವಿಷಯಗಳಿವೆ. ಸ್ಪಷ್ಟ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿದ್ದೆ.
ಬೆಲೆ ೧ ರೂಪಾಯಿ (ವಿ. ಪಿ. ವೆಚ್ಚ ಬೇರೆ)

ವಿಳಾಸ:—ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ ೨೧-೧೨-೩೬

ಶ್ರೀ ಗೀತಾಜಯಂತಿ—ಬರುವ ತಾ. ೨೪ನೇ ಗುರುವಾರ ದಿನ ಸಾಯಂಕಾಲ ಉರ್ವಾಲ ರಥೋತ್ಸವಸ್ಥಳದಲ್ಲಿ ಶ್ರೀ ಗೀತಾಜಯಂತ್ಯುತ್ಸವವು ಜರಗಲಿರುವುದು. ಶ್ರೀ ಯು. ಎಸ್. ಏಕಾಂಬರ ರಾಯರು ಅಧ್ಯಕ್ಷತೆಯನ್ನು ವಹಿಸುವರೆಂದು ತಿಳಿದು ಬರುತ್ತದೆ.

ಕೆನರಾ ಹೈಸ್ಕೂಲ್ ದಿನಾಚರಣೆ—ತಾ. ೨೪ನೇ ಗುರುವಾರ ಕೆನರಾ ಹೈಸ್ಕೂಲ್ ದಿನಾಚರಣೆಯು ಜರಗುವುದು

ಭಜನೆ—ಕುದ್ರೋಳಿ ಶ್ರೀ ಗೋಕರ್ಣ ನಾಥೇಶ್ವರ ಕ್ಷೇತ್ರದಲ್ಲಿ ಇಂದು ತಾ ೨೧ನೇ ದಿನ ಬೆಳಿಗ್ಗೆ ಆರು ಘಂಟೆಗೆ ಆರಂಭವಾಗಿ ಮರುದಿನ ಆನ್ಪೇಯೊತ್ತಿಗೆ ಮಂಗಳವಾಗುವುದು

ವಿಜಯನಗರ ಸ್ಮಾರಕೋತ್ಸವ—ಮಂಗಳೂರಿನ ಪಂಡಿತ ಸಂಘವರು ಬರುವ ತಾ ೭೮ನೇ ಶುಕ್ರವಾರ ದಿನ ವಿಜಯ ನಗರ ಸಾಮ್ರಾಜ್ಯ ಸ್ಮಾರಕವಾಗಿ ಆಚರಿಸುವರು ಶ್ರೀ ವಾಲ್ಕಿ ನರಸಿಂಗ ರಾವ್, ಸಿನ್ಯತ್ತಿ ಸೆಶನ್ಸ್ ಜಡ್ಜರು ಆ ಸಮಾರಂಭದಲ್ಲಿ ಅಗ್ರಾಸನ ವಹಿಸಲಿರುವರು

ರಾಷ್ಟ್ರಪಕ್ಷದ ಚುನಾವಣೆಯ ಪ್ರಚಾರ ಕಾರ್ಯ—ಎಲ್ಲೆಲ್ಲಿಯೂ ಅಪೂರ್ವ ಉತ್ಸಾಹ—ಕಳೆದ ತಾ ೧೭ರಲ್ಲಿ ಅತ್ತಾವರದಲ್ಲಿ ರಾಷ್ಟ್ರ ಪಕ್ಷದವರು ಒಂದು ಸಾರ್ವಜನಿಕ ಸಭೆಯನ್ನು ಜರಗಿಸಿದರು ಡಾ ಆಡಿಪರವರು ಅಧ್ಯಕ್ಷಸ್ಥಾನ ವಹಿಸಿದ್ದರು. ಶ್ರೀಗಳಾದ ಪಿ ರಾಮರಾಯ ಮಲ್ಯ ಬಿ. ಎನ್. ಬಾಳಿಗ, ಬಿ ವೆಂಕಟ್ರಾಯ ಬಾಳಿಗ, ವರದರಾವ್, ರಂಗರಾವ್ ತಟ್ಟೀರಿಕರ, ಎನ್ ಎಸ್. ಕಿಲ್ಲೆ, ಪ್ರೊ. ಸಿ. ಬಿ ವಾರ್ಕ್ ಮೊದಲಾದ ಮಹನೀಯರು ಕಾಂಗ್ರೆಸಿನ ಧ್ಯೇಯ, ರಾಷ್ಟ್ರಪಕ್ಷದವರಿಗೆ ಮಹಾಜನರು ಕೊಡ ಬೇಕಾದ ಬೆಂಬಲ ಇವೇ ಮೊದಲಾದ ವಿಷಯಗಳ ಕುರಿತು ಭಾಷಣಗಳನ್ನಿತ್ತರು ಅಧ್ಯಕ್ಷರು ತಮ್ಮ ಕೊನೆಯ ಭಾಷಣದಲ್ಲಿ ಸರ್ವರೂ ಕಾಂಗ್ರೆಸಿನವರಿಗೇನೆ ತಮ್ಮ ಮತಗಳನ್ನು ಕೊಡಬೇಕೆಂದು ಪ್ರಾರ್ಥಿಸಿದರು

ತಾ. ೧೮ರಲ್ಲಿ ಪೆಂಟ್ಲೆಂಡ್ ಪೇಟೆಯಲ್ಲಿ ಕಾಂಗ್ರೆಸ್ ಪ್ರಚಾರ ಕಾರ್ಯದ ಬಗ್ಗೆ ಸಭೆ ಸೇರಿತು ಶ್ರೀ ಕೆ. ಆರ್. ಕಾರಂತರು ಅಧ್ಯಕ್ಷರಾಗಿದ್ದರು ಅಂದಿನ ಸಮಾರಂಭದ ಪ್ರಾಮುಖ್ಯತೆಯನ್ನು ಅಧ್ಯಕ್ಷರು ಜನರಿಗೆ ತಿಳಿಸಿದ ಅನಂತರ ಶ್ರೀ ಜಿ. ಎ. ಸಾಲ್ದಾನರು ರಾಷ್ಟ್ರ ಪಕ್ಷದಿಂದ ಸ್ಪರ್ಧಿಸುವ ಉಮೇದುವಾರರ ಪರಿಚಯವನ್ನು ಸಭಿಕರಿಗೆ ಮಾಡಿಸಿಕೊಟ್ಟರು ಶ್ರೀಗಳಾದ ಮಲ್ಯರೂ, ಬಾಲಕೃಷ್ಣ ರಾಯರೂ, ಪ್ರೊ. ವಾರ್ಕ್‌ಯವರೂ ರಾಷ್ಟ್ರಸಭೆಯ ಧ್ಯೇಯ, ಮಹಾಜನರ ಆದಕ್ಕೆ ಕೊಡಬೇಕಾದ ಬೆಂಬಲ ಇತ್ಯಾದಿಗಳನ್ನು ಕುರಿತು ಮಾತಾಡಿದರು.

ತಾ ೧೯ರಲ್ಲಿ ಜೊಕ್ಕಟ್ಟೆಯಲ್ಲಿ ಇದೇ ರೀತಿಯ ಸಭೆ ನಡೆದು ಭಾಷಣಗಳಾದುವು.

ವೈದಾನದಲ್ಲಿ ಪ್ರಚಂಡ ಸಭೆ—ನಿನ್ನೆಯ ದಿನ ಸಾಯಂಕಾಲ ೬ ಘಂಟೆಗೆ ಶ್ರೀ ಜೆ ಎ ಸಾಲ್ದಾನರ ಅಧ್ಯಕ್ಷತೆಯಲ್ಲಿ ಮಂಗಳೂರು ಪುರಜನರ ಸಾಮಾನ್ಯ ಸಭೆಯು ಮೈದಾನದಲ್ಲಿ ನೆರಿಯ ಶ್ರೀಗಳಾದ ಮಲ್ಯರೂ, ರಂಗರಾಯರೂ ಮಾತನಾಡಿ ಕಾಂಗ್ರೆಸ್ಸಿನ ಅಭ್ಯರ್ಥಿಗಳಾದ ಬಾಲಕೃಷ್ಣ ರಾಯರೂ ರಾಷ್ಟ್ರ ಸಭೆಯು ಮೇಲಕ್ಕಾಗಿ ಮಾಡಿದ ತ್ಯಾಗ ಇತ್ಯಾದಿಗಳನ್ನು ಕುರಿತು ಭಾಷಣ ಮಾಡಿದರು

ಪ್ರೊ ವಾರ್ಕ್‌ಯವರು ಒಂದು ಗಂಭೀರ ಭಾಷಣ ಮಾಡಿ ಕ್ರಿಸ್ತ ಬಂಧುಗಳು ಕಾಂಗ್ರೆಸಿನೊಡನೆ ಮೈತ್ರಿ ಪೂರ್ವಕವಾಗಿ ಸಹಕರಿಸಬೇಕೆಂದೂ, ಹಿಂದುಸ್ಥಾನವು ಕ್ರಿಸ್ತರಿಗೂ ಒಳ್ಳೆಯ ನಿವಾಸವೆಂದೂ, ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಕ್ರಿಸ್ತ ಧರ್ಮಕ್ಕೆ ವಿರೋಧವಲ್ಲವೆಂದೂ, ಆನೇಕ ಕ್ರಿಸ್ತ ಜನಾಂಗಗಳು ತಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವಿಷಯವನ್ನು ಚರಿತ್ರೆಯು ಬರೆದಿಟ್ಟಿದೆಯೆಂದೂ, ಹೇಳಿದರು ಕ್ರಿಸ್ತರು ಇತರರೊಡನೆ ವ್ಯವಹಾರ ಕ್ಷೇತ್ರಗಳಲ್ಲಿ ಸಹಕರಿಸಬೇಕೆಂದರು ಮತ್ತು ಕಾಂಗ್ರೆಸ್ ಸಂಸ್ಥೆಯು ಜನ ಸಾಮಾನ್ಯರ, ಬಡ ಜನರ ಸಂಸ್ಥೆಯೆಂದೂ, ಅದುನಿಕ ಕಾಲದಲ್ಲಿ ಜಗನ್ಮಾತೆರ, ದುಡ್ಡಿನ ಜೀವಲ್ಲವರ, ಅಧಿಕಾರಕ್ಕೆ ಸ್ಥಾನಸಲ್ಲವೆಂದೂ, ಬಡ ಮನುಷನ ಓಟಿಗೆ ಹೆಚ್ಚು ಬೆಲೆಯಿದೆಯೆಂದೂ, ಆದುದರಿಂದ ಪ್ರತಿಯೊಬ್ಬನೂ ತನ್ನ ಓಟಿನ ಮಹತ್ವವನ್ನು ಚೆನ್ನಾಗಿ ತಿಳಿದು ಆದನ್ನು ಕಾಂಗ್ರೆಸ್ ಪಕ್ಷಕ್ಕೆ ದಯಪಾಲಿಸಬೇಕೆಂದೂ ಹೇಳಿದರು

ಶ್ರೀ ಕೆ ಆರ್ ಕಾರಂತರು ಅಂಕೆಸಂಖ್ಯೆಗಳಿಂದ ಯುಕ್ತವಾದ ಭಾಷಣಮಾಡಿ ಈಗಿನ ಮಸೂದೆಯು ರೂಪಾಯಿಯಲ್ಲಿ 4 ಆಣೆಯನ್ನು ಫಲವನ್ನು ಜನರಿಗೆ ಕೊಡುವುದಿಲ್ಲವೆಂದೂ, ಎಲ್ಲ ಆನಿತಾರಪ್ತ ಗವರ್ನರರ ಹಸ್ತದಲ್ಲಿವೆಯೆಂದೂ, ಆನೇಕ ದೃಷ್ಟಿಯಿಂದ ಈ ಮಸೂದೆಯ ಮೂಲಕ ಭಾರತಕ್ಕೆ ಮರ್ಮಘಾತವೆಂದೂ ಹೇಳಿದರು ಜನರ ಆರ್ಥಿಕ ಕಷ್ಟಗಳ ದೃಷ್ಟಿ ಕೊಡದೆ ಇರುವುದರಿಂದ ನಮ್ಮ ದೇಶದ ಕೈಗಾರಿಕೆ, ವ್ಯವಸಾಯ, ವ್ಯಾಪಾರ ಇವೆಲ್ಲವೂ ನಾಶವಾಗಿ ಜನರು ದಾರಿದ್ರ್ಯ ಮಟವಿದಲ್ಲಿ ಮುಳುಗಿದ್ದರೆಂದೂ ಇದಕ್ಕೆಲ್ಲ ಹೋಗಲಾಡಿಸಬೇಕಾದರೆ ಬಡ ಜನರ ಸಂಸ್ಥೆಯಾದ ಕಾಂಗ್ರೆಸಿಗೇ ಮತಕೊಟ್ಟು ಆದರ ಪ್ರತಿನಿಧಿಗಳನ್ನೇ ಮುಂದಿನ ಕೌನ್ಸಿಲ್ ಅಸೆಂಬ್ಲಿಗಳಿಗೆ ಕಳುಹಿಸಬೇಕೆಂದರು

ಶ್ರೀ ಕೆ ಈಶ್ವರನವರು ತಮ್ಮ ಭಾಷಣದಲ್ಲಿ ಈಗ ಹಿಂಲ್ಸ್ ಪಕ್ಷವೆಂದು ಹೆಸರು ಹಾಕಿಕೊಂಡು ಕೆಲವರು ಹರಿಜನರ ವೋಟ್ಯದಲ್ಲಿ ಹೋಗಿ ಕಾಂಗ್ರೆಸಿಗೆ ಓಟುಕೊಟ್ಟರೆ ಸರಕಾರದವರು ಕೊಟ್ಟ ಭೂಮಿಯನ್ನು ಹರಿಜನರಿಂದ ಕಿತ್ತು ಕೊಳ್ಳುವರೆಂದು ಬಡ ಜನರನ್ನು ಭಯಗೊಳಿಸುತ್ತಿದ್ದಾರೆಂದು ಹೇಳಿ ಇದು ನ್ಯಾಯವಲ್ಲವೆಂದೂ, ಚುನಾವಣೆಯ ರಂಗಕ್ಕೆಳಿದು ಹೋರಾಡಬೇಕಲ್ಲದೆ ಹಿಂಬಾಗಿಲಿಂದ ಜನರನ್ನು ಭಯಗೊಳಿಸಿ ವಂಚಿಸುವುದು ಅಯೋಗ್ಯನೆಂದೂ ಹೇಳಿ ಸರ್ವರೂ ಕಾಂಗ್ರೆಸಿಗೆ ಬೆಂಬಲಕೊಡಬೇಕೆಂದರು

ಶ್ರೀ ಬಿ. ವೆಂಕಟ್ರಾಯ ಬಾಳಿಗರು ತಮ್ಮ ಭಾಷಣದಲ್ಲಿ ಎಲ್ಲಾ ಮತದಾರನ್ನು ನೋಡಿ ಮಾತನಾಡುವುದು ಅಸಾಧ್ಯವಾದುದರಿಂದ ಮತದಾರರು ಬೇಸರಪಡದೆ ತಮ್ಮ ಮತಗಳನ್ನು ಸಂಪೂರ್ಣ ಅಭಿಮಾನದಿಂದ ಕಾಂಗ್ರೆಸಿನವರಿಗೆ ಕೊಡಬೇಕೆಂದು ಪ್ರಾರ್ಥಿಸಿದರು ಅಧ್ಯಕ್ಷರ ಭಾಷಣದೊಂದಿಗೆ ಸಭಾಂತ್ಯವಾಯಿತು

ದ. ಕ. ಜಿಲ್ಲಾ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್—ಮದ್ರಾಸ್ ಸ್ಯಾಮವಿಧಾಯಕ ಸಭೆಗಳ ಚುನಾವಣೆಯ ವಿಷಯ ಮಹಾಜನರ ಸಭೆಯು ಈ ಕೆಳಗೆ ಕಾಣುವ ತಾರೀಕು-ವಾರಮಯ ಮತ್ತು ಸ್ಥಳಗಳಲ್ಲಿ ಜರಗುವುದು ಶ್ರೀಗಳಾದ ನಾರಾಯಣ ಕಿಲ್ಲೆಯವರು, ಎ ಬಿ ಶೆಟ್ಟಿರು, ಕೆ ಆರ್. ಕಾರಂತರು ಮಗ್ಗೆರೆರು ಬಾಷಣಮಾಡಲಿಕ್ಕಿರುವರು ಈ ಸಭೆಗೆ ಎಲ್ಲರೂ ದಯಮಾಡಿ ಬರಬೇಕಾಗಿ ವಿನಂತಿ.

೨೮-೧೨-೧೯೩೬ ಶಂಕರನಾರಾಯಣ ಸಂತೆ ಕಟ್ಟೆಬಳಿ ಪೂರ್ವಾಹ್ನ ಘಂಟೆ ೧೧, ೨೯-೧೨-೩೬ ಹಾಲಾಡಿ ಪೇಟೆಯಲ್ಲಿ ಪೂರ್ವಾಹ್ನ ಘಂಟೆ ೧೧ ೨೯-೧೨-೧೯೩೬ ಸ್ಯಾಬರಕಟ್ಟೆ-ಸಂತೆಕಟ್ಟೆಬಳಿ ಅಪರಾಹ್ನ ಘಂಟೆ ೪, ೩೦-೧೨-೧೯೩೬ ಸಾಸ್ತಾನ ಪೇಟೆಯಲ್ಲಿ ಅಪರಾಹ್ನ ಘಂಟೆ ೩ ೩೦-೧೨-೧೯೩೬ ಕೋಟೆ-ಬಂಗ್ಲೆಜಪ್ತು ಅಪರಾಹ್ನ ಘಂಟೆ ೫ ೩೧ ೧೨ ೧೯೩೬ ಗಂಗೊಳ್ಳಿ-ಬಂದರಿನ ಬಳಿ ಪೂರ್ವಾಹ್ನ ಘಂಟೆ ೯, ೩೧ ೧೨ ೧೯೩೬ ಕೋಟೆ ಶ್ರೀ ದೇವಸ್ಥಾನದ ಎದುರು ಅಪರಾಹ್ನ ಘಂಟೆ ೩ ೩೧ ೧೨-೧೯೩೬ ಬೈಂದೂರು ಶ್ರೀ ವಿನಾಯಕ ದೇವಸ್ಥಾನದ ಎದುರು ಅಪರಾಹ್ನ ಘಂಟೆ ೪, ೨ ೧ ೧೯೩೭ ಶೀರೂರು ಪೇಟೆಯಲ್ಲಿ ಪೂರ್ವಾಹ್ನ ಘಂಟೆ ೧೧, ೨ ೧ ೧೯೩೭ ಉಪ್ಪುಂದ ಆಯಾಗಿದ್ದಲ್ಲಿ ಅಪರಾಹ್ನ ಘಂಟೆ ೪.

ಹರಿಕಥಾ ಕಾಲಕ್ಷೇಪ — ಮೈಸೂರು ದೇಶದಿಂದ ಇಲ್ಲಿಗೆ ಬಂದಿದ್ದ ಶ್ರೀ ಶಿವಮೂರ್ತಿ ಶಾಸ್ತ್ರಿಗಳು ನಿನ್ನೆಯ ದಿವಸ ಸಾಯಂಕಾಲ ಸ್ಥಳೀಯ ಜೈನ ಬಸ್ತಿಯಲ್ಲಿ ಈಶ್ವರಾನುಗ್ರಹ ಎಂಬ ಹರಿಕಥೆಯನ್ನು ಮಾಡಿದರು. ಶ್ರೀ. ಶಾಸ್ತ್ರಿಗಳ ವಾಕ್ಚಾತುರ್ಯ ಬಹಳ ವಿಶೇಷ ತರವಾಗಿದ್ದಿತು ಈ ದಿನವು ಶ್ರೀ ಶಾಸ್ತ್ರಿಗಳು ಸ್ವದೇಶಕ್ಕೆ ತೆರಳಿದರು.

ಉಪನ್ಯಾಸ—ಸ್ಥಳೀಯದಿಂದಬಂದಿದ್ದ ಹಿಂದೂಮಿಶನ ಪ್ರಚಾರಕರಾದ ಶ್ರೀ ಸ್ವಾಮಿ ಶಂಕರಾನಂದ ಸರಸ್ವತಿಯರು ನಿನ್ನೆಯ ದಿನ ಮಂಗಳೂರು ಆರ್ಯ ಸಮಾಜದಲ್ಲಿ ಒಂದು ಧಾರ್ಮಿಕ ಉಪನ್ಯಾಸವನ್ನಿತ್ತರು.

ಉಡುಪಿ.

ತಾಲೂಕು ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯು

ತಾ. ೧೯-೧೨-೩೬ರಲ್ಲಿ ಸುಧಾವದಳ-ಟೀರೆದಲ್ಲಿ ನೆರೆದು ಎಂತು. ಕೊಂಗ್ರೆಸು ಕಾರ್ಯಕ್ರಮಗಳನ್ನು ಮುಂದೆನಡತ್ತುವ ಸಲುವಾಗಿ ಚರ್ಚಿಸಿ ಶ್ರೀ. ಕಲ್ಯಾಣಿ ವ್ಯಾಸಾಚಾರ್ಯರಿಗೆ ರಾಜೀನಾಮೆಯನ್ನು ಸ್ವೀಕರಿಸಿ ಶ್ರೀ ವಿಠಲಾಚಾರ್ಯರನ್ನು ಅವರ ಸ್ಥಾನಕ್ಕೆ ನೇಮಿಸಿಕೊಳ್ಳಲಾಯಿತು ಕೊಂಗ್ರೆಸು ಅಭ್ಯರ್ಥಿಸನ್ನು ಮಾಡಬೇಕೆಂದೂ, ಯೋಗ್ಯ ಸ್ವಯಂಸೇವಕರು ದೊರೆತರೆ ೧೦ ಮಂದಿಯನ್ನು ಕೊಂಗ್ರೆಸ್ ಪ್ರಚಾರಕ್ಕಾಗಿ ನೇಮಿಸಿ ಕೊಳ್ಳಬೇಕೆಂದೂ ನಿರ್ಧಾರವಾಯಿತು ಸ್ವಯಂಸೇವಕರನ್ನು ಅರಿಸುವ ಕೆಲಸವನ್ನು ಶ್ರೀ ಯು ನಾಗಪ್ಪಯ್ಯನವರಿಗೆ ಕೊಡಲಾಗಿದೆ ಪ್ರತಿಯೊಂದು ಹಳ್ಳಿಯಲ್ಲಿಯೂ ರಾಷ್ಟ್ರೀಯ ಭಾವನೆಯನ್ನು ಪ್ರಚಾರ ಮಾಡುವರೆ ತಾಲೂಕಿನ ಬ್ರಹ್ಮಾವರ, ಹಿರಿಯಡ್ಕ, ಉಡುಪಿ, ಕಾಪು ವಿಭಾಗ, - ಹೀಗೆ ಐದು ಫಿರ್ಕಗಳಾಗಿ ವಿಂಗಡಿಸಿ ಪ್ರತಿಯೊಂದು ಫಿರ್ಕದಲ್ಲಿ ಗಂಡಸರನ್ನು ನೇಮಿಸ ಬೇಕೆಂದಾಯಿತು ಅಂಚೆಯನ್ನು ಅರಿಸುವರೆ ಶ್ರೀ.ಗಳಾದ ಪಿ ಮಂಜುನಾಥಪ್ಪಯ್ಯ ಬಿ. ಸದಾಶಿವ ಹೆಗ್ಡೆ, ಬಿ. ಕೃಷ್ಣಯ್ಯ ಹೆಗ್ಡೆಯವರಿಗೆ ಅಧಿಕಾರ ಕೊಡಲಾಯಿತು. ಮುನಾವಣೆಯ ಕಾರ್ಯಕ್ಕಾಗಿ ತಿಂಗಳಿಗೆ ೧೫ರೂ ಗೌರವಧನ ಆಫೀಸು ಸೆಕ್ರೆಟರಿಯನ್ನು ನೇಮಿಸಬಹುದೆಂದಾಯಿತು ಬೇರೆ ಕೆಲವು ನಿರ್ಧಾರಗಳಾಗಿ ಬರುವ ಜನವರಿ ತಾ ೧೦-೧೨-೧೯೩೬ನೇ ಶುಕ್ರವಾರ ಸಾರ್ವಜನಿಕ ಸಭೆಯನ್ನು ಮಾಡಬೇಕಾಗಿ ನಿರ್ಧರಿಸಲಾಗಿದೆ. ಇನಕೆಯಲ್ಲಿ ಕೊಂಗ್ರೆಸ್ ಜಾಗೃತಿಯನ್ನು ಹುಟ್ಟಿಸಬಲ್ಲ ಸ್ವಯಂಸೇವಕರು ಬೇಕಾಗಿರುವರು. ಅವರಿಗೆ ತಿಂಗಳಿಗೆ ೮ರ ಸಂಬಳವಲ್ಲದೆ ಯುನಿಫಾರ್ಮ್ ಪೋಷಾಕು ಕೊಡಲಾಗುವುದು. ಉಮೇದ್ವಾರಿಗಳು ಉಡುಪಿಯ ಕಾಂಗ್ರೆಸು ಕಮಿಟಿಗೆ ಬರೆದುಕೊಳ್ಳಬಹುದು

ಕಾರ್ಯದರ್ಶಿ—

ತಾ. ಕೊ. ಕಮಿಟಿ ಉಡುಪಿ.

ವರ್ಗ—ಇಲ್ಲಿಯ ಮುನ್ಸೀಫರಿಗೆ ಬೇಕಾದರಿಗೆ ವರ್ಗವಾಗಿರುವದೆಂದು ತಿಳಿದು ಬರುತ್ತದೆ.

ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್ ಮಂಗಳೂರು—ಇದರ ಶಾಖೆಯೊಂದು ಬಿಕರ್ನಕಟ್ಟೆಯಲ್ಲಿ ಇದೇ ತಾ ೨೮-೧೨-೩೬ ನೇ ಸೋಮವಾರ ೬ ಘಂಟೆಗೆ ಶ್ರೀ. ಬಿ.ಎಸ್. ರಾಘವೇಂದ್ರರಾವ್, ಎಂ ಎ ಯವರಿಂದ ತೆರೆಯಲ್ಪಡುವದು.

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses.

It prys you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City	Soumyalayam Puthiyara Calicut
Car Street, Mangalore	Udipi, S India	Charni Road, Bombay No 4

EVIDENCE OF SECURITY & STABILITY

FIGURES THAT SPAEK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	Rs 80,00,000
Life Funds Over	Rs. 68,00,000
Premium Income Over	Rs 22,54,000
Interest Income	Rs 3,16,000
Claims Paid	Rs. 5,75,000

Total Claims paid Over Rs. 38,50,000
Total Business in Force Over Rs 1,42,51,200

TOTAL BUSINESS IN FORCE Rs. 4,42,51,200

ಫೈಜಪುರ ಕೊಂಗ್ರೆಸಿಗೆ ತೆರಳಿದ ನವಯುಗದ ಸಂಪಾದಕರು ಕೆಲವು ದಿನಗಳ ವರೆಗೆ ಬೊಂಬಾಯಿಯಲ್ಲಿರುವರು. ಬೊಂಬಾಯಿಯಲ್ಲಿ ಜಂದಾದಾರರಾಗುವವರಿಗೂ ಜಾಹೀರಾತುಗಳನ್ನೀಯುವವರಿಗೂ ಸುಸಂದರ್ಭ

ಮೆನೇಜರ್, ನವಯುಗ.

ನವಯುಗ

ಉಡುಪಿ, ತಾ. ೨೪-೧೨-೧೯೩೯ ಗುರುವಾರ

ಹಂಪಿಯು ಕಲಿಸುವ ಪಾಠ.

ವಿಜಯ ನಗರದ ಅರಸೇ ಶತಮಾನೋತ್ಸವವು ಈ ತಿಂಗಳ ೨೫-೩೬-೨೬ರಲ್ಲಿ ಹಂಪಿಯಲ್ಲಿ ಜರಗುವುದು. ಕನ್ನಡನಾಡಿನ ಬಡತನವು, ಪರಾಧೀನತೆಯು, ಪ್ರಕೃತಿದತ್ತವಾದುದಲ್ಲ; ಇಂದಿನಿಂದ ಆರು ನೂರು ವರ್ಷಗಳ ಹಿಂದಿನ ಕಾಲವನ್ನು ಕಂಡರೂ ನಾವು ಅಭಿಮಾನದಿಂದ ಹಿಗ್ಗಬಹುದಾದಷ್ಟು ವೈಭವವು ನಮ್ಮಲ್ಲಿತ್ತು. ಹಂಪಿಯ ಗತವೈಭವವನ್ನು ಸ್ಮರಿಸಿಕೊಂಡು ನಾವು ಹೆಮ್ಮೆಪಡುತ್ತಿದ್ದೇವೆ. ಅಂದಿನ ಸಂಪತ್ತನ್ನುಣ್ಣುವ ಸೌಭಾಗ್ಯವು ಆ ಕಾಲದ ನಮ್ಮ ಹಿರಿಯರಿಗಿತ್ತೇ ಹೊರತು ನಮಗೀಗ ಇಲ್ಲ; ಆದರೂ ಅಂದಿನ ವೈಭವವು ಭಾವನಾ ಪ್ರಪಂಚದಿಂದ ಆಳಿದುಹೋಗದೆ ಈಗಲೂ ನಮ್ಮ ಹೃದಯದ ತಿನಿಸಾಗಿ ನಿಂತಿದೆ! ನಿಜ; ಆದರೆ ನಾವು ಇಷ್ಟರಿಂದಲೇ ತೃಪ್ತಿಪಟ್ಟುಕೊಂಡಿರಬಹುದೇನು? ನಮ್ಮ ತೃಪ್ತಿಗೆ ಅಂತಹ ಸ್ಮರಣೆಯೇ ಸಾಕಾಗುತ್ತದೆಂದು ಇಟ್ಟುಕೊಂಡರೂ, ನಮ್ಮ ಹಿರಿಯರು ನಮಗೆ ಮಾಡಿದಂತೆ ನಾವು ನಮ್ಮ ಕಿರಿಯರಿಗೆ ಸ್ಮಾರಕವನ್ನು ಒದಗಿಸಿ ಕೊಡಬೇಡವೆ? ಅರ್ಥವಿಷ್ಟೆ, ನಾವೀಗ ನಮ್ಮ ಗತಕಾಲದ ವೈಭವವನ್ನೇ ನಮ್ಮ ಹೆಗ್ಗಳಿಕೆಯ ಸರ್ವಸ್ವವಾಗಿ ಇಟ್ಟುಕೊಂಡರೆ ಸಾಲದು; ನಮ್ಮ ಹೆಗಲ ಮೇಲೆ ಅಂತಹ ವೈಭವವನ್ನು ನಿರ್ಮಿಸುವ ಜವಾಬ್ದಾರಿಯಿರುವುದರಿಂದ ಅದನ್ನು ನಿರ್ಮಿಸುವ ಸಲುವಾಗಿಯೇ ಗತ ವೈಭವದ ನಕಾಶೆಯನ್ನು ಕಣ್ಣಮುಂದೆ ತರುತ್ತಿದ್ದೇವೆ ಎಂದಾಗಬೇಕು. ಅಂದಿನ ವೈಭವದ ಸ್ಮರಣೆಯಿಂದ ನಮ್ಮ ಬಾಯಲ್ಲಿ ಈ ರೀತಿ ನೀರೂರಬೇಕಾದರೆ ನಮ್ಮ ಈಗಿನ ಬಡತನವು ಅಷ್ಟೇ ಬಲವಿರಬೇಕು. ಅಂತೂ ವಿಜಯ ನಗರ ಸ್ಮಾರಕೋತ್ಸವವನ್ನು ಆಚರಿಸುವಾಗ, ಈಗಿನ ದುಃಸ್ಥಿತಿಯ ಸ್ವರೂಪವು ತನ್ನಂತೆ ಗೋಚರಕ್ಕೆ ಬರುತ್ತದೆ. ನಾವೀ ರೀತಿ ಹೆಗ್ಗಳಿಕೆ ಪಡುತ್ತಿರುವ ಆ ಗತವೈಭವವು ಅಷ್ಟು ಅಮೂಲ್ಯವಿರುವುದಾದರೆ ಸದ್ಯ ಸ್ಥಿತಿಗನುಗುಣವಾದ ಅಂತಹ ಅನುಕೂಲತೆಗಳನ್ನು ನಿರ್ಮಿಸಿಕೊಳ್ಳಲು ಕನ್ನಡಿಗರು ಹಿಂದೆಗೆಯ ಬಾರದು. ಹಂಪಿಯು ಕನ್ನಡಿಗರ ದೇಶಾಭಿಮಾನ, ಒಕ್ಕಟ್ಟು ಮೊದಲಾದುವುಗಳ ನೆಲೆವೀಡಾಗಿತ್ತು. ಆ ಗುಣಗಳ ಪ್ರದರ್ಶನವಾಗದೆ ಹಂಪಿಯ ವೈಭವವನ್ನು ನಾವು ಸ್ಮರಿಸಿದೆವೆಂಬುದಕ್ಕೆ ದಾಖಲೆ ದೊರಕದು.

ಸರದಾರರ ವೀರವಾಣಿ

ಸರಧಾರ ವಲ್ಲಭಾಯಿಯವರು ಮದ್ರಾಸಿನಲ್ಲಿತ್ತ ಭಾಷಣವು ಅಮೂಲ್ಯವಿದೆ. ಮದ್ರಾಸಿನ ಮತದಾರರು ಮಾತ್ರವಲ್ಲ; ಕೊಂಗ್ರೆಸ್ ಕೆಲಸಗಾರರೂ ಅದನ್ನು ಮನನಮಾಡುವದು ಅಗತ್ಯ. ಪಟೇಲರು ಹೇಳಿದಂತೆ, ಪದವೀ ಸ್ವೀಕಾರವು ಮದ್ರಾಸಿನಲ್ಲೆಬ್ಬಿಸಿದಷ್ಟು ಗೊಂದಲವನ್ನು ಇನ್ನೆಲ್ಲಿಯೂ ಎಬ್ಬಿಸಲಿಲ್ಲ. ಸರಕಾರವು ಮಾಡಿದಂತೆಯೇ, ಮಾಡಿತೋರಿಸಿದ ಜಸ್ಟಿಸ್ ಪಾರ್ಟಿಯ ಮೇಲೆ ಜನತೆಗಿರುವ ಕ್ರೋಧವು ಆ ಪಾರ್ಟಿಯ ಕೈಯಿಂದ ಪದವಿ ಕಸಕೊಂಡು ಹಂಗಿಸಬೇಕೆಂಬ ವರೆಗೆ ಬೆಳೆದು ಹೋಗಿದೆ. ಈ ಧೋರಣೆಯಲ್ಲಿ ಪ್ರತೀಕಾರ ಬುದ್ಧಿಯು ಒಡೆದು ಕಾಣುತ್ತಿದೆ; ರಾಷ್ಟ್ರ ಹಿತದ ವಿಶಾಲ ದೃಷ್ಟಿಯದ ಕಡೆಗೆ ಸಾಕಷ್ಟು ಲಕ್ಷ್ಯ ಬೀಳದಿರುವದೂ ಸ್ಪಷ್ಟವಾಗುತ್ತದೆ. ಇದನ್ನರಿತೇ ಸರದಾರ ಪಟೇಲರು "ರಾಷ್ಟ್ರದ ಹಿತಸಾಧನೆಗೆ ಅಗತ್ಯಬೀಳುವದನ್ನೆಲ್ಲಾ ಮಾಡೋಣ; ನಿನ್ನ ಕಣ್ಣಮುಂದೆ ನೇರವಾದ ಹಾದಿಬಿಡಿಸಿಟ್ಟರುವಾಗ, ಕೆರುದಾರಿಯಲ್ಲಿ ಅಡ್ಡಾಡಿ ಗಲಿಬಿಲಿಗೊಳ್ಳಬೇಡಿರಿ" ಎಂದೆಚ್ಚರಿಸಿದುದು ಕಾಲೋಚಿತವಿದೆ. ಮದ್ರಾಸಿನ ಮತದಾರರೂ, ಇತರರೂ, ಇಲ್ಲಿಯ ವಾತಾವರಣದ ಮೇಲೆ ಪಟೇಲರು ಜೆಲ್ಲಿದ ಪ್ರಕಾಶದ ಕಡೆಗೆ ಕಣ್ಣೆಡುವರೆಂದು ನಂಬುತ್ತೇನೆ.

ಗೋಕಾಕದ ಮುಷ್ಕರ

ಗೋಕಾಕದ ಗಿರಣಿ ಮುಷ್ಕರದ ಅಲ್ಪ ಪರಿಚಯವನ್ನು ಇನ್ನೊಂದೆಡೆಯಲ್ಲಿ ಕೊಟ್ಟಿರುವೆವು. ಗಿರಣಿಯಾಳುಗಳ ವಾದದಲ್ಲಿ ಭಯಂಕರವಾದುದೇನೂ ಇಲ್ಲ. ದಿನವಿಡೀ ದುಡಿಪ ಅನಿರಿಗೆ ಅನ್ನ ಸಾಕಷ್ಟಿಲ್ಲ; ಪೆಟ್ಟು ಮತ್ತು ಬೈಗಳು ಬೇಕಾದಷ್ಟಿವೆ! —ಇವುಗಳ ನಿವಾರಣೆಯಾಗಲೆಂದೇ ಕೂಲಿನಾರರ ಪ್ರಾರ್ಥನೆ. ಗೋಕಾಕದ ಗಿರಣಿ ಮ್ಹಾಲಿಕರು ಬಹು ಕಡಿಮೆ ವೆಚ್ಚದಲ್ಲಿ ಬಳೆಯ ಜೋಗಿನಿಂದ ದೊರಕುವ ವಿದ್ಯುಚ್ಛಕ್ತಿಯಿಂದ ಗಿರಣಿಯನ್ನು ನಡೆಸಿಯೂ ಲಾಭ ಪಡೆಯುತ್ತಾರೆ; ಅದೇ ಕಾಲದಲ್ಲಿ ಕೆಲಸಗಾರರ ಮಜೂರಿಯನ್ನು ತಗ್ಗಿಸಿಯೂ ಮುನಾಫೆ ಹೊಡೆಯುತ್ತಾರೆ. ಇಂತಹ ಸಂದರ್ಭದಲ್ಲಿ ಕೆಲಸಗಾರರ ಸ್ಯಾಮುಖ್ಯತೆಯನ್ನು ಅವರು ಮರೆತೇಬಿಟ್ಟರೆ ತಮ್ಮ ಇರಸ್ತಿಕೆಯನ್ನು ಈ ರೀತಿ ಮನಗಾಣಿಸುವ ಅಗತ್ಯವನ್ನು ಕೂಲಿಗಾರರು ಕಂಡುಕೊಂಡುಪರಲ್ಲಿ ಆಶ್ಚರ್ಯವೇನೂ ಇಲ್ಲ.

ಅ. ಭಾ. ರಾಷ್ಟ್ರೀಯ ಸಮಿತಿ

ರಾಷ್ಟ್ರಸಭೆಯ ಮಹಾಧಿವೇಶನವನ್ನು ಕರ್ನಾಟಕಕ್ಕೆ ಆಮಂತ್ರಿಸಲಾಗಿದೆ. ಅ. ಭಾ. ರಾ. ಸಮಿತಿ(A. I. C. C)ಯ ಸಭೆಯನ್ನು ಇಲ್ಲಿಗೆ ಕರೆಯಲಾಗಿದೆ. ಈ ಸಲದ ಅಖಿಲ ಭಾರತ ರಾಷ್ಟ್ರಸಮಿತಿಯ ಸಭೆಯು ಮಂಗಳೂರಿನಲ್ಲಿ ಕೂಡುವದು ಉಚಿತವಿದೆ. ದ. ಕನ್ನಡವು ರಾಷ್ಟ್ರೀಯ ಚಳವಳಿಗಳಲ್ಲಿ ಹಿಂದುಳಿದಿರಲಿಲ್ಲ. ಇಲ್ಲಿ ಉತ್ತಾಹೀ ಕೆಲಸಗಾರರೂ ಸಾಕಷ್ಟಿರುವರು. ಆದರೂ ಮೇಲಿನ ಸಮಿತಿಯ ಸಭೆಯು ಈ ಜಿಲ್ಲೆಯಲ್ಲಿ ಈವರೆಗಾದುದಿಲ್ಲ. ಇಲ್ಲಿಯ ಪರಿಸ್ಥಿತಿ ಮತ್ತು ಕಾಲ—ಇವೆರಡೂ ನಮ್ಮ ಜಿಲ್ಲೆಯಲ್ಲಿ ಕಮಿಟಿಯ ಸಭೆ ಕೂಡುವರೆ ಅನುಕೂಲವಾಗಿವೆ. ಜಿಲ್ಲೆಯ ಕೊಂಗ್ರೆಸ್ ಪ್ರತಿನಿಧಿಗಳು ಅ. ಭಾ. ರಾ. ಸಮಿತಿಯ ಬರುವ ಸಭೆಗೆ ಆಮಂತ್ರಣವೀಯುವರೆಂದೂ, ಆಮ ಮನ್ನಿಸಲ್ಪಡುವರೆಂದೂ ಹಾರೈಸುತ್ತೇವೆ.

ವಿದೇಶ

ಸ್ಪೆಯಿನಿಪಲ್ಲಿ ದಂಗೆಗಾರರು ಸೋಲುತ್ತಿರುವರು

ಮೆಡ್ರಿಡ್‌ನ ಹೊರ ಪ್ರದೇಶದಲ್ಲಿ ಸರಕಾರದವರಿಗೂ ದಂಗೆಗಾರರಿಗೂ ಹೋರಾಟವಾಗಿ ದಂಗೆಗಾರರು ನಪ್ಪಹೊಂದಿ ಹಿಮ್ಮೆಟ್ಟಿದರು. ಮಾತ್ರವಲ್ಲ, ದಂಗೆಗಾರರ ಕೇಂದ್ರಸ್ಥಾನವಾದ ಬರ್ಗೋ ಎಂಬೂರಿನ ಮೇಲೆ ದಾಳಿಯಿಡಲು ಬಿಲ್ಬಾವೋ ಎಂಬಲ್ಲಿಂದಲೂ ಸ್ಯಾಂಟಾಂಡರಿನಿಂದಲೂ ಸರಕಾರದ ಎರಡು ಸೈನ್ಯಗಳು ಮುಂದುವರಿದು ಬರ್ಗೋವನ್ನು ಸಮೀಪಿಸಿವೆ. ಕೆಲವು ರೈಲ್ವೇ ಮಾರ್ಗಗಳನ್ನೂ ಯುದ್ಧದೃಷ್ಟಿಯಿಂದ ಪ್ರಾಮುಖ್ಯವಾಗಿರುವ ಠಾಣ್ಯಗಳನ್ನೂ ಸರಕಾರದ ಸೈನ್ಯಗಳು ವಶಪಡಿಸಿಕೊಂಡಿವೆ. ದಂಗೆಗಾರರ ಮುಂದಾಳಾದ ಜನರಲ್ ಫ್ರೆಂಕೋನು ಒಂದು ತರದ ರಾಜಿ ಪ್ರಸ್ತಾಪವೆತ್ತಿದಂತಿದೆ. ಸ್ಪೆಯಿನಿನಲ್ಲಿ ಈಗ ಯಾರು ಜಯಶೀಲರಾಗುತ್ತಾರೆಂಬುದಕ್ಕೆ ಪ್ರಜಾಭಿಪ್ರಾಯವನ್ನು ಪಡೆಯುವ ಏರ್ಪಾಡುಮಾಡಿ ಆದರ ಫಲಿತಾಂಶದಂತೆ ನಡೆಯೋಣವೆನ್ನುತ್ತಾನೆ ಅತ!

ಸ್ಪೆಯಿನಿಗೆ ಬ್ರಿಟಿನಿನ ದಯಾಳುಭಾವದ ಸಹಾಯ

ಸ್ಪೆಯಿನ್ ಸರಕಾರಕ್ಕೆ ವಿಷವಾಯು ನಾಶಕ ಮುಖವಾಡ (ಗ್ಯಾಸ್‌ಮಾಸ್ಕ್)ಗಳ ಪೂರೈಕೆ ಬ್ರಿಟನಿನಿಂದ

ಏಪು ಸಾವಿರ ಗ್ಯಾಸ್‌ಮಾಸ್ಕುಗಳನ್ನು ಗ್ರೇಟ್ ಬ್ರಿಟನ್ ಸ್ಪೆಯಿನ್ ಸರಕಾರಕ್ಕೆ ಕಳುಹಿಸಿಯಿದೆ. ಇವು ಕೇವಲ ಜೀವರಕ್ಷಣಾ ಸಾಧನಗಳಾಗಿರುವುದರಿಂದ ಆಯುಧ ಸಾಮಗ್ರಿಗಳೆಂದು ಪರಿಗಣಿಸಲ್ಪಡುವುದಿಲ್ಲವೆಂದೂ ಇವುಗಳ ಪೂರೈಕೆಯಿಂದ ಲಂಡನ್ ಪೇಕ್ಷಿಪ್ತಪ್ರಕಾರ ಸ್ಪೆಯಿನ್ ಯುದ್ಧದ ವಿಷಯದಲ್ಲಿ ಬ್ರಿಟನ್ ತಾಳಿರುವ ತಾಟಸ್ಥ್ಯನೀತಿಗೆ ಭಂಗ ಬರುವದಿಲ್ಲವೆಂದೂ ಬ್ರಿಟಿನಿನ ಅಭಿಮತ. ವಿರೋಧಪಕ್ಷದ ಜನರಲ್ ಫ್ರೆಂಕೋನವೂ ಇನ್ನಪಟ್ಟರೆ ಇಂತಹ ಗ್ಯಾಸ್‌ಮಾಸ್ಕುಗಳನ್ನು ತಮ್ಮಿಂದ ಕೊಂಡುಕೊಳ್ಳಬಹುದೆಂದೂ ತಿಳಿಸಲಾಗಿದೆ.

ಚೀನಾದಲ್ಲಿ ಸೇನಾಪತಿಗಳೊಳಗೆ ಯುದ್ಧ !

ಚೀನಾದ ಉತ್ತರಭಾಗದ ನಿಯಂಪ್ಸನಗರದಲ್ಲಿರುವ ಚೀನಾ ಸರಕಾರದ ಸೇನಾಪತಿಯು ಮಾರ್ಷಲ್ ಚಿಯಾಂಗಾಂಗ ಹ್ಸಿಯಾಂಗ್ ಎಂಬವನು. ಚೀನದ ಕೇಂದ್ರ ಸರಕಾರದ ಸರ್ವಾಧಿಕಾರಿಯು ಮಾರ್ಷಲ್ ಚಿಯಾಂಗ್ ಕೈಷೇಕ್ ಎಂಬವನು. ಹ್ಸಿಯಾಂಗನು ಸಮತಾವಾದಿಸರನು. ಆತನು ಜಪಾನರ ಸಾಮ್ರಾಜ್ಯವಾದದ ಚಳುವಳಿಯು ಅನ್ನಿ ಪ್ರಬಲನಾಗಿದೆಯೆಂದೂ ಅದು ಕಾರಣ ರಶ್ಯನರೊಡನೆ ಒಪ್ಪಂದಮಾಡಿಕೊಂಡು ಜಪಾನರ ಮೇಲೆ ಯುದ್ಧಘೋಷಣೆಮಾಡಿಕೊಂಡು ಜಪಾನರ ಮೇಲೆ ಯುದ್ಧಘೋಷಣೆಯನ್ನು ಚಿಯಾಂಗ್ ಕೈಷೇಕನನ್ನು ಒತ್ತಾಯಪಡಿಸಿದ. ಕೈಷೇಕನು ಅದಕ್ಕೊಪ್ಪದೆ ಹ್ಸಿಯಾಂಗನು ಆತನ ಕೈಕೆಳಗಿರುವ ಸೈನ್ಯವನ್ನು ಕೂಡಲೇ ಕೇಂದ್ರ ಸರಕಾರದ ವಶಕ್ಕೊಪ್ಪಿಸಬೇಕೆಂದು ಆಜ್ಞೆಯಿತ್ತನು. ಹ್ಸಿಯಾಂಗನು ಪ್ರತಿಘಟನಾ ಕೈಷೇಕನನ್ನೇ ಬಂಧಿಸಿ ಸರಕಾರದ ಸೈನ್ಯವನ್ನು ಮುತ್ತಿ ಹಲವು ನಾಯಕರನ್ನು ಸೆರೆಹಿಡಿದ ಕೇಂದ್ರ ಸರಕಾರವೀಗ ತನ್ನ ಸಂಗ್ರಾಮ ಮಂತ್ರಿಯಾದ ಹೊಯಾಂಗ್ ಕೈಷೇಕ್ ಎಂಬವನ ನಾಯಕತ್ವದಲ್ಲಿ ಒಂದೂವರೆ ಲಕ್ಷ ಬಲದ ಸೈನ್ಯನನ್ನೂ ಹಲವು ವಿಮಾನಗಳನ್ನೂ ನಿಯಂಪು ನಗರಕ್ಕೆ ಕಳುಹಿಸಿಯಿದೆ. ಬಂಧಿಗಳನ್ನು ಬಿಡಿಸಿಕೊಂಡು ದಂಗೆಗಾರರನ್ನು ಸದೆಬಡಿಯುವ ಪ್ರಬಲ ಪ್ರಯತ್ನ ನಡೆಯುತ್ತಿದೆ. ಒಂದುವೇಳೆ ಬಂಧಿಗಳನ್ನು ಕೊಲೆಮಾಡುವ ಭಯಪ್ರದರ್ಶನವನ್ನು ದಂಗೆಗಾರರು ತೋರಿದರೂ ಅವರಿಗೆ ಧರಣು ಹೋಗದೆ ಅವರನ್ನು ಬಗ್ಗಿಸಬೇಕೆಂದೇ ಕೇಂದ್ರ ಸರಕಾರದ ದೃಢನಿರ್ಧಾರ. ದಂಗೆಗಾರರು ಈಗಾಗಲೇ ಶ್ಯಾನ್ ಎಂಬ ಸ್ಥಾನಿಕ ಗವರ್ನರರ ಪತ್ನಿ ಚಾಯೇಹಿಟ್ಟ ಎಂಬಾಕೆಯನ್ನು ಕೊಲೆಮಾಡಿರುತ್ತಾರೆ.

ಐರ್ಲೇಂಡಿನಲ್ಲಿ ಸರ್ವತಂತ್ರ ಸ್ವತಂತ್ರ ನಿರ್ಧಾರ !

ಐರ್ಲೇಂಡಿನ ಅಧ್ಯಕ್ಷ ಡಿವೆಲರವರ ನೇತೃತ್ವದಲ್ಲಿ ಐರಿಷ್ ಪಾರ್ಲಿಮೆಂಟು ಬ್ರಿಟಿನ ಸಂಬಂಧವನ್ನು ಕಡಿಯುತ್ತಾ ಬಂದಿತ್ತು. ಐರಿಷ್ ಪಾರ್ಲಿಮೆಂಟು ಮಾಡುತ್ತಿದ್ದ ರಾಜಭಕ್ತಿ ಪ್ರಮಾಣವನ್ನೂ ತೆಗೆದುಹಾಕಿತ್ತು. ನೊನ್ನೆ ಎಡ್ವಾರ್ಡರ ಸಿಂಹಾಸನ ಪರಿತ್ಯಾಗದ ಗೊಂದಲದಲ್ಲಿ ಐರ್ಲೇಂಡ್, ತನ್ನ ಸಂಬಂಧಕ್ಕೆ ಕೊನೆಯ ಕತ್ತರಿಯನ್ನು ಪ್ರಯೋಗಿಸಿ ಬಿಟ್ಟಿರು. ಐರ್ಲೇಂಡಿನ ಒಳ ಆಡಳಿತೆಯಲ್ಲಿ ಬ್ರಿಟಿಷ್ ಪ್ರಭುಗಳ ಹೆಸರೇ ಬೇಕಾಗಿಲ್ಲವೆಂದು ಆದರ ನಿರ್ಧಾರ. ವ್ಯಾಪಾರಾದಿ ವಿಷಯಗಳಲ್ಲಿ ವಿನಹ ರಾಜಕೀಯ ಸಂಗತಿಗಳಲ್ಲಿ ಐರ್ಲೇಂಡಿಗೂ ಬ್ರಿಟನ್ನಿಗೂ ಏನೂ ಸಂಬಂಧವಿಲ್ಲವೆಂದೂ ಐರ್ಲೇಂಡಿನವರು ಸರ್ವತಂತ್ರ ಸ್ವತಂತ್ರರೆಂದೂ ಐರಿಷ್ ಪಾರ್ಲಿಮೆಂಟು ನಿರ್ಧರಿಸಿಯಿದೆ.

ಸ್ವದೇಶ

ಮೈಸೂರು ಮಹಾರಾಜರ ಸಹಾನುಭೂತಿ ಹೃದಯ

ಹದಿನಾರು ವರುಷಗಳ ಹಿಂದೆ ಮರಣ ದಂಡನೆಗೆ ಒಳಗಾಗಿದ್ದೊಬ್ಬನನ್ನು ಮಹಾರಾಜರು ತನಗಿರುವ ಕೊನೆಯ ತೀರ್ಮಾನದ ಅಧಿಕಾರದಿಂದ ಹದಿನಾಲ್ಕು ವರುಷದ ಗಡಿಪಾರು ಶಿಕ್ಷೆಗೆ ಗುರಿಪಡಿಸಿ ದಯೆಮೋರಿದ್ದರು. ಕೆಲವು ದಿವಸಗಳ ಹಿಂದೆ ಆತನು ಆ ಶಿಕ್ಷೆಯ ಅವಧಿಯನ್ನು ಪೂರೈಸಿಕೊಂಡು ಮೈಸೂರಿಗೆ ಬಂದ. ಪಾಪ! ಮನೆಮಾರಿಲ್ಲದ ನಿರ್ಗತಿಕ ಆತ! ಶಿಕ್ಷೆಯ ಕಳಂಕದಿಂದ ಅವನಿಗ್ಯಾರೂ ಕೆಲಸಕೊಡದಿಲ್ಲ. ಭೀದಲು ಆತನಿಗೆ ಮನಸ್ಸಾಗಲಿಲ್ಲ. ಜೀವ ದಾನವಿತ್ತ ಪುಣ್ಯವಂದರೇ, ನನಗೆ ಮುಂದೇನು ಗತಿ? ಎಂದು ಮಹಾರಾಜರಿಗೇ ಅರ್ಜಿ ಬರೆದ ಆತನ ಪುಣ್ಯನಾಮ ಅದು ಮಹಾರಾಜರ ಕೈಗೇ ಸಿಕ್ಕಿತು. ನಿರ್ಗತಿಕನ ದುಃಸ್ಥಿತಿಯನ್ನು ತಿಳಿದು ರಾಜರ ಮನ ಕರಗಿತು. ಮೈಸೂರು ಮುನ್ಸಿಪಾಲಿಟಿಯ ಗಡಿಯೊಳಗೊಂದು ವಸತಿಯನ್ನೂ ನಗರದ ಸಮೀಪವಾಗಿ ಏದು ಎಕ್ರೆ ಫಲವತ್ತಾದ ಜಮೀನನ್ನೂ ಆತನಿಗೆ ಉಚಿತವಾಗಿ ಕೊಡಬೇಕೆಂದು ಮಹಾರಾಜರ ಅಪ್ಪಣೆ ಹೊರಟಿತು ಮಾತ್ರವಲ್ಲ, ಆ ಬಾವನ ಆರ್ಜಿಯು ಲ್ಲಿಯೂ ತನ್ನಾಜ್ಞೆಯನ್ನು ತಿಳಿಸಿ ಸಂಬಂಧಪಟ್ಟ ಅಧಿಕಾರಿಗಳು ಅದನ್ನು ಕೈಪ್ರದಲ್ಲಿ ಲಕ್ಷ್ಯಕ್ಕೆ ತಾರದಿದ್ದರಿಂದ ತನಗೆ ಪುನಃ ತಿಳಿಸತಕ್ಕದ್ದೆಂದೂ ಬರೆಯಿಸಿ ಆ ಬಡವನಿಗೆ ಅರ್ಜಿಯನ್ನು ಹಿಂದೆ ಕಳುಹಿಸಲಾಯಿತು. ರಾಮರಾಜ್ಯವೆಂಬ ಮಾತನ್ನು ಪುಸ್ತಕರಿಸಿಕೊಂಡರು ಮಹಾರಾಜರು!

ಆದರ್ಶದಾನ

ಬೆಂಗಳೂರಿನ 'ಧರ್ಮಪ್ರಕಾಶ' ಶ್ರೀ ಸಜ್ಜನರಾಯರು ದಾನದ ಸಂಕೇತಚಿಹ್ನವಾಗಿರುವ ಕೆತ್ತಿ ಮಾಡಿ ಏವತ್ತು ಸಾವಿರ ರೂಪಾಯಿಗಳನ್ನು ವೆಚ್ಚ ಮಾಡಿ ಹೆರಿಗೆಯ ಚಿಕಿತ್ಸಾ ಭವನವನ್ನು ವಾಣೀವಿಲಾಸ ಆಸ್ಪತ್ರೆಯ ವಟಾರದಲ್ಲಿ ಕಟ್ಟಿಸಿ ದಾನಮಾಡಿದರು. ಶ್ರೀಮದ್ಯವರಾದೇ ತಾ ೧೬-೧೨ರಲ್ಲಿ ಆವರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಇಂತಹ ದಾನ ಪೂರೈ ದೀರ್ಘಾರ್ಯದಿಂದಲೇ ಇಂದು ನಾಡಿನ ಸಂಕಷ್ಟ ಪರಿಹಾರವಾಗಬೇಕಾಗಿದೆ.

ಬಿ. ಎನ್. ರೈಲ್ವೇ ನೌಕರರ ಮುಷ್ಕರ

ಬಂಗಾಳಾ ನಾಗಪುರ ರೈಲ್ವೇ ಇಲಾಖೆಯ ಸುಮಾರು ಹನ್ನೆರಡು ಸಾವಿರ ಕೆಲಸಗಾರರು ಮುಷ್ಕರ ಹಿಡಿದಿರುವರು. ಮುಷ್ಕರವು ನಿಲ್ಲುವ ಲಕ್ಷಣ ತೋರುವದಿಲ್ಲ; ಮುಷ್ಕರಕ್ಕೆ ಕಾರಣ ಕೆಲವರ ಸಂಬಳ ಮತ್ತು ನೌಕರಿಯ ನಂಬಂಧ ಉಂಟೊದ ಆಸ್ಥಿರತ್ವ. ಒಂದು ಇಲಾಖೆಯಲ್ಲಿ ೨೬ ಮಂದಿ ಆನವಶ್ಯಕವಾಗಿ ಕಂಡು ಬಂದುದರಿಂದ ಕಂಪನಿಯು ಅವರನ್ನು ಹೊರಿಯಾಮತ್ತೊಂದು ಇಲಾಖೆಯ ಸ್ಥಾನಗಳಿಗೆ ಹಾಕಿತು. ಆದರೆ ಈ ಸ್ಥಾನಗಳ ಸಂಬಳ ಕಡಿಮೆಯಾಗಿದ್ದುದರಿಂದ ಆ ಜನರು ಇವನ್ನು ಸ್ವೀಕರಿಸಲೊಪ್ಪದೆ ಮುಷ್ಕರ ತೊಡಗಿದರು. ಮುಷ್ಕರವು ಕಾಡುಗಿಚ್ಚಿನಂತೆ ಪಬ್ಬಿ ಭಯಂಕರ ರೂಪವನ್ನು ತಾಳಿದೆ.

ಮೈಲ್ ಗಾಡಿಗೆ ಬೆಂಕಿ

ಇದೇ ತಿಂಗಳ ತಾ. ೧೦ರಲ್ಲು ಪಡಗದಿಂದ ಬಂದಿದ್ದ ಟಪ್ಪಾಲು ಚೀಲಗಳನ್ನು ಭರತ ಖಂಡದ ನಾನಾ ಕಡೆಗಳಿಗೆ ಸಾಗಿಸುವ ಇಂಪೀರಿಯಲ್ ಇಂಡಿಯನ್

ಮೈಲ್ ಟ್ರೇನಿಗೆ ಬಾಂಡ್ಯಾ ಮತ್ತು ಇತಾರ್ಸಿ ಸ್ಟೇಶನುಗಳ ನಡುವೆ ದಾರಿಯಲ್ಲಿ ಬೆಂಕಿ ಹಿಡಿಯಿತು. ಕಾರಣ ವಿನ್ನೂ ತಿಳಿದಿಲ್ಲ. ಆದರೆ ಸುಮಾರು ಎಂಟುನೂರು ಟಪ್ಪಾಲು ಚೀಲಗಳು ಸುಟ್ಟು ಹೋಗಿವು. ಸುಮಾರು ಒಂದುನೂರು ಚೀಲಗಳು ಬೆಂಕಿಯ ಬಾಯಿಂದ ತಪ್ಪಿಸಲ್ಪಟ್ಟವು. ಗಾಡಿಯು ಪೂರಾ ಭಸ್ಮವಾಯಿತು. ಲಕ್ಷಕ್ಕೆ ಮಿಕ್ಕಿದ ನಷ್ಟ!

ಕೊಂಗ್ರೆಸ್ ಉಮೇದ್ವಾರಿಯಾಗಿ ಧಾರವಾಡ ಡಿವಿಜ ನಿನಿಂದ ವಿದ್ಯಾವಂತ್ರಿಗಳನ್ನೂ ಸ್ಪರ್ಧಿಸಲಿರುವರು.

ವಿಜಯ ನಗರೋತ್ಸವದ ಹೊಸಚೀಟಿಗೆ ವಿದ್ಯಾನಗರವೆಂದು ಹೆಸರಿಡಬೇಕೆಂದು ಅಲ್ಲಿಯ ನಗರ ಸಭೆಯ ಒಮ್ಮತದ ನಿರ್ಧಾರ.

ಚೀನದ ನಾನ್‌ಕೆಂಗ್ ಸೇನೆಯು ಸ್ಪೆನ್‌ಪೂವಿಗೆ ೫೦ಮೈಲು ಪೂರ್ವಕ್ಕೆರುವ 'ವ್ಹಾ-ಸಯೆನ್' ಎಂಬ ಸ್ಥ

ನೋಟಿಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. S. No. ೬೫೭೬

ವಾಮನ ಶ್ಯಾನಭಾಗ ವಾದಿ

ಮತ್ತು

ನೊಕ್ಕೆ ಹೆಂಗ್ಸು ಕೂಡಾ ೪ ಪ್ರತಿವಾದಿ

ಮುಂದಿನ ಬಡ್ಡಿ ವಗೈರೆ ಬಗ್ಗೆ ದಾವಾಮಾಡಿ ಪಾವಂಜೆ ಗ್ರಾಮದ ಶಿಕ್ತಿಲ್ಲಾದ ರಾಮಚಂದ್ರ ಭಟ್ಟರು ನಿಮಗೆ ತಾರೀಕು ೧೦-೧೧-೧೯೩೬ರಲ್ಲು ಬರಕೊಟ್ಟ ತೋಡವಿನ ಹಕ್ಕು ಪತ್ರ ಆರ್ಜಿ ನೋಟೀಸು ವಜ್ರಿ ಹುಕುಂ ಸಹಾ ಜ್ಯಾರಿ ಬಗ್ಗೆ ಸದ್ರಿ ದಾವೆಯು ವಜ್ರಿ ಆರ್ಜಿಯು ತಮ್ಮಿಗೆ ತಾ ೧೪-೧೧-೧೯೩೬ ಕ್ಕೆ ಯಿಟ್ಟರುವದ್ರಿಂದ ಸದ ತಾರೀತು ಆಕ್ಷೇಪಯಿದ್ದ ಪಕ್ಷ ಸದ್ರಿ ದಿನ ಬೆಳಿಗ್ಗೆ ೧೦ ಘಂಟೆಗೆ ಈ ಕೋರ್ಟು ನೀವು ಹಾಜರಾಗಿ ಜವಾಬುಮಾಡಿಕೊಳ್ಳ

Ramachandra Rao,
Pleader for Plaintiff.

ತಾ. ೨೩—೧೨—೧೯೩೬

ಸದರ್ನ್ ಲೇಂಡ್ ಟ್ರಸ್ಟ್

ಮೂರು ಲಕ್ಷಕ್ಕೂ ಮಿಕ್ಕಿದಷ್ಟು ರೂಪಾಯಿಗಳು ಒಂದು ವಾರದೊಳಗೆ ಮಾರಾಟವಾಗಿ ಅತ್ಯಧಿಕವೆಂದೆನಿಸಿದೆ.

ಂಗಳೂರು.
ಅತುಲ ಆನಂದ!!
ಡನೆ ಪುಣ್ಯಪ್ರಸಂಗ!
ಹಾಸಕ ಪುಣ್ಯಕಥೆ
ಡ್ಸ್
ವಾರದಿಂದ
ವೆಚ್ಚ ಮಾಡಿ
ುಲ್ಲರು
ಾಕ್ಷಲನ ಚಿತ್ರ.

DIA
NGALORE.
ಶ ದೇಶೀಯ ಆಡಳಿತೆ
ರ್ಯಕ್ರಮ.
ುದಾರವಾದ ಶರ್ತಗಳು
ಸ್ಯವಹಾರ.
ವಿವ್ಯಾಡುಗಳು,
ಗೆ ಸರ್ವಾನುಕೂಲ.
ಂಡಿತವಾದ ಭದ್ರತೆ.
ಸಂಪಾದನೆ ಅನಿಶ್ಚಿತ.
ಉತ್ತಮ ಪರಿಹಾರ.
ಕೊಂಡವರು
ರರು.

ನವಯುಗ ತುಳು ಸಂಚಿಕೆ

ಸಂಪುಟ ೧ | ಭಾನು (ಪೆರಾರ್ದೆ) ೯ ಗುರುವಾರ | ಸಂಚಿಕೆ ೪

ತುಳು ಲೇಖಕೆರೆಡ ಒಂಜಿ ವಿನಂತಿ

ನವಯುಗತ ತುಳು ಸಂಚಿಕೆಗ್ ಲೇಖನ ಬರೆಪಿನಾಕುಳು ಆಕ್ಲೆನ ಸರಿಯೊಯಿನ ವಿಲಾಸೊನೇ ಕೊಡೊ. ಒಂಜಿ ವೇಳೆ ಪುದರ್ ಕೊರಿಯೆರೆ ಕುಸಿ ದಾಂತಿನಾಕ್ಲು ಆಕ್ಲೆನ ಪುದರ್‌ನ್ "ತುಳು ಮಹಾಸಭೆ, ಪುರಾಲ್ P. O. ಗುರ್ಪುರ" ಈ ವಿಲಾಸೊಗು ಅಗತ್ಯ ತೆರಿಪಾವೊಡಿಂದ್ ಸಂಜೊಣುವೆ ಕರಿನ ನೇಸ ತಿಂಗೊಳುದ್ದಿಂಚಿ "ತುಳುನಾಡ್" ಇನ್ನಿ ಮಾಸ ಪತ್ರಿಕೆಗ್‌ಲಾ ತುಳುಸಂಚಿಕೆಗ್ಲಾ ಲೇಖನ ಎರೆಯಿ ಮಹಾನುಬಾವೆರೆ ಪುದರ್‌ಲೆನ್ ತಿರ್ತ್ ಬರೆಪೆ. ಆಕ್ಲೆನ ಲೇಖನೆಲು ಕ್ರಮಪ್ರಕಾರ ತುಳು ಸಂಚಿಕೆಲೆಡ್ ಬರ್ಪುಂಡು.

ತುಳು ಮಹಾಸಭೆತ ಕಾರ್ಯದರ್ಶಿ,
ಎನ್. ಯೆ. ಶೀನಪ್ಪ ಹೆಗಡೆ, ಪುರಾಲ್.

ತುಳುನಾಡ್ ಪತ್ರಿಕೆದ ಸಂಪಾದಕೆರ್ . . . . . ಬಡ್ಡಬೈಲ್ ಪರ್ಮೇಸ್ವರಾಯೆರ್

ಪ್ರಕಾಶಕೆರ್ . . . . . ಅಮುಂಜಗುತ್ತು ಶೀನಪ್ಪ ಹೆಗಡೆ, ತುಳುವಾಲೆ.

ಲೇಖಕೆರ್

ವಲ್ಲಿಪಾಡಿ ಶಂಕ್ರಸಾರಾಯಣ ರಾಯೆರ್	೬ ಕ್ಯೂಲಕಾರ್, ಮಾಸ್ತರ್, ಗುರ್ಪುರ
ಅಡ್ಕೂರು ಕೃಷ್ಣಯ್ಯರ್, ಮಾಸ್ತರ್, ಪುರಾಲ್	೭ ದೇರಜೆ ತಿಮ್ಮಪ್ಪಯ್ಯರ್, ಪುರಾಲ್
ಪುರಾಲ್ ಸುಬ್ರಾಯ ತಂತ್ರಿಲು	೮ ನೇತ್ರಾವತಿ, ಆನಂದ ಭವನ, ಪುರಾಲ್
ನಡ್ಯೋಡಿ ಮುತ್ತರಾಲ್, ಜೊಳ್ಳೂರು	೯ ಅಮುಂಜೆ ಶಿವರಾಯೆರ್, ಮಾಸ್ತರ್
ಬಿ. ನಾರಾಯಣ ರಾಯೆರ್, ಮಾಸ್ತರ್, ಪುರಾಲ್.	೧೦ ಕೆ. ಪದ್ಮನಾಭ ರಾಯೆರ್, ಕಾಫಿಕ್ಲಬ್. ಪುರಾಲ್

'ತುಳುಸಂಚಿಕೆ'ದ ಲೇಖಕೆರ್

ಎಸ್. ಎಚ್ಚೆಲ ಹೆಗ್ಗಡ್ತಿ	೬ ಇಷ್ಟರ ಕೂಟ ನಡ್ಡೆದ್ರ
ಆರ್. ಜೆ. ಗಾಮ	೮ ತುಳುಮಗ
ಎಸ್. ಯು. ಹೆಗಡೇರ್	೯ ಸಂಪಾಜೆ ಸುಂಡೆಪ್ಪ ಕೈ, ದೇರಕೂಡಿಕಾರ್.
ಸತ್ಯಮಿತ್ರ ಬಂಗೇರ್	೧೦ ತುಳುವಾಲೆ ಅಮುಂಜ ಶೀನಪ್ಪ ಹೆಗಡೆ
ಮುದ್ರಾಡಿ ಜನಾರ್ದನಾಚಾರ್ಯರ್	ನನಲಾ ಕಲವು ಲೇಖಕೆನ ಪುದರ್ ಗೊತ್ತುದಾಂತಿನೆಡ್ಡ
ಎಸ್. ಎ. ಭಟ್	ಬರೆತ್ಂಡ್ ಅನ್ನೆಸ್ ಮಾತ ಏಲಾವುಪ್ಪು ಬರೆಪ.

ಎನ್. ಯೆ. ಶೀನಪ್ಪ ಹೆಗಡೆ

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd, Mangalore Branch.

E. A. PAIS, B. Sc., ***Branch Secretary,*** **The Guardian of India Insurance Co., Limited,**
MANGALORE BRANCH.

ಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳಿಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,
ಮುಖ್ಯ ಆಫೀಸು—ಪೋಸ್ಟ್ ಬೊಕ್ಸ್ ೮೯—ಮದ್ರಾಸು.

ಫೈಜಪುರ ಕೊಂಗ್ರೆಸಿಗೆ ತೆರಳಿದ ನವಯುಗದ ಸಂಪಾದಕರು ಕೆಲವು ದಿನಗಳ ವರೆಗೆ ಬೊಂಬಾಯಿಯಲ್ಲಿರುವರು ಬೊಂಬಾಯಿಯಲ್ಲಿ ಚಂದಾದಾರರಾಗುವವರಿಗೂ ಜಾಹೀರಾತುಗಳನ್ನು ಏಯುವವರಿಗೂ ಸುಸಂದರ್ಭ

ಮೆನೇಜರ್, ನವಯುಗ

ನವಯುಗ

ಉಡುಪಿ, ತಾ ೨೪-೧೨-೧೯೩೬ ಗುರು

ನಮ್ಮಲ್ಲೀಗ ಮೂರು ಕೋಟಿ ಮತದಾರರು ಇದ್ದಾರೆ. ನಮ್ಮ ಓಟು ಸ್ವಾತಂತ್ರ್ಯಕ್ಕೋ ಪ ಗುಲಾಮಗಿರಿಗೋ ಎಂಬು ದನ್ನು ಲೋಕಕ್ಕೆ ಮತ್ತು ಸರಕಾರಕ್ಕೆ ತೋರಿಸುವ ಸಲುವಾಗಿಯೇ ನಮಗೀ ಮತದಾನದ ಹಕ್ಕೀಯಲ್ಪಟ್ಟಿದೆ. ಇದೀಗ ನಮಗೆ ಮೊದಲನೇ ಬಾರಿ ದೊರೆತ ಅಧಿಕಾರ. ನಮ್ಮಲ್ಲಿ ಬಹುಮಂದಿ ಕೊಂಗ್ರೆಸಿನ ಬೆಂಬಲಕ್ಕೆಲ್ಲವೆಂಬುದನ್ನು ಸರಕಾರವು ಕಾಣುವಂತಾಪರೆ, ಅವರು ಕೃತಕೃತ್ಯರಾದರು. ಮತದ ಹಕ್ಕಿರುವ ಮೂರು ಕೋಟಿಯನ್ನು ನಮ್ಮ ಕಡೆಗೆಳೆಯಲು ಸಾಧ್ಯವಿಲ್ಲವಾದರೆ 'ಸಾರ್ವಜನಿಕ ಸಂಬಂಧ' (Mass Contact)ದ ದೊಡ್ಡ ದೊಡ್ಡ ರಕಾವುಗಳಿಗೆ ಅರ್ಥವಿಲ್ಲ. ಕೌನ್ಸಿಲುಗಳಲ್ಲಿ ನಮಗಾವ ಅಧಿಕಾರವೂ ಇಲ್ಲದಿರಬಹುದು; ನಮ್ಮ ಹಾದಿಗೆ ತುಂಬಾ ಆತಂಕಗಳಿರಬಹುದು ಆದರೆ ನೆನಪಿನಲ್ಲಿಡಿರಿ–ನಮ್ಮ, ಮತವು ಉಚಿತ ರೀತಿಯಲ್ಲಿ ದಾನಮಾಡಲ್ಪಡವಿದ್ದರೆ ಸರಕಾರವು ನಮ್ಮಾ ಸ್ಥಿತಿಯನ್ನು ಕೈಯೆತ್ತಿ ಪ್ರಪಂಚಕ್ಕೆ ತೋರಿಸೀತು; ಜನತೆಯು ಸರಕಾರವ ಬೆಂಬಲಕ್ಕೆರುವನೆಂದೇ ಅರ್ಥವಾದೀತು. ಪ್ರತಿಯೊಬ್ಬ ಓಟರನು ಗುಲಾಮ ಗಿರಿಗಲ್ಲ– ಸ್ವಾತಂತ್ರ್ಯಕ್ಕೆ ಮತ ವೀಯುವಂತೆ ನೋಡುವದೇ ನಮ್ಮ ಈಗಿನ ಕೆಲಸವಾಗಿದೆ. ಕೊಂಗ್ರೆಸಿನ ವಿರುದ್ಧವಾಗಿ ಬೀಳುವ ಪ್ರತಿಯೊಂದು ಓಟು ಸ್ವಾತಂತ್ರ್ಯ ಹೋರಾಟಕ್ಕೆ ವಿರುದ್ಧವಾಗಿ ಬೀಳುವ ಏಟಾಗಿದೆ. ನಾವು ಜೈಲುಹೊಕ್ಕಾಗ ಕೌನ್ಸಿಲುಗಳನ್ನೆಲ್ಲಾ ಹೊಕ್ಕೆ ಸುಖಜೀವಿಗಳ ಕೈಗೆ, ಇಂದಿನ ಹೊಸ ಸುಧಾರಣೆಯ ಅನ್ಯಾಯೋತ್ಪಾದಕ ಅಧಿಕಾರವನ್ನು ಹೋಗಬಿಟ್ಟರೆ, ಗುಲಾಮಗಿರಿಗೂ ಸ್ವಾತಂತ್ರ್ಯದ ಹಾದಿಯಲ್ಲಿನ ತೊಡಕುಗಳಿಗೂ ಚಿರಾಯುಷ್ಯವನ್ನು ಕೊಟ್ಟಂತಾಗುವದು. ಆದ್ದರಿಂದ ಪ್ರಥಮತಃ ನಾವು ಅಂಥವರನ್ನು ಉಚ್ಚಾಟನೆ ಮಾಡಬೇಕಾಗಿದೆ. ಜಸ್ಟೀಸ್ ಪಾರ್ಟಿಯವರು ರಾಜರಿರಲಿ, ಜಮಾನ್ದಾರರಿರಲಿ, ನಮ್ಮ ಓಟಿನ ಭರವಸೆಯಿಲ್ಲದೆ ಅವರು ನೊಮಿನೇಶನೇ ಹಾಕಲಾರರು; ನಮ್ಮ ಓಟು ದೊರೆಯದೆ ಒಳಗೆ ಕಾಲಿಡಲಾರರು. ಸರಕಾರವು ಅವರನ್ನೀಗ ತೋಳಿಗಳ ಬಾಯಿಗೆ ದೂಡಿರುವದು! ಅವರ ಹುಕುಮಿನ ಮೂಲಕವೆ ನಮ್ಮ ತಲೆಗಳೊಡೆಯಲ್ಪಟ್ಟವೆ; ನಮ್ಮ ತರುಣ ತರುಣಿಯರು ಅವರ ದೆಸೆಯಿಂದಲೇ ಜೈಲನ್ನವನ್ನು ಮುಕ್ಕಿದರು. ಮತ್ತೀಗ ಅವರು ನಮ್ಮಿಂದಲೇ ಓಟನ್ನು ಕೇಳುತ್ತಿದ್ದಾರೆ. ಇದು ನಮ್ಮ ತಿಳುವಳಿಕೆಗೊಂದು ಅಪವಾದ. ಅವರು ನಮ್ಮಿಂದೇಕೆ ಓಟನ್ನು ಕೇಳಬೇಕು?

ನಾವೆಲ್ಲಾ ಜೈಲಿನಲ್ಲಿದ್ದಾಗ ಗುಜರಾತಿ ಮಹಶೀಯರೊಬ್ಬರು ಆ ಸಮಯದಲ್ಲೇ ಸರಕಾರವು ಎಸೆಂಬ್ಲಿ ಚುನಾವಣೆಯನ್ನು ನಡಿಸಬೇಕೆಂದು ಒತ್ತಾಯಪಡಿಸಿ, ಮದ್ರಾಸುಪ್ರಾಂತ್ಯವನ್ನು ಪ್ರಥಮತಃ ಚುನಾವಣೆಗಿಳಿಸಿದರೆ, ಸರಕಾರಕ್ಕನುಕೂಲಪರಿಸ್ಥಿತಿಯುಂಟುಮಾಡುವದಲ್ಲಿ ಮುಂದಾಗುವದೆಂದು ಸೂಚಿಸಿದರು. ಚುನಾವಣೆಯು ನಡೆಯಿತು. ಮದ್ರಾಸು ಮಾತ್ರ ಅದಕ್ಕೆ ತೀರಾ ಭಿನ್ನವಾದ ಪಾಠವನ್ನು ಕಲಿಸಿಕೊಟ್ಟಿತು. ಆದಾಗಿ ಕಾಲವು ಸಂದುಹೋದರೂ ನಾನೀಗ ಆದಕ್ಕಾಗಿ ಮದ್ರಾಸನ್ನು ಅಭಿನಂದಿಸುತ್ತೇನೆ. ಮದ್ರಾಸು ಆಗ ಕೊಟ್ಟ ಅಭಯವನ್ನು ಈ ಕಾಲದಲ್ಲಿ ನುಂಗಿಬಿಡುವ ದೇನು? ಯಾರನ್ನು ನೀವು ಎಸೆಂಬ್ಲಿ ಚುನಾವಣೆಯಲ್ಲಿ ಸೋಲಿಸಿದಿರೋ ಅವರೇ ಈಗ ಕೊಂಗ್ರೆಸಿಗೆ ವಿರುದ್ಧವಾಗಿ ನಿಮ್ಮಿಂದ ಓಟು ಕೇಳುತ್ತಿದ್ದಾರೆ. ಒಮ್ಮೆ ಉಗುಳಿದುದನ್ನೇ ಪುನಃ ಎತ್ತಿಕೊಳ್ಳಲು ಮದ್ರಾಸಿನವರು ತಯಾರಿರುವರೇನು? ಈಗ ಜಸ್ಟಿಸ್ ಪಾರ್ಟಿಯವರನ್ನು ಕಳುಹಿಸಲು ಮತದಾರರು ತಯಾರಿರುವರಾದರೆ, ಅಂದೇಕೆ ಅವರನ್ನು ಧಿಕ್ಕರಿಸಿದರು? ಮತದಾರರು ತಾವು ಕಳದ ಸಲ ತಪ್ಪು ಮಾಡಿದೆನೆಂದು ಭಾವಿಸುತ್ತಾರೇನು? ಹಾಗಲ್ಲವಾದರೆ ಅವರು ತಮ್ಮ ಕೆಲಸಕ್ಕಾಗಿ ಹುರುಪುಗೊಂಡು ಏಳಲಿ! ಈಗ ಓಟರರ ಸಂಖ್ಯೆಯು ಬಹಳವಾಗಿ ಹೆಚ್ಚಿದೆ. ಅವಶೆಲ್ಲಾ, ಉಮೇದ್ವಾರರು ತಮ್ಮಲ್ಲಿ ಬಂದೇ ಯಾಚಿಸಬೇಕೆಂದು ನಿರೀಕ್ಷಿಸದೆ ತಮ್ಮ ಕರ್ತವ್ಯವನ್ನು ಮಾಡಲು ಮುಂದಾಗಬೇಕು.

ಪದವೀ ಸ್ವೀಕಾರ

ಪದವೀ ಸ್ವೀಕಾರದ ಪ್ರಶ್ನೆಯು ಉತ್ತರ ಭಾರತಕ್ಕಿಂತಲೂ ದಕ್ಷಿಣ ಭಾರತದಲ್ಲಿ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಿದೆ. ಈ ತನಕ ಅಧಿಕಾರದಲ್ಲಿದ್ದ ಪ್ರವೃತ್ತಿ ಕಾರ್ಯಗಳಂದ ಜನರು ಬೆಂಡಾಗಿಹೋದುದೇ ಇದಕ್ಕೆ ಕಾರಣ. ನೀವು ಆ ನಿಮ್ಮ ನೈರಿಗಳನ್ನು ಅವರ ಹಾದಿಯಲ್ಲೇ ಇಡ್ಡೈಸಲು ಪ್ರಾರೈಸುತ್ತಿರಬಹುದು. ಆದರೆ ನಮಗೊಂದು ವಿಶಾಲವಾವ ಧ್ಯೇಯವಿದೆ. ನಾವವರನ್ನು ಮರೆತೇ ಬಿಡೋಣ. ಅವರೂ ನಮ್ಮ ದೇಶ ಬಾಂಧವರೇ. ಕೌನ್ಸಿಲಿನ ಒಳ ಹೊಗುವ ಸಂದರ್ಭವನ್ನೇ ನೀವವರಿಗೆ ಕೊಡದಿದ್ದೋದರೆ ಮತ್ತವರ ಮುಖವನ್ನು ಸಾರ್ವಜನಿಕ ರಂಗನಲ್ಲಿ ಕಾಣಲಾರಿರಿ. ಹಳೆಯ ಎಸೆಂಬ್ಲಿಯಲ್ಲಿದ್ದ ಅವರ ಮೆಂಬರರು ಈಗ ನೋಡಲಿಕ್ಕಿರುವರೇನು? ಅವರ ಕುರಿತು ಯೋಜಿಸುವದನ್ನೇ ಬಿಟ್ಟು ನೀವು ನಿಮ್ಮ ಕೆಲಸವನ್ನು ಮುಂದರಿಸಿರಿ. ಪದವೀ ಸ್ವೀಕಾರದ ಪ್ರಶ್ನೆಯು ಈಗ ಪ್ರಾಮುಖ್ಯವಲ್ಲ. ಎಲ್ಲಾ ಓಟುಗಳೂ ಕೊಂಗ್ರೆಸಿಗೆ ದಾನವಾಗುವಂತೆ ನೋಡುವದೊಂದೇ ಶಕ್ತಿದ ಕೆಲಸ. ನಿಜವಾದ ಕಾರ್ಯಕರ್ತರು ತಮ್ಮ ಈ ದಿನದ ಕೆಲಸವನ್ನು ಜಯಶೀಲಗೊಳಿಸಲು ಲಕ್ಷ್ಯ ವಿಡಬೇಕಲ್ಲದೆ, ನಾಳೆಯದನ್ನು ಹಂಬಲಿಸಿ ಈಗ ಕೈಕಾಲು ಬಿಡಬಾರದು. ನಮ್ಮ ಎಲ್ಲಾ ಶಕ್ತಿ ಮತ್ತು ಪ್ರತಿಕ್ಷೆಯನ್ನು ಪಯೋಗಿಸಿ ಇಂದಿನ ಕೆಲಸವನ್ನು ಸಾಂಗಗೊಳಿಸಿದೆವಾದರೆ, ನಾಳೆಯ ಪ್ರಶ್ನೆಯನ್ನು ಸರಳವಾಗಿ ಬಿಡಿಸಲನುಕೂಲವಾಗುವ ಪರಿಸ್ಥಿತಿಯು ಕೂಡಲೇ ನಿರ್ಮಾಣವಾಗುವದು.

ರಾಷ್ಟ್ರೀಯ ಘೋಷಣೆ

ನಾವು ರಾಷ್ಟ್ರದ ಘೋಷಣೆ (Congress manifesto)ಯನ್ನು ಮುಂದಿಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ಅದರ ತತ್ವಕ್ಕನುಸಾರವಾಗಿ ಪದವೀ ಸ್ವೀಕಾರವ

ಯುಕ್ತವೆಂದು ಕಂಡುಬಂದರೆ ನಾವು ಹಾಗೆಯೇ ಮಾಡುವೆವು: ಅದು ನಮ್ಮ ರಾಷ್ಟ್ರೀಯ ಜೀವನಕ್ಕೆ ವಿಷಸ್ಫಾಯವೆಂದು ಕಂಗು ಬಂದರೆ ಒಂದಿಷ್ಟು ವಿಳಂಬಿಸದೆ ಅದನ್ನು ಬಹಿಷ್ಕರಿಸುವೆವು. ಆದ್ದರಿಂದ ಆ ಕುರಿತು ತಪ್ಪಭಿಪ್ರಾಯವನ್ನು ಕಟ್ಟಿಕೊಳ್ಳಬೇಡಿರಿ. ಆ ಕುರಿತು ಆತುರಪಡುವವರಿಗೆಲ್ಲಾ ನಾನು ಹೇಳುವದಿಷ್ಟೆ 'ಹೊಸ ಸುಧಾರಣೆಯನ್ನು ಮುರಿದು ಹಾಕುವ ಸ್ಪಷ್ಟವಾದ ಕಾರ್ಯಕ್ರಮವು ನಮ್ಮ ಮುಂದಿದೆ; ಅದಕ್ಕನು ಕೂಲವಾಗುವ ಯಾವ ರೀತಿಯನ್ನಾದರೂ ನಾವು ಅಂಗೀಕರಿಸುವೆವು. ಮಂತ್ರಿಪದವಿ ಸ್ವೀಕಾರ-ಬಹಿಷ್ಕಾರದಂತಹ ಅಲ್ಪ ಸಂಗತಿಗಳಿಗಾಗಿ ನಮ್ಮ ಪ್ರಾಮುಖ್ಯ ಕರ್ತವ್ಯವನ್ನು ಮರೆಯಬಾರದು. ಕೊಂಗ್ರೆಸ್ ಪದವೀ ನಿರಾಕರಣೆಯನ್ನು ಕೈಕೊಂಡರೆ ಅದಕ್ಕಾಗಿಯೇ ಕೌನ್ಸಿಲು ಹೊಕ್ಕವರು ನಿರಾಶೆಗೊಂಡಾವೆಂದು ಕೆಲವರು ಹೇಳುತ್ತಾರೆ. ಅಂಥವರನ್ನು ಸಮಜಾಯಿಸುವದಕ್ಕಾಗಿ ಕೊಂಗ್ರೆಸಿ ಎಂದಿಗೂ ಪದವೀ ಸ್ವೀಕರಿಸದೆಂದು ನಾನಿಲ್ಲಿ ಸ್ಪಷ್ಟವಾಗಿ ಹೇಳಿಬಿಡುತ್ತೇನೆ. ಅಂತಹ ಆಶೆಯಿಂದಲೇ ನಿಂತವರಿದ್ದರೆ ಅವರೀಗಾದರೂ ತಮ್ಮ ಉಮೇದ್ವಾರಿಕೆಯನ್ನು ಹಿಂದೆಗೆದುಕೊಳ್ಳಬೇಕೆಂದು ಎಚ್ಚರಿಸುತ್ತೇನೆ. ಕೊಂಗ್ರೆಸಿನೊಡನೆ ಸಹಕರಿಸುವ ಯಥಾರ್ಥಧ್ಯೇಯದಿಂದ ಮುಂದೆ ಬರುವವರನ್ನು ತಡೆದಿಟ್ಟು ರಾಷ್ಟ್ರೀಯ ಸಭೆಯನ್ನು ಸಂಕುಚಿತವಾಗಿಸಲು ನಾನಿಚ್ಛಿಸುವುದಿಲ್ಲ. ಜೈಲಿಗೆ ಹೋದ ಪಾಸ್‌ಪೋರ್ಟ್ ಇದ್ದವರೇ ಕೊಂಗ್ರೆಸ್ ವಾತಾವರಣವನ್ನು ಪ್ರವೇಶಿಸಬೇಕೆಂಬುದಕ್ಕೆ ನನ್ನ ಸಮ್ಮತಿಯಿಲ್ಲ. ಕೊಂಗ್ರೆಸ್ ಧ್ಯೇಯಕ್ಕೆ ಮತಾಂತರ ಹೊಂದಿ ಬರುವವರೆಲ್ಲರಿಗೂ ನಮ್ಮಲ್ಲಿ ಸ್ವಾಗತವಿದೆ. ನಮ್ಮವರಲ್ಲಿ ನಾವು ವಿಶ್ವಾಸವನ್ನು ತೋರಿಸಬೇಕು; ನಾವು ಆ ವಿಶ್ವಾಸವನ್ನು ಕಲಿಯಬೇಕು. ನಾವೆಲ್ಲಾ ಸತ್ಪ್ರಾಣಿ ಸರಕಾರನೊಡನೆ ಹೋರಾಡುತ್ತಿದ್ದೇವೆಂಬುದನ್ನು ನೆನಸಿನಲ್ಲಡಬೇಕು; ಸಾವಿರಾರು ಸಿಸಾಯಿಗಳಿರುವ ಸೈನಿಕದಳದಲ್ಲಿ ವಂಚಕರು, ಧೈರ್ಯಹೀನರು ಕೆಲವು ಮಂದಿ ಇರಬಹುದು. ಅಂತಹ ಪುಕ್ಕರು ವಂಚಕರು, ದಗೆ ಕೊಟ್ಟಲ್ಲಿ ಒಮ್ಮೆಗೇ ಗುಂಡಿನ ಬಾಯಿಗೆ ಬಲಿಯಾಗುವರೆಂಬುದನ್ನು ನೀವು ತಿಳಿದಿಲ್ಲವೇನು? ಹಾಗೆಯೇ ಇನ್ನೂರು ಮುನ್ನೂರು ಮುಂದಿ ಮೆಂಬರರಿರುವ ನಿಮ್ಮ ಮುದ್ರಾಸು ಕೌನ್ಸಿಲಿನಲ್ಲಿ ಯಾರಾದರೂ ತಮ್ಮ ಸ್ವಾರ್ಥಕ್ಕಾಗಿ ಕೊಂಗ್ರೆಸ್ ಧ್ಯೇಯದ ಕಡೆಗೆ ಮುಖ ತಿರುಗಿಸಿದುದು ಪತ್ತೆಯಾದೊಡನೆ ಅವರು ಕೊಂಗ್ರೆಸಿನಿಂದ ಹೊರ ತಳ್ಳಲ್ಪಡುವರೆಂಬುದು ತಿಳಿದಿರಲಿ. ಆದರೆ ಅಂಥವರು ಈಗ ಇಲ್ಲ—ಮುಂದೆ ಇರಲಾರರೆಂದು ನಾನು ಆಶಿಸುತ್ತೇನೆ. ಹಣದ ಬಲದಿಂದ ಕೊಂಗ್ರೆಸನ್ನು ಸೋಲಿಸಬಹುದೆಂದು ಹೊರಟವರಿದ್ದರೆ ಅಂಥವರು ತಮ್ಮ ಕೆಲಸವನ್ನು ಮಾಡಿ ನೋಡಲಿ. ಆದರೆ ಓಟಿನ ಪೆಟ್ಟಿಗೆಗಳನ್ನು ನಾಣ್ಯಗಳಿಂದಾಗಲೀ ಕರೆನ್ಸಿ ನೋಟುಗಳಿಂದಾಗಲೀ ತುಂಬಿಸಲಾಗುವದಿಲ್ಲ. ಮದ್ರಾಸು ಪಟ್ಟಣ ಮತ್ತು ಪ್ರಾಂತ್ಯದ ಜನರೆಲ್ಲಾ ತಮ್ಮ ಕರ್ತವ್ಯವೇನೆಂಬುದನ್ನು ಜ್ಞಾಪಿಸಿಕೊಂಡು ಕೊಂಗ್ರೆಸ ಅಧ್ಯಕ್ಷರು ಬಂದಾಗ ಅವರು ತೋರಿಸಿದ ಉತ್ಸಾಹಕ್ಕೆ ನಿಜವಾದ ಅರ್ಥ ಪರಿಪಡೆಬುದನ್ನು ರುಜು ಪಡಿಸಲಿ!

ನಾರದನ ತಂಬೂರಿ

ಭಾರಿ ಗಲಿಬಿಲಿಯೆದ್ದು । ಜಿಲ್ಲೆಯಲಿ ಗುಡುಗುತಿದೆ ॥ ಕಿವಿರಂಧ್ರಗಳನೊಮ್ಮೆ ಸ್ವಚ್ಛವಿಡಿರಿ ॥ ನರನಾರಾಯಣ! ಶುಭವಾಗಲಿ ಮಾನವರೆ! ದಕ್ಷಿಣ ಕನ್ನಡದಲ್ಲಿ ಚುನಾವಣೆಯ ಭಾರೀ ಗದ್ದಲ. ಈ ಗದ್ದಲಗಳಲ್ಲಿ ಕೇಳುವದಕ್ಕಿಂತಲೂ ಕೇಳದೆ ಬಿಟ್ಟು ಬಿಡುವ ಸಿದ್ದೆಗೇಡು ಶಬ್ದಗಳೇ ಅಧಿಕ. ಅಗತ್ಯ ಕೇಳಲೇಬೇಕಾದ ಮಧುರನಾದಗಳೂ ಇಲ್ಲವೆಂದಲ್ಲ—ಅವುಗಳನ್ನಾದರೂ ಕೇಳಿಬಿಡಿ. ಮಧುಮಧುರ ಗಾನಗಳು । ದೊರಕೊಂಬವಿಗೊ ನೋಡಿ ॥ ನಿಮ್ಮನುನೆ ಬಾಗಿಲೇ ಗಾನಶಾಲೆ ॥ ನರನಾರಾಯಣ!

○

ಜಸ್ಟೀಸ್ ಪಾರ್ಟಿಯ (ಹೆಸರಿಟ್ಟುಕೊಂಡಲ್ಲ) ಪ್ರಚಾರಕರ ಮಾತುಗಳಲ್ಲಿ ಬಹಳ ಸ್ವಾರಸ್ಯವುಂಟಯ್ಯ! ಆಸ್ತಿವಂತರ, ಹಣವಂತರ, ಬಳಿಗೆ ಹೋದಾಗ ಹೇಳುತ್ತಾರೇನು ಗೊತ್ತುಂಟೆ? "ಕೊಂಗ್ರೆಸೆಂದರೆ ಸಮತಾವಾದಿಗಳ ಗುಂಪು; ಸಮತಾವಾದಿಗಳೆಂದರೆ ಆಸ್ತಿವಂತರ ಆಸ್ತಿಯನ್ನು, ಹಣವಂತರ ಹಣವನ್ನು ಕಿತ್ತುಕೊಂಡು ಬಡವರಿಗೆ ಕೊಡುವ ತಂಡ" ಸರಿ! ಇದನ್ನು ಕೇಳಿದ ಧನಿಕರು ಗಲಿಬಿಲಿಗೊಂಡು "ನಾಳೆ ಆಸ್ತಿ ಬದುಕು ಕೊಡುವದೂ ಕೊಂಗ್ರೆಸಿನವರಿಗೆ, ಈ ದಿನ ಓಟನ್ನೂ ಕೊಂಗ್ರೆಸಿನವರಿಗೇ ಕೊಡುವದೇಕೆ? ಪಾಪ. ಈ ಗುಟ್ಟನ್ನು ಬಹುದಿನಕ್ಕೆ ಮುಂಚಿತವಾಗಿ ನಮ್ಮ ಕಿವಿಯಲ್ಲಿ ಬಿಟ್ಟ ಇವರಿಗೇ ಕೊಡೋಣ!!! ಎಂದು ನೆನಸಿಯಾರೆಂದು ಜಸ್ಟೀಸ್ ಪಾರ್ಟಿಯವರ ಭಾವನೆ; ನರನಾರಾಯಣ! ಆಸೆ ಮಿಗಿಲಾದವನೆಗೆ ಭಾಷೆಯಲಿ ಮನವಿಲ್ಲ ತನ್ನಾಶೆ, ತನ್ನ ದರವನ ಲೋಕ॥ ನರನಾರಾಯಣ!

○

ದಕ್ಷಿಣ ಕನ್ನಡದಲ್ಲಿಯೂ ಅಲ್ಲಿಯೊಂದು ಇಲ್ಲಿಯೊಂದು ಆಸ್ತಿ ಇದ್ದವರು; ಅಲ್ಲಿ ಇ ಇಷ್ಟು, ಇಲ್ಲಿ ಇಷ್ಟು, ರೂ. ಆ. ಪೈಗಳಿದ್ದವರು ನೆನಸಿಕೊಳ್ಳಬಹುದು—ನಾವು 'ಧನಿಕರು' ಎಂದು. ಒಂದು ಮುಷ್ಟಿ ಅನ್ನವಿಲ್ಲದವರ ನಡುವೆ ಒಂದು ಮುಷ್ಟಿ ಪೈಯಿದ್ದವನೇ ದೊಡ್ಡವ. ಇರಲಿ—ಇಂದೇ ಸಮತಾವಾದವು ಆಚರಣೆಗೆ ಬಂತೆಂದು ನಿಮ್ಮ ಕಪ್ಪಕ್ಕೆ ನೀವು ನೆನಸಿಕೊಳ್ಳಿ. ಆಗ ನಮ್ಮ ಜಿಲ್ಲೆಯ 'ಧನಿಕ'ರದೆಷ್ಟು ಹೋದೀತೆಂದು ಲೆಕ್ಕ ಹಿಡಿಯುತ್ತೀರಿ? ಏನೂ ಇಲ್ಲ. ಬಪಲಾಗಿ ಸ್ವಲ್ಪ ಸಿಕ್ಕಿದರೂ ಸಿಕ್ಕಬಹುದು. ಅನರೇಕೆ ಸಮತಾವಾದಕ್ಕೆ ಹೆದರುತ್ತಾರಯ್ಯ? ನರೆಯವರ ಪುಡಿಗುಟ್ಟು ಬಾಳುವ ಮನಸು ಹುಟ್ಟು ॥ ಊರು, ನೆರೆ, ಮನೆ, ಹಳ್ಳಿ, ಸೂರೆಹೋಯ್ತು ॥ ನರನಾರಾಯಣ!

○

ಹೇಗೂ ಇರಲಿ, ಚುನಾವಣೆಯೊಂದು ಒಳ್ಳೆಯ ಸಂದರ್ಭವೆಂದು ನಾರದನು ಹೇಳುವದು ಇದಕ್ಕಾಗಿಯೇ—'ಸಮತಾವಾದ' ಎಂಬ ಶಬ್ದವನ್ನೂ ಕೇಳದ ಕೆಲವು ಹಳ್ಳಿಗರಿರಬಹುದು. ಅಂಥವರನ್ನು ಹುಡುಕಿಕೊಂಡು ಹೋಗಿ ಅದರರ್ಥವನ್ನು ಹೇಳಿಕೊಟ್ಟವ್ದಕ್ಕಾಗಿ, ಜಸ್ಟಿಸ್ ಪಾರ್ಟಿಯವರನ್ನೂ, ಈಗಿನ ಕುರುಕ್ಷೇತ್ರವನ್ನೂ ಬಾಯಿತುಂಬಾ ಹೊಗಳುತ್ತೇನೆ—ಕೇಳಿಬಿಡಿ–ಭಲೆಭಳಿರೆ । ಶಹಭಾಸು । ಈ ಮುತಪ್ರಚಾರಕರೆ ॥ ನಿಮ್ಮ ಬಡವರ ಸೇವೆ ಬಹು ಸಾರ್ಥಕ! ॥ ನರನಾರಾಯಣ!

○

ದ ಕ. ದಲ್ಲಿಯೂ ಪೀಪಲ್ಸ್ ಪಾರ್ಟಿಯೆಂಬ ಹೆಸರಿನದು ಒಂದು ಉಂಟು ಎಂದು ಇತ್ತೀಚೆಗಿನ ಕೆಲವು ದಿನಗಳಿಂದ ತಿಳಿದು ಬಂದಿದೆ. ಎಸೆಂಬ್ಲಿಗೆ ಉಮೇದ್ವಾರರಾಗುವ ಕೆಲವು ಮಹಶೀಯರಿಗೆ ಐದಾರೇ ಅಕ್ಷರಗಳುಳ್ಳ ಹೆಸರುಗಳಿರುತ್ತವೆ. ಇಷ್ಟು ದೊಡ್ಡ ಎಸೆಂಬ್ಲಿಗೆ ಹೋಗುವವರು ಅಷ್ಟು ಗಿಡ್ಡ ಹೆಸರನ್ನಿಟ್ಟುಕೊಂಡು ಹೇಗೆ ನಿಲ್ಲಲಿ ಎಂಬ ಶಂಕೆಯಿಂದ ಕೆಲವರು ಈ ವಾರ್ಟಿಯ ಹೆಸರನ್ನೂ ತಮ್ಮ ಹೆಸರುಗಳೊಟ್ಟಿಗೆ ಸೇರಿಸಿಕೊಂಡಿದ್ದಾರೆ-ಇದರಿಂದ ಪೀಪಲ್ಸ್ ವಾರ್ಟಿಗೆ ಅವರ ಹೆಸರು ಇಲ್ಲಿ ಹುಟ್ಟಿದಂತಾಯಿತು. ಈ ಮಹನೀಯರಿಗೆ ತಮ್ಮ ಹೆಸರು ಒಂದಿಷ್ಟು ಬೆಳದಂತಾಯಿತು-ಮಿಕ್ಕವರಿಗೆ ಯಾರಿಗೂ ಏನೂ ಉಪದ್ರವಿಲ್ಲ! ಅನ್ಯರನು ಪೀಡಿಸದೆ ತನ್ನಂತೆ ಬೆಳೆವನನು! ಲೋಕದೊಳಗುತ್ತಮನು ಕೇಳಿ ಜನರೆ! ॥ ನರನಾರಾಯಣ

○

'ಹಿಂದೂದೇಶದ ೩೫ ಕೋಟಿ ಜನರಲ್ಲಿ ೩ ಕೋಟಿ ಮಂದಿಗೆ ಓಟಿನ ಹಕ್ಕು ಇದೆ. ಇವರೆಲ್ಲಾ ಕೊಂಗ್ರೆಸಿಗೇ ಓಟುಕೊಡಬೇಕು. ಇಲ್ಲವಾದರೆ ಪ್ರಪಂಚದಿದಿರಲ್ಲಿ ನಾವು ನಾಚಿಕೊಳ್ಳಬೇಕಾದೀತು' ಎಂದು ವಲ್ಲಭಾಯಿ ಪಟೇಲರು ಹೇಳುತ್ತಾರೆ. ಅಂದರೆ ನಾಚಿಕೆಯೇ ಇಲ್ಲದಂತೆ ಮಾಡಬೇಕೆಂದು ಸರದಾರರು ಹೇಳುವದಲ್ಲ; ನಾವು ನಾಚಿಕೊಳ್ಳುವ ಬದಲಿಗೆ ಜಸ್ಟಿಸ್ ವಾರ್ಟಿಯವರು ನಾಚುವಂತಾಗಲಿ' ಎಂದೇ ಅವರ ಬೋಧನೆ. ಜಗತ್ತಿನಲ್ಲಿ ನಾಚಿಕೆಯೆಂಬುದೊಂದು ಬೇಕೇಬೇಕು! ಸರಕಾರದವರ ಸತಿಯೂ ಮಂತ್ರಿಗಳ ಪಕ್ಷ ॥ ಲಜ್ಜೆ ನಾಚಿಕೆಯೆಲ್ಲವವರಿಗಿರಲಿ! ॥ ನರ ನಾರಾಯಣ!

—ನಾರದ

(೭ನೇ ಪುಟದಿಂದ ಮುಂದುವರಿದುದು)

ಗಳಿಂದಲೂ ಕಿಕ್ಕಿರಿದ ಬೀದಿಗಳು, ಎಲ್ಲೆಲ್ಲಿಯೂ ಐಶ್ವರ್ಯವಂತರ ಮನೆಗಳು ಇವೆಲ್ಲಕ್ಕೂ ಮಧ್ಯದಲ್ಲಿ ಶಿಲ್ಪಿಕಲೆಯ ಸಾಕ್ಷಾತ್ ಪ್ರತಿ ಮೂರ್ತಿಯಾಗಿದ್ದು, ಸಪ್ತ ಪಾಕಾರಗಳಿಂದ ಕೂಡಿದ ರಾಜನ ಅರಮನೆಯಿಂದ ರಾಜಧಾನಿಯು ಇಸ್ಪನ್ ನಗರ್‌ವನ್ನು ಹೋಲುತ್ತಿತ್ತು. ಹೆಚ್ಚೇಕೆ? ವಿಜಯ ನಗರವು ರೋಮ್ ನಗರದಷ್ಟೇ ವಿಶಾಲವಾಗಿತ್ತು. ಪಾಯಿಸ್ ಎಂಬ ಇತಿಹಾಸಕಾರನು 'ವಿಜಯನಗರವು ಭೂಲೋಕದ ಹೆಸರು ವಾಸಿಯಾದ ನಗರಗಳೆಲ್ಲಾ ಸರ್ವಾಂಗ ಸುಂದರವಾಗಿತ್ತೆಂದು ಬರೆದಿರುವನು. ಇವೆಲ್ಲಾ ಹಿಂದೀಯರಾಗಲೀ ಕನ್ನಡಿಗರಾಗಲೀ ಹೆಗ್ಗಳಿಕೆಯಿಂದ ಬರೆದ ಲೇಖನಗಳಲ್ಲ. ನಿಷ್ಪಕ್ಷಪಾತಿಗಳಾದ ವಿದೇಶಿ ಪ್ರವಾಸಿಗಳು ಬರೆದಿಟ್ಟ ಐತಿಹಾಸಿಕ ಲೇಖನವಿರಲಿ. ಸ್ವಾಮಿ ದೇವಸ್ಥಾನದ ಕಲ್ಯಾಣ ಮಂಟಪ, ರಥ ಮಂಟಪಗಳು ಆಗಿನ ಶಿಲ್ಪಿಕಲಾ ಕೌಶಲ್ಯದ ಉತ್ತಮ ನಿದರ್ಶನಗಳಾಗಿವೆ. ಹಾಳು ಬಿದ್ದ ನಗರದ ನಳ್ಳಿನೀರಿನ ಸರಬರಾಯಿ ಯೋಜನೆಯನ್ನೂ, ಎರಡನೇ ಕೃಷ್ಣದೇವ ರಾಯನು ಜೋ ಅಡಿಲಾ ಪೊಂಟ್ ಎಂಬ ಪೋರ್ಚುಗೀಸ್ ಇಂಜಿನೀಯರಿಂದ ಮಾಡಿಸಿದ ಕೃಷಿನಿರಾವರಿ ಯೋಜನೆಗಳನ್ನೂ ನೋಡುವಾಗ ಆಗಿನ ಜನರು ತಮ್ಮ ವೃತ್ತಿ, ಕೈಗಾರಿಕೆ, ಕಸಬುಗಳಲ್ಲಿ ಪ್ರವೀಣರಾಗಿದ್ದರೆಂದು ತಿಳಿದು ಬರುತ್ತದೆ. ಮಾತ್ರವಲ್ಲದೆ ಪ್ರಜೆಗಳ ಸೌಕರ್ಯದ ಕುರಿತು ರಾಜನಿಗೆ ತುಂಬಾ ಆಸಕ್ತಿಯಿದ್ದಿತೆಂದೂ ಹೇಳ ಬಹುದು.

ವಿಜಯನಗರದ ಶ್ರೇಣಿದೆಸೆ

ಎರಡನೇ ಕೃಷ್ಣದೇವರಾಯನ ಕಾಲದಲ್ಲಿ ವಿಜಯನಗರ ಸಾಮ್ರಾಜ್ಯವು ಪ್ರಾದುರ್ಭಾವದ ಪರಮಾವಧಿಯನ್ನು ಹೊಂದಿತೆಂದು ಹೇಳಬಹುದು. ದಖ್ಖಣದ ಪ್ರಸ್ಥ ಭೂಮಿಯಲ್ಲಿ 230 ವರ್ಷಕಾಲ ತಲೆಯೆತ್ತಿ ನೈಭವದಿಂದ ಮೆರೆದ ವಿಜಯನಗರವನ್ನು ಸದೆಬಡಿಯಲು, ಬಿಜಾಪುರ, ಅಹಮ್ಮದ್ ನಗರ ಗೊಲ್ಕೊಂಡ ಮತ್ತು ಬಿದರ್ ಸಂಸ್ಥಾನಗಳ ಮುಸಲ್ಮಾನ ಸುಲ್ತಾನರು ಏಕಸ್ವರಾಗಿ ಸಮರ ಸನ್ನಾಹ ಮಾಡತೊಡಗಿದರು. 1565ರಲ್ಲಿ ತಾಳಿಕೋಟೆಯಲ್ಲಿ ನಡೆದ ಭಯಂಕರ ಯುದ್ಧದಲ್ಲಿ ವಿಜಯನಗರವು ಅಸಜಯ ಹೊಂದಿ ಕರ್ನಾಟಕಾಧಿಪತ್ಯವು ನಿರ್ನಾಮವಾಗಿ ಹೋಯಿತು. ತನ್ನ ಕೆಲವು ಸೇನಾ ನಾಯಕರ ಒಳಸಂಚಿನಿಂದ ಪರಾಜಯ ಹೊಂದಿದ ವಿಜಯನಗರದ ಸಾಮ್ರಾಜ್ಯ ಶಾಹಿಯ ದರ್ಪವು ಮಣ್ಣುಪಾಲಾಯಿತು.

ಕರ್ನಾಟಕಾಧಿಪತ್ಯದ ಪ್ರಾದುರ್ಭಾವದ ಕಾಲದಲ್ಲಿ ಕನ್ನಡ ಸಾಹಿತ್ಯದ ತವರು ಮನೆಗಿದ್ದು, ಕನ್ನಡಗರಿಗೊಂದು ಯಾತ್ರಾ ಸ್ಥಳವಾಗಿದ್ದ ಹಾಳು ಹಂಪಿಯ ಪುಣ್ಯ ಭೂಮಿಯಲ್ಲಿಯೇ ಇದೇ ದಶಂಬರ ತಿಂಗಳ 25 ರಿಂದ 28ರವರೆಗೆ ವಿಜಯನಗರ ಸಾಮ್ರಾಜ್ಯದ ಆರನೇ ಶತಮಾನೋತ್ಸವ ಸಮಾರಂಭವು ಅಖಿಲ ಕನ್ನಡಿಗರ ನೇತೃತ್ವದಲ್ಲಿ ಜರಗಲಿಕ್ಕಿರುವುದು. ಈ ಸಂದರ್ಭದಲ್ಲಿ ಈ ಮಹೋತ್ಸವ ಸಮಾರಂಭದಲ್ಲಿ ಸಹಭಾಗಿಗಳಾಗಿ, ಹಂಪಿಯ ಭಗ್ನಾವಶೇಷಗಳನ್ನು ಪ್ರತ್ಯಕ್ಷ ನೋಡಿ, ಕರ್ನಾಟಕದ ಏಕೀಕರಣ ಚಳವಳಿಕ್ಕೆ ತಮ್ಮ ಸಂಪೂರ್ಣ ಸಹಕಾರ ಸಹಾನುಭೂತಿಯನ್ನು ತೋರಿಸುವುದು ಅಖಿಲ ಕನ್ನಡಿಗರ ಕರ್ತವ್ಯ.

ಚಕ್ರಬಂಧ ಒಗಟು

ಈ ವಾರ ಪ್ರಕಟವಾಗಿದ್ದ ಚಕ್ರಬಂಧ ಒಗಟಿನ ಉತ್ತರವನ್ನು ಬರುವ ವಾರ ಪ್ರಕಟಿಸಲಾಗುವದು. ಉತ್ತರಗಳನ್ನು ಕಳುಹಿಸುವವರು ತಾ. 28-12-1936 ರೊಳಗೆ ನಮ್ಮ ಕೈಸೇರುವಂತೆ ಕಳುಹಿಸಬಹುದು.

ಮೆನೇಜರ್ 'ನವಯುಗ'

ನವಯುಗಕ್ಕೆ
ಇಂದೇ ಚಂದಾದಾರರಾಗಿರಿ
ವಾರ್ಷಿಕ ಚಂದಾ
ಅಂಚೆವೆಚ್ಚ ಸೇರಿ ೩—೪—೦

= ವಿಶ್ವಕಿರುಕುಳ =

ಎಡ್ವರ್ಡ್ ರಾಜರು

ಯಾವ ಬೇನೆಯನ್ನೂ ತೋರಿಸದೆ ಘನ ಸ್ಥಿತಿಯೊಡನೆ ಸಿಂಹಾಸನದಿಂದ ಕೆಳಗಿಳಿದರು. ಇಡೀ ಲೋಕದಲ್ಲೇ ಮಹತ್ತಾದ ಗೌರವವಿರುವ ಸ್ಥಾನವನ್ನು ಬಿಡುವಾಗಲೂ ಆ ಸ್ಥಾನಾಧಿಪತಿಯ ಗೌರವವನ್ನು ವುದರಿಸಿ ಬಿಟ್ಟರು ಸಾಮ್ರಾಜ್ಯಕ್ಕಾಗಿ ಕಿರೀಟವನ್ನು ಬಿಡಬೇಕಾದ ಸಂದರ್ಭವನ್ನು ಬ್ರಿಟಿಷರು ಅವರಿಗೊದಗಿಸಿ ಕೊಟ್ಟರು–ಏಕೆಂದರೆ ಬಾಲ್ಡ್ವಿನರೇ ಮೊದಲಾದವರು ಈ ರೀತಿ ವಿಚಕ್ಷಣತೆಯಿಂದ ಸಾಮ್ರಾಜ್ಯ ಗೌರವವನ್ನು ಕಾಸಾಡಿದರೆ, ರಾಜರು ತನ್ನ ಆಸುವ ಮ ತ್ಯಾಗದೊಡನೆ ಆ ಗೌರವವನ್ನು ರಕ್ಷಿಸಿದರು. ಅಂತೂ ಬ್ರಿಟಿಷರಲ್ಲಿ ರಾಜರಿಂದ ಪ್ರಜೆಗಳ ವರೆಗೆ ಎಲ್ಲರೂ ತಮ್ಮ ಸರ್ವಶಕ್ತಿಯನ್ನು ಸಾಮ್ರಾಜ್ಯಕ್ಕಾಗಿ ವಿನಿಯೋಗಿಸುವರೇ!

ನಮ್ಮಲ್ಲಾದರೆ?

ಹಿಂದೀಯರಿಗೂ ಒಂದು ಜನ್ಮ ಭೂಮಿಯಿದೆ! ಅವಲ್ಲಿಯೂ ಪ್ರಜೆಗಳನ್ನು ಆಳುವ ಅಲ್ಪಸ್ವಲ್ಪ ಅಧಿಕಾರವನ್ನಾದರೂ ಪಡೆದಿರುವ ಅಧಿಕಾರಿಗಳಿದ್ದಾರೆ. ದೇಶಕ್ಕಾಗಿ ಅವರು ಮಾಡಬೇಕಾಗಿರುವ ಕರ್ತವ್ಯಗಳೂ ಆಗಾಗ ಅವರ ಕಣ್ಣಮುಂದೆ ಬರುವದುಂಟು. ಆದರೆ ಅವರ ದೃಷ್ಟಿ ಮಾತ್ರ ಯಾವಾಗಲೂ ಸಂಗಮವಾಗುವದು ಮೇಲಧಿಕಾರಿಗಳ ಕೃಪಾದೃಷ್ಟಿಯೊಡನೆ! ಆ ಮೇಲಧಿಕಾರಿಗಳಾದ ಆಂಗ್ಲೇಯರ ದೃಷ್ಟಿಯಿರುವದು ಯಾವಾಗಲೂ ಸಾಮ್ರಾಜ್ಯ ಹಿತದ ಮೇಲೆ. ಅಂತೂ ಹಿಂದೀ ಅಧಿಕಾರಿಗಳಿಂದ ತೊರೆ ತೊರೆಯಾಗಿ ಹರಿದು ಬ್ರಿಟಿಷ್ ಅಧಿಕಾರಿಗಳೊಡನೆ ನೆರೆಯಾಗಿ ಬೆರೆದು ಎಲ್ಲಾ ಹೋಗಿ ಸಂಗಮವಾಗುವದು ಬ್ರಿಟಿಷ್ ಸಾಮ್ರಾಜ್ಯವೆಂಬ ಮಹಾ ಸಮುದ್ರದಲ್ಲಿ.

ಚೀನದ ಅಂತಃಕಲಹ

ಚೀನದ ಅಂತಃಕಲಹವು ಮುಗಿದಿಲ್ಲ ಲೋಕದ ಎಲ್ಲಾ ರಾಷ್ಟ್ರಗಳಿಗಿಂತ ಚೀನದಲ್ಲಿ ಜನಸಂಖ್ಯೆ ಹೆಚ್ಚು, ತಮ್ಮೊಳಗೆ ಗಡಿಬಿಡಿಯೂ ಹಚ್ಚು. ಚೈನದ ಸರ್ವಾಧಿಕಾರಿಯಾದ ಮಾರ್ಷಲ್ ಚಿಯಾಂಗ್ ಕೈಶೆಕ್ ಇವರನ್ನು ಒಬ್ಬ ಪಳಪತಿಯಾದ ಜನರಲ್ ಸ್ಟ್ರಾಂಗ್ ಸ್ಟೆಲಿಯಾಂಗರು ಬಂದಿಸಿಟ್ಟುರಸ್ಯ ಮೊಡನೆ ಒಪ್ಪಂದ ಮಾಡಿಕೊಂಡು ಜಪಾನರನ್ನು ವಿರೋಧಿಸಬೇಕೆಂದು ಪೀಡಿಸುತ್ತಿರುವರು. ಚೈನದ ಮಂತ್ರಿ ಮಂಡಲದವರು ಸಭೆ ಸೇರಿ ಸ್ಟೆಲಿಯಾಂಗರು ದೇಶದ್ರೋಹಿಗಳೆಂದು ತೀರ್ಮಾನಿಸಿ, ಅವರನ್ನು ಸೆರೆಹಿಡಿಯಲು ಸೈನ್ಯವನ್ನು ಕಳುಹಿಸುವರು. ಹೀಗೆ ಚೀನದ ಮುಖಂಡರು ಒಬ್ಬರನ್ನೊಬ್ಬರು ಸೆರೆ ಹಿಡಿಯಲು ಮನಸು ಮಾಡಿರುವಾಗ ಜಪಾನು ಇಡೀ ಚೀನವನ್ನೇ ಸರಹುಡಿಯಲು ಯೋಚಿಸಿರುವದು!

ಇದರ ಪರಿಣಾಮ?

ಈ ಎಲ್ಲಾ ವಿದ್ಯಮಾನಗಳು ಜಪಾನಿನವರು ಚೀನವನ್ನು ಜಗಿಯದೇ ನುಂಗಬೇಕೆಂದು ಒಳಗಿಂದೊಳಗೆ ನಡಿಸುವ ಹೆಂಚಿಕೆಯ ಪರಿಣಾಮಗಳು. ಚೀನೀಯರಲ್ಲಿ ಸ್ವಾಭಿಮಾನವೆದ್ದಿದೆ. ಅವರು ಸುಲಿಗೆಯ ಪರಮಾವಧಿಯನ್ನೂ ಸಹಿಸಿಯಾಯಿತು ಇನ್ನೂ ಜಪಾನರು ಕೃಹಾಕುವದಂದರ ಅವರ ಎಪೆಯನ್ನೇ ತಿವಿಯಲಿಕ್ಕೆ! ಅವಕ್ಕಾಗಿ ರಸ್ಯದೊಡನೆ ಸಹಕರಿಸಿಯಾದರೂ ಜಪಾನಿಗೆ ಪ್ರತೀಕಾರಮಾಡಬೇಕೆಂದು ಚೀನೀಯರಿಗನ್ನಿಸಹತ್ತಿದ. ಒಂಪೊಮ್ಮೆ ಚೀನವು ರಸ್ಯವನ್ನು ಕರೆದರೆ ಜಪಾನು ಜರ್ಮನಿಯನ್ನು ಕರೆಯುವುದು. ಆಗ ಲೋಕವನ್ನೇ ಯುದ್ಧವು ಕರೆದರೂ ಕರೆಯಬಹುದು.

ಸ್ಪೈನಿನಲ್ಲಿ

ದಂಗೆಗಾರರಿಗೆ ಈ ವರೆಗೂ ಮೇಲ್ದ್ರಿವನ್ನು ಹಿಡಿಯಲಿಕ್ಕಾಗಿರುವದಿಲ್ಲ; ಇತ್ತೀಜೆಗೆ ನಡೆದ ಮುತ್ತಿಗೆಯಲ್ಲಿ ದಂಗೆಗಾರರು ತಮ್ಮ ವ್ಯಾಣವನ್ನೇ ತಾವು ಹಿಡಿದುಕೊಂಡು ಪಲಾಯನಮಾಡಿದರೆಂದು ಗೊತ್ತಾಗಿದೆ. ಸರಕಾರದ ಕೇಂದ್ರವನ್ನು ಮುತ್ತಿ ಈ ವರೆಗೂ ಒದ್ದಾಡಿ ಫಲದೊರಕಿಲ್ಲ, ಈಗ ಸರಕಾರದವರೇ ದಂಗೆಗಾರರ ಕೇಂದ್ರವನ್ನು ಮುತ್ತಿ ನೋಡೋಣವೆಂದು ಬರ್ಗೋ ನಗರದ ಮೇಲೆ ಧಾಳಿಯಿಡಲು ಹೊರಟಿದ್ದಾರೆ. ನಾಲ್ಕೂ ಕಡೆಗಳಿಂದ ಸೇನೆಗಳು ಮುಂದುವರಿಯುತ್ತವೆ. ಮೇದ್ರಿದ್ನಿನಷ್ಟು ನಿರ್ದಾಕ್ಷಿಣ್ಯತೆಯನ್ನು ಬರ್ಗೋ ಪಟ್ಟಣವು ತೋರಿಸಲಾರದಂದು ನಮ್ಮ ಭಾವನೆ ಹಾಗಾದರೂ ದಂಗೆಗಾರರ ಬೆಂಬಲಕ್ಕೆ ಲೋಕದ ಅಗ್ರಗಣ್ಯ ಸಿರ್ವಾಕ್ಷಿಣ್ಯವಂತ ರಾಪ ಹಿಟ್ಲರ್, ಮುಸಲೋನಿಗಳಿರುವರಲ್ಲ.

ರಾಜಿ ಬೇಕಾಯಿತು!

ಈ ನಡುವೆ ಇಂಗ್ಲಿಷ್ ಮತ್ತು ಫ್ರಂಚರು ಭಾರೀ ರಾಜಿಯನ್ನಾನಲ್ಲಿ ಬಿದ್ದಂತಿದೆ. ಇತ್ತಂದದವರೂ ಹೋರಾಡಿ ಹೋರಾಡಿ ಕೈನೋತರೆಂದಾದ ಮೇಲೆ ರಾಜಿನಾದುವ ಉಮೇದು ಈ ಇಂಗ್ಲಿಷ್–ಫ್ರೆಂಚರಿಗೆ ಜಾಸ್ತಿ! ರಾಜಿಮಾಡುವವರಿಗೆ ಉಮೇದು ಬರಬೇಕಾದುದು ಯುದ್ಧಮಾಡುವವರ ಉಮೇದು ಇಳಿವ ಹೊತ್ತಿನಲ್ಲೆ! ಈಗ ಇವರ ಸಂಧಿ ಸೂಚನೆಗಳು ಜರ್ಮನಿ, ಇಟಲಿ, ರಸ್ಯದವರಿಂದ ಅನುಮೋದಿಸಲ್ಪಟ್ಟವೆ. ಸಂಧಿಗೆ ಹೊರಡುವವರು ತಿಥಿ, ನಕ್ಷತ್ರ, ಕಾಲಗಳನ್ನು ನೋಡಿಕೊಂಡೆ ಹೊರಡಬೇಕೆನ್ನುವದು ಇದಕ್ಕಾಗಿ!

ಸಂಧಾನದ ಹುರುಳು

ಸ್ಪೈನಿನ ಜನರ ಬಹುಮತವು ಯಾವ ಕಡೆಗಿದೆ ಎಂಬುದನ್ನು ತಿಳಿದುಕೊಂಡು ಅವರಂತೆ ನರ್ತಿಸಿದರಾಯಿತೆಂದು ಬ್ರಿಟಿಷ್ ಮತ್ತು ಫ್ರಂಚರ ಸೂಚನೆ 'ಫ್ಯಾಸಿಸ್ಟ್' ಸೋಸಿಯಲಿಸ್ಟ್'ಗಳು ಎಳೆದಾಡುವಾಗ ಪ್ರಜಾಸತ್ತಾವಾದಿಗಳು ಮಧ್ಯವರ್ತಿಗಳಾಗಿ ಬಂದಿದ್ದಾರೆ. ಏಟಿನ ಮೂಲಕವಾಗಲಿರುವ ನಿರ್ಧಾರವನ್ನು ಓಟಿನ ಮೂಲಕ ಮಾಡೋಣವೆಂದು ಇವರ ಅಂಬೋಣ. ಇದು ಸಾಧ್ಯವೆ? ಈ ತನಕಸ್ಪೈನಿನಲ್ಲಿ ಬೊಂಬುಗಳು ನುಂಗುತ್ತಿದ್ದುದು ನಿರ್ಜೀವದೇಹಗಳನ್ನಲ್ಲ, ಅಭಿಮತದೊಡನೆ ಕೂಡಿರುವ ಪ್ರಾಣಗಳನ್ನೆ! ಈಗ ಮಾತ್ರ, ಆ ಅಭಿಮತಕ್ಕೆ ಯುದ್ಧವನ್ನು ನಿಲ್ಲಿಸುವ ತ್ರಾಣವೆಲ್ಲಿಂದ ಬಂತಂಬುದೇ ಪ್ರಶ್ನೆ ಆಧವಾ ಬ್ರಿಟಿಷ್–ಫ್ರಂಚರಿಗೆ ಈ ಸೂಚನೆಮಾಡುವ ತ್ರಾಣ ಮಾತ್ರವಿದ್ದುದು ಇದಕ್ಕೆ ಕಾರಣವಾಗಿರಲೂಬಹುದು

ಮುಸಲನಿಯ ದರ್ಪ

'ಇಡೀ ಅಬಿಸೀನಿಯವು ನೆರೆಸಿಕ್ತಿಯಾಯಿತು. ಬಿಗಿಯಾಗಿ ಹಿಡಿಯಲ್ಪಟ್ಟಿ ಕೂರಸಿಗಳಿಂದ ತದಪ್ಪ ರಕ್ಷಿಸಲ್ಪಡುವದು' ಎಂದು ಮುಸಲನಿಗಳು ಇಟೆಲಿಯ ನ್ಯಾಯವಿಧಾಯಕ ಸಭೆಯಲ್ಲಿ ಹೂಂಕರಿಸಿದರು. ಹಾಗೆ ಮಾಡುವದು ನ್ಯಾಯನಲ್ಲವೆಂದು ಲೋಕವಿಡೀ ಮುಸಲನಿಗೆ ಹೇಳಿಯಾಯಿತು. ಅವರು ಕೇಳಲಿಲ್ಲ; ಇನ್ನು ಮುಸಲನಿಗೆ ಹೇಳುವದನ್ನು ನಾವಾದರೂ ಕೇಳೋಣವೆಂದು ಲೋಕದ ಮತ್ತ. ಮುಸಲನಿಯವರಿಂದಾಗಿದಿದ್ದುದು ಲೋಕದವರಿಂದಾಯಿತಲ್ಲ! ಈಗ ಮಳೆಗಾಲ ಮುಗಿದಿದೆ, ಇನ್ನೂ ಮುಸಲನಿಯ ಹಿಡತದೊಳಗೆ ಬಂದಿರದ ಭಾಗವು ಅಬಿಸೀನಿಯದಲ್ಲಿದ್ದರೆ, ಜಲ್ಲಿ ಸದ್ಯಕ್ಕೆ ಜೊಂಬಿನ ಜಡಿಮಳೆಗಾರಂಭವಾದರೆ ಸರಿ.

NOTICE

Is hereby given that the partnership carried on by Messrs. K. Upendra Subraya Kamath and K. Narayan Avadhani under the style of "Kattapadi Upendra Kamath & Co" has been dissolved on 14-11-1936, the assets and liabilities having been taken over by the aforesaid K. Upendra Subraya Kamath

ಕೆ. ಉಪೇಂದ್ರಕಾಮ್ತ ರುಜು
ನರಹರಿ ಅವಧಾನಿ ರುಜು

Kallianpur
21-12-1936

ಭಾಷಾಂತರಕಾರರು

ದೊರೆಯದೆ ಹೇಚಾಡುವಿರೇಕೆ?

ಇನ್ಯೂರೆನ್ಸ್ ಕಂಪೆನಿ, ಬ್ಯಾಂಕು ಮೊದಲಾದವುಗಳಿಗೆ ಸಂಬಂಧವಿಟ್ಟ ಮತ್ತು ಇತರ ಎಲ್ಲ ತರದ ಇಂಗ್ಲಿಷ್ ಕನ್ನಡ ಭಾಷಾಂತರಗಳನ್ನು ಉತ್ತಮ ರೀತಿಯಿಂದ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸದೊಡನೆ ಪತ್ರ ವ್ಯವಹಾರ ಮಾಡಬೇಕು.

'ಟ್ರಾನ್ಸ್‌ಲೇಟರ್,'
C/o 'ತಿರಿಯರ ಪ್ರಪಂಚ,' ಉಡುಪಿ

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ ಆಶ್ಚರ್ಯಕರವಾದ ಔಷಧಿ.

ಡಾ. ಜಸಾನಿಯವರ

ಜಗತ್ಪ್ರಸಿದ್ಧ

"ಗೊನೊಕಿಲರ್"

(ರಿಜಿಸ್ಟರ್ಡ್)

GONO KILLER

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಆಪತ್ತಿನ ದಿನದ ಅಂಗ್ಲೇಯ ಮತ್ತು ಆಯುರ್ವೇದ ದಿನೌಷಧಿಗಳೊಂದೂ ಫಲಕಾರಿಯಾಗದೇ ಇರುವಷ್ಟಕ್ಕೆ ಮುಂಪಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನಮ್ಮ **ಗೋನೋಕಿಲರ್** ಎಂಬ ದಿವ್ಯವನ್ನು ಉಪಯೋಗಿಸಿನೋಡಿರಿ ಎಷ್ಟೇ ದೀರ್ಘಕಾಲದಿಂದ ಆನುಭವಿಸಿ ಬಂದ ತೀವ್ರರೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾಧಿಗಳಿಗೆ, ಜನನೇಂದ್ರಿಯಗಳಲ್ಲಿ ಬಾತುವಿಕೆ, ಸರ್ವಪ್ರಕಾರದ ಪ್ರಮೇಹ (ಎಷ್ಟೇ ಹಳತು ಆ ದುವರೆ ಸ್ಥಿತಿಯಿದ್ದರೆಲ) ಸೋಪು, ಮೂತ್ರದ್ದುರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿಕೆ, ಬಾಸ್ಪಾವ, ಬೆಳಪು ಪರಿಯುವದು ಇವೇ ಮೊದಲಾದ ಯಾವತ್ತ ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಮಿತ್ತ ಗುಣಕಾರಿ

ಬೆಲೆ ೫೦ ಮಾತ್ರೆಗಳ ಬಿಡ್ಡಿಯೊಂದಕ್ಕೆ ರೂ ೨—೦—೦ (ಸೂರು) ವಿ ಪಿ ಧಾರ್ಜು ಬೇರೆ

ತಯಾರಿಸುವ ವಿಕಮಾತ್ರರು ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ್ ಬ್ಯಾಕ್ ರೋಡ್, ಮುಂಬಯಿ ೪

Sole Manufacturer Dr D. N. JASANI, GIRGAUM BACK ROAD, BOMBAY 4

ನಕಲಿ ನುದ್ದಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

ದ್ವಿತೀಯ ಸಂಸ್ಕರಣ

ಕಾವ್ಯಸಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ ಕವಿ ಪ್ರಮುಖರ
೪೮ ಸುಗಿಗವನಗಳ ಸಂಗ್ರಹ

ಕವಿಯರ ಚಿತ್ರ ಪಟಂಚ

ಚೆಲೆ ಸಸ್ತೆರಡಾಣ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ನರೆಗೆ ಯಾರೂ ಹಿಡಗಿಸಿ ಕೂಟ್ಟಿರುವುದಿಲ್ಲ' ಎಂಬ ಪುಸ್ತಕಗಳಿಗೆ ಉತ್ತರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ತೂಂದಿದ ಗ್ರಂಥ' ಬಾಹ್ಯಾಂಗವು ನಯನಮನೋಹರವಾಗಿದ ಅಂತರಂಗವು ಜೀತೋಪಯೋಗಿಯಾಗಿದ

ಉಡುಪಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮನೇಜರ್—'ನವಯುಗ',
ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿವಿಧ ತಾಮ್ರದ ಪಾತ್ರೆಗಳು

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ, ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಕಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾಜೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕಟಲಾಗಿಗೆ ಬರೆಯಿರಿ.

ಕಲ್ಕಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ ಮಲಯಾಳದ

ಸ್ವನೋಸ್ತೇಧಃ

THE MALAYALA SWANO-STHEDAH OUSHADHA CO. Post:-CHALAPURAM MALABAR

ರಹಸ್ಯಗಳು

ಇದೀಗ ತೀಡಬಂದಿರಿ ಧಾರುಣರೆನ್ನುವದು ಆಕರ್ಷಿಸುವದೆಂಬುದನ್ನು ಸ್ತ್ರೀಯರಿಗೆ ಒಬ್ಬರು ನೀವು ಸುರೂಪಸಿನೊಬ್ಬನನ್ನು ಪರೀಕ್ಷಿಸಿ ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯ ಮುಂದೆ ಕೆಳಗೆ ಇಚ್ಛೆಯಿಲ್ಲದೆ ಜಲಿಸಿ ಕುಚಗಳು ಉನ್ನತವಾಗಿ, ಯೋನಿಯು ಯಥಾವಸಯುಕ್ತವಾಗಿ ಆಕರ್ಷಕವಾಗಿರುವವೋ ಎಂದು ನೋಡುವವ

೪೮ ದಿವಸಗಳೆಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು

ಪ್ರಖ್ಯಾತ ಮಲಯಾಳಿ ರಹಸ್ಯ ಸ್ವನಸ್ಥೆಡೆ:—ಅಶಕ್ತ, ಚಿಂತೆ, ಪ್ರಾಯ ಆಗಾಗಿನ ಹಿರಿಗೆ ನಿಮಿತ್ತ, ಸ್ತ್ರೀಯರ ಎದೆಯ ಅಳಶತೆಯ ನಷ್ಟವಾಗಿದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಜಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿದ್ದುಕೊಂಡಿದ್ದರೆ, ಟೊಳ್ಳಾಗಿ ಆಕರ್ಷಣ ಶಕ್ತಿ ತಗ್ಗಿದ್ದರೆ, ನರಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳ ಔಷಧ ಕಂಪೆನಿ, ಥಲಪುರಮ್ ಇವರು ತಮ್ಮ ಪ್ರಖ್ಯಾತ ಚಿಕಿತ್ಸೆಯಿಂದ ಸಹಾಯಮಾಡುವರು, ಬಿದ್ದುಕೊಂಡಿದ್ದು ವಿರೂಪವಾಗಿ ಚಪ್ಪಟೆ ಯಾಗಿರುವ ಕುಚಗಳು ಸರಿಯಾಗಿ ಬೆಳೆಸಲ್ಪಡುವವು, ಟೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮೂಡಲ್ಪಡುವುವ ಸಡಿಲವಾಗಿರುವನರೂಂಪವು ಮತ್ತು ಕುಚಗಳು ಯೋಗ್ಯವೂ ಹೊನೋಹರವೂ ಆದ ರೂಪಕ್ಕೆ ತರಲ್ಪಡುವವ ತಮ್ಮ ಸೌಂದರ್ಯಕ್ಕೆ ಪ್ರೆಸಿದ್ಧಿಪೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಗತ್ಪ್ರಸಿದ್ಧವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವ

ಸ್ವನಸ್ಥೆಡ ನಂಬ್ರ 20. ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩ ನಂಬ್ರ 21. ಹೊರಗಣ ಉಪಯೋಗಕ್ಕೆ ರೂ. ೩ ಧರ್ಮಾರ್ಥ ಕಳುಹಿಸಲ್ಪಡುವ ಕಟಲಾಗಿಗೆ ಡಯಮಾಡಿ ಬರೆಕೊಳ್ಳಿ

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಥಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಋತುವೇದನೆಗಳು, ಸಂತತಿ ನಿರೋಧ, ಧಾತುಪುಷ್ಟಿ, ಲಿಂಗವೃದ್ಧಿ, ಗುಹ್ಯೇಂದ್ರಿಯ ರೋಗಗಳು, ಕ್ಷಯಸಂಹಾರಿ, ವಾತರೋಗಕ್ಕಾಗಿ ಕ್ಷೀರಬಲ

ಪತ್ರವ್ಯವಹಾರ

(ಚಾಕ್ಮಿದಾರರು ತಮ್ಮ ಸಂಪೂರ್ಣ ವಿಳಾಸವನ್ನು ನಮಗೆ ಕೊಡಬೇಕಾಗಿದೆ. ಚಾಕ್ಮಿಗಳು ಅಡಮ್ಟು ಸಂಕ್ಷೇಪವಿಲ್ಲದೆ ಕಾಗದದ ಒಂದೇ ಮುಗ್ಗುಲಲ್ಲಿ ಶಾಯಿಯಿಂದ ಬರೆಯಲ್ಪಟ್ಟು ಸ್ಪಷ್ಟವಾದ ಅಕ್ಷರಗಳಲ್ಲಿರಬೇಕು. ಚಾಕ್ಮಿದಾರರ ಅಧಿಕಾರ್ಯಗಳಿಗೆ ನಾವು ಜವಾಬ್ದಾರರಲ್ಲ.) ಸಂ. ನ

ಇದೇ ತಾ. ೧೩–೧೨–೩೬ರ ಪೃಷ್ಠಾತ ವಿಜಾಪತ್ರಿಕೆಯಲ್ಲಿ ಮೂಲ್ಕರ ಯಾನೆ ಕುಲಾಲರ ಎಜ್ಯಾನ್ಸ್ ಮೆಂದು ಎಸೋಸಿಯೇಶನ್ ಯಾನೆ ಜಾತ್ಯಾಭ್ಯುದಯ ಸಂಘದ ತಾ. ೨೬–೧೨–೩೬ರಲ್ಲು ಜರಗುವ ಸಭೆಯಲ್ಲಿ ಸ್ವಸಮಾಜದ ಶಿಮೆ ಗುರಿಕಾರರು ಮತ್ತು ೧೬ ಮಾಗಣಿ ಗುರಿಕಾರರು ಯೂರೆಂಬುದನ್ನು ನಿರ್ಧರಿಸುವದು, ಸಮಾಜದೊಳಗೆ ನಡೆಯುವ ಕಲಹ ಪರಿಹಾರದ ಕುರಿತು ಆಲೋಚನೆ ಮೊದಲಾದ ಮಹತ್ಕದ ವಿಷಯಗಳನ್ನು ಚರ್ಚಿಸಲ್ಪಡುವದೆಂಬ ವರ್ತಮಾನೀಪ ಬಹಳ ಆಶ್ಚರ್ಯವಾಗುತ್ತದೆ. ಈ ಮೇಲಿನ ವರ್ತಮಾನದಿಂದ ಈ ಸಮಾಜವು ಒಂದು ಹೊಸ ಕಾಲ್ಪನಿಕ ಸಮಾಜವೆಂದೂ ಅದು ಇಸ್ಪರ ವರೆಗೆ ಯಾವುದೊಂದು ವಿಧವಾದ ಜಾತೀಯತೆಯ ತಮ್ಮ ನ್ಯಾಯವನ್ನು ಒಪ್ಪಿಸಿಕೊಟ್ಟು ತೀರ್ಮಾನವನ್ನು ಹೊಂದುವದು ಈ ಮೇಲಿನ ವರ್ತಮಾನವನ್ನು ಕೊಟ್ಟರುವ ಮತ್ತು ಅವರನ್ನು ಅನುಸರಿಸುವದು ಕೂಡಾ ತಿಳಿದಿರಲು ಪುನಃ ಅವರು ಯಾರೆಂಬುದನ್ನು ಪ್ರತ್ಯೇಕ ತಿಳಿಯುವ ಅವಶ್ಯ ಕಾಣುವದಿಲ್ಲ. ಯಾಕೆಂದರೆ ಉದಾಹರಣೆಗಾಗಿ ಮ. ರಾ. ರಾ. ಕೆದ್ರಿಕೋಟಿ ಮೂಲ್ಕರು ಹೋಬಳಿ ಶಿಮೆಯ ಗಸೇ ಗುರಿಕಾರರೆಂದು ಸ್ವಜಾತಿ ಸರ್ವನಾಮವನ್ನು ಗೈಪತ್ಯರೂ ಪೂತಾರಿಗಳೂ, ಅಲ್ಲದೆ ಅವರಿಂದ ಜಾತಿಯ ಕಲಹದ ಕುರಿತು ನ್ಯಾಯವನ್ನು ಹೊಂದಿದ ಸರ್ವರೂ ಅರಿತಿರುವರು. ಆದುದರಿಂದ ಜಾತಿಯ ಕಲಹ ಪರಿಹಾರದ ಕುರಿತು ಈ ವರೆಗೆ ಯಾರೆಲ್ಲ ನಿರ್ದೇಶಿಸಲ್ಪಟ್ಟಿರುವರೋ ಅವರವರು ಆ ಸ್ಥಾನದಲ್ಲಿರುವದು ಎಲ್ಲರಿಗೂ ತಿಳಿದ ವಿಷಯವಾಗಿರುವದು. ನಿತಾ ಸಮಾಜದ ಕಲಹ ಪರಿಹಾರದ ಕುರಿತು ಪ್ರತ್ಯೇಕ ಒಂದು ಸಂಸ್ಥೆಯೂ ಸಂಘವು ಅಗತ್ಯವಿರುವಿಲ್ಲ ಮತ್ತು ಅವಶ್ಯವೂ ಕಾಣುವುದಿಲ್ಲ. ಆದುದರಿಂದ ಸಂಘಕ್ಕೆ ಸಂಬಂಧ ಕಟ್ಟವರು ಸಂಘದ ವಿಷದುವನ್ನು ಸಮಾಜದವರಿಗೆ ತಿಳಿಸಿ ತ್ರಿಕರಣ ಶುದ್ಧವಾಗಿ ಸಮಾಜದಲ್ಲಿ ಐಕ್ಯತೆಯನ್ನೂ ಉಂಟುಮಾಡಿ ಸಹಾಯರೂಪರಾಗುವರೆಂಬ ವಿಶ್ವಾಸವಿದೆ. ಸಮಾಜದ ವಿದ್ಯಾರ್ಥಿಗಳಿಗೆ ನಿಷ್ಕೃಷ್ಟ ಕಲಿಸಲು ತಕ್ಕ ಏರ್ಪಾಡುಗಳನ್ನೂ ಮಾಡಿ ಸಮಾಜವನ್ನು ಸುಧಾರಣೆಗೆ ತರುವ ಉದ್ದೇಶವನ್ನು ಬಿಟ್ಟು ಸ್ವಾರ್ಥ ಜಾತೀಯತೆಯ ವಿಷಯದಲ್ಲಿ ಕೈಹಾಕಿ ಸಾಳಾಗುವದಲ್ಲದೆ ಕಟ್ಟಾಬಿವನ್ನು ತಂದೊಡ್ಡಿ ಸಂಘವು ಸಮಾಜಕ್ಕೆ ಭಂಗವಾಗಿ ಪರಿಣಮಿಸುವಂತೆ ಮಾಡದೆ ಸಮಾಜ ಉನ್ನತಿಯನ್ನು ಬಯಸುವುದು ಉತ್ತಮವೆಂದು ತೋರುತ್ತದೆ.

ಇತಿ, ಸಮಾಜ ಹಿತೈಷಿ,
K. L. Bangera.

ಪೋಸ್ಟಲ್ ಸುಪರಿಂಟೆಂಟರ ಅವಗಾಹನೆಗೆ

ಕುಂದಾಪುರ ತಾಲ್ಲು ತಿದ್ದಾಪುರ ಹೊಸಂಗಡಿ ಮುದಮೆಗೆ ಕಮಲತೀಲ ಬರೆಗುಂಡಿ ಹಳ್ಳಿಹೊಳೆ ಬಿಳ್ಳಳ ಅಪ್ಪು ಮಾನಂಜಿ ಈ ವಂಭತ್ತು ಗ್ರಾಮಗಳಿಗೆ ಬುಲೆ ಟಪ್ಪಾಡೆ ಆಗುವಂತೆ ವಬ್ಬ ಫ್ಯಾವೆಯನ್ನು ಇದ್ದರಿಂದ ಅನುಕೂಲವಾಗಿತ್ತು. ಈಗ 8–10 ರ್ಷಗಳಿಂದ ಶಂಕರನಾರಾಯಣ ಪೋಸ್ಟಾಪೀಸಿನಿಂದ ತಕ್ಕೊಂಡು ಸಾವಿ ಬಟ್ಟಾಡೆ ಆಗುತ್ತದೆ. ಅಂದ್ರೆ ನಿವಾರ ಆದಿತ್ಯವಾರ ವ ಸೋಮವಾರ ಟಪ್ಪಾಗೆ ಬಿದ್ದ ಕಾಗ್ದಗಳು ಇನ್ನೊಂದು ಸೋಮವಾರ ಟಪ್ಪಾಡೆ ಪ್ಯಾದೆಕೈಲಸಿಕ್ಕೆ ನಮ್ಮಗಳಿಗೆ ರುಕ್ಕವಾರ ಶನಿವಾರ ಕಾಗ್ದಗಳು ಸಿಕ್ಕುತ್ತದೆ. ಹೀಗಾಗಿ ಸೋಮವಾರ ವಗ್ಗೆರೆ ಸಿಕ್ಕುವಾಗ 15 ದಿವ್ಸವಾಗುತ್ತದೆ. ಕೆಲವೊಮ್ಮೆ ಜರೂರು ವಿಷಯಗಳಲ್ಲಿ ತೊಂದ್ರೆಯಾಗುತ್ತದೆ. ಇಷ್ಟೊ ನಷ್ಟಸಂಭವಿಸಿರುತ್ತದೆ. ಈ ಕೆಲಿತು ಪೋಸ್ಟಲ್ ಸುಪರಿಂಟೆಂಟ್‌ರವರಿಗೆ ಈ ೨ ಗ್ರಾಮಸ್ಥರು ಕೂಡಿ ಬೇಗನೆ ಒಂದು ಆರ್ಜಿ ಬರಕೊಳ್ಳುವವರಿದ್ದೇವೆ. ಈ ಕುರಿತು ಪೋಸ್ಟಲ್ ಸುಪರಿಂಟೆಂಡೆಂಟರವರು ಮನಸ್ಸುಗೊಟ್ಟು ಯೋಗ್ಯವ್ಯವಸ್ಥೆಮಾಡಿಸುವರಾಗಿ ಭರವಸೆಪಡುತ್ತೇವೆ

M. S.

ಗೋಕಾಕದ ಗಿರಣಿ ಮುಷ್ಕರ

ಕರ್ನಾಟಕ ಪ್ರಾಂತ್ಯದ ಗೋಕಾಕದ ಗಿರಣಿಯಾಳುಗಳು ಇದೇ ತಾ. ೧೪ರಿಂದ ಮುಷ್ಕರ ಹಿಡಿದಿರುವರು. ಗೋಕಾಕ್ ಜೋಗಿನ ಬಳಿಯಲ್ಲಿರುವ ಗಿರಣಿಗಳ ಸುವಾರು ೩೦೦೦ ಕೆಲಸಗಾರರು ಮಿಲ್ ಆಫೀಸರಿಯುವ ತೊಂದರೆಗಳನ್ನು ಸಹಿಸಿಲಾರದೆ ಕಳೆದ ಜುಲಾಯಿಯಲ್ಲಿಮ್ಮೆ ಹವಿಸ್ಸೆದು ದಿನಗಳ ಮುಷ್ಕರವನ್ನು ಜಯಶೀಲವಾಗಿ ನಡಿಸಿ, ಇನ್ನು ಮುಂದೆ ಅಂತಹ ತೊಂದರೆಯಾಯಲ್ಲದಿರುವಂಬ ಆಶ್ವಾಸನೆಯು ವಿ.ಲ್ ಅಧಿಕಾರಿಗಳಿಂದ ದೊರೆತ ಮೇಲೆಯೇ ಆದನ್ನು ನಿಲ್ಲಿಸಿದ್ದರು. ಆದರೆ ಆ ಭರವಸೆಯು ಕಾರ್ಯತಃ ಆಚರಿಸಲ್ಪಡಲಿಲ್ಲ. ಕೆಲಸಗಾರರ ಸಂಕಷ್ಟಗಳು, ಅದರಲ್ಲೂ ಹೆಂಗಸರಿಗೆ ಕೊಡುವ ಉಪದ್ರವಗಳು ಎಂದಿನಂತೆ ಮುಂದುವರಿದುವು. ಅದರ ನಿವಾರಣೆಗಾಗಿ ಕೆಲಸಗಾರರಿಂದ ನಡೆಸಲ್ಪಟ್ಟ ಪ್ರಯತ್ನಗಳೆಲ್ಲಾ ನಿಸ್ಫಲವಾದುವು. ಕಳದ ಅಕ್ಟೋಬರ್ ತಿಂಗಳಲ್ಲಿ ಗಿರಣಿ ಕೂಲಿಗಳು ಕೂಲಿಗಾರರ ಸಂಘವನ್ನು ಸ್ಥಾಪಿಸಿಕೊಂಡು ತಮ್ಮ ಬೇಡಿಕೆಯನ್ನು ಕಾರ್ಯರೂಪದಿಂದ ತೋರಿಸಕತ್ತಿದ ಮೇಟೆ ಗಿರಣಿ ಮ್ಯಾಲಕರು ಇನ್ನೊಸ್ಟು ರೇಗಿಬಿದ್ದರು. ಕೂಲಿಗಾರ ಸಂಘದವರು ಎಲ್ಲಾ ಸಂದರ್ಭಗಳಲ್ಲಿಯೂ ತಮ್ಮೊದನೆ ಸಹಕರಿಸುವ ಭರವಸೆಯಿಯಬೇಕಲ್ಲದೆ ಸಂಘದ ಸಕ್ಕೆದರಿಯಾದ ಮಿ. ಎಲಿಯಾಸರು ಕೂಲಿಗಾರರ ವಸತಿಯಲ್ಲಿ ವಾಸಿಸಬಾರದೆಂಬ ಅರ್ಥ ಬಿಹಿತ ರರ್ತಗಳಿಗೆ ಸಂಘದವರು ಒಪ್ಪಿಗೆಯಾಯಿಲಲ್ಲ. ಈ ದೆಸೆಯಿಂದ ಬಾಳಿಕೆಯು ಅಧಿಕೆವಾಯಿತೆಂದೂ ತಮ್ಮ ಅತ್ಯಲ್ಪ ಕೂಲಿಯ ಬಗ್ಗೆ ದೂರು ಕೊಡಲು ಕೆಲಸಗಾರ ಆಸಿಸ್ಟಾಂಟ್ ಮೇಸೆಜರರ ಬಳಿಗೆ ಬಂದ ಹೆಂಗಸರು ಕೂಡಾ ಹೊವೆತಗಳನ್ನು ತಿನ್ನಬೇಕಾಯಿತೆಂದೂ ತಿಳಿದುಬರುತ್ತದೆ. ಇದೂದ ಕೆಲವು ದಿನಗಳಲ್ಲಿ ಕೆಲವು ಮಂದಿ ಕೂಲಿಗಾರರ ಮೇಲೆ ಸಪಾಯಕ ರಸೇಕರ ಕ್ರಿಮಿನಲ್ ವ್ಯವಹಾರಣೆ ದಾಖಲ್ಮಾಡಲ್ಪಟ್ಟು, ಆ ಕುರಿತು ಪದೆದ ರಾಜಿಯಪ್ರಕ್ರಿಯೆವೆಲ್ಲವೂ ಅಪಜಯವೊಂದಿ ಪರಿಸ್ಥಿತಿಯು ಮತ್ತಸ್ಟು ಕೆಟ್ಟುಹೋಯಿತು. ಎಂದಿನಂತೆ ಅಪಸ್ಮಾರ ರೋಗದ ಸಮಿತ್ತ ನೆಲದಲ್ಲಿ ಬಿದ್ದಿದ್ದ ಸಪಾಯಕ ಮೇಸೆಜರನ್ನು ಕಾಣಲು ಸುತ್ತುವರಿದಿದ್ದ ಕೂಲಿಗಾರರ ಮೇಲೆ ಮಿಥ್ಯಾರೋಪ ಹೊರಿಸಲಾಗಿದೆಯೆಂದು ಕೆಲಸಗಾರರ ಕಡೆಯ ಆಂಘೋಷಣೆ. ಇದೇ ದಸರಬರ ತಾ ೨೪ಲ್ಲಿ ಕೆಲಸಗಾರರು ಎಂದಿನಂತೆ ಕೆಲಸಕ್ಕೆ ಹೋದಾಗ ಗಿರಣಿಯ ಗೇಟು ಮುಚ್ಚಿತ್ತಲ್ಲದೆ ಒಳಮಂದಿ ಕೂಲಿಗಾರರನ್ನು ಕೆಲಸದಿಂದ ತೆಗೆದು ಹಾಕಿದುದು ತಿಳಿದುಬಂತು. ತಾ. ೧೫ಕ್ಕೆ ಗಿರಣಿಯನ್ನು ತೆರೆಯುವೆವಾಗಿ ತಿಳಿಸಿ, ತಾ. ೧೬ರಲ್ಲು ಮಿಕ್ಕವರಿಗೆ ಸಂಬಳ ಕೊಡಲು ಮೆನೇಜರರು ತಯಾರಾದಾಗ, ಕೆಲಸದಿಂದ ತಳ್ಳಲ್ಪಟ್ಟವರನ್ನು ಅಂಗೀಕರಿಸದೆ ತಾವೆಂದೂ ಸಂಬಳತೆಗೆದುಕೊಳ್ಳುವಂತಿಲ್ಲವೆಂದು ಕೂಲಿಗಾರರೆಲ್ಲಾ ಒಮ್ಮನಸ್ಸಿನಿಂದ ನಿರಾಕರಿಸಿಬಿಟ್ಟರು. ತಾ. ೧೪ಕ್ಕೆ ಪೂರ್ಣ ಸೂಚನೆಯಂತೆ ಬಲಾವಣೆ ಪೋಲಿಸು ಪಹರೆ ಕೊಡನೆ ಗಿರಣಿಯ ಗೇಟು ತೆರೆಯಲ್ಪಟ್ಟಿತು. ಆದರೆ ಕೆಲಸಗಾರರೊಬ್ಬರೂ ಒಳ ಹೋಗಲಿಲ್ಲ! ಏಕೆಬಿಂಗಿಗಾಗಿ ಕೆಲವರು ಮಾತ್ರ ಹೊರಗೆ ನಿಂತಿದ್ದರು. ಅದೇ ದಿನ ಕೂಲಿಗಾರರ ಸಭೆಯು ಶ್ರೀ. ಗುರುಸಿದ್ಧ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಮತಿ ಕಮಲಾ ದೇವಿ, ಶ್ರೀ ನಾರಾಯಣ ರಾವ್ ಜೋಷಿ, ಶ್ರೀ. ಸೋಹಾನಿ, ಶ್ರೀ. ಎಮ್. ಪಿ. ಪಾಟೀಲ್, ಶ್ರೀ ಬಿ ಎಲಿಯಾಸ್, ಮೊದಲಾದವರು ಸ್ಫೂರ್ತಿದಾಯಕ ಭಾಷಣಗಳನ್ನಿತ್ತರು. ಕೆಲಸಗಾರರೆಲ್ಲಾ ತಮ್ಮ ಈ ಧೋರಣೆಯಿಂದೊದಗಬಹುದಾದ ಸಂಕಷ್ಟಗಳನ್ನು ಅನುಭವಿಸಿಯೇ ತೀರುವ ನಿಷ್ಪತ್ತಿ ತೋರಿಸಿದರು. ಶ್ರೀಮತಿ ಕಮಲಾದೇವಿಯರು ಅವರ ಸಹಾಯಕ್ಕಾಗಿ ನಿಂತಿರುವರು.

ಗೋಕಕ್ ಮಿಲ್ಲಿನ ಬಳಿಯಲ್ಲೇ ಇರುವ ಗೋಕಕ್ ಜೋಗಿನಿಂದ ಸುಲಭವಾಗಿ ತಯಾರಿಸಲ್ಪಡುವ ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುವದರಿಂದ ಬಿರ್ಟು ಬಹು ಕಡಿಮೆ, ಅದರೂ ಬೊಂಬಾಯಿ, ಅಹಮ್ಮದಾಬಾದು, ಮೊದಲಾದ ಕಡೆಗಿಂತ ಅರ್ಧಕ್ಕೆರ್ಧ ಕಡಿಮೆಯ ಕೂಲಿಯನ್ನು ಇದ್ದಿ ಕೊಡಲಾಗುತ್ತದೆ. ಕಡಿಮೆ ಏರ್ಚಿನಿಂದ ವಿದ್ಯುಚ್ಛಕ್ತಿಯನ್ನು ಪಡೆದ ಗಿರಣಿ ಮಾಲಿಕರು ಕಡಿಮೆ ಖರ್ಚಿನಿಂದಲೇ ಕೂಲಿಗಾರರನ್ನು ಪಡೆದು ಹೇರಳ ಲಾಭ ಪಡೆಯುತ್ತಿರುವರು! ಪಾತ್ಕಾಲಿಕವಾಗಿ ಕೆಲಸಕ್ಕೆ ಸೇರಿದವರಿಗೆ ಇವರಿಗಿಂತಲೂ ಸೇಕಡಾ ೭೫ರಷ್ಟು ಕಡಿಮೆಯ ಕೂಲಿ ಕೊಡಲ್ಪಡುತ್ತದೆ; ಹೆಣ್ಣುಳಿಗಳಿಗೆ ಹೆರಿಗೆಯ ಸಹಾಯವೀಯುವ ಕಾನೂನಿದ್ದರೂ, ಅವರಿಗದು ದೊರಕ್ಕುವದಿಲ್ಲವೆಂದೂ, ಹೆರಿಗೆಗಾಗಿ ಕೆಲಸಬೇಕಾಗಿರುವ ಅನುಕೂಲತೆಗಳಲ್ಲಾ ನಿರಾಕರಿಸಲ್ಪಟ್ಟಿವೆ ಎಂದೂ ಕೂಲಿಗಾರರ ದೂರು. ಪ್ರಸೂತಿಗ್ಯಕ್ಕಿದಲ್ಲಿ ಪ್ರವೇಶಕೇಳಲು ಬಂದ ಸ್ತ್ರೀಕೆಲಸಗಾರಳೊಬ್ಬಳು, ಆಸ್ಪದ ದೊರೆಯದೆ ರಸ್ತೆ ಬದಿಯಲ್ಲಿ ಪ್ರಸವಿಸಬೇಕಾಯಿತಂತೆ. ಈ ಎಲ್ಲಾ ಅನ್ಯಾಯಗಳು ತೀರ್ಮಾನ ಹೊಂದದೆ, ಕೆಲಸಸಂಸ್ಥಂಭಕೆಡೆದೆಂದು ಕೂಲಿಗಾರರ ನಿರ್ಧಾರ.

ಬಾಲವಾಜ್ಮಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾ ಲ ವಾ ಜ್ಮ ಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟನ ಸಮಿತಿ, ಉ ಡು ಪಿ

ಪ್ರಕಟಣೆ

ಕಾಸ್ರಗೋಡು ತಾಲೂಕು ಕಾರಡ್ಕಗ್ರಾಮದ ತೊಟ್ಟಂಗುಳಿಯಲ್ಲಿರುವ ಪಣಿಯೆ ಕೃಷ್ಣ ಭಟ್ಟರ ಮಗ ಸುಬ್ರಾಯಭಟ್ಟನು ಈ ಮೂಲಕ ಪ್ರಕಟಿಸುವುದೇನೆಂದ್ರೆ:—

ನಾನು 85 ವರುಷಕ್ಕೆಂತಲೂ ಜಾಸ್ತಿ ಪ್ರಾಯದವನಾಗಿ ಎದ್ದು ತಿರುಗಾಡಲಿಕ್ಕೂ ಸಹ ಅಶಕ್ತನಾಗಿದ್ದು ನನ್ನ ಅವಿಭಕ್ತ ತಮ್ಮ ಹಾಲಿ ವೈದ್ಯ ವೆಂಕಟ್ರಮಭಟ್ಟನೆ ಒಬ್ಬನೇ ಮಗನು ಸಹ ವೈನರನಾಗಿದ್ದು ನನ್ನ ಮನೆವಾರ್ತೆನೆ ವೈವಾಟನ್ನು ನಡಿಸಿಕೊಂಡು ಬರುವದು ಬಹಳ ಸಂಕಷ್ಟವಾಗಿದ್ದ ಸಂದರ್ಭವೆಲ್ಲಿ ನನ್ನ ತಮ್ಮ ಸದ್ರಿ ಬೌತಿ ವೆಂಕಟೇಶ ಭಟ್ಟನ ಖಾಸಾ ಮಗಳ ಗಂಡ ತುಂಬಡಾಜೆ ಗ್ರಾಮದ ಪೈಕೆ ಸುಬ್ರಾಯ ಭಟ್ಟರ ಮಗ ಮಾಧವ ಭಟ್ಟನು ಸದ್ರಿ ವೆಂಕಟೇಶ ಭಟ್ಟನನ್ನು ನಂಬಿಸಿ ದುರ್ಬೋಧನೆಯನ್ನು ಕೊಟ್ಟು ಸುಳ್ಳು ಪ್ರತಿಫಲ ಕಾಣ್ಸಿ, ಬರ್ಸಿಕೊಂಡಿದ್ದ ರೂ. 2000/–ದ ತವೆವು ದಸ್ತಾವೇಜನ್ನ ಬಾಬ್ತು ಒಂದು ವರುಷದ ಬಡ್ಡಿ ಬಗ್ಯೆ ಎಂತ ಕಾಸ್ರಗೋಡು ಡಿ. ಮು. ಕೋರ್ಟು ಕ್ರಮ ನಂಬ್ರ 199/36ಕ್ಕೆ ನನ್ನ ಮೆಲೂ ನನ್ನ ತಮ್ಮನ ಮಗ ಸದ್ರಿ ವೈನರಿಗೆ ತನ್ನ ಹೆಂಗೀತನೆಂಬುವನ್ನು ಗಾರ್ಡಿಯನ್ನಾಗಿ ನೇಮಿಸಿ ಸದ್ರಿ ವೈನರನ ಮೇಲೂ ಸುಳ್ಳು ದಾವಾದಾಕ್ಷು ಮಾಡಿ ನನಗೆ ಯಾವ ತರವ ಕೋರ್ಟು ನೋಟೀಸೂ ಸಹ ತಲ್ಪದಂತೆ ಮಾಡಿ ಯಾವ ತರವಲ್ಲೂ ನನ್ನ ತಿಳುವಳಿಕೆಗೆ ಬಾರದಂತೆ ಕೂಡ್ಲಿ ಕೂಡ್ಸಿ, ಸ್ಪೆಲಿವಿನರಿ ಮತ್ತು ಫೈನಲ್ ಡಿಕ್ರಿ ಸಹಾ ಪಡೆದು ಸದ್ರಿ ಕೋರ್ಟು R. E. P. 1557/36ಕ್ಕೆ ಹೇರಾಳ ಬೆಲೆಯುಳ್ಳ ನನ್ನ ಆಸ್ತಿಗಳನ್ನು ಏಲಂನಿಗೆ ಇಷ್ಟಿರುತ್ತಾನೆ ಎಂಬ ಸಂಗ್ತಿಯು ನನಗೆ ಈಗ ತಿಳುವಳಿಕೆಗೆ ಬಂತು. ಆ ಬಗ್ಯೆ ತಕ್ಕ ನಿವೃತ್ತಿಗೆ ಕಾಸ್ರಗೋಡು ಮುನ್ಸೀಫ್ ಕೋರ್ಟಿನಲ್ಲಿ ಅರ್ಜಿ ಮಾಡಿಕೊಂಡಿರುತ್ತೇನೆ. ಮತ್ತು ವೃದ್ಧಾಪ್ಯವಲ್ಲಿ ಅತೀ ಮಃಸ್ಥಿತಿಯಿಂದ ನಾನು ಇರುವಾಗ ನನ್ನ ರಿಕಾರ್ಡು ಕಟ್ಟಿನಿಂದ ಭೂಗೋಳ ಸೋನಿಂದ ಭಟ್ಟರು ಮುಂತುರಿದಾರರಾಗಿ ಏರ್ಪಡಿಸಿದ ಒಂದು ಕುರಿಚಿಟ್ಟಿಗೆ ನನ್ನ ತಮ್ಮ ವೆಂಕಟೇಶಭಟ್ಟನು ಒಬ್ಬ ಮೆಂಬರನಾಗಿ ಪಾವ್ತಿ ಮಾಡಿವ ಕುರಿಕಂತುಗಳು ಏವೇಜು ಪಾವ್ತಿ ರೆವೀದಿಗಳ ಪುಸ್ತಕವನ್ನು ಏವೇಜು ವಾವ್ತಿ ಮಾಡಿ ನಾವಾಸು ಪಡದ ನೋಟು ವೆಗೈರೆ ರಿಕಾರ್ಡುಗಳನ್ನು ನನ್ನ ಮನೆಗೆ ಬಂದು ಹೋಗುವ ಯಾರೊ ಸಂಬಂಧಿಕರು ಜಪಾವು ಮಾಡಿಕೊಂಡು ಹೋಗಿರುತ್ತಾರೆಂಬ ಸಂಗ್ತಿಯನ್ನು ಸದಾ ಈಗ ಕಂಡುಕೊಂಡೆ. ಹಾಗೆ ಜಪಾವು ಮಾಡಿ ಕೊಂಡು ಹೋದ ರಿಕಾರ್ಡುಗಳನ್ನು ಆದಸ್ಸಿ ಮರ್ಲಭ್ಯ ಹೊಂದುವ ಪ್ರಯತ್ನವನ್ನು ಯಾರಾದರೂ ಮಾಡಿದರೆ ಅದರಿಂದ ಅವರಿಗೆ ಯಾವ ತರದ ಪ್ರತಿಫಲವು ಸಿಕ್ಕುವಾರದು ಎಂತ ಈ ಮೂಲಕ ಸರ್ವೇಸಿ ಜನರಿಗೆ ತಿಳಿಸಿರುತ್ತೇನೆ.

ಕಾರಡ್ಕದ ತೊಟ್ಟಂಗುಳಿ
ತಾ. 22—12—1936

§ ಈ ಎದ ಹೆಬ್ಬೆಟ್ಟಿನ ಗುರುತು ಮತ್ತು !!! ಈ ಮೂರು ಗೆರೆ ಸುಬ್ರಾಯ ಭಟ್ಟನ ರುಜು.
§ ಇದು ಹೆಬ್ಬೆಟ್ಟಿನ ಗುರುತು.

ಆತಂಕನಿಗ್ರಹ ಮಾತ್ರೆಗಳು

ಯಾವ ಕಾರಣದಿಂದಾಗಲಿ ಉಂಟಾಪ ಧಾತುನಸ್ಟ್ಯ, ನರಗಳ ನಿಸ್ಪಕ್ತಿ ಇವುಗಳನ್ನು ಮೊಗಲಾರಿನಿಂದ ಶುದ್ಧತ ಗುಣ ಉಂಟಾಗುವಂತೆ ಮಾಡುತ್ತದೆ. ಈ ಗುಳಿಗೆಗಳು ಆಯೋಗ್ಯವಾದ ಚಿಂತನೆಯನ್ನುಂಟುಮಾಡಿ ಬೇಹಕ್ಕೂ ಮತ್ತು ಮನಸ್ಸಿನಗೂ ಬಲಾಹಿನತ್ಪೆವನ್ನು ಹೋಗಲಾಡಿಸಿ ದುಸ್ವಪ್ನಕತ್ಪೆವನ್ನು ಕುದ್ದಿಮಾಡಿ ಚ್ಞಾಪಕ ಶಕ್ತಿಯನ್ನು ವೃದ್ಧಿಪಡಿಸುವುದು. ಕ್ರಯಃ ಡಬ್ಬಿ ಗಕ್ಕೆ ೧–೦–೦.

ನಾಜೀಕರಣ ತೈಲ:—(ಹೊರಗೆ ಹಚ್ಚಲು ಮಾತ್ರವೇ) ಬಾಲ್ಯದಲ್ಲಿ ಸ್ಪತಿ ಆನೇಕ ವಿಧಗಳಲ್ಲಿ ಸರೀರವನ್ನು ಕೆಡಿಸಿಕೊಂಡು ಅದರಿಂದ ಉಂಟಾಗುವ ಆರಕ್ತ, ನರಗಳ ದುರ್ಬಲ, ನಪ್ಪಂಕತ್ಪ, ಮುಂತಾದ ವ್ಯಾಧಿಗಳನ್ನು ಪರಿಹರಿಸುವ ಸಂಜೀವಿನಿಯೌಷಧಿಯಾಗಿರುವದು. ನರಗಳಿಗೆ ಬಲವನ್ನುಂಟುಮಾಡಿ, ಸಂಭೋಗಕ್ಕೆ ಉತ್ಸಾಹವನ್ನು ಕೊಡುವುದು. ಒಂದು ಸಾರಿ ಡಿಪ್ಪವನ್ನು ಹಚ್ಚುವುದರಿಂದ ಗುಸಾ ಗೊತ್ತಾಗುತ್ತದೆ. ಕ್ರಯಃ ಸೀಸೆ ಒಂದಕ್ಕೆ ೫—೦—೦.

ಅಮೃತಾರ್ಣವ ಲೇಹ್ಯ:— ರಕ್ತವನ್ನು ಕುದ್ದಿಮಾಡಿ, ನರಗಳನ್ನು ಬಲಪಡಿಸಿ, ಆತಉಷ್ಣ, ಕೈಕಾಲುಗಳ ಉರಿ. ಇನ್ನೂ ಮುಂತಾದ ಉಷ್ಣವ್ಯಾಧಿಗಳನ್ನು ಗುಣಪಡಿಸಿ, ಮೆದುಳನ್ನು ತಂಪುಮಾಡಿ, ವೀರ್ಯಬಲವನ್ನೂ, ತೇಜಸ್ಸನ್ನೂ ಹೆಚ್ಚಿಸುವುದಲ್ಲದೆ ದೀರ್ಘಕ್ಪೆಯ, ಎದೆನೋವು, ತಲೆನೋವು, ಮುಂತಾದ ವ್ಯಾಧಿಗಳಿಗೆ ಅಮೃತಪ್ರಾಯವಾಮದು. ಕ್ರಯಃ ಡಬ್ಬಿ ಗಕ್ಕೆ ೩–೦–೦.

'ಕಾಮಶಾಸ್ತ್ರ' ಧರ್ಮಾರ್ಥ. ಪೋಸ್ಟೇಜು ಮೊಫಿಯಾಗಿ ಕಳುಹಿಸುವೆವು. ಒಂಬು ಕಾರ್ಯ ಹಾಕಿರಿ.

ಆತಂಕ ನಿಗ್ರಹ ಫಾರ್ಮಸಿ, ೬೪, ಚಿಕ್ಕಪೇಟೆ ಜಾಕ, ಬೆಂಗಳೂರು ಸಿಟಿ

ವಿಚಿತ್ರ ವಿಶ್ವ

ಭವಿಷ್ಯ ಹೇಳುವ ಸಂಸ್ಥೆ

ಅಂತಹದೊಂದನ್ನು ಏರ್ಪಡಿಸಬೇಕು ಎಂದು ಲೋರ್ಡ್ ರುಟರ್ ಫೋರ್ಡರು ಬ್ರಿಟಿಷ್ ಸರ ಕಾರವನ್ನು ಒತ್ತಾಯಪಡಿಸುತ್ತಾರೆ. ಗ್ರಹಗತಿಗ ಳಿಗೂ ಸರಕುಗಳ ತೇಜಿ ಮಂದಗಳಿಗೂ ದಂಡೆ ಯ ಮೇಲಿನ ಮಾತಿನಿಂದ ಗಂಟು ಹಾಕುವ ನಮ್ಮ ಜೋಯಿಸರ ಕೂಟವಲ್ಲ ಅವರಿಗೆ ಬೇಕಾ ದುದು! ಹೊಸ ಹೊಸ ಶೋಧನೆ, ನವನವ ಯಂ ತ್ರನಿರ್ಮಾಣ, ವಿಜ್ಞಾನದ ಹೊಸ ಬೆಳಕು, ಮುಂ ತಾದುವು ತಲೆದೋರಿದಾಗಲೆಲ್ಲ ಅವುಗಳಿಂದ ಈಗಿ ರುವ ವೃತ್ತಿ ಕೈಗಾರಿಕೆ ಕಾಮಗಾರಿಕೆಗಳಿಗೆ ಧಕ್ಕೆ ತಗಲಬಹುದೋ? ತಗಲುವುದಿದ್ದರೆ ಹಾಗಾಗದಂತೆ ಯಾವ ರಕ್ಷಣಾಧಿಕಾರ ಪ್ರಯೋಗಮಾಡಬಹು ದೆಂದೂ ದೂರದೃಷ್ಟಿಯಿಂದ ನೋಡಿ ಸರಕಾರಕ್ಕೆ ಮುಂದಾಗಿ ಸಲಹೆ ಕೊಡುವಂತಹ ವಿಜ್ಞಾನ ವಿಮರ್ಶೆಗಳ ನೋಟವುಳ್ಳ ಭವಿಷ್ಯವಾದಿಗಳ ಕೂ ಟವು ನಿರ್ಮಾಣವಾಗಬೇಕಂತೆ.

ಸಮತಾವಾದವು ನಾಸ್ತಿಕವಾದವೆ?

ಹಾಗೆಂದು ಏಯನ್ನಾದಲ್ಲಿ ಜರಗಿದ ಅಂತಾರಾ ಷ್ಟ್ರೀಯ ಸಮತಾವಾದ ನಿರೋಧ ಸಂಘದಲ್ಲಿ ಬಿಕ ಮೇರ್ ಎಂಬ ಜೆಸುವಿಸ್ಟ್ ಪಾದ್ರಿಯೊಬ್ಬರು ಗು ಡುಗುಡಿಸಿದರು. ಈ ಸಮತಾವಾದಿಗಳನ್ನು ಈ ನಾಸ್ತಿಕರನ್ನು ಈ ಕ್ರಾಂತಿಕಾರಕ ವಿಚಾರಿಗಳನ್ನು ಕತ್ತಿಕೋವಿಗಳಿಂದ ಬೇಗನೇ ನಿರ್ಮೂಲಪಡಿಸ ಬೇಕೆಂದೂ ಇವರೊಡನೆ ವಾಕ್–ಯುದ್ಧವು ನಿಷ್ಫ ಲವೆಂದೂ ಇವರ ಅಂಬೋಣ! ಎಲ್ಲರೂ ದೇವರ ಮಕ್ಕಳು, ಎಲ್ಲರೂ ಸರಿಸಮಾನ ಹಕ್ಕುಳ್ಳವರು, ಎಲ್ಲರೂ ಸಹೋದರರು ಎಂದು ಸಾರುವ ಸಮತಾ ವಾದಿಗಳು ನಾಸ್ತಿಕರು!! ಅಂತಹರನ್ನೆಲ್ಲ ಬೇಗನೇ ಕೊಂದಿಕ್ಕಬೇಕೆಂದು ಸಾರುವ ಪಾದ್ರಿಯು ದೇವರ ಮನುಷ್ಯ! ಆಸ್ತಿಕಶಿರೋಮಣಿ!!

ಸ್ವರ್ಗದ ಜಾಗಗಳನ್ನು ವಿಕ್ರಯಿಸಿದನು.

ಇವನು ಮತ್ತೊಬ್ಬ ಪಾದ್ರಿ! ಜೆಕೋಸ್ಲಾವಿ ಯದ ಕಿಸಿಮಿನ್ ಎಂಬಲ್ಲಿಯವನು. ಇವನು ಸ್ವರ್ಗದ ನಕ್ಷೆಯೊಂದನ್ನು ಮಾಡಿ ತನ್ನ ಕೋಣೆ ಯಲ್ಲಿಟ್ಟುಕೊಂಡು ಕುರುಡುನಂಬಿಗೆಯುಳ್ಳ ಹಳ್ಳಿ ಗರನ್ನು ಬರಮಾಡಿ—ವಿಶೇಷವಾಗಿ ಹೆಂಗಸರೀಗೆ ಆ ನಕ್ಷೆಯನ್ನು ತೋರಿಸಿ ಬಣ್ಣಿಸಿ ಅವರಿಗೆ ಬೇ ಕಾದ ಸ್ಥಾನವನ್ನು ಮಾರುತ್ತಿದ್ದನು. ನಕ್ಷೆಯಲ್ಲಿ ದೇವರ ಗದ್ದುಗೆಗೆ ಸಮೀಪವಾದ ಜಾಗ ಬೇಕಾ ಗಿದ್ದರೆ ಸಾಧಾರಣದ ಜಾಗದ ಇಮ್ಮಡಿ ಕ್ರಯ ಕೊಡಬೇಕು. ಎರಡನೆಯ ತರಗತಿಯ ಜಾಗ ವೆಂದರೆ ಆರ್ಕೇಂಜೆಲ್ ಗಾಬ್ರೀಲನ ಹತ್ತಿರದ್ದು. ಅಲ್ಲಿಯ ಜಾಗಕ್ಕೆ ದೇವರ ಸಮೀಪದ ಜಾಗಕ್ಕಿಂತ ಸ್ವಲ್ಪ ಕಡಿಮೆ ಬೆಲೆ. ಇನ್ನು ಮೂರನೆಯ ತರ ಗತಿಯ ಸಾಧಾರಣ ಜಾಗಕ್ಕೆ ಸುಮಾರು ಎರಡು ಪನಿನಷ್ಟು ಬೆಲೆ ಇಟ್ಟಿದ್ದ ಆ ಪುಣ್ಯಾತ್ಮ ಪಾದ್ರಿ. ಸ್ವರ್ಗದ ಆ ಭಾಗದ ಆಲಿಯಿಂದ ಕೆಲವು ಬಡ ಹೆಂಗುಸರು ತಮ್ಮ ಜೀವನದ ಏಕಮಾತ್ರ ಆಧಾ ರವಾಗಿದ್ದ ಹಸುವನ್ನೂ ಮಾರಿ ಪಾದ್ರಿಗೆ ದುಡ್ಡು ಕೊಟ್ಟು ಸ್ವರ್ಗದ ಆ ಜಾಗವನ್ನು ರಿಜರ್ವ್ ಮಾ ಡಿಸಿಟ್ಟುಕೊಂಡರು. ಆದರೆ ಎಲ್ಲ ನುಂದಿಗೂ ಈ ಅಪೂರ್ವ ಸಂದರ್ಭದ ಪ್ರಯೋಜನವು ದೊರೆಯ ಲಿಲ್ಲ. ಸುಮಾರು 200 ಜಾಗ ವಿಕ್ರಯವಾಗು ವಷ್ಟರಲ್ಲಿ ಪಾದ್ರಿಯನ್ನು ಕೈದುಮಾಡಿದರು. ಅಯ್ಯೋ ಪಾಪ! ತತನು ಇಲ್ಲಿಗೆ ಬಂದಿದ್ದರೆ ಎರೆ ಸ್ಪಿನ ಭಯವಿಲ್ಲದೆ ಸ್ವರ್ಗದ ಅಮಿತಾಸನಗಳನ್ನು ಜೀವಮಾನವೆಲ್ಲ ಮಾರುತ್ತಲೇ ನಿಶ್ಚಿಂತನಾಗಿ ಸುಖವಾಗಿ ಬಾಳಬಹುದಾಗಿತ್ತು. ನಮ್ಮಲ್ಲಿ ಎ ಷ್ಟೋ ಭಟ್ಟರೂ ಪಾದ್ರಿಗಳೂ ಇಂತಹ ಎಷ್ಟೋ ಸ್ವರ್ಗದ ಜಾಗಗಳನ್ನು ಮಂದಿಗೆ ಮಾರುವ ಲೈ ಸನ್ಸ್ ಪಡೆದುಕೊಂಡಿರುವರಲ್ಲ! ಇವನೊಬ್ಬ ಬಂ ದಿದ್ದರೆ ಹೆಚ್ಚಾಗುತ್ತಿರಲಿಲ್ಲ!

ಪ್ರಪಂಚದ ಅತ್ಯಂತ ಕೊಬ್ಬಿದ ಹುಡುಗ.

ಇವನು ನ್ಯೂ ಜೆರ್ಸಿಯ ಹನ್ನೊಂದು ವರ್ಷ ಪ್ರಾಯದ ಹುಡುಗ ಭಾರ ಬರೇ 245 ರಾತಲು ಮಾತ್ರ! ಒಬ್ಬ ಸ್ಪೆಶಲ್ ಪೋಲೀಸನ ಮಗ. ತನ್ನ ಬೂಟೀಸಿನ ದಾರಗಳನ್ನು ಕಟ್ಟಲಿಕ್ಕೆ ಬಗ್ಗ ಲಾಗುವುದಿಲ್ಲವೆಂಬುದೊಂದು ಆ ಹುಡುಗನಿಗೆ ರಗಳೆಕೊಡುತ್ತಿದೆಯಂತೆ!

ನಿರಂತರ ಹಾಳಿಕೆಯ ರೋಗ.

ನ್ಯೂಯೋರ್ಕಿನ ರೊಚೆಸ್ಟರಿನಲ್ಲಿ 27 ವರುಷ ಪ್ರಾಯದ ಆನ್ಸೆಕಾಪ್ ಎಂಬವಳಿಗೆ ಒಮ್ಮಿಂದೊ ಮ್ಮೆಗೇ ಈ ರೋಗ ಹಿಡಿಯಿತು. ಡಾಕ್ಟರರೆಲ್ಲರೂ ಒಟ್ಟುಗೂಡಿ ಅವನ್ನು ನಿಲ್ಲಿಸಬೇಕೆಂದು ಏನೇನೋ ಚಿಕಿತ್ಸೆಮಾಡಿದರು. ಆದರೆ ಅವಳು ನಿರಂತರ ಹಾಕಳಿಸುತ್ತಲೇ ಇದ್ದಳು. ಎಂಭತ್ತು ಘಂಟೆ ಗಳೂ ನಿರಂತರ ಹಾಕಳಿಕೆಯಿಂದಲೇ ಸಾಗಿತು. ಆಗೊಬ್ಬ ಯುವಕ ಡಾಕ್ಟರನು ಅವಳಿಗೆ ಗಾಢ ನಿದ್ರೆ ಬೀಳುವ ಮದ್ದುಕೊಟ್ಟ. ಚೆನ್ನಾಗಿ ನಿದ್ದೆ ಬಿತ್ತು. ನಿದ್ದೆಯಿಂದ ಎದ್ದೇಳುವಾಗ ಹಾಕಳಿಸುವ ರೋಗವು ನಿಂತಿತ್ತು!

ಕಳ್ಳನನ್ನು ಹಿಡಿದುಕೊಡುವ ಬೀಗ

ಫ್ರಾನ್ಸಿನಲ್ಲೊಬ್ಬನು ಇದನ್ನು ರಚಿಸಿದ್ದಾನೆ. ಇದರ ನೋರೆಯು ಗಡಿಯಾರದ ಮುಖದಂತಿದೆ. ಗುಟ್ಟು ಬಲ್ಲವರು ಅದರ ಮುಳ್ಳುಗಳನ್ನು ನಿಯತ ಸ್ಥಾನಗಳಿಗೆ ತಿರುಗಿಸಿದರೆ ಬೀಗ ಬೀಳುತ್ತದೆ. ಮ ತ್ತೊಂದು ಬಗೆಯ ನಿಯತ ಸ್ಥಾನಗಳಿಗೆ ತಿರುಗಿಸಿ ದರೆ ಬೀಗ ತೆರೆಯುತ್ತದೆ. ಈ ಸಂಕೇತವರಿಯದ ಕಳ್ಳನು ಬೀಗ ತೆರೆಯಲು ಪ್ರಯತ್ನಿಸಿ ತಪ್ಪಾಗಿ ಮುಳ್ಳುಗಳನ್ನು ತಿರುಗಿಸಿದರೆ ಅದರಲ್ಲಿ ಇಲೆಕ್ಟ್ರಿಕ್ ಪ್ರವಾಹವುಂಟಾಗಿ ಬಾಗಿಲ ಒಳಗಾಗಲಿ ಹೊರಗಾ ಗಲೀ ದೂರದಲ್ಲೆಲ್ಲಾಗಲೀ ಪೋಲೀಸು ಸ್ಟೇಷನಿನ ಲ್ಲಾಗಲೀ ಮೊದಲೇ ವ್ಯವಸ್ಥೆಮಾಡಿಟ್ಟಂತೆ ಅಲ್ಲಿ ಕಳ್ಳನಿಗೆ ಕೇಳದಂತೆಯೇ ಗಂಟೆಬಾರಿಸಿ ಗುಲ್ಲೆಬ್ಬಿಸಿ ಕಳ್ಳನು ಬಂದಿರುವನೆಂಬುದನ್ನು ತಿಳಿಸಿ ಆತನನ್ನು ಸುಲಭವಾಗಿ ಹಿಡಿಯಲು ಸಹಾಯಕವಾಗುವುದು!

ಹದಿನೇಳು ಮಕ್ಕಳೆಲ್ಲಿ ಪ್ರತಿಯೊಂದಕ್ಕೂ 12 ಬೈಬೆರಳು 12 ಕಾಲುಬೆರಳು ದಕ್ಷಿಣ ಅಮೇರಿಕದ ಚೀಲಿಯಲ್ಲಿ ಒಬ್ಬ ಹೆಂಗಸು ಹೆತ್ತ ಮಕ್ಕಳಿಗೆಲ್ಲ ಹೀಗೆ 24 ಬೆರಳುಗಳು! ಇಂತಹ ವಿಚಿತ್ರ ಮಕ್ಕಳ ನ್ನು ಹೆರುತ್ತಿರುವ ತಾಯಿಯನ್ನು ಗೌರವಿಸುವುದ ಕ್ಕಾಗಿ ಚೀಲಿಯ ಪ್ರೆಸಿಡೆಂಟರು ಈ ಸಲದ 17ನೆ ಯ ಮಗುವಿಗೆ ತಾನು (Godfather) ದೇವ ಪಿತೃವಾಗಿ ತಲೆಯ ಮೇಲೆ ಕೈಯಿಟ್ಟಿರುವರು!

ಅತಿ ಚಿಕ್ಕ ಮದುಮಗಳೆಂದರೆ

ತುರ್ಕಿಯ ಇಗಿರ್ಕಪೋ ಎಂಬಲ್ಲಿಯ ಅಗಸರ ವಳು ಪ್ರಾಯ ಬರೇ ತೊಂಭತ್ತು ವರುಷ! ಇದು ಐದನೆಯ ಸಲದ ಮದುವೆಯಷ್ಟೇ! ವರನ ವಯ ಸ್ಸು ನಾಲ್ವತ್ತೈದು! ವಧುವಿಗೆ ತಾನಿನ್ನೂ ಮೂವ ತ್ತು ವರುಷವಾದರೂ ಬದುಕಿಯೇನೆಂದು ನಂಬಿಗೆ ಇದೆಯಂತೆ. ಬದುಕಲಪ್ಪಾ ಬದುಕಲಿ! ಇನ್ನೆರಡು ಮೂರು ಪಾಣಿಗ್ರಹಣಗಳಾದರೂ ನಡೆಯಲಿ!

ನವಯುಗ

ಉಜ್ವಲ ರಾಷ್ಟ್ರೀಯ ವಾರಪತ್ರಿಕೆ—

ಉದ್ಬೋಧಕ ಲೇಖನಗಳಿವೆ!

ದೇಶ ವಿದೇಶಗಳ ತಾಜಾ ವರ್ತಮಾನಗಳಿವೆ!

ಮನೋಹ್ಲಾದಕ ಕಥೆ, ಕವನ, ನಾಟಕಗಳಿವೆ!

ಧುರೀಣರ 'ಫೋಟೋ'ಗಳಿವೆ!

ಪ್ರತಿ ಗುರುವಾರ ತಪ್ಪದೆ ಪ್ರಕಟವಾಗುವುದು.

ವಾ. ಚ. ಅಂಚೆವೆಚ್ಚ ಸೇರಿ ಕೇವಲ ೩—೪—೦.

ಇಂದೇ ಚಂದಾದಾರರಾಗಿರಿ!

ಅಖಿಲ ಕರ್ನಾಟಕದಲ್ಲಿಯೂ ಹೊರ ಪ್ರದೇಶ ದಲ್ಲಿಯೂ, ವಿಶಾಲವಾಗಿ ಪ್ರಚಾರದಲ್ಲಿರುವ "ನವ ಯುಗ"ವು ಜಾಹೀರಾತುಗಳಿಗೆ ವಾಹನವಾಗಿದೆ.

ಮೆನೇಜರ್— **ನವಯುಗ, ಉಡುಪಿ.**

ಪೇಟಿಧಾರಣೆ

ಸಾಮಗ್ರಿಗಳು	ಮಂಗಳೂರು ಇಂದ	ಮಂಗಳೂರು ವರೆಗೆ	ಉಡುಪಿ ಇಂದ	ಉಡುಪಿ ವರೆಗೆ
ರಾಶಿ ಅಕ್ಕಿ ...	3 — 6	3—10	3 — 2	3 — 4
ಮುಸ್ಕತಿ ...	3— 4	4 0	3 12	4 — 0
ಗ.ಹ್ಕು ಸುಗ್ಗಿ ...	3—10	3 14	3 — 6	3— 8
ಊರ ಅಕ್ಕಲ್ ಬೆಳ್ತಿಗೆ ...	4 — 4	4 — 12	4— 8	4—12
ರಂಗೂನು ಬಿ ಗೋ. ೧ಕ್ಕೆ	6 - 2	7 — 0	6—10	6—12
ಗೋದಿ ಗೋಣಿ ೧ಕ್ಕೆ ...	8 — 8	10 - 4	11 . 0	12— 0
ತೊಗರಿ ಗೋಣಿ ೧ಕ್ಕೆ ...	9— 0	9— 8	11— 8	...
ಹುರುಳಿ ಗೋಣಿ ೧ಕ್ಕೆ ...	5 — 2	5 — 8	5— 0	5— 8
ಕಡಲೆ ಗೋಣಿ ೧ಕ್ಕೆ ...	7—10	9 — 0	8 - 0	12 8
ತೊಗರಿಬೇಳೆ ಗೋಣಿ ೧ಕ್ಕೆ	11— 0	19— 0	11— 8	18 - 8
ಉದ್ದು ಗೋಣಿ ೧ಕ್ಕೆ ...	9— 8	10 — 0	9— 4	9— 8
ಹೆಸರು ಗೋಣಿ ೧ಕ್ಕೆ ...	9 — 4	9—12	10— 8	11— 0
ರಾಗಿ ಗೋಣಿ ೧ಕ್ಕೆ ...	4 — 0	6 — 0	...	...
ಊರುಬೆಲ್ಲ ಖಂಡಿ ೧ಕ್ಕೆ...	30— 0	35 — 0	20 — 0	25 — 0
ಉಪ್ಪು ಗೋಣಿ ೧ಕ್ಕೆ ..	4 8	4—12	4—10	4—12
ಹೊಪ್ರಿ ಖಂಡಿ ೧ಕ್ಕೆ ...	60 — 0	70 — 0	67— 8	70— 0
ಹೊಪ್ರಿ ಹಿಂಡಿ ಖಂಡಿ ೧ಕ್ಕೆ	27 — 0	28 - 8	33 — 0	36— 0
ಎಳ್ಳಿಂಡಿ ಖಂಡಿ ೧ಕ್ಕೆ ...	22 — 8	25 — 0	20 — 0	21— 4
ಹೊಪ್ರಿ ಎಣ್ಣೆ ಮಣ ೧ಕ್ಕೆ	4—15	5—14	6— 8	6—12
ಎಳ್ಳೆಣ್ಣೆ ಪಣ ೧ಕ್ಕೆ ...	...	6 — 0	5 — 8	6 — 0
ಟಿಮಿಜ ಎಣ್ಣೆ ಪೆಟ್ಟಿಗೆ ೧ಕ್ಕೆ	...	6 — 5	6 — 2	6— 4
ಮೋರಿಸ ಪಕ್ಕರೆ ಮ ೧ಕ್ಕೆ	...	3— 9	3 — 3	3 - 4
ಮೆಣಸು ...	3— 8	4 — 0	2— 8	2—14
ಸಾಸಿವೆ ಸುಡಿ ೧ಕ್ಕೆ ...	5 — 4	6 - 0	5— 4	...
ಕೊತ್ತಂಬರಿ ಮಣ ೧ಕ್ಕೆ ...	2— 8	3 — 0	...	...
ಕಾಳುಮೆಣಸು ಖ. ೧ಕ್ಕೆ...	95— 0	102 — 8	110 - 0	120 — 0
ಗೇರುಬೀಜ ಮು ೧ಕ್ಕೆ ...	4 — 2	...	4— 4	...
ಕಬ್ಬಣ ಖಂಡಿ ೧ಕ್ಕೆ ...	35— 0	37— 8	37— 8	40— 0
ತಾಮ್ರ ತಗಡು ಮ. ೧ಕ್ಕೆ	9—12	9 - 14	12— 4	12— 8
,, ಪಾತ್ರೆಗಳು ಮ. ೧ಕ್ಕೆ	12 — 8	14 — 0	14— 0	15— 0
ಟೀನ ಬೆಳ್ಳ ಸೇರು ೧ಕ್ಕೆ...	17 — 8	18 — 0	13 12	14 0
ಹಿತ್ತಾಳೆ ತಗಡು ಮ. ೧ಕ್ಕೆ	10 — 0	...	10—	—
ಪವಸು ೧ಕ್ಕೆ ...	22 — 8	...	22 — 8	...
ಹುಣಸೆ ಹುಳಿ ಖಂಡಿ ೧ಕ್ಕೆ	20 — 0	25 — 0	60 — 0	65 — 0
ಸೀಚೆಮ್ ಕಾಫಿ ಖಂಡಿ ೧ಕ್ಕೆ	140 — 0	150 0	...	...
ಭಟೇರಿ ಕಾಫಿ ಖಂಡಿ ೧ಕ್ಕೆ	160— 0	170 — 0	155 — 0	160— 0
ವಾಡಿಕೇರಿ ಏಲಕ್ಕೆ ...	25— 0	26 — 8	...	...
ಕೊಬ್ಬರಿ ಗೆಡ್ಡಿ ...	...	...	12— 0	...
ಏಲಕ್ಕೆ ಪಣ ೧ಕ್ಕೆ ...	45— 0	55 — 0	56 — 0	57— 0
ಹೊಸ ಕಾಫಿ ಖಂಡಿ ೧ಕ್ಕೆ	...	...	150— 0	155— 0
ಭತ್ತ ಮುಡಿ ೧ಕ್ಕೆ ...	1— 4	1 — 8	...	...
ತುಪ್ಪ ಮಣ ೧ಕ್ಕೆ ...	17 0	18— 0	...	...

ಪ್ರಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ್ ಮುಲಾಮು —

ಇಪ್ಪರ ವರೆಗಿನ ನಮ್ಮ
ವಿಲಿಯಮ್ ಎಂಡ್ ಕೋ ರವರ
ರಾಜ ಪುತ್ತುರಿನಲ್ಲಿಯ ಟ್ರೇಡ್‌ಮಾರ್ಕುಗಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಣಂತೆ ವ್ಯತ್ಯಾಸಮಾಡಲಾಗಿದೆ.

ಅಮೃತಾಂಜನ ಡಿಪೋವಿನ ಶ್ರೀವರ್ಧದ 'ರೈಸಿಂಗ್ ಸನ್'

ಈ ಮೇಲಿನ ಪ್ರಾಮುಖ್ಯ ವ್ಯತ್ಯಾಸದ ಸಂಗತಿಯನ್ನು
ನಮ್ಮ ಗಿರಾಕಿದಾರರೆಲ್ಲರೂ ಗವನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮೂಲಾಗಬಹುದಂದ ನಮ್ಮ ಔಷಧಿ ತಯಾರಿಯಲ್ಲಿ ಯಾವ
ವ್ಯತ್ಯಾಸವೂ ಆಗಿಲ್ಲೆಂಬ ಕುರಿತು ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, --- ಬೊಂಬಾಯಿ, ಮದ್ರಾಸು, ಕಲ್ಕತ್ತ.

ಕೇವಲ ಎರಡೇ ಆಣೆಗಳಲ್ಲಿ ೨೫ ರೂಪಾಯಿ ಬಹುಮಾನ

ಅಖಿಲ ಕನ್ನಡ ನಾಡಿಗೇ ಪ್ರೀತಿಯಾಗಿರುವ

ಕಥಾಕುಂಜ (ಮಾಸಪತ್ರಿಕೆ)

ನಯನಮನೋಹರವಾಗಿ ಹೊಸ ಹೊಸ ಏರ್ಪಾಡುಗಳಿಂದ ಅಲಂಕೃತವಾಗಿ ಡಿಸೆಂಬರ್ ದಲ್ಲಿ ತನೆಯ ವರುಷದ ಗನೆಯ ಸಂಚಿಕೆಯು ಪ್ರಕಟವಾಗುವದು. ಆದ್ದರಿಂದ ಕನ್ನಡಾಭಿಮಾನಿಗಳು ತಮಗಲೆ ಮುಂಗಡ ಹಣ ಕಳುಹಿಸಿ ಚಂದಾದಾರರಾಗಬೇಕು.

ಚಂದಾದಾರರಿಗೆ ೨೫ ರೂಪಾಯಿ ಬಹುಮಾನ.

ಈ ಸಂಧಿ ಕಳಕೊಳ್ಳಬಾರದು. ಕಥಾಕುಂಜವನ್ನು ಕೊಂಡುಕೊಳ್ಳಲು ಎಲ್ಲರಿಗೂ ಅನುಕೂಲವಾಗಲೆಂದು ಚಂದಾ ಹಣವನ್ನು ಇಳಿಸಲಾಗಿದೆ.

ಇಳಿಸಿದ ಚಂದಾ ೧-೮-೦ (ಅಂಚೆವಚ್ಚಿ ಬೇರೆ) ಶಾಲೆ, ಕಾಲೇಜು, ಲೈಬ್ರರಿಗಳಿಗೆ ೨-೮-೦

ಮೈಸೂರು, ಮುಂಬೈ ವಿದ್ಯಾಖಾತೆಯವರಿಂದ ಶಾಲೆ ಕಾಲೇಜುಗಳ ವಾಚನಾಲಯಕ್ಕೆ ಮಂಜೂರಾಗಿದೆ. ಜಾಹೀರಾತುದಾರರಿಗೆ ಸುವರ್ಣಸಂಧಿ! ಪತ್ರಿಕೆಗಳನ್ನು ಮಾರಾಟಮಾಡಲು ಎಲ್ಲ ನಗರಗಳಲ್ಲಿ ಪ್ರಾಮಾಣಿಕ ಏಜಂಟರು ಬೇಕು.

ವಿಶೇಷ ವಿವರಕ್ಕಾಗಿ ಹಕ್ಕುಪತ್ರಿಕೆ ನೋಡಿರಿ.

ವ್ಯವಸ್ಥಾಪಕ— **ಕಥಾಕುಂಜ,** ಬೆಳಗಾಂವಿ.

DIAMONDS! **DIAMONDS!!**

K. Ramachandra Krishna Shet

Near Mission High School, *Mangalore*

SUPERFINE UP TO DATE CUTTING! ವಜ್ರಗಳು **BEST BRILLIANCY!!**

ಉತ್ಕೃಷ್ಟ ತರಗತಿಯ ಚುನ್ನಾತ (first quality, selected) ಎಮ್ಸ್ಟರ್ಡಮ್ಮಿನಿಂದ ಬರುವ ವಜ್ರಗಳು ಯಾವಾಗಲೂ ವಿಕ್ರಯಿಸಲ್ಪಡುತ್ತವೆ. ಕೊಂಡುಕೊಳ್ಳುವವರಿಗೆ ಬಜಾರ ಧಾರಣೆಗಿಂತ ೮ ಪರ್ಸಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇದನ್ನು ಒಮ್ಮೆ ಸ್ವತಃ ಬಂದು ತಿಳಿಯಿರಿ. ಇದರ ಶಾಪ ಯೊಂದನ್ನು ಗವರ್ಮೆಂಟ್ ಕೊಲೆಜಿನ ಎದುರುಗಡೆ ತೆರೆಯಲಾಗಿದೆ.

ಕೆ. ರಾಮಚಂದ್ರ ಕೃಷ್ಣ ಶೇಟ್,
ಜುವೆಲರ್, ಮಿಶನ್ ಹ್ಯಾಸ್ಕೂಲು ಬಳಿ, ಮಂಗಳೂರು.

ಬೊಂಬೈ ಲೋಂಡ್ರಿ

ಉಡುಪಿ, ಹೊಸ್ಪಿಟಲ್ ರೋಡ್.

ನಮ್ಮಲ್ಲಿ ವಸ್ತ್ರಗಳನ್ನು ಜಾಗ್ರತೆಯಿಂದ ಮಡಿಮಾಡಿ, ಕ್ಷಿಪ್ರವ್ಯಾದೆಗೆ ಕೊಡುವುದಲ್ಲದೆ, ಊಲನ್, ಸಿಲ್ಕು ಮತ್ತು ಜರಿವಸ್ತ್ರಗಳನ್ನು ನಾಜೂಕಾಗಿ ಡ್ರೈಕ್ಲೀನಿಂಗ್ ವಗೈರೆ ಮತ್ತು ಬೇಕಾದ ನಮೂನೆಯಲ್ಲಿ ಪಾತ್ರಿಯಾದ ರಂಗಿನ ಕೆಲಸವನ್ನು ಸಹ ಅತಿ ಸುಲಭ ದರದಲ್ಲಿ ಮಾಡಿಕೊಡಲಾಗುವುದು.

ಹೆಚ್ಚಿನ ಮಾಹಿತಿ ಬಗ್ಯೆ ಕಂಪೆನಿಯಲ್ಲಿ ವಿಚಾರಿಸುವುದು.

ಪ್ರೊಪ್ರೈಟರ್: **ಯಮ್. ಯಸ್. ಭಟ್ಟ್ಕಳ್.**

ಉತ್ತಮ ವರ್ಗದ **ಶ್ರೇಷ್ಠವಾದ** **ಸರಸ್ವತಿ** **ಸ್ತ್ರೀಸಾಹಿತ್ಯ ಸಚಿತ್ರ ಮಾಸಪತ್ರಿಕೆ**

ಇದೀ ಕರ್ನಾಟಕದಲ್ಲಿ ಸ್ತ್ರೀಯರ ಅಭ್ಯುದಯಕ್ಕಾಗಿ ಪ್ರಚುರಪಡಿಸುತ್ತಿರುವ ಪತ್ರಿಕೆಯು ಇದೊಂದೇ. ಈ ಪತ್ರಿಕೆಯ ಹದಿನೈದನೆಯ ಸಂಪುಟವು 1936ನೇಯ ಜನವರಿ ತಿಂಗಳಿನಿಂದ ಪ್ರಾರಂಭವಾಗಿದೆ. ಈ ಪತ್ರಿಕೆಯಲ್ಲಿ ಸ್ತ್ರೀಯರ ಉನ್ನತಿಗೆ ಅತ್ಯಾವಶ್ಯಕವಾದ ಶಿಕ್ಷಣ-ಸಾಹಿತ್ಯ ಕಲೆ-ಆರೋಗ್ಯ-ಪಾಕಶಾಸ್ತ್ರ-ಸಮಾಜ ಸುಧಾರಣೆ ಇವುಗಳಿಗೆ ಸಂಬಂಧಪಟ್ಟ ಲೇಖನಗಳೂ, ಪದ್ಯ ಸಣ್ಣ ಕಥೆಗಳೂ, ನಾಟಕಗಳೂ ಕರ್ನಾಟಕದ ಪ್ರಸಿದ್ಧ ಲೇಖಕ ಲೇಖಕಿಯರಿಂದ ಬರೆಯಲ್ಪಟ್ಟು ಪ್ರಕಟವಾಗುವವು. ಮಕ್ಕಳ ಸಲುವಾಗಿ 'ಮಕ್ಕಳ ಪುಟಗಳು' ಬೇರೆ ಪ್ರಕಟವಾಗುವುವು. ಮೈಸೂರು, ಮುಂಬೈ ವಿದ್ಯಾ ಇಲಾಖೆಯವರಿಂದ ಸರ್ಕಾರದ ಶಾಲೆಗಳಿಗೂ ವಾಚನಾಲಯಗಳಿಗೂ ಮುಂಜೂರಾಗಿದೆ. ಪ್ರಕಟನೆಗೆ ಅತ್ಯುತ್ತಮವಾದ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ. 3—0—0 ಮಾತ್ರ.

ಸರಸ್ವತಿ ಕಾರ್ಯಾಲಯ,
ಚಾಮರಾಜಪೇಟೆ, **ಬೆಂಗಳೂರು ನಗರ**

The Commonwealth Assurance Co., Ltd

(ESTD 1920)

Chairman, Mr. N. C. Kelkar, Ex- M. L. A.

HEAD OFFICE: **POONA CITY.** CHIEF AGENCY OFFICE **HAMPANKATTA, MANGALORE**

1934ನೇ ಇಸ್ವಿ ಎಪ್ರಿಲ್ ತಿಂಗಳ ವರೆಗೆ
ರೂ. 57 ಲಕ್ಷಗಳಷ್ಟರ ವಹಿವಾಟುಮಾಡಿರುವುದು.

1933ನೇ ಎಪ್ರಿಲ್ ತಿಂಗಳ ವರೆಗೆ ಪಟ್ಟಿಯಲ್ಲಿದ್ದ ಎಲ್ಲಾ ಪೊಲಿಸಿದಾರರಿಗೆ
ಈ ಕಂಪೆನಿಯು 1000ಕ್ಕೆ ರೂ. 10 ಮೆತ್ತು 12ರಷ್ಟರ
ಬೋನಸು ಕೊಟ್ಟಿರುವುದು.

ಹೆಚ್ಚಿನ ಮಾಹಿತಿಗೆ ಹೆಡ್ ಆಫೀಸಿಗಾಗಲಿ ಈ ಕೆಳಗಣ ವಿಳಾಸಕ್ಕಾಗಲಿ ಬರಕೊಳ್ಳಿರಿ—

ದಿ ಕೋಮನ್‌ವೆಲ್ತ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್,
ಮುಖ್ಯ ಏಜನ್ಸಿ ಆಫೀಸು, ಹಂಪನಕಟ್ಟೆ, ಮಂಗಳೂರು.

ದಿ ಮೂಲ್ಕಿ ಗ್ರೇಂಡ್ ರೇಫ್‌ಲ್

(ಮೂಲ್ಕಿ ಹೈಸ್ಕೂಲಿನ ಸಹಾಯಾರ್ಥ)

ಮೂಲ್ಕಿ ದ. ಕನ್ನಡ.

ಲೆಪ್ಪು ಆಪ್ಪೆರು ತಾರೀಕು 25—1—1937] ● **[ಸೋಡ್ತಿ ತೆಗೆಯುವ ತಾರೀಕು 31—1—1937**

ಟಿಕೇಟು ಒಂದರ ಖರೀದಿ ಬರೇ ನಾಲ್ಕು ಆಣೆ ಮಾತ್ರ.

20 ಟಿಕೇಟುಗಳಿರುವ ಒಂದು ಪುಸ್ತಕಕ್ಕೆ ರೂ. 5—0—0 ಮಾತ್ರ. ಜಾಗ್ರತೆ ಮಾಡಿರಿ.

ನಿಮಗೆ ಬೇಕಾಗುವ ಟಿಕೇಟುಗಳನ್ನು ಕೂಡಲೇ ಪೆಡೆಯಿರಿ.

ಸೋಡ್ತಿ ತೆಗೆಯುವ ತಾರೀಕನ್ನು ಯಾವ ಕಾರಣದಿಂದಲೂ ಮುಂದರಿಸೋಣಾಗಲಿಕ್ಕಿಲ್ಲ.

ಹೆಚ್ಚಿನ ಮಾಹಿತಿಗೆ ಈ ಕೆಳಗಿನ ವಿಳಾಸಕ್ಕೆ ಕೂಡಲೇ ಬರೆಯಿರಿ—

"ಕಾರ್ಯದರ್ಶಿ,"
"ದಿ ಮೂಲ್ಕಿ ಗ್ರೇಂಡ್ ರೇಫ್‌ಲ್ಸ್,"
ಮೂಲ್ಕಿ, ದ. ಕನ್ನಡ.

ಪ್ರೇಮ ನಿವ್ಯಾಪೀತ, ತುಂಗಭದ್ರಾ, (ಬಳ್ಳಾರಿ ಜಿಲ್ಲಾ)

ಇವರ ಸೂಸನರ್ತವು ಜುಲ್ಯಾಯಲ್ಲಿ ಪ್ರಾರಂಭವಾಗುತ್ತದೆ ಮುಖ್ಯಾಧ್ಯಾಯರು ಉದ್ಯೋಗಕ್ಕೆ ಬೇಕಾಗಿದ್ದವರ ಇಲ್ಲಿ ತಿಕ್ಷಣವನ್ನು ಪಡೆಯಿರಿ ಮುಲ್ಕಿ, ಅಪ್ಪರ್ ಸೆಕೆಂಡರಿ, ಮೆಟ್ರಿಕ್ ಸ್ಕೂಲ್ ಫೈನಲ್ ಇತ್ಯಾದಿ ಪಾಸ್ ಆದವರಲ್ಲರಿಗೂ ಯೋಗ್ಯತೆಗೆ ತಕ್ಕಂತೆ ವಿಧ ವಿಧವಾದ ಕೋರ್ಸ್‌ಗಳವೆ ಪ್ರೊಸ್‌ಪೆಕ್ಟಸ್ ನಾಮಿಕಾಗಿ ಕೂಡಲೆ ತಿ ಆಣೆ ಸ್ಟ್ಯಾಂಪು ಇಟ್ಟು ಬರೆಯಿರಿ.

ಮಹೋಪಾಧ್ಯಾಯಾ ಡಾ॥ ಸುಮತಿಬಾಯಿ,

ಬಿ. ಎ. ಎಲ್. ಟಿ., ಎಫ್, ಪಿ. ಎಮ್. ಎಸ್, ಭಿಷಗ್ರತ್ನ, ರಿಜಿಸ್ಟ್ರಾರ್

LAXMI BRAND COFFEE POWDER.

Pure & Superior quality, will last long without losing its flavour and colour.

TRADE MARK

Use always this LAXMI BRAND COFFEE POWDER prepared from the best & choicest Coffee Beans of Nilgiris. (Hills)

WANTED AGENTS in Southern India (samples available)

ಉತ್ಕೃಷ್ಟ ಕಾಫಿಬೀಜಗಳಿಂದ ತಯಾರಿಸಲ್ಪಟ್ಟ ಸುವಾಸನೆಯುಳ್ಳ ನಮ್ಮ ಲಕ್ಷ್ಮೀಮಾರ್ಕಿನ ಕಾಫಿಪುಡಿಯನ್ನೇ ಸದಾ ಉಪಯೋಗಿಸಿರಿ. ಏಜಂಟರಿಗೆ ಯೋಗ್ಯ ಕಮಿಶನ್ ಕೊಡಲಾಗುವದು. ಹೆಚ್ಚಿನ ಮಾಹಿತಿ ಬಗ್ಗೆ ಕೆಳಗಿನ ವಿಳಾಸಕ್ಕೆ ಬರೆದು ತಿಳಿಯಬಹುದು.

FOR SALE

Fire Resistance Steel Iron Safes. latest pattern.



ನಮ್ಮಲ್ಲಿ ಕಬ್ಬಿಣದ ಟ್ರಿಜರಿಗಳು ಸದಾ ಮಾರಾಟಕ್ಕೆ ಸಿದ್ಧವಿರುತ್ತವೆ. ತಿಂಗಳುಗಟ್ಟಿ ಕಂತುಗಳಿಂದಲೂ ಮಾಡುವ ಏರ್ಪಾಡಿದೆ.

For Prices & Particulars Apply to—

K. K. Shanbhag & Sons

Court Road, UDIPI, S. K.

Sold also by Instalments

ನೂಸ] ವಿಶ್ವವಾಣಿ [ಪತ್ರಿಕೆ

ಸಂಪಾದಕರು—ಅ. ನ. ಕೃಷ್ಣರಾಯರು.

ನಂಸ್ಕೃತಿಯ ಪ್ರಸಾರಕ್ಕಾಗಿ ಕರ್ನಾಟಕದಲ್ಲಿ ಹೊರಬೀಳುವ ಪತ್ರಿಕೆ ಇದೊಂದೇ. ಜಗತ್ತಿನ ಸಾಂಸ್ಕೃತಿಕ ಚಲನವಲನಗಳ ಸುದ್ದಿಗಳೆಲ್ಲಾ ಇದರಲ್ಲಿ ಪ್ರಕಟವಾಗುತ್ತವೆ

ಚಿತ್ರವಿಚಾರದ 'ವೈಶಿಷ್ಟ್ಯ'- ಜಗತ್ತಿನ ಯಾವದೇ ಪತ್ರಿಕೆಯಲ್ಲಿಯೂ ಪ್ರಕಟವಾಗಿರುವ ಅನೇಕ ಚಿತ್ರಗಳು 'ವಿಶ್ವವಾಣಿ'ಗೆ ಮಾತ್ರ

ಆದುದರಿಂದ ಇಂದೇ ಚಂದಾದಾರರಾಗಿರಿ.

ಸಾಮಾನ್ಯ ಚಂದಾದಾರರಿಗೆ (ವರ್ಷಕ್ಕೆ) ... ... ರೂ. ೩—೮—೦

,, ,, (೬ ತಿಂಗಳಿಗೆ) ... ... ರೂ. ೨—೦—೦

ಶಾಲೆ, ಕಾಲೇಜು, ವಾಚನಾಲಯ, ಸಾರ್ವಜನಿಕ ಸಂಸ್ಥೆಗಳಿಗೆ (ವರ್ಷಕ್ಕೆ) ರೂ. ೫—೦—೦

ವಿಶ್ವವಾಣಿಯು ಮೈಸೂರು, ಮದರಾಸು, ಹೈದರಾಬಾದು, ಕೊಡಗು, ಕರ್ನಾಟಕಗಳಲ್ಲಿ ಮಾತ್ರವಲ್ಲದೆ ಕನ್ನಡಿಗರು ನೆಲಸಿರುವ ಎಲ್ಲ ಕಡೆಯಲ್ಲಿಯೂ ಪ್ರಚುರವಾಗುತ್ತದೆ

ಆದುದರಿಂದ 'ವಿಶ್ವವಾಣಿ'ಯಲ್ಲೇ ಜಾಹೀರಾತನ್ನು ಕೊಡಿರಿ.

ಹೆಚ್ಚು ವಿಚಾರಗಳಿಗೆ ಬರೆಯಿರಿ—

ವ್ಯವಸ್ಥಾಪಕ—'ವಿಶ್ವವಾಣಿ,' 'ಅನ್ನಪೂರ್ಣ', ವಿಶ್ವೇಶ್ವರಪುರಂ,

ಬೆಂಗಳೂರು ನಗರ.

ನಮ್ಮ ಜರಿ ಪೀತಾಂಬರ, ರೇಶ್ಮೆ ಮಡಿಗಳಿಗೆ ಗಮನಕೊಡಿರಿ.

S. U. N. & CO. ***Choukhamba, Benares City.***

ಮೂರು ಇನಾಮುಗಳು.

THIS MAN
OUR CUSTOMER

ಈ ಶ್ರೀ ೧ಕಾಶಿಯಲ್ಲಿ ತಯಾರಾಗತಕ್ಕ ರೇಶ್ಮೆ ಮಾಲುಗಳ ಕೆಟಲಗು ೧, ಕಾಶೀಸಕ್ಕೆ ೧, ವಿಶ್ವೇಶ್ವರ ಪಟ್ಟ ೧, ಈ ೩ಸಾಮಾನುಗಳು ೧ಆಣೆ ಸ್ಟ್ಯಾಂಪು ಕಳುಹಿಸಿದರೆ ಇನಾಮಾಗಿ ಕಳುಹಿಸಲಾಗುವುವು. ಸ್ವಾಂಪು ಬಾರದಿದ್ದರೆ ಈಗಿನ ಫೇಶನಿಗೆ ತಕ್ಕಂತೆ ಜರೀ ಕೆಲಸಗಳಿಂದ ತಯಾರಿಸಿದ ರೇಶ್ಮೆ ಸೀರೆಗಳೂ, ಖಣ, ಮಾಡಿ ಆದಪಾಮ್ಸು, ಪೇಟಾ, ಕೋಟಿಂಗ್, ಶರ್ಟಿಂಗ್ ಶಿಲ್ಕುಗಳೂ, ಕಾಶ್ಮೀರ ಶಾಲುಗಳೂ, ಶೂಲ್ಸನ್ ಚಾಕ್ಲೆಟ್ಟಿಧಾವಳಿ, ನಾವಾಡಿ, ತರತರದ ರುದ್ರಾಕ್ಷಿಗಳೂ ಸಾಮಾನುಗಳೇ ಮೊದಲಾದ ಅನೇಕ ತರದ ಸಾಮಾನುಗಳ ಕೆಟಲಗು ೧ಮಾತ್ರ ಇನಾಂ. ಈಗಿನ ಹೊಸಸನಮೂನೆಯ ವಡಲು ಬುಟ್ಟಿ ಹಾಕಿದ ಜರೀ ಸೀರೆ ಎಲ್ಲಾ ರಂಗುಗಳಲ್ಲಿ ರೂ. 20ರಿಂದ 55 ವಡಲು ಸಾದಾ 16ಮೊಳದ ಸೀರೆ ೧ಕ್ಕೆ ರೂ. 16 ರಿಂದ ರೂ. 35ರ ವರೆಗೆ. ಅರೆ ಕಡವು 16ಮೊಳ ಕ್ವಾರ್ ಅಂಚು ರೂ. 10½ ಯಿಂದ ರೂ 16 ಖಣ ೧ಕ್ಕೆ ರೂ. 1½ರಿಂದ ರೂ. 10ರ ವರೆಗೆ. ಪೋಸ್ಟು ಸರ್ಚು ಪ್ರತ್ಯೇಕ. ಆರ್ಡರಿನಂತೆ ಸಾಮಾನುಗಳನ್ನು ಸರಿಯಾದ ಸುಲಭ ದರದಿಂದ ಕಳುಹಿಸಲಾಗುವುದು.

ತಿರೋಮಣಿ ನಾರಾಯಣಾಚಾರ್ಯ & ಕಂಪನಿ, ಚೌಕಂಬಾ, ಬೆನಾರಿಸ್, ಕಾಶಿ.

Read and Advertise in

Financia Expertus

UDIPI

ಕನ್ನಡಿಗರಿಗೆ

ಇಂಗ್ಲೀಷ್ ಕಲಿಯಲು

ಒಂದೇ ತಿಂಗಳಲ್ಲಿ ಇಂಗ್ಲಿಷ್

(ಪಿ. ವಿ. ಉಪಾಧ್ಯಾಯ, ಬಿ.ಎ., ಎಲ್.ಎಲ್.ಬಿ. ಇವರಿಂದ)

ಇದಕ್ಕಿಂತ ಉತ್ತಮ ಪುಸ್ತಕ ಬೇರೊಂದಿಲ್ಲ.

Thulunad Press, Udipi. ತುಳುನಾಡ್ ಛಾಪಖಾನೆ, ಉಡುಪಿ

Printed by P. VENKATARAMANACHARYA for & on behalf of SUPPLY AGENCY LTD., at THULUNAD PRESS, UDIPI and Published by K. H. SHETTY at "NAVAYUGA" OFFICE, UDIPI.

Registered No. M. 3618 ೨೦ ಪುಟಗಳು---ಒಂದಾಣೆ

NAVAYUGA
A Nationalist Kanarese Weekly, UDIPI, S. K

It will pay you to advertise in 'NAVAYUGA' The Leading Nationalist Kanarese Weekly of Karnataka
FOR ARTES OF ADVT Etc
APPLY TO THE MANAGER

ನವಯುಗ

ವಾಚಕರನೇಕರ
ಅಪೇಕ್ಷೆಯಂತೆ ಮುದ್ರಿಸಲ್ಪಟ್ಟು
ಮಂಗಳೂರು ಉಡುಪಿಗಳಲ್ಲಿ
ಜಯಪೂರ್ವಕವಾಗಿ
ಅಭಿನಯಿಸಲ್ಪಟ್ಟು
ಜನಪ್ರಿಯವಾದ ನಾಟಕ
ವ್ಯಭಿಚಾರಿಣಿ ಯಾರು?
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ ೦ ೯ ೦
ಕವಿಯರ ಸುಹಂಜ, ಉಡುಪಿ

VOL XVI-NO 18 31-12-1936

ಮೂಡ ಬಾನಿನ ಕಣ್ಣು ಕೆಂಗಿಡಿಯ ಕಾರುತಿದೆ,
ಬನದ ನಾಡೊಳು ಮೊಳಗುತಿದೆ ತುಮುಲನಾದ;

ವಾರಪತ್ರಿಕೆ

ಸಂಪಾದಕ: ಕೆ. ಕೆ. ಶೆಟ್ಟಿ.

ಮೂಡುವುದು ತಂಬೆಳಕ ತಿಂಗಳಿನ ಮೊಗವಲ್ಲ,
'ನವಯುಗ'ದ ರುದ್ರರವಿಯೂರಕ್ಕ ಬಿಂಬ.

ಸಂಪುಟ ೧೬] ಉಡುಪಿ, ಗುರುವಾರ, ದಶಂಬರ ೩೧, ೧೯೩೬ [ಸಂಚಿಕೆ ೧೮

THE
Canara Industrial & Banking
SYNDICATE, LIMITED.

Head Office:
MUKUNDA NIVAS,
UDIPI, S. I

BRANCHES:

1	Bangalore City	16	Kanhangad
2	Belgaum	17	Kasargode
3	Byadgi	18	Karkala
4	Bellary	19	Udipi
5	Adoni	20	Uppinangadi
6	Hospet	21	Karwar
7	Nandyal	22	Kumta
8	Prodattur	23	Ankola
9	Tadpatri	24	Honavar
10	Taliparamba	25	Bhatkal
11	Hubli	26	Sirsi
12	Gadag	27	Sagar
13	Mangalore	28	Coondapoor
14	Cannanore	29	Brahmavar
15	Payyanur	30	Hungarcutta

Beg to announce the opening of a branch at
BOMBAY
in April next in the ground floor of the new building erected by Rao Sahib Patil at Sir Phirozshah Mehta Road in front of the new site of the Reserve Bank of India. The exact date will be announced later.

ADVANCES ON
GOLD, GOVERNMENT SECURITIES, GENUINE TRADE BILLS, MERCANTILE COMMODITIES & OTHER APPROVED SECURITIES ARE GRANTED AT LOW RATES
CHEQUES BILLS R R's BILLS OF LADING AND ALL KINDS OF MERCANTILE INSTRUMENTS ARE COLLECTED AND NEGOTIATED REMITTANCES TO PLACES WHERE THE SYNDICATE HAS BRANCHES AND ALSO TO OTHER IMPORTANT PLACES OF INDIA AND THE WORLD, SUCH AS BOMBAY CALCUTTA, KARACHI, MADRAS BEZWADA, CALICUT, COCHIN, AND LONDON, PARIS, NEW YORK ETC ARE ARRANGED AT FAVOURABLE RATES

ದಿ ಕುಂದಾಪುರ ಬೇಂಕ್ ಲಿಮಿಟೆಡ್ ಕುಂದಾಪುರ
ಬ್ರಾಂಚು—ಬ್ರಹ್ಮಾವರ.

ಚಾಲ್ತಿ ಮತ್ತು ಸೇವಿಂಗ್ಸ್ ಬೇಂಕ್ ವ್ಯವಹಾರಗಳು ಒಳ್ಳೇ ದರದ ಬಡ್ಡಿಯಲ್ಲಿಯೂ ಖಾಯಂ ವ್ಯವಹಾರಗಳು ೩ ತಿಂಗಳಿಗೊಮ್ಮೆ ಸಾಲಿಯಾನ್ ಶೇಕಡಾ ರೂಪ್ಯಾ 4½%, 6 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ ೫%, 12 ತಿಂಗಳಿಗೆ ಸಾಲಿಯಾನ್ ಶೇಕಡಾ ರೂಪ್ಯಾ ೬%, 24 ತಿಂಗಳಿಗೆ ಸಾಲಿಯಾನ್ ಶೇಕಡಾ 6½% ದರದ ಬಡ್ಡಿಯಲ್ಲಿ ಅಂಗೀಕರಿಸಲ್ಪಡುವುವು.

ಒಂದು ವರುಷದ ಯಾ ಹಚ್ಚಿಗೆ ಅವಧಿಯ ಖಾಯಂ ವ್ಯವಹಾರಗಳಿಗೆ ಮೇಲೆ ಕಾಣಿಸಿದ ವರದಲ್ಲಿ ೬ ತಿಂಗಳಿಗೊಮ್ಮೆ ಬಡ್ಡಿ ಕೊಡಲಾಗುವುದು ಬೇರೆ ಎಲ್ಲಾ ತರದ ಬೇಂಕ್ ವ್ಯವಹಾರಗಳು ನಡಿಸಲ್ಪಡುವುವು ಕರೆಂಟ್, ಸೇವಿಂಗ್ಸ್ ಬೇಂಕ್ ಮತ್ತು ಕ್ಯಾಷ್ ಸರ್ಟಿಫಿಕೇಟ್ ವ್ಯವಹಾರಗಳು ಅಂಗೀಕರಿಸಲ್ಪಡುವುವು.

ವಿಶೇಷ ಸೂಚನೆ—ಬಡವರಿಗೆ ಸಹಾಯವಾಗುವಂತೆ ಕಡಿಮೆ ಎಂದರೆ ರೂಪ್ಯಾ 10 ಸಹಾ ಸಾಲಕೊಡಲಾಗುತ್ತೆ. ಸಾಲುಗಳು ದೊರೆಯುತ್ತವೆ.
ಹೆಚ್ಚಿನ ಮಾಹಿತಿ ಬಗ್ಯ ಒರಕೊಳ್ಳಿರಿ

ಸುಖನಿವಾಸ

(ತಾಲೂಕು ಕಚೇರಿಯ ಎದುರುಗಡೆ)

ಉಡುಪಿ, ದ. ಕ.

ಪ್ರಯಾಣಿಕರಿಗೂ ಶಾಲಾ ಬಾಲಕರಿಗೂ ಉದ್ಯೋಗಸ್ಥರಿಗೂ ಇನ್ನಿತರ ವ್ಯವಹಾರಿಕರಿಗೂ ಸ ಸ್ವಾಧ್ಯವಾಗಿಯೂ ರುಚಿಕರವಾಗಿಯೂ ಹಿತದಾಯಕವಾಗಿಯೂ ನಿರ್ಮಲದ ಹೊಳಕೆಯಾಗಿಯೂ ಇರುವ ಕಾಫಿ, ತಿಂಡಿ, ತಿನಸು ಊಟ ವಗೈರೆ ನಮ್ಮ ಸ್ವಂತ ದೇಖ ರೇಖೆಯಿಂದ ತಯಾರಿಸಿ ಸದಾ ಕಾಲದಲ್ಲಿಯೂ ಅನಾಯಾಸವಾಗಿ ದೊರೆಯುವುದೆ. ಒಮ್ಮೆ ಬಂದು ಪರೀಕ್ಷಿಸಿರಿ!

'ಸುಖನಿವಾಸ'ದ ಅಭಿವೃದ್ಧಿಯು ಮಹಾಜನರ ಪ್ರೋತ್ಸಾಹವನ್ನವಲಂಬಿಸಿದೆ.

ವ್ಯವಸ್ಥಾಪಕರು:

ಎಚ್. ವಾಸುದೇವ ನಾಯಕ್ ಎಂಡ್ ಬ್ರದರ್.

THE

MOOLKY BANK, LTD.,

MOOLKY.

ದಿ ಮೂಲ್ಕಿ ಬೇಂಕ್, ಲಿಮಿಟೆಡ್,

ಮೂಲ್ಕಿ.

ಎಲ್ಲಾ ತರದ ಬ್ಯಾಂಕ್ ವ್ಯವಹಾರಗಳು ನಡಿಸಲ್ಪಡುವವು. "ಮುಖ್ಯವಾಗಿ ಭಂಗಾರ ವ ಸರಕು ಈಡಿನ ಮೇಲೆ ಸಾಲವನ್ನು ಕೊಡುವುದು".

ಕಾಯಂ ಠೇವಣಾತಿಗಳು:

ಒಳ್ಳೇ ದರದ ಬಡ್ಡಿಯಲ್ಲಿಯೂ, ಮಾಸಿಕ, ಸೇವಿಂಗ್ಸ್‌ಬೇಂಕ್ ಮತ್ತು ರೇವಣಾತಿಗಳು ಯೋಗ್ಯ ತರದ ಬಡ್ಡಿಯಲ್ಲಿಯೂ ಅಂಗೀಕರಿಸಲ್ಪಡುವವು.

ಹೆಚ್ಚಿನ ಮಾಹಿತಿಗೆ ಕೆಳಗಿನವರಿಗೆ ಬರೆದುಕೊಳ್ಳಿರಿ.

M. R. Punja, *President & Manager*,

ಯಂ. ಆರ್. ಪೂಂಜ, ಪ್ರೆಸಿಡೆಂಟು ಮತ್ತು ಮೆನೇಜರ್.

ಇದೀಗ ಬಂದಿದೆ—

ಹೊಸ ಪುಸ್ತಕ!

ಟಾಲಸ್ಟಾಯಿಯವರ ಕತೆಗಳು

ಶ್ರೀ. ಎಲ್. ಗುಂಡಪ್ಪ, ಎಂ. ಎ.ಯವರಿಂದ ಅನುವಾದಿಸಲ್ಪಟ್ಟು ಟಾಲಸ್ಟಾಯಿಯವರ ಕಥೆಗಳೆಲ್ಲಾ ಕೆನ್ನಡದಲ್ಲಿ ಒಟ್ಟಾಗಿ ಅಚ್ಚಾಗಿ ಬಂದಿವೆ ಈ ಕಥೆಗಳಲ್ಲಿ ಜೀವನಕ್ಕೆ ಸಂಬಂಧಪಟ್ಟ ಎಲ್ಲಾ ಪ್ರಶ್ನೆಗಳ ಚರ್ಚೆಯೂ ಇದೆ. ಆದುದರಿಂದ ಸ್ತ್ರೀಪುರುಷರೆಲ್ಲರೂ ಅವಶ್ಯ ಓದಬೇಕು.

೪೦೦ ಪುಟಗಳು — ಒಂದೂವರೆ ರೂಪಾಯಿ ಬೆಲೆ.

ಪ್ರತಿಗಳು ಸಿಗುವ ಸ್ಥಳ—

ಕರಿಯರ ಪ್ರಪಂಚ, ಉಡುಪಿ.

ವಿಜಯನಗರ ಸ್ಮಾರಕೋತ್ಸವ ನಿಮಿತ್ತವಾಗಿ ಹೊರಡಲಿರುವ

ಜಯಕರ್ನಾಟಕದ

ವಿಜಯನಗರ ವಿಶೇಷ ಸಂಚಿಕೆ

ವಿಶೇಷ ಸಂಪಾದಕರು: ಪ್ರೊ. ಎಸ್. ಎಸ್. ಮಾಳವಾಡ, ಎಂ.ಎ

ಅಖಿಲ ಭಾರತದ ಪ್ರಸಿದ್ಧ ವಿದ್ವಾಂಸರ ಲೇಖನವೈಭವ!

ವಿಜಯನಗರಕ್ಕೆ ಸಂಬಂಧಿಸಿದ ಚಿತ್ರಮಾಲೆಗಳ ಐಶ್ವರ್ಯ!!

ಹೊಳಪಿನ ಹಾಳೆ ═══ ಅಚ್ಚಿನ ಅಚ್ಚುಕಟ್ಟು

ಬೆಲೆ: ಎಂಟಾಣೆ ಮಾತ್ರ

ಜಯಕರ್ನಾಟಕವು ಜನವರಿಯಿಂದ—ವಿಶೇಷ ಸಂಚಿಕೆಯಿಂದ ಮೊದಲ್ಗೊಂಡು ದೊಡ್ಡ ಆಕಾರದಲ್ಲಿ (ಡೆಮಿ ¼ ದಪ್ಪಿ) ಹೊರಡುವುದು!

ಆಜೀವನ ಚಂದಾದರವನ್ನು ಇಳಿಸಿದೆ—ರೂ. ೪—೮—೦ ಮಾತ್ರ!

ಚಂದಾದಾರರಾಗಬೇಕೆನ್ನುವವರಿಗೂ ಜಾಹಿರಾತುದಾರರಿಗೂ ಸುಸಮಯ

ಜಯಕರ್ನಾಟಕ ಕಾರ್ಯಾಲಯ, ಧಾರವಾಡ.

ತುಳುನಾಡ್ ವೈದ್ಯಶಾಲೆ, ಉದ್ಯಾವರ, ದ. ಕ.

ಕೊಲೆರಾ ಫಿಲ್ಸ್

ಕೊಲೆರಾ ರೋಗಕ್ಕೆ ರಾಮಬಾಣ ಔಷಧ.

೧೦೦ ಮಾತ್ರೆಗಳಿಗೆ ರೂ. ೫—೮—೦

ಭೈರವ ಮಾತ್ರೆಗಳು

ಬಾಣಂತಿ ರೋಗಸಂಬಂಧವಾದ ಸಕಲ ರೋಗಗಳಿಗೂ ದಿವ್ಯೌಷಧ.

೧೦೦ ಮಾತ್ರೆಗಳಿಗೆ ರೂ. ೩—೮—೦

ಎಲ್ಲಾ ತರದ ರೋಗಗಳಿಗೂ ಅನುಭವಸಿದ್ಧವಾದ ದಿವ್ಯೌಷಧಗಳು ದೊರೆಯುತ್ತವೆ.

ಯು. ಪಿ. ನೇಸ್ತ್ರ, ಗೋಲ್ಡ್‌ಮೆಡಲ್ಡ್ ಫಿಜಿಸಿಯನ್.

THE

PANGAL NAYAK BANK

LIMITED.

ESTABLISHED 1920.

Head Office: UDIPI.

Branches: MANGALORE and KATAPADI.

Fixed loans and Overdraft advances are granted on the pledge of gold articles, on the mortgage of immovable properties and on the personal security of approved constituents on favourable terms.

Genuine trade bills, cheques, drafts etc., are discounted at a nominal charge.

Current, Savings Bank and Cumulative deposits are accepted at moderate rates of interest.

Fixed Deposits are received and interest allowed at 4% on 1 year and at 4½% on 2 years deposits.

Every other description of up-to-date Banking business is also undertaken.

A few shares are also available to the public

ಮಿರಜದಲ್ಲಿಯ ಸುಪ್ರಸಿದ್ಧ ವೈದ್ಯರಾದ ಎಮ್. ಕೆ. ರಜಪೂತ ಇವರ ಸ್ವದೇಶಿ ಔಷಧಗಳು.

ಗುಣ ಬಾರದಿದ್ದರೆ — **ಸ್ತ್ರೀಧರ್ಮ ಸಂಜೀವಿನೀ ಚೂರ್ಣ** (ರಿಜಿಸ್ಟರ್ಡ) — **ಹಣ ಪರತ**

ಈ ಚೂರ್ಣವು ಕೆಂಪು ಬಿಳಿ ಶರಿಗೆ ಶತ್ರುವಾಗಿರುವುದು. ಅನಿಯಮಿತ್ರನದಿಂದ ಮುಟ್ಟಾಗುವಿಕೆ, ಕ್ಷೀಣ ವೈಯಿಲ್ಲಿ ನೋವು, ಉಷ್ಣತಾ ಕ್ಷೀಣತಾ ಗರ್ಭಾಶಯದಲ್ಲಿರುವ ದೋಷ ಗರ್ಭಧಾರಣವಾಗದಿರೋಣ, ಅಕಾಲದಲ್ಲಿ ಗರ್ಭಪತನವಾಗೋಣ ಈ ಮೊದಲಾದ ರೋಗಗಳು ನಿಶ್ಚಯವಾಗಿ ನೆಟ್ಟಗಾಗಿ ಗರ್ಭಕೋಶವು ಸ್ವಚ್ಛವಾಗುವದು. ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡಿಕೊಳ್ಳುವ ಮೊದಲು ಗೃಹದೇವತೆಯಾದ ಮೊದಲನೇ ಪತ್ನಿಗೆ ಈ ಚೂರ್ಣ ಅವಶ್ಯ ಕೊಡಿರಿ. ಮುಖ್ಯ ಸರ್ಟಿಫಿಕೇಟ ಮ. ರಾ ಎ. ಎಮ್. ಇನ್ಸ್‌ಪೆಕ್ಟರ ಬೆಳಗಾವ:—ಈ ಚೂರ್ಣದಿಂದ ನನ್ನ ಕುಟುಂಬದ ಹೊಟ್ಟೆಯೊಳಿನ ರಕ್ತ ಗುಲ್ಮದ ಗಂಟು ನಿವಾರಣೆಯಾಯಿತು. ಮತ್ತು ಎಲ್ಲ ರೋಗಗಳು ನಿಶ್ಶೇಷವಾದವು. ನನ್ನ ಮಿತ್ರನ ಹೆಂಡತಿಯ ರಕ್ತ ಮತ್ತು ಶರಗು ಇತ್ಯಾದಿಂತಾದವು. ಔಷಧ ದಿನಸದ ದಬ್ಬಿಯ ಕಿಮ್ಮತು ರೂ. ೩ ಟಿ.ಖಿ. ಆಣೆ, ೮ ದಬ್ಬಿಗೆ ೪ರೂ.]

ಸಂತತಿ ಪ್ರತಿಬಂಧಕ ಚೂರ್ಣ. (ರಿಜಿಸ್ಟರ್ಡ) — [೨ ಪಿ ಖರ್ಚು ಆಣೆ ೮.

ಬಹಳಸಾರಿ ಹಡಿಯುವುದರಿಂದ ಅತಿಶಯ ಅಶಕ್ತರಾಗುತ್ತದೆ ಬಹಳ ಬಡತನದಲ್ಲಿ ವಿಶೇಷ ಮಕ್ಕಳಾಗುವದರಿಂದ ದುಃಖವಾಗುತ್ತದೆ. ಈ ಕಾರಣದಿಂದಲೂ ಅಥವಾ ಬೇರೆ ಕಾರಣದಿಂದಲೂ ಮಕ್ಕಳನ್ನು ಹಡಿಯುವದು ಬಂಡಾಗಬೇಕೆಂದು ಇಚ್ಛಿಸುವವರು ಈ ಚೂರ್ಣವನ್ನು ಉಪಯೋಗಿಸಬೇಕು ಇದರ ಸೇವನೆಯಿಂದ ಮುಟ್ಟಾಗುವಿಕೆಯು ನೇಮದಂತೆ ಸುರುವಾಗುವದು. ಶರೀರಕ್ಕೇನೂ ಅಪಾಯವಾಗದೆ ಸಂಸಾರ ಸುಖವು ಪೂರ್ಣವಾಗಿದೆ. ಕೂಡಲೇ ಗರ್ಭಧಾರಣ ಬಂದಾಗುವುದು: ತದನಂತರ ಏನು ಮಾಡಿದರೂ ಸುರುವಾಗುವದಿಲ್ಲ. ಮೊದಲೇ ಪೂರಾ ವಿಚಾರಮಾಡಿ ಔಷಧ ಬೇಡಿರಿ. ಮ ಖ್ಯ ಸರ್ಟಿಫಿಕೇಟ ಡಾಕ್ಟರ ಬಿ. ಎ. ವೈದ್ಯ ಎಲ್ ಸಿ. ಪಿ. ಎಸ್. ಮೂರು ಕೇಳವಾ ಮಾಹಿಮೂ ಜಿ. ರಾಣೆ. ಈ ಚೂರ್ಣದಿಂದ ಯಾವ ತರದ ಅಪಾಯವಾಗದೆ ಗರ್ಭಧಾರಣವಾಗುವದಿಲ್ಲ. ಪೂರ್ಣ ಗುಣಕಾರಿ

ವಿಳಾಸ:—ಸಂಜೀವಿನೀ ಔಷಧಾಲಯ, ಮು. ಪೊ. ಮಿರಜ, S. M. C.

ಸಮಾಚಾರ ಸಂಗ್ರಹ

ಪೋಲೀಸು ಕಾನ್ಸ್ಟೇಬಲಿಗೆ ಮೂರು ತಿಂಗಳ ಕಠಿಣ ಶಿಕ್ಷೆ.

ಕೊನೂರಿನಲ್ಲಿ ನಾರಾಯಣ ಮೆನೋನ್ ಎಂಬ ಕಾನ್ಸ್ಟೇಬಲ್, ಕಂಡರೆ ಭಯಭಕ್ತಿ ಕಾಣಿಕೆಗಳಿಂದ ಮುನ್ನಿಸಬೇಕಲ್ಲವೆ? ಆದರೆ ನೆಲ್ಲಿಕುಟ್ಟಿಯೆಂಬುವನೊಬ್ಬ ಮೊದ್ದು ಸ್ವಾಮಿ ಹಾಗೆ ಮಾಡಲಿಲ್ಲ. ಆ ಕಾನ್ಸ್ಟೇಬಲ್ಲಿಯ ಎದೆನೋಕ್ಕು ಇಳಿಸಬೇಕೆಂದು ಮೆನೋನನು ಅವನನ್ನು ಸ್ಪೆಷಲಿಗೆ ಎಳೆದು ಕೊಂಡುಹೋಗಿ ತನ್ನ ಬೂಟಿನಿಂದ ಕಾಲಿನಿಂದ ಎದೆಗೆ ಒದ್ದ. ಕೆಚ್ಚದಿ ಎಲುಬು ಮುರಿಯಿತು! ಸಿಗರ್ಾದಿ ನಡೆಯಿತು. ತನಗೆ ತಡೆಯಲಾರದಷ್ಟು ಸಿಟ್ಟಿಬ್ಬಿಸಿದುದರಿಂದ ಹಾಗೆ ಮಾಡಿದೆನೆಂದು ಕಾನ್ಸ್ಟೇಬಲನ ಡಿಫೆನ್ಸ್! ಆದರೆ ಶಾಂತಿರಕ್ಷಣೆಯ ಸಿಬ್ಬಂದಿಗೆ ಅಷ್ಟೊಂದು ಸಿಟ್ಟು ಬಂದುದೇ ತಪ್ಪೆಂದು ಜೋಯಿಂಟ್ ಮೆಜಿಸ್ಟ್ರೇಟರು ಮೆನೋನನಿಗೆ ಮೂರು ತಿಂಗಳ ಕಠಿಣ ಸಜಾ ಎಳೆದೇ ಬಿಟ್ಟರು

ರೈಲುಬಂಡಿ ನಿಲ್ಲಿಸಿದುದಕ್ಕೆ ಜುಲ್ಮಾನೆ.

ರೈಲು ಬಂಡಿಯಲ್ಲಿದ್ದವರಿಗೆ ಆಕಸ್ಮಾತ್ತಾಗಿ ಗಂಡಾಂತರವುಂಟಾಗಿ ಬಂಡಿ ನಿಲ್ಲಿಸ ಬೇಕಾದ ಆವಶ್ಯಕತೆಯುಂಟಾದಲ್ಲಿ ಹಾಗೆ ಮಾತಲಿಕ್ಕಾಗಿ ಬಂಡಿಯ ಮೇಲ್ಸಡಯಲ್ಲಿ ಒಂದು ಸರಪಳಿಯುಂಟಿಸ್ಟೆ? ಅದನ್ನೆಳೆದರೆ ಬಂಡಿ ನಿಲ್ಲುವುದು. ಹಾಗೆಂದು ರಾಮಸ್ವಾಮಿ ಪಿಳ್ಳೆಯು ಕೇಳಿದ್ದ. ಆತನು ಒಂದು ಸ್ಟೇಷನಿನಲ್ಲ ಬಂದಿಹತ್ತಿ ಸ್ವಲ್ಪ ದೂರ ಪ್ರಯಾಣಮಾಡುವಷ್ಟರಲ್ಲಿ ತನ್ನ ಬಟ್ಟೆಯ ಗಂಟು ಸ್ಟೇರಸಿನಲ್ಲ ಉಳಿದು ಹೋಯಿತೆಂದು ತಿಳಿಯಿತು. ಮೂಗೊರಸುವ ಹರಕು ಕರ ವಸ್ತ್ರ ಕೈತಪ್ಪಿ ಬಿದ್ದರೂ ಓಡುವ ಬಸ್ಸನ್ನು ಮಂದಿಯು ನಿಲ್ಲಸುತ್ತಿದ್ದುದನ್ನು ಅವನೆಲ್ಲೋ ನೋಡಿರಬೇಕು. ಇದು ತನ್ನ ಬಟ್ಟೆಯ ಗಂಟಲ್ಲವೆ? ಸರಪಳಿಯನ್ನು ಎಳೆದೇ ಬಿಟ್ಟ. ಬಂಡಿ ನಿಂತಿತು. ಬಟ್ಟೆಯ ಗಂಟೂ ಅವನಿಗೆ ಮೊರೆಯುವ ವ್ಯವನ್ನೆ ಯಾಯಿತು. ಆದರೆ ಆತನ ಮೇಲೆ ಬಿಟ್ಟೆ ನಡೆಮ ಎಲ್ಲುಪುದಪ್ಪ ಸ್ಟೇಷನ್ ಫೈಲ್ವೇ ಫಸ್ಟ್ ಕ್ಲಾಸ್ ಮೇಜಿಸ್ಟ್ರೇಟರು ೬ ರೂಪಾಯಿ ಜುಲ್ಮಾನೆ ಅಥವಾ ಒಂದು ವಾರದ ಸಾಮಾನ್ಯ ಜೈಲು ಶಿಕ್ಷೆನಿಧಿಸಿದರು. ಪ್ರಯಾಣಿಕರು ಸರಪಳಿ ಎಳೆಯುವ ಮೊದಲು ಚೆನ್ನಾಗಿ ವಿಚಾರಮಾಡಿಕೊಳ್ಳಲಿ!

ವಜ್ರದ ಬೆಲೆಯು ಏರುವ ಸಂಭವವಿದೆ.

ಖನಿಗಳಿಂದ ವಜ್ರವು ಸಿಗುವುದು ಕಡಿಮೆಯಾಗುತ್ತಾ ಬರುತ್ತಿದೆ. ದೊಡ್ಡ ದೊಡ್ಡ ವಜ್ರಗಳು ಸಿಗುವುದಂತೂ ತೀರ ವಿರಳವಾಗಿದೆ ಖನಿಗಳಿಂದ ವರ್ಷವರ್ಷ ವಜ್ರಗಳ ಪೂರೈಕೆಯು ಹೇಗೆ ಕಡಿಮೆಯಾಗುತ್ತಾ ಬಂದಿದೆ ಎಂಬುದನ್ನು ಕಂಕೆ ಸಂಸ್ಥೆಗಳಿಂದ ಲಂಡನಿನ ಸಂಜೆ 'ಎಕ್ಸ್ಪ್ರೆಸ್' ಎಂಬ ಪತ್ರಿಕೆಯು ಕೂಲಂಕಷವಾಗಿ ಕಾಣಿಸಿ ವಜ್ರದ ಬೆಲೆಯು ಏರುವ ಸಂಭವವಿದೆ ಯೆಂದೂ ಭವಿಷ್ಯಸಾರುತ್ತಿದೆ.

ಆರು ಚೀನೀ ಶಿಖಾಮಣಿಗಳು ಹಿಡಿಯಲ್ಪಟ್ಟರು.

ಸಗಪಟಾಮಿನ ಹತ್ತಿರದೊಂದು ಹಳ್ಳಿಯ ಮನೆಯೊಳ್ಳು ಹಲವು ಜಿಲ್ಲೆಗಳ ಜೋರಾಗೇಸರ ಪುಮುಟರ ಸಮ್ಮೇಳನವಾಗುತ್ತಲಿತ್ತು ಡಿಸ್ಟ್ರಿಕ್ಟ್ ಪೋಲೀಸು ಸುಪರಿಂಟೆಂಡರಿಗೆ ಅದರ ಸೋಪು ಸಿಕ್ಕಿತು ಪೊಲೀಸು ವಡೆಯನ್ನು ಹಿಡಿದುಕೊಂಡುಹೋಗಿ ನಡುರಾತ್ರಿಯಲ್ಲು ಆ ಮನೆಯನ್ನು ಮುತ್ತಿ ಒಳಗೆ ಪ್ರವೇಶಿಸಿದರು. ಜೋರರೆ ಮುಂದಾಗಿ ಆರುನಳಿಗೆಯ ರಿವೊಲ್ವರನ್ನು ಗುಂಬಿಸಿಯೇ ಹಿಡಿದುಕೊಂಡಿದ್ದ. ಆದರೆ ಪೋಲೀಸರು ಜಾತುರ್ಯದಿಂದ ಕೈಹಿಡಿದು ರಿವೊಲ್ವರನ್ನು ಸ್ವಾಧೀನಪಡಿಸಿಕೊಂಡರು ಕನ್ನ ಕೊರೆಯುವ ನಾಹಿತ್ಯಗಳೂ ಕತಿ ಚೂರಿ ಮುಂತಾದ ಕೊಲೆಗಡುಕ ನಾಧನಗಳೂ ಮೊರೆತವು. ಈ ಆರು ಜೋರ ಶಿಖಾಮಣಿಗಳ ಬೇರೆಬೇರ ಜಿಲ್ಲೆಗಳ ಎಷ್ಟೋ ಕಳವು ದರೋಡೆಗಳು ತಕ್ಷೀರು ಇವರ ಪತ್ತೆಯಾಗದೆ ವಿಚಾರಣೆಯಲ್ಲಿ ಉಳಿದಿವೆಯಂತೆ.

ಬರಲಿರುವ ಸುಧಾರಣೆಯ ಫೆಡರಲ್ ಕೋರ್ಟಿನ ಜಡ್ಜರು.

ಮುಂದೆ ಎಪ್ರಿಲಿನಲ್ಲಿ ಜ್ಯಾರಿಗೆ ಬರಲಿರುವ ಹೊಸ ಶಾಸನ ಪದ್ಧತಿಯ ಮೇರೆಗೆ ನಿರ್ಮಾಣವಾಗುವ ಫೆಡರಲ್ ಕೋರ್ಟಿಗೆ ಮದ್ರಾಸಿನ ಪ್ರಖ್ಯಾತ ಎಡ್ವೊಕೇಟ ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಜಜ್ಜರಾಗುವರೆಂದು ಪ್ರಬಲವಾದ ಸುದ್ದಿ.

ವಿಶ್ವದ ವಿಚಿತ್ರ ಗತಿ

ಹೆಣ್ಣು ಗಂಡಾಗಿ ತಿರುಗಿ ಹೆಣ್ಣಾದುದು!

ಅಸಲ ಹೆಸರು ಬೋಸಿಕಾ. ತನ್ನ ಹದಿನಾರನೆಯ ವಯಸ್ಸಿನಲ್ಲ ಡಾಕ್ಟರ ಸೊಬ್ಬನು ತನಗೆ ಕನ್ನ ಚಿಕಿತ್ಸೆ ಮಾಡುತ್ತಿದ್ದಾಗ ಅವನಲ್ಲಿ ಪುರುಷ ಲಕ್ಷಣಗಳನ್ನು ಕಂಡು ತನ್ನ ಪತ್ತಿಗೊಳ್ಳಲು ಕನ್ನ ಚೋಕ್ಕ ಡಿಸಿದ. ತದನಂತರ ಅವನು ಗಂಡಾದನು. ಸಿಪಾಯಿ ಗದ್ದಲಗಳು ಬಂದವು ಆದರೆ ತಾನೇ ಸಯಸ್ಸಿನಲ್ಲ ಅನ್ನ ಯುದ್ಧಕ್ಕೆ ಹೋಗಿ ತಿರುಗಿ ಬಂದಾಗ ಪುರುಷ ಲಕ್ಷಣಗಳೇ ಕಾಣ ಮೊದಗಿದವು. ಅನ್ನ ಎಷ್ಟೋ ಪ್ರಬಲವಾಗಿ ತ್ತೆಂದರೆ ಇತ್ತೀಚೆಗೆ ಅವಳೊಬ್ಬ ಯುವತಿಗೆ ಸೊಬ್ಬಹೊಗಿದ್ದಾಳೆ. ಅಲ್ಲದೆ ತನ್ನನ್ನು ಸೊದಲು ಗಂಡಾಗಿ ಪರಿವರ್ತಿಸಲು ಶಸ್ತ್ರ ಚಿಕಿತ್ಸೆ ಮಾಡಿದ ಡಾಕ್ಟರನ ಸೋರೆ ದಾವಾ ಮಾಡಿದ್ದಾಳೆ.

ಬನವನ ವಿಚಿತ್ರ ಬುದ್ಧಿ ಶಕ್ತಿ.

ಲಂಡನಿನ 'ಸೀಪಲ್' ಎಂಬ ಪತ್ರಿಕೆಯಲ್ಲ ಲಿವ್ಯಾ ಜಿಲ್ಲೆಯ ಒಂದು ಬನವನ ವಿಷಯ ವಿಚಿತ್ರ ಕತೆ. ಜನರಲ್ಲಿಂದ ಯಾರಾ ಬೊಬ್ಬನ ಹೆಸರು ಹೇಳಿ ಅವನನ್ನು ಹುಡುಕಿ ಕೆಗೆಯೆಂದರೆ ಅದು ಅವನ ಬಳಿಗೆ ಹೋಗಿ ಸುಮಾರಿಂದ ಸುಮಾರಿಗೂ ಕೋಸಿನುವುದಂತೆ ಇನ್ನೂ ಎಲಗಳನ್ನು ಕೆಲವರ ಕೈಯಲ್ಲಿ ಬೊಟ್ಟು ಡ್ಡೆಸುವಾಗ ಜಾಣಿ, ಕಳಸಾರು ಆರು, ಇಸ್ಪೀಟು ಎಕ್ಕಾ ಇತ್ಯಾದಿ ಯಾರ ಜೂರಕ್ಕೆಯಲ್ಲಾಂಬೆಂಬ ಕೇಳಿದರೆ ಅವರೆಬರ ಬಳಿಗೆ ಹೋಗಿ ಮುಟ್ಟಿಕೊಂಡಿಸುವನಂತೆ! ಅದರ ಈ ಅಸಾಮಾನ್ಯ ಬುದ್ಧಿ ಶಕ್ತಿಯಲ್ಲು ಸಂಶಯ ಪಡುವವರು ಯಾರಾದರೆ ಅಂತವರನ್ನು ತೋರಿಸಿಕೊಟ್ಟು ತನ್ನ ಕೌಶಲ್ಯವನ್ನು ಪ್ರದರ್ಶನವನ್ನು ಮಾಡುವನಂತೆ.

ದೇಗುಲದೆದುರಲ್ಲಿ ಹೆಣ್ಣು ಮಗು

ನಾಸಿಕದ ಕಲಾರಾಮ ದೇವಸ್ಥಾನದ ಬಾಗಿಲಲ್ಲ ಬೆಳಗಾಗುವಾಗ ಒಂದು ಹೆಣ್ಣು ಮಗು ತದರ ಕುತ್ತಿಗೆಯಲ್ಲಿ ಅದರ ಹೆತ್ತವರು ಬರೆದಿರುವ ಕಾಗದವೊಂದು ಜೋಡಿಸಲ್ಪಟ್ಟಿತ್ತು. ಅದರಲ್ಲಿ ಈ ಮಗುವನ್ನು ಪೋಷಿಸಿ ಬೆಳೆಸಬೇಕೆಂದು ಬೇಡಿಕೊಳ್ಳಲಾಗಿತ್ತು. ಈ ಮಗುವಿನ ಜಾತಕವನ್ನು ಜ್ಯೋತಿಷಿಗಳಿಗೆ ತೋರಿಸಿದಾಗ ಅವರು ಈ ಮಗುವು ಮುಂದೆ ಮಹಾ ಪತಿವ್ರತೆಯಾಗುವಳೆಂದು ಹೇಳಿದರಂತೆ. ಆದುದರಿಂದ ಈ ಮಗುವನ್ನು ಅನಾಥಾಲಯಕ್ಕೆ ಒಪ್ಪಿಸಲಾಗಿದೆ

ಶ್ರೀ ಕೃಷ್ಣನು ಪರನಾಗದಿದ್ದು ದಕ್ಕಾಗಿ ಆತ್ಮ ಹತ್ಯೆ.

ಸೌಟ್ಲೆಂಡ್ ಪ್ರೈವಿನಿನ ಬೆಂಪರ್ ಎಂಬಲ್ಲಿಯಿಂದು ಹುಡುಗಿ ಶ್ರೀ ಕೃಷ್ಣನೆಂಬೆಸಗೆ ಗಂಡನಾಗಬೇಕೆಂದು ಹೇಳಿಕೊಂಡು ತಿರುಗಿ ದಳು. ದೇವಮಗುವೇನೂ ನಿನ್ನೊಡನೆ ಕ್ಕಾಗಿ ಹುಟ್ಟಿಕೊಳ್ಳುತ್ತಿದ್ದುದೇನು ಹೆತ್ತವರು ಆ ತಪ್ಪಿಗೆ ಲಕ್ಷಣಕೊಡಲಲ್ಲ ಕೊನೆಗೆ ಅವಳಿಗೊಬ್ಬ ವರನನ್ನು ಗೊತ್ತುಮಾಡಿ ಮದುವೆಗೆ ದಿನ ನಿಶ್ಚಿಯಿಸಿದರು ಮದುವಿನ ಮದಿಮವಯಂಬಾಗ ಮುಂಜಾನೆ ರಾತ್ರೆ ಹುಡುಗಿಯು ಶ್ರೀ ಕೃಷ್ಣನ ಪತ್ನಿತನವನ್ನು ಎವಗಾಸಿಸಿಕೊಂಡು ಬಾನಿಗೆ ಹಾರಿ ಪ್ರಾಣಕಳಕೊಂಡಳು! ಇದು ಕಲಿಯುಗ! ಏನೆಲ್ಲ ನಡೆಮನ ಪ್ರಾಸರಯುಗದಲ್ಲಿ

ಸುರಂತ ಪ್ರೇಮ ನಾಟಕ ಆಕಾರವಲ್ಲಿ!

ಪಾರಿನ ನಗರವ ಸಮೀಪವ ಒಬ್ಬ ಹುಡುಗಿಲ್ಲೆಂದು ಬೆಳ್ಳಿಗೆ ಒಬ್ಬ ಯುವಕರು ಒಡಿಮೊಲದು ತಡೆಯುತ್ತಿದ್ದರು. ಜನಕೂಡಿ ನಿಂತಾಗ ಅಲ್ಲಿ ತಾನು ಹಿಂದಿನ ರಾತ್ರೆಯಲ್ಲಿ ಲ್ಲಾ ಲೆಫ್ಟಿಮೋಂ ಎಂಬವಳಿಂದಿಗೆ ಏನಾನವಮಲ್ಲವೆಂದೂ ತಡನ್ನು ನಾಗಸುತ್ತಿದ್ದಾಗ ಲಲ್ಲೆಮೋಂಟಲು ಹಿಂದಿನಿಂದ ತನ್ನ ಕುತ್ತಿಗೆಗೆ ಗುಂದು ಮೊಡವೆಂಬೂ ಹೇಗೂ ಪಪ್ಪಣಿಟ್ಟು ಆ ಏನೂನವನ್ನು ಪೊಲೀಸಿಗೆ ಇಗಿಸಿದಾಗ ಅವಳು ತನ್ನನ್ನು ಮೂರಿದಾಗ ತಾನೇ ವಿಮಾನವನ್ನು ಮೇಲಕ್ಕೆಂಪಿ ಕೊಂದು ಹೋದೆಬೆಂದೂ ಅವನ ಪಿಯಾಚೆಯೆಂದೂ. ಕಾರಣವನ್ನಾತ ಹೇಳುವವಿಲ್ಲ. ಊಹಿಸುವುದಕ್ಕೆ ಕಡಿವಿಲ್ಲವೆನ್ನಿ. ಅದೇ ಜೆಗ್ಗೆ ಲಂಡನಿಂದ ಹೊರಡಲಿಯುವ ಬಯಲಲ್ಲ ಬಂಪು ವಿಮಾನವು ಮುಂಬಿ ಬೀಂಬಸ್ಥರಲ್ಲ ನಲುಮುಟ್ಟಿತು. ಆದರೆಲ್ಲದ್ದನ್ನು ತಾನು ಲೆಫ್ಟಿಮಾಂಟಲು ಫ್ರಾನ್ಸಿನಿಂದ ಹೊರಟಿಲು ತಾನೆಲ್ಲದೆ ನೆಂದು ತಿಲಿಯಮೆ ಗಾಬರಿಗೊಂಡು ವಿಮಾನವನ್ನು ಲಿಸಲು ಯತ್ನಿಸಿ ಅವಗಡಕ್ಕೀಡಾದನಂದು ಹೇಳಬೇಕು. ವಿಮಾನದಲ್ಲಿದ್ದವರಾರೂ ಉಳಿದಿಲ್ಲ!

THE DIRECTORS OF
The Udipi Bank Limited
extend to you and yours
Greetings of the Season
and
Hearty Wishes for a
Happy and Prosperous
NEW YEAR

The Udipi Bank Transacts
All kinds of Banking Business

ESTD: 1925

ದ್ವಿತೀಯ ಸಂಸ್ಕರಣ

ಕಾವ್ಯಸಾಮ್ರಾಜ್ಯ

ವಿಶ್ವಕರ್ನಾಟಕದೊಗಿನ
ಆಧುನಿಕ ತನಿ ಪ್ರಮುಖರ
೪೮ ಸಮಿಗನನಗಳ ಸಂಗ್ರಹ

ಕಿರಿಯ ರವಿ ಚಿತ್ರ ಹಸ್ತೆಯಾಣಿ

'ಆಧುನಿಕ ಕವಿಗಳ ಕವಿತೆಗಳ ಇಂತಹ ಉತ್ತಮ ಸಂಗ್ರಹವನ್ನು ಈ ವರೆಗೆ ಯಾರೂ ಒದಗಿಸಿ ಕೊಟ್ಟಿರುವುದಿಲ್ಲ'. ಎಂಬ ಮಾತಿಗೆ ಪಾತ್ರವಾಗಿ ಅಲ್ಪಾವಕಾಶದಲ್ಲಿಯೇ ದ್ವಿತೀಯಾವೃತ್ತಿಯನ್ನು ಕಂಡಿನ ಗ್ರಂಥ! ಬಾಹ್ಯಾಂಗವು ನಯನಮನೋಹರವಾಗಿದೆ ಅಂತರಂಗವು ಜೇತೋಪಹಾರಿಯಾಗಿದೆ.

ಉಡುಪಿ

ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

'ನವಯುಗ'ದ

ಪ್ರತಿನಿಧಿಗಳಿಲ್ಲದ ಕೇಂದ್ರಗಳಲ್ಲಿ ಬಿಡಿಪ್ರತಿಗಳನ್ನು ವಿಕ್ರಯಿಸುವುದಕ್ಕೂ 'ನವಯುಗ'ಕ್ಕೆ ಚಂದಾದಾರರನ್ನು ಸೇರಿಸುವುದಕ್ಕೂ ಜಾಹಿರಾತುಗಳನ್ನು ಸಂಗ್ರಹಿಸುವುದಕ್ಕೂ ಉದಾರ ಶರ್ತಗಳ ಮೇಲೆ ಅನುಭವಶಾಲಿಗಳಾದ

ಕುಶಲ ಏಜಂಟರು ಬೇಕಾಗಿದ್ದಾರೆ.

ಹೆಚ್ಚಿನ ಮಾಹಿತಿ ಬಗ್ಗೆ ಪತ್ರವ್ಯವಹಾರ ಬೆಳೆಯಿಸಿರಿ.

ಮೆನೇಜರ್—'ನವಯುಗ',
ಉಡುಪಿ.



ಗೃಹಕೃತ್ಯಕ್ಕೆ ಬೇಕಾದ ವಿವಿಧ ತಾಮ್ರದ ಪಾತ್ರೆಗಳು.

ಗೃಹಸ್ಥರೇ!

ಗೃಹಕೃತ್ಯೋಪಯೋಗದ ಎಲ್ಲಾ ವಿಧದ ತಾಮ್ರ ಹಿತ್ತಾಳೆ, ಜರ್ಮನ್ ಬೆಳ್ಳಿ, ಬೆಳ್ಳಿ ಸಾಮಾನುಗಳು ಎಲ್ಲಿ ಸಿಗುತ್ತವೆ ಬಲ್ಲಿರಾ?

ರಥಬೀದಿಯಲ್ಲಿ ಕಲ್ಕಂಜೆ ವ್ಯಾಸಾಚಾರ್ಯರ ಅಂಗಡಿಯಲ್ಲಿ ಮಾತ್ರವೇ.

ಸ್ವದೇಶಿ ಕೈಗಾರಿಕೆ! ಹದಿನೆಂಟು ವರ್ಷಗಳ ಅನುಭವ!

ಮನೆಯ ಉಪಯೋಗಕ್ಕೂ ಉಡುಗೊರೆ ಕೊಡಲಿಕ್ಕೂ ದಾನಮಾಡಲಿಕ್ಕೂ ಬೇಕಾದ ನಮೂನೆಯ ಸಾಮಾನುಗಳನ್ನು ಮನಮೆಚ್ಚುವ ಮಾದರಿಯಲ್ಲಿ ತಕ್ಕ ಕಾಲದಲ್ಲಿ ನಾವೂಕಾಗಿ ತಯಾರುಮಾಡಿಸಿಯೂ ಕೊಡಲಾಗುವುದು.

ಹೆಚ್ಚಿನ ವಿವರಗಳಿಗೆ ಸಚಿತ್ರ ಕೆಟಲಾಗಿಗೆ ಬರೆಯಿರಿ.

ಕಲ್ಕಂಜೆ ವ್ಯಾಸಾಚಾರ್ಯ,
ಪಾತ್ರೆ ವ್ಯಾಪಾರಿ, ರಥಬೀದಿ, ಉಡುಪಿ.

ಸ್ತ್ರೀ ಮಲಯಾಳದ

ಸ್ತನಶ್ರೀಧಃ

THE MALAYALA STHANO STHEDAH OUSHADHA CO. Post-CHALAPURAM, MALABAR

ರಹಸ್ಯಗಳು

ಇತ್ತೀಗ ತಿಳಿದುಬಂದಿದೆ, ಪುರುಷರನ್ನಾವಾದು ಆಕರ್ಷಿಸುವುದೆಂಬುದನ್ನು ಸ್ತ್ರೀಯರಿಗೆ ಒಳ್ಳದು. ನೀವೆ ಪುರುಷನೊಬ್ಬನನ್ನು ಕರೀಕ್ಷಿಸಿ ನೋಡಿದ್ದಲ್ಲಿ, ಅವನ ಕಣ್ಣುಗಳು ಸ್ತ್ರೀಯರ ಮುಖದಿಂದ ಕೆಳಗೆ ಕುಚಕ್ಕಳಕ್ಕೆ ಜಲಿಸಿ ಕುಚಗಳು ಉನ್ನತವಾಗಿ, ಮುಂದಕ್ಕೆ ಯೌವನಯುಕ್ತವಾಗಿ ಒಳ್ಳೆಶಕವಾಗಿರುವವೋ ಎಂದು ನೋಡುವವು.

46 ದಿವಸಗಳಲ್ಲಿ ಮನೋಹರ ಕುಚಸ್ಥಲದ ಗ್ಯಾರಂಟಿ, ಇಲ್ಲವಾದರೆ ಹಣ ವಾಪಾಸು.

ಪ್ರಖ್ಯಾತ ಮಲಯಾಳಿ ರಹಸ್ಯ ಸ್ಥನಶ್ರೀಧೇ:—ಅತ್ಯಲ್ಪ, ಚಂತೆ, ಪ್ರಾಯ ಆಗಾಗಿನ ಹರಿಗೆ ಸಮಿತ್ತ ಸ್ತ್ರೀಯರ ಎದೆಯ ಅಳತೆಯನ್ನು ನಶ್ಯವಾಗಿದ್ದರೆ, ಕುಚಗಳು ಸರಿಯಾಗಿ ಬೆಳೆಯದಿದ್ದರೆ, ಚಪ್ಪಟೆಯಾಗಿದ್ದರೆ, ಬಲವಿಲ್ಲದೆ ತೂಗಾಡಿಕೊಂಡಿದ್ದರೆ, ಬಿಡ್ಡು ಕೊಂಡಿದ್ದರೆ, ಜೊಳ್ಳಾಗಿ ಅಥವಾ ಬಿರು ತಗ್ಗಾಗಿದ್ದರೆ, ಸದಗಳು ದುರ್ಬಲವಾಗಿದ್ದು ಕುಚಗಳನ್ನು ಸ್ಥಿರವಾಗಿರಿಸಲಾರವಾದರೆ

ದಿ ಮಲಯಾಳಿ ಔಷಧ ಕಂಪೆನಿ, ಫಲಪುರಮ್ ಇವರು ತಮ್ಮ ಪ್ರಖ್ಯಾತ ವೈಕ್ಷೇಯಿಂದ ಸಹಾಯನೂಡುವರು, ಬಿಡ್ಡುಕೊಂಡಿದ್ದು ವಿರೂಪವಾಗಿ ಚಪ್ಪಟೆಯಾಗಿರುವ ಕುಚಗಳು ಸರಿಯಾಗಿ ದೆಳೆಸಲ್ಪಡುವುವು, ಜೊಳ್ಳುತನವು ತುಂಬಿ ಬರುವುದು, ಕುಚಗಳು ಮನೋಹರವಾಗಿಯೂ, ಸ್ಥಿರವಾಗಿಯೂ, ದುಂಡಗಾಗಿಯೂ ಮಾಡಲ್ಪಡುವುವು. ಪಡಿಲಾಗಿರುವವನ್ನೂ ಸ್ಥಿರವಾಗಿರದು ಮತ್ತು ಕುಚಗಳು ಜೋಗ್ಯವೂ ಮನೋಹರವೂ ಆದ ರೂಪಕ್ಕೆ ತರಲ್ಪಡುವವು. ಕಮ್ಮ ಸೌಂದರ್ಯಕ್ಕೆ ಪ್ರಸಿದ್ಧವೊಂದಿರುವ ಮಲಯಾಳ ದೇಶದ ಸ್ತ್ರೀಯರು ಅನಾದಿಕಾಲದಿಂದ ಜಗದ್ವಿಖ್ಯಾತವಾಗಿ ತಮ್ಮ ಸೌಂದರ್ಯವನ್ನು ಕಾಪಾಡಿಕೊಂಡು ಬಂದಿರುವ ರಹಸ್ಯಗಳಿವೆ.

ಸ್ಥನಶ್ರೀಧ ನಂಬ್ರ 20:—ಒಳಗೆ ತೆಗೆದುಕೊಳ್ಳುವುದಕ್ಕೆ ನಂಬ್ರ ರೂ. ೩. ನಂಬ್ರ ೩೧. ಹೊರಗಣ ಉಪಯೋಗಕ್ಕೆ ರೂ. ೩, ಧರ್ಮಾರ್ಥ ಕಾರ್ಯವಿದ್ದಲ್ಲಿ ಕೆಟಲಾಗಿಗೆ ದಯಮಾಡಿ ಬರೆಕೊಳ್ಳಿ.

ದಿ ಮಲಯಾಳ ಔಷಧ ಕಂಪೆನಿ, ಪೋಸ್ಟ್ ಫಲಪುರಮ್, ಮಲಬಾರ್.

ಈ ಕೆಳಗಣವುಗಳಿಗೆ ನಮ್ಮಲ್ಲಿ ಸಿದ್ಧೌಷಧಗಳಿವೆ.

ಮುಟುವೇದನೆಗಳು, ಸಂತತಿ ನಿರೋಧ, ಧಾತುಶೈತ್ಯ, ಲಿಂಗವೈಫಲ್ಯ, ಗುಹ್ಯೇಂದ್ರಿಯ ರೋಗಗಳು, ಕೈಯಸಂಕಾರಿ, ವಾತರೋಗಕ್ಕಾಗಿ ಸ್ತ್ರೀಧಲ.

ಕೊಂಗ್ರೆಸು ವಾರ

ಅಧ್ಯಕ್ಷರ ಆಗಮನ–ವರ್ಕಿಂಗ್ ಕಮಿಟಿ ಸಭೆ–ವಿಷಯನಿಯಾಮಕ ಮಂಡಳಿ–ಸಮತಾವಾದಿಗಳ ಪರಿಷತ್ತು–ಗಾಂಧಿ-ರೋಯಿಗಳ ಮಾತುಕಥೆ—

ಅಧ್ಯಕ್ಷರ ಆಗಮನ.

ಪಂಡಿತ ಜವಾಹಿರಲಾಲರು ರಾಷ್ಟ್ರಧ್ವಜ ಜಗಳಿಂದಲಂಕರಿಸಲ್ಪಟ್ಟ ಸ್ಪೆಶ್ಯಲ್ ಟ್ರೈನಿನಲ್ಲಿ ಬಂದು ದಶಂಬರ ತಾ. 26ನೇ ಬೆಳಿಗ್ಗೆ 8 ಗಂಟೆಗೆ ಸವದಾ ರೈಲ್ವೇ ಸ್ಟೇಶನಿನಲ್ಲಿಳಿದಾಗ ಜನರು ಅತ್ಯುತ್ಸಾಹದಿಂದ ಆವರನ್ನು ಸ್ವಾಗತೀಕರಿಸಿದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಶಂಕರರಾವ್ ದೇಪೋರವರು ತನ್ನ ಸಮಿತಿಯ ಕಾರ್ಯದರ್ಶಿ, ಆಫೀಸರರು, ಸ್ತ್ರೀ ಮತ್ತು ಪುರುಷಸ್ವಯಂಸೇವಕರ ನಾಯಕರೇ ಮೊದಲಾದವರೊಡನೆ ಅಧ್ಯಕ್ಷರಿಗೆ ಸ್ವಾಗತವನ್ನಿತ್ತು, ಅವರೆಲ್ಲರ ಪರಿಚಯವನ್ನು ಮಾಡಿಕೊಟ್ಟರು. ಅಲ್ಲಿಂದ ಎರಡೂವರೆ ಮೈಲು ದೂರವಿರುವ ಸವದಾ ಹಳ್ಳಿಗೆ ನೆಡೆರುಗಳು ಕಾರಿನಲ್ಲಿ ಒಯ್ಯಲ್ಪಟ್ಟು ಹಳ್ಳಿಯ ಹೆಬ್ಬಾಗಿಲಿನಲ್ಲಿ ಸವದಾ ಯುವಕ ಸಂಘದವರ ಮಾನಪತ್ರವನ್ನು ಸ್ವೀಕರಿಸಿದರು. ಸುತ್ತು ಮುತ್ತಲಿನ ಹಳ್ಳಿಗಳಿಂದ ಹತ್ತು ಸಾವಿರಕ್ಕೂ ಮಿಕ್ಕಿದ ಜನಸ್ತೋಮವು ನೆರೆದು ಬಂದು ಮಾನಿಸಿದ ಉಡುಪು, ಒಳನರಿದ ಹೊಟ್ಟೆಯ ಹಿಂದೀ ರೈತಜೀವನದ ಯಥಾರ್ಥ ಚಿತ್ರವನ್ನು ಪಂಡಿತರು ಕಾಣುವಂತಾಯಿತು. "ಪಂಡಿತ ಜವಾಹಿರಲಾಲಕೀ ಜೈ" "ನೆಹರುಗಳಿಗೆ ಜಯವಾಗಲಿ" ಎಂಬ ಅವಿಶ್ರಾಂತ ಜಯಘೋಷವನ್ನು ಕೈ ಜೋಡಿಸಿ ಸ್ವೀಕರಿಸುತ್ತಾ ಜವಾಹಿರಲಾಲರು ಸ್ವಾಗತ ಸಮಿತಿಯವರ ಆಪೇಕ್ಷೆಯಂತೆ, ಅಧ್ಯಕ್ಷರ ಮೆರವಣಿಗೆಗೆಂದೇ ತಯಾರಿಸಿದ್ದ ತೇರನ್ನೇರಿದರು. ಅತ್ಯಂತ ಮನೋಹರವಾಗಿ ಶೃಂಗರಿಸಿದ್ದ ರಥಕ್ಕೆ 12 ಎತ್ತುಗಳನ್ನು ಕಟ್ಟಿದ್ದರು. ಜವಾಹಿರರು ಆದರಲ್ಲಿ ಕೈಮುಗಿದು ನಿಂತುಕೊಂಡು ರಸ್ತೆಯ ಎರಡು ಬದಿಯಲ್ಲಿಯೂ ನುಗ್ಗಿನುಸಿದು ಜಯಕಾರವೆಬ್ಬಿಸುತ್ತಿರುವವರ ಹೃತ್ಪೂರ್ವಕ ಸ್ವಾಗತವನ್ನು ನಗುಮೊಗದಿಂದ ಸ್ವೀಕರಿಸಿದರು. ಮೆರವಣಿಗೆಯು ಬಿಕ್ಕಟ್ಟಾದ ಸವದಾ ರಸ್ತೆಯ ಒಂದು ಫರ್ಲಂಗನ್ನು ದಾಟಬೇಕಾದರೆ ೧೦೦ ನಿಮಿಷ ಹಿಡಿಯಿತು. ಆ ಹಳ್ಳಿಯ 2½ ಮೈಲು ಉದ್ದಕ್ಕೂ ಜನರು ಕಿಕ್ಕಿರಿದು ನೆರೆದಿದ್ದರು. ಮೆರವಣಿಗೆಯು ಸರೀ ಮಧ್ಯಾಹ್ನಕ್ಕೆ ತಿಲಕ ನಗರವನ್ನು ಪ್ರವೇಶಿಸಿ ಪಂಡಿತರು ತನ್ನ ರಥದಿಂದಿಳಿವಾಗ ಕೇಸರಿ ಬಣ್ಣದ ಸೀರೆಗಳನ್ನುಟ್ಟ ೩೦೦ ಮಂದಿ ದೇಶಸೇವಿಕೆಯರು ಆರತಿಯನ್ನೆತ್ತಿದ ದೃಶ್ಯವು ನೋಡುವಂತಹದಿತ್ತು. ಬೆಳಿಗ್ಗಿನಿಂದಲೂ ಜವಾಹಿರರ ದರ್ಶನಕ್ಕಾಗಿ ಹಾತೊರೆದು ನಿಂತಿದ್ದ ಸಾವಿರಾರು ರೈತ ಸ್ತ್ರೀಯರು ಆತುರದಿಂದ ಸ್ವಯಂ ಸೇವಕರ ಕೋಟೆಯನ್ನು ಮುರಿದು ಮುಂದೆ ನುಗ್ಗಿದರು ಪಂಡಿತಜೀಯವರು ಅವರನ್ನು ತಡೆಯಬಾರದೆಂದು. ಸ್ವಯಂಸೇವಕರಿಗೆ ಸೂಚಿಸಿ, ಎಲ್ಲರನ್ನು ಸಮೀಪಕ್ಕೆ ಬರಮಾಡಿಕೊಂಡು ಸಂತೋಷಪಟ್ಟರು. ಅಧ್ಯಕ್ಷರ ಆಗಮನಾನಂತರ ಕೊಂಗ್ರೆಸ್ ನಗರವು ಜನರಿಂದ ತುಂಬಿಹೋಗಿರುವದು.

ವರ್ಕಿಂಗ್ ಕಮಿಟಿ ಸಭೆ.

ಕೊಂಗ್ರೆಸು ವರ್ಕಿಂಗ್ ಕಮಿಟಿ ಸಭೆಯು ದಶಂಬರ ತಾ. 23, 24 ಮತ್ತು 25ರಲ್ಲಿ ಪಂಡಿತ ನೆಡರುಗಳ ಅಧ್ಯಕ್ಷತೆಯಲ್ಲಿ ನಡೆಯಿತು. ಕೆಲವು ಕರಾವುಗಳಾದುವು. ಬೊಂಬಾಯಿಯ ಪ್ರತಿನಿಧಿಗಳ ಜುನಾವಣೆಯ ಕುರಿತು ಆಕ್ಷೇಪವಿತ್ತು. ಸದ್ಯಕ್ಕೆ ಆ ನರ ಜುನಾವಣೆಯನ್ನು ಅಂಗೀಕರಿಸಲಾಯಿತು. ಸ್ಪೆಯಿನಿನ ಅಂತರ್ಯುದ್ಧದಲ್ಲಿ ಆತುರವನ್ನು ತೋರಿಸಿ, ಅಲ್ಲಿಯ ಜನತೆಯೊಡನೆ ನಹಾನುಭೂತಿ ತೋರಿಸುವ ನಿರ್ಣಯವಾಯಿತು.

ಹಿಂದುಸ್ಥಾನದಿಂದ ವಿಭಾಗಿಸಲ್ಪಟ್ಟ ಬರ್ಮಾದ ಕುರಿತು ಅಗತ್ಯ ಬಿದ್ದ ನಿರ್ಧಾರಗಳನ್ನು ಮಾಡುವ ಅಧಿಕಾರವನ್ನು ಅಖಿಲ ಭಾರತ ಸಮಿತಿಗೀಯಲಾಯಿತು. ಮುಂದಿನ ಯುದ್ಧಗಳಿಗೆ ಹಿಂದುಸ್ಥಾನವು ಜನ, ಧನ ಆಥವಾ ಇತರ ಯಾವ ವಿಧದ ಸಹಾಯವನ್ನೂ ಮಾಡಬಾರದೆಂದೂ ನಿರ್ಧರಿಸಿ ಬ್ರಿಟಿಷ್ ಸಾಮ್ರಾಜ್ಯಕ್ಕಾಗಿ ನಡೆಯುವ ಯುದ್ಧದಲ್ಲಿ ಹಿಂದೀಯರು ಭಾಗ ವಹಿಸಬಾರದೆಂದು ದೇಶವನ್ನು ಎಚ್ಚರಿಸಲಾಯಿತು ಬಂಗಾಳ, ನಾಗಪುರ ರೈಟ್ಸೇ ಕೆಲಸಗಾರರ ಮುಷ್ಕರದಲ್ಲಿ ಸಹಾನುಭೂತಿಯನ್ನೂ, ವಾಯವ್ಯ ಗಡಿನಾಡಿನಲ್ಲಿ ನರಕಾರವು ಕೈಗೊಂಡ ಫೋಣಿಯ ನಿಷ್ಫಲತೆಯನ್ನೂ ಸೂಚಿಸಲಾಯಿತು. ನಾಗರಿಕರ ಹಕ್ಕುಗಳಿಗುಂಟಾಗಿರುವ ಧಕ್ಕೆಯನ್ನು ಖಂಡಿಸಿ ಬರುವ ಕಿರೀಟ ಧಾರಣಾಮಹೋತ್ಸವದಲ್ಲಿ ಕೊಂಗ್ರೆಸು ಭಾಗವಹಿಸಬಾರದೆಂಬ ನಿರ್ಧಾರವಾಯಿತು. ಅನ್ಯ ಸೇರಿಗಳಲ್ಲಿರುವ ಹಿಂದೀಯರ ಸಂಕಷ್ಟಗಳಲ್ಲಿ ಸಹಾನುಭೂತಿಯನ್ನು ತೋರಿಸುವ ನಿರ್ಣಯವಾಯಿತು.

ವಿಷಯ ನಿಯಾಮಕ ಮಂಡಳಿಯ ಸಭೆ

೫೧ನೇ ರಾಷ್ಟ್ರೀಯ ಮಹಾಸಭೆಯ ಸಬ್ಜೆಕ್ಟ್ ಕಮಿಟಿಯು ತಾ ೨೬ನೇ ಜನವರಿ ೪ ಘಂಟೆಗೆ ನೆರೆದು ಬಂತು. ಸುತ್ತಲೂ ಸುನೋಹರವಾಗಿ ಶೃಂಗರಿಸಲ್ಪಟ್ಟ ಮಾಡಿಲ್ಲದ ವಿಶಾಲ ವೆಂಡಾಲಿನಲ್ಲಿ ಅಖಿಲ ಭಾರತ ರಾಷ್ಟ್ರ ಸಮಿತಿಯ (A.I.C.C.) ಮೆಂಬರರೆಲ್ಲ ಸಂಜೆ ಸೂರ್ಯನ ಎಳೆ ಕಿರಣಗಳಿಗೆ ಪೈಯೊಡ್ಡಿ ತ್ಪಪ್ತಿಗೊಂಡರು. ನಿಶ್ಚಿತ ಸಮಯಕ್ಕೆ ಐದು ನಿಮಿಷಗಳಿರ, ವಾಗಲೇ ಅಧ್ಯಕ್ಷ ನೆಹರುಗಳು ಸೆರವಣಿಗೆಯಲ್ಲಿ ಬಂದು ಸಭಾಸ್ಥಳವನ್ನು ಪ್ರವೇಶಿಸಿ ಅಧ್ಯಕ್ಷ ಪೀಠವನ್ನು ಹತ್ತಿದಾಗ ಸಭೆಯು ಪ್ರಚಂಡ ಚಪ್ಪಾಳೆಯೊಡನೆ ಮೂರನೇ ಸಲನ ಪ್ರೆಸಿಡೆಂಡರಾದ ನೆಹರುಗಳನ್ನು ಸೌರವಿಸಿತು. ಸಭಾರಂಭದಲ್ಲಿ ನಾಲ್ಕು ಮಂದಿ ದೇಶಸೇವಿಕೆಯರು 'ವಂದೇ ಮಾತರಂ' ಹಾಡಿದರು. ಅಧ್ಯಕ್ಷರು ಸ್ವಾರಂಭನ ಭಾಷಣವೀಯುತ್ತಾ ತನ್ನನ್ನು ಅಧ್ಯಕ್ಷನೆನ್ನಾಗಿ ಪುನಃ ಆರಿಸಿದ್ದಕ್ಕಾಗಿ ಧನ್ಯವಾದಗಳನ್ನಿತ್ತರು. ಹಳೆಯ ಮತ್ತು ಹೊಸ ಮೆಂಬರರನ್ನು ಅಭಿನಂದಿಸಿದರು. ದೇಶದ ಪರಿಸ್ಥಿತಿಯನ್ನು ವರ್ಣಿಸಿ ಪಾರ್ಲಿಮೆಂಟರಿ ಬೋರ್ಡಿನೊಡನಸುಂಟಾದ ಮತಭೇದಕ್ಕಾಗಿ ತನ್ನ ನ್ಯಾನಗಳಿಗೆ ರಾಜೀನಾಮೆಯನ್ನಿತ್ತ ಮೆಂಬರರ ವರ್ತನೆಯನ್ನು ಖಂಡಿಸಿದರು. ಒಳಗಿಂದೊಳಗೆ ಕೆರುಕುಳವೆಬ್ಬಿಸುವವರು ಕೊಂಗ್ರೆಸಿನ ತ್ರಾಣ ಕೆಡಿಸುವವರೆಂದೂ, ಕೊಂಗ್ರೆಸನ್ನು ಬಿಡುವ ನ್ಯಾತಂತ್ರ್ಯವು ಪ್ರತಿಯೊಬ್ಬನಿಗಿರುವದಾದರೂ ಅಂಥವರು ತಮ್ಮ ಜತೆಯಲ್ಲಿ ಕೊಂಗ್ರೆಸಿನ ಹೆಸರು ಕಟ್ಟಿಕೊಳ್ಳಬಾರದೆಂದೂ ಸೂಚಿಸಿ "ಆಕಾಶವೇ ಕವಚಿಬಿದ್ದರೂ ಕೊಂಗ್ರೆಸು ತನ್ನ ಹಾದಿಯಲ್ಲಿ ಮುಂದುವರಿದೇ ಬಿಡುವದು" ಎಂದರು. ಗತ ವರುಷದ ವಂದಿಯನ್ನು ಮಂಜೂರುಮಾಡಿ, ಆ ಸಭೆಯು ವಿಷಯನಿಯಾಮಕ ಸಮಿತಿ (ಸಬ್ಜೆಕ್ಟ್ ಕಮಿಟಿ) ಯಾಗಿ ಮಾರ್ಪಟ್ಟಿತು. ರೈತ್ವಾರಿ ಸಮಸ್ಯೆಗಳನ್ನು ಬಿಡಿಸುವರೆ ಲಕ್ನೋ ಕೊಂಗ್ರೆಸಿನಲ್ಲಿ ನೇಮಿಸಲ್ಪಟ್ಟ ಕಮಿಟಿಯು ವರದಿಯು ತಯಾರಾಗವ ಕುರಿತು ಶ್ರೀ. ಜಿ ಎಸ್. ರಂಗ ಮತ್ತು ಅಧ್ಯಕ್ಷರೊಳಗೆ ತೀವ್ರ ಪ್ರಶ್ನೋತ್ತರಗಳಾದವು.

ಸಬ್ಜೆಕ್ಟ್ ಕಮಿಟಿಯ ಕೆಲಸವಾರಂಭವಾಗಿ ದಿವಂಗತ ಧುರೀಣರಿಗಾಗಿ ಸಂತಾಪಸೂಚನೆಯಾಯಿತು. "ಹಿಂದೂಸ್ಥಾನದ ಜನರ ಅಪೇಕ್ಷೆಗೆ ವಿರುದ್ಧವಾಗಿ ಹೊರಬಿಟ್ಟಿರುವ 1935ನೇ ಇಸವಿಯ ಇಂಡಿಯಾ ವಿಕ್ಟ್ರಿ ಮತ್ತು ಜನರ ಆಧಾರದ ಮೇಲೆ ರಚಿಸಲ್ಪಡುವ ರಾಜ್ಯಾಂಗರಚನೆಯನ್ನು ಈ ಕೊಂಗ್ರೆಸು ಸಂಪೂರ್ಣವಾಗಿ ತಿರಸ್ಕರಿಸುತ್ತದೆ." ಎಂಬ ರಠವನ್ನು ಬಾಬು ರಾಜೇಂದ್ರ ಪ್ರಸಾದರು ತಂದು ಅಮೋಘ ಭಾಷಣವಿತ್ತರು. "ಸಮಗೆ ನಾವೇ ರಚಿಸಿಕೊಳ್ಳುವ ಸ್ವಾತಂತ್ರ್ಯ ಬೇಕಾಗಿದೆ. ಹೊಸ ಸುಧಾರಣೆಯು ಇಂಗ್ಲೆಂಡಿನ ಹಿತವನ್ನು ಲಕ್ಷ್ಯವಲ್ಲಿಟ್ಟುಕೊಂಡ ಇಂಗ್ಲಿವರಿಂದ ರಚಿಸಲ್ಪಟ್ಟಿದೆ." ಎಂದು ಸ್ಪಷ್ಟಪಡಿಸಿ, ಕೌನ್ಸಿಲು ಕಾರ್ಯಕ್ರಮದ ಧ್ಯೇಯವನ್ನು ವಿವರಿಸಿದರು ವಂಡಿತ ಗೋವಿಂದ ವಲ್ಲಭ ವಂಡಿತರು ಹಿರುಷಿನ ಭಾಷಣವಿತ್ತು ಅದನ್ನು ಅನುಮೋದಿಸಿದರು. ಶ್ರೀ. ಎಸ್ ವಿ. ಗಡ್ಗಿಲರ ಅಧ್ಯಕ್ಷತೆಯಲ್ಲಿ ಪ್ರತಿತ ರಾಜ್ಯಗಳ ಹೆಸರನ್ನು ಸೇರಿಸಬೇಕೆಂಬ ಉಪಸೂಚನೆ ತಂದರು. ಶ್ರೀ. ಜಂಗೆಯವರು ಸಾಮ್ರಾಜ್ಯತ್ವ ವಿರೋಧದ ಅವಿಶ್ರಾಂತ ಜೋರಾಟದ ನಂತರವೇ ನೇಮಸಿರ್ಮಾಣ ಸಭೆ (constituent assembly)ಯು ನಿರ್ಮಾಣವಾಗಬೇಕೆಂದು ಸೂಚಿಸಿದರು. ಶ್ರೀ. ಜೈ ಪ್ರಕಾಶನಾರಾಯಣರವನ್ನು ಅನುಮೋದಿಸಿದರು. ಎಂತಹ ಪರಿಸ್ಥಿತಿಯಲ್ಲಿಯೂ ಪದವೀ ಸ್ವೀಕಾರವು ತ್ಯಾಜ್ಯವೆಂಬ ಉಪಸೂಚನೆಯನ್ನು ಸರದಾರ ನಾರ್ಮೋಲ ಸಿಂಗರು ತಂದು ಶ್ರೀಮತಿ ಕನುಲಾದೇವಿಯರವನ್ನು ಅನುಮೋದಿಸಿದರು. ಉಪಸೂಚನೆಗಳ ಪರವಾಗಿಯೂ, ವಿರುದ್ಧವಾಗಿಯೂ ಹಲವರು ನುಡಿಸಿದರು. ಮೌಲಾನಾ ಕಲಮ್ ಆಜಾದರು ಮೂಲ ಸೂಚನೆಯನ್ನು ಸಮರ್ಥಿಸಿದರು. ಬಾಬು ರಾಜೇಂದ್ರ ಪ್ರಸಾದರು ಇವರಿಗೆಲ್ಲ ಉತ್ತರವಿತ್ತ ಮೇಲೆ ಶ್ರೀ ಗಡ್ಗಿಲರು ಸೂಚನೆಯನ್ನು ಹಿಂದೆಗೆದುಕೊಂಡರು. 15 ಅನುಕೂಲ 83 ಪ್ರತಿಕೂಲ ಮತ ಬೀರಿತು. ಶ್ರೀ. ಡಂಗೆಯ ವರ ಸೂಚನೆಯು ಬಿದ್ದು ಹೋಯಿತು. ಸರದಾರ ತಾರ್ಮೂಲ ಸಿಂಗರ ಸೂಚನೆಗೆ 18 ಅನುಕೂಲ 87 ಪ್ರತಿಕೂಲ ಮತ ಬೀರಿತು ಅದೂ ತಿರಸ್ಕರಿಸಲ್ಪಟ್ಟ

GREETINGS

In the sprit of the coming season and in deepest appreciation of the patronage, confidence and goodwill accorded our bank, we extend to all our customers and other friends our sincerest wishes for a HAPPY NEW YEAR. May the days be filled for YOU and YOURS with cheer and happiness.

ESTD 1906

CANARA BANK

LIMITED.

ನಂತರ ಮೂಲ ಸೂಚನೆಯು ಸರ್ವಾನು ಮತದಿಂದ ಮಂಜೂರಾಯಿತು.

ಸಮತಾವಾದಿಗಳ ಪರಿಷತ್ತು

ಎಐಲ ಭಾರತ ಸಮತಾವಾದಿಗಳ ಮೂರನೇ ಪರಿಷತ್ತು ಸೈಜಯ್ಯರ ಕೊಂಗ್ರೆಸಿನ ವಿಷಯಸೂಯಾಮಕ ಸಮಿತಿಯ ಸೆಂಡಾಲಿನಲ್ಲಿ ತಾ ೨೫ರಲ್ಲಿ ನೆರೆಯಿತು ಶ್ರೀ ಜಯ ಪ್ರಕಾಶ ನಾರಾಯಣರು ಅದ್ಯಕ್ಷರಾಗಿದ್ದರು ಅವರು ತನ್ನ ಅಧ್ಯಕ್ಷ ಭಾಷಣದಲ್ಲಿ ಹಿಂದುಸ್ಥಾನದ ರೈತರ ಹಾಗೂ ಕೂಲಿಗಾರರ ಹೃದ್ಯಾವಕ ಸರಿಸ್ಥಿತಿಯ ವರ್ಣನೆ ಮಾಡಿ ಕೊಂಗ್ರೆಸು ಸಾರ್ವಜನಿಕರನ್ನು ಸಾಮ್ರಾಜ್ಯ ವಿರುದ್ಧವಾಗಿ ಹೋರಾಡಲು ತಯಾರುಗೂಳಿಸಬೇಕೆಂದರು. ಪುನಃ ಅಧ್ಯಕ್ಷರಾದದಕ್ಕೆ ಪಂಡಿತ ನೆಹರುಗಳನ್ನೂ ಜೈಲಿನಿಂದ ಬಿಡುಗಡೆ ಹೂಂದಿದ ಶ್ರೀ ರೋಯಿಗಳನ್ನೂ ಅಭಿನಂದಿಸಲಾಯಿತು. ಹೊಸ ರಾಜ್ಯಾಂಗ ರಚನೆಯು ಜಾರಿಗೆ ಬರಲಿರುವ ಬರುವ ಎಪ್ರಿಲ್ ತಾ ೧ಕ್ಕೆ ಅಖಿಲ ಹಿಂದುಸ್ಥಾನದಲ್ಲಿ ಹರತಾಲವಾಚರಿಸಬೇಕೆಂಬ ರಠಾವು ಪಾಸಾಯಿತು ರಾಷ್ಟ್ರದ ಜಾಹೀರುನಾಮೆ (Congress manifesto) ಯನ್ನು ಸ್ವಾಗತೀಕರಿಸುವ ನಿರ್ಧಾರವಾಗಿ ಬರುವ ಕೇಂಟ ಧಾರಣಾಮಹೋತ್ಸವವನ್ನು ಬಹಿಷ್ಕರಿಸಬೇಕೆಂಪಾಯಿತು ಶ್ರೀ ಜೈ ಪ್ರಕಾಶ ನಾರಾಯಣರು ಕಾರ್ಯದರ್ಶಿಯಾಗಿಯೂ ಶ್ರೀಗಳಾದ ಎಸ್. ಆರ್ ಮುನಾನಿ, ನಂಬೂದಿರಿಪಾದ್, ದಿನ್ಕರ್ ಮೆಹತಾ, ಸಂಪೂರ್ಣಾನಂದರು ಜತೆ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು "ಬಾರತದ ನಿಜವಾದ ಏತಸಾದಸ್ಥಯ ನನ್ನು, ತತ್ವಗಳಲ್ಲದಕೆವಾಗಿಪೆಯೆಂಬುದು ನಿಜ. ಅವನ್ನು ಆಚರಣಗೆ ಹೇಗೆ ಇಳಿಸಲಿ ಮತ್ತು ಸಮತಾ ಪಾಡವನ್ನು ಹಿಂದೀ ಸಂಸ್ಕೃತಿಗನುಗುಣವಾಗುವಂತೆ ಹೇಗೆ ಒನುಸರಿಸಲಿ? ಎಂಬ ಗಾಡ ಯೋಚನೆಯು ನನ್ನಲ್ಲುಂಟಾಗಿದೆ. ನೀವೂ ಆ ಕುರಿತು ಆಳವಾಗಿ ವಿಚಾರಿಸುವಿರಿ ಎಂದು ನಂಬುತ್ತೇನೆ." ಎಂಬ ಸಂದೇಶವನ್ನು ಪಂಡಿತ ನೆಹರುಗಳು ಈ ಪರಿಷತ್ತಿಗೆ ಕಳುಹಿಸಿದ್ದರು

ಗಾಂಧಿ-ರೋಯಿ-ಸಂಭಾಷಣೆ

ರಾಜಕೀಯವನ್ನು ಬಿಟ್ಟರೂ ಗಾಂಧಿಯವರನ್ನವರ ಪರ್ಸನಲ್ ಬಿಟ್ಟಿಲ್ಲ ಪ್ರಜಾಪ್ರಭುದಲ್ಲಿ ಎಲ್ಲಾ ದುರೀಣರ ಲಕ್ಷ್ಯದ ಕೇಂದ್ರನಾಗಿ ಗಾಂಧಿಯವರಿದ್ದರು ರಷ್ಯಾ ಸ್ಪೇಯಿನ್ ಮೊದಲಾದ ಪರದೇಶಗಳ ರಾಜಕೀಯ ಪರಿಸ್ಥಿತಿಯ ಅನುಭವವುಳ್ಳವರಾಗಿದ್ದು, ರಷ್ಯದ ಲೆನಿನ್, ಟ್ರಾಟ್ಸ್ಕಿ ಮೊದಲಾದವರ ಸಹೋದ್ಯೋಗಿಯಾಗಿದ್ದ ಶ್ರೀ ಎಮ್ ಎನ್ ರೋಯಿಗಳು ಫ್ಯಜ್ಯಾರ್ಕ್ಕೆ ಒಂದವರೇ, ಗಾಂಧಿದಿವರ ಗುಡಿಸಲಿಗೆ ಹೋಗಿ ಅವರೊಡನೆ ಒಂದೂವರೆ ಘಂಟೆ ಕಾಲ ಸಂಭಾಷಿಸಿದರು ಗಾಂಧಿಯವರು ರೋಯಿಗಳ ಅತೋಗ್ಯ, ಪರದೇಶಗಳ ಅನರ ಒನುಬವನ್ನೆಲ್ಲಾ ವಿಚಾರಿಸಿ ತಿಳಿಕೊಂಡು, ತನ್ನ ಗ್ರಾನು ಕೃಗ ರಿಕೆಯ ಪುನರುಜ್ಜೀವನದ ಕಾರ್ಯಕಲಾಪಗಳನ್ನು ವಿವರಿಸಿ ಆ ಮೂಲಕ ಜನಜಾಗೃತಿಯನ್ನು ಮಾಡಿ, ಸ್ವಾತಂತ್ರ್ಯಕ್ಕೆ ಜನತೆಯನ್ನು ತಯಾರುಗೊಳಿಸುವೆಂದರು ಶ್ರೀ ರೋಯಿಗಳು ತನ್ನ ಸಮತಾವಾದದ ಧ್ಯೇಯ್ಯ ತತ್ವಗಳನ್ನು ನಿಶದಪಡಿಸಿ,ಜನಸಾಮಾನ್ಯರ ಸಂಪರ್ಕವುಂಟುನೂಡುವರ ತಾನಿಟ್ಟು ಕೊಂಡಿರುವ ಹಂಚಿಕೆಗಳನ್ನು ವಿವರಿಸಿದರು ಗಾಂಧಿಯವರು ಅವುಗಳನ್ನೆಲ್ಲಾ ಸರಿಯಾಗಿ ಯೋಚಿಸಿ ನೋಡುವೆನೆಂದರು ಸಂಭಾಷಣೆಯು ಮುಗಿದು ಶ್ರೀ ರೋಯಿಗಳು ಹೊರಡಲೆದ್ದಾಗ ಗಾಂಧಿಜೀಯವರು ಆಗಲೇ ನದೆಯಲಿರುವ ವ್ಯಾರ್ಧನೆಯಲ್ಲಿ ಭಾಗವಹಿಸಬೇಕಂದು ರೋಯಿಯವರನ್ನು ಕೇಳಿಕೊಂಡರು. ತನಗೆ ಅದರಲ್ಲಿ ಅಂತಹ ವಿಶ್ವಾಸವಿಲ್ಲವೆಂದು ಶ್ರೀ. ಎಮ್ ಎನ್. ರೊಯಿಗಳು ತಿಳಿಸಿದೊಡನೆ ಗಾಂಧಿಯವರು ಅದೆಷ್ಟು ವ್ಯಾಮುಖ್ಯವಿರುವದೆಂಬುದನ್ನು ತನ್ನ ಸ್ವಾಭಾವಿಕ ಸರಸ ಮಾತುಗಳಿಂದ ವಿವರಿಸಿದರು. ರೊಯಿಯವರು ಇನ್ನೊಮ್ಮೆ ಗಾಂಧಿಯವರೊಡನೆ ಸಂಭಾಷಿಸಿದರು "ತನ್ನದೇ ಆದ ನಿಶ್ಚಿತ ಪರ್ತನೆಯು ಗಾಂಧಿಯನರದ್ದಾರೂ, ಎಂತಹ ಬಿನ್ನಾಭಿಪ್ರಾಯವನ್ನಾದರೂ ಸಂತೋಷದಿಂದ ಆಮಂತ್ರಿಸುವ ಪ್ರೇಮಮೂರ್ತಿಯವರು" ಎಂದು ಗಾಂಧಿಯವರ ಕುರಿತು ರೋಯಿಗಳ ಅಬಿಪ್ರಾಯ

ಕಿಸಾನ ಯಾತ್ರೆ.

ಶ್ರೀಗಳಾದ ಎನ್ ಜಿ ರಂಗ, ಇಂದುಲಾಲ್ ಯಾಗ್ನಿಕ್, ಯೂಸೆನ್ ಮೆಹರಾಲಿ, ಜೈ ಪ್ರಕಾಶ್, ಪುಸಾನಿ, ಸಹಜಾನಂದ ಮೊದಲಾದವರ ದುರೀಣತ್ವದಲ್ಲಿ ಸುಮಾರು 500 ನುಂದಿ ರೈತರು, ಕೆಂಪು ವತಾಕೆಗಳೂವನೆ, ರೈತರ ಪಾಡನ್ನು ಹಾಡುತ್ತಾ ದಶಂಬರ 25ನೇ ಪುಧ್ಯಾಸ್ಥ ತಿಲಕ ನಗರದ ವಿವಾಜ ಪ್ಪಾವನ್ನು ಪ್ರವೇಶಿಸಿದರು. ಇವರು ಮಾನ್ಯಾಡಿನಿಂದ ದಶಂಬರ ತಾ. 13ರಲ್ಲಿ ಕಾಲ್ನಡಯಿಂದ ಹೊರಟು ಇಂಡಿನೈಲು ನದಕೊಂಡು ಬಂದಿದ್ದರು ಕೊಂಗ್ರೆಸು ನಗರದ್ವಾರದಲ್ಲಿ ಶ್ರೀ ಗಳಾದ ನೆಹರು, ರೋಯಿ, ರಂಕರರಾವ್ ದೇಸ್ಪೊ, ಪುಣಿಬೆನ್, ಪುಲ್ಲ, ಆಚಾರ್ಯ ನರೇಂದ್ರ ದೇವ್, ಶಿವನಾಥ ಬನರ್ಜಿ, ಎಸ್ ಎಡಂಗೆ ಮೊದಲಾದವರು ಅವರನ್ನು ಸ್ವಾಗತೀಕರಿಸಿದರು. ಶ್ರೀ ನೆಹರುಗಳು ಅವರನ್ನಾತೀರ್ವದಿಸಿದರು ರೈತರ ಪರಿಷತ್ತು ತಾ ೨೮ರಲ್ಲಿ ಶ್ರೀ ಎನ್ ಜಿ ರಂಗರ ಅಧ್ಯಕ್ಷತೆಯಲ್ಲಿ ಜರಿಗಿ ಕೊಂಗ್ರೆಸಿನೊಡನೆ ಸಹಕರಿಸಬೇಕೆಂಬ ನಿರ್ಧಾರವಾಗಿರುವದು

ಸ್ವದೇಶೀ ಪ್ರದರ್ಶನ.

ಖಾದಿ ಮತ್ತು ಕೈಗಾರಿಕೆಯ ಪ್ರದರ್ಶನವನ್ನು ಮ. ಗಾಂಧಿಯವರು ತಾ ೨೫ರಲ್ಲಿ ತೆರೆದರು. ಹಿಂದುಸ್ಥಾನದ ಬೇರೆಬೇರೆ ಸ್ವದೇಶೀ ಸಾಮಾನುಗಳು, ಮನೋಹರವಾಗಿ ಇಡಲ್ಪಟ್ಟಿದ್ದವು ಗಾಂಧಿಜೀಯವರು ತಮ್ಮ ಅನುಭವಿಕ ವ್ಯಾಪಾರಿಯಂತೆ ಪ್ರತಿಯೊಂದು ಸಾಮಾನಿನ ಗುಣಗಾನಮಾಡುತ್ತಾ, ಮಿರುಗು, ಮೋಷೆ ತುಂಬಿದ ಮಾತುಗಳಿಂದ ಸಭಿಕರ ಮನಸ್ಸನ್ನಾಕರ್ಷಿಸಿದರು. ಒಂದು ಜಿಂಕೆಯ ಚರ್ಮವನ್ನು ತೋರಿಸುವಾಗ ಮೂರದ ಕೆಲವರು 'ನಿಮ್ಮ ಕೈತೋರಿಸಿರಿ.' ಎಂದು ಕೂಗಿದಾಗ ಗಾಂಧಿಯವರು ಮಾರ್ಮಿಕವಾಗಿ "ನಾನಿನ್ನೂ ನನ್ನ ಕೈತೋರಿಸಿಲ್ಲ, ತಡೆಯಿರಿ, ಸ್ವಲ್ಪ ಸಮಯದೊಳಗೆ ನೀವದನ್ನು ನೋಡಲಿರುವಿರಿ' ಎಂದರು ಗಾಂಧಿಯವರು ಒಂದೊಂದೇ ಸಾಮಾನುಗಳನ್ನು ತೋರಿಸಿ 'ಹಳ್ಳಿಗರ ಕೈಗಾರಿಕೆಯು ಬಲಗೊಳಿಸಲ್ಪಟ್ಟರೆ ಅವರು ಇಮ್ಮಡಿಯ ಲಾಭಹೊಂದುವರು ಕಡಿಮೆ ಬಂಡವಾಳದಿಂದ ಊರ್ಜಿತಕ್ಕೆ ಬರುವ ಕೆಲಸವಿದು, ಒಪ್ಪನ್ನು ಮಾಡಿದರೆ, ಸುಲಿಯಬೇಕೆಂದು ಪಂಡಿತ ಜವಾಹರರು ಹೇಳುವ ಜಮನಾಲಾಲ ಬಜಜರಂತಹ ಧನಿಕರ ಸಹಾಯದ ಅಗತ್ಯವು ನನಗಿರದು. ನಾನು ಹಳ್ಳಿಗರ ಅವಶ್ಯಯವನ್ನು ನನ್ನ ಸ್ವಂತ ನೀತಿಗನುಸಾರವಾಗಿ ಇಮ್ಮಡಿಮಾಡಬೇಕೆಂಬ ಬಗೆದಿದ್ದೇನೆ ಅದು ಬೆಗೋಸಿನಲ್ಲಿ ಇಮ್ಮಡಿ ಲಾಭ ಹೊಡೆಯುತ್ತಿರವ ಜಮನಾಲಾಲ ಬಜಬರ ರೀತಿಯಲ್ಲ (ನಗೆ). ಅಲ್ಲಲ್ಲಿ ಅವರು ಸುಲಿಯುತ್ತಿದ್ದಾರೆ (ನಗೆ) ನಾನು ಜವಾಹರಲಾಲರಾಗಲೀ ಜಮನಾಲಾಲ ಬಜಜರಾಗಲೀ ಸುಲಿಗೆಮಾಡಲಾಗದ ರೀತಿಯಲ್ಲಿ ಹಳ್ಳಿಗರನ್ನು ತಯಾರುಮಾಡಲಿರುವೆನು' ಬಡಹಳ್ಳಿಗನಿಗೆ ಮೂರಾಣೆಯೇ ಸ್ವರಾಜ್ಯ! ದೇವರು ಅವರವರ ವಿಶ್ವಾಸಕ್ಕನುಗುಣವಾಗಿ ಬೇರೆಬೇರೆ ರೀತಿಯಲ್ಲಿ ತೋರುವಂತೆ ಸ್ವರಾಜ್ಯವೂ ಇದೆ. ಬೊಂಬೈ, ದಿಲ್ಲಿ, ಅಲಹಾಬಾದಿನವರೆಲ್ಲಾ ಬಡಹಳ್ಳಿಗರ ಬೆನ್ನ ಮೇಲೆ ಸವಾರಿ ಮಾಡುತ್ತಿದ್ದಾರೆ. ಕೆಲಸಗಾರರಲ್ಲಿ ಜಾತಿಮತ ಭೇದವಿಲ್ಲ. ಎಲ್ಲರೂ ಭಂಗಿಗಳಾಗಿ ಮಾರ್ಪಾಟಹೊಂದಿ, ಈಗ ಭಂಗಿಗಳಿಗಾಗುನ ಅಸಮಾನವನ್ನು ದೂರ ಮಾಡಬೇಕು' ಎಂದರು ಗಾಂಧಿಯವರ ಭಾಷಣಾಂತ್ಯದಲ್ಲಿ ನಂದಲಾಲ ಬೋಸರಿಂದ ಕಳುಹಿಲ್ಪಟ್ಟ ಆರತಿಯ ದೀಪದಾನಿಯೊಂದಕ್ಕೆ ಪಂಡಿತ ಜವಾಹರಲಾಲರು ದೀಪಹೆಚ್ಚಿದರು 'ದೀಪವು ರಾಷ್ಟ್ರಪತಿಗಳಿಂದ ಹೆಚ್ಚಲ್ಪಟ್ಟಿತು ಅದಿನ್ನು ಆರಲೇ ಬಾರದು' ಎಂದು ಗಾಂಧಿಯವರುದ್ಗರಿಸಿದರು.

ಬಸ್ಸಿನ ಪೆಟ್ರೋಲ್ ಟಾಂಕಿಗೆ ಬೆಂಕಿ ಹಿಡಿದು ಕಂಡಕ್ಟರನು ಸುಟ್ಟುಹೋದ.

ಕಲ್ಕತ್ತೆಯ ಸಮೀಪ ಬಸ್ಸೊಂದು ಕಾರಿಗೆ ಡಿಕ್ಕಿ ಹೊಡೆಯಿತು, ಹೊಡೆದ ರಭಸಕ್ಕೆ ಬಸ್ಸಿನ ಪೆಟ್ರೋಲ್ ಟಾಂಕಿ ಸಿಡಿದು ಬೆಂಕಿಯೆದ್ದಿತು, ಸಮೀಪದಲ್ಲಿದ್ದ ಕಂಡಕ್ಟರನ ಶರೀರದ ಕೆಲವು ಕರಟಿದೆ ಅವಶೇಷಗಳು ಮಾತ್ರ ಉಳಿದುವು. ಅದರಲ್ಲದ್ದ ಡ್ರೈವರ್ ಮತ್ತು ನಾಲ್ಕಾರು ಪ್ರಯಾಣಿಕರು ಜೀವದಿಂದಿದ್ದಾರೆ ಆಸ್ಪತ್ರೆಯಲ್ಲಿ.

ತಾಳದೇ ಇರತಕ್ಕ ಮೂತ್ರವ್ಯಾಧಿಗಳಿಗೆ
ಆಶ್ಚರ್ಯಕರವಾದ ಔಷಧಿ.

"ಗೊನೊಕಿಲರ್" (ರಿಜಿಸ್ಟರ್ಡ್)

ಡಾ. ಜಸಾನಿಯವರ
ಜಗತ್ಪ್ರಸಿದ್ಧ

ಪ್ರಮೇಹ ವ್ಯಾಧಿಗೆ ಸಿದ್ಧೌಷಧ

ಇಂದಿನ ಆಪ್ತತನು ಔಷಧ ಅಂಗ್ಲೇಯು ಮತ್ತು ಆಯುರ್ವೇದ ಔಷಧಿಗಳೊಂದೂ ಫಲಕಾರಿಯಾಗದೇ ಇನ್‌ಜಕ್ಷನ್ ಮುಂತಾದ ಇತರ ಚಿಕಿತ್ಸೆಗಳೂ ವಿಫಲವಾಗಿದ್ದರೆ, ಕೊನೆಗೆ, ಒಂದಾವರ್ತಿಯಾದರೂ ಈ ನವ್ಯ **ಗೋನೋಕಿಲರ್** ಎಂಬ ಔಷದವನ್ನು ಉಪಯೋಗಿಸಿನೋಡಿರಿ ಎನ್ನೇ ದೀರ್ಘಕಾಲದಿಂದ ಅನುಭವಿಸಿ ಬಂದ ತ್ರಿವ್ರತೋಗವಾಗಿದ್ದರೂ, ಗೋನೋಕಿಲ್ಲರ್, ಸ್ತ್ರೀಪುರುಷರ ಎಲ್ಲಾ ಮೂತ್ರವ್ಯಾದಿಗಳಿಗೆ, ಜನನೇಂದ್ರಿಯಗಳ ಬಾತುಬಿಕೆ, ಸರ್ವಪ್ರಕಾರದ ಪ್ರತ್ಯೌಪ (ಎನ್ನೇ ಹಳತು ಯಾ ಯಾವದೇ ಸ್ಥಿತಿಯಲ್ಲಿರಲಿ), ನೋವು, ಮೂತ್ರದಲ್ಲಿ ಉರಿ ಮತ್ತು ಕೀವು ಸುರಿಯುವಿಕೆ, ಮೂತ್ರ ಹೋಗದಿರುವಿ ಕೆ, ಧಾತುಸ್ರಾವ, ಬಿಳುಪು ಹರಿಯುವದು ಇವೇ ಮೊದಲಾದ ಯಾವತ್ತು ಗೊನೋಕೋಕಸ್‌ನಿಂದಾಗುವ ವ್ಯಾಧಿಗಳಿಗೆ ಖಾತ್ರಿ ಗುಣಕಾರಿ

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩—೦—೦ (ಮೂರು) ವಿ ಪಿ ಥಾರ್ಮ ಬೇರೆ

ತಯಾರಿಸುವ ಏಕಮಾತ್ರ ಡಾಕ್ಟರ್ ಡಿ. ಎನ್. ಜಸಾನಿ, ಗಿರಿಗಾಂವ ಬ್ಯಾಕ್ ರೋಡ್, ಮುಂಬಯಿ ೪

ನಕಲಿ ಮದ್ದುಗಳಿಗೆ ಮರುಳಾಗಿ ಮೋಸ ಹೋಗಬೇಡಿರಿ ಕೊಂಡು ಕೊಳ್ಳುವುದಕ್ಕೆ ಮೊದಲು ಕೋಳಿಯ ಗುರುತನ್ನು ಗಮನಿಸಿರಿ

Sole Manufacturer **Dr D N. JASANI,** GIRGAUM BACK ROAD BOMBAY 4

ಶ್ರೀ. ಎ. ಬಿ. ಶೆಟ್ಟರ ಕೈಸರ್-ಈ-ಹಿಂದ್ ಪದಕ ತ್ಯಾಗ!

ಮಂಗಳೂರು

(ನಮ್ಮ ಸ್ವಂತ ಬಾತ್ಮಿದಾರರಿಂದ)

ತಾ ೨೬-೧೨-೩೬

ಸತ್ಕಾರ-ಕೂಟ—ಕಳೆದ ತಾ. ೨೫ರಲ್ಲಿ ಸಬ್ ಜಡ್ಜರಾದ ಶ್ರೀ ಪಿ ನ್ಗಾರಿಯಣ ಮುನೋಸರವರಿಗೆ ಮಂಗಳೂರು ವಕೀಲ ಸಂಘದವರು ಒಂದು ಔಪಚಾರಿಕ ಸತ್ಕಾರವನ್ನಿತ್ತರು. ಒಂಭತ್ತರಾನಿ ಉಪಚಾರಗಳಾದ ಮೇಲೆ ಸರಕಾರಿ ವಕೀಲರಾದ ಶ್ರೀ ಕಾರ್ಕಳ ಸದಾಶಿವರಾಯರು ಶ್ರೀ ಮೆನೋನರ ಗುಣಗಳನ್ನು ಮಾಡಿ ಭಾಷಣಮಾಡಿದರು ಶ್ರೀ ಮೆನೋನರು ತಮಗೆ ಮಾಡಿದ ಸತ್ಕಾರಕ್ಕಾಗಿ ವಕೀಲ ಸಂಘದವರನ್ನು ವಂದಿಸಿದರು.

ಕೆನರಾ ಹೈಸ್ಕೂಲು ವರ್ಧಂತಿ

ಕಳೆದ ತಾ. ೨೫ರಲ್ಲಿ ಕೆನರಾ ಹ್ಯಾಸ್ಕೂಲ್ ದಿನಾಚರಣೆಯು ಶ್ರೀ ಕುತೀಮರದ ಗುರುಗಳಾದ ಶ್ರೀ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಶ್ರೀಗಳವರನ್ನು ಮಧ್ಯಾಹ್ನೋಪಗಳಂದ ಸಭಾ ಸ್ಥಾನಕ್ಕೆ ಕರದೊಯ್ದು ಕೂಡಿಸಿ ದೇವತಾ ಪ್ರಾರ್ಥನೆಯೊಡನೆ ಕಾರ್ಯಾನುಷ್ಠಾನಮಾಡಿತು ಶ್ರೀ ಸ್ವಾಮಿಗಳ ಭಾಷಣವನ್ನು ಶಾಲೆಯ ಸಂಸ್ಕೃತ ಪಂಡಿತರು ಓದಿದರು. ಹೆಮ್ಮಾಸ್ತರರು ಅದನ್ನು ಇಂಗ್ಲಿಷ್ ಭಾಷೆಗೆ ಪರಿವರ್ತನೆಮಾಡಿದರು ಶಾಲೆಯ ವರದಿಯು ಓದಲ್ಪಟ್ಟಿತು. ಪಾರಿತೋಷಕಗಳು ಹಂಚಲ್ಪಟ್ಟವು ತರುವಾಯ ನಾಟಕ ಪ್ರದರ್ಶನ ಇತ್ಯಾದಿಗಳು ಜರಗಿದುವು.

ದ. ಕನ್ನಡದ ಮಹಿಳೆಯ ವಿಜಯ

ನಮ್ಮ ಜಲ್ಲಾ ಕಾಂಗ್ರೆಸ್ ಕಮಿಟಿಯು ಕಾರ್ಯ ನರ್ವಹಿಗಳಾದ ಶ್ರೀ ಬಿ ಭೋಜ ರಾಯರ ಸಹೋದರಿ ಶ್ರೀಮತಿ (ಡಾ) ತುಂಗಮ್ಮ ಎಫ್ ಆರ್. ಸಿ ಎಸ್. ಇವರು ಬೆನಾರಿಸ್ ಕ್ಷೇತ್ರದಿಂದ ಸಂಯುಕ್ತ ಪ್ರಾಂತಗಳ ವ್ಯಾಯವಿಧಾಯಕ ಸಭೆಗಳ ಸದಸ್ಯೆಯರಾಗಿ ಪ್ರತಿಸ್ಪರ್ಧಿಗಳಿಲ್ಲದೆ ಜಯ ಯಿಸಲ್ಪಟ್ಟಿರುವರು ಶ್ರೀಮತಿಯವರು ಕಾಂಗ್ರೆಸ್ ಪಕ್ಷದಿಂದ ಆರಿಸಲ್ಪಟ್ಟಿರಾಗಿ ನಿಂತವರು. ಇವರು ಉತ್ತರ ದೇಶದಲ್ಲಿ ಇಸ್ಟೆ ಜಯವನ್ನು ಸಂಪಾದಿಸಿದುದಕ್ಕಾಗಿ ಜಿಲ್ಲೆಯ ಸಂಘೋಷಪಡಬೇಕಾಗಿದೆ

ನಗರ ಕಾಂಗ್ರೆಸ್ ಸಭೆ

ನಿನ್ನೆಯ ಸಾಯಂಕಾಲ (ತಾ ೩೭-೧೨-೩೬) ಮಂಗಳೂರು ನಗರ ಕಾಂಗ್ರೆಸ್ ಕಮಿಟಿಯ ಸಭೆಯು ಶ್ರೀ. ಬಿ ಭೋಜರಾಯರ ಅಧ್ಯಕ್ಷತೆಯಲ್ಲಿ ಸೇರಿ ಸ್ವಯಂಸೇವಕರ ದಳವನ್ನು ನಗರದ ಕಾಂಗ್ರೆಸ್ ಸಮಿತಿಯ ಆಧೀನದಲ್ಲಿಯೇ ನಿಷ್ಪಕ್ಷಪಾತಿಕೆಯಿಂದಿರುವಂತೆ ಸ್ಥಾಪಿಸಬೇಕೆಂದೂ, ಸುಮಾರು ೧೧೦೦ಕ್ಕೆ ಕಡಿಮೆಯಿಲ್ಲದ ಸ್ವಯಂಸೇವಕರನ್ನು ಕೂಡಿಸಬೇಕೆಂದೂ, ಜುಬಿ ಪ್ರಯುಕ್ತ ಸಭೆಯನ್ನು ಜರಗಿಸಿ ಫ್ರೌಪತ್ರ ಕಾಂಗ್ರೆಸಿನ ಕಾರ್ಯಕ್ರಮಗಳನ್ನು ನಿರವಿಸಬೇಕೆಂದೂ ನಿರ್ಧಾರಗಳಾದುವು

ಆಟದ ಸಮಯದಲ್ಲಿ ಅಡ್ಡಿ

ಕಳೆದ ತಾ ೨೩ನೇ ರಾತ್ರಿ ಕೊಡಿಯಾಲ ಗುತ್ತು ದೇವಿಪ್ಪರವರ ಕರಿ ದುಷ್ಕರ್ಮಿಗಳು ಆಟವು ಆಡಿಸಲ್ಪಟ್ಟತ್ತು ಆ ದಿನ ಕಾಂಗ್ರೆಸ್ ಭಕ್ತರು ಕಾಂಗ್ರೆಸ್ ಪಕ್ಷದಶ್ರೀ ಜಿ ನಿ ಬಾಳಿಗರಿಗೆ ಓಟು ಕೊಡಬೇಕೆಂದು ಬರೆದ ಸೂಚನೆಗಳನ್ನು ತಂದಿಟ್ಟಿದ್ದರು ಸೋಳಿಸ ಯಜಮಾನರು ಆ ಸೂಚನೆಯ ತೆಗೆದು ಹಾಕಬೇಕೆಂದು ಒತ್ತಾಯಿಸಿದರು ಅದಕ್ಕೆ ಚೋರ್ಯಗಳಲ್ಲಿ ಪ್ರಮುಖರಾಗಿರುವ ತಗೆದು ಹಾಕಬೇಕೆಂದು ಬಹಳ ಕಾಲ ಚರ್ಚೆಯಾಯಿತು. ಮೇಳದ ಯಜಮಾನರು ರಾತ್ರಿಯಲ್ಲಿ ಆಟವನ್ನು ನಿಲ್ಲಿಸಿಬಿಡುವುದಾಗಿ ಹೇಳಿದರು ಇದೆಲ್ಲವು ಎನಿಗೆ ಬಹಳ ಅನಮಾನವನ್ನುಂಟುಮಾಡಿತ ವೀಳ್ಯ ಪೆಟ್ಟಿಗೆಯೊಂದ ಮೇಲೆ ಆಟವನ್ನು ಅಡತಕ್ಕದ್ದು ನೋಡವರ ಕರ್ತವ್ಯವೆಂದು ಎಲ್ಲರೂ ಹೇಳತೊಡಗಿದರು ಜೋರ್ಡಿನ ನಿಸಿದು ಚರ್ಚೆಗೆ ಬಂದ ಕಾರಣದಿಂದ ಕಾಂಗ್ರೆಸ್ ಪ್ರಚಾರವು ಬಹಳ ಚೆನ್ನಾಗಿ ಆಯಿತು ಕಾಂಗ್ರೆಸ್ ಕವೆಯವರು ಮಾಡಿದ ಕೆಲಸವು ನರಿಯೆಂದು ಎಲ್ಲರೂ ನಿರ್ಧರಿಸಿದರು

ವಿಜಯನಗರ ಸ್ಮಾರಕ ದಿನಾಚರಣೆ

ತಾ ೨೫ನೇ ಸಾಯಂಕಾಲ ಮಂಗಳೂರು ಪಂಡಿತ ಸಂಘದವರು ಕೆನರಾ ಹೈಸ್ಕೂಲ್ ಭವನದಲ್ಲಿ ಶ್ರೀ ಜಿ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ವಿಜಯನಗರ ದಿನಾಚರಣೆಯನ್ನು ನಡೆಸಿದರು ವಿದ್ವಾನ್ ಶ್ರೀ ಮೆ ಕಿಯ ತಿಮ್ಮಪ್ಪಯ್ಯನವರು ನಿಜಯನಗರದ ವಿಸಯವಾಗಿ ತಾವು ರಚಿಸಿದ ಪದ್ಯಗಳನ್ನು ಪಠಿಸಿದರು ಪಂಡಿತ ಶ್ರೀ. ಪದ್ಮಾಡಿ ಅನಂತ ಉಪಾಧ್ಯಾಯರು ನಿಜಯ ನಗರದ ಸಂಸ್ಕೃತಿ ಬಗ್ಗೆ ಸಂಸ್ಕೃತಿಗಳು ಎಷ್ಟು ಉತ್ಕೃಷ್ಟತೆಗೆ ಬಂದಿದ್ದವು ಎಂಬ ವಿಷಯವಾಗಿ ಮಾತನಾಡಿದರು ಪಂಡಿತ ರಿಂತ ಶ್ರೀ ಕಂಠಯ್ಯನವರು ವಿಜಯನಗರದ ಲ್ಯುಂತ ಚಿರಸ್ಥಿತಿಯನ್ನೂ, ಅದರಿಂದ ನಾವು ಕಲಿಯಬೇಕಾದ ಸಾರವನ್ನೂ, ಸಂಸ್ಕಾರವಾಗಿ ಪರಿಣಮಿಸಿದ ಮತ್ತು ಸ್ಮಾರಕ ಮಂದಿರವಾಗಿ ದನ್ನವಾಗಿಳನ್ನು ನಿಜಯನಗರದ ಸ್ಮಾರಕ ನವಾಗಿ ತಾವು ಸಬೇಕೆಂದು ರಚಿಸಿದ ಕಂದು ಪದ್ಯಾನ್ ಕವಿಯೋಗೀಮ್ಬರ ಪುರಂದರ ದಾಸರ ಕೀರ್ತನೆಯೊಂದು ಸುತ್ತಾ ವಿಜಯನಗರದ ರಾಜನರಲ್ಲಿ ಪ್ರತಿಯೊಬ್ಬ ಆರ್ಯರೂ ಮಾಡಿದ ಮಹತ್ಕಾರ್ಯ ಇವುಗಳ ನಿವೇಯವಾಗಿ ಸುದರ್ಶನ ಬಾಪಟಯ್ಯ ಪ್ರಭೃತಿ ಇವ್ಯ ಶ್ರೀ ಸನುಯೋಚಿತ ಭಾಷಣವನ್ನು ಪ ಮೇತೆ ನಿಡಾಸ್ ನಾರಾಯಣ ಭಟ್ಟರು ವಂದನಾ ಪರ್ಣ ಮಾಡಿದ ನಂತರ ಸಭಾಂತ್ಯವಾಯಿತು

ತಿದ್ದುಪಡಿ—ಕಳೆದ ಸಂಚಿಕೆಯಲ್ಲಿ 'ಕೆನರಾ ಬೇಂಕ್ ಲಿಮಿಟೆಡ್' ವರದಿಯಲ್ಲಿ Total Working Funds Rs 5,00,000 ಎಂದು ತಪ್ಪಾಗಿ ಮುದ್ರಿತವಾಗಿದೆ. ಅದು Rs 75,00,000 ಎಂದಾಗಬೇಕು

ಉಡುಪಿ

ಗೀತಾಜಯಂತಿ:—ತಾ ೨೫-೧೨-೩೬ನೇ ಗುರುವಾರ ಅವರಾಧ್ಯ ಸಂಜೆ ೫ಕ್ಕೆ ಶ್ರೀ ಕೃಷ್ಣಮಠದ ಪಡಿಮಾರ್ ಮಂಟಪದಲ್ಲಿ ಶ್ರೀಪಾದಂಗಳವರ ಆಧ್ಯಕ್ಷತೆಯಲ್ಲಿ ಗೀತಾಜಯಂತಿಯ ನ್ನಾಚರಿಸುವರೆ ಸಾರ್ವಜನಿಕ ಪ್ರೌಢಶಾಲೆಯ ಪಂಡಿತ ವೆಂಕಟರಮಣಾಚಾರ್ಯರು, ಪೌರಾಣಿಕ ಸೀತಾರಾಮಾಚಾರ್ಯರು, ಗೀತೆಯ ಸಾರ ಮತ್ತು ಮಹತ್ವವನ್ನು ವಿವರಿಸಿ, ಸಭಾಧ್ಯಕ್ಷರ ಪ್ರಾಸ್ತಾವಿಕಗಳೊಂದಿಗೆ ಪೂಜಾವಿಧಿ ಭಾಗವು ಪೂರ್ತಿಯಾಗಿ ಪ್ರಾರಂಭವಾಗಿ ಕಾಮು ಕುಂತಿ ಬಲಿ ಯ ಪ್ರಸಿದ್ಧ ಗೀತಾಗಾಯನ ತೊ. ಪಿಂಜರಿ ಗೀತಾ ರಥ ಸ್ಪರ್ಧೆಗಳ ನಡೆದವು ಸಾಯಂಕಾಲ ೭ಕ್ಕೆ ಶ್ರೀ ಪಿ ಸೀತಾರಾಮ ಚಾರ್ಯರು ಸಂಗಡಿಗರು ಆರ್ಯಭಟ್ಟರ ಪ್ರೌಢಾಂಗಳವರು ಅವಸ್ಮಾಸಕರ ಆಪೇಪ್ರಾಯಗಳನ್ನು ಸಮರ್ಪಿಸಿದ ನಾಲ್ಕು ಪುಸ್ತಕಗಳನ್ನಾಧಿದ ಮೇಲೆ ಸಭಾಕಾರ್ಯವಾಯಿತು

ಹೊಸ ಮುನ್ಸೀಫರು:—ಇತ್ತೀಚೆಗೆ ಬಳ್ಳಾರಿಗೆ ವರ್ಗಾಯಿಸಲ್ಪಟ್ಟ ಇಡ್ಡಿಯ ಮುನ್ಸೀಸರಾದ ಬಿ ಎಲ್ ವೆಂಕಟೇಶರವರ ಸ್ಥಾನಕ್ಕೆ ಬಳ್ಳಾರಿಯ ಡಿ ಮನ್ಸಿಫ್ ಶ್ರೀ ಆರ್ ಎಸ್. ನಿ ಪಣಾಚಲ ಪತಿರಾಜ್, ಬಿ.ಎಲ್ ಎಟಿ ಅವರವರು ಬರಲಿರುವರು

ಉತ್ಸವ—ಇಲ್ಲಿಯ ಶ್ರೀಕೃಷ್ಣಜೀಮಾಲಯದ ಮಕರ ಸಂಕ್ರಾತಿ ಜಾತ್ರೆಯು ಜನವರಿ ತಾ ೨೬ಕ್ಕೆ ಆರಂಭವಾಗಿ ತಾ ೧೧ಕ್ಕೆ ಸಂಕ್ರಮಣ ಮಹೋತ್ಸವದೊಡನೆ ಮುಗಿಯಲಿದೆ ಪರ್ಯಾಯ ಶ್ರೀಪಾದಂಗಳವರು ಉತ್ಸವಕ್ಕೆ ಚೇರ್ಮನ್ರಾಗಿರುವರು

ಕಾರ್ಕಳ ತಾಲೂಕು ಸೆಂಟ್ರಲ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯೂ ಶ್ರೀ ಎ ಬಿ ಶೆಟ್ಟರು 'ಕೈಸರ್ ಈ ಹಿಂದ್' ಮೊದಲಾದ ಸರಕಾರದತ್ತ ಬಿರುದುಸಂಪತ್ತನ್ನು ತ್ಯಜಿಸಲಿಚ್ಛಿಸಿರುವ ಉಡುಪಿ ತಾಲೂಕು ಕಾಂಗ್ರೆಸ್ ಕಾರ್ಯಕರ್ತರ ಸಭೆಯ ಒತ್ತಾಯಕ್ಕೆ ಮಣಿ ಅದನ್ನು ವಾಪಸು ಕೊಟ್ಟುಬಿಡುವೆನೆಂದು ಉತ್ತರವು ಶ್ರೀ. ಎ ಬಿ ಶೆಟ್ಟರಿಂದ ಬಂದಿದೆ

ಹಿರಿಯಡ್ಕ—ಶ್ರೀಮಜ್ಜಗದ್ಗುರು ಪೇಜಾವರ ಮಠದ ಸಂಸ್ಥಾನದವರಿಂದ ಹಿರಿಯಡ್ಕದಲ್ಲಿ ಇದೇ ತಾರೀಖು-೧೭ ಮತ್ತು ೧೮ನೇ ಸೋಮವಾರ ಮತ್ತು ಮಂಗಳವಾರಗಳಂದು ತಮ್ಮ ಆಡಳಿತವನ್ನು ಪ್ರದರ್ಶಿಸಲಿರುವರು

ಸದರಿ ಮಂಡಲಿಯಲ್ಲಿ ಸುಪ್ರೀಂಸ್ಟ್ ಕೋರ್ಟಿನ ಸುಪ್ರಸಿದ್ಧ ವಕೀಲರಾದ ಶ್ರೀ ಮಧ್ವೆ ಶಂಕರ ನಾರಾಯಣ ಸಾವಳಗಿ, ಬ್ರಹ್ಮಾವರ ವೀರಭದ್ರ ನ್ಯಾಯಾಧಿ, ಸಾಂಬೆ ಶ್ರೀ ಕೆ ಶೇಷಗಿರಿ ಐತಾಳರು ಮೊದಲಾದವರೂ ಅಧಿಕೃತ ಪ್ರತಿನಿಧಿಗಳಾಗಿ ಪ್ರವಾಸ ಮಾಡಲಿರುವರು ಪ್ರಜೆಗಳನ್ನು ಪಡಿಯುವ ಬಗ್ಗೆಯೇ ಸರಂಜಾಮಗಳನ್ನು ಇವರು ಪ್ರಸ್ತಾವ ಮಾಡಲಿರುವರು

THE BOMBAY LIFE ASSURANCE Co., LTD.

ESTD 1908

Church Gate Street, Fort - - BOMBAY.

SPECIAL FEATURES.

1. Rebate on yearly payment of policies.
2. Rebate for larger assurances.
3. Accident Risk covered on small extra premiums.
4. Attractive Bonuses

It pays you to represent this Company.
Wanted Agents in unrepresented parts.

Apply to:—

KOCHIKAR BROTHERS,

Madras Branch Secretaries.

BRANCHES AT:

P. B. 337 Mount Road, Madras.	Visveswarapuram Circle, Bangalore City.	Soumyalayam Puthiyara, Calicut
Car Street, Mangalore	Udipi, S India	Charni Road, Bombay No. 4

EVIDENCE OF SECURITY & STABILITY

FIGURES THAT SPAEK FOR THEMSELVES

TOTAL ASSETS Rs. 80,66,600

Summary of 1935 Accounts

Total Assets Over	.	Rs 80,00,000
Life Funds Over	. ..	Rs. 65,00,000
Premium Income Over	...	Rs 22,54 000
Interest Income	. .	Rs. 3,16,000
Claims Paid	.. ... .	Rs 5,75,000

Total Claims paid Over Rs. 38 50,000

Total Business in Force Over Rs 1,12,51,200

TOTAL BUSINESS IN FORCE Rs. 4,42,51,200

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ಆದಷ್ಟು ಬೇಗನೇ ತಮ್ಮ ಹಣವನ್ನು ಮನಿಯಾರ್ಡರ್ ಮೂಲಕ ದಯವಿಟ್ಟು ಕಳುಹಿಸಿಕೊಡ ಬೇಕಾಗಿ ಆಪೇಕ್ಷಿಸುತ್ತೇವೆ. ವಿ. ಪಿ. ಮಾಡುವದಾದರೆ ಐದಾಣೆ ಹೆಚ್ಚಿಗೆ ಬೀಳುವದು.

ನಮ್ಮೊಡನೆ ಪತ್ರವ್ಯವಹಾರ ನಡೆಸುವವರು ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಬರೆಯಬೇಕಾಗಿ ವಿನಂತಿ.

ಮ್ಯಾನೇಜರ್ ನವಯುಗ

ಉಡುಪಿ, ತಾ. ೩೧-೧೨-'೩೬ ಗುರುವಾರ

ಫೈಜಪುರದ ರಾಷ್ಟ್ರಸಭೆ

ಇನೇ ತೀಗಳ ತಾ. 27, 28ರಲ್ಲಿ ಫೈಜಪುರದಲ್ಲಿ ನೆರೆದ ೫೦ನೇ ರಾಷ್ಟ್ರೀಯ ಸಭೆಯು ಬಹು ಮಹತ್ವದ್ದೆಂಬುದರಲ್ಲಿ ಸಂದೇಹವಿಲ್ಲ. ಹಿಂದುಸ್ಥಾನಕ್ಕೆ ಸ್ವತಂತ್ರ ರಾಷ್ಟ್ರವಾಗಿ ಲೋಕದ ಪ್ರಬಲ ರಾಷ್ಟ್ರಗಳ ಪ್ರಸಕ್ತ ಶ್ರೇಣಿಯಲ್ಲಿ ನಿಲ್ಲುವ ಯೋಗ್ಯತೆಯೇನೋ ಇದೆ; ಆದರೆ ಹಾಗಾಗಬೇಕಾದರೆ ಯೋಗ್ಯತೆಯೊಂದೇ ಸಾಲದು; ಅದನ್ನು ಗಳಿಸಿಕೊಳ್ಳುವ ಶಕ್ತಿಯೂ ಬೇಕು. ಯೋಗ್ಯತೆಯು ಪ್ರಕೃತಿದತ್ತವಾಗಿ ಭಾರತಕ್ಕೆ ದೊರಕಿದ್ದರೆ, ಶಕ್ತಿಯು ಈ ರಾಷ್ಟ್ರಸಭೆಯಿಂದಾಗಿ ನಿರ್ಮಾಣಗೊಂಡಿದೆ. ಹಿಂಕಾಲೋಚದಿದಿರಲ್ಲಿ ಹಿಂದೂದೇಶವು ತನ್ನ ಯೋಗ್ಯತೆ ಮತ್ತು ರಾಷ್ಟ್ರಸಭೆಯ ಶಕ್ತಿ—ಇವೆರಡಕ್ಕಿಂತಲ್ಲಿಯೆ ಬೇರಾವುದರಿಂದಲೂ ಮಾನ್ಯತೆ ಪಡೆಯದು.

ಫೈಜಪುರದ ಕೊಂಗ್ರೆಸು ೫೦ನೇ ಸಭೆ; ಈ ಐವತ್ತು ವರ್ಷಗಳ ಪ್ರಥಮ ಭಾಗದಲ್ಲಿ ಮೃದುವಾಗಿಯೂ, ಕೊನೆಯ ಭಾಗದಲ್ಲಿ ಬಿರುಸಾಗಿಯೂ ೧೫೦ ವರ್ಷಗಳ ಗಡಿ ದಾಟಿದ ಬ್ರಿಟಿಷ್ ಆಳ್ವಿಕೆಯೊಡನೆ ಕೊಂಗ್ರೆಸು ವ್ಯವಹಾರದಲ್ಲಿ ನಡಕೊಂಡಿದೆ. ಆದರೆ ಧ್ಯೇಯದಲ್ಲಿ ನ್ಯಾಯ ಮೆಟ್ಟು ಕೃತ್ಯದಲ್ಲಿ ಉಜ್ವಲತೆ—ಇವೆರಡಿವೆ. ಅವುಗಳ ಆಧಾರದಿಂದ ತನ್ನ ಭವಿಷ್ಯವನ್ನು ಆಶಾದೃಷ್ಟಿಯಿಂದ ಅದು ನೋಡುತ್ತಲೂ ಇದೆ. ಸಾಧ್ಯವಿದ್ದ ಹಾದಿಯಲ್ಲಿಲ್ಲಾ ಪೂರ್ಣಶಕ್ತಿಯಿಂದ ಗುರಿಯ ಕಡೆಗೆ ಧಾವಿಸುತ್ತಲೂ ಇದೆ ಫೈಜಪುರ ಕೊಂಗ್ರೆಸಿನ ನಿರ್ಣಯಗಳು ಅಂತಹದೊಂದು ಹೆಜ್ಜೆ ಎಂಬುದರಲ್ಲಿ ಅನುಮಾನವಿಲ್ಲ.

ಅಧ್ಯಕ್ಷ ನೆಹರುಗಳ ಭಾಷಣವು ಹಿಂದು ಸ್ವಾತಂತ್ರದ ಪ್ರಗತಿಯ ನಕಾಶೆಯನ್ನು ಸ್ಪಷ್ಟವಾಗಿ ಬಿಡಿಸಿ ತೋರಿಸುತ್ತಿದೆ. ಕಾಲವು ಕಳೆದಂತೆ ಪ್ರಪಂಚದ ರಾಷ್ಟ್ರಗಳೊಳಗಿನ ಸಂಬಂಧವು ಜಿಗಿಯುತ್ತಾ ಬರುವಾಗ, ಹಿಂದೂ ದೇಶವು ಇನ್ನು ಎಲ್ಲೆಯನ್ನು ಗುರುತಿಸಿಕೊಂಡು ಕುಳಿತಿರಲು ಬರುವದಿಲ್ಲ. ಒಂದು ದೇಶದ ರಾಜಕೀಯ ಪಥವು ನಿರಾತಂಕವಾಗಿ ಇನ್ನೊಂದರ ಗಡಿಯನ್ನು ಹಾದು ಹೋಗುತ್ತಿರುವ ಕಾಲವಿದು. ಲೋಕದ ಈ ಪರಿಸ್ಥಿತಿಯನ್ನರಿತೇ ಪಂಡಿತ ಜವಾಹಿರಲಾಲರು, ಸ್ವಯಿಸಿನ ಕುರಿತು ಮಹದಾತುರ ತೋರಿಸಿರುವರು; ಪ್ರಾಪಂಚಿಕ ಮಾರ್ಮಾಟಗಳ ಕಡೆಗೆ ಹಿಂದೂದೇಶವು ಕಣ್ಣು ಚ್ಚಿರಬಾರದೆಂದು ಎಚ್ಚರಿಸಿರುವರು. ನಮ್ಮ ಸ್ಥಾನವೇ ಸ್ಥಿರವಾಗದಿರುವಾಗ ಅನ್ಯದೇಶಗಳೊಳಗಿನ ಕೆರಕುಳಗಳ ವಿಮರ್ಶೆಯು ಅಧಿಕ ಪ್ರಸಂಗವೆನ್ನುವ ವಿಮರ್ಶಕರಿದ್ದಾರೆ. ಆ ಮಾತು ಬೇರೆ. ನಮ್ಮ ಸಂಪತ್ತು ಸೂರಿಯಾಗಿರಬಹುದು; ಅಧಿಕಾರವು ಕೈತಪ್ಪಿರಬಹುದು; ಈ ಭಾಗದಲ್ಲಿ ಬಡವರಾಗಿದ್ದಪರೆಲ್ಲಾ ಆತ್ಮ ಶಕ್ತಿ ಮತ್ತು ಸ್ಥಾನಂಚಿಕ ವ್ಯವಹಾರದಲ್ಲಿಯೂ ಹಿಂಸೆ ಬಿದ್ದಿರಬೇಕೆಂಬ ನಿಯಮವಿಲ್ಲ. ಸೂತ್ರವಲ್ಲ, ಈ ಶಕ್ತಿ ಹಾಗೂ ಜ್ಞಾನವು ನಮ್ಮ ಆರ್ಥಿಕ ರಾಜಕೀಯ ದಾರಿದ್ರ್ಯ ನಿವಾರಣೆಯ ಒಂದು ಪ್ರಬಲ ಸಾಧನವೂ ಆಹುದು. ನಾವು, ಸದ್ಯದ ಗಂಡಾಂತರವನ್ನು ದೂರ ಮಾಡಿ, ದೂರದ ಗಂಡಾಂತರವನ್ನು ಆ ಮಂತ್ರಿಸುವ ಹೆಜ್ಜೆ ರಾಗಬಾರದು. ಲೋಕದ ಯಾವ ರಾಷ್ಟ್ರವನ್ನೂ ನೆಮ್ಮದಿಯಲ್ಲಿ ಜಲು ಮನಸ್ಸಿಲ್ಲದ ಸಾಮ್ರಾಜ್ಯವಾದ ಮತ್ತು ದೌಲತುವಾದ (ಫೇಸಿಸ್‌ಮ್)ಗಳನ್ನು ಕೊಂಗ್ರೆಸಿನ ಅಧ್ಯಕ್ಷರು ಇಷ್ಟೊಂದು ಎಚ್ಚರಿಕೆಯಿಂದ ಕಂಡುದು ತಪ್ಪಲ್ಲ.

ಕೌನ್ಸಿಲು ಕಾರ್ಯಕ್ರಮದ ಕುರಿತೂ ಪಂಡಿತರ ಆಭಿಪ್ರಾಯವು ಸ್ಪಷ್ಟವಿದೆ. ಹೊಸ ರಾಜ್ಯಾಂಗರಚನೆಯನ್ನು ಮುರಿದೊಗೆಯುವ ಕೊಂಗ್ರೆಸಿನ ಧ್ಯೇಯಕ್ಕೆ ಯಾವ ದಿಕ್ಕಿನಲ್ಲೂ ಬೆಟ್ಟು ಬೀಳದಂತೆ ಸಂಬಂಧಪಟ್ಟವರು ನಡಕೊಂಡರೆ ಸರಿ. ವಿಶಾಲ ಧ್ಯೇಯ ಸಾಧನೆಗಾಗಿ ಮುಂದಿಟ್ಟ ಹೆಜ್ಜೆಯನ್ನು, ಬಿಸಿಲ್ಗುದುರೆಯನ್ನು ಬೆಂಬತ್ತುವ ಸಲುವಾಗಿ ಹಿಂದಿಡದಿದ್ದರೆ ಸರಿ. ಜವಾಹಿರರ ಈ ಜಾಗ್ರತೆಯು ಕಾಲೋಚಿತವಿದೆ.

ಅಂತೂ ಫೈಜಪುರವು ರಾಷ್ಟ್ರದ ಆಕಾಂಕ್ಷೆಯನ್ನು ಸ್ಪಷ್ಟವಾಗಿ ಹೊರಗೆಡಹಿದೆ; ಸೂಡಬೇಕಾದ ಕೆಲಸಗಳನ್ನು ತೋರಿಸಿಕೊಟ್ಟಿದೆ. ಸ್ವಾತಂತ್ರ್ಯವು ಎಂದೂ ಬರಲಿ—ಭಾರತೀಯರು ತನ್ನು ಜವಾಬ್ದಾರಿಯನ್ನರಿತುಕೊಂಡು ಹುರುಪಿನಿಂದ ದೇಶಸೇವೆಯನ್ನು ಕೈಕೊಂಡ ಸುರುಕ್ಷಣವೇ ನಮ್ಮ ನೋವನ್ನೆಲ್ಲಾ ಪುರೆತುಬಿಡಬಹುದು!

ಕೈಸರ್-ಈ-ಹಿಂದ್ ತ್ಯಾಗ.

ಕುಂದಾಪುರ ತಿಮ್ಮಜಿಸಿನ ಕೊಂಗ್ರೆಸ್ ಉಮೇದ್ವಾರಿಯಾದ ಶ್ರೀ ಎ. ಬಿ. ಸೆಟ್ಟರು ಸರಕಾರದತ್ತ ಬಿತುದು ಬಿಲ್ಲೆಗಳನ್ನೆಲ್ಲಾ ತ್ಯಜಿಸಿ, ಪರಿಶುದ್ಧರಾಗಿ ಮತದಾರರ ಮುಂದೆ ನಿಂತಿರುವರು. ಯಾರಾದರೂ ತಮ್ಮಿಚ್ಛೆಯಿಂದಲೇ ಬಿರುದು ಬಾವಲಿಗಳನ್ನು ಪಡೆಕೊಳ್ಳಲಾರರು; ಅವುಗಳನ್ನು ತ್ಯಜಿಸಬೇಕಾದರೆ ಮಾತ್ರ ಹೆಚ್ಚಿನ ತ್ಯಾಗ ಬುದ್ಧಿಯ ಆವಶ್ಯಕತೆಯಿದೆ. ಶ್ರೀ ಸೆಟ್ಟರ ಮೇಲೆ ಸಹಜವಾದ ಆರೋಪವೊಂದು ಮೊನ್ನೆಯ ವರೆಗಿತ್ತು; ಇನ್ನವರಿಕ್ಕೆ ಸ್ಥಾನವಿರಲಾರದು. ಕೊಂಗ್ರೆಸು ಉಮೇದ್ವಾರಿಯಾಗಿ ತಾನು ಮಾಡಲಿದ್ದ ಕೆಲಸವನ್ನು ಶ್ರೀ ಸೆಟ್ಟರು ಮಾಡಿ ಕೈತೊಳೆದುಕೊಂಡರು! ರಾಷ್ಟ್ರಕ್ಕಾಗಿ ಮಾಡಬೇಕಾಗಿದ್ದ ತ್ಯಾಗವನ್ನು ಮಾಡಿದರು; ರಾಷ್ಟ್ರ ಸಭೆಯ ಆಪ್ಪಣೆಯನ್ನು ಪಾಲಿಸಿದರು! ಆ ತ್ಯಾಗವನ್ನು ಸ್ವೀಕರಿಸಿ ಕೊಂಗ್ರೆಸಿಗ ಮತದಾರರ ಕಡೆಗೆ ಮುಖ ಮಾಡಿದೆ. ರಾಷ್ಟ್ರಕ್ಕಾಗಿ ಅದಕ್ಕೇಗ ಬೇ ಕಾದುದು ಅವರ ಓಟು. ಮತದಾರರೇನೆನ್ನುವರು? ಕೊಂಗ್ರೆಸಿಗೆ ಓಟು ಕೊಡಲೇ ನಾವರೂ ಅತಂಕಗಳು ಅವರಿಗಿರುವಾದರೆ ಅವೆಲ್ಲಾ ಸಣ್ಣ ಪುಟ್ಟ ಸಂಗತಿಗಳು! ಉಜ್ವಲ ರಾಷ್ಟ್ರೀಯ ಭಾವನೆಯೆದಿರಲ್ಲಿ ದಿಕ್ಕಾಪಾಲಾಗಿ ಚದರುವ ಕೆರುಕುಳಗಳು! ರಾಷ್ಟ್ರಕ್ಕಾಗಿ ಈ ಅಲ್ಪ ಸಂಗತಿಗಳನ್ನೊಡೆದುಹಾಕಿ ಹೇಗೆ ದೊಡ್ಡ ಹೆಜ್ಜೆಯಿಡಬೇಕೆಂಬುದನ್ನು ಕೊಂಗ್ರೆಸಿನ ಉಮೇದ್ವಾರಿಯು ಸಕಾಲದಲ್ಲಿ ತೋರಿಸಿ ಕೊಟ್ಟಿರುವಾಗ, ಮತದಾರರೂ ಅದನ್ನನುಸರಿಸುವರೆಂದು ನಂಬುತ್ತೇವೆ. ಈ ರೀತಿ ರಾಷ್ಟ್ರ ಪ್ರೇಮನನ್ನು ಪ್ರದರ್ಶಿಸಿದುದಕ್ಕಾಗಿ ಶ್ರೀ ಸೆಟ್ಟರನ್ನು ಅಭಿನಂದಿಸುತ್ತೇವೆ.

ಓಟರರ ಮುಂದಿರುವ ಸಮಸ್ಯೆ

ದಕ್ಷಿಣ ಕನ್ನಡದಲ್ಲಿ ಕೊಂಗ್ರೆಸಿನ ವಿರುದ್ಧವಾಗಿ ನಿಂತಿರುವವರು ಮತದಾರರಿಗೆ ಮುಂಕುಬಳಿಯಲು ಹವಣಿಸುವಂತಿದೆ. ಜಸ್ಟಿಸ್ ಪಾರ್ಟಿಯ ಬೆಂಬಲ—ಇನಿದ್ದರೂ, ಅವುಗಳನ್ನು ಬೆಂಗಡೆಯಲ್ಲಿ ಹಿಡಕೊಂಡು ಮತದಾರರಿಗೆ ಕೃತಕ ಅನುಕೂಲತೆಗಳನ್ನು ತೋರಿಸಿ ಅಂಗಲಾಚುವ ನಟನೆಯು ರಾಜಕೀಯ ರಂಗದಲ್ಲಿ ಸಾಸ್ಯಾಸ್ಪದವಾದುದು. ಮತದಾರರ ಅಭಿಪ್ರಾಯವೆಂಬುದು ಬಹು ಬಿಲಿಯುಳ್ಳದ್ದು; ಅದನ್ನು ಪಡಕೊಳ್ಳುವ ಶಕ್ತಿಯು ವಿಶಾಲ ರಾಷ್ಟ್ರಹಿತಕ್ಕೆ ಪೂರ್ತಿಸಿದೆ. ಅದಿಲ್ಲದ ಪ್ರತಿಷ್ಠಾಪ್ರಿಯರು ಅನಂಬದ್ಧವಾಗಿ ಅಭಿನಯಿಸಿ ತಮ್ಮ ಕಾರ್ಯ ನಾಧಿನಲು ನೋಡುವರು. ಇಂತಹ ಕೃತಕ ಆಲೆ, ಯಾ ಅಧಿಕಾರ ಭಯದಿಂದ ಮತದಾರರು ತಬ್ಬಿಬ್ಬಾದರೆ, ಅವರು ತಮ್ಮನ್ನು ತಾನೇ ವಂಚಿಸಿಕೊಂಡಂತಾಗುವದು. ಒಬ್ಬಿಬ್ಬರು ಆತ್ಮವಂಚಕರು ವಿಶಾಲ ರಾಜಕೀಯ ಕ್ಷೇತ್ರದಲ್ಲಿ ಜೋರಿಬಂದರೆ, ಅದೊಂದು ಆಶ್ಚರ್ಯವಲ್ಲ; ಅವರು ತಮ್ಮಿಂ ಸ್ವಭಾವ ಬಲದಿಂದಲೇ ಕಾರ್ಯ ಸಾಧಿಸಲು ನೋಷುವಾಗ, ಅರಿವಿಲ್ಲದ ಸಾಮಾನ್ಯರು ಇನ ಮತದಾರರಿಗೂ ಈ ಮನೋವೃತ್ತಿಯು ಅಂಟಿಹೋಗಿ, ಆ ಮೂಲಕ ರಾಷ್ಟ್ರ ಹಿತಕ್ಕೆ ಧಕ್ಕೆ ತಗಲುವ ಜೋಚನೀಯ ವಿಷ್ಯವಾಗಿಪ್ಪ ಮಾತ್ರ ಸಹಜವಾತೀಳವಿದೆ.

ಕೊಂಗ್ರೆಸು ವಾರ್ತೆ ಸಂದೇಶಗಳು

ಲಂಡನಿನ ಇಂಡಿಯಾ ಲೀಗಿನವರು ಕೊಂಗ್ರೆಸಿಗೆ ಅಭಿನಂದನೆಯನ್ನು ಕಳುಹಿಸಿ ದಬ್ಬಾಳಿಕೆಯನ್ನೂ ಚುನಾವಣೆಯ ಕೆಲಸಗಳನ್ನು ತಡೆವುಹಾಕುವ ಸರಕಾರದ ವರ್ತನೆಯನ್ನು ಖಂಡಿಸಿರಿ. ಸಾಮ್ರಾಜ್ಯವಾದ ಹಾಗೂ ಹೊಸ ಸುಧಾರಣೆಗೆ ತೀವ್ರ ವಿರೋಧವನ್ನು ತೋರಿಸಿರಿ" ಎಂಬ ಸಂದೇಶವನ್ನು ಕಳುಹಿಸಿರುವರು.

ಅಂತರ್ರಾಷ್ಟ್ರೀಯ ಯುದ್ಧ ನಿಷೇಧಕ ಮಂಡಲದವರು ಕೊಂಗ್ರೆಸನ್ನು ಅಭಿನಂದಿಸುತ್ತಾ "ಬ್ರಿಟಿಷರು ಕೈಕೊಳ್ಳಲಿರುವ ಯಾವ ಯುದ್ಧದಲ್ಲಿಯೂ ಹಿಂದೀಯರು ಭಾಗವಹಿಸಬಾರದೆಂಬ ನಿಮ್ಮ ನಿರ್ಣಯವನ್ನು ನಾವು ಸ್ವಾಗತೀಕರಿಸುತ್ತೇವೆ" ಎಂದು ಬರೆದಿರುವರು.

ಲಂಡಲಿನಿನ 'ಸ್ವರಾಜ್ಯಲೀಗಿ'ನವರು ಪಂಡಿತ ಜವಾಹಿರಲಾಲರ ಮೂರನೇ ಸಲದ ಅಧ್ಯಕ್ಷತೆನಕ್ಕಾಗಿ ಅವರನ್ನು ಪ್ರಶಂಸಿಸಿ ಭಾರತದ ಸ್ವಾತಂತ್ರ್ಯಯುದ್ಧದಲ್ಲಿ ಅವರ ನಾಯಕತ್ವವು ಜಯಶೀಲವಾಗಲೆಂದು ಹಾರೈಸಿರುವರು. ಮಿ. ಫೆನ್ನರ್ ಬ್ರೋಕ್‌ವೆ, ಜಪಾನಿನ ಆನಂದ ಮೋಹನ ಶಹಾ ಮೊದಲಾದವರ ಅಭಿನಂದನೆಗಳೂ ಬಂದಿವೆ.

ಗಾಂಧಿಯವರು ಪುನಃ ರಾಜಕೀಯವನ್ನು ಪ್ರವೇಶಿಸುವದಿಲ್ಲ.

ಗಾಂಧಿಯವರು ಕೊಂಗ್ರೆಸಿನಲ್ಲಿತ್ಯ ಭಾಷಣದಲ್ಲಿ ರಾಜಕೀಯ ಬಣ್ಣವಿದ್ದುದರಿಂದಲೂ 1934ರಲ್ಲಿ ರಾಜಕೀಯದಿಂದ ನಿವೃತ್ತರಾದ ಮೇಲೆ ಇಂತಹ ಭಾಷಣವನ್ನು ಅವರು ಕೊಟ್ಟುದು ಇದೇ ಮೊದಲಾದುದರಿಂದಲೂ ಅವರು ಪುನಃ ಕೊಂಗ್ರೆಸನ್ನು ಪ್ರವೇಶಿಸಬಹುದೆಂಬ ಆಸೆಯು ಫೈಜಪುರದಲ್ಲಿದ್ದಿತು. ಕೆಲವು ಮಂದಿಯ ಪ್ರತ್ಯೇಕ ನೊಂದು ಗಾಂಧಿಯವರಿದ್ದಲ್ಲಿ ಹೋಗಿ ಆ ಕುರಿತು ವಿಚಾರಿಸಿದಾಗ ಅವರದನ್ನು ಅಲ್ಲಗಳೆಯುತ್ತಾ 'ನಾನು ನೆನಸಿರುವ ಅಂತಹ ಆಸೆಯನ್ನು ನನ್ನ ಭಾಷಣವು ಹುಟ್ಟಿಸಿತಾದರೆ ಅದೊಂದು ಬಗೆಯ ದೌರ್ಭಾಗ್ಯವೇ ಸರಿ' ಎಂದರು. ತಾನು ರಾಜಕೀಯವನ್ನು ಬಿಟ್ಟ ಆ ಕಾಲದಲ್ಲಿದ್ದುದಕ್ಕೂ ಭಿನ್ನವಾದ ಪರಿಸ್ಥಿತಿಯೇನೂ ಈಗ ಇಲ್ಲವಾದುದರಿಂದ ಪುನಃ ಕೊಂಗ್ರೆಸನ್ನು ಸೇರುವದಿಲ್ಲವೆಂದು ಗಾಂಧಿಯವರಿಚ್ಛಿಸುವದಿಲ್ಲವಂತೆ.

150 ಅಡಿ ಎತ್ತರದ ಧ್ವಜಸ್ತಂಭವನ್ನು ಚತುರತೆಯಿಂದ ಹತ್ತಿ ರಾಷ್ಟ್ರಧ್ವಜವನ್ನೇರಿಸಿದ ರಜಪೂತ ತರುಣನಿಗೆ ಅಧಿವೇಶನಾರಂಭವಲ್ಲಿ ಸ್ವಾಗತಾಧ್ಯಕ್ಷರಾದ ಶ್ರೀ ಶಂಕರ ರಾವ್ ದೇಸೂರು ೧೧೧ ರೂಪಾಯಿಗಳ ಬಹುಮಾನವಿತ್ತರು.

ಹಿಂದೂದೇಶ

ಧ್ವಜವಂದನೆ

ತಾ. ೭-ನೇ ಆದಿತ್ಯವಾರದ ಧ್ವಜವಂದನೆಯು ವಿಶಾಲ ಸ್ಥಳದಲ್ಲಿ ೨೦೦೦೦ಕ್ಕೂ ಮಿಕ್ಕಿದ ಜನಸ್ತೋಮವು ಕಿಕ್ಕಿರಿದು ಹೋಗಿ ಸ್ವಯಂಸೇವಕರಿಗೆ ಸಮೂಹವನ್ನು ಪತೋಟಿಯಲ್ಲಿಡಲು ಆತ್ಯಂತ ಪ್ರಯಾಸವಾಯಿತು. 75-80 ಮೈಲುಗಳ ದೂರವನ್ನು ಮೂರು ನಾಲ್ಕು ದಿನಗಳಲ್ಲಿ ರಾತ್ರಿ ಹಗಲು ನಡೆದು ಬಂದಿದ್ದ ಲೈಕರ ಗಂದದರು, ಹೆಂಗಸರು, ತಮ್ಮ ತಮ್ಮ ಮುಳ್ಳಿನ್ನು ಕಂಕುಳಲ್ಲಿಟ್ಟುಕೊಂಡು ಗುಂಪು ಗುಂಪಾಗಿ ಳನುಗ್ಗುವದ್ಯಪ್ಪ ಪ್ರೇಕ್ಷಣೀಯವಾಗಿತ್ತು. ಸುಮಾರು ೧೦೦೦ ಸಾವಿರ ಜನರು ಸ್ಥಳವಿಲ್ಲದೆ ತಮ್ಮ ಆತುರವನ್ನು ತಡೆದುಕೊಂಡು ಹೊರಗೆ ನಿಲ್ಲಬೇಕಾಯಿತು. 150 ಅಡಿ ಎತ್ತರವಿದ್ದ ಧ್ವಜಸ್ತಂಭದಲ್ಲಿ ರಾಷ್ಟ್ರೀಯ ಧ್ವಜಾರೋಹಣ ಮಾಡುತ್ತಾ ಪಂಡಿತ ನೆಹರುಗಳು ಹುರುಪಿನಿಂದ ಭಾಷಣವಿತ್ತರು.

ಮಹಾಧಿವೇಶನ

ಸಂಜೆ ಘಂಟೆ 4- ೫ಕ್ಕೆ ಸರಿಯಾಗಿ ಅಧ್ಯಕ್ಷ ಪಂಡಿತ ಜವಾಹಿರಲಾಲ ನೆಹರುಗಳು ತನ್ನ ಗುಡಿಸಲಿನಿಂದ ಮೆರವಣಿಗೆಯೊಡನೆ ಹೊರಬಿದ್ದರು. ಮಾಜಿ ಅಧ್ಯಕ್ಷರುಗಳಾದ ಪಂಡಿತ ಮಾಲವೀಯರು, ಶ್ರೀಮತಿ ನಾಯಿಮ್ಮ, ನ್ಯೂಖಾನ್ ಅಬುಲ್ ಕಲಮ್, ಬಾಬು ರಾಜೇಂದ್ರ ಪ್ರಸಾದ್, ಸರದಾರ್ ಪಟೇಲರಲ್ಲದೆ ವರ್ಕಿಂಗ್ ಕಮಿಟಿ ಮೆಂಬರರೂ ಮೆರವಣಿಗೆಯಲ್ಲಿದ್ದರು. ನೆಹರುಗಳು ಸಭಾಂಗಣವನ್ನು ಪ್ರವೇಶಿಸಿವ್ಯಾಸೇ ಜಾರಿಯ ಅಧ್ಯಕ್ಷರಾಗಿ ಪೀಠವನ್ನೇರಿದೊಡನೆ ಪ್ರಚಂಡ ಜಯಕಾರವೆದ್ದಿತು. ಮ. ಗಾಂಧಿಯವರು ಮೆರವಣಿಗೆಯಲ್ಲಿದ್ದರೂ ಸಮಯಕ್ಕೆ ಸರಿಯಾಗಿ ಸಭಾಸ್ಥಳವನ್ನು ಪ್ರವೇಶಿಸಿದರು. ಸ್ವಾಗತಾಧ್ಯಕ್ಷರಾದ ಶ್ರೀ ಶಂಕರ ರಾವ್ ದೇಸೂರವರು ಸ್ವಾಗತ ಭಾಷಣವನ್ನು ಓದಿದರು. ಅಧ್ಯಕ್ಷರು ತನ್ನ ಭಾಷಣವನ್ನು ಹಿಂದೀಯಲ್ಲಿ ಮಾಡಿದಾಗ ಸಭೆಯು ಕಿಲ್ಲೋಸಾಗಿ ಅಲಿಸಿತು. ಪಂಡಿತ ನೆಹರುಗಳು ಆವೇಶದಿಂದ ಭಾಷಣವನ್ನು ಓದಿ ಮುಗಿಸಿದಾಗ ಸಭೆಯಲ್ಲಿ ಪ್ರಚಂಡ ಜಯಕಾರವೆದ್ದಿತು. ಆ ಮೇಲೆ ಈ ಸಭೆಯು ಹಳ್ಳಿಯಲ್ಲಿ ಜರಗುವಲ್ಲಿ ಕಾರಣಭೂತರಾದ ಮ. ಗಾಂ

ಧಿಯವರು ಅಮೋಘ ಭಾಷಣವನ್ನು ಕೊಂಗ್ರೆಸನ್ನು ಹಳ್ಳಿಗಳಲ್ಲಿ ಜರಿಗಿಸಬೇಕೆಂದು ಸೂಚಿಸಿದರು. ಬಾಡಿಯಿಂದೇ ಸ್ವರಾಜ್ಯವೆಂಬುದನ್ನು ಒತ್ತಿ ಹೇಳಿ ಖಾದಿ ಅಸ್ಪೃಶ್ಯತಾ ನಿವಾರಣೆ, ಹಿಂದೂ ಮುಸಲ್ಮಾನ ಐಕ್ಯತೆ ಮೊದಲಾದ ತಾತ್ಕಾಲಿಕ ಕಾರ್ಯಕ್ರಮಗಳು ಜಯಶೀಲವಾಗಿ ಆಚರಿಸಲ್ಪಡುವುದರಿಂದಲೇ ಸ್ವರಾಜ್ಯವು ಹಿಂದೆ ಹೋಗುತ್ತಿರುವುದೆಂದರು. ಬರ್ಮಾದ ಸಂಬಂಧ, ಸೈಯಾಸಿಗೆ ಸಹಾಯಭೂತಿ, ಗಡಿಸಾಬಿನಧೋರಣೆಯಿಂದಸೇ ಯುದ್ಧದ ಏಷೇಧ, ಲೋಕೆ ಶಾಂತಿಪರಿಸ್ಥಿತಿನವಿಚಾರ, ನಾಗರೀಕ ಹಕ್ಕು ರಕ್ಷಣೆ, ಪಾವಳಿಗೊಳಿಗಾದ ಪ್ರದೇಶಗಳ ವಿಚಾರವೇ ಮೊದಲಾದವುಗಳ ಕುರಿತು ಸರ್ವಸಮ್ಮತಿಯ ಒಂಭತ್ತು ತೀರುವುಗಳಾಗಿ ಅಭಿವೇಶನವು ಮರುದಿನಕ್ಕೆ ಮುಂದರಿಸಲ್ಪಟ್ಟಿತು. ಅಧಿವೇಶನದ ಮುಂಚಿನ ಎರಡೇ ದಿನಗಳಲ್ಲಿ ಟಿಕೇಟೆ ಮಾರಾಟದ ಹಣವು ೫೬೦೦೦ಕ್ಕೆ ಏರಿಕೆಯೆಂದು ತಿಳಿದುಬರುತ್ತದೆ. ಒಂದು ಲಕ್ಷಕ್ಕೂ ಮಿಕ್ಕಿದ ಜನಸ್ತೋಮವು ನೆರೆದು ಬಂದಿತ್ತು. ಬಹುಮಂದಿ ಹಳ್ಳಿಗರೇ ಆಗಿದ್ದ ಈ ಸಮೂಹದಲ್ಲಿ ಒಂದೇ ಒಂದು ಗಲಭೆಯಾಗಿಲ್ಲ!

ಸ್ವದೇಶ ವಾರ್ತೆ

ಗಣಿಯಲ್ಲಿ ಸಮಾಧಿ

ಬಂಗಾಳದ ಅಸನ್‌ಸೋಲಿನ ಪೈಯಿದಿ ಎಂಬ ಕಲ್ಲಿದ್ದಲ ಗಣಿಯಲ್ಲಿ ಬೆಂಕಿ ಹಿಡಿದುಕೊಂಡು ಬಿಟ್ಟಿತು. ಹೊತಗಿನವರಿಗೆ ಗಣಿಗಿಳಿದು ಅವನ್ನು ಸೊದಿಸಲಿಕ್ಕಾಗಲಿಲ್ಲ. ಅವರ ಬಾಯಿಯನ್ನು ಮುಚ್ಚಿಸಿ ಒಳಗೆ ಪ್ರವೇಶಿಸಬಂತೆ ಮಾಡುವುದೇ ಬೆಂಕಿಯನ್ನು ನೊಂದಿಸುವ ಏಕೈಮಾತ್ರ ಉಪಾಯವೆಂದು ಗಣಿರಾಜ್ಯದ ರನ್ನು ನಿರ್ಣಯಿಸಿದರು. ಒಳಗಿದ್ದ ೬೩ ಮಂದಿ ಹೆಂಗಸರನ್ನು ಮತ್ತು ೧೪೪ ಗಂದಸರನ್ನು ರಕ್ಷಿಸಲಾಗಲಿಲ್ಲ! ಈಗಲ್ಲಿ ಗಣಿಯ ಬಾಯಿಗಳನ್ನು ಮುಚ್ಚಿಸಿ ಆಲ್ಲಿ ಯಾರೂ ಹೋಗದಂತೆ ಕಾವಲು ಇಡಲಾಗಿದೆ

ಬೊಂಬಾಯಿಯ ಹಿಂದೂ-ಮುಸಲ್ಮಾನ ಗಲಭೆ

ಈ ಗಲಭೆಯು ಶಾಂತವಾಗಿರುವುದರಿಂದ ಪಟ್ಟಣಿಗೆದೆ ಸಂಚಾರಕೂಟಿ ಮುಂತಾದವುಗಳಿಗೆ ನಿಷೆಯವಾಗಿ ಜ್ಯಾರಿಗೆ ಬಂದ ಕರ್ಫ್ಯೂ ಆರ್ಡರು ತೆಗೆದು ಹಾಕಲ್ಪಟ್ಟಿದೆ. ವ್ಯಾಪಾರ ವಿವಾಹಗಳು ಹಿಂದಿನಂತೆ ನಡೆಯತೊಡಗಿವೆ.

ಬಿ. ಎನ್. ರೈಲ್ವೇ ಮುಷ್ಕರ

ಬಂಗಾಳ, ನಾಗಪುರ ರೈಲ್ವೇ ಕೆಲಸಗಾರರ ಮುಷ್ಕರವು ಜಬ್ಬತ್ತಲೇ ಇದೆ. ಮುಷ್ಕರಗಾರರು ಶಾಂತಿಯಿಂದ ನರ್ತನತ್ತ ಧೂರ್ತತನವನ್ನು ತೋರದಿರುವುದು ಅಸರಿಗೊಂದು ಭೂನಡ.

ವಿಚಿತ್ರ ವಿಶ್ವ

ಬ್ರೆಟಿನಿನಲ್ಲಿ ನಗ್ನರ ಕ್ಲಬ್‌ಗಳು

ಅಲ್ಲಲ್ಲಿರುವ ಇಂತಹ ಕ್ಲಬ್‌ಗಳಲ್ಲಿ ಒಬ್ಬಗೆ ಸುಮಾರು ಒಂದು ಲಕ್ಷ ಸದಸ್ಯರಿರಬಹುದೆಂದು ತಿಳಿಯಲಾಗಿದೆ. ಇದರ ಸದಸ್ಯರು ಕಛೇರಿಗೆ ಸ್ವಭಾವದವರೆಂದರೆ ಅರ್ಥ ಸ್ವಸ್ಥವಾದೀತು. ಇನ್ನು ಬಂದಾಗ ಸೀರ್ತು, ಮನ ಬಂದಾಗ ಕೆಲಿದ ನೋಟ! ದಾಗೆ ಈ ಕ್ಲಬ್‌ಗಳ ಸದಸ್ಯರು ಹಗಲೆಲ್ಲ ತನ್ನ ಕೆಲಸಗಳ ಲ್ಲಪ್ಪ ಬೀಸರವಾದಾಗಲೆಲ್ಲ ಈ ಕ್ಲಬ್‌ಗಳಿಗೆ ಹೋಗಿ ಒಂದೆರಡು ಗಂಟೆ ನಗ್ನರಾಗಿದ್ದು ಅನಂತರವೆಲೇ ಚಿಸರವನ್ನು ಕಳೆಯಲು ಬಂದು ನಗ್ನರಾಗಿ ಆಟ ವಿಹಾರಗಳಲ್ಲಿರುವವರ ಕೂಟದಲ್ಲಿ ಕಾಲ ಕಳೆದು ಹೊರಗೆ ಹೋಗುವಾಗ ತರುಗಿ ಬಟ್ಟೆ ಬರಗಳನ್ನು ಧರಿಸುವರಂತೆ! ಹೀಗೆ ವಸ್ತ್ರ ತ್ಯಾಗ ವಸ್ತ್ರಧಾರಣ ಇವ ಮನ ಬಂದಂತೆ ಬೇಕಾದಾಗ ಬೇಕು! ಛೇದವಾದಾಗ ಬೇಡ!

ವಿದೇಶ

ಜರ್ಮನಿಯ ಬುದ್ಧಿವಂತಿಕೆ

ಸ್ಪೈನಿನ ಯುದ್ಧದಲ್ಲಿ ದಂಗೆಗಾರರಿಗೆ ಬೇಕಾದ ಯುದ್ಧ ಸಾಮಗ್ರಿಗಳನ್ನು ಧರ್ಮಾರ್ಥವಾಗಿಯೂ ಕೊಡುತ್ತಿತ್ತು ಜರ್ಮನಿ. ಆದರೆ ಹಾಗೆ ಮಾಡಿದ್ದು ಪರಿಣಾಮಂಟಾಗುವ ನಷ್ಟವನ್ನು ಸ್ಪೈನ್ ಸರಕಾರದ ಪಕ್ಷದವರಿಗೆ ಬಹಳ ಪ್ರಿಯವಾಗಿ ಮಾರುತ್ತಿದ್ದ ಸಾಮಗ್ರಿಗಳಿಂದ ಭರ್ತಿ ಸಾಡಿಕೊಳ್ಳುತ್ತಿತ್ತು. ಬೇರೆ ಜನಾಂಗೆಗಳು ಕಟ್ಟೆಕ್ಕರಾಗಿದ್ದುದರಿಂದ ಸ್ಪೈನಿನ ಸರಕಾರ ಪಕ್ಷದ ಜರ್ಮನಿಯ ಮಾರ್ಕೆಟ್ಟನ್ನೇ ಕೋಪ ಜೇಕಾಯಿತು. ಒಂದಕ್ಕೆ ನಾಲ್ಕು ಬೆಲೆ ಹೇಳಿ ಸುರಿಬಂದ ಪದ್ಧುಸಿಂದ ದಂಗೆಗಾರರಿಗೆ ಕಡಿಮೆ ದರ ವಲ್ಲೂ ಧರ್ಮಾರ್ಥವಾಗಿಯೋ ಆಯುಧಗಳನ್ನು ಕೊಡ್ಟುಬಿಟ್ಟಿತು. ಮಾತ್ರವಲ್ಲ ಕಾಲು ಹೊಸಪೊಸವಾಗಿ ನಿರ್ಮಾಸುವ ಯುದ್ಧನಾಮಗ್ರಿಗಳೂ ಯುತ್ರ ಫಿರಂಗಿಗಳೂ ಕಾರ್ಯತಃ ಪ್ರಯೋಗಪಡ್ಡು ಹೇಗೆ ಬರುತ್ತವೆಬಬುದನ್ನೂ ಸ್ಪೈನಿನ್ ಯುದ್ಧದಿಂದ ನೋಡಲಿಕ್ಕೂ ಅದಕ್ಕೊಂದು ಸುಸಂದರ್ಭ ದೊರೆಯಿತು.

ಸ್ಪೈನಿನಿನ ದಂಗೆ

ಇನ್ನೂ ಎಲ್ಲವ ಸಂಭವ ತೋರುವುದಿಲ್ಲ. ಜರ್ಮನಿಯೂ ಇಟಲಿಯೂ ಪ್ರತ್ಯಕ್ಷವಾಗಿಯೂ ದಂಗೆಗಾರರಿಗೆ ಸಹಾಯಮಾಡಲು ತೊಡಗಿದಂತೆ ತೋರುತ್ತಿದೆ ಎಂದರೆ ಮತ್ತೊಂದು ಪಕ್ಷದ ಜಂಬಲವಾಗಿ ರಷ್ಯಾವೂ ಬರಬೇಕಾಗುವುದು. ಆಗ ಈ ತನಕ ಕಟ್ಟೆಕ್ಕರಾಗಿರುವ ಇಂಗ್ಲೆಂಡ್ ಫ್ರಾನ್ಸ್ ಮುಂತಾದುವು ಏನು ಮಾಡಲಿಕ್ಕಿವೆಯೋ!

ಚೈನದಲ್ಲಿ

ಕಮ್ಯುನಿಸ್ಟ್ ಪಂಗಡದ ದಂಗೆಗಾರ ಸೇನಾಪತಿಯಿಂದ ನೆರೆಹಿಡಿಯಲ್ಪಟ್ಟಿದ್ದ ಚಿಯಾಂಡ ಮಹಾಪ್ರಭಾವ ಚಿಯೆಂಗ್ ಕೈಷೇಕನು ಬಿಡುಗಡೆ ಹೊಂದಿ ನಾಂಕಿಂಗಿಗೆ ಬಂದುರುತ್ತಾನೆ. ದಂಗೆಗಾರ ಸೇನಾಪತಿಯು ತನ್ನ ಖಿಡೆಯಪ್ಪಲ್ಲ ಕಪ್ಪು ತಿಳಿಪಳಿಕೆಯುಳ್ಳವನಾಗಿ ನೆರೆಹಿಡಿದದೆಂದೂ ಹಾಗೆ ಮಾಡಿದ್ದು ಪಕ್ಷದಲ್ಲಿ ಅನಾನಿಗೆ ತಿಳಿದ ಕೂಡಲೇ ಚೀನ. ಸಭ್ಯತೆಗೆ ತಕ್ಕಂತೆ ಆದನ್ನೊಪ್ಪಿ ಕೆನ್ನನ್ನ ಬಿಡುಗಡೆ ಮಾಡಿದ್ದಲ್ಲದೆ ಈಗಾದಲೆ ಶಿಕ್ಷಾರ್ಹನೆಂದು ಒಪ್ಪಿಕೊಂಡು ಶಿಕ್ಷೆಯ ವಿಷಯದಲ್ಲಿ ಸರಕಾರವು ಚರ್ಮಾನಮಾಡುವುದಕ್ಕೆ ಒಳಗಾಗಲು ಸಿದ್ಧನಾಗಿದ್ದಾನೆಂದೂ ಮಹಾಪ್ರಭಾವನೆ ಹೇಳಿಕೆ.

ಮುಹಾದಾನಿ ಆರ್ಡ್ ನಫೀಲ್ಡ್‌ರು

ಆರ್ಡ್ ನಫೀಲ್ಡ್‌ರು ಎಂದರೆ ಇಂಗ್ಲೆಂಡಿನ ಮಹಾ ಶ್ರೀಮಂತ. ಆವರ ಬೆಲೆ ಶ್ರೀಮಂತರಂತೆ ಇವರಿಗೆ ಇನ್ನೂ ಪಡ್ಡು ಕೊಡಿಸಿ ಹಾಕುವ ಭೂಮವಗಾರರ ಮನೋವೃತ್ತಿಯಿಲ್ಲ. ಇಂಗ್ಲೆಂಡಿನಲ್ಲಿ ಅತಿ ಜೀನಸ್ಥಿತಿಯಲ್ಲಿರುವ ವೆಲ್ಸ್ ಪ್ರಾಂತದ ಜನರ ಸಹಾಯಾರ್ಥವಾಗಿ ೨೦ ಲಕ್ಷ ಪವನು ದಾನಮಾಡಿರುತ್ತಾರೆ. ಇದ್ದರ ಪರಿಗೆ ಬೆರಡು ವಾಡಿರುವ ದಾನಗಳೆ ಒಟ್ಟು ಸೊಬಲಗು ೭೫ ಲಕ್ಷ ಪವನುಗಳಂತೆ.

ಸಿಂಹಾಸನ ತ್ಯಾಗಿಗಳಾವ ಎಡ್ವರ್ಡ್‌ರು

ಇವರು ಆಸ್ಟ್ರಿಯದ ವಿಯನ್ನಾ ನಗರದ ಸಮೀಪ ಒಂದು ಗ್ರಾಮವನ್ನಿದ್ದಾರೆ. ಇವರು ಪುಮವೆಯಾಗಿ ಟಿಕೆಂಯನುವ ಎಂಪ್ರೆಸ್ಸರು ಫ್ರಾನ್ಸಿನ ಕೆನ್ಸ್ ಎಂಬ ಪಟ್ಟಿದ್ದಾರೆ. ಇನ್ನು ಪಲವು ತಿಂಗಳು ತಾವು ಆವರನು ಭೇಟಿಯಾಗುವುದಿಲ್ಲವೆಂದು ತಿಳಿಸುತ್ತಾಳಂತೆ!

ಭೂಕಂಪ

ಉತ್ತರ ಅಮೆರಿಕದ ಸಾನ್ ಸ್ಯಾಲ್ವೊರ್ (ಕೊಲಂಬಿಯನು ಪ್ರದೇಶ ಅಸೇರಿಕನ್ನು ಕಂಡು ಬಿಡಿದ ಜಾಗ) ಎಂಬ್ಲಿ ಭೂಕಂಪನವಾಗಿ ಸುಮಾರು ಇನ್ನೂರು ಜನರು ನೃತರಾದರು. ಐದು ಗ್ರಾಮಗಳು ಪೂರಾ ಹಾಳಾಗಿ ಹೋದವು.

ಬಾಲಪಾಠ್ಯಾಲಯದ ಆವಶ್ಯಕತೆ ಮತ್ತು ನಿರ್ಮಾಣದ ವಿಷಯಕವಾದ ಪ್ರಬಂಧ

ಬಾ ಲ ವಾ ಜ್ಮಯ

ಬೆಲೆ ಮೂರಾಣೆ

ಉಪಾಧ್ಯಾಯರ ಪ್ರಕಟಿನ ಸಮಿತಿ,

ಉ ಡು ಪಿ

THE

GUARDIAN OF INDIA

INSURANCE COMPANY, LTD.

Head Office: **MADRAS.** Branch: **MANGALORE.**

Capital— Indian.

Management—Entirely Indian & Efficient.

LOW PREMIUMS.

CONDITIONS LIBERAL & EQUITABLE.

Schemes— Most novel, suited to all sorts and conditions and attractive.

ASSURED SECURITY

Life is uncertain, Savings are uncertain, Insurance is the only remedy for this uncertainty.

Let the Guardian Guard your future.

Insure your life with this popular and Progressive and Economical Indian Life Office—Do not delay.

Applications are invited from respectable gentlemen and ladies to represent the Company in S. Kanara, N. Kanara and Coorg on commission or salary or both.

Notice: All the policy holders & agents are informed that all future dealings must be made with The Branch Secretary, The Guardian of India Insurance Co., Ltd, Mangalore Branch.

E. A. PAIS, B. Sc., *Branch Secretary*, **The Guardian of India Insurance Co., Limited,** MANGALORE BRANCH.

ತೀರಾ ದೇಶೀಯ ಭಂಡವಾಳ=ತೀರಾ ದೇಶೀಯ ಆಡಳಿತೆ

ತೀರಾ ಭದ್ರವಾದ ಕಾರ್ಯಕ್ರಮ.

ತೀರಾ ಕಡಿಮೆ ವಿಮೆಯ ದರಗಳು --- ಉದಾರವಾದ ಶರ್ತಗಳು

ನ್ಯಾಯನೀತಿ ಸಮ್ಮತವಾದ ವ್ಯವಹಾರ.

ತೀರಾ ಹೊಸ ಹೊಸ ನಮೂನೆಯ ಏರ್ಪಾಡುಗಳು,

ಎಲ್ಲಾ ಬಗೆಯ ವಿವಿಧ ಸ್ಥಿತಿಯ ಜನರಿಗೆ ಸರ್ವಾನುಕೂಲ.

ಅತ್ಯಾಕರ್ಷಕವಾದ ಶರ್ತಗಳು--ಖಂಡಿತವಾದ ಭದ್ರತೆ.

ಜೀವನ ಅನಿಶ್ಚಿತ; ಸಂಪಾದನೆ ಅನಿಶ್ಚಿತ.

ಇವುಗಳ ಬಾಧಕಕ್ಕೆ ಜೀವನಿಮೆಯೇ ಉತ್ತಮ ಪರಿಹಾರ.

ಒಮ್ಮೆ ನಮ್ಮಲ್ಲಿ ವಿಮೆ ಕೊಂಡವರು

ನಿರಾಶರಾಗಲಾರರು.

ಸೂಚನೆ:—ನಮ್ಮ ಎಲ್ಲಾ ಪಾಲಿಸಿಹೋಲ್ಡರರೂ, ಏಜಂಟರೂ ಇನ್ನು ಮುಂದೆ ತಮ್ಮ ವ್ಯವಹಾರವನ್ನು ದಿ ಬ್ರಾಂಚ್ ಸೆಕ್ರೆಟರಿ, ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮಂಗಳೂರು ಶಾಖೆ ಇವರೊಡನೆ ಬೆಳಿಸಬೇಕಾಗಿ ವಿನಂತಿ.

ವಿಶೇಷ ಮಾಹಿತಿಗಳಿಗೆ ಇವರಿಗೆ ಬರೆಯಿರಿ.

E. A. PAIS, B. Sc., *Branch Secretary*, **The Guardian of India Insurance Co., Limited,** MANGALORE BRANCH.

ದಿ ಗಾರ್ಡಿಯನ್ ಒಫ್ ಇಂಡಿಯಾ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್,

ಮುಖ್ಯ ಆಫೀಸು--ಪೋಸ್ಟ್ ಬೊಕ್ಸ್ ೯೯--ಮದ್ರಾಸು.

ದಕ್ಷಿಣ ಕನ್ನಡ

(ಉಡುಪಿ ಮುಂಪರಿನಿಸ್ಸು)

ಗತವರ್ಷದಲ್ಲಿ ಮಂಗಳೂರಿನಂತಹ ಶಹರಿನಲ್ಲಿ ಯಶಸ್ಸು ಹೊಂದಿದ ಈ ನುಂಬಳಿಯು ಈ ವರ್ಷವು ಇನ್ನೂ ಹೆಚ್ಚಿನ ಪ್ರಸ್ಥಗಿ ಬಂಗಿಂದು ಬರುವ ಸೆಪ್ಟಿಂ

ದಿವಂಗತ ಪಡಮನೂರು ರಾಮಚಂದ್ರ ರಾಯರ ನಿಧನೋತ್ಸವ

ಪ್ರಾಮಿಕರೇ!

ಇದರ್ಗಿಣಿನ: ಇಸವಿ ಜನವರಿ ತಾ ೨ನೇ ಶನಿವಾರ ಪೂರ್ವಾಹ್ನ ಗಂ ೬.೩೦ಕ್ಕೆ ಸರಿಯಾಗಿ ಎಂ. ಎಂ. ವಿಟ್ಠಲ ರಾಮಚಂದ್ರ B A B L ವಕೀಲರವರ ಅಧ್ಯಕ್ಷತೆಯಲ್ಲಿ ಉಡುಪಿ ಹಿಂದೂ ಮೋರ್ಚಸ್ ಹಾಯರ್ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ದಿವಂಗತ ಪಡಮನೂರು ರಾಮಚಂದ್ರರಾಯರ ನಿರ್ನಿಮಿತ್ತವಾದ ಎಗ್ಗಿ ಶಿವ ಸಮಾಜದ ವತಿಯಿಂದ ಒಂದು ಮಹಾಸಭೆಯು ಜರಗಲಿರುವುದ ಸದ್ರಿ ಸಭೆಗೆ ಕ್ಲೃಪ್ತ ಸಮಯದಲ್ಲಿ ತಾವು ದಯವಾಡಿ ಬರಬೇಕಾಗಿ ವಿನಯವಿನೆಂತಿ

U Ramachandra,
ಸೆಕ್ರೆಟರಿ, ಶಿವಸಮಾಜ

೧ ಪೂರ್ವಾಹ್ನ ಘೆಂಟೆ ೧೦ಕ್ಕೆ ಭಜನೆ, ೨ ಅಪರಾಹ್ನ ಗಂಟೆ ೧ಕ್ಕೆ ದಿವಂಗತರ ಕುರಿತು ಶ್ರೀಯುತ ಕೊಡ್ಗಳಿಕೆ ಶ್ರೀನಿವಾಸರಿಂದ ಮತ್ತು ಶ್ರೀಯುತ ಎಂ. ವಿಟ್ಠಲ ಹೆಗ್ಡೆಯವರಿಂದ ಭಾಷಣಗಳು, ೩ ಅನಂತರ ಮಧ್ಯಾಹ್ನ ಗಂಟೆ ೩ಕ್ಕೆ ನಗರ ಸಂಕೀರ್ತನೆ

ಪಿ ಸೂ —ದಿವಂಗತರ ಸ್ಮರಣಾರ್ಥವಾಗಿ ಒರ್ ಗುಣ ಈ ಸಭೆಯು ಕಾರ್ಯಕರ್ತರಿಂಪಗಳ ಬಗ್ಗೆ ಉದಾರ ಸಹಾಯ ನಿಧಿಯಿಂದ ಕೊಡುವ ಧನ ಸಹಾಯವನ್ನು ಅತ್ಯಾದರದಿಂದ ಸ್ವೀಕರಿಸಲಾಗುವುದು

ಕಟ್ಟಾಡಿ.

ಬರುವ ತಾ ೯-೧-೧೯೩೭ನೇ ಬೃಹಸ್ಪತಿವಾರ ಸಾಮೂಲು ಪ್ರಕಾರ ನಡೆಯಲಿರುವ ಕಟ್ಟಾಡಿ ಕಂಬಳದಲ್ಲಿ ನಿಯಮಿತಕ್ಕನುಗುಣವಾಗಿ ಗೆದ್ದ ಹಣಿಗೆ ಹೋರಿಗಳಿಗೆ ಸುವರ್ಣ ಪದಕವು ದಗ್ಗೆದ್ದಲ್ಲಿ ಗೆದ್ದ ಹೋರಿಗಳಿಗೆ ಬೆಳ್ಳಿಯ ಪದಕವು ಕೊಡಲ್ಪಡುವುದು

ಪೊಳಲಿ

ತಾ ೧೯-೧೨-೩೬ರಲ್ಲಿ ಪೊಳಲಿ ಶ್ರೀ ವಿದ್ಯಾ ವಿಲಾಸ ಶಾಲೆಯಲ್ಲಿ ಕೂಡಿದ ತುಳುವ ಮಹಾಸಭೆಯ ವರದಿ.

ಹಾಜರಿರು ಉಡ್ಡಿಯಿಂದ ಸತ್ಯಶ್ರೀ ಬಂಗೇರರು, ಅರ್ಮಂಜೆ ಪಟೇಲ್ ಶಿವರಾಯರು, ಎಣ್ಮೂರು ಅನಂತರಾಮರಾಯರು ಮತ್ತು ಆಯಾಯ ಕಡೆಯ ಹಲವು ಮಾತಿನ ಮನುಷ್ಯರು ಸೇರಿ ೨೫೧ ಜನರು ಹಾಜರಿದ್ದರು ಈ ತುಳುವ ಮಹಾಸಭೆಗೆಶ್ರೀಯುತ ಆಲ್ಮೆಬಳಿ ವಿದ್ವಾನ್ ಶಂಕರನಾರಾಯಣರಾಯರನ್ನು ಅಧ್ಯಕ್ಷರಾಗಿ ಆರಿಸಲಾಯಿತು

ತಾ ೧೧೧೩ ಇಸ್ಸರಲ್ಲು, ಉಡ್ಡಿಯಲ್ಲಿ ಕಾರ್ಯದರ್ಶಿಯವರಾಗಿದ್ದ ಶ್ರೀಯುತ ಯಸ್ ಯು ಪಣಿಯಾಡಿಯವರು ಕೊಟ್ಟ ರಾಜಿನಾಮೆಯನ್ನು ಮಂಜೂರುಮಾಡಲಾಯಿತು—

ಶ್ರೀಯುತ ಅರ್ಮಂಜೆ ಗುತ್ತು ಬಿ ಸ್ ಎ ತಿಮಪ್ಪ ಹೆಗ್ಡೇರನ್ನು ಕಾರ್ಯದರ್ಶಿಯಾಗಿ ನೇಮಕ ಮಾಡಲಾಯಿತು—

ತುಳುವ ಮಹಾಸಭೆಯ ಕಾರ್ಯಾಲಯವನ್ನು ತಾ ೨೦೧೧೩೭ಕ್ಕೆ ಉಡ್ಡಿಯಿಂದ ಪೊಳಲಿಗೆ ವರ್ಗಾಯಿಸಿದ್ದನ್ನು ಮಂಜೂರುಮಾಡಲಾಯಿತು—

ಈ ತುಳುವ ಮಹಾಸಭೆಗೆ ಒಳಪಟ್ಟ ತುಳುನಾಡಿನ ನಾಲ್ಕು ಮುಖ್ಯ ಸ್ಥಳಗಳಲ್ಲಿ "ತುಳುನಾಡ್ ಪ್ರಚಾರ ಮಂಡಲ" ಎಂಬ ಉಪಸಂಘಟನೆಗಳನ್ನು ಸ್ಥಾಪಿಸ ಬೇಕಾಗಿ ನಿರ್ಣಯ ಸರ್ವುಮ್ಮತ

ಅಲ್ಲಲ್ಲಿ ಸ್ಥಾಪಿಸಿದ ತುಳುನಾಡ್ ಪ್ರಚಾರ ಮಂಡಲದವರು

೧ ಮಹಾಸಭೆಗೆ ಮಂಬರರನ್ನು ಸೇರಿಸುವುದು
೨ ತುಳುಸಾಹಿತ್ಯ ಸಂಗ್ರಹ ಮಾಡ ಪುದು
೩ ಮಾಡಿದ ಕಾರ್ಯಗಳ ವಿವರವನ್ನು ಮಹಾಸಭೆಯ ಕಾರ್ಯಾಲಯಕ್ಕೆ ಕ್ಲೃಪ್ತ ಸಮಯದೊಳಗೆ ಕಳುಹಿಸಿಕೊಡಬೇಕಾಗಿ ನಿರ್ಣಯಿಸಲಾಯಿತು

ತುಳುವ ಮಹಾಸಭೆಯ (೪ ನಿಯಮ ೨) ಪ್ರತ್ಯೇಶ ಹಾಗೂ ರೂಪ್ಯ ಒಂದನ್ನು ತಾ ೩೦-೧೨-೩೦ರಲ್ಲು ನಾಲ್ಕಾಣೆ ಎಂದೆ ನೂಡಿದ್ದನ್ನು ಮಂಜೂರುಮಾಡಲಾಯಿತು—

ತುಳುವ ಮಹಾಸಭೆಗೆ ಶೌಲಿಯಲ್ಲಿ ಒಂದು ಶಾಶ್ವತ ಸ್ಥಳವನ್ನು ಕಟ್ಟುಣಾಗಿ ಶ್ರೀಯುತ ತಿಮಪ್ಪ ಹೆಗ್ಡೇರು ತಂದ ರೆಯಾಯನ್ನು ಬರುವ ಮಹಾಸಭೆಗಿಮುಂದರಿಸಬೇಕಾಗಿ ಸತ್ಯಶ್ರೀ ಬಂಗೇರರ ಸೂಚನೆಯಂತೆ ಮುಂದರಿಸಬೇಕಾಯಿತು

ತುಳುವನ್ನು ಗ್ರಂಥಸ್ಥ ಭಾಷೆಗೆ ಅನುಕೂಲವಾಗಿ ಒಂದು ಸಣ್ಣ ವ್ಯಾಕರಣ ಸೂತ್ರವನ್ನು ವಿದ್ವಾಂಸರು ತಯಾರಿಸಿ ಕೊಡಬೇಕೆಂಬ ಸತ್ಯಶ್ರೀ ಬಂಗೇರರ ಸೂಚನೆಯನ್ನು ಬರುವ ಮಹಾಸಭೆಯ ತುಳುಸಾಹಿತ್ಯ ಪರಿಷತ್ತಿಗೆ ಒಪ್ಪಿಸಿ ಸಂಪೂರ್ಣ ಅಧಿಕಾರವನ್ನು ಕೊಡುವ ಬಗ್ಗೆ ಮುಂದರಿಸಲಾಯಿತು—

ಧನ್ಯವಾದ ಇವಿನಿಷ್ಟು ಪ್ರತಿಪಾದಿತ ತುಳು ಆಫೀಸಿನ ಪುಟ ಗಸಲ್ಲಿ ಕಾಣುವಂತೆ ಸಾಹಿತ್ಯ ಪ್ರಚಾರ ಮಾತ್ರವಲ್ಲ, ರಾಜಕೀಯ ಪುನಸ್ಥಾಪನೆಯ ಕುರಿತು ತುಳುನಾಡ್ ಎಂಬ ಹೆಸರಿನಲ್ಲಿ ಪ್ರತ್ಯೇಕ ವಿವರಿಸುವುದಕ್ಕೆ ಇದು ತಕ್ಕ ಸಮಯವೆಂದು ವಿಷಯವನ್ನು ಪ್ರಸ್ತಾಪಿಸಿ ಯುವ ನಿರ್ಣಯವಾಗಿ ಈಗ ನಮ್ಮ ಜಿಲ್ಲೆಯ ಪರವಾಗಿ ಕೌನ್ಸಿಲ್ ಮತ್ತು ಎಸೆಂಬ್ಲಿಗೆ ಹೋಗುವ ಮೆಂಬರರಿಗೆ ಚೇಕಾದ ಅನುಭವಗಳನ್ನು ಶ್ರೀಯುತ ಪಣಿಯಾಡಿಯವರು ಕೊಡಬೇಕಾಗಿಯೂ, ತುಳು ನಾಡಿಗೆ ಸಂಪೂರ್ಣ ಸಹಾಯಮಾಡುವಂತೆ ಆಯೋಜನ ಕೇಳಿಕೊಳ್ಳಬೇಕಾಗಿಯೂ ನಿರ್ಣಯಿಸಲ್ಪಟ್ಟಿತು

ತುಳು ಮಹಾಸಭೆಯ ಲೆಕ್ಕವನ್ನು ಒಡಿಟೂ ಮಾಡಿಸಿ ಬರುವ ಮಹಾಸಭೆಗೆ ಇದುನಂತೆ ಕಾರ್ಯದರ್ಶಿಯವರೊಡನೆ ಕೇಳಿಕೊಳ್ಳಬೇಕಾಗಿ ನಿರ್ಣಯಿಸಲಾಯಿತು

ಶ್ರೀಯುತ ನಮ್ಮೋದಿ ಮುಕ್ತ ಕೈಗಳು ಕಳುಹಿಸಿದ ನಂದೇಶವನ್ನು ಓದಿ ರಿಕಾರ್ಡು ಮಾಡಲ್ಪಟ್ಟಿತು

ತುಳುಬಾಷೆಯಲ್ಲಿ "ಹಣಿಬರನಾ ಪ್ರಜೆಪಾಟನಾ" "ದರ್ಮದ ಉಗಲ್" "ಜನವಲ್ಲ್‌ಮೋಲಾದ ತುಳು ನಾಡಕೆಗಳನ್ನು ಬರೆದು ಆದರ್ಶ ಮಾತ್ರಗಳನ್ನು ವಿಮರ್ಶ ಅಭಿನಯಿಸಬಹುದಾಗಿರುವ ಬಾಲ, ವಿದ್ಯಾರ್ಥಿ ಮಾಧವ ತಿಂಗಳಾಯರನ್ನು ಈ ತಳಿವ ಮಹಾಸಭೆಯು ಕಳಕೊಂಡ ದುಃಖ ಸೂಚನೆಯನ್ನು ಶ್ರೀಯುತ ಬಡಕಬ್ಬೆಲು ಪರಮೇಶ್ವರಯ್ಯನವರು ತಂದ ಪ್ರಕಾರ ಸತ್ಯನಿತ್ಯ ಬಂಗೇರರ ಅನುಮೋದನೆಯಂತೆ ಇಡೀ ಸಭೆಯವರು ಎದ್ದು ನಿಂತು ಮೌನವಾಗಿ ದುಃಖವನ್ನು ಸೂಚಿಸಿ, ಅವರ ಒಂದುಗಳಿಗೆ ಸಂತಾಪ ಸೂಚನೆಯನ್ನು ಕಳುಹಿಸಿಕೊಡಬೇಕಾಗಿ ನಿರ್ಣಯಿಸಲಾಯಿತು

ಕಾರ್ಯಕಾರಿ ಮಂಡಲಕ್ಕೆ ಶ್ರೀಯುತ ಆಂಡಾರು ರಾಮಣ್ಣ ಹೆಗ್ಡೇರನ್ನು ಬರುವ ಮಹಾಸಭೆವರೆಗೆ ಇದಬೇಕೆಂತ ಈ ಸಭೆಯನ್ನು ನಿರ್ಣಯಿಸಲಾಯಿತು

ಕಾರ್ಯನಿರ್ವಾಹಕ ಕಮಿಟಿಗೆ ಈ ಕೆಳಗಿನವರನ್ನು ಸೆಂಬರರಾಗಿ ಆರಿಸಲಾಯಿತು —

ಶ್ರೀಯುತ ಆಂಡಾರು ರಾಮಣ್ಣ ಹೆಗ್ಡೇರು, ಅಧ್ಯಕ್ಷ
,, ಕರಿಯಂಗಳ ಸೀತಾರಾಮ ಮಾರ್ಲರು, ಉಪಾಧ್ಯಕ್ಷ
,, ಬಂಗಿಂಜೆ ಮುತ್ತಣ್ಣ ಶೆಟ್ಟಿಗಳು, ಕೋಶಾಧಿಕಾರಿ
,, ಅರ್ಮಂಜೆ ಗುತ್ತು ಬಿ ಸ್ ಎ ತಿಮಪ್ಪ ಹೆಗ್ಡೆ, ಕಾರ್ಯದರ್ಶಿ
,, ಬಿ ಯಸ್ ಪರಮೇಶ್ವರಯ್ಯ, ಕಮ್ಮಿ ಮೆಂಬರ್
,, ಬಡಕಬ್ಯೆಲು ಬಿ ತಿಮ್ಮಪ್ಪ ಶೆಟ್ಟಿಗಳು, ಕಮ್ಮಿ ಮಂಬರ್
,, ಪಂಡಿತ ವೆಂಕಪ್ಪ ಶೆಟ್ಟಿಗಳು ಕಮ್ಮಿ ಮೆಂಬರ್

ಕೂಡಿ ೭ ಜನರನ್ನು ಕಮ್ಮಿ ಮೆಂಬರರರಾಗಿ ನೇಮಕ ಮಾಡಲಾಯಿತು

ಈ ಕಮ್ಮಿಯವರಿಗೆ ಜಿಲ್ಲಾ ತುಳುನಾಡ ಪ್ರಚಾರಕ ಕಮ್ಮಿಗೆ ಮೆಂಬರರನ್ನು ನೇಮಕ ಮಾಡುವರೆಯೂ ಅಲ್ಲಲ್ಲಿ ತುಳುನಾಡ್ ಪ್ರಚಾರ ಮಂಡಲ ಸ್ಥಾಪನೆ ಮಾಡುವರೆಯೂ ಸಂಪೂರ್ಣ ಅಧಿಕಾರಕೊಡಲಾಯಿತು

ಈ ಮಹಾಸಭೆಯ ನಿರ್ಣಯಗಳನ್ನು ತುಳು ನಾಡಿನ ವರ್ತಮಾನ ಪತ್ರಿಕೆಗಳಿಗೆ ಬರೆಯುವಂತೆ ಕಾರ್ಯದರ್ಶಿಗಳಿಗೆ ಅಧಿಕಾರಕೊಡಲಾಯಿತು

ಆಶ್ಯಕ್ಷರ ದಸ್ಕತು
ಅನ್ಮೆಂಬಳಿ ಶಂಕರನಾರಾಯಣ ರಾವ್
ವಿದ್ವಾನ್.

ಬಾರ್ಕೂರು

ಇಲ್ಲಿಯ ಉಚ್ಚಿಲ್ ತರುಣರಾಜ ಶ್ರೀ ಬಿ ದಾಸ ಕಮ್ಮಿಯವರು ಜ್ವರದಿಂದ ಉಡುಪಿಯಲ್ಲಿ ತಾ ೧೫-೧೨-೩೬ರಲ್ಲಿ ನ್ಯುತರಾದರು, ತುಂಬಾ ಸಾಧಕ ದಕರಾದಿದೆ ಮೃತರಿಗೆ ಕೇವಲ ೨೪ ವರ್ಷ ಪ್ರಾಯ ಒಳ್ಳೆಯ ಶಿಸಬಿಗಳು, ಸಾರ್ವಜನಿಕ ಕಾರ್ಯಗಳಲ್ಲಿ ಹೆಚ್ಚಿನ ಪ್ರಸಿದ್ಧಿಸುವವರೂ ಆಗಿದ್ದರು ಇಂಪೂರವರೆ ವರುಸವಿಂಪಲೂ ನಡೆಮುಕೊಂದು ಬರುವ ಶ್ರೀರಾಮಾ ಭಜನಾ ಮಂದಿರದ ಸ್ಥಾಪನಾ ಕರ್ತರೂ ಆಗಿರುವರು. ದಿವಂಗತರ ಆತ್ಮಕ್ಕೆ ಶಾಂತಿ ಯನ್ನೀಯಲು ಪ್ರಾರ್ಥಿಸುವ ಬಗ್ಗೆ ತಾ ೨೫-೧೨-೩೬ ಇಸ್ಸರಲ್ಲಿ ಬಾರಕೂರು ಶ್ರೀರಾಮಾ ಭಜನಾ ಮಂದಿರದವರು ನಗರ ಭಜನೆಯೊಂದನ್ನು ವಿಜೃಂಭಣೆಯಿಂದ ನರವೇರಿಸಿದರು

ಗುರುಕಂಬಳಿ

ಮಂಗಳೂರು ತಾಲ್ಲೂಕು ಸಂತೂರು ಪೆರಾರ ಗ್ರಾಮದ ಗುರುಕಂಬಳದಲ್ಲಿ ಹಜ್ರತ್ ಆಸ್ರಾರುದ್ದೀನ ಗುರುಗಳ ವರ ಉರುಸ್ ಎಂಬ ಉತ್ಸವವು ಇದೇ ಬರುವ ಜನವರಿ ತಾ ತಾ ೭ ಮತ್ತು ೮ನೇ (ಶನ್ವಾಲ್ ೨೨-೨೩) ಗುರುವಾರ ಸಂಜೆ ಎಂಬದಾಗಿಯೂ ಶುಕ್ರವಾರ ಊಟೆ ಉಪಚಾರ ವಗ್ಗೆರೆ ಕೆಲಸಗಳು ನಡಿಯುವ ದಾಗಿಯೂ ಸದ್ರಿ ಗುರುಗಳವರ ಮಕಾಮ್ ಯಾನೆ ದರ್ಗಾಯ ಅಡಳ್ಳೆ ದಾರರುದ ಸಯ್ಯದ್ ಅದಂ ಗಾಪೇಬರು ತಿಳಿಸ ತ್ತಾರೆ

ಶಿರ್ವ

ಶ್ರೀ ನಿತ್ಯಾನಂದ ಭಜನಾ ಮಂದಳಿಯವರು ಇದೇ ತಾ ೨೪-೧೨-೩೬ರಲ್ಲಿ ಗೀತಾ ಜಯಂತಿಯನ್ನು ಭಜನಾ ಸಪ್ತಾಹವೆನೆ ಆಚರಿಸಿದರು

ಮೂಲ್ಕಿ

ಇಲ್ಲಿ ರಿಜಿಸ್ಟರ್ಡ್ ಮೆಡಿಕಲ್ ಪ್ರೆಕ್ಟಿಶನರ್ ಆಗಿರುವ ಜಪಪ್ರಿಯ ಶ್ರೀ ಡಾಕ್ಟರ್ ಯಂ ಆರ್. ಕಾಮತ್‌ರವರ ಅನುಜ ಶ್ರೀ ಡಾಕ್ಟರ್ ಯಂ ಪುರುಷೋತ್ತಮ ಕಾಮತ್ L I M ರವರು ಇದೇ ಕಳದ ತಾ ೧೫ರಲ್ಲು ಸುರತ್ಕಲ್‌ನಲ್ಲಿ ಒಂದು ಆಸ್ಪತ್ರೆ ತೆರೆದಿರುವರು

ತಿರುವಾಂಕೂರು ಮಹಾರಾಜರು ಹರಿಜನರಿಗೆ ದೇವಾಲಯ ಪ್ರವೇಶ ಕೊಟ್ಟುದಕ್ಕೆ ಸಂತೋಷ ಸೂಚಿಸಲು ಮೂಲ್ಕಿ ವಸತಿಹೊರೆಯ ಗ್ರಾಮಗಳ ಹರಿಜನ ಪುಟ ಗಳಕ್ಕೆ ಹೋಗಿದೆ

ಚುನಾವಣೆಯ ಕಾರ್ಯಾರಂಭ ಸಭೆ

ಉಡುಪಿ ತಾಲೂಕಿನಲ್ಲಿ ಕೊಂಗ್ರೆಸು ಚುನಾವಣಾ ಪ್ರಚಾರ ಕಾರ್ಯವನ್ನು ರಂಭಿಸುವರೆ ಸಾರ್ವಜನಿಕ ಮಹಾಸಭೆಯು ತಾ. 3-1-1937ನೇ ಆದಿತ್ಯವಾರ ಸಂಜೆ 5 ಘಂಟೆಗೆ ರಥಬೀದಿಯಲ್ಲಿ ಸೇರುವುದು. ಶ್ರೀ. ಕೆ. ಆರ್ ಕಾರಂತ ಬಿ ಎ, ಬಿ. ಎಲ್. ರವರು ಪ್ರಾರಂಭಿಸುವ ಭಾಷಣ, (Opening speech) ನೀಯುವರು. ಶ್ರೀಗಳಾದ ಎ. ಬಿ. ಶೆಟ್ಟಿ, ಎಮ್. ಎಲ್. ಸಿ, ಕೆ ಆರ್. ಆಚಾರ್, ಎಂ. ಎ., ಎಲ್ ಎಲ್ ಬಿ., ಶಾಮರಾಯ ಮಲ್ಯ, ನಾರಾಯಣ ಕಿಲ್ಲೆ ಮೊದಲಾದವರ ಭಾಷಣಗಳಿರುವುವು.

ಸಾರ್ವಜನಿಕರಿಗೆ ಸುನ್ವಾಗತವಿದೆ. **ಕಾರ್ಯದರ್ಶಿ,**
ತಾ. ಕೊ. ಕಮಿಟಿ, ಉಡುಪಿ.

ದೀರ್ಘಕಾಲದ ರೋಗಗಳಿಂದ ಇನ್ನೂ ಇನ್ನೂ ವೃಥಾ ನರಳುತ್ತಿರುವುದೇಕೆ?

ನಾಯಕ್ ಬ್ರದರ್ಸರ ಶ್ರೀಮದ್ಭುವನೇಂದ್ರ ಮಹೌಷಧಾಲಯ, ಕಟಪಾಡಿ, ದ.ಕ.

ಇವರ ಅತ್ಯಮೂಲ್ಯವಾದ ಔಷಧಗಳ ಸೇವನೆಯಿಂದ ಶೀಘ್ರದಲ್ಲೇ ಗುಣಹೊಂದಬಹುದಲ್ಲವೇ?

ಇತರ ಔಷಧಗಳ ವೈಶಿಷ್ಟ್ಯ ಏನು?
ಪೇಟೆಯ ಉಷ್ಣವು
೧೦೦ ವರ್ಷಗಳ ಅನುಭವದಿಂದ ತಯಾರಿ
ಶಾಸ್ತ್ರೀಯ ರೀತಿಯ ಸಿದ್ಧತೆ
ಅತ್ಯಂತ ಗುಣಕಾರಿ.
ಸ್ವರ್ಣ, ರಜತ ಭಸ್ಮಗಳನ್ನು ಪಡೆದ ದಿವ್ಯೌಷಧಗಳು
ಅತ್ಯಂತ ಕಡಿಮೆ ಬೆಲೆ

ಶ್ರೀ ಭುವನೇಂದ್ರ ಪ್ರಭು

ಗುಡಪಿಪ್ಪಲಿ
(ಮಕ್ಕಳ ಲೀವರ್ ರೋಗಕ್ಕೆ ಅತ್ಯುತ್ತಮ)
ಗರ್ಭಪಾಲ
(ಗರ್ಭಸ್ರಾವ, ಗರ್ಭಸ್ರಾವಕ್ಕೆ ದಿವ್ಯೌಷಧ)
ಚಂದ್ರಮಸ್
(ವಾಂತಿಭೇದಿ, ಅತಿಸಾರಗಳ ನೋಲೆ
(ಅತ್ಯಂತ ಗುಣಕಾರಿ)

ಶಾಸ್ತ್ರೀಯರೀತ್ಯಾ ತಯಾರಿಸಿದ ಆರಿಷ್ಟಗಳು, ಆಸವಗಳು, ಲೇಹ್ಯಗಳು, ಭಸ್ಮಗಳು, ತೈಲಗಳು—ಇತ್ಯಾದಿ ಯಾವಾಗಲೂ ಮಾರಾಟಕ್ಕೆ ಸಿದ್ಧವಿರುತ್ತವೆ
ನಮ್ಮ ಪ್ರತಿನಿಧಿಗಳಲ್ಲದ ಕಡೆಗಳಲ್ಲಿ ವ್ಯವಹಾರಕುಶಲರೂ, ವ್ಯಾಪಕರೂ, ಯೋಗ್ಯರೂ ಆದ ಏಜಂಟರು ಬೇಕು ಅವರಿಗೆ ವಿಪುಲವಾದ ಸೌಕರ್ಯಗಳಿವೆ
ಹೆಚ್ಚಿನ ಮಾಹಿತಿಗೂ, ಸೂಚಿಪತ್ರಕ್ಕೂ, ವ್ಯವಹಾರನಿಯಮಕ್ಕೂ ಬರಕೊಳ್ಳಿರಿ

ಫೈಜಪುರದ ೫೦ನೇ ರಾಷ್ಟ್ರೀಯ ಮಹಾಸಭೆ

ಅಧ್ಯಕ್ಷ
ಪಂಡಿತ ಜವಾಹಿರಲಾಲರ
ಭಾಷಣ

ಪಂಡಿತ ಜವಾಹಿರಲಾಲ ನೆಹರೂಗಳ ಅಧ್ಯಕ್ಷಭಾಷಣವು, ಈ ವರೆಗಿನ ಅಧ್ಯಕ್ಷ ಭಾಷಣಗಳಲ್ಲಿ ಚಿಕ್ಕದೆಂದು ಗಣಿಸಲಾಗಿದೆ. ಭಾಷಣದ ಬಹುಭಾಗವು ಪ್ರಾಪಂಚಿಕ ಸಮಸ್ಯೆಗಳಲ್ಲಿ ಭಾರತದ ಕೈವಾಡವು ಹೇಗಿರ ಬೇಕೆಂಬುದನ್ನು ತೋರಿಸುವಂತಹದಿತ್ತು. ಕೌನ್ಸಿಲುಪ್ರವೇಶ, ಪದವಿಸ್ವೀಕಾರ ಮೊದಲಾದ ಒಳಗಿನ ವಿಷಯಮಾನಗಳಿಗೂ ಪಂಡಿತರು ತೀವ್ರತೆಯನ್ನು ಆರೋಪಿಸಿ ಮಾಡಿದರು. ಅಂತೂ ನೆಹರುಗಳ ಉಪನ್ಯಾಸವು ಪ್ರಪಂಚದ ಕ್ಷೋತ್ರಪಲ್ಲಿ ಕಟಬದ್ಧನಾಗಿ ಇಳಿದ ಭಾರತ ಯೋಧನ ರಣಗರ್ಜನೆಯಾಗಿತ್ತು; ಅಧ್ಯಕ್ಷಸ್ಥಾನದ ಗಾಂಭೀರ್ಯ ಘನಸ್ಥಿಕೆಯು ಬೇಕಾದಷ್ಟೇ ಇದ್ದರೆ, ಹೋರಾಟಸ್ಪಿರಿಯ ಮನೋವೃತ್ತಿಯು ಒಡೆದು ತೋರುತ್ತಿತ್ತು; ತನ್ನ ಆವಶ್ಯಕತೆಗಳಿಗಾಗಿ ಉದ್ಯೋಗಗೊಂಡಿರುವ ಹಿಂಮನ್ತಾನದ ಹೃದಯವನ್ನು ಹಾಯಾಗಿ ತಡಿಸುವಂತಿತ್ತು ೫೦ನೇ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರ ಭಾಷಣದ ಸಾರಾಂಶವಿದು – ಹೋದ್ಯೋಗಿಗಳೆ! ಎಂಟೂವರೆ ತಿಂಗಳುಗಳಿಗೆ ಹಿಂದೆ ಇದೇ ಪೀಠದಿಂದ ನಿಮಗೆ ಭಾಷಣ ಇತ್ತಿದ್ದ ನಾನು, ನಿಮ್ಮ ಅನುಪೋವನೆಯಂತೆ ಪುನಃ ಇದನ್ನು ಹತ್ತಿದ್ದೇನೆ. ನೀವೀ ರೀತಿ ಪ್ರೇಮ ಮತ್ತು ಸೌಹಾರ್ದ್ರದಿಂದ ನನಗಿತ್ತ ಬಹುಮಾನವನ್ನು ಕೃತಜ್ಞತಾಪೂರ್ವಕವಾಗಿ ಸ್ವೀಕರಿಸುವಾಗ, ಜತೆಯಲ್ಲೇ ಇನ್ನೊಮ್ಮೆ ನನ್ನ ಮೇಲೆ ಹೊರಿಸಿದ ಪ್ರಬಲ ಜವಾಬ್ದಾರಿಯನ್ನು ನಿರ್ವಹಿಸುವ ನಿಷಯವಾಗಿ ನನ್ನಲ್ಲಿ ಭಯವು ತುಂಬುತ್ತದೆ. ಈ ದಿನದ ಸ್ತ್ರೀಪುರುಷರು ತಮ್ಮ ಸಂಕಷ್ಟಸುಯ ಹೋಗೆಗಾರಿಕೆಯನ್ನು ಹೊರಲಾರದೆ ತತ್ತರಿಸುತ್ತಿರುವದು ಲೋಕದ ಲ್ಲೆಲ್ಲಾ ಕಂಡುಬರುತ್ತದೆ. ಹಿಂದುಸ್ಥಾನದ ಪರಿಸ್ಥಿತಿಯು ಇದಕ್ಕೆಂತ ಭಿನ್ನವಾಗಿಲ್ಲ. ಸದ್ಯಸ್ಥಿತಿಯೇ ಸಂಕಷ್ಟಗಳಿಂದ ತುಂಬಿರುವಾಗ ಭವಿಷತ್ಕಾಲವು ಇನ್ನಷ್ಟು ತೊಂದರೆಗಳನ್ನು ತನ್ನಲ್ಲಡಗಿಸಿಕೊಂಡಿರುವದೆಂಬು ದಕ್ಕೆ ಅಡ್ಡಿಯಿಲ್ಲ. ಹೀಗಿರುವಾಗ ನಿನ್ನಿಂ ಆಮೂಲ್ಯ ದಾನವನ್ನು ಸ್ವೀಕರಿಸುವಾಗ ನಾನು ಕಂಪಿಸುವದರಲ್ಲಿ ಆಶ್ಚರ್ಯವಿದೆಯೆ?

ಡಿಟೆನ್ಯೂಗಳು ಮತ್ತು ದಿವಂಗತರು

